# ಕರ್ಮವೀರ

ದೀಪಾವಳಿ ಸಂಚಿಕೆ
೧೯೫೯




ಬೆಲೆ
೧·೫೦

ಹೊಸ ವರ್ಷವು ಸರ್ವರಿಗೂ ಸುಖ-ಸಂಪತ್ತನ್ನು ನೀಡಲಿ

# ಶ್ರೀ ದುರ್ಗಾ ಭವನ

( ಮೈಸೂರು ಬ್ಯಾಂಕ ಎದುರು )

ಬಿ. ಹೆಚ್. ರೋಡು :: ಶಿವಮೊಗ್ಗ

ಎಕ್ಸಪ್ರೆಸ್ ಬಸ್ಸುಗಳು ಬರುವ ಸಮಯಕ್ಕೆ ಬಸ್ ಸ್ಟ್ಯಾಂಡ್ ಸಮೀಪದಲ್ಲಿಯೇ ಇರುವ ನಮ್ಮ ಫಲಾಹಾರ ಮಂದಿರದಲ್ಲಿ ಉತ್ತಮವಾದ ಕಾಫಿ, ತಿಂಡಿ, ಊಟ ಮತ್ತು ವಸತಿಯ ಸೌಕರ್ಯವಿರುತ್ತದೆ . . . . . . . . . . .

ಮಾಲೀಕರು: S. ವಿಶ್ವನಾಥಭಟ್ಟ

---

# ಲಕ್ಷ್ಮೀ ಐರನ್ ಮಾರ್ಟ

ರಥಬೀದಿ . . . . . ಬಳ್ಳಾರಿ–೨

ಫೋನ್ : 132, 132A ] ಸಂಗ್ರಾಹಕರು : [ ತಂತಿ : "ಲಿಮಾರ್ಟ"

**'ಚಾರ್ಮಿನಾರ್'** ಸಿಮೆಂಟ್ ಮತ್ತು ಅಸ್‌ಬೆಸ್ಟಾಸ್ ಸಿಮೆಂಟ್ ತಯಾರಿಕೆಗಳು

**'ಪೂರ್ಣಿಮಾ'** ಮಿಶ್ರಿತ ಗೊಬ್ಬರ ರೈತರ ಭಾಗ್ಯಲಕ್ಷ್ಮಿ— ಶೀಲ್ ಮಾಡಿದ ಚೀಲಗಳಲ್ಲಿ ದೊರೆಯುವದು.

ಹಾಗೂ ಸಮಸ್ತ **ಕಬ್ಬಿಣ** ಮತ್ತು **ಉಕ್ಕಿನ** ಸಾಮಾನುಗಳು

ವ್ಯವಸಾಯ ಮತ್ತು ಗೃಹನಿರ್ಮಾಣ ಕೆಲಸಗಳಿಗೆ—

ಕಾರ್ಯಾಲಯ :

**೩೫೫, ಸಭಾಪತಿ ಭಾವಿ ಬೀದಿ, ಬಳ್ಳಾರಿ**

ಯೋಗ್ಯ ಬೆಲೆಗಳಿಗೆ — — ಖಾತ್ರಿ ಸಾಮಾನುಗಳಿಗೆ

**ಪ್ರಜರ ವಿಶ್ವಾಸಿಕ ಅಂಗಡಿ**

ದೀಪಾವಳಿಯು ನಮ್ಮ ಎಲ್ಲಾ ಗ್ರಾಹಕರಿಗೆ ಸುಖಪ್ರದವಾಗಲಿ !

---

**ದೀಪಾವಳಿಯ ಶುಭಾಶಯಗಳು**

ಪ್ರತಿ ದಿನದ ಉಪಯೋಗಕ್ಕೆ ಬೇಕಾಗುವ ಎಲ್ಲಾ ವಿಧವಾದ ಸ್ಟೇಶನರಿ ಸಾಮಾನುಗಳು

ವಿವಿಧ ಬಣ್ಣಗಳಲ್ಲಿ, ನವೀನ ಮಾದರಿಯಲ್ಲಿ ತಯಾರಿಸಿದ

**ಉಡುಪುಗಳು ◎ ಛತ್ರಿಗಳು ◎ ಆಟದ ಸಾಮಾನುಗಳು**

**ಪ್ರೆಜೆಂಟೇಶನ್ ಸಾಮಾನುಗಳು**

ವಿಪುಲ ಸಂಗ್ರಹದಲ್ಲಿವೆ ಒಂದು ಸಾರಿ ಭೇಟಿ ಕೊಡಿ

# ಸ್ಟಾರ್ ಫ್ರೇಮ್ ವರ್ಕ್ಸ್

ಗಾಂಧಿ ಬಝಾರ, ಶಿವಮೊಗ್ಗ.

---

ನೂತನ ದೀಪಾವಳಿಯು ಎಲ್ಲರಿಗೂ ಆಯುರಾರೋಗ್ಯ ಭಾಗ್ಯವನ್ನೀಯಲಿ ! !

# ಇಂದಿರಾ ಭವನ್

**ಮಂಡಿ ಪೇಟೆ, ದಾವಣಗೇರಿ ಸಿಟಿ.**

●

ಸ್ಥಾಪನೆಯಾದ ಅಲ್ಪ ಕಾಲದಲ್ಲೇ ಈ ಭವನವು ನಾಗರೀಕರ ಪ್ರೇಮ ವಿಶ್ವಾಸಗಳಿಗೆ ಪಾತ್ರವಾಗಿದೆ.

ನಮ್ಮ

## ರುಚಿಕರವಾದ ತಿಂಡಿ ತಿನಸುಗಳು

ಆಲ್ಹಾದಕರವಾದ ⁘ ⁘ ⁘ ⁘

## ಕಾಫಿ ಟೀ ಪಾನೀಯಗಳು

ನಿಮ್ಮ ದಣಿದ ಮನಸ್ಸಿಗೆ ಆನಂದವನ್ನುಂಟು ಮಾಡುವವು. ಪ್ಲೇಟ ಊಟದ ವ್ಯವಸ್ಥೆಯು ನಮ್ಮ ವೈಶಿಷ್ಟ್ಯ. ಒಂದು ಸಾರೆ ಭೆಟ್ಟಿಕೊಟ್ಟು ಪರೀಕ್ಷಿಸಿರಿ.

**ಯು. ಸುಬ್ರಾಯಭಟ್ಟ,**

ಪ್ರೊಪ್ರೈಟರ.

---

ದೀಪಾವಳಿಯು ಸರ್ವರಿಗೂ ಸುಖಪ್ರದವಾಗಲಿ !

**ಕನ್ನಡ ನಾಡಿನ ನಾರಿಯರಿಗೊಂದು ಸುವಾರ್ತೆ**

ಕೋಮಲಾಂಗಿನಿಯುವ

● ಕಣ್ಮನಸೆಳೆಯುವ

ಝುಗಝುಗಿಸುವ

● ವಸ್ತ್ರಲಗಳು.

**೪೦×೪೦ ನಂಬರಿನ ವೈಜಯಂತಿಮಾಲಾ ಹಾಗೂ ಇತರ ನಕ್ಷೆದ ದಡಿಗಳ (ಅಂಚಿನ) ಪ್ಲೇನ್, ಬಂಬರ ರಾಸ್ತಾ ಹಾಗೂ ಚೌಕಡಾ ಪತ್ತಲಗಳನ್ನೆ ಉಟ್ಟುಕೊಂಡು ದೀಪಾವಳಿಯ ದೀಪೋತ್ಸವ ದಲ್ಲಿ ನಲಿದಾಡಿರಿ.**

೪೦ ಹಾಗೂ ೬೦ ಚೌಕಡಾ ಸ್ಪೆಶಾಲಿಸ್ಟ್ಸ

# ಸೂರ್ಯಕಾಂತ ಟೆಕ್ಸಟಾಯಿಲ್ ವರ್ಕ್ಸ, ಇಚಲಕರಂಜಿ.

( ಜಿ : ಕೊಲ್ಹಾಪುರ )

ಪ್ರೊ. :

ಎಂ. ಟಿ. ನುಚ್ಚಿ ಹಾಗೂ ಪಿ. ಆರ್. ಪಾಟುಕಲಿ

# ಎಂ. ವಿ. ರಾಜಮ್ಮ ಅರ್ಪಿಸುವ

## ಎಂ. ವಿ. ಆರ್. ಪ್ರೊಡಕ್ಷನ್ಸ್ ರವರ

ಅದ್ಭುತಾಶ್ಚರ್ಯ ಕರವಾದ, ನೀತಿಬೋಧಕ ಜಾನಪದ ಚಿತ್ರ!




ಕಥೆ : ದಾದಾಮಿರಾಸಿ ☆ ಸಂಗೀತ : ಟಿ.ಜಿ.ಲಿಂಗಪ್ಪ ☆ ಸಂಭಾಷಣೆ : ಚಿ.ಸದಾಶಿವಯ್ಯ ☆ ಸ್ಟುಡಿಯೊ : ಭರಣಿ

G.H.RAO

# INDEX TO ADVERTISERS

# ಪರಿವಿಡಿ

ದೀಪಾವಳಿ ಸುಖಪ್ರದವಾಗಲಿ




ಬಾಗೀಲು ತೆಗೀರವ್ವ ಬಾಗ್ಯುಳ್ಳ ಲಕ್ಷ್ಮವ್ವ
ಜ್ಯೋತೀಯನೊಳಗೆ ಕರೆಕೊಳ್ಳಿ! ನೀವು
ಜ್ಯೋತೀಯನೊಳಗೆ ಕರೆಕೊಳ್ಳಿ

ಫೋಟೊ : ನರಸಿಂಹ ಶೆಟ್ಟಿ, ಬೆಳಗಾವಿ.




ಸಂಪಾದಕರು : ] ದೀಪಾವಳಿ ಸಂಚಿಕೆ ೧೯೫೯ [ ಹ. ರಾ. ಪುರೋಹಿತ

## ನಮ್ಮ ನುಡಿ

ದೀಪಾವಳಿಯ ಶುಭದಿನದಂದು ಕರ್ಮವೀರ ಪತ್ರಿಕೆಯ ಹನ್ನೆರಡನೆಯ ದೀಪಾವಳಿ ವಿಶೇಷ ಸಂಚಿಕೆಯನ್ನು ಓದುಗರ ಕೈಯಲ್ಲಿರಿಸಲು ನಮಗೆ ತುಂಬಾ ಸಂತೋಷವೆನಿಸುತ್ತದೆ. ಈ ಸಲ ಸಂಚಿಕೆಯ ಪುಟಗಳನ್ನು ಹೆಚ್ಚಿಸಿ ಅದನ್ನು ಸರ್ವಾಂಗ ಸುಂದರವನ್ನಾಗಿ ಮಾಡಲು ಪ್ರಯತ್ನಿಸಿದ್ದೇವೆ. ಪುಟಗಳನ್ನು ಹೆಚ್ಚಿಸಿದ್ದರಿಂದ, ಕಾಗದ ಮೊದಲಾದ್ದರ ಬೆಲೆ ಹೆಚ್ಚಿದ್ದರಿಂದ ಅನಿವಾರ್ಯವಾಗಿ ಸಂಚಿಕೆಯ ಬೆಲೆಯನ್ನು ಹೆಚ್ಚಿಸಬೇಕಾಯಿತು. ಸಹೃದಯ ವಾಚಕರು ಇದಕ್ಕಾಗಿ ನಮ್ಮೊಡನೆ ಸಹಕರಿಸಬೇಕೆಂದು ಕೋರುತ್ತೇವೆ.

ಭಾರತವು ಸಾರ್ವಾಂಗಿಕ ಪ್ರಗತಿಯನ್ನು ಸಾಧಿಸುವಲ್ಲಿ ಭರದಿಂದ ಮುನ್ನಡೆಯುತ್ತಿದೆ. ಆಹಾರ ಸ್ವಾವಲಂಬನವನ್ನು ಹೊಂದಬೇಕೆಂಬ ಅದರ ಆಕಾಂಕ್ಷೆಯೂ ಈಡೇರುವ ಲಕ್ಷಣಗಳು ತೋರುತ್ತವೆ. ಆದರೆ ಅತಿವೃಷ್ಟಿ, ಅನಾವೃಷ್ಟಿ, ಮಹಾಪೂರ ಮೊದಲಾದ ನೈಸರ್ಗಿಕ ಪ್ರತಿಕೂಲತೆಗಳಿಂದಾಗಿ ಬಹಳ ತೊಂದರೆಯಾಗುತ್ತಿದೆ. ಆದರೂ ಜನತೆಯ ಸಹಾಯ ಸಹಕಾರಗಳಿಂದ ಸರಕಾರವು ಪ್ರಗತಿಪಥದಲ್ಲಿದೆ. ರಾಷ್ಟ್ರವು ಇಟ್ಟುಕೊಂಡ ಅಂತಾರಾಷ್ಟ್ರೀಯ ನೀತಿಯಲ್ಲಿ ಯಾವದೇ ಬಗೆಯ ಬದಲಾವಣೆಗಳಾಗಿಲ್ಲ. ತೊಡಕಿನ ಪ್ರಶ್ನೆಗಳನ್ನೆಲ್ಲ ಶಾಂತ ರೀತಿಯಿಂದಲೆ ಬಿಡಿಸುವ ಪ್ರಯತ್ನಗಳು ಮಾಡಲಾಗುತ್ತಿವೆ. ನೆರೆಯ ರಾಷ್ಟ್ರವಾದ ಪಾಕಿಸ್ತಾನದೊಡನೆ ಇನ್ನೂ ಪೂರ್ಣವಾಗಿ ಸ್ನೇಹ ಸ್ಥಾಪಿತವಾಗಿಲ್ಲ. ಚೀನವು ಭಾರತ ಪ್ರದೇಶವನ್ನು ಆಕ್ರಮಿಸಿದ್ದರಿಂದ ಅದೊಂದು ಹೊಸ ಸಮಸ್ಯೆಯಾಗಿ ಪರಿಣಮಿಸಿದೆ. ಪೋರ್ತುಗಾಲ ಪ್ರದೇಶಗಳ ವ್ಯಾಜ್ಯ ಹಾಗೆಯೇ ಇದೆ. ಕಾಶ್ಮೀರಸಮಸ್ಯೆಯೂ ಬಗೆಹರಿದಿಲ್ಲ. ಇಷ್ಟೊಂದು ಅಡೆತಡೆಗಳಿದ್ದೂ ರಾಷ್ಟ್ರವು ಮುನ್ನಡೆಯುತ್ತದೆ.

ವಿಶೇಷ ಸಂಚಿಕೆಯನ್ನು ಸರ್ವಾಂಗಸುಂದರ ಮಾಡಲು ನೆರವಾದ ಸಹಕಾರಿಗಳಿಗೆ, ಮುದ್ರಣ, ಜಾಹೀರಾತು ವಿಭಾಗದವರಿಗೆ, ಲೇಖನ, ಕತೆ, ಕವನ, ಭವಿಷ್ಯ, ಹರಟೆಗಳನ್ನು ಕಳಿಸಿದ ಮಹನೀಯರಿಗೆ ಮತ್ತು ಮಹಿಳೆಯರಿಗೆ ಕೃತಜ್ಞತೆಗಳು. ಮುಖಚಿತ್ರ ಬರೆದುಕೊಟ್ಟವರಿಗೆ ವ್ಯಂಗ್ಯಚಿತ್ರಗಳನ್ನು ಕಳುಹಿಸಿದವರಿಗೆ ಮತ್ತು ಲೇಖನಗಳಿಗೆ ಚಿತ್ರಗಳನ್ನು ಒದಗಿಸಿದವರಿಗೆ ನಮ್ಮ ಧನ್ಯವಾದಗಳು. ಇದೇ ರೀತಿ ಪಡಿಯಚ್ಚುಗಳನ್ನು ಮಾಡಿಕೊಟ್ಟವರಿಗೂ ಋಣಿಯಾಗಿದ್ದೇವೆ. ಅಂತೆಯೇ ಛಾಯಾ ಚಿತ್ರಗಳನ್ನು ಒದಗಿಸಿದವರನ್ನೂ ಅಭಿನಂದಿಸುತ್ತೇವೆ. ಅಲ್ಲದೆ ಜಾಹಿರಾತು ಕೊಟ್ಟು ಸಹಕರಿಸಿದ ಎಲ್ಲ ಜಾಹೀರಾತುದಾರರಿಗೂ ನಮ್ಮ ಅಭಿನಂದನೆಗಳು.

ದೀಪಾವಳಿ ಸರ್ವರಿಗೂ ಸನ್ಮಂಗಲವನ್ನು ನೀಡಲಿ.

ಸರ್ವೇ ಜನಾಃ ಸುಖಿನೋಭವಂತು.

# ವ್ಯಕ್ತಿತ್ವದ ಒಳಗುಟ್ಟು

ಲೇಖಕರು :
ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು
ಶ್ರೀಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು
ಮೂರುಸಾವಿರಮಠ, ಹುಬ್ಬಳ್ಳಿ.

ಮಾನವಜೀವನದಲ್ಲಿ ವ್ಯಕ್ತಿತ್ವವು ಅತ್ಯಂತ ಮಹತ್ವದ್ದು. ಆಕರ್ಷಕ ವ್ಯಕ್ತಿಯುಳ್ಳ ಮನುಷ್ಯನ ತೇಜವು ಇನ್ನುಳಿದವರಿಗೆ ಪ್ರಿಯಕರವೆನಿಸುವದಲ್ಲದೆ ಒಮ್ಮೊಮ್ಮೆ ಲಾಭದಾಯಕವೂ ಆಗುವದು. ಅದಕ್ಕೆಯೇ ಶಕ್ತಿಶಾಲಿ ವ್ಯಕ್ತಿತ್ವವುಳ್ಳವರು ದ್ರಷ್ಟಾರರಾಗುತ್ತಾರೆ. ವಿವೇಕಾನಂದರ ವೀರನುಡಿ ಇದಕ್ಕೆ ಪುಷ್ಟಿ ಕೊಡುತ್ತದೆ. ಈ ವ್ಯಕ್ತಿತ್ವವು ಮಾನವನಲ್ಲಿಯೇ ಹುದುಗಿರುತ್ತದೆ. ಅವನದನ್ನು ಒಳ್ಳೆಯ ಗುಣಗಳಿಂದ ವ್ಯಕ್ತಮಾಡಬೇಕಾಗುತ್ತದೆಂಬುದನ್ನು ಇಲ್ಲಿ ಮಹಾಸ್ವಾಮಿಗಳವರಿಂದ ನಿರೂಪಿತವಾಗಿರುವದು.

ಮಹಾನ್ ವ್ಯಕ್ತಿತ್ವವು ಮನುಷ್ಯಜೀವನದಲ್ಲಿ ಎಲ್ಲಕ್ಕಿಂತ ಹೆಚ್ಚಿನ ಆಕರ್ಷಣೆಯಾಗಿರುತ್ತದೆ. ಸೂರ್ಯನಲ್ಲಿ ಕಿರಣ, ಹೂವಿನಲ್ಲಿ ಸೌಂದರ್ಯ, ವನದಲ್ಲಿ ಹಸರು, ಪಕ್ಷಿಗಳಲ್ಲಿ ಬಣ್ಣದಾಕರ್ಷಣವಿರುವಂತೆ ಮನುಷ್ಯನಲ್ಲಿಯೂ ವ್ಯಕ್ತಿತ್ವದ ಆಕರ್ಷಣವಿರುವದು ಸಹಜ. ವ್ಯಕ್ತಿತ್ವವುಳ್ಳ ಮನುಷ್ಯನ ಆಕರ್ಷಣದ ತೇಜವು ಇನ್ನುಳಿದವರಿಗೆ ಪ್ರಿಯಕರ ಮತ್ತು ಲಾಭದಾಯಕ.


ಶಕ್ತಿಶಾಲೀ ವ್ಯಕ್ತಿತ್ವವನ್ನಿಟ್ಟುಕೊಂಡವರು ಕೇವಲ ಸ್ರಷ್ಟಾರರಾಗದೆ ದ್ರಷ್ಟಾರರಾಗುತ್ತಾರೆ. ಅವರು ನೋಡುತ್ತಾರೆ, ಕೇಳುತ್ತಾರೆ; ಸೃಷ್ಟಿಯನ್ನು ಮಾಡುತ್ತಾರೆ. ಇಂಥವರೆದುರಿನಲ್ಲಿ ಸಾಧಾರಣ ಮನುಷ್ಯರನ್ನು ತುಲನೆಮಾಡಿದರೆ ಭೂಮ್ಯಾಕಾಶದಷ್ಟು ಅಂತರವಾಗುತ್ತದೆ. ಸಾಧಾರಣ ಜನರ ದೃಷ್ಟಿಯಲ್ಲಿ ಇಲ್ಲದಿರುವ ಶಕ್ತಿಯು ಇವರಲ್ಲಿ ಅಡಗಿಕೊಂಡಿರುತ್ತದೆ.

ಮಹಾನ್ ವ್ಯಕ್ತಿತ್ವವು ಮನುಷ್ಯನಿಗೆ ಅಮರನಾಗಲು ಅಮೃತವನ್ನು ಕುಡಿಸುತ್ತದೆ. ಮಹಾನ್ ವ್ಯಕ್ತಿತ್ವವುಳ್ಳವರು ಮುರುಕು ಗುಡಿಸಲು ಎಲ್ಲಿದ್ದರೂ ಅವರ ಆತ್ಮಿಕ ಪ್ರಕಾಶದಿಂದ ಆ ಮುರುಕು ಗುಡಿಸಲು ಸುವರ್ಣ ಮಂದಿರಕ್ಕಿಂತಲೂ ಹೆಚ್ಚಾಗಿ ಸುಂದರ ಕಾಣುತ್ತದೆ. ವ್ಯಕ್ತಿತ್ವಶಾಲೀ ಮನುಷ್ಯರು ನಿರಂತರ ನಿರ್ಭೀತರಿರುತ್ತಾರೆ. ಅವರನ್ನು ದ್ವೇಷಿಸುವವರಿದ್ದರೂ ಅವರಿಗೆ ತುಂಬಾ ಆದರವಿತ್ತು ಗೌರವಿಸುತ್ತಾರೆ.

ಜಗತ್ತಿನಲ್ಲಿ ಪ್ರಕಾಶ ತೆಗೆದುಕೊಂಡು ಬಂದು ಮತ್ತೆ ಅಂಧಕಾರದಲ್ಲಿ ತಿರುಗುವವರಿಗೆ ತುಂಬಾ ದರಿದ್ರರೆನ್ನಬಹುದು. ಜೀವನದಲ್ಲಿ ಸುಖಶಾಂತಿಗಳನ್ನು ಪಡೆಯದೆ, ಕೇವಲ ಬಾಹ್ಯಾಡಂಬರದಲ್ಲಿಯೇ ಕಾಲಕಳೆಯುವವರಿಗೆ ವ್ಯಕ್ತಿತ್ವವೆಲ್ಲಿಯದು?

## ವಿವೇಕಾನಂದರ ವೀರನುಡಿ

ಅರಣ್ಯದಲ್ಲಿ ಸಿಂಹವು ತನ್ನ ವ್ಯಕ್ತಿತ್ವದ ಆಕರ್ಷಣದಿಂದ ರಾಜ್ಯವನ್ನಾಳುತ್ತದೆ. ಅಧೈರ್ಯ ಬರುವದೂ ಮತ್ತೊಬ್ಬರನ್ನು ಬಾರಿಬಾರಿಗೆ ಅವಲಂಬಿಸುವದಾದರೂ ನಮ್ಮಲ್ಲಿ ವ್ಯಕ್ತಿತ್ವವಿಲ್ಲದಿರುವದೇ ಮೂಲ ಕಾರಣ. ಇದಕ್ಕಾಗಿಯೇ ನಮ್ಮಲ್ಲಿಯ ಶಕ್ತಿಯನ್ನು ದಿನದಿನಕ್ಕೆ ಕಳೆದುಕೊಂಡು ಶಕ್ತಿಹೀನರಾಗುತ್ತಿದ್ದೇವೆ. ದುಃಖಸಾಗರದಲ್ಲಿ ಮುಳುಗುತ್ತಿದ್ದೇವೆ. ನಾವಿಲ್ಲಿ ಸ್ವಾಮಿ ವಿವೇಕಾನಂದರ ವಾಣಿಯನ್ನು ಲಕ್ಷಿಸಬೇಕು.



ಮಹಾಸ್ವಾಮಿಗಳು

"Weakness is the one cause of suffering. We become miserable, because we are weak. We lie, steal, kill and commit other crimes, because we are weak. We die because we are weak. Where there is nothing to weaken us, there is no death, nor sorrow.

Stand up, be bold, be strong. Take the whole responsibility on your own shoulders and know that you are the creator of your own destiny. All the strength and succour you want is within your senses. Therefore make your own future."

(ನಮ್ಮ ನರಳುವಿಕೆಗೆ ಕಾರಣ ದುರ್ಬಲತೆಯೂ ಒಂದು. ನಾವು ದುರ್ಬಲವಿರುವದರಿಂದಲೇ ದುಃಖಾರ್ತರಾಗುವೆವು. ನಾವು ಹುಸಿ ನುಡಿಯುವದು ಕಳವು ಮಾಡುವುದು ಮತ್ತು ಇತರ ಅಪರಾಧಗಳನ್ನೆಸಗುವದು ನಮ್ಮಲ್ಲಿಯ ದುರ್ಬಲತೆಯಿಂದಾಗಿಯೇ. ಸಾವು ಕೂಡ ನಮ್ಮ ದುರ್ಬಲತೆಯಿಂದಾಗಿಯೇ ಬರುವದು. ನಮ್ಮನ್ನು ದುರ್ಬಲಗೊಳಿಸುವಂತಹದೇನೂ ಇಲ್ಲದಿದ್ದಲ್ಲಿ ಸಾವೂ ಇರುತ್ತಿರಲಿಲ್ಲ; ದುಃಖವೂ ಇರುತ್ತಿರಲಿಲ್ಲ.

ಎದ್ದೇಳಿರಿ. ದಿಟ್ಟರಾಗಿರಿ. ಸಂಪೂರ್ಣ ಹೊಣೆಯನ್ನು ನೀವೇ ಕೈಕೊಳ್ಳುವ ಬಲ ಪಡೆಯಿರಿ- ನಿಮ್ಮ ಭವಿತವ್ಯದ ನಿರ್ಮಾತೃ ನೀವೇ ಎಂಬುದನ್ನು ಅರಿಯಿರಿ. ನಿಮಗೆ ಬೇಕಾದ ಬಲ — ಯಶಸ್ಸು ನಿಮ್ಮಲ್ಲಿಯೇ ಹುದುಗಿದೆ. ಅದಕ್ಕಾಗಿ ನಿಮ್ಮ ಭವಿತವ್ಯವನ್ನು ನೀವೇ ರೂಪಿಸಿಕೊಳ್ಳಿರಿ.

ಈ ಸಿಂಹವಾಣಿಯನ್ನಾಲಿಸಿದಾಗ ಅವರ ಆತ್ಮಶಕ್ತಿಯು ಪ್ರತಿಭೆಯಿಂದೊಡಗೂಡಿದ ಮಹೋಪದೇಶ ಕಣ್ಣೆದುರಿನಲ್ಲಿ ನಿಲ್ಲುತ್ತದೆ. ರೋಮಾಂಚಗಳು ಏಳುತ್ತವೆ. ದಿಕ್ಕುಗಾಣದೆ ತಿರುಗುವವಗೆ ಹುರುಪು-ಹುಮ್ಮಸಗಳು ತುಂಬುತ್ತವೆ. ಮಲಗಿದವನನ್ನೂ ಎಚ್ಚರಿಸುತ್ತದೆ. ಅವರ ಅಂತಃಸ್ಫೂರ್ತಿಯ ಶಕ್ತಿಯೇ ಅಂತಹದು.

## ಚಾರಿತ್ರ್ಯಬಲ

ಮನುಷ್ಯನಿಗೆ ವ್ಯಕ್ತಿತ್ವವೆಲ್ಲಿಂದ ದೊರೆಯುತ್ತದೆಂಬುದನ್ನು ಕೇಳಿದರೆ ಚಾರಿತ್ರ್ಯಬಲದಿಂದ ಎಂದು ಹೇಳಬಹುದು. ಮನುಷ್ಯನು ಚಾರಿತ್ರ್ಯಬಲದಿಂದ ತನ್ನಲ್ಲಿ ತಾನು ಮನೋಹರ ಪ್ರಕಾಶವನ್ನು ಕಾಣುತ್ತಾನೆ. ಆಗ ಆತನಿಗೆ ಜಗತ್ತಿನ ಸಮಸ್ತವಸ್ತುಗಳು ತುಚ್ಛವಾಗುತ್ತವೆ. ರತ್ನವನ್ನು ಹುಡುಕುವವನು ಕಲ್ಲುಚೂರುಗಳನ್ನೆಂದಿಗೂ ಅಪೇಕ್ಷಿಸನು. ಸಚ್ಚರಿತ್ರ ಮನುಷ್ಯನು ರಾಷ್ಟ್ರದ ರಚನೆ ಮಾಡಲು ಸಮರ್ಥನಿರುತ್ತಾನೆ. ಹೆಣದಲ್ಲಿ ಜೀವವನ್ನು, ಅಶಕ್ತರಲ್ಲಿ ಶಕ್ತಿಯನ್ನು ತಂದುಕೊಡುತ್ತಾನೆ. ಆತನಿಗೆ ಅಗ್ನಿಯು ಶೀತಲಜಲವಾಗಬಹುದು. ಸರ್ಪವು ಪೂಮಾಲೆಯಾಗಬಹುದು. ಇಂಥ ಮನುಷ್ಯರ ಚರಣಗಳಲ್ಲಿ ಸಂಸಾರವು ಬಾಗುತ್ತದೆ. ಸಚ್ಚರಿತ್ರ ಮನುಷ್ಯನು ಈ ಶಕ್ತಿಕಣಗಳನ್ನು ಕೂಡಿಸಿ ಜಗತ್ತನ್ನೇ ಚುಂಬಕದಂತೆ ತನ್ನ ಎಳೆದುಕೊಳ್ಳುತ್ತಾನೆ.

ಮನುಷ್ಯನ ಬೆಲೆ ಅವನ ಚರಿತ್ರದಲ್ಲಿದೆ. ಚರಿತ್ರದಲ್ಲಿಯೇ ಅವನಿಗೆ ಆತ್ಮಬಲದ ಪ್ರಕಾಶ ದೊರಕುತ್ತದೆ. ಧನ, ಮಿತ್ರ, ಮಾನ ಮತ್ತು ಆನಂದ ಚರಿತ್ರವುಳ್ಳ ವ್ಯಕ್ತಿಗೆ ತನ್ನಿಂದ ತಾನೇ ಹೊಂದುತ್ತವೆ. ಮೃತ್ಯುವಾದ ಮೇಲೆಯೂ ಆತನ ಕೀರ್ತಿಲತೆ ಬೆಳೆಯುತ್ತದೆ. ಸಚ್ಚರಿತ್ರ ವ್ಯಕ್ತಿಯು ಎರಡನೆಯವರ ಆಶಯವನ್ನೆಂದಿಗೂ ಆಶಿಸಲಾರ. ಆತನ ಚರಿತ್ರೆಯ ಪ್ರಭಾವದಿಂದ ಅನ್ಯರು ಆತನನ್ನು ಆಶ್ರಯಿಸಿ ಉದ್ಧಾರವಾಗುತ್ತಾರೆ. ಚರಿತ್ರೆ ಬಲವುಳ್ಳ ಮನುಷ್ಯನ ಶರೀರದಲ್ಲಿ ಒಂದು ಪ್ರಕಾರದ ಜೀವಿತ ಜ್ಯೋತಿಯಿದ್ದುದಕ್ಕೇನೆ ನಾವು "ಮಾನವ ಜ್ಯೋತಿ" ಎಂದು ಹೇಳುತ್ತೇವೆ. ಇದೇ ಜ್ಯೋತಿಗೆ ಬೇರೆ ಬೇರೆ ಜಾತಿಯ ಜನರು ಬೇರೆ ಬೇರೆ ರೂಪದಲ್ಲಿ ಬಿತ್ತರಿಸುತ್ತಾರೆ. ಸಂಸ್ಕೃತದಲ್ಲಿ ಇದಕ್ಕೆ "ಓಜಸ್" ಎಂದು ಹೇಳುತ್ತಾರೆ. ಮುಸಲ್ಮಾನರು "ನೂರ್" ಎಂದು ಪಾಶ್ಚಾತ್ಯ ವಿದ್ವಾಂಸರು Magnetism ಮತ್ತು Human Electricity ಇತ್ಯಾದಿಯಾಗಿ ಕರೆಯುತ್ತಾರೆ.

ವಿಚಾರದ ತೆರೆಗಳು ವಿದ್ಯುತ್ತಿನ ತೆರೆಗಳಿಗಿಂತ ಅತ್ಯಂತ ಶಕ್ತಿಶಾಲಿಗಳಾಗಿವೆ. ಇದಕ್ಕಾಗಿ ಯಾವ ಮನುಷ್ಯನು ಉನ್ನತಿ, ಶಕ್ತಿ, ಉತ್ಸಾಹ ಮುಂತಾದವುಗಳನ್ನು ಮನಸ್ಸಿನಲ್ಲಿ ತುಂಬಿರುತ್ತಾನೆಯೋ ಅವನ ಜೀವನ ಹೆಚ್ಚು ಸುಖ ಶಾಂತಿಯಿಂದ ತುಂಬಿಕೊಂಡಿರುತ್ತದೆ; ಮತ್ತು ಅವನ ಜೀವನಜ್ಯೋತಿ ಅತ್ಯಂತ ಬಲವುಳ್ಳದ್ದಾಗುವದಲ್ಲದೆ ಎರಡನೆಯವರ ಕೆಟ್ಟ ವಿಚಾರಗಳು ಅವನ ಮೇಲೆ ಬೀಳಲಾರವು. ಇನ್ನಿತರರು ಅವನಿಗೆ ಕೇಡುಬಯಸಿದರೂ ಕೇಡು ಬಯಸುವವರೇ ಬಾಧೆಗೊಳಗಾಗುತ್ತಾರೆ.

ಈಶ್ವರ ಮತ್ತು ಜಗತ್ತಿನ ಆಕರ್ಷಣವು ಜ್ಞಾನೇಂದ್ರಿಯಗಳ ಜಾಗರಣೆಯಿಂದ ಪ್ರಾಪ್ತವಾಗುತ್ತದೆ. ಈ ಆಕರ್ಷಣವು ಪ್ರತಿಭಾಶಾಲಿ ವ್ಯಕ್ತಿಗಳಲ್ಲಿ ಕವಿಯ ಕಲ್ಪನೆಯಂತೆ ವಿಲಕ್ಷಣ ಆವಿಷ್ಕಾರವುಳ್ಳದ್ದಾಗಿರುತ್ತದೆ. ಇಂದ್ರಿಯಗಳ ಜಾಗರಣವು ಮನುಷ್ಯಜೀವನವನ್ನು ಒಳ್ಳೇ ದಾರಿಗೆ ಒಯ್ಯುತ್ತದೆ. ಅದರ ಕಾರ್ಯಗಳು ಗುಪ್ತವಿರಲಿ ಅಥವಾ ಪ್ರಕಟವಿರಲಿ ಅದರ ಪ್ರತ್ಯೇಕ ಕಾರ್ಯಗಳು ಮನುಷ್ಯನಲ್ಲಿ ಜಾಗ್ರತ ಸ್ವಭಾವಗಳನ್ನು ಉತ್ಪನ್ನ ಮಾಡುತ್ತವೆ.

## ಸ್ವಭಾವದ ಶಕ್ತಿಗಳು

ಸ್ವಭಾವದ ಶಕ್ತಿಗಳು ವಿಚಿತ್ರವಿರುತ್ತವೆ. ಸ್ವಭಾವವನ್ನನುಸರಿಸಿಯೇ ವಿಚಾರಗಳುಕೂಡಿಕೊಂಡಿರುತ್ತವೆ. ಇಂದ್ರಿಯಗಳನ್ನು ಎಚ್ಚರಿಸುವದರಲ್ಲಿ ಸ್ವಭಾವಗಳೇ ಪ್ರಧಾನ ಕಾರಣ. ನೋಡುವದು, ಕೇಳುವದು, ಓದುವದು ಇವೆಲ್ಲ ಸ್ವಭಾವಗಳಾಗಿದ್ದರೂ ಇವುಗಳೇ ಸತ್ಕಾರ್ಯದಲ್ಲಿ ಪರಿಣತಗೊಂಡರೆ ಇವುಗಳ ಲಾಭ ಆಗ ಗೊತ್ತಾಗುವದು. ಇವುಗಳಿಂದಲೇ ಸುಪ್ತಶಕ್ತಿಗಳು ಜಾಗ್ರತವಾಗುತ್ತವೆ. ಒಳ್ಳೆ ಸ್ವಭಾವವನ್ನು ಅಂಟಿಸಿಕೊಳ್ಳುವದರಿಂದ ಹಾನಿಯಾಗದೆ ಅದರಿಂದ ಸಾಕಷ್ಟು ಲಾಭವಾಗಲು ಸಂದೇಹವಿಲ್ಲ.

ಮನುಷ್ಯನಿಗೆ ಬುದ್ಧಿ, ಕಣ್ಣು, ಕಿವಿ, ಮೂಗು, ಕೈ ಮತ್ತು ನಾಲಿಗೆ ಈ ಆರು ಎಲ್ಲಕ್ಕಿಂತ ಹೆಚ್ಚಿನ ಶಕ್ತಿವುಳ್ಳವುಗಳು. ಇವುಗಳಲ್ಲಿ ಜಾಗರಣ ಉಂಟಾಗುತ್ತಲೇ ಈ ಸಂಸಾರದ ರಹಸ್ಯ ಭೇದಗಳಿಂದ ಉನ್ನತಿಯನ್ನು ಪಡೆಯಬಹುದು. ನಮಗೆ ಭಾಗ್ಯವಿಲ್ಲವೆಂದು ಕೆಲವರು ಹೇಳುತ್ತಾರೆ.ಈ ಸಿದ್ಧಾಂತ ಪ್ರಮಾದವುಳ್ಳದ್ದು. ಮನುಷ್ಯನೇ ಕುರುಡದಾರಿಯಲ್ಲಿ ನಡೆಯುತ್ತಿರುವಾಗ ಭಾಗ್ಯವೇನು ಮಾಡೀತು? ಭಾಗ್ಯದ ಉದ್ಧಾರ ಆತ್ಮದ ಆನಂದದಲ್ಲಿರುತ್ತದೆ.

ಹಚ್ಚಿದ ಒಂದು ದೀಪದಿಂದ ಸಾವಿರಾರು ದೀಪಗಳನ್ನು ಹಚ್ಚಬಹುದು. ಒಳ್ಳೆಯ ಕರ್ಮಗಳನ್ನು ಅರಿಸಿಕೊಂಡವರಿಗೆ ಭಾಗ್ಯದ ಬಾಗಿಲು ತೆರೆಯುವದು. ಕೆಟ್ಟ ಕರ್ಮಗಳನ್ನನುಸರಿಸುವವರು ನಿರಂತರ ಕಷ್ಟಜೀವನದಲ್ಲಿರುವ ಪ್ರಸಂಗಬರಬಹುದು. ಮನುಷ್ಯ ಜೀವನದ ದೈನಿಕ ಘಟನೆಗಳನ್ನು ನಿತ್ಯನೋಡುತ್ತೇವೆ, ಕೇಳುತ್ತೇವೆ. ಇವುಗಳ ಉದ್ಧಾರ ಪತನದಿಂದಲೇ ಮನುಷ್ಯನಿಗೆ ಮೂಲ ಜ್ಞಾನವುತ್ಪನ್ನವಾಗುತ್ತದೆ. ಮತ್ತು ಜೀವನದಲ್ಲಿ ಅನೇಕ ಮಹತ್ವಪೂರ್ಣ ಕಾರ್ಯಗಳನ್ನು ಮಾಡಲು ಸಮರ್ಥರಿರುತ್ತೇವೆ. ನಾವು ನಿತ್ಯ ದಾರಿಯಲ್ಲಿ ಹೆಣಗಳನ್ನು ನೋಡುತ್ತೇವೆ. ಆದರೆ ಮಹಾತ್ಮಾ ಬುದ್ಧನ ದೃಷ್ಟಿಯಲ್ಲಿ ಶುದಿಯಿದ್ದುದಕ್ಕಾಗಿಯೇ ಆಕರ್ಷಣ ಶಕ್ತಿಯ ತೇಜ ಅವನಲ್ಲಿ ಮೂರ್ತಿಗೊಂಡಿತು. ಅವನ ದೃಷ್ಟಿಶುದ್ಧಿ ಸೃಷ್ಟಿಯನ್ನು ಬದಲಿಸಿತು; ಜನವನ್ನು ಎಚ್ಚರಗೊಳಿಸಿತು. ದೃಷ್ಟಿಶುದ್ಧಿಯ ಬಲದಿಂದಲೇ ಅಂದಿನ ಶಿವಶರಣರು ಇಂದಿಗೂ ನಮ್ಮ ಚಿತ್ತಪಟಲದಲ್ಲಿ ಚಿತ್ರಿತರಾಗಿದ್ದಾರೆ. ಅವರು ಕಣ್ದೆರೆದು ಕೆಲಸಮಾಡಿದ್ದಕ್ಕಾಗಿಯೇ ಅವರ ವ್ಯಕ್ತಿತ್ವಆಕರ್ಷಕವಾಗಿದೆ; ಸೋತ್ಕರ್ಷವಾಗಿದೆ.

ರಷ್ಯಾದ ಪ್ರವರ್ತಕನಾದ ಮಾಕ್ಸಿಮ್ ಗೋರ್ಕಿಯು "ಅಪರಿವರ್ತಿತ ಅವಸ್ಥೆಯಲ್ಲಿರುವದು ತುಂಬಾ ದುಃಖಮಯವಾದದ್ದು. ಈ ಅವಸ್ಥೆಯಲ್ಲಿ ಇದ್ದು ಒಂದು ಪಕ್ಷ ನಮ್ಮ ಹೃದಯ ಸಾಯದಿದ್ದರೆ ಆ ಪರಿಸ್ಥಿತಿಯು ಮತ್ತಿಷ್ಟು ದುಃಖದಾಯಕ" ಎಂದು ಹೇಳಿದ್ದಾನೆ. ಇದು ತುಂಬಾ ಸತ್ಯ. ಮನುಷ್ಯನು ತನ್ನ ಅನಂತಶಕ್ತಿಯ ಮೇಲೆ ಅಧಿಕಾರ ಮಾಡುತ್ತಾನೆ.

## ಆಕರ್ಷಣಶಕ್ತಿ

ಜಗತ್ತಿನ ನಾಲ್ಕೂನಿಟ್ಟಿನಲ್ಲಿ ಆಕರ್ಷಣ ಶಕ್ತಿಯು ಪ್ರಕಾಶವಿರುತ್ತದೆ. ಎಲ್ಲಿಯ ವರೆಗೆ ನಾವು ಗುರುತಿಸುವದಿಲ್ಲವೋ ಅಲ್ಲಿಯ ವರೆಗೆ ನಮ್ಮ ಶಕ್ತಿಗಳು ಬಿದ್ದ ಹೆಣದಂತೆಯೇ ಹೂವನ್ನು ನಮ್ಮ ಜೇಬಿನಲ್ಲಿ ಇಟ್ಟುಕೊಂಡು ಅದರ ಸುಗಂಧ ಸೇವಿಸದಿದ್ದರೆ ನಾವು ದುರ್ಭಾಗ್ಯರು. ನಮ್ಮ ಎಡೆಬಟ್ಟಲದಲ್ಲಿ ಸ್ವಾದಿಷ್ಟಭೋಜನವಿದ್ದು ಅದನ್ನು ಸೇವಿಸಿ ಸುಖಪಡೆಯದಿದ್ದರೆ ನಮ್ಮ ದೋಷವಲ್ಲದೆ ಮತ್ತಾರದು?

ನ್ಯೂಟನ್ನನು "ನಾನು ನನ್ನ ವಿಷಯವನ್ನು ನಿರಂತರ ನನ್ನೆದುರು ಇಟ್ಟುಕೊಳ್ಳುತ್ತೇನೆ. ಸಾವಧಾನದಿಂದ ಅದರ ಅಂಧಕಾರವನ್ನು ನಾಶಮಾಡಿ ನನ್ನ ಮಾರ್ಗದಲ್ಲಿ ಬೆಳಕನ್ನು ತಂದುಕೊಳ್ಳುತ್ತಿದೇನೆ" ಎಂದು ಹೇಳುತ್ತಿದ್ದನಂತೆ. ಯಾವದೇ ಕೆಲಸವನ್ನು ಶಕ್ತಿಯೊಡಗೂಡಿ ಮಾಡುವದರಲ್ಲಿಯೇ ಸಫಲತೆಯೇ ಹೊರತು ಕೇವಲ ಹಾಹಾಕಾರ ಎಬ್ಬಿಸುವದರಲ್ಲಿ ಅಲ್ಲ.

ಮನುಷ್ಯನ ಚಿತ್ತದಲ್ಲಿ ಒಂದು ವಿಲಕ್ಷಣ ಮತ್ತು ವಿಚಿತ್ರ ಜಗತ್ತು ಸ್ಥಾಪಿತವಾಗುತ್ತದೆ. ಅದರಲ್ಲಿ ಮೃದುವಾದ ಗುಲಾಬಿಹೂಗಳಿಂದ ಹರಡಿರುವ ಆಕರ್ಷಕ ಉದ್ಯಾನವನಗಳಿದ್ದಾವೆ. ಆ ಉದ್ಯಾನವನದಲ್ಲಿ ಮೃತ್ಯುವಿನಂತೆ ಅಂಧಕಾರವುಳ್ಳ ಭಯಾನಕ ನಿರಾಶೆಯ ಭಾವಿಗಳಿದ್ದಾವೆ. ಅದರ ಆಳವನ್ನು ನೋಡುತ್ತಲೇ ಹೃದಯ ಕಂಪಿಸುತ್ತಿದೆ, ಮತ್ತು ಆ ಉದ್ಯಾನವನದಲ್ಲಿ ತ್ಯಾಗ ಮತ್ತು ಸಹಾನುಭೂತಿ ಮುಂತಾದವುಗಳಿಂದ ತುಂಬಿ ಹರಿಯುತ್ತಿರುವ ಪ್ರೇಮದ ಹಳ್ಳಗಳಿದ್ದಾವೆ. ಅದರಲ್ಲಿ ದ್ವೇಷ, ಅಸತ್ಯ, ಅಭಿಮಾನ, ಇಂದ್ರಿಯಲೋಲುಪತೆ ಇತ್ಯಾದಿಗಳಿಂದ ತುಂಬಿರುವ ನರಕವೂ ಅದೆ. ಅದರಲ್ಲಿ ಸತ್ಯ, ಸಂತೋಷ, ಭಕ್ತಿ ಮತ್ತು ನಮ್ರತೆಯ ಸ್ವರ್ಗವು ಕೂಡ ಪ್ರಕಾಶಿಸುತ್ತಿರುತ್ತದೆ.

ಈ ಮನುಷ್ಯಚಿತ್ತದಲ್ಲಿ ಎಲ್ಲವೂ ಇದ್ದು ಕೆಟ್ಟದನ್ನು ಬಿಟ್ಟು ಒಳ್ಳೆಯದನ್ನು ಹಿಡಿಯುವದರಲ್ಲಿ ಜಾಣ್ಮೆಯಿದೆ, ತಾಳ್ಮೆಯಿದೆ, ಶಕ್ತಿಯಿದೆ. ಅಂತೆಯೇ ಹಿರಿಯರು "ಒಂದು ಬಿಟ್ಟು, ಒಂದು ಹಿಡಿ" ಯೆಂದು ಅನುಭವವಾಣಿಯಿಂದುಸುರಿದ್ದಾರೆ. ನಮ್ಮ ಜೀವನದಲ್ಲಿ ಜ್ಯೋತಿ ತುಂಬಬೇಕಾಗಿದೆ, ಶಕ್ತಿ ಗಳಿಸಬೇಕಾಗಿದೆ. ವ್ಯಕ್ತಿತ್ವವನ್ನು ವ್ಯಕ್ತಮಾಡಬೇಕಾಗಿದೆ. ಅದಕ್ಕಾಗಿ ಕಲುಷಿತಭಾವನೆಗಳನ್ನು ಹೊರದೊಗೆದರೆ ತನ್ನಿಂದ ತಾನೇ ಆಕರ್ಷಕವಾಗುತ್ತದೆ. ಸ್ಫೂರ್ತಿಬರುತ್ತೆ. ಈ ಶಕ್ತಿಗಾಗಿ ನಿರಂತರ ಪರಿಶ್ರಮಪಟ್ಟಲ್ಲಿ ಅದರ ಸಫಲತೆ. ಶಕ್ತಿಸಿದ್ಧಿಗಾಗಿ ಈ ತಿಳಿನುಡಿಗಳು ನಮಗೆ ಆಕರ್ಷಕವಾಗಲಿ, ದಾರಿದೀಪಗಳಾಗಲಿ.

ಉತ್ತಿಷ್ಠತ, ಜಾಗ್ರತ ಪ್ರಾಪ್ಯವರಾನ್ನಿಬೋಧತ!
"Arise! Awake! and stop not
Till the goal is reached!"

# ವ್ಯಾಕರಣ ಮತ್ತು ಸಮಾಜ ಜೀವನ

ವ್ಯಾಕರಣಗಳಲ್ಲಿ ಕೊಡುವ ಉದಾಹರಣೆಗಳಲ್ಲಿ ನಾವು ಸಾಮಾಜಿಕ ಜೀವನವನ್ನು ಗುರುತಿಸಬಹುದು. ಆಗಿನ ಕಾಲದ ವೃತ್ತಿಗಳು ಆಹಾರ-ಪಾನೀಯಗಳು, ವಿದ್ಯಾಭ್ಯಾಸ ಇತ್ಯಾದಿಗಳನ್ನು ತಿಳಿದುಕೊಳ್ಳಬಹುದು. ಇಂತಹ ಒಂದು ಪ್ರಯತ್ನವನ್ನು ಈ ಲೇಖನದಲ್ಲಿ ಕಾಣುತ್ತೇವೆ.

ಲೇಖಕರು :
ಶ್ರೀ ರಾ. ಯ. ಧಾರವಾಡಕರ,
ಪ್ರಿನ್ಸಿಪಾಲ, ಜನತಾ ಕಾಲೇಜ, ಧಾರವಾಡ

ಯೇನ ಧೌತಾ ಗಿರಃ ಪುಂಸಾಂ ವಿಮಲೈಃ ಶಬ್ದವಾರಿಭಿಃ ।
ತಮಶ್ಚ ಅಜ್ಞಾನಜಂ ಭಿನ್ನಂ ತಸ್ಮೈ ಪಾಣಿನಯೇ ನಮಃ ॥

ವ್ಯಾಕರಣ ? ಸಮಾಜಜೀವನ ?— ಏನು ಇದು ಸಂಬಂಧ ? ಮೌಲಾಸಾಬಿಗೂ ಮೊಹರಮ್ಮಕ್ಕೂ ಸಂಬಂಧವಿರಬಹುದು : ಮಹಾನವಮಿಗೆ ಸಂಬಂಧ ಹಚ್ಚಿದರೆ ಹೇಗೆ ಎಂದು ವಾಚಕರು ಒಮ್ಮೆಲೆಯೇ ಅಭಿಪ್ರಾಯ ವ್ಯಕ್ತ ಮಾಡಬಹುದೆಂಬುದು ನಿಜ ; ಆದರೆ, ಶಾಸ್ತ್ರ ಗ್ರಂಥಗಳಲ್ಲಿ ಆನುಷಂಗಿಕವಾಗಿಯಾದರೂ ಕಂಡು ಬರುವ ಈ ಅಂಶಗಳನ್ನು ಗುರುತಿಸುವುದು ಕುತೂಹಲಪೂರ್ಣವಾಗಿದೆ—

ಯಾವನೇ ಲೇಖಕನ ಆತ್ಮಚರಿತೆಯಲ್ಲಿ ಅವನ ವ್ಯಕ್ತಿತ್ವದ ಬಗ್ಗೆ ಕಾಣುವ ಸತ್ಯಾಂಶದ ಕಿಂತ ಅವನ ಕಥೆ ಮತ್ತು ಕಾದಂಬರಿಗಳಲ್ಲಿ ಅವನ ಬಗ್ಗೆ ಹೆಚ್ಚು ಸತ್ಯಪೂರ್ಣವಾದ ಅಂಶಗಳನ್ನು ಕಾಣಬಹುದೆಂಬ ಉಕ್ತಿಯೊಂದು ಇಂಗ್ಲಿಷಿನಲ್ಲಿರುವುದುಂಟು. ಸತ್ಯವನ್ನೇ ಹೇಳುತ್ತೇನೆಂದು ಹೊರಟ ವ್ಯಕ್ತಿಯು ಎಷ್ಟೋ ಸಲ ಅರಿಯದೆಯೇ ಅಸತ್ಯದ ಜಾಲವನ್ನು ಹೊಸೆಯುತ್ತಾನೆ, ಆದರೆ, ಕವಿಯು ತನ್ನ ಸ್ವಂತ ವ್ಯಕ್ತಿತ್ವವನ್ನೇ ಮರೆತು ಹೊಸ ಜಗತ್ತನ್ನೊಂದು ನಿರ್ಮಾಣಮಾಡುತ್ತಿರುವಾಗ ಅವನಿಗೆ ತಿಳಿಯದೆಯೇ ಎಷ್ಟೋ ಸಲ ಸತ್ಯ-ಪೂರ್ಣವಾದ ವ್ಯಕ್ತಿಗತ ವಿಚಾರಗಳು ಗ್ರಂಥದಲ್ಲಿ ಬರುವುದುಂಟು—Paradise lost ಪುರಾಣ ಕಾವ್ಯವನ್ನು ಬರೆಯಹೊರಟ ಮಹಾಕವಿ ಮಿಲ್ಟನ್‌ನು ಮದುವೆಯ ಬಗ್ಗೆ ಹತ್ತಾರು ಲೌಕಿಕ ಮಾತುಗಳನ್ನುಹೇಳಿದ್ದಾನೆ.

ಹಾಗೆಯೇ, ವ್ಯಾಕರಣಗ್ರಂಥಗಳನ್ನು ಗ್ರಥಿಸುವಲ್ಲಿ ವೈಯಾಕರಣಿಗಳ ದೃಷ್ಟಿಯು ಮುಖ್ಯವಾಗಿ ಇದ್ದುದು ಭಾಷೆಯ ಬಂಧದ ಕಡೆಗೆ. ಪಾತ್ರವನ್ನು ಮೀರಿ ಹರಿಯುವ ಹುಚ್ಚು ಹೊಳೆಯ ಹಾಗೆ ಭಾಷೆಯ ಪ್ರವಾಹವು ಸಿಕ್ಕಾಪಟ್ಟೆಯಾಗಿ ಹರಿಯದೆ ನಿಗ್ರಹಪೂರ್ಣವಾಗಿ ಸಾಗಬೇಕೆಂಬುದೇ ಈ ಪೂರ್ವಾಚಾರ್ಯರ ಉದ್ದೇಶ. ಆದರೂ ಕಾಣುವ ಕಣ್ಣಿಗೆ, ಗ್ರಾಫ್ ಕಾಗದದ ಮೇಲಿನ ಚುಕ್ಕೆಗಳ ಹಾಗೆ ವ್ಯಾಕರಣಗ್ರಂಥಗಳಲ್ಲಿಯ ಸಾಮಾಜಿಕಾಂಶಗಳು ಅಲ್ಲಲ್ಲಿ ಕಾಣದಿರಲಾರವು. ಈ ಚುಕ್ಕೆಗಳನ್ನೆಲ್ಲ ಹೊಂದಿಸಿ ಒಂದು ಗೆರೆ ಎಳೆದರೆ ಸಾಕು. ತೀರ ಸ್ಪಷ್ಟವಲ್ಲದಿದ್ದರೂ ನಿಶ್ಚಿತವಾದ ಸಾಮಾಜಿಕ ಜೀವನದ ಚಿತ್ರವೊಂದು ನಮ್ಮ ಕಣ್ಣೆದುರಿಗೆ ನಿಲ್ಲುತ್ತದೆ.

ಈ ದೃಷ್ಟಿಯು ನಮಗೆ ಹೊಸದೆಂದೇನೂ ಅಲ್ಲ. ಪಾಣಿನಿ ಮಹರ್ಷಿಗಳ ಬಗ್ಗೆ ಅನುವಾದ ಮಾಡುವಾಗಲೇ ಈ ಸೂಕ್ಷ್ಮವನ್ನು ಕಂಡ ಪೂರ್ವಾಚಾರ್ಯರು ಹೇಳಿ ಬಿಟ್ಟಿದ್ದಾರೆ- "ಮಹತೀ ಸೂಕ್ಷ್ಮೇಕ್ಷಿಕಾ ವರ್ತತೇ ಸೂತ್ರಕಾರಸ್ಯ" ಎಂದು ಪಾಣಿನಿ ಮಹರ್ಷಿಗಳ ಬಗ್ಗೆ ಹೇಳುವಾಗ ಇದೇ ಮಾತನ್ನೇ ಚೀನೀ ಬೌದ್ಧ ಪ್ರವಾಸಿಕನಾಗಿದ್ದ ಹ್ಯುಯೆನ್ ತ್ಸಾಂಗನು ಕೂಡ ಗುರುತಿಸಿದ್ದಾನೆ. "Rishi Panini was from birth extensively informed about men and things" ಎಂದು ಅವನು ಹೇಳಿದ್ದಾನೆ.

ಹಾಗಿದ್ದಲ್ಲಿ ಪಾಣಿನಿಮಹರ್ಷಿಗಳು ಕಂಡ ಈ ಜೀವನದ ಆಳ- ಅಗಲಗಳೇನು ? ಅವರ ಮಹತೀ ಸೂಕ್ಷ್ಮೇಕ್ಷಿಕಾ ಯಾವುದು ? ಇತರ ವೈಯಾಕರಣಿಗಳು ಕಂಡ ಸಮಾಜಜೀವನವು ಎಂಥದು ? ಎಂಬ ಮಾತುಗಳನ್ನು ವಿವೇಚಿಸೋಣ.

## ನದಿ-ಪರ್ವತಗಳು

ಪಾಣಿನಿ ಮಹರ್ಷಿಗಳಿಗೆ ಪರ್ವತಗಳಲ್ಲಿ ಹಿಮಾಲಯ, ತ್ರಿಕ-ಕೂಟ, ವಿದೂರ, ಕಿಂಶುಲಕಗಿರಿ ಮೊದಲಾದವು ಗೊತ್ತಾಗಿದ್ದುವು. ಅಂಜನವು ತ್ರಿಕ-ಕೂಟ ಪರ್ವತದಲ್ಲಿಯೇ ದೊರಕುತ್ತಿತ್ತೆಂದು ಪ್ರತೀತಿ. ಮುತ್ತು ಮಾಣಿಕ ಮತ್ತು ವಜ್ರಗಳ ಜೊತೆಗೆ ನಾವು ವೈಡೂರ್ಯವನ್ನೂ ಹೇಳುವುದುಂಟು. ವಾಲವಾಯದಲ್ಲಿ ದೊರಕುತ್ತಿದ್ದ ಈ ಬೆಲೆಯುಳ್ಳ ಹರಳುಕಲ್ಲುಗಳನ್ನು ವಿದೂರದಲ್ಲಿ ಸಂಸ್ಕರಿಸುತ್ತಿದ್ದರೆಂದು ಪತಂಜಲಿ ಮಹರ್ಷಿಗಳು ಹೇಳುತ್ತಾರೆ. ಪಾಣಿನಿ ಮಹರ್ಷಿಗಳು ಹೇಳಿದ ನದಿಗಳಲ್ಲಿ ಸುವಾಸ್ತು ಎಂಬುದು ಗಾಂಧಾರ ದೇಶದಲ್ಲಿ ಪ್ರವಹಿಸುತ್ತಿದ್ದಿತು. ಈ ನದಿಯ ಮೇಲ್ಭಾಗದ ದಂಡೆಯ ಮೇಲಿನ ಜನರು ಸಿದ್ಧಮಾಡುತ್ತಿದ್ದ ಕಂಬಳಿಗಳಿಗೇ "ಪಾಂಡು-ಕಂಬಲ"ವೆಂದು ಕರೆಯುತ್ತಿದ್ದರೆಂದು ಪಾಣಿನಿಯಲ್ಲಿ ಹೇಳಿದೆ. ಇದಲ್ಲದೆ, ವರ್ಣು (ವರ್ಣುರ್ನಾಮ ನದಃ ತತ್ಸಮೀಪೋದೇಶಃ ವರ್ಣಃ ) ಅಜಿರವತಿ, ರಥಸ್ಪಾ, ಮೊದಲಾದ ಇತರ ನದಿಗಳ ಹೆಸರುಗಳೂ ಪಾಣಿನಿಯಲ್ಲಿ ಇವೆ.

ಅಷ್ಟಾಧ್ಯಾಯಿಯಲ್ಲಿ ಉಲ್ಲೇಖಿತವಾದ ಜನಪದಗಳೆಂದರೆ — ಕಾಂಬೋಜ, ಪ್ರಕಣ್ವ, ಗಾಂಧಾರ, ಸಿಂಧು, ಸೌವೀರ, ಬ್ರಾಹ್ಮಣಕ, ಅಪಕರ, ಪಾರಸ್ಕರ, ಕಚ್ಛ, ಕೇಕಯ, ಮದ್ರ, ಉಶೀನರ, ತ್ರಿಗರ್ತ— ಮೊದಲಾದುವು. ತ್ರಿಗರ್ತವು ಆರು ರಾಜ್ಯಗಳ ಘಟಕವಾಗಿದ್ದಂತೆ ತೋರುತ್ತದೆ. ಪಾಣಿನಿಯವರು ತ್ರಿಗರ್ತ ಷಷ್ಠವೆಂದು ಹೇಳಿರುವರಲ್ಲದೆ, ತ್ರಿಗರ್ತದ ಜನರು ಆಯುಧ ಜೀವಿಗಳಾಗಿದ್ದರೆಂದೂ ( ಆಯುಧಜೀವೀ ಸಂಘಃ ) ಹೇಳಿದ್ದಾರೆ.

ಅಷ್ಟಾಧ್ಯಾಯಿಯಲ್ಲಿ ಬರುವ ಊರುಗಳ ಹೆಸರುಗಳು ಸಾಮಾನ್ಯವಾಗಿ ನಗರ (ಮಹಾನಗರ, ನವನಗರ ಇತ್ಯಾದಿ,) ಪುರ, (ಫಲಕಪುರ, ಹಸ್ತಿನಪುರ, ಮಾದ್ರೇಯಪುರ ಇ), ಗ್ರಾಮ, ಖೇಟ, ಘೋಷ, ಕೂಲ, ಸೂಡ, ಸ್ಥಲ,ಕರ್ಷ,ತೀರ— ಮೊದಲಾಗಿ ಅಂತ್ಯವನ್ನು ಪಡೆಯುತ್ತವೆ.

ಇವಲ್ಲದೆ, ಇಂದು ಮೂಲಾರ್ಥವು ಅಸ್ಪಷ್ಟವಾಗಿದ್ದ ಹಲವು ಪ್ರದೇಶಗಳ ಹೆಸರುಗಳು ಎಷ್ಟು ಯುಕ್ತಾಯುಕ್ತವಾಗಿದ್ದುವೆಂಬುದನ್ನು ಈ ಕೆಳಗಿನ ಹೆಸರುಗಳಿಂದ ಕಂಡುಕೊಳ್ಳಬಹುದು. ಇಂದಿನ — ಭಡೋಚ, ಕಚ್ಛದ ರಣ, ಕಾಂಡ್ಲಾ— ಮೊದಲಾದವುಗಳ ಮೂಲಗಳನ್ನು ಕಚ್ಛ, ಅಗ್ನಿ, ವಕ್ತ್ರ, ಮೊದಲಾದ ಪ್ರತ್ಯಯಗಳಲ್ಲಿ ಕಾಣಬಹುದು. ಭೃಗು ಕಚ್ಛ> ಭರೋಚ> ಭಡೋಚ. ಇದರಂತೆ ದಾರುಕಚ್ಛ, ಪಿಪ್ಪಲೀಕಚ್ಛ ಇತ್ಯಾದಿ. ಈ ಬಂದರುಗಳ ಸಮೀಪಕ್ಕೆ ಭೌಗೋಲಿಕವಾಗಿ ಇರುವವೇ ಕಾಂಡಾಗ್ನಿ (ಕಾಂಡ+ಅಗ್ನಿ) (ಕಾಂಡ್ಲಾ) ವಿಭುಜಾಗ್ನಿ (ಭೂಜ್)— ಸುಡುತ್ತಿರುವ ಮರಳು ಕಾಡು.

ಸಾಮಾಜಿಕವಾಗಿ, ಭಾವ ಮತ್ತು ಕರ್ಮಗಳಿಗೆ ಅನುಗುಣವಾಗಿ ಬ್ರಾಹ್ಮಣಾದಿ ವರ್ಣಗಳ ಉಲ್ಲೇಖಗಳು ದೊರಕುತ್ತವೆ. ತಾವು ವಾಸಿಸಿದ ಜನಪದಗಳ ಮೂಲಕವಾಗಿ ಆ-ಆ ಭಾಗಗಳ ಬ್ರಾಹ್ಮಣರಿಗೆ ಹೆಸರುಗಳು ಬರುತ್ತಿದ್ದವೆಂದು ಪಾಣಿನಿಯಲ್ಲಿ ಹೇಳಿದೆ. ಕಾಶಿಕದಲ್ಲಿ ಅವಂತಿಬ್ರಾಹ್ಮಣ, ಸುರಾಷ್ಟ್ರ-ಬ್ರಾಹ್ಮಣರ ಉಲ್ಲೇಖವಿದೆ. ಇದರಂತೆಯೇ ಕಾನ್ಯಕುಬ್ಜ, ಸಾರಸ್ವತ ಮೊದಲಾದ ಬ್ರಾಹ್ಮ

ಣರ ಉಪಸರ್ಗಗಳ ಮೂಲಗಳನ್ನೂ ಗುರುತಿಸಬಹುದಾಗಿದೆ.

### ವಿದ್ಯಾಭ್ಯಾಸ

ವಿದ್ಯಾರ್ಥಿಗಳೆಲ್ಲ ಬ್ರಹ್ಮಚಾರಿಗಳಾಗಿ ವೇದ-ವ್ಯಾಕರಣ ಮೊದಲಾದ ಶಾಸ್ತ್ರಗಳ ಅಭ್ಯಾಸವನ್ನು ಮಾಡುತ್ತಿದ್ದರು. ಸ್ನಾತಕನಾಗಬೇಕೆನ್ನುವವನಿಗೆವ್ಯಾಕರಣದ ಅಭ್ಯಾಸವಂತೂ ತುಂಬಾಅವಶ್ಯಕವಾಗಿದ್ದಿತು. ವೈದಿಕ ಮತ್ತು ಲೌಕಿಕ ಶಬ್ದಗಳ ಸೂಕ್ಷ್ಮವನ್ನರಿತವರೇ ವೇದವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಲ್ಲವರಾಗಿದ್ದರು. ಪತಂಜಲಿ ಮಹರ್ಷಿಗಳ ಕಾಲಕ್ಕೆ ಅಂದರೆ ಕ್ರಿಸ್ತಪೂರ್ವ ೨ನೆಯ ಶತಮಾನದ ಹೊತ್ತಿಗೆ, ಈ ಕ್ರಮವು ಮ್ಲಾನವಾದಂತೆ ಕಾಣುತ್ತದೆ. ಅಂತಲೇ ಮಹಾಭಾಷ್ಯದಲ್ಲಿ ವ್ಯಾಕರಣದ ಅಭ್ಯಾಸದ ಅವಶ್ಯಕತೆಯನ್ನು ಹೇಳುವಾಗ ಪತಂಜಲಿಮಹರ್ಷಿಗಳು 'ತ್ವರಿತ ವಕ್ತಾರರಾದ' ವಿದ್ಯಾರ್ಥಿಗಳನ್ನು "ವಿಪ್ರತಿಪನ್ನಬುದ್ಧಿಗಳೆಂ"ದು ಸಂಬೋಧಿಸಿದ್ದಾರೆ.

ತನ್ನ ಅಭ್ಯಾಸವನ್ನು ಪೂರ್ತಿ ಮಾಡಿದವನಿಗೆ ಸ್ನಾತಕನೆಂದು ಕರೆಯುತ್ತಿದ್ದರು. ಇವನು ಮೂಲತಃ ವೇದಸಂಪಾತಿ. ಇದಕ್ಕೂ ಹೆಚ್ಚಿನವನಿಗೆ 'ನಿಷ್ಣಾತ'ನೆನ್ನುತ್ತಿದ್ದರು. ವೇದಾಭ್ಯಾಸದ ಬಗ್ಗೆ ಮಾತ್ರ ಮೂಲತಃ ಉಪಯೋಗಿಸುತ್ತಿದ್ದ ಈ ಪದವನ್ನು ಅನಂತರ ಎಲ್ಲ ವಿದ್ಯೆಗಳ ಬಗ್ಗೆಯೂ ಉಪಯೋಗಿಸಹತ್ತಿದರು, ಉದಾ: "ನಿಷ್ಣಾತಃ ಕಟಕರಣೇ" ಅಂದರೆ ಚಾಪೆಗಳನ್ನು ಮಾಡುವಲ್ಲಿ ಕುಶಲನಾದವನು ಎಂದರ್ಥ. ವಿದ್ಯೆಯಲ್ಲಿ ಪೂರ್ಣತ್ವವನ್ನು ಪಡೆದದ್ದಕ್ಕಾಗಿ ಧರಿಸುವ ಹಾರದ ಮೂಲಕವಾಗಿ ಸ್ನಾತಕರಿಗೆ 'ಸ್ರಗ್ವಿ' ಎಂದೂ ಕರೆಯುತ್ತಿದ್ದರು. 'ಮಾಲೆ' ಸಾಮಾನ್ಯವಾದ ಹಾರ; ಸ್ರಕ್ ವಿದ್ಯಾಭ್ಯಾಸಂಗದ ನಂತರ ಧರಿಸುವ ಹಾರವಾಗಿತ್ತೆಂದು ಪ್ರೊ. ವಿ. ಎಮ್. ಆಪ್ಟೆ ಅವರು, ಗೃಹ್ಯಸೂತ್ರಗಳಲ್ಲಿಯ ಧಾರ್ಮಿಕ ಮತ್ತು ಸಾಮಾಜಿಕಜೀವನ ಎಂಬ ಗ್ರಂಥದಲ್ಲಿ ಹೇಳುತ್ತಾರೆ . . . ಅಭ್ಯಾಸ ಪೂರ್ತಿಯಾಗುವ ಮೊದಲೇ ಗೃಹಸ್ಥಾಶ್ರಮವನ್ನು ಸ್ವೀಕರಿಸುವ ವಿದ್ಯಾರ್ಥಿಯನ್ನು ಪಾಣಿನಿ ಮಹರ್ಷಿಗಳು "ಖಟ್ವಾರೂಢರು" ಅಂದರೆ ಮಂಚದ ಸುಖಜೀವನಕ್ಕೆ ಮಾರು ಹೋದವರು ಎಂದು ಹೀಗಳೆದಿದ್ದಾರೆ.

ಪತಂಜಲಿಮಹರ್ಷಿಗಳ ಮಹಾಭಾಷ್ಯದಿಂದಲಂತೂ ಆ ಕಾಲದ ವಿದ್ಯಾಭ್ಯಾಸದ ಕ್ರಮದ ಬಗ್ಗೆ ಅನೇಕ ವಿವರಗಳನ್ನು ಕಾಣಬಹುದಾಗಿದೆ. ಅಧ್ಯಯನ ಮತ್ತು ಅಧ್ಯಾಪನಗಳು ಬ್ರಾಹ್ಮಣನಾದವನ ವೃತ್ತಿಗಳೆಂದು ಹೇಳಲ್ಪಟ್ಟಿವೆ. "ಬ್ರಾಹ್ಮಣೇನ ನಿಷ್ಕಾರಣೋ ಧರ್ಮಃ ಷಡಂಗೋ ವೇದಃ ಅಧ್ಯೇಯೋ ಜ್ಞೇಯಶ್ಚ"—ಎಂದು ಪತಂಜಲಿಗಳ ಮತ. ಅದಕ್ಕಾಗಿ ವ್ಯಾಕರಣಾಭ್ಯಾಸದ ಅವಶ್ಯಕತೆ. ವಿದ್ಯೆ ಪರಿಪೂರ್ಣವಾಗಬೇಕಾದರೆ, ಆಗಮಕಾಲ (ಅಂದರೆ ವಿದ್ಯೆಯನ್ನು ಸ್ವೀಕರಿಸುವ ಕಾಲ), ಸ್ವಾಧ್ಯಾಯ ಕಾಲ (ಅಂದರೆ ಕಲಿತ ವಿದ್ಯೆಯನ್ನು ಅರಗಿಸಿಕೊಳ್ಳುವ ಕಾಲ), ಪ್ರವಚನ ಕಾಲ (ಅಂದರೆ ಆ ವಿದ್ಯೆಯನ್ನು ಹೇಳಿಕೊಡುವ ಕಾಲ) ಮತ್ತು ವ್ಯವಹಾರಕಾಲ (ಅಂದರೆ ಕಲಿತ ವಿದ್ಯೆಯಂತೆ ಆಚರಿಸುವ ಕಾಲ)- ಎಂದು ನಾಲ್ಕು ಹಂತಗಳುಂಟೆಂದು ಪತಂಜಲಿಗಳು ಹೇಳುತ್ತಾರೆ.

ವಿದ್ಯಾರ್ಥಿಗಳು ಕಲಿಯಬೇಕಾದ ವಿಷಯಗಳ ಬಗ್ಗೆ ಈಗಾಗಲೇ ನೋಡಿದೆ. ಅವರವರ ಅಭ್ಯಾಸ ವಿಷಯಗಳ ಮೇಲಿಂದ ಬಂದ ಇತರ ಹೆಸರುಗಳಿಗೆ— ಕಾಶಕೃತ್ಸ್ನವನ್ನು ಅಭ್ಯಾಸ ಮಾಡುವವನು ಕಾಶಕೃತ್ಸ್ನ ಬ್ರಾಹ್ಮಣ. ಸುಮನೋತ್ತರ ಅಭ್ಯಾಸಿ — ಸುಮನೋತ್ತರಕಃ; ವಾಸವದತ್ತದ ಅಭ್ಯಾಸಿ ವಾಸವದತ್ತಿಕ; ಇತ್ಯಾದಿ. ಇದರ ಮೇಲಿಂದ ವೇದ ಮಾತ್ರವಲ್ಲದೆ, ಕಾವ್ಯಾದಿಗಳೂ ವ್ಯಾಸಂಗ ವಿಷಯಗಳಾಗಿದ್ದುವೆಂಬುದನ್ನು ಕಾಣಬಹುದು. ಇದರಂತೆ, ವಾಯಸವಿದ್ಯೆ, ಅಂಗವಿದ್ಯೆ, ಗೋ-ಲಕ್ಷಣ, ಅಶ್ವಲಕ್ಷಣ, ಕ್ಷಾತ್ರ, ಧಾರ್ಮವಿದ್ಯೆ, ತ್ರೈವಿದ್ಯೆ, ಧನುರ್ವಿದ್ಯೆ (ಧನುಷಿ ಶಿಕ್ಷತೇ)ಮೊದಲಾವುಗಳ ಉಲ್ಲೇಖವೂ ಮಹಾಭಾಷ್ಯದಲ್ಲಿದೆ.

### ಗುರುಶಿಷ್ಯ ಸಂಬಂಧ

ಗುರುಶಿಷ್ಯರು ತುಂಬಾ ಅನ್ಯೋನ್ಯರಾಗಿದ್ದು ಪರಸ್ಪರ ಹಿತಚಿಂತಕರಾಗಿರಬೇಕೆಂದು ಮತ. (ಗುರುಣಾ ಶಿಷ್ಯಃ ಛತ್ರವತಾದ್ಯಂ ಶಿಷ್ಯೇಣಚ ಗುರುಃ ಛತ್ರವತ್ ಪರಿಪಾಲ್ಯಃ) ಶಿಷ್ಯನು ತನ್ನ ಗುರುವನ್ನು ಅರಸಿಕೊಂಡು ಹೋಗಿ ಅವನ ಹತ್ತಿರವೇ ಇರಬೇಕಾಗಿತ್ತು. ಕಾಲ ಕಾಲಕ್ಕೆ ಗುರುಗಳನ್ನು ಬದಲಿಸುತ್ತಿದ್ದ ಶಿಷ್ಯನು ಹೀನನಾಗಿದ್ದನು. ಅವನಿಗೆ "ತೀರ್ಥಕಾಕ" ಅಂದರೆ ತೀರ್ಥಕ್ಷೇತ್ರಗಳಲ್ಲಿ ಅಲ್ಲಲ್ಲಿ ತಿರುಗುತ್ತ ಹೋಗುವ ಕಾಗೆಯ ಹಾಗೆ ಇರುವ ಮನುಷ್ಯನೆಂದು ಕರೆಯುತ್ತಿದ್ದರು. (ಯೋ ಗುರುಕುಲಂ ಗತ್ವಾ ನ ಚಿರಂ ತಿಷ್ಠತಿ ಸ ಉಚ್ಯತೇ ತೀರ್ಥಕಾಕಃ ಇತಿ) ಹಲಕೆಲವು ಗುರುಗಳ ಕೀರ್ತಿಯಂತೂ ಅಪಾರವಾಗಿದ್ದಿತು. ಅವರ ಕಡೆಗೆ ಅನೇಕ ಯೋಜನಗಳ ದೂರದಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ಇಂಥ ಕೀರ್ತಿವಂತರಾದ ಗುರುಗಳಿಗೆ'ಯೋಜನ ಶತಿಕ ಗುರು'ಗಳೆಂದು ಕರೆಯುತ್ತಿದ್ದರು. (ಯೋಜನ ಶತಾದ್ ಅಭಿಗಮನಂ ಅರ್ಹತಿ ಇತಿ) ಗುರುಗಳೂ ಶಿಷ್ಯರನ್ನು ಮಿತ್ರರೆಂದೇ ಭಾವಿಸಿ ಹೇಳಿಕೊಡುತ್ತಿದ್ದರು. (ತದ್ ಆಚಾರ್ಯಃ ಸುಹೃದ್ವತ್ ಅನ್ವಾಚಷ್ಟೇ)

ಸಾಮಾನ್ಯವಾಗಿ ವಸಂತಕಾಲದಲ್ಲಿ ವಿದ್ಯಾಭ್ಯಾಸವು ಪ್ರಾರಂಭವಾಗುತ್ತಿದ್ದಂತೆ ಕಾಣುತ್ತದೆ. ವಿದ್ಯಾರ್ಥಿಗಳು ಹಗಲು ಹೊತ್ತಿನಲ್ಲಿ ಅಭ್ಯಾಸ ಮಾಡುತ್ತಿದ್ದರಾದರೂ ರಾತ್ರಿ ಕಾಲದಲ್ಲಿಯೂ ಓದುವ ಅಭ್ಯಾಸಿಗಳೂ ಇದ್ದರು. (ಇಮಾಕಾಭ್ಯಾಂ ಛಾತ್ರಾಭ್ಯಾಂ ರಾತ್ರಿಃ ಅಧೀತಾ ಅಥೋ ಅಭ್ಯಾಂ ಅಹರ್ ಅಪಿ ಅಧೀತಮ್) ಅಭ್ಯಾಸದಲ್ಲಿ ಕಂಠಪಾಠವು ಮಹತ್ವದ ಭಾಗವಾಗಿದ್ದಿತು. ಸ್ಪಷ್ಟವಾಗಿ ಉಚ್ಚರಿಸುವ ವಿದ್ಯಾರ್ಥಿಯನ್ನು 'ಸಾಧ್ವಾಧ್ಯಾಯಿ' ಎಂದೂ ನಿಧಾನವಾಗಿ ಉಚ್ಚರಿಸುವವನನ್ನು 'ವಿಲಂಬಿತಾಧ್ಯಾಯಿ' ಎಂದೂ ಕರೆಯುತ್ತಿದ್ದರು. ಕೋಗಿಲೆಯ ಕಂಠದ ಹಾಗೆ ಮೃದುಮಧುರವಾಗಿ ಉಚ್ಚರಿಸುವವರಿಗೆ (ಕೋಕಿಲಾಭಿವ್ಯಾಹಾರಿ) ಎಂದು ಕರೆಯುತ್ತಿದ್ದರು. ತಪ್ಪು ಉಚ್ಚಾರ ಮಾಡುವ ವಿದ್ಯಾರ್ಥಿಗಳು ಗುರುಗಳಿಂದ ಹೊಡೆತವನ್ನು ತಿನ್ನುತ್ತಿದ್ದರು. (ಯಃ ಉದಾತ್ತೇ ಕರ್ತವ್ಯೇ ಅನುದಾತ್ತಮ್ ಕರೋತಿ ಖಂಡಿಕೋಪಾಧ್ಯಾಯಃ ತಸ್ಮೈ ಚಪೇಟಾಮ್ ದದಾತಿ) ಆದರೆ ಸಾಮಾನ್ಯವಾಗಿ ವಿದ್ಯಾರ್ಥಿಗಳು ಗುರುಗಳನ್ನು ಅನುಸರಿಸಿ ನಡೆಯುತ್ತಿದ್ದರು. ಅವರ ಸಲುವಾಗಿ ಎಂಥ ಹಳ್ಳಿಗಳಲ್ಲಿಯೂ ಇರುತ್ತಿದ್ದರು. (ಗ್ರಾಮೇ ಗುರುನಿಮಿತ್ತಂ ವಸಾಮಃ - ಅಧ್ಯಯನನಿಮಿತ್ತಂ ವಸಾಮ ಇತಿ) ವಿದ್ಯಾರ್ಥಿಗಳು ಗುರುಗಳ ಸಲುವಾಗಿ ಕಮಂಡಲುಪಾಣಿಗಳಾಗಿ ಕಾಳು ಕಡಿಗಳಿಗಾಗಿ ಭಿಕ್ಷೆ ಬೇಡಿ ತರುತ್ತಿದ್ದರು. (ಉಪಾಧ್ಯಾಯಸ್ಯ ಶಿಷ್ಯೋ ಯಾಚ್ಯ ಕುಲಾನಿ ಗತ್ವಾ ಗ್ರಾಸವಾದೀನಿ ಲಭತೀ) ಆದರೆ ಕೇವಲ ಕೂಳಿನ ಸಲುವಾಗಿಯೇ ಗುರುಗಳಲ್ಲಿ ವಾಸಿಸುವ ವಿದ್ಯಾರ್ಥಿಗಳೂ ಇದ್ದರು. ಇಂಥವರನ್ನು "ಓದನಪಾಣಿನೀಯರು" "ಘೃತಕಾಢೀಯರು" "ಕಂಬಲಚಾರಾಯಣೀಯರು" ಎಂದು ಪತಂಜಲಿಗಳು ಕರೆದಿದ್ದಾರೆ.

### ಸ್ತ್ರೀಯರ ಸ್ಥಾನಮಾನ

ಪಾಣಿನಿ ಮತ್ತು ಪತಂಜಲಿ ಮಹರ್ಷಿಗಳ ವ್ಯಾಕರಣಗ್ರಂಥಗಳಿಂದ ಕಂಡು ಬರುವ ಸ್ತ್ರೀಯರ ಸ್ಥಾನವೇನೆಂಬುದೂ ಕುತೂಹಲ ಪೂರ್ಣವಾಗಿದೆ.

ಮದುವೆಯಾಗದ ಸ್ತ್ರೀಯರು ಕೂಡ ಸಂನ್ಯಾಸವನ್ನು ಸ್ವೀಕರಿಸಬಹುದಿತ್ತು. (ಕುಮಾರ ಶ್ರಮಣಾ) ಅರಮನೆತನದ ಸ್ತ್ರೀಯರಿಗೆ 'ರಾಜದಾರಾ' ಎಂದೂ ಸೂರ್ಯ ಬೆಳಕನ್ನು ಕಾಣದವರೆಂದೂ "ಅಸೂರ್ಯಮ್ ಪಶ್ಯಾಃ" ಎಂದೂ ಕರೆಯುತ್ತಿದ್ದರು. ಸ್ತ್ರೀಯರನ್ನು ಗೆಲ್ಲುವಲ್ಲಿ 'ಹೃದ್ಯಬಂಧನ' ಮಂತ್ರವೂ ಒಂದು ಸಾಧನೆಯಾಗಿದ್ದಿತು. ಇದನ್ನೇ ವಶೀಕರಣಮಂತ್ರವೆಂದು ವರ್ಣಿಸಲಾಗಿದೆ. ತನ್ನ ತಂಗಿಯ ಮದುವೆಯ ನಂತರ ಮದುವೆಯಾದ ಹೆಣ್ಣುಮಗಳಿಗೆ "ದಿಧಿಷು" ಎಂದೂ ಅವಳ ಗಂಡನನ್ನು 'ದಿಧಿಷೂಪತಿ' ಎಂದೂ ಕರೆಯುತ್ತಿದ್ದರು. ಶಿಕ್ಷಕರ ಸ್ಥಾನದಲ್ಲಿದ್ದ ಸ್ತ್ರೀಯರಿಗೆ 'ಆಚಾರ್ಯ' ಎಂದು ಕರೆಯುತ್ತಿದ್ದರು. ಸ್ತ್ರೀಯರ ಆಟಪಾಟಗಳಲ್ಲಿ ಶಾಲ ಮತ್ತು ಅಶೋಕ ವೃಕ್ಷಗಳ ಹೂಗಳನ್ನು ಬಿಡಿಸುವುದು (ಶಾಲಭಂಜಿಕಾ)

( ಅಶೋಕಪುಷ್ಪ ಪ್ರಚಾಯಿಕಾ) ತುಂಬಾ ಜನ ಪ್ರಿಯವಾಗಿದ್ದುವು. ಶಾಲಭಂಜಿಕೆಯ ಬಗ್ಗೆ ಜಾತಕಗಳಲ್ಲಿ ಈ ಕಥೆ ಬರುತ್ತದೆ.

ಭಗವಾನ್ ಬುದ್ಧದೇವನ ಕಾಲದಲ್ಲಿ ಕಪಿಲವಸ್ತು ಮತ್ತು ದೇವದಹಗಳ ನಡುವೆ ಲುಂಬಿಣೀ ಎಂಬಲ್ಲಿ ಪವಿತ್ರವಾದ ಶಾಲವೃಕ್ಷಗಳಆರಾಮವಿದ್ದಿತು.ಬೊಡ್ಡೆಯಿಂದಮೊದಲುಗೊಂಡು ತುದಿಯವರೆಗೆ ಗಿಡದ ಸಾಲಿನ ತುಂಬ ಹೂವುಗಳು ಛತ್ತು ಹೊಡೆದ ಹಾಗೆ ಅರಳಿ ನಿಂತಿದ್ದುವು. ಈ ಗಿಡಗಳ ಸುಂದರವಾದ ಟೊಂಗೆಗಳಲ್ಲಿ ಪಂಚವರ್ಣದ ಭೃಂಗಗಳ ಸಾಲುಗಳು, ವಿಧವಿಧವಾದ ಪಕ್ಷಿಗಳು ಮಧುರವಾದ ತಾನವನ್ನು ಗೈಯುತ್ತ ಹಾರಾಡುತ್ತಿದ್ದುವು. ಇಡೀ ಲುಂಬಿಣೀ ತೋಟವು ವಿಧವಿಧದ ಬಣ್ಣದ ಲತೆಗಳಿಂದ ಸುತ್ತುವರಿಯಲ್ಪಟ್ಟಿದೆಯೋ ಇಲ್ಲವೆ ಯಾವನಾದರೊಬ್ಬ ಮಹಾ ಸಮ್ರಾಟನ ಔತಣಮಂದಿರವೋ ಎನ್ನುವ ಹಾಗೆ ಕಾಣುತ್ತಿತ್ತು. ಆ ಸಮಯದಲ್ಲಿ ಶಾಲವೃಕ್ಷಗಳ ಸಮೂಹದಲ್ಲಿ ವಿಹರಿಸ ಬಯಸಿದ ರಾಣಿಯು ಒಂದೊಂದಾಗಿ ಹೂವುಗಳನ್ನು ಬಿಡಿಸಹತ್ತಿದಳು.

### ಶಿಷ್ಟ ಸಂಪ್ರದಾಯಗಳು

ಈಗಾಗಲೇ, ಆನುಷಂಗಿಕವಾಗಿ ಮಹಾಭಾಷ್ಯದಲ್ಲಿ ಬಂದಿರುವ ಅಂಶಗಳನ್ನು ಗಮನಿಸಿದ್ದೇವೆ. ಪಾಣಿನಿಯಕಿಂತ ಪತಂಜಲಿಗಳಲ್ಲಿ ಇಂಥ ಅಂಶಗಳು ಹೆಚ್ಚಾಗಿ ಬರುತ್ತಿವೆಯೆಂಬುದನ್ನು ಗಮನಿಸಬಹುದು. ಪತಂಜಲಿಗಳು ಹೇಳಿದ "ಅರುಣದ್ ಯವನಃ ಮಾಧ್ಯಮಿಕಾನ್" "ಅರುಣದ್ ಯವನಃ ಸಾಕೇತಮ್"- ಎಂಬ ಉಕ್ತಿಗಳ ರಾಜಕೀಯ ಮಹತ್ವವೇನಿದೆಯೆಂಬುದು ಸುಪ್ರಸಿದ್ಧವೇ ಆಗಿದೆ. ಮಹಾಭಾಷ್ಯದಲ್ಲಿ ಸಾಮಾಜಿಕಾಂಶಗಳನ್ನು ಒಳಗೊಂಡ ಇನ್ನೂ ನಾಲ್ಕಾರು ಮಾತುಗಳನ್ನು ಇಲ್ಲಿ ಗಮನಿಸೋಣ. ಪತಂಜಲಿಯ ಕಾಲದ ಬ್ರಾಹ್ಮಣ ಧರ್ಮಾಚರಣೆಗೆ ಅನುಗುಣವಾದ ಗುಣಗಳುಳ್ಳವನಾಗಿದ್ದ. ನಡೆದಾಡುವಾಗ ನ್ನುವದೂ ನಿಂತಂತೆಯೇ ಜಲಬಾಧೆಯನ್ನು ತೀರಿಸುವುದೂ ಶಿಷ್ಟಸಂಪ್ರದಾಯ ವಿರೋಧಿಯಾಗಿದ್ದುವು. ಮಗನೆಂದರೆ ಶೋಕ ನಿವಾರಕನೆಂದು ಕಲ್ಪನೆ ಇದ್ದಿತು. ಹುಟ್ಟಿದ ಹತ್ತನೆಯ ದಿವಸ ಕೂಸುಗಳಿಗೆ ಹೆಸರನ್ನು ಇಡುತ್ತಿದ್ದರು.

### ಆಹಾರ–ಪಾನೀಯಗಳು

ಆಹಾರ ಪಾನೀಯಗಳ ದೃಷ್ಟಿಯಿಂದ ಲಂತೂ ಮಹಾಭಾಷ್ಯದಲ್ಲಿ ಅನೇಕ ವಿವರಗಳು ದೊರಕುತ್ತವೆ. ಶಾಕಾಹಾರದಲ್ಲಿ ಓದನ ತುಂಬಾ ಪ್ರಚಲಿತವಾಗಿದ್ದಿತು. ಮಾಂಸೋದನವೂ ಜನಪ್ರಿಯವಾಗಿದ್ದ ಹಾಗೆ ಕಾಣುತ್ತದೆ. ಎಲೆಯಲ್ಲಿಯ ಅನ್ನದ ರಾಶಿಯು ವಿಂಧ್ಯಪರ್ವತದ ಹಾಗೆ ಕಾಣುತ್ತಿದ್ದಿತೆಂದು ಪತಂಜಲಿಗಳು ಹೇಳಿದ್ದಾರೆ. ( ವಿಂಧ್ಯೋ ವರ್ಧಿತಕಮ್ ಇತಿ). ಉಳಿದ ಆಹಾರಗಳಲ್ಲಿ ಮೋದಕ ಅಪೂಪ, ಶಷ್ಕುಲಿ, ಮೊದಲಾದ ಮಾಂಸಾಹಾರದಲ್ಲಿ ಪಂಚ ಪಂಚ ನಖಗಳುಳ್ಳ ಪ್ರಾಣಿಗಳನ್ನು ಮಾತ್ರ ತಿನ್ನಬಹುದಾಗಿತ್ತು. ಕಾಡು ಹಂದಿ ಮತ್ತು ಕೋಳಿಗಳನ್ನು ತಿನ್ನಬಹುದಾಗಿತ್ತಾದರೂ ಗ್ರಾಮ ಸೂಕರ ಮತ್ತು ಕುಕ್ಕುಟಗಳು ನಿಷಿದ್ಧವಾಗಿದ್ದವು. ಗುಡೋದಕ, ಮಥಿತಗಳನ್ನು ಒಳಗೊಂಡು ಸುರೆಯವರೆಗೂ ಪಾನೀಯಗಳ ಉಲ್ಲೇಖವು ಮಹಾಭಾಷ್ಯದಲ್ಲಿ ದೊರಕುತ್ತದೆ, ಸುರೆಯ ವರ್ಗದಲ್ಲಿ ಸುರೆ, ಅಕ್ಕಿಯಿಂದ ಸಿದ್ಧಿಗೊಳಿಸುತ್ತಿದ್ದ 'ಪ್ರಸನ್ನಾ' (ಬಹುತೈಲಮ್ ಪ್ರಸನ್ನಾ) ಶುಂಡಾ, ಆಸುಟಗಳಿವೆ, ಇವನ್ನು ಈರುಳ್ಳಿಯ ಜೊತೆಗೆ ಸೇವಿಸುತ್ತಿದ್ದಂತೆ ಕಾಣುತ್ತದೆ. ( ಅಯಮ್ ಪಲಾಂಡುನಾ ಸುರಾಮ್ ಪಿಬೇತ್) ಬ್ರಾಹ್ಮಣ ಸ್ತ್ರೀಯು ಸುರೆಯನ್ನು ಸೇವಿಸುವಂತಿರಲಿಲ್ಲ. ಹೀಗೆ ಸುರೆಯನ್ನು ಸೇವಿಸಿದ ಸ್ತ್ರೀಗೆ ಪ್ರಾಯಶ್ಚಿತ್ತವಿದ್ದಿತು. ಮತ್ತು ಅವಳಿಗೆ ಮುಂದಿನ ಜಗತ್ತಿನಲ್ಲಿ ತನ್ನ ಪತಿಯ ಸಂಗವು ದೊರಕುತ್ತಿರಲಿಲ್ಲ. (ಯಾ ಬ್ರಾಹ್ಮಣೀ ಸುರಾಪಿ ಭವತಿ ನ ಏನಾಮ್ ದೇವಾಃ ಪತಿಲೋಕೇ ನಯನ್ತಿ ).

ಅತಿಥಿಗಳು ಊಟಮಾಡುವಾಗ ಬಡಿಸುವವರು ತಿನ್ನುವಂತಿರಲಿಲ್ಲ. ಔತಣಕ್ಕೆ ಕರೆಯುವದರಲ್ಲಿಯೂ ಎರಡು ಪ್ರಕಾರಗಳಿದ್ದುವು. ಒಂದಕ್ಕೆ ನಿಮಂತ್ರಣವೆಂದೂ ಮತ್ತೊಂದಕ್ಕೆ ಆಮಂತ್ರಣವೆಂದೂ ಕರೆಯುತ್ತಿದ್ದರು. ದೇವತೆಗಳಿಗೆ ಕೊಡುವ ನೈವೇದ್ಯದ ಹವ್ಯಕ್ಕಾಗಿಯೂ ಪಿತೃಗಳಿಗೆ ಕೊಡುವ ಕವ್ಯಕ್ಕಾಗಿಯೂ ಔತಣವೀಯುವುದಕ್ಕೆ ನಿಮಂತ್ರಣವೆಂದೂ ಕೇವಲ ಸ್ನೇಹಕ್ಕಾಗಿ ಆಮಂತ್ರಿಸುವುದಕ್ಕೆ ಆಮಂತ್ರಣವೆಂದೂ ಕರೆಯುತ್ತಿದ್ದರು. ಆಮಂತ್ರಣವನ್ನು ತಪ್ಪಿಸಬಹುದಾಗಿದ್ದರೂ ನಿಮಂತ್ರಣವನ್ನು ತಪ್ಪಿಸುವಂತಿರಲಿಲ್ಲ. ಅದರಿಂದ ಪಾಪ ಬರುತ್ತಿತ್ತೆಂದು ಕಲ್ಪನೆ. (ಬ್ರಾಹ್ಮಣೇನ ಸಿದ್ಧಮ್ ಭುಜ್ಯಂತಾಮ್ ಇತಿ ಉಕ್ತೇ ಧರ್ಮಃ ಪ್ರತ್ಯಾಖ್ಯಾತು: ).

### ಸಮಾಜದ ಕರಿಯ ಚಿತ್ರ

ಸಮಾಜದ ಕರಿಯ ಚಿತ್ರದ ಸೂಚನೆಗಳೂ ಅಲ್ಲಲ್ಲಿ ಇಲ್ಲದೆ ಇಲ್ಲ. ಮದುವೆಯು ಪವಿತ್ರವೆಂದೆನಿಸಿದ್ದರೂ ಕೇವಲ ಮಧುಕರ ಪ್ರಣಯಿಗಳು ಇರದೆ ಇರಲಿಲ್ಲ. ( ನಟಾನಾಮ್ ಸ್ತ್ರಿಯಃ ರಂಗಂ ಗತಾಃ ಯೋ ಯಃ ಪೃಚ್ಛತಿ ಕಸ್ಯ ಯೂಯಮ್ ಕಸ್ಯ ಯೂಯಂ ಇತಿ ತವ್ ತವ್ ತನ ತವ ಇತಿ ಅಹುಃ) ಸ್ವಲ್ಪೇ ಪ್ರಯತ್ನದಿಂದ ಅಧಿಕ ಲಾಭವನ್ನು ಪಡೆಯಬೇಕೆಂಬ ಜನರೂ ಇದ್ದರು. (ಇಹ ಹಿ ಸರ್ವೇ ಮನುಷ್ಯಾಃ ಅಲ್ಪೇನ ಯತ್ನೇನ ಮಹತೋ ಅರ್ಥಾನ್ ಆಕಾಂಕ್ಷಂತಿ) ಹಣದ ಸಲುವಾಗಿ ಭಿಕ್ಷೆಬೇಡುವವರೂ ಸ್ತ್ರೀಯರ ಸಲುವಾಗಿ ಪರಿಶ್ರಮಿಸುವವರೂ ಹೆಚ್ಚು ಹೆಚ್ಚು ಹಣದ ಸಲುವಾಗಿ ಕಾಡುವ ಭಿಕ್ಷುಕರೂ ಇರದಿರಲಿಲ್ಲ. ಧನಾರ್ಥಮ್ ಭಿಕ್ಷಾಮಹೇ; ದಾರಾರ್ಥಮ್ ಪ-ಚಾಮಹೇ; ಭಿಕ್ಷುಕೋಯಮ್ ದ್ವಿತೀಯಮ್ ಭಿಕ್ಷಾಮ್ ಅಸಾಧ್ಯ ಪೂರ್ವಾಮ್ ನ ಜಹಾತಿ ಸಂಚಯಾಯ ಪ್ರವರ್ತತೇ) ಮಹಾಭಾಷ್ಯದಲ್ಲಿ ಸ್ತ್ರೀಶರರು, ಕುಮಾರಘಾತಿಗಳು, ಭ್ರೂಣಹತ್ಯಾಕಾರರು, ಇವರೇ ಮೊದಲಾದ ಪಾಪಿಷ್ಠಹೃದಯಗಳ ಉಲ್ಲೇಖವೂ ಬಾರದಿಲ್ಲ.

ಇದೂ ಅಲ್ಲದೆ, ಸಾಮಾಜಿಕವಾಗಿ ಹಲವಾರು ಶಿಷ್ಟಾಚಾರಗಳೂ ಪರಂಪರೆಗಳೂ ಬೆಳೆದುಬಂದಿದ್ದುವು ಪುರುಷರು ಪುರುಷರನ್ನು ಅಭಿವಂದಿಸುವಾಗ ಮೊದಲುತಮ್ಮ ಹೆಸರನ್ನು ಹೇಳಬೇಕಾಗುತ್ತಿದ್ದಿತು. "ದೇವದತ್ತೋಹಂ ಅಭಿವಾದಯೇ" ಇತ್ಯಾದಿ. ಅದೇ ಸ್ತ್ರೀಯರನ್ನು ಅಭಿವಂದಿಸುವಾಗ ಹೆಸರನ್ನುಮೊದಲು ಹೇಳದೆ ಅನಂತರ ಹೇಳಬಹುದಾಗಿದ್ದಿತು. "ಅಯಮ್ ಅಹಮ್ ದೇವದತ್ತೋ ಅಭಿವಾದಯೇ" ಇತ್ಯಾದಿ. ಈ ಸೂಕ್ಷ್ಮತೆಯನ್ನು ಎಲ್ಲ ವಿಪ್ರರೂ ತಿಳಿದುಕೊಳ್ಳಬೇಕಾಗಿದ್ದಿತು. ಈ ಸೂಕ್ಷ್ಮತೆಯನ್ನು ಅರಿಯದ ವಿಪ್ರರು ಅಭಿವಂದನೆಗೆ ಅನರ್ಹನೆಂದು ಮನುವಿನಮತ.

ಯೋನ ವೇತ್ತಿ ಅಭಿವಾದಸ್ಯ ವಿಪ್ರಃ
ಪ್ರತ್ಯಭಿವಾದನಮ್
ನ ಅಭಿವಾದ್ಯಃ ಸಃ ವಿದುಷಾ ಯಥಾಶೂದ್ರಃ
ತಥೈವ ಸಃ॥

ಅಂತಲೇ, "ಅಭಿವಾದೋ ಸ್ತ್ರೀವನ್ ಮಾಭೂಮ ಇತಿ ಅಧ್ಯೇಯಂ ವ್ಯಾಕರಣಮ್"- ಎಂದು ಪತಂಜಲಿಗಳು ಹೇಳುತ್ತಾರೆ. ಉದುರಿಬಿದ್ದ ಕೂದಲು ಇಲ್ಲವೆ ಉಗುರುಗಳನ್ನು ಮುಟ್ಟಿದರೆ ಕೈಯನ್ನು ತೊಳೆದುಕೊಳ್ಳಬೇಕಾಗುತ್ತಿದ್ದಿತು. ( ಲೋಮ ನಖಮ್ ಸ್ಪೃಷ್ಟ್ವಾ ಶೌಚಮ್ ಕರ್ತವ್ಯಮ್ ಇತಿ ) ಈ ಚಿಕ್ಕ ವಿವರಗಳು ಕುತೂಹಲಪೂರ್ಣವಾಗಿವೆ.

### ಆರ್ಥಿಕ ವ್ಯವಸ್ಥೆ

ಮಹಾಭಾಷ್ಯದಲ್ಲಿ ಕಂಡು ಬರುವ ಆರ್ಥಿಕ ವ್ಯವಸ್ಥೆಯಲ್ಲಿ ಈ ಕೆಳಗಿನ ವೃತ್ತಿಗಳ ಉಲ್ಲೇಖವಿದೆ. ಕುಲಾಲ (ಕುಂಬಾರ) ; ಕರ್ಮಾರ; ಅಯಸ್ಕಾರ; ಲೋಹಕಾರ (ಕಂಬಾರ); ವರ್ಧಕಿ(ಬಡಗಿ); ನಾಪಿತ; ರಜಕ (ರಂಜಯತಿ ವಸ್ತ್ರಾಣಿ) ; ಸುವರ್ಣಕಾರ; (ರಜತಕಾರ: ತಾಮ್ರಕುಷ್ಪರು ಮಾತ್ರವಿಲ್ಲ) ಕೂಪಖಾನಕ (ಬಾವಿ ಅಗಿಯುವವರು) ; ಕಿಂಕರ; ಭಾರವಹ ; ದ್ವಾರಪಾಲ ; ಛತ್ರಧಾರ ; ಘಟಗ್ರಹ.

ಅಡುಗೆಯವ್ಯವಸಾಯವೂ ಪರಿಪೂರ್ಣವಿದ್ದಂತೆ ಕಾಣುತ್ತದೆ. ಭ್ರಾಜನೆಂದರೆ ಜವೆಗೋದಿಯನ್ನು ಹುರಿದು ಮಾರುವವ; ಮಾಥಿತಿಕನು ಮಥಿತವನ್ನು ಮಾರುತ್ತಿದ್ದನು. (ಮಥಿತಮ್ ಪಣ್ಯಮ್ ಅಸ್ಯ ಮಾಥಿತಿಕ) ; ಶಷ್ಕುಲಿ, ಅಪೂಪಗಳನ್ನು ಮಾಡುವವನು ಆಪೂಪಿಕ. ಇದರಂತೆಯೇ ಮೋದಕಕಾರಕ, ದಧಿಕರು ( ಮೊಸರನ್ನು ಮಾರುವವರು ) ಅಡುಗೆಯವರು ಸಿದ್ಧಮಾಡಬಲ್ಲ ಅಡುಗೆಯ

ಅಳತೆಯ ಮೇ ಅವರಿಗೆ ಬೇರೆ ಬೇರೆ ಹೆಸರುಗಳೂ ಇದ್ದಂತೆ ಕಾಣುತ್ತದೆ. ಆಢಕ, ಆಚಿತ್ರಪಾತ್ರ ಮೊದಲಾದವು ಈ ಅಡುಗೆಯವರು ಸಿದ್ಧ ಮಾಡಬಲ್ಲ ಅಡುಗೆಯ ಅಳತೆಗಾಗಿದ್ದುವು. 'ದ್ರೋಣದ'ಷ್ಟು ಅಡುಗೆ ಮಾಡಬಲ್ಲ ಹೆಣ್ಣುಮಗಳಿಗೆ "ದ್ರೌಣಿ" ಇಲ್ಲವೆ "ದ್ರೌಣಿಕ್ಕಿ" ಎಂದು ಕರೆಯುತ್ತಿದ್ದರೆಂದು ಕಾತ್ಯಾಯನನು ಹೇಳುತ್ತಾನೆ. ಆಢಕದ ಮೇಲಿಂದ ಎರಡು ಆಢಕ ಸಿದ್ಧ ಮಾಡುವವರು ಧ್ಯಾಢಕೀ.

## ಕನ್ನಡ ವ್ಯಾಕರಣ ಗ್ರಂಥಗಳು

ಸಂಸ್ಕೃತ ವ್ಯಾಕರಣ ಗ್ರಂಥಗಳಿಂದ ನಾವು ಕನ್ನಡ ವ್ಯಾಕರಣ ಗ್ರಂಥಗಳಿಗೆ ಬರುವಷ್ಟರಲ್ಲಿಯೇ ಸಮಾಜವು ಒಂದು ನಿಶ್ಚಿತವಾದ ನಿಲುಗಡೆಗೆ ಬಂದಿದ್ದಿತು. ಐತಿಹಾಸಿಕ ಕಾಲ ಪ್ರಾರಂಭವಾಗಿದ್ದಿತು. ಕಾವ್ಯ ಮತ್ತು ಶಾಸನಗಳು ಕೂಡ ಸಮಾಜದ ಮೇಲೆ ತುಂಬಾ ವಿಪುಲವಾದ ಬೆಳಕನ್ನು ಕೆಡಹುವಂತಾಗಿದ್ದವು ಆದ್ದರಿಂದ ವಿವರಪೂರ್ಣವಾಗಿಯಲ್ಲವಾದರೂ ಸ್ಥೂಲವಾಗಿ ನಮ್ಮ ಕನ್ನಡ ವ್ಯಾಕರಣ ಗ್ರಂಥಗಳಲ್ಲಿ ಕಂಡುಬರುವ ಈ ಅಂಶಗಳಾವುವು.

ಇಂದಿನ ಕರ್ನಾಟಕಕ್ಕೆ ಗೋದಾವರಿ ಬಹು ದೂರದ ಹಾದಿ. ನರ್ಮದೆಯಂತೂ ಕಲ್ಪನೆಗೆ ಮೀರಿದ್ದು. ಕೇರಳ, ತೆಲುಂಗ ದೇಶಗಳು ಸಮೀಪದುವಲ್ಲ. ಆದರೆ ಕವಿರಾಜಮಾರ್ಗಕಾರನಂತೂ ಗೋದಾವರಿ ಉತ್ತರದಿಶೆಯೆಂದು ಹೇಳಿದ್ದಾನೆ. ಕೇಶಿರಾಜನು ತದ್ಧಿತ ಪ್ರಕರಣದಲ್ಲಿ ತೆಲುಂಗಿತ್ತಿ ಮೇರಡಗಿತಿಗಳನ್ನು ಉಲ್ಲೇಖಿಸುತ್ತಾನೆ. ಕರಹಡದೇಶ ಈಗ ದೂರವಾದರೂ "ಕರಹಡಿಚ"ದ ಉಲ್ಲೇಖವಿದೆ.

## ವೃತ್ತಿಗಳು

'ಶಬ್ದಮಣಿದರ್ಪಣ'ದಲ್ಲಿ ಈ ಕೆಳಗಿನ ವೃತ್ತಿಗಳ ಉಲ್ಲೇಖವಿದೆ— ಸಿಂಗರಿಗ, ತೋಂಟಿಗ, ಸರವಂದಿಗ, ಗಂದಿಗ, ದೂಸಿಗ, ತಂಬುಲಿಗ, ಬಾಣಸಿಗ, ಮಾಂದುರಿಗ, ಜ್ಯೋಯಿಸಿಗ, ಅಡಪಿಗ, ಒಕ್ಕಲಿಗ, ಚಾಮರಿಗ, ಮಾಳಿಗ, ದೇಗುಲಿಗ, ಛಾಂದಸಿಗ, ಚಿಪ್ಪಿಗ, ಮಾಸವಳ, ಬೆಳ್ಳ, ಮಡಿವಳ, ಪಡೆವಣ, ಸೆಜ್ಜೆವಳ, ಅಡುವಳ, ಯಳಂಬಾಯ್ತ, ಓಜಾಯ್ತ, ಕಲ್ಲಾಯ್ತ, ಅಚ್ಚುಳಾಯ್ತ, ಕಡುಂಗಾಯ್ತ, ಕೊಲ್ಲಟಿಗ, ನಾವಟಿಗ, ದೀವಟಿಗ, ಕುಂಡವಡಿಗ, ಪುಲ್ಲವಡಿಗ, ಕಂಚಾರ, ಕುಂಬಾರ, ಕಂಚಗಾರ, ಒರೆಗಾರ, ಮಣಿಗಾರ, ಗೆಜ್ಜೆಗಾರ, ಕಲ್ಕುಟಿಗ, ನೀರ್ಕುಟಿಗ, ಮರಕುಟಿಗ, ಕಙುಕುಟಿಗ, ಕಟ್ಟಿಕುಟಿಗ, ಮರ್ದ್ದಳಿಗ, ಅವುಜಿಗ, ಕನ್ನಡಿಗ, ಲೋಪಾಳಿಗ, ಬೇಟೆಕಾರ, ನಾವಿದ, ಜೆಟ್ಟಿ, ತೋಡು ಇತ್ಯಾದಿಗಳು ಆ ಕಾಲದ ಸಮಾಜದಲ್ಲಿಯ ಭಿನ್ನ ಭಿನ್ನವಾದ ಬೇಡಿಕೆಗಳನ್ನು ತೋರಿಸುತ್ತವೆ.

ಲಂಚವಣಿಗ, ಸಾಲವಣಿಗ, ಕೊಟ್ಟಣಿಗರಿದ್ದಂತೆಯೇ ಜೋಡೆಯರು, ಪಾಣ್ಕೆಯರೂ ಹಾದರಗಿತ್ತಿಯರೂ ಕಂಡುಬರುತ್ತಾರೆ.

## ರೋಗಗಳು

ಈ ಕೆಳಗಿನ ಆಪತ್ತುಗಳಿಗೆ ಶಬ್ದಮಣಿ ದರ್ಪಣದಲ್ಲಿ ಅನುಪಾನವನ್ನು ಹೇಳಿದೆ. ಹಾವು ಕಡಿದಲ್ಲಿ—

ಉರಗಂ ಕೊಂಡಲ್ಲಿಂ ನಾ-
ಲ್ವೆರಲನಿತಂ ಕಳೆದು ಕಟ್ಟಿ ಮೇಗಂ ಬೇಗಂ ।
ಸೆರೆವಿಡುಗೆ ಸುಡುಗೆ ಕಡಿದಿರ-
ದರಿದಿಕ್ಕುಗೆ ನೀವಿ ಕಳೆಗೆ ನಿರ್ವಿಷಮಕ್ಕುಂ॥

ಏಟಿಯೊರೆಯೆನಿಪ್ಪ ಕುರುವಿಗೆ—

ಪರಿಮರ್ದಿಸುವುದು ದುತ್ತೂ-
ರರಸಮನಿಂಬಾಗಿ ಪಿರಿಲು ನೆಲದೊಳ್ ಲವಣಂ।
ಬೆರಸೊರಸಿಕೊಂಡು ಪೂಸುಗೆ
ಕರಗುಗುಮ್ ಏಟ್ಯೊರೆಯೆನಿಪ್ಪ ಕುರುವುಂ ಬೇಗಂ॥

ಅಂದಿನ ಹೆಸರುಗಳಲ್ಲಿ ಮಾಣವಕ, ಕಾಟ, ಕಸವ, ಮಾಚ, ಮಾರ ಮೊದಲಾದವುಗಳನ್ನು ಕಾಣುತ್ತೇವೆ.

ಆಭರಣಗಳಲ್ಲಿ ಸರ, ಮಾಲೆ, ತೋಳ ಮಣಿಗೊಪ್ಪುಗಳ ಉಲ್ಲೇಖ ಬರುತ್ತದೆ.

ಬೆಳೆಗಳಲ್ಲಿ ನೆಲ್ಲು, ಕೌಂಗು, ಮಾವು, ಕಬ್ಬು ಮೊದಲಾದವುಗಳ ಉಲ್ಲೇಖವಿದೆ.

ಟೊಪ್ಪಿಗೆ ಶಬ್ದ ಇತ್ತೀಚಿನದಿದ್ದ ಹಾಗೆ ಕಾಣುತ್ತದೆ. ಆದರೆ, ಅದರ ಉಲ್ಲೇಖ ೧೩ನೆಯ ಶತಮಾನದ ಶಬ್ದಮಣಿದರ್ಪಣದಲ್ಲಿಯೇ ದೊರಕುತ್ತದೆ. ಗುರುತನ್ನು ಹೇಳುವಾಗ ತೊತ್ತುಳದ ರಾವುತಂ ಟೊಪ್ಪಿಗೆಯ ಮಾನಿಸಂ ಎಂದು ದೃಷ್ಟಾಂತ ಹೇಳುತ್ತಾನೆ.

ಇದೇ ಸಂದರ್ಭದಲ್ಲಿಯೇ ಕೇಶಿರಾಜನು ಹೇಳಿದ ಎರಡು ಪ್ರಾಣಿಗಳ ಬಗ್ಗೆಯೂ ಒಂದೆರಡು ಮಾತನ್ನು ನೋಡಬೇಕು.

ಲಕ್ಷಣವನ್ನು ಹೇಳುವಾಗ ಈ ದೃಷ್ಟಾಂತವು ಬರುತ್ತದೆ. ಕೇಶಿರಾಜನ ಕಾಲಕ್ಕೆ ಸಿಂಧೂ ದೇಶದ ಕುದುರೆ ಪ್ರಸಿದ್ಧಿಯನ್ನು ಹೊಂದಿ ಎಲ್ಲರಿಗೂ ಅರ್ಥವಾಗುವಂತಿರಬೇಕು. ಸಿಂಧು ದೇಶದಿಂದ ಕರ್ನಾಟಕಕ್ಕೆ ಬಂದುವು ಸೈಂಧವ ಮತ್ತು ಕುದುರೆ ಎಂದು ಕಾಣುತ್ತದೆ. ಕುದುರೆ ಪ್ರಾಗ್ ಐತಿಹಾಸಿಕ ಕಾಲದಲ್ಲಿ ಸಿಂಧು ದೇಶದ ಆಚೆಯಿಂದ ಭಾರತಕ್ಕೆ ಬರುತ್ತಿದ್ದವು. ಐತಿಹಾಸಿಕ ಕಾಲದಿಂದ ಸಿಂಧು ದೇಶದಲ್ಲಿ ಪ್ರಸಿದ್ಧವಾಗಿದ್ದಂತೆ ಕಾಣುತ್ತದೆ. ಪಾಣಿನಿಯಲ್ಲಿ ತೈತಿಲ ಕುದುರೆಗಳ ಬಗೆಗೂ ಪಾರೆ-ವಡವಗಳಬಗೆಗೂ ಉಲ್ಲೇಖವಿದೆ. ಪಾರೆವಡವಗಳು ಸಿಂಧು ತೀರದ ಆಚೆಯಿಂದ ಪಾಮಿರದ ಆಚೆಯ ಮಧ್ಯಏಶಿಯಾ ಭಾಗದಿಂದ ಬಂದುವು. ಸಾಲ್ವ ದೇಶದ ಹೋರಿ ಮತ್ತು ಪದಾತಿಗಳು ಪ್ರಸಿದ್ಧವಿದ್ದಂತೆ ಸಿಂಧುದೇಶದ ಕುದುರೆಯೂ ಪ್ರಸಿದ್ಧ. ಈ ಕುದುರೆಗಳಿಗೆ ಲೋಹದ ತಡಿಯನ್ನು ಹಾಕುತ್ತಿದ್ದರು. "ಲೋಹ ವಕ್ಕರೆಯ ಜಾತ್ಯಶ್ವಂಗಳ್ ಇರ್ಪ್ಪಸಿರಂ."

ಕುದುರೆಯ ಜೊತೆಗೇ ಕತ್ತೆ. ಕತ್ತೆ ಅಪಮಾನದ ಸಂಕೇತವಾಗಿದ್ದರೂ ಅದರ ಕವಿಯ ಮೇಲೂ ಒಂದು ಕಾಲಕ್ಕೆ ಆನಂದದ ಗೀತಗಳು ಬಿದ್ದಿವೆ. ಹಿಂದಿನ ಕಾಲಕ್ಕೆ ಕಲ್ಲು, ಮರಗಳಲ್ಲಿ ವ್ಯವಹಾರ ಮಾಡುತ್ತಿದ್ದಂತೆ ಕತ್ತೆಯ ವ್ಯಾಪಾರವನ್ನು ಮಾಡುವವರೂ ಇದ್ದರು. ಶಬ್ದಮಣಿದರ್ಪಣದಲ್ಲಿ ಇವರನ್ನು "ಕಟ್ಟಿಕುಟಿಗ"ರೆಂದು ಕರೆಯಲಾಗಿದೆ. ಇದರ ಜೊತೆಗೆ ಕೇಶಿರಾಜನಲ್ಲಿ ಇನ್ನೊಂದು ಪ್ರಯೋಗವಿದೆ. "ಕಟ್ಟಿಯಿಂದುಳ್ತಂ" ಇದರ ಅರ್ಥವೇನು? ಕತ್ತೆಯನ್ನು ರಥಕ್ಕೆ ಹೂಡಿದ ಉಲ್ಲೇಖವು ಮಹಾಭಾಷ್ಯದಲ್ಲಿ ಬರುತ್ತದೆ. ಆಗ, ರಥಗಳಿಗೆ ಒಂಟೆ, ಕುದುರೆ ಮತ್ತು ಕತ್ತೆಗಳನ್ನು ಹೂಡುತ್ತಿದ್ದರು. ಅನುಕ್ರಮವಾಗಿ ಇವಕ್ಕೆ ಔಷ್ಟ್ರರಥ, ಅಶ್ವರಥ ಮತ್ತು ಗಾರ್ದಭರಥವೆಂದು ಕರೆಯುತ್ತಿದ್ದರು. ಭೂಮಿಯನ್ನು ಬಿತ್ತುವಲ್ಲಿ ಎತ್ತಿನ ಉಪಯೋಗವನ್ನು ಮಾಡಿದ ಬಗ್ಗೆಯೂ ಪತಂಜಲಿಯಲ್ಲಿ ಉಲ್ಲೇಖವಿದೆ. (ಗೋತರೋಯಮ್ ಯಃ ಶಕಟಮ್ ವಹತಿ ಶೀರಮ್ ಚ)* ಆದರೆ ಉಳುವುದರ ಸಲುವಾಗಿ ಕತ್ತೆಯ ಉಪಯೋಗವನ್ನು ಮಾಡಿದ ಉದಾಹರಣೆ ಸಾಹಿತ್ಯದಲ್ಲಿ ದೊರಕುವಂತೆ ಕಾಣಲಿಲ್ಲ. ಇದೇನು 'ಅಸಂಭವನೀಯ' 'ಮೂರ್ಖತನ' ಎಂಬರ್ಥದ ಪಡೆನುಡಿಯೇ ಇಲ್ಲವೆ ವಾಸ್ತವವಾಗಿ ಉಪಯುಕ್ತವಾದುದೇ ಎಂಬುದು ನಿಷ್ಕರ್ಷಿತವಾಗಬೇಕು.

ಒಟ್ಟಾರೆ, ತತ್ಕಾಲೀನ ದಾಖಲೆಗಳಂತೂ ಆ ಅಕಾಲದ ಸಮಾಜ ಜೀವನವನ್ನು ವಿವರಿಸಿಯೇ ವಿವರಿಸುತ್ತವೆ. ಅದರ ಜೊತೆಗೇ ಆ-ಅಕಾಲದ ಸಾಹಿತ್ಯ ಮತ್ತು ಶಾಸ್ತ್ರಗ್ರಂಥಗಳು ಕೂಡ ತೀರ ವಿವರಪೂರ್ಣವಾಗಿ ಅಲ್ಲದಿದ್ದರೂ ತುಂಬಾ ಉಪಯುಕ್ತವಾದ ಜ್ಞಾನವನ್ನು ಅಂದಿನ ಸಮಾಜದ ಬಗ್ಗೆ ಕೊಡುತ್ತವೆಯೆಂಬುದನ್ನು ಮೇಲಿನ ವಿವರಣೆಯಿಂದ ನಾವು ಕಂಡುಕೊಳ್ಳಬಹುದು. ಕನ್ನಡ ವ್ಯಾಕರಣ ಗ್ರಂಥಗಳು ಪೂರೈಸುತ್ತಿರುವ ಈ ವಿವರಗಳ ಬಗ್ಗೆ ಹೆಚ್ಚಿನ ಬೆಳಕು ತತ್ಕಾಲೀನ ಸಾಹಿತ್ಯ ಮತ್ತು ಶಾಸನಗಳ ಅಭ್ಯಾಸದಿಂದಲೂ ಇಂದು ದೊರಕಬೇಕಾಗಿದೆ. —

## ಸಂದರ್ಭ ಗ್ರಂಥಗಳು

India as Known to Panini
V. S. Agrawala 1953.
India in the time of Patan ali —
B. N. Puri 1957.
ಮಹಾಭಾಷ್ಯ— ಸಂಪುಟಗಳು. ಶಬ್ದಮಣಿ ದರ್ಪಣ—

*India in the time o patanjali ಪು. ೧೨೧.

# ಭಾರತೀಯ ಸಾಹಿತ್ಯದ ಸಾಮಾನ್ಯ ಸ್ವರೂಪ

ಲೇಖಕರು :
ಡಾ. ರಂ. ಶ್ರೀ. ಮುಗಳಿ
ವಿಲಿಂಗ್ಡನ್ ಕಾಲೇಜ, ಸಾಂಗಲಿ.

ವೈವಿಧ್ಯಸಂಪನ್ನವಾಗಿರುವ ಭಾರತೀಯ ಸಾಹಿತ್ಯದಲ್ಲಿ ಸಂಸ್ಕೃತಿಯ ಮೂಲತತ್ತ್ವವೂ ಎದ್ದು ಕಾಣುತ್ತದೆ. ಪ್ರಾಚೀನ ಭಾರತೀಯ ಸಾಹಿತ್ಯದ ಮೇಲೆ ಸಂಸ್ಕೃತ ಭಾಷೆ ಹಾಗೂ ವಾಙ್ಮಯಗಳ ಪರಿಣಾಮವು ಬಹುಮಟ್ಟಿಗೆ ಆಗಿರುವದಾದರೂ ಸಮಾನಪ್ರೇರಣೆಯೆಂದು ಅದನ್ನು ಹೇಳಲಾಗದು. ಆದರೆ ಮೂರು ಮಹಾಗ್ರಂಥಗಳು ಎಲ್ಲ ಭಾಷಾಸಾಹಿತ್ಯಗಳಲ್ಲಿಯ ಪ್ರಾಸಾದಿಕ ಕಾವ್ಯಗಳಿಗೆ ಸ್ಫೂರ್ತಿಯುತವಾಗಿರುವವು. ಭಾರತೀಯ ಸಾಹಿತ್ಯದ ಸ್ಥೂಲರೂಪದನ್ನು ಈ ಲೇಖ ವಿವರಿಸುತ್ತದೆ.

ಭಾರತೀಯ ಸಾಹಿತ್ಯವು ಭಾರತೀಯ ಸಂಸ್ಕೃತಿಯಷ್ಟೇ ವೈವಿಧ್ಯಸಂಪನ್ನವೂ ಸಮೃದ್ಧವೂ ಆಗಿದೆ. ಭಾರತೀಯ ಸಂಸ್ಕೃತಿಯೆಂದರೇನು, ಅದು ಒಂದೇ ಇರುವುದೇ, ಇದ್ದರೆ ಅದರ ಸಾಮಾನ್ಯ-ಸ್ವರೂಪವೇನು ಎಂಬ ಪ್ರಶ್ನೆಗಳಿಗೆ ಉತ್ತರವು ಸುಲಭವಿಲ್ಲ. ಹಾಗೆಯೆ ಭಾರತೀಯ ಸಾಹಿತ್ಯ ಎಂಬುದು ವ್ಯಾಖ್ಯೆಯ ಹಿಡಿತದಲ್ಲಿ ಸುಲಭವಾಗಿ ಸಿಗಲಾರದು. ಭಾರತದಲ್ಲಿ ನೂರಾರು ಭಾಷೆಗಳಿವೆ, ಅವುಗಳಲ್ಲಿ ಹದಿನಾಲ್ಕು ಭಾಷೆಗಳು ಪ್ರಮುಖವೆಂದು ಪರಿಗಣಿಸಲಾಗಿವೆ. ಈ ಹದಿನಾಲ್ಕು ಭಾಷೆಗಳಲ್ಲಿಯೂ ಬೇರೆ ಬೇರೆ ಸಾಹಿತ್ಯವಿದೆ. ಈ ಎಲ್ಲ ಸಾಹಿತ್ಯಕ್ಕೆ ನಾವು ಸ್ಥೂಲವಾಗಿ ಭಾರತೀಯ ಸಾಹಿತ್ಯ ಎಂದು ಕರೆಯುತ್ತೇವೆ. ಇದಕ್ಕೆ ಸಾಮಾನ್ಯ ಸ್ವರೂಪವೇನಾದರೂ ಇರುವುದೇ? ಆದರಿಂದ ಇದರ ಏಕತೆಯನ್ನು ಗುರುತಿಸಬಹುದೇ ? ಎಂಬ ಪ್ರಶ್ನೆಗೆ ಕೆಲಮಟ್ಟಿಗೆ ಉತ್ತರವನ್ನುಪಡೆಯುವುದಕ್ಕೆಂದು ಈ ಲೇಖನದಲ್ಲಿ ಪ್ರಯತ್ನಮಾಡಿದೆ. ಇಂದು ಯಾವ ಒಬ್ಬವ್ಯಕ್ತಿ ನಾಲ್ಕೈದು ಭಾರತೀಯ ಭಾಷೆಗಳ ಸಾಹಿತ್ಯವನ್ನು ಸಹ ಅಭ್ಯಾಸಮಾಡಿ ಅಧಿಕಾರವಾಣಿಯಿಂದ ಹೇಳಲಾರ. ಹದಿನಾಲ್ಕು ಭಾಷೆಗಳ ಸಾಹಿತ್ಯವನ್ನು ಕುರಿತು ಹೇಳುವುದಂತೂ ದೂರದ ಮಾತು. ಆದರೆ ಪಿ. ಇ. ಎನ್. ಸಾಹಿತ್ಯ ಅಕಾಡಮಿಯಂಥ ಸಂಸ್ಥೆಗಳಿಂದ ಪ್ರಕಟವಾದ ಪುಸ್ತಕಗಳಿಂದ ಭಾರತೀಯ ಸಾಹಿತ್ಯದ ರೂಪರೇಷೆ ತಿಳಿಯುವುದು ಸಾಧ್ಯವಾಗಿದೆ. ಜೋಸೆಫ್ ಟಿ. ಶಿಪ್ಲೆ ಎಂಬವರ ಸಂಪಾದನೆಯಲ್ಲಿ ಅಮೇರಿಕೆಯಲ್ಲಿ ಪ್ರಸಿದ್ಧವಾದ Eyclopedia of Literature ( ಸಾಹಿತ್ಯದ ವಿಶ್ವಕೋಶ ) ಎಂಬ ಗ್ರಂಥದಲ್ಲಿ ಭಾರತೀಯ ಲೇಖಕರೇ ಬರೆದ ಪ್ರತಿಯೊಂದು ಪ್ರಮುಖ ಭಾಷೆಯ ಸಾಹಿತ್ಯದ ಸಂಕ್ಷಿಪ್ತ ಪರಿಚಯವು ಬಂದಿದೆ. ಇದೆಲ್ಲದರ ಆಧಾರದಿಂದ ಮತ್ತು ನನ್ನ ಸ್ವಂತ ಅಭ್ಯಾಸದಿಂದ ಈ ಲೇಖನವನ್ನು ಬರೆಯಲಾಗಿದೆ.

## ಏಕತೆ ಮತ್ತು ಐಕ್ಯ

ಭಾರತೀಯ ಸಾಹಿತ್ಯದ ಬಹುಭಾಗಕ್ಕೆ ಒಂದು ಸಾಮಾನ್ಯಸ್ವರೂಪವಿದೆ, ಆದರೆ ಅದು ಪ್ರತಿಯೊಂದು ಭಾಷೆಯ ಸಾಹಿತ್ಯ ವೈಶಿಷ್ಟ್ಯವನ್ನು ಅಲ್ಲಗಳೆಯದಂಥ ಸಾಮಾನ್ಯಸ್ವರೂಪವಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಭಾರತೀಯ ಸಾಹಿತ್ಯದ ಏಕತೆ ಅಂದರೆ ಏಕರೂಪತೆ ಅಲ್ಲ; ಏಕಾತ್ಮತೆ; ವೈವಿಧ್ಯದಲ್ಲಿ ಕಂಡುಬರುವ ಐಕ್ಯ. ಭಾರತೀಯ ಸಂಸ್ಕೃತಿ ಮೂಲತತ್ತ್ವವು ಭಾರತೀಯ ಸಾಹಿತ್ಯದಲ್ಲಿಯೂ ಎದ್ದು ಕಾಣುತ್ತದೆ. ಒಂದೇ ಭಾಷೆಯಲ್ಲಿ ಸಹ ಯಾವೊಂದು ವಿಷಯವನ್ನು ಕುರಿತು ಇಬ್ಬರು ಲೇಖಕರು ಕಲಾಕೃತಿಯನ್ನು ನಿರ್ಮಾಣಮಾಡಿದರೆ ಅವೆರಡರಲ್ಲಿ ಸಮಾನ ಪ್ರೇರಣೆ, ಸಮಾನ ವಿಷಯವಿರುತ್ತದೆ. ಆದರೆ ಆಯಾ ಲೇಖಕರ ವ್ಯಕ್ತಿತ್ವದ ಪ್ರಕಾರ ಭೇದವುಂಟಾಗುತ್ತದೆ. ಅದರಂತೆ ಅನೇಕ ಭಾಷೆಗಳ ಸಾಹಿತ್ಯದ ಸಾಮಾನ್ಯಸ್ವರೂಪ ಎಂದರೆ ಸಾಮಾನ್ಯ ಪ್ರೇರಣೆ, ಸಮಾನವಾದ ಜೀವನದರ್ಶನ ಅಥವಾ ಜೀವನಮೂಲ್ಯ ಎಂದು ಅರ್ಥ. ವಿಚಾರಗಳ, ಭಾವನೆಗಳ ಇಲ್ಲವೆ ಅಭಿವ್ಯಕ್ತಿಯ ಸಮಾನತೆ ಎಂದು ಅರ್ಥವಲ್ಲ. ಕ್ವಚಿತ್ತಾಗಿ ಈ ಬಗೆಯ ಸಾಮ್ಯವೂ ಕಂಡುಬರಬಹುದು. ಆದರೆ ಮೂಲ ಪ್ರೇರಣೆ ಅಥವಾ ಜೀವನದರ್ಶನದ ಸಾಮ್ಯವು ಹೆಚ್ಚು ವ್ಯಾಪಕ ಮತ್ತು ಆಶ್ಚರ್ಯಕಾರಕವೆಂದು ಹೇಳಲು ಅಡ್ಡಿಯಿಲ್ಲ.

ಪ್ರಾಚೀನ ಭಾರತೀಯ ಸಾಹಿತ್ಯವನ್ನು ಅವಲೋಕಿಸಿದರೆ ಅದರ ಮೇಲೆ ಹೆಚ್ಚುಕಡಿಮೆ ಪ್ರಮಾಣದಲ್ಲಿ ಸಂಸ್ಕೃತಭಾಷೆ ಮತ್ತು ಸಂಸ್ಕೃತ ವಾಙ್ಮಯಗಳ ಪರಿಣಾಮವಾದದ್ದು ಕಂಡುಬರುತ್ತದೆ. ಎಲ್ಲ ಭಾರತೀಯ ಭಾಷೆಗಳ ಸಾಹಿತ್ಯಕ್ಕೆ ಸಂಸ್ಕೃತವು ಪ್ರಮುಖ ಸಮಾನ ಪ್ರೇರಣೆಯಾಗಿದೆ. ಕೆಲವು ಭಾಷೆಗಳು ಸಂಸ್ಕೃತಜನ್ಯವಾಗಿವೆ. ಕನ್ನಡ, ತಮಿಳು, ತೆಲಗು, ಮಲಯಾಳ— ಇವು ದ್ರಾವಿಡಭಾಷೆಗಳಾಗಿದ್ದರೂ ಸಂಸ್ಕೃತದಿಂದ ಬೇರೆ ಬೇರೆ ಪ್ರಮಾಣದಲ್ಲಿ ಪುಷ್ಟಿಯನ್ನು ಹೊಂದಿವೆ. ಅಂತೂ ಸಂಸ್ಕೃತಜನ್ಯವಾಗಿರಲಿ, ಸಂಸ್ಕೃತಪುಷ್ಟವಾಗಿರಲಿ, ಸಂಸ್ಕೃತವಾಙ್ಮಯದಿಂದ ಬಹುಸಂಖ್ಯ ಭಾರತೀಯ ಭಾಷೆಗಳು ಪ್ರಭಾವಿತವಾಗಿವೆ ಎಂಬುದನ್ನು ಗಮನಿಸಬೇಕು. ಉರ್ದುಭಾಷೆಯಲ್ಲಿಯ ಸಾಹಿತ್ಯಕ್ಕೆ ಪ್ರಾಚೀನಕಾಲದಲ್ಲಿ ಸಂಸ್ಕೃತದಿಂದ ಏನೂ ಸ್ಫೂರ್ತಿ ದೊರೆತಿಲ್ಲ ಅನ್ನಬಹುದು. ಪರ್ಶಿಯನ್ ವಾಙ್ಮಯವು ಉರ್ದುವಿನ ಮಟ್ಟಿಗೆ ಪ್ರಮುಖವಾದ ಸ್ಫೂರ್ತಿಸ್ಥಾನವಾಗಿದೆ. ಕಾಶ್ಮೀರಿ ವಾಙ್ಮಯದ ಮೇಲೆಯೂ ಸಂಸ್ಕೃತದ ಪ್ರಭಾವ ಕಡಿಮೆಯಾಗಿದೆ. ಸಂಸ್ಕೃತವಾಙ್ಮಯದಂತೆ ಪ್ರಾಕೃತವಾಙ್ಮಯದ ಪ್ರಭಾವವು ಕೆಲವು ಭಾಷೆಗಳ ಸಾಹಿತ್ಯದ ಮೇಲೆ ಆಗಿದೆ. ಜೈನ, ಬೌದ್ಧಸಾಹಿತ್ಯವು ತಲೆದೋರಿರುವಲ್ಲಿ ಈ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಬಹುದು. ಆದರೆ ಎಲ್ಲ ಭಾರತೀಯ ಸಾಹಿತ್ಯಕ್ಕೆ ಸಮಾನಪ್ರೇರಣೆ ಎಂದಿದನ್ನು ಹೇಳಲು ಬರುವಂತಿಲ್ಲ.

## ಮೂರು ವಿಶಾಲ ವಿಭಾಗಗಳು

ಪ್ರತಿಯೊಂದು ಭಾಷೆಯಲ್ಲಿಯ ಸಾಹಿತ್ಯದಲ್ಲಿ ಮೂರು ವಿಶಾಲವಾದ ವಿಭಾಗಗಳು ಕಂಡುಬರುತ್ತವೆ. ಅವೆಂದರೆ ಪ್ರೌಢ ಅಥವಾ ಮಾರ್ಗನಿಷ್ಠವಾಙ್ಮಯ, ಸುಲಭಅಥವಾ ದೇಸಿ ಪ್ರಚುರವಾಙ್ಮಯ ಮತ್ತು ಜನಪದ ಸಾಹಿತ್ಯ ಅಥವಾ ಲೋಕಗೀತ. ಪ್ರೌಢವಾಙ್ಮಯದಲ್ಲಿ ಸಂಸ್ಕೃತದಲ್ಲಿಯ ಪ್ರೌಢಕಾವ್ಯಗಳ ಪರಂಪರೆಗೆ ಅನುಸರಿಸಿ ಕಾವ್ಯರಚನೆ ಇರುತ್ತದೆ. ಅಲಂಕಾರ, ಶಬ್ದಚಮತ್ಕೃತಿ, ಕವಿಸಮಯ, ಅಷ್ಟಾದಶವರ್ಣನೆ, ರಸನಿರೂಪಣೆ. ಇವುಗಳಲ್ಲಿ ಪ್ರೌಢಕಾವ್ಯದ ಕರ್ತೃ ತನ್ನ ಪ್ರತಿಭೆಯನ್ನೂ ನೈಪುಣ್ಯವನ್ನೂ ತೋರಿಸಿರುತ್ತಾನೆ. ಕಾಲಿದಾಸ, ಭಾರವಿ, ಬಾಣ, ಮಾಘ ಈ ಮುಂತಾದ ಸಂಸ್ಕೃತಕವಿಗಳಿಂದ ಎತ್ತಿಕೊಂಡ ಕಲ್ಪನೆಗಳನ್ನು ಇದ್ದಂತೆ ಅಥವಾ ತುಸು ಬದಲಿಸಿಕೊಂಡು ಅವನು ಬಳಸಿರುತ್ತಾನೆ. ಸುಲಭ ವಾಙ್ಮಯದಲ್ಲಿ ಸಂಸ್ಕೃತ ಪ್ರೌಢಕಾವ್ಯಗಳ ಪ್ರಭಾವವು ಕಡಿಮೆಯಾಗಿರುತ್ತದೆ; ವಿಷಯ ಮತ್ತು ವಿನ್ಯಾಸಗಳಲ್ಲಿ ಹೆಚ್ಚಿನ ಸ್ವಾತಂತ್ರ್ಯ ಮತ್ತು ದೇಸಿಯ ದೃಷ್ಟಿ ಪ್ರಚುರವಾಗಿರುತ್ತದೆ. ಈ ಬಗೆಯ ವಾಙ್ಮಯದಲ್ಲಿ ವೈದಿಕ ಪರಂಪರೆಯ ಪ್ರಭಾವವಿರುವಂತೆ ಅವೈದಿಕವೆನ್ನಬಹುದಾದ ಸಂಪ್ರದಾಯಗಳಪ್ರಭಾವವು ಕಾಣುತ್ತದೆ. ಹೆಚ್ಚಾಗಿ ಅವೈದಿಕವಾದ ವೀರಶೈವ, ಮಹಾನುಭಾವ ಮುಂತಾದ ವಾಙ್ಮಯವೆಲ್ಲ ದೇಸಿ ಪ್ರಚುರ, ಜನಪ್ರಿಯ ಸ್ವರೂಪದ್ದಾಗಿರುವುದೆಂದು ಹೇಳಬಹುದು. ಕನ್ನಡದ ಮಟ್ಟಿಗೆ ಜೈನವಾಙ್ಮಯವು ಅವೈದಿಕವಾದರೂ ಪ್ರೌಢ ಮತ್ತು ಸುಲಭ ಎರಡು ವಿಧದಲ್ಲಿ

ನಿರ್ಮಾಣವಾಗಿದೆ. ಕನ್ನಡ ಪ್ರೌಢಕಾವ್ಯಕ್ಕೆ ಅದೇ ಪೀಠಿಕೆಯನ್ನು ಹಾಕಿತೆಂಬುದು ತಿಳಿದ ಸಂಗತಿಯಾಗಿದೆ. ವೀರಶೈವಕಾವ್ಯದಲ್ಲಿಯೂ ಪ್ರೌಢಸ್ವರೂಪದ ಕೃತಿನಿರ್ಮಾಣವಿದೆ. ಇದನ್ನು ನೆನೆದು 'ಹೆಚ್ಚಾಗಿ' ಎಂಬ ಪದವನ್ನು ಬಳಸಲಾಗಿದೆ. ಜನಪದಸಾಹಿತ್ಯ ಪ್ರತಿಯೊಂದು ಭಾಷೆಯಲ್ಲಿ ಸಂಪನ್ನವೂ ವೈವಿಧ್ಯಯುತವೂ ಆಗಿರುವುದಲ್ಲದೆ ಅದರ ವಿಷಯ,ಶೈಲಿ,ಧಾಟಿ, ಮನೋಭೂಮಿಕೆ ಇವುಗಳನ್ನು ತುಲನಾತ್ಮಕವಾಗಿ ಅಭ್ಯಾಸಮಾಡಿದರೆ ಅಚ್ಚರಿಯನ್ನುಂಟುಮಾಡುವ ಸಾಮಾನ್ಯಸ್ವರೂಪವು ಕಂಡುಬರಬಹುದೆಂದು ಅನಿಸುತ್ತದೆ.

ಈ ಮೂರು ವಿಭಾಗಗಳಲ್ಲಿಯ ಮೊದಲಿನ ಎರಡು ವಿಭಾಗಗಳನ್ನು ಇನ್ನೊಂದು ರೀತಿಯಿಂದ ಹೆಸರಿಸಬಹುದು. ಒಂದು ವ್ಯಕ್ತಿ-ನಿರಪೇಕ್ಷವಾದ ಶಿಷ್ಟಸಾಹಿತ್ಯ, ಇನ್ನೊಂದು ವ್ಯಕ್ತಿಸಾಪೇಕ್ಷವಾದ ಭಕ್ತಸಾಹಿತ್ಯ. ಮರಾಠಿಯಲ್ಲಿ ಇವನ್ನು ಪಂತ ಸಾಹಿತ್ಯ ಮತ್ತು ಸಂತ ಸಾಹಿತ್ಯ ಎಂದು ಕರೆಯುತ್ತಾರೆ. ಮಾರ್ಗ ಮತ್ತು ದೇಶಿ ಎಂಬ ವಿಭಾಗಗಳು ಯಥಾವತ್ತಾಗಿ ಶಿಷ್ಟ ಮತ್ತು ಭಕ್ತ ಎಂಬ ಹೆಸರಿಗೆ ಸರಿಹೋಗುತ್ತವೆ ಎಂದು ತಿಳಿಯಬಾರದು; ಮಾರ್ಗವಾದದ್ದರಲ್ಲಿ ಭಕ್ತಿಯಿರಬಹುದು, ದೇಸಿ ಆದದ್ದರಲ್ಲಿ ಭಕ್ತಿ ಇಲ್ಲದೆ ಇರಬಹುದು. ಆದರೆ ಸ್ಥೂಲವಾಗಿ ಅಥವಾ ಬಹುಮಟ್ಟಿಗೆ ಹಾಗೆ ಇರುವದರಿಂದ ತಿಳಿಯಲು ಅಭ್ಯಂತರವಿಲ್ಲ. ಪ್ರತಿಯೊಂದು ಭಾಷೆಯಲ್ಲಿ ಹೇರಳವಾದ ಭಕ್ತಿಸಾಹಿತ್ಯವಿರುತ್ತದೆ. ಅದು ಕಥನ, ಕೀರ್ತನ, ವಚನ, ಅಭಂಗ ಮುಂತಾದ ಅನೇಕ ರೂಪಗಳನ್ನು ತಾಳಿದೆ. ಆದರೆ ಭಕ್ತಿಯ ಸಮರ್ಪಣಭಾವ, ತಲ್ಲೀನತೆ, ವ್ಯಕ್ತಿಮಹತ್ವ, ವಿಶಾಲ ಹೃದಯ ಅದಕ್ಕೆಲ್ಲ ಸಮಾನ ಧರ್ಮವಾಗಿ ಮೆರೆಯುತ್ತದೆ. ಭಾರತೀಯ ಸಾಹಿತ್ಯದಲ್ಲಿಯ ಭಕ್ತಿಸಾಹಿತ್ಯದ ಭಾಂಡಾರವನ್ನು ಸಮಗ್ರವಾಗಿ ಪರೀಕ್ಷಿಸಿ ನೋಡಿದರೆ ಅಗಾಧವಾದ ಅದರ ವೈವಿಧ್ಯದೊಡನೆ ಏಕತೆಯೂ ಎದ್ದು ಕಾಣುವಂತಿದೆ. ಭಾರತೀಯ ಸಾಹಿತ್ಯ ಮೂಲಪ್ರೇರಣೆಯಲ್ಲಿ ಒಂದು ಎನ್ನಲು ಅದರ ಭಕ್ತಿಭಾಂಡಾರವು ಉತ್ತಮ ನಿದರ್ಶನವಾಗಿದೆ.

## ಸಾಮಾನ್ಯ ಪ್ರೇರಕ ಮಹಾಗ್ರಂಥಗಳು

ಭಾರತೀಯ ಸಾಹಿತ್ಯದ ಇನ್ನೊಂದು ಪ್ರಮುಖ ಪ್ರೇರಣೆ ರಾಷ್ಟ್ರೀಯ ಸಂಪತ್ತಿಯೆನ್ನಬಹುದಾದ ಮೂರು ನಾಲ್ಕು ಸಂಸ್ಕೃತ ಗ್ರಂಥಗಳಲ್ಲಿದೆ. ಅವೆಂದರೆ ರಾಮಾಯಣ, ಮಹಾಭಾರತ,ಭಗವದ್ಗೀತೆ ಮತ್ತು ಭಾಗವತ. ಭಗವದ್ಗೀತೆ ಮಹಾಭಾರತದಲ್ಲಿ ಅಂತರ್ಗತವಾಗಿದ್ದ ಕಾರಣ ಸಾಮಾನ್ಯಪ್ರೇರಕವಾದ ಮಹಾ ಗ್ರಂಥಗಳು ಮೂರೆನ್ನಬಹುದು. ಈ ಗ್ರಂಥತ್ರಯಿ ಬಹುಶಃ ಎಲ್ಲ ಭಾರತೀಯ ಸಾಹಿತ್ಯದ ಮೇಲೆ ಆಳವಾದ ಪ್ರಭಾವ ಬೀರಿರುತ್ತದೆ. ಅವುಗಳ ಮೂಲಕ ಭಾರತೀಯ ಜನತೆಯ ಜೀವನದ ಮೇಲೂ ಪ್ರಭಾವಬೀರಿದೆ. ಭಾರತೀಯ ತತ್ತ್ವಜ್ಞಾನದ ಇತಿಹಾಸದಲ್ಲಿ ಮತಾಚಾರ್ಯರು ಬ್ರಹ್ಮಸೂತ್ರ, ಉಪನಿಷತ್ತು ಮತ್ತು ಭಗವದ್ಗೀತೆ ಈ ಮೂರು ಗ್ರಂಥಗಳು ಅಂದರೆ ಪ್ರಸ್ಥಾನತ್ರಯಿಯ ಮೇಲೆ ವ್ಯಾಖ್ಯಾನ ಬರೆದು ತಂತಮ್ಮ ಮತಗಳನ್ನು ಪ್ರತಿಪಾದಿಸಿದರು. ಅದೇ ಪ್ರಕಾರ ಭಾರತೀಯ ಕವಿಗಳು ಮೇಲ್ಕಾಣಿಸಿದ ಗ್ರಂಥತ್ರಯಿಯ ಮೇಲೆ ತಮತಮಗೆ ತೋರಿದ ರೀತಿಯಲ್ಲಿ ತಮ್ಮ ಭಾಷೆಗಳಲ್ಲಿ ಕೃತಿಗಳನ್ನು ರಚಿಸಿದರು. ಅವುಗಳಲ್ಲಿ ಕೆಲವು ಮಹಾಕೃತಿಗಳಾಗಿ ಮೆರೆಯುತ್ತವೆ. ಕೆಲವಂತೂ ಪಾರಾಯಣಗ್ರಂಥಗಳಾಗಿ ಜನತೆಯ ಮನಸ್ಸಿನ ಮೇಲೆ ಉತ್ತಮ ಸಂಸ್ಕಾರಗಳನ್ನು ಉಂಟುಮಾಡುತ್ತ ಬಂದಿವೆ. ಇವುಗಳಲ್ಲಿ ರಾಮಾಯಣವೇ ಹೆಚ್ಚು ಜನಪ್ರಿಯವಾದ ಗ್ರಂಥ. ಸ್ಥೂಲವಾಗಿ ರಾಮಾಯಣದ ಕಥೆಯನ್ನೊಳಗೊಂಡ ಒಂದಾದರೂ ಕೃತಿಯಿಲ್ಲದ ಭಾರತೀಯ ಭಾಷೆಯಿಲ್ಲ. ಕೆಲವು ಭಾಷೆಗಳಲ್ಲಿಯಂತೂ ಸಂಸ್ಕೃತದಲ್ಲಿ ಬಂದಿರುವ ರಾಮಾಯಣದ ಅನೇಕ ಪ್ರಭೇದಗಳು ಸಹ ಆಯಾ ಭಾಷೆಯ ರೂಪ ತಾಳಿರುತ್ತವೆ. ಭಾಷೆಯ ಪ್ರಕಾರ ನೋಡಿದರೆ ಈ ಮಾತಿನ ಸತ್ಯತೆ ತಿಳಿದು ಬರುತ್ತದೆ. ಆಸಾಮಿ ಭಾಷೆಯಲ್ಲಿ ಮಾಧವಕಂದಲಿ ಮಾಡಿದ ಸಂಪೂರ್ಣ ರಾಮಾಯಣದ ಭಾಷಾಂತರವಿರುವದಲ್ಲದೆ ದುರ್ಗಬಾರನು ಜಾನಪದ ಧಾಟಿಯಲ್ಲಿ ಬರೆದ ಗೀತರಾಮಾಯಣವಿದೆ. ಬಂಗಾಲಿಯಲ್ಲಿ ಕೃತ್ತಿವಾಸ ಓಝಾ ಎಂಬ ಕವಿ ರಚಿಸಿದ ರಾಮಾಯಣವು ಅತ್ಯಂತ ಜನಪ್ರಿಯವಾಗಿದೆಯಂತೆ.

## ಪ್ರಾಸಾದಿಕ ಕಾವ್ಯಗಳು

ಹಿಂದೀಭಾಷೆಯಲ್ಲಿ ತುಳಸೀದಾಸನ 'ರಾಮಚರಿತಮಾನಸ'ವು ಅತ್ಯಂತ ಪ್ರಾಸಾದಿಕ ಕಾವ್ಯವೆಂದು ಹೆಸರುಗೊಂಡಿದೆ. ಹಿಂದೀಭಾಷಿಕರಿಗೆ ಈ ಗ್ರಂಥವು ರಾಮಭಕ್ತಿಯ ಅಮೃತಪ್ರಾಶನವನ್ನು ಮಾಡಿಸುವ ನಿತ್ಯ ಪಾರಾಯಣ ಗ್ರಂಥವಾಗಿದೆ. ಕನ್ನಡದಲ್ಲಿ ನಾಗಚಂದ್ರನ ರಾಮಚಂದ್ರಚರಿತ ಪುರಾಣವು ಜೈನಸಂಪ್ರದಾಯವೊಂದರ ಮೇರೆಗೆ ರಾಮಾಯಣ ಕಥೆಯನ್ನು ನಿರೂಪಿಸಿದ ಪ್ರೌಢಕಾವ್ಯವಾಗಿದೆ. ವಾಲ್ಮೀಕಿ ರಾಮಾಯಣದ ಪರಂಪರೆಯಲ್ಲಿ ಕುಮಾರವಾಲ್ಮೀಕಿಯ ತೊರವೆ ರಾಮಾಯಣವು ಇರುತ್ತದೆ. ಇನ್ನೂ ಹಲವು ರಾಮಾಯಣಗಳು ಕನ್ನಡದಲ್ಲಿರುತ್ತವೆ. ಕಾಶ್ಮೀರಿ ಭಾಷೆಯಲ್ಲಿ ಪ್ರಕಾಶರಾಮ ಎಂಬ ಕವಿ ಬರೆದ ರಾಮಾವತಾರಲೀಲಾ ಎಂಬ ಕೃತಿಯಿದೆ. ಮಲಯಾಳದಲ್ಲಿ ಎಝ್ಝುತಸ್ಸನ್ ಎಂಬ ಕವಿ ಬರೆದ ಅಧ್ಯಾತ್ಮ ರಾಮಾಯಣವಿರುವದಲ್ಲದೆ ಸಂಸ್ಕೃತ ಮತ್ತು ಮಲಯಾಳಂ ಎರಡೂ ಛಂದಸ್ಸಿನಲ್ಲಿ ಬರೆದ ರಾಮಾಯಣಚಂಪು ಇರುತ್ತದೆ. ಮರಾಠಿಯಲ್ಲಿ ಏಕನಾಥನ ಭಾವಾರ್ಥ ರಾಮಾಯಣವು ಪ್ರಸಿದ್ಧವಾಗಿದೆ. ಓರಿಯಾ ಭಾಷೆಯಲ್ಲಿ ಬಲರಾಮದಾಸನ ಓರಿಯ ರಾಮಾಯಣ, ಹಲಧರದಾಸನ ಅಧ್ಯಾತ್ಮ ರಾಮಾಯಣ, ಬಿಕ್ಕನಾಥ ಕುಂಟಿಯ ಬಿಚಿತ್ರ ರಾಮಾಯಣ ಮುಂತಾದ ಅನೇಕ ರಾಮಾಯಣಗಳಿರುತ್ತವೆ. ಪಂಜಾಬಿಯಲ್ಲಿ ಜಶೋದಾನಂದನನ ಲವಕುಶದಿಯಾಪೌರಿಯಾ ಎಂಬ ರಾಮಾಯಣ ಭಾಗವಿದೆ. ತಮಿಳಿನಲ್ಲಿ ಕಂಬರ್ ರಾಮಾಯಣ ಹೆಸರಾದ ಕೃತಿ. ತೆಲುಗಿನಲ್ಲಿ ಲೆಕ್ಕಣನ ರಾಮಾಯಣ, ಬುದ್ಧರಾಜನ ರಾಮಾಯಣವಲ್ಲದೆ ನಾಲ್ಕೈದು ಕವಿಗಳು ರಚಿಸಿದ ರಾಮಾಯಣಚಂಪು ಇದೆ. ಮಹಾಭಾರತ ಮತ್ತು ಭಗವದ್ಗೀತೆ ಇವೂ ವಿವಿಧ ಭಾಷೆಗಳಲ್ಲಿ ವಿವಿಧರೂಪ ತಾಳಿರುತ್ತವೆ. ಅವುಗಳಲ್ಲಿ ಬಂಗಾಲಿಯಲ್ಲಿ ಕವೀಂದ್ರನ ವಿಜಯಪಾಂಡವ ಕಥೆ, ಹಿಂದಿಯಲ್ಲಿ ಗೋಕುಲನಾಥ ಮುಂತಾದವರ ಮಹಾಭಾರತ, ಕನ್ನಡದಲ್ಲಿ ಪಂಪಭಾರತ ಮತ್ತು ಕುಮಾರವ್ಯಾಸಭಾರತ, ಮರಾಠಿಯಲ್ಲಿ ಜ್ಞಾನೇಶ್ವರನ ಜ್ಞಾನೇಶ್ವರೀ ಮತ್ತು ಮುಕ್ತೇಶ್ವರನ ಮಹಾಭಾರತ, ಓರಿಯಾದಲ್ಲಿ ಸರಲದಾಸನ ಮಹಾಭಾರತ, ತಮಿಳಿನಲ್ಲಿ ವಿಲ್ಲಿಪುಟ್ಟೂರರ್ ಅವರ ಭಾರತ, ತೆಲುಗಿನಲ್ಲಿ ನನ್ನಯ್ಯ ಭಾರತ ಇವನ್ನು ವಿಶೇಷವಾಗಿ ಉಲ್ಲೇಖಿಸಬಹುದು. ಭಾಗವತ ಮತ್ತು ಅದರಲ್ಲಿ ಬಂದಿರುವ ಕೃಷ್ಣಕಥೆ, ಕೃಷ್ಣಲೀಲೆ ಇವುಗಳ ಪ್ರಭಾವವು ಭಾರತೀಯ ಭಕ್ತಿಸಾಹಿತ್ಯದ ಮೇಲೆ ವಿಪುಲವಾಗಿ ಆಗಿರುವುದೆಂದು ಹೇಳಬಹುದು. ಬಂಗಾಲದಲ್ಲಿ ಚೈತನ್ಯ ಪಂಥ, ಕರ್ನಾಟಕದಲ್ಲಿ ದಾಸಕೂಟ, ತಮಿಳುನಾಡಿನಲ್ಲಿ ಆಳ್ವಾರರು ಈ ಮುಂತಾದವರು ಕೃಷ್ಣಭಕ್ತಿಯ ರಸತರಂಗಿಣಿಯನ್ನು ಭಾರತದ ತುಂಬ ಹರಿಸಿದ್ದಾರೆ. ಬಂಗಾಲಿಯಲ್ಲಿ ಚಂಡೀದಾಸನ ಕೃಷ್ಣಕೀರ್ತನ, ಹಿಂದಿಯಲ್ಲಿ ವಿದ್ಯಾಪತಿ ಠಾಕೂರನ ರಾಧಾಕೃಷ್ಣಲೀಲೆ, ಕಬೀರದಾಸ, ಸೂರದಾಸ, ಮೀರಾಬಾಯಿ ಇವರ ಭಕ್ತಿಗೀತ, ಕನ್ನಡದಲ್ಲಿ ಪುರಂದರದಾಸ, ಕನಕದಾಸ,ಜಗನ್ನಾಥದಾಸ ಮುಂತಾದವರ ಕೀರ್ತನೆ ಮರಾಠಿಯಲ್ಲಿ ಏಕನಾಥನ ಭಾಗವತವಲ್ಲದೆ ನಾಮದೇವ ತುಕಾರಾಮರ ಅಭಂಗ, ಓರಿಯಾ ಭಾಷೆಯಲ್ಲಿ ಜಗನ್ನಾಥದಾಸನ ಚೈತನ್ಯಪ್ರಭಾವಿತವಾದ ಓರಿಯ ಭಾಗವತ, ತಮಿಳಿನಲ್ಲಿಯ ದಿವ್ಯಪ್ರಬಂಧ, ತೆಲುಗಿನಲ್ಲಿಯ ಪೋತನನ ಭಾಗವತ ಇವೆಲ್ಲ ಸಾಕಷ್ಟು ನಿದರ್ಶನವಾಗಿರುತ್ತವೆ.

ಕೇವಲ ಪ್ರಾಚೀನ ಸಾಹಿತ್ಯದ ಆಧಾರದಿಂದ ನೋಡಿದರೆ ಭಾರತೀಯ ಸಾಹಿತ್ಯದ ಸಾಮಾನ ಸ್ವರೂಪವು ಕಣ್ಣುಮುಂದೆ ಕಟ್ಟುತ್ತದೆ. ಇದನ್ನರಿತು ಭಾರತೀಯ ಜನತೆ ತನ್ನ ಹೃದಯೈಕ್ಯವನ್ನು ಗಟ್ಟಿಮಾಡಿಕೊಳ್ಳಬೇಕು. ಈ ಎಲ್ಲ ಸಾಹಿತ್ಯ ಯಾವುದೇ ಭಾಷೆಯಲ್ಲಿರಲಿ, ಅದು ತನ್ನದೆಂದು ಹೆಮ್ಮೆಯಿಂದ ಹೇಳಿಕೊಳ್ಳಬೇಕು.

# ಪರಿಪೂರ್ಣ ಜೀವನದ ಸಾಧನ

ಪರಿಪೂರ್ಣ ಜೀವನದಲ್ಲಿ ಶಾರೀರಿಕ ಮಾನಸಿಕ ಭಾವನಾತ್ಮಕ ನೈತಿಕ ಆಧ್ಯಾತ್ಮಿಕ ಪೂರ್ಣ ವಿಕಾಸವು ಹಾಗೂ ಆಯಾ ಶಕ್ತಿಗಳ ಸದ್ವಿನಿಯೋಗವು ಒಳಗೊಂಡಿರುವದು. ಇಂತಹ ಪರಿಪೂರ್ಣ ಜೀವನದ ಧ್ಯೇಯವನ್ನು ನಿರ್ಧರಿಸಿಕೊಂಡ ನಂತರ ಅದನ್ನು ಸಾಧಿಸಲು ಅಚಲ ನಿರ್ಧಾರವು ಬೇಕು. ಇದರ ಸಾಧನೆಯ ಮಾರ್ಗವು ಹೊಸ ಬೆಳಕು ಕಾಣುತ್ತ ಹೋಗುವಂತಹದು. ಇದರ ತಾತ್ವಿಕ ವಿವೇಚನೆಯನ್ನು ಲೇಖಕರು ಇಲ್ಲಿ ಕೊಟ್ಟಿರುವರು.

ಲೇಖಕರು : ಶ್ರೀ ರಂಗನಾಥ ದಿವಾಕರ

## ಸಿದ್ಧಿ ಹಾಗೂ ಪ್ರಯತ್ನ

ನಮ್ಮ ಜೀವನ ಹೇಗೆ ಇರಬೇಕು, ಎಂಬ ಬಗ್ಗೆ ಪೂರ್ಣ ವಿಚಾರಮಾಡಿ, ಅದರ ಸ್ಪಷ್ಟವಾದ ಒಂದು ಚಿತ್ರವನ್ನು ಮನಸ್ಸಿನಲ್ಲಿ ರೇಖಿಸಿ, ಜೀವನವನ್ನು ಅದರಂತೆ ರೂಪಿಸುವ ನಿರ್ಧಾರ ಮಾಡಿ, ಅದಕ್ಕೆ ತಕ್ಕ ಸಾಧನಮಾರ್ಗವನ್ನು ಕೈಕೊಂಡು ಜೀವನದ ಪೂರ್ಣವಿಕಾಸವನ್ನು ಸಾಧಿಸಲೆತ್ನಿಸುವವರು ಬಹಳ ಕಡಿಮೆ ಜನರು. ಆದರೆ ಆ ಬಗೆಯ ಬುದ್ಧಿಪೂರ್ವಕವಾದ ಜಾಗ್ರತ ಪ್ರಯತ್ನವನ್ನು ಮಾಡದೆ ಹೋದರೆ ಆತ್ಮಸಮಾಧಾನವಾಗುವಂಥ ಜೀವ ವಿಕಾಸವು ಹಾಗೂ ಜೀವನಸಿದ್ಧಿಯು ಕೈಗೂಡಲಾರದು. 'ಸಂಸಿದ್ಧಿ'ಯನ್ನು, ಪೂರ್ಣ ಸಿದ್ಧಿಯನ್ನು, ಸಮ್ಯಕ್ ಸಿದ್ಧಿಯನ್ನು ಪಡೆಯಲು ಅನೇಕ ಜನ್ಮಗಳು ಬೇಕು, ಎಂದು ಶ್ರೀಕೃಷ್ಣ ಗೀತೆಯಲ್ಲಿ ಹೇಳಿರುವನು. ಅಂದ ಬಳಿಕ ಇದು ಸುಲಭವಾಗಿ ಆಗತಕ್ಕ ಕೆಲಸವಲ್ಲ. ಸುಲಭವಾದ ಕೆಲಸಗಳನ್ನು ಮಾಡುವುದರಲ್ಲಿ ಅಂಥ ಪುರುಷಾರ್ಥವೂ ಇಲ್ಲ. ಪ್ರತ್ಯಕ್ಷ ಸಿದ್ಧಿ ಆಗಲಿ ಬಿಡಲಿ. ಆ ಸಿದ್ಧಿಯನ್ನೆ ಗುರಿಯಾಗಿಟ್ಟುಕೊಂಡು ಯೋಗ್ಯವಾದ ಸಾಧನಮಾರ್ಗದಿಂದ ಸತತವೂ ಪ್ರಯತ್ನಪಡುತ್ತಿರುವುದೆ ಮಾನವನ ಪವಿತ್ರ ಕರ್ತವ್ಯವಿರುವದು; ಅಲ್ಲದೆ, ಸಿದ್ಧಿಗಾಗಿ ಬೇರೆ ಮಾರ್ಗವೂ ಇಲ್ಲ.

## ಪರಿಪೂರ್ಣ ಜೀವನ

ಮೊಟ್ಟಮೊದಲು ನಮಗೆ ಪರಿಪೂರ್ಣ ಜೀವನದ ಕಲ್ಪನೆ ಬೇಕು. ಕೇವಲ ಪೂರ್ಣಜೀವನವಲ್ಲ, ಆದರೆ ಪರಿ-ಪೂರ್ಣ ಜೀವನ; ಅರ್ಥಾತ್ ಸರ್ವತೋಪರಿ, ಸರ್ವತೋಮುಖ ವಿಕಸಿತವಾದ ಸಿದ್ಧ ಜೀವನ ಎಂಬುದೆ ಪರಿಪೂರ್ಣ ಜೀವನ, ಎಂಬುದರ ಅರ್ಥ. ಶರೀರ, ಮನಸು, ಬುದ್ಧಿ, ಭಾವನೆ, ನೀತಿ, ಆತ್ಮ ಈ ಎಲ್ಲವುಗಳ ಪೂರ್ಣ ವಿಕಾಸ, ಸಮ್ಮೇಳದಿಂದ ಈ ಎಲ್ಲ ಶಕ್ತಿಗಳ ಪೂರ್ಣ ಬೆಳವಣಿಗೆ, ಹಾಗೂ ಅಖಿಲ ಮಾನವ ಸಮಾಜಕ್ಕಾಗಿ ಅವೆಲ್ಲವುಗಳ ಸತತ ಸದುಪಯೋಗ ಇದೇ ಪರಿಪೂರ್ಣ ಜೀವನ ಎನಿಸಬಲ್ಲದು. ಸಾಮಾನ್ಯವಾಗಿ, ಈ ಎಲ್ಲ ಶಕ್ತಿಗಳ ಸಮ್ಮಿಲಿತ ಹಾಗೂ ಸಮ್ಮೇಳಿತ ವಿಕಾಸದತ್ತ ನಾವು ಲಕ್ಷಗೊಡುವುದಿಲ್ಲ. ನಮ್ಮದು ಬಡವರ ಊಟ; ಒಂದಿತ್ತು ಒಂದಿಲ್ಲ, ಹಾಗೆಯೆ ಸಾಗಿಸಿಕೊಳ್ಳುವೆವು. ಇಷ್ಟರಿಂದ ಸಂತುಷ್ಟರಾಗುವು ಯೋಗ್ಯವಲ್ಲ. ಷಡ್ರಸಪೂರ್ಣ ಪಂಚಪಕ್ವಾನ್ನದ ಊಟವೆ ನಮ್ಮ ಗುರಿಯಾಗಿರಬೇಕು. ನಮ್ಮ ಶರೀರವು ಸುಷ್ಟವು, ಪುಷ್ಟವು, ಸುಂದರವು, ಲಾವಣ್ಯವುಳ್ಳದ್ದು, ಆರೋಗ್ಯಯುಕ್ತವು ಆಗಬೇಕು. ಮನಸ್ಸು ನಿರ್ಮಲ ಹಾಗೂ ಉತ್ಸಾಹ ಉಳ್ಳದ್ದು ಇರಬೇಕು. ಬುದ್ಧಿ ತೀಕ್ಷ್ಣವು ತರ್ಕಶಕ್ತಿಯಿಂದ ಕೂಡಿದುದು ಆಳವಾದುದು ಇರಬೇಕು. ಭಾವನೆಗಳು ಶುದ್ಧವಾದವುಗಳು, ಸರ್ವಭೂತಗಳಲ್ಲಿ ಪೂರ್ಣಪ್ರೇಮವುಳ್ಳವುಗಳು ಆಗಬೇಕು. ನಮ್ಮ ನೀತಿ ಶುದ್ಧ-ಸಿದ್ಧ ಸಮಾಜವನ್ನು ನಿರ್ಮಾಣ ಮಾಡುವಂತಹದು ಇರಬೇಕು. ಈ ಎಲ್ಲ ಶಕ್ತಿಗಳನ್ನೊಳಗೊಂಡ ನಮ್ಮ ಆತ್ಮವೆಂಬುದು ಸದಾಕಾಲವೂ ಜಾಗ್ರತವಾಗಿದ್ದು ಪರಿಪೂರ್ಣ ಜೀವನದತ್ತ ಪ್ರತಿಕ್ಷಣವೂ ಸಾಗುತಿರಬೇಕು.

## ಧ್ಯೇಯ ಮತ್ತು ಸಾಧನೆ

ಇಲ್ಲಿ ನಿರ್ದಿಷ್ಟವಾದ ಪರಿಪೂರ್ಣಜೀವನವು ಕೇವಲ ವೈಯಕ್ತಿಕಧ್ಯೇಯವಲ್ಲ; ಇದು ಸಾಮೂಹಿಕ ಧ್ಯೇಯವು. ಮನುಷ್ಯನು ಬರಿ ಸಮಾಜಪ್ರಿಯನಲ್ಲ. ಕೇವಲ ಸಮೂಹಪ್ರಿಯನಲ್ಲ. ಆದರೆ ಸಮಾಜವನ್ನು ಅಥವಾ ಸಮೂಹವನ್ನು ಬಿಟ್ಟು ಅವನಿಗೆ ತೀರ ಪ್ರತ್ಯೇಕ ಅಥವಾ ಸ್ವತಂತ್ರಜೀವನವೆಂಬುದೇ ಇಲ್ಲ. ಆದುದರಿಂದ ಅವನ ಧ್ಯೇಯವು ಸಾಮೂಹಿಕವೇ ಇರಬಲ್ಲದು. ಅವನ ಬಾಳು ಮರುಸ್ಥಳದಲ್ಲಿ ಒಂಟಿಯಾಗಿ ನಿಂತ ತಾಡವೃಕ್ಷದಂತೆ ಇರಲರಿಯದು; ಅವನ ಬಾಳು ಬಾಳೆಯ ಮರದಂತೆ ಬಳಗವನ್ನು ಕಟ್ಟಿಕೊಂಡು ಇರುವ ಬಾಳುವೆ.

ಈ ಬಗೆಯ ಧ್ಯೇಯವನ್ನು ನಾವು ಎಷ್ಟು ಜನರು ನಮ್ಮ ಕಣ್ಣುಮುಂದಿಟ್ಟುಕೊಂಡಿದ್ದೇವೆ? ವಾಡಿಕೆಯಾಗಿ ನಾವೆಲ್ಲರೂ ಆದಷ್ಟು ಆಯಿತು ಹೋದಷ್ಟು ಹೋಯಿತು, ಎಂದು ದಿನಗಳನ್ನು ಹೊತ್ತು ಹಾಕುತ್ತೇವೆ. ಮಾನವ ಜನ್ಮವೆಂದರೆ ಅತ್ಯಂತ ಮಹತ್ವದ್ದು, ಇದೊಂದು ದೊಡ್ಡ ಸುಸಂಧಿ, ನಮ್ಮ ಜೀವನವೆಂದರೆ ದೇವರು ನಮಗೆ ಕೊಟ್ಟ ವಿಶ್ವಾಸದ ನಿಧಿ, ಇದನ್ನು ನಾವು ಯೋಗ್ಯವಾಗಿ ಬೆಳೆಸಿ, ಅದರ ಸದುಪಯೋಗವನ್ನು ಮಾಡಿ, ಅವನ ಸೊತ್ತನ್ನು ಅವನಿಗೆ ಒಪ್ಪಿಸಿಬಿಡಬೇಕು, ಎಂಬ ಭಾವನೆ ನಮ್ಮೆಲ್ಲರ ಮನಸಿನಲ್ಲಿ ಮೂಡಿರುವದೊ? ಮೂಡಿದ್ದರೆ ಎಷ್ಟುಸಾರೆ? ಕದಾಚಿತ್ ಒಂದರೆಕ್ಷಣ ಮಾತ್ರ.

ಧ್ಯೇಯದ ನಿಶ್ಚಯವಾದ ಬಳಿಕ, ಅದನ್ನು ಸಾಧಿಸಿಯೇ ತೀರಬೇಕೆಂಬ ನಿರ್ಧಾರವು ಅವಶ್ಯ. ಆ ನಿರ್ಧಾರವಿಲ್ಲದಿದ್ದರೆ ನಮ್ಮ ಮನಸು ಅತ್ತಿತ್ತ ಅಲೆದಾಡುವದು, ಇಲ್ಲವೆ ಸಣ್ಣಪುಟ್ಟ ಗೌಣವಾದ ಚಟುವಟಿಕೆಗಳಲ್ಲಿ ತೊಡಗುವದು. ಆ ಮಟ್ಟಿಗೆ ನಮ್ಮ ಶಕ್ತಿ, ಕಾಲ, ಯತ್ನ ಇವು ಹಾಳಾಗುವವು.

ಒಮ್ಮೆ ಸಮಗ್ರಜೀವನದ, ಪರಿಪೂರ್ಣ ಜೀವನದ, ವ್ಯಕ್ತಿಯ ಸರ್ವಶಕ್ತಿಗಳ ಪೂರ್ಣೋದಯದ ದರ್ಶನವಾಯಿತೆಂದರೆ ಹಾಗೂ ಈ ದರ್ಶನವು ಕೇವಲ ಒಂದು ವ್ಯಕ್ತಿಗೆ ಅಥವಾ ಯಾವದೊಂದು ಗುಂಪಿಗೆ ಅನ್ವಯಿಸದೆ ಇಡೀ ಮಾನವಕುಲಕ್ಕೆ ಅನ್ವಯಿಸುವದೆಂಬ ಪ್ರತೀತಿಯಾಯಿತೆಂದರೆ ಸಾಧನಮಾರ್ಗವೂ ಸ್ಪಷ್ಟವಾಗುವದು. ಈ ಸಾಧನಮಾರ್ಗವು ಕೂಡ ನಮ್ಮನ್ನು ಪ್ರತಿಹೆಜ್ಜೆಗೂ ನಮ್ಮ ಧ್ಯೇಯದತ್ತ ಒಯ್ಯುವಂತಹದಿರಬೇಕು. ಈ ಮಾರ್ಗದಲ್ಲಿ ಮೈತುಂಬ ಎಚ್ಚರಿದ್ದು ಪ್ರತಿ ಉಸಿರಿನೊಡನೆ ನಾವು ಮುಂದರಿಯುತ್ತ ಹೋಗಬೇಕಾಗುವದು. ಈ ಸಾಧನವು ಎಡೆಬಿಡದೆ ಸಾಗುವಂತಹದು, ಜೀವನವ್ಯಾಪಿಯಾದುದು. ದಿನಕ್ಕೊಮ್ಮೆ ಪೂಜೆಮಾಡುವದು, ವಾರಕ್ಕೊಮ್ಮೆ ದೇವರ ಗುಡಿಗೆ ಹೋಗುವುದು, ತಿಂಗಳಿಗೊಮ್ಮೆ ದಾನಮಾಡುವದು, ಇತ್ಯಾದಿಗಳಂತೆ ಈ ಸಾಧನವಲ್ಲ. ಅಥವಾ ವೇದಾಂತ ಬೇರೆ ವ್ಯವಹಾರ ಬೇರೆ, ಲೌಕಿಕ ಬೇರೇ ಪಾರಮಾರ್ಥಿಕ ಬೇರೆ, ಎಂಬುದನ್ನು ಈ ಸಾಧನಮಾರ್ಗವು ಮನ್ನಿಸಲಾರದು.

ಇದಲ್ಲದೆ ಈ ಸಾಧನಮಾರ್ಗವು ಒಮ್ಮೆ ಹೇಳಲಾಗಿದೆ, ಇನ್ನು ಹೊಸದಾಗಿ ಹೇಳುವುದೇನೂ ಇಲ್ಲ, ಎಂಬುದನ್ನೂ ಒಪ್ಪಲಾರದು. ಯಾಕಂದರೆ ಜ್ಞಾನದ, ವಿಜ್ಞಾನದ, ವೈಜ್ಞಾನಿಕ ಸಾಧನಗಳ ಅಭಿವೃದ್ಧಿಯಾದಂತೆ ಮತ್ತು ಸಾಧಕನ ಪ್ರಗತಿಯಾದಂತೆ ಈ ಮಾರ್ಗದಲ್ಲಿ ಹೊಸ ಬೆಳಕು ಕಾಣುತ್ತ ಹೋಗಬಲ್ಲದು. ಈ ಪಥದಲ್ಲಿ ಹೊರಗಿನ ಪ್ರಮಾಣಗಳ-ಹಾಗೂ ಆಪ್ತಮಿತ್ರರ ಮತ್ತು ಗುರುಗಳ ಸಹಾಯುವಾಗುವುದೇನೋ ನಿಜ: ಆದರೆ ಆತ್ಮಜ್ಯೋತಿಯೇ ಮುಖ್ಯವಾದ ಮಾರ್ಗದರ್ಶನವನ್ನು ಮಾಡಬಲ್ಲದು.

## ಪಂಚವಿಧ ಯೋಗ

ಈ ಸಾಧನಮಾರ್ಗಕ್ಕೆ ಯೋಗ ಎಂಬ ಹಳೆಯ ಹೆಸರನ್ನೆ ಇಡಬಹುದು. ಆದರೆ ಅದರ ಅರ್ಥವು ಹೆಚ್ಚು ವ್ಯಾಪಕವಾಗಿದೆ ಮತ್ತು ಈ ಯೋಗಸಾಧನವು ಪ್ರಗತಿಶೀಲವಿದೆ, ವಿಕಾಸಪೂರ್ಣವಿದೆ ಎಂದು ತಿಳಿದುಕೊಳ್ಳಬಹುದು. ಅಲ್ಲದೆ ಇದು ಸರ್ವಾಂಗೀಣವಾದ ಸರ್ವೋದಯವನ್ನು ಅನುಲಕ್ಷಿಸಿರುವದು; ಕೇವಲ ಸಾರ್ವತ್ರಿಕ ಹಾಗೂ ಇಡೀ ಮಾನವ ಕುಲದ ಸರ್ವತೋಮುಖ ಪ್ರಗತಿಯನ್ನಷ್ಟೇ ಅಲ್ಲ, ಸರ್ವರ ಮೋಕ್ಷವನ್ನಷ್ಟೇ ಅಲ್ಲ ಅದರೆ ಸರ್ವರ ಮುಕ್ತಜೀವನವನ್ನು ಅಂದರೆ ಮೋಕ್ಷೋತ್ತರ ಕರ್ಮಯೋಗವನ್ನು ಅನುಲಕ್ಷಿಸಿರುವದು. ಸದ್ಯಕ್ಕೆ ಇದೊಂದು ಕೇವಲ ಕನಸು ಆಗಿರಬಹುದು. ಆದರೆ ಪರಮವಸ್ತುವು ಸತ್ಯವೂ ನಿತ್ಯವೂ ಆನಂದರೂಪವೂ ಅಮೃತವೂ ಇರುವಂತೆ ಅನಂತವೂ ಇರುವದರಿಂದ ಅದನ್ನು ಸಾಧಿಸುವ ಸಾಧನವೂ ಬಹುಮುಖವಿದ್ದರೆ ಅನಂತವಿದ್ದರೆ ತಪ್ಪೇನು ?

ಮೇಲೆ ಹೇಳಿದಂತೆ ಪರಿಪೂರ್ಣಜೀವನದಲ್ಲಿ ಶಾರೀರಿಕ, ಮಾನಸಿಕ, ಭಾವನಾತ್ಮಕ, ನೈತಿಕ, ಆಧ್ಯಾತ್ಮಿಕ ಪೂರ್ಣವಿಕಾಸವು ಹಾಗೂ ಆಂತರ ಶಕ್ತಿಗಳ ಸದ್ವಿನಿಯೋಗವು ಒಳಗೊಂಡಿರುವದು. ಆದುದರಿಂದ ಅಂಥ ವಿಕಾಸ ಹಾಗು ವಿಕಾಸೋತ್ತರ ಸದ್ವಿನಿಯೋಗ ಇವುಗಳನ್ನು ಸಾಧಿಸುವಂಥ ಸಾಧನವೇ ನಮಗೆ ಬೇಕು. ನಮ್ಮ ವಿಕಾಸವನ್ನು ನಾವು ಮಾಡಿಕೊಳ್ಳಬೇಕು,ಎಂಬ ಬುದ್ಧಿ ನಮಗೆ ಹುಟ್ಟಿದ ಬಳಿಕವೆ ನಾವು ಸಾಧನಗಳನ್ನು ಯೋಜಿಸುವೆವು. ಅಂಥ ಎಲ್ಲ ಯೋಜನೆಗಳಿಗೆ ಕೂಡಿ ಒಟ್ಟಾಗಿ ನಾವು ' ಯೋಗ ' ಎನ್ನುವೆವು.

ಈ ಯೋಗದಲ್ಲಿ ಪಂಚವಿಧಗಳು ಹಠ-ಯೋಗ, ರಾಜಯೋಗ, ಭಕ್ತಿಯೋಗ, ಕರ್ಮಯೋಗ ಮತ್ತು ಜ್ಞಾನಯೋಗ, ಈ ಯೋಗಗಳ ಮೂಲತತ್ವಗಳು ನಮಗೆ ಪರಿಚಿತವಿರುವವು. ಆದರೆ ಕಾಲಕಾಲಕ್ಕೆ ಆಗಿ ಹೋದ ಋಷಿಮುನಿಗಳು, ಯೋಗಿಗಳು, ಸಾಧುಸಂತರು, ಮಹಾತ್ಮರು, ಮಹಾಪುರುಷರು ಈ ಯೋಗಗಳ ಪ್ರಗತಿಪರ ವಿಕಾಸಕ್ಕೆ ಕಾರಣರಾಗಿದ್ದಾರೆ. ತಮ್ಮ ಪ್ರತಿಭೆಯಿಂದ, ಪ್ರತೀತಿಯಿಂದ, ಪ್ರಯೋಗಗಳಿಂದ ಅವರು ಹೊಸ ಬೆಳಕನ್ನು ನೀಡಿದ್ದಾರೆ. ನಮ್ಮಲ್ಲಿ ಈ ಪರಂಪರೆ ಇನ್ನೂ ಅಳಿದಿಲ್ಲ. ಸನಾತನ ಧರ್ಮದ ವೈಶಿಷ್ಟ್ಯವೇ ಇದು; ಭಾರತೀಯ ಸಂಸ್ಕೃತಿಯ ಜೀವಜೀವಾಳವೇ ಇದು. ಹಲವು ಇತರ ಸಂಸ್ಕೃತಿಗಳು ಅಳಿದು ಹೋದರೂ ಈ ಸಂಸ್ಕೃತಿ ಉಳಿದು ಇನ್ನೂ ಹೊಸದಾಗಿ ಮಾರ್ಗದರ್ಶನ ಮಾಡುವ ಸಾಮರ್ಥ್ಯವನ್ನಿಟ್ಟುಕೊಂಡದ್ದು ಈ ನಿತ್ಯ-ನವ ನಿರ್ಮಾಣಶಕ್ತಿಯ ಮೂಲಕವೆ.

ವಿಶ್ವದಲ್ಲೆಲ್ಲ ಕಡೆಗೆ ಮಾನವಮಾತ್ರರು ವಿವಿಧ ಕ್ಷೇತ್ರಗಳಲ್ಲಿ ನಡೆಸಿದ ಶೋಧ-ಗವೇಷಣೆ-ಆವಿಷ್ಕಾರ ಇತ್ಯಾದಿಗಳನ್ನು ಕೂಡ ಅಭ್ಯಸಿಸಿ ಅವುಗಳ ಮರ್ಮವನ್ನು ತಿಳಿದುಕೊಂಡ ನಾವು ಅವುಗಳಲ್ಲಿಯ ಸಾರವನ್ನು ಗ್ರಹಿಸ ವದು ಅವಶ್ಯ. ಉದಾಹರಣಾರ್ಥವಾಗಿ ನವ ಶರೀರ ರಕ್ಷಣೆ ಪೋಷಣೆಯ ದೃಷ್ಟಿಯಿಂ ವ್ಹಿಟ್ಯಾಮಿನ್, ಹಾರಮೋನ್ ಮುಂತಾದ ಗಳ ಶೋಧ, ನಿಸರ್ಗಶಕ್ತಿಯ ದೃಷ್ಟಿಯಿಂ ವಿದ್ಯುತ್ತು, ಆ್ಯಟಂ ಸ್ಫೋಟ ಇವುಗಳ ಶೋಧ ಮಾನಸಶಾಸ್ತ್ರದ ದೃಷ್ಟಿಯಿಂದ ಮನೋ ವಿಜ್ಞಾನದ ಶೋಧ ಇವುಗಳನ್ನು ನಾವು ಚನ್ನಾ ಅಳವಡಿಸಿಕೊಳ್ಳುವದು ಅವಶ್ಯ. ಅದೇ ರೀ ನಮ್ಮ ಪಂಚವಿಧಯೋಗದ ರಹಸ್ಯವನ್ನರಿತ ಕೊಂಡು, ಪರಮಹಂಸ ರಾಮಕೃಷ್ಣರು ವಿವೇಕಾನಂದರು, ಅರವಿಂದರು, ಗಾಂ ಯವರು, ಮಾಡಿದ ಅನುಷ್ಠಾನಗಳನ ಚನ್ನಾಗಿ ಅಭ್ಯಸಿಸಿ ಅವುಗಳನ್ನು ನಮ್ಮ ಧ್ಯೇಯ ವಾದ ಪರಿಪೂರ್ಣ ಜೀವನದ ಸಾಧನವೆಂದ ಬಳಸುವದು ಕ್ರಮಪ್ರಾಪ್ತ. ಈ ರೀತಿಯ ಸಮನ್ವಯ ಭಾರ ಹಾಗೂ ತದನುಸಾ ಸಾಧನೆಗಳ ಯೋಜನೆ ಇವೇ ನಮ್ಮನ್ನು ನವ ಗುರಿಯುತ್ತ ಮೆಲ್ಲಮೆಲ್ಲನೆ ಒಯ್ಯಬಲ್ಲವು.

ಯಾವನೊಬ್ಬ ಸಾಧಕನು ಆ್ಯಟಂಶಕ್ತಿಯ ಪ್ರಭಾವದಿಂದ ಕಣ್ಣುಕುಕ್ಕಿ ಆತ್ಮಶಕ್ತಿಯತ್ತ ದುರ್ಲಕ್ಷ ಮಾಡುವುದೂ ತಪ್ಪು; ಆತ್ಮಶಕ್ತಿ ಯಲ್ಲಿ ಏಕಪಕ್ಷೀಯವಾದ ಅಂಧವಿಶ್ವಾ ವಿಟ್ಟು ಆ್ಯಟಂಶಕ್ತಿಯನ್ನು ಅಲ್ಲಗಳೆಯು ವದೂ ತಪ್ಪು. ಆ್ಯಟಂಶಕ್ತಿ ಕೂಡ ಆತ್ಮಶ ಯದೇ ಒಂದು ರೂಪ; ಆದುದರಿಂದ ಆ್ಯ ಶಕ್ತಿಯಲ್ಲಿ ಆತ್ಮಶಕ್ತಿಯ ಆವಿರ್ಭಾವವನ್ನು ಆತ್ಮಶಕ್ತಿಯಲ್ಲಿ ಆ್ಯಟಂಶಕ್ತಿಯ ಬೀಜವನ ನೋಡಿದವನೆ ಎರಡರ ಪರಸ್ಪರ ಸಂಬಂ ವನ್ನು ತಿಳಿದುಕೊಂಡು ವರ್ತಿಸಬಲ್ಲನು. ನವ ಸಾಧನವು ಕೂಡ ಈ ಬಗೆಯ ಪೂರ್ಣ ಸಮಗ್ರ, ಸಮನ್ವಿತ ಜ್ಞಾನವನ್ನವಲಂಬಿಸಿ ಇರುವದವಶ್ಯ.

# ಆಕ್ಸಫರ್ಡಿನಲ್ಲೊಂದು ದಿನ

ಜಗತ್ತಿನಲ್ಲಿಯೇ ಜ್ಞಾನಕೇಂದ್ರವೆಂದು ಹೆಸರಾದ ಆಕ್ಸ್‌ಫರ್ಡಿನ ಬಗ್ಗೆ ಅಲ್ಲಿ ಇದ್ದು ಓದಿದ ಲೇಖಕರು ಇಲ್ಲಿ ಅದರ ಪರಿಚಯವನ್ನು ಚಿತ್ರವತ್ತಾಗಿ ಮಾಡಿಕೊಟ್ಟಿರುವರು.


ಲೇ : **ಡಾ. ಹಿರೇಮಲ್ಲೂರ ಈಶ್ವರನ್,**

(ಎಂ. ಎ. ಮುಂಬೈ)

ಪಿ.ಎಚ್.ಡಿ (ಕರ್ನಾಟಕ) ಬಿ.ಲಿಟ್ (ಆಕ್ಸನ್)

ಎಂ.ಎಸ್.ಎಸ್.(ದಿ ಹೇಗ) ಡಿ.ಲಿಟ್ (ಲಾಮಡನ್)


He that hath Oxford seen,
for beauty grace
And healthiness, he ne'er saw
a better place
—*Dan Rogers.*

ಲಂಡನ್ ನಗರಕ್ಕೂ ಆಕ್ಸ್‌ಫರ್ಡಿಗೂ ಸುಮಾರು ೫೦ ಮೈಲುಗಳ ಅಂತರ. ಹೆಚ್ಚೆಂದರೆ ರೈಲಿನಿಂದ ಒಂದುವರೆ ತಾಸಿನ ಪಯಣ, ಬಸ್ಸಿನಿಂದ ಎರಡುತಾಸಿನ ದಾರಿ. ಆದರೂ ಸಾಂಸ್ಕೃತಿಕ ದೃಷ್ಟಿಯಿಂದ ಅವುಗಳ ನಡುವಿನ ಅಂತರ ಶತಮಾನಗಳ ಅಂತರ! ಆಕ್ಸ್‌ಫರ್ಡಿನಿಂದ ಲಂಡನ್ನಿಗೆ ನೀವು ಹೊರಟಾಗ ಸ್ನೇಹಿತರು 'ಎಲ್ಲಿಗೆ ಹೊರಟದ್ದೀರಿ' ಎಂದು ಕೇಳಿದ ಪ್ರಶ್ನೆಗೆ— "ಕೆಳಗೆ, ಲಂಡನ್ನಿಗೆ" (Down to London) ಎಂದು ಉತ್ತರ ಹೇಳಬೇಕಾಗುತ್ತದೆ. ಆಕ್ಸ್‌ಫರ್ಡಿನ ಗುರು, ಆಕ್ಸ್‌ಫರ್ಡಿನ ವಿದ್ಯಾರ್ಥಿಗಳ ದೃಷ್ಟಿಯಿಂದ ಆಕ್ಸ್‌ಫರ್ಡಿಗಿಂತ 'ಮೇಲೆ' (up) ಯಾವುದೂ ಇಲ್ಲ. ಆಕ್ಸ್‌ಫರ್ಡ ಆಕ್ಸ್‌ಫರ್ಡೇ! ಸಮುದ್ರ ಸಮುದ್ರವೆ!

## ಅನುಭವಮಂಟಪದ ಆದರ್ಶ

ಹನ್ನೆರಡನೆಯ ಶತಮಾನದಲ್ಲಿ ಎಂದರೆ ಭಕ್ತಿಭಾಂಡಾರಿ ಬಸವಣ್ಣನವರು ಅನುಭವ ಮಂಟಪವನ್ನು ನಡೆಸಿಕೊಂಡು ಬರುತ್ತಿದ್ದ ಕಾಲದಲ್ಲಿ — ಯುರೋಪಿನಲ್ಲಿ ಅನುಭವ ಮಂಟಪದ ಕಾರ್ಯವನ್ನು ಆಕ್ಸ್‌ಫರ್ಡ ಮಾಡುತ್ತಲಿದ್ದಿತು. ಅದೇ ಧರ್ಮಪಿಪಾಸೆ, ಅದೇ ಸೌಂದರ್ಯ ಆರಾಧನೆ, ಅದೇ ಸತ್ಯದ ಪೂಜೆ! ಅದಕ್ಕಿಂತ ಪೂರ್ವದಲ್ಲಿ ಆಕ್ಸ್‌ಫರ್ಡ ಊರಿತ್ತು. ನದಿ ಕವಲೊಡೆಯುವ ದಾರಿಯಲ್ಲಿ ಊರು ನೆಲೆಯೂರಿ ಬೆಳೆದು ನಿಂತಿತ್ತು. ವಾಣಿಜ್ಯ ಹಬ್ಬುವುದಕ್ಕೆ ಅನುವಾದ ರಸ್ತೆಗಳೂ ಆ ಊರಿನ ಬಳಿ ಹಾಯ್ದುಹೋಗಿದ್ದವು. ಆ ಕಾಲದಲ್ಲಿ ಅದಕ್ಕೊಂದು ವೈಶಿಷ್ಟ್ಯ ಮೂಡಿಬರುವುದಕ್ಕೆ ವೈರಾಗಿಣಿ ಫ್ರಾಯಿಡ್ಸವಾಯಿಡ್‌ಳ ದೇಗುಲ ಹೆಚ್ಚು ಕಾರಣ. ಸ್ಯಾಕ್ಸನ್ ಜನತೆ ಆಕೆಯ ಹೆಸರು ದೇಶದುದ್ದಗಲಕ್ಕೂ ಹಬ್ಬುವಂತೆ ಶ್ರಮಿಸಿದರು.

ಆಕ್ಸ್‌ಫರ್ಡಿನ ಇನ್ನೊಂದು ಹೆಸರು 'ಸತ್ಯ', ಮತ್ತೊಂದು ಹೆಸರು 'ಧರ್ಮ' ಎನ್ನುವಷ್ಟರ ಮಟ್ಟಿಗೆ ಅದು ಆ ಕಾಲದಲ್ಲಿಯೇ ಘನತೆಯನ್ನು ಹೊಂದಿತ್ತು. ಎರಡನೆಯ ಹೆನ್ರಿಯ ದೊರೆಯಕಾಲದಲ್ಲಿಯೆ ಆಕ್ಸ್‌ಫರ್ಡ ವಿಶ್ವವಿದ್ಯಾನಿಲಯದ ಶಂಕುಸ್ಥಾಪನಾಕಾರ್ಯ ನೆರವೇರಿತು. ಶೈಶವದ ಸಮಯದಲ್ಲಿ, ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭ ವೈರಾಗಿಣಿ ಮೇರಿ ದೇಗುಲದಲ್ಲಿ ನಡೆಯುತ್ತಲಿದ್ದಿತು. ಆ ದೇಗುಲದ ಸುತ್ತಮುತ್ತಲೂ ಪಾಠಶಾಲೆಗಳಿದ್ದವು. ಅಲ್ಲಿ ಆಚಾರ್ಯರು ಕುಳಿತು ಅಧ್ಯಯನ ಹೇಳುತ್ತಲಿದ್ದರು— ನಲಂದಾ, ತಕ್ಷಶಿಲಾ, ಆ ನಮ್ಮ ಐಹೊಳೆಯಲ್ಲಿ ಪಾಠಹೇಳುತ್ತಲಿದ್ದ ಹಾಗೆ! ಮೇರಿದೇಗುಲದ ಬಳಿಸಂಚರಿಸುತ್ತಿರುವಂದು ಐಹೊಳೆಯ ಪರಿಚಯವಿದ್ದ ಸ್ನಾತಕನಿಗೆ ಮೈಯಲ್ಲಿ ಮಿಂಚಿನ ಸಂಚಾರವಾಗುವುದು. ಅದೇ ಹರಿವ ನದಿ ಕಾಲ್‌ಬಳಿಯಲ್ಲಿ, ಅದೇ ದೇಗುಲ ಮೇಲೆತ್ತರದಲ್ಲಿ, ಅದೇ ತದೇಕಚಿತ್ತದಿಂದ ಪಾಠಹೇಳುವ, ಪಾಠ ಕಲಿಯುವ ಗುರು ಶಿಷ್ಯಂದಿರು! ಆದರೆ, ಐಹೊಳೆಗೆ ಇಂದೇನು ಗತಿ? ಯಾರು ಕೊಟ್ಟಶಾಪ? ಕನ್ನಡದ ಐಹೊಳೆಯ ಸರಸ್ವತಿ ಯಾರಿಗೇನನ್ಯಾಯ ಮಾಡಿದಳು!

## ರಂಗಮಂಟಪಗಳು

'ಇದೇ ವಿಶ್ವವಿದ್ಯಾನಿಲಯದ ಹೃದಯ' ಎಂದು ವೈರಾಗಿಣಿ ಮೇರಿ ದೇಗುಲವನ್ನು ಈಗಲೂ ಬೊಟ್ಟುಮಾಡಿ ತೋರಿಸುತ್ತಾರೆ. ಸ್ನಾತಕರ ಸಂಖ್ಯೆ ಹೆಚ್ಚಾದಂತೆ, ಯಾತ್ರಿಕರು ತಂಡ ತಂಡವಾಗಿ ಬರತೊಡಗಿದಂತೆಲ್ಲ 'ರಂಗಮಂಟಪ' (Hall) ಗಳು ಉದಯವಾಗತೊಡಗಿದವು. ಕನ್ನಡನಾಡಿನ ದೇಗುಲದ ರಚನೆಯಲ್ಲಿ ರಂಗಮಂಟಪರಚನೆಗೆ ಕಲಾಭಿವೃದ್ಧಿಯ ದೃಷ್ಟಿಯಿಂದಲೂ ಧಾರ್ಮಿಕದೃಷ್ಟಿಯಿಂದಲೂ ಘನ ಮನ್ನಣೆಯಿದೆ. ಅಲ್ಲಿ ಚರ್ಚೆ ನಡೆಯುತ್ತಿದ್ದವು, ಅಧ್ಯಯನ ಮುಂದರೆಯುತ್ತಲಿದ್ದಿತು, ಸತ್ಯಸೌಂದರ್ಯದ ಪಠಣ ದಿವಾರಾತ್ರಿ ಸಾಗುತ್ತಲಿದ್ದಿತು. ಆಕ್ಸ್‌ಫರ್ಡಿನಲ್ಲಿ ಮೇರಿ ದೇಗುಲದ ಸುತ್ತಣದ ಜಾಗದಲ್ಲಿ ಅಂತರಂಗ ಮಂಟಪಗಳು ಮೂಡಿಬಂದವು. ಅವುಗಳಲ್ಲಿ ನೆನೆಯಬಹುದಾದ ರಂಗಮಂಟಪಗಳೆಂದರೆ ಆಲ್ಬನ್ ಮತ್ತು ಎಡ್ಮಂಡ ಮಂಟಪಗಳು! ಆಲ್ಬನ್ ಗುರುವಿನ ಹೆಸರಿನಲ್ಲಿ ರಚಿತವಾದ ಮಂಟಪ ಈಗ ಓರಿಯಲ್ ಕಾಲೇಜಿನಲ್ಲಿ ಸೇರಿಹೋಗಿದೆ. ಎಡ್ಮಂಡ ಮಂಟಪ ಈಗ ಪ್ರತ್ಯೇಕವಾದ ವಿದ್ಯಾನಿಲಯ (College) ವಾಗಿ ರಚಿತವಾಗಿದೆ. ಈ ಮಂಟಪಗಳಲ್ಲಿ ನಡೆವ ಸರಸ್ವತೀ ಪೂಜೆಯು ಹೆಚ್ಚಳ ಹಬ್ಬದ ಹಾಗೆಲ್ಲ ಆಕ್ಸ್‌ಫರ್ಡಿನ ಹೆಸರು, ಕೀರ್ತಿ ದಾಂಗುಡಿಯಿಡತೊಡಗಿತು. ವಿದ್ಯಾಪಕ್ಷಪಾತಿಗಳು, ಸರಸ್ವತೀಪುತ್ರರು, ಕೊಡುಗೈದೊರೆಗಳು ಕನ್ನಡನಾಡಿನ ಶ್ರೀದಾನ ಚಿಂತಾಮಣಿಯಂತೆ ವಿದ್ಯಾನಿಲಯಗಳನ್ನು ಸಂಸ್ಥಾಪಿಸಲು ನಾ ಮುಂದೆ ನೀ ಮುಂದೆ ಎಂದು ಮುಂಬಂದರು. ಈ ವಿದ್ಯಾನಿಲಯಗಳ, ಅವುಗಳ ಮಧ್ಯೆ ನಿಂತಿರುವ ಬಾಡ್ಲೇನ್ ವಾಚನಾಲಯಗಳ ಸಮುದಾಯವೆ ಇಂದು ಆಕ್ಸ್‌ಫರ್ಡ ವಿಶ್ವವಿದ್ಯಾನಿಲಯವೆಂದು ಖ್ಯಾತವಾಗಿದೆ.

## ಎಂಟು ಶತಮಾನಗಳ ಹಿಂದಿನ ನಿನಾದ

ಆ ಕಾಲದಲ್ಲಿ ಆಕ್ಸ್‌ಫರ್ಡ ಊರಿನ ಸುತ್ತುಕೊತ್ತಲದ ಗೋಡೆಗಳು ಬೆನ್ನ ರಕ್ಷೆಯಾಗಿ ನಿಂತಿದ್ದವು. ಬಡಗಣದಿಂದ ತೆಂಕಣತ್ತ, ಮೂಡಲದಿಂದ ಪಡುವಣದತ್ತ ಹೋಗಿ ಮುಟ್ಟುವ ನಾಲ್ಕು ದಾರಿಗಳು ಕೂಡುವೆಡೆಯಲ್ಲಿ ಒಂದು ಕ್ರಿಸ್ತ ದೇಗುಲವಿದ್ದಿತು. ಅದಕ್ಕೆ ಕಾರಫ್ಯಾಕ್ಸ ದೇಗುಲವೆನ್ನುತ್ತಾರೆ. ನಾಲ್ಕು ರಸ್ತೆಗಳು ಬಳಿಸೇರುವ ಆ ಸಂದುಕಟ್ಟಿನಲ್ಲಿ ಉಸುರಾಡಿಸುವುದಕ್ಕೆ ಅವಕಾಶವಿಲ್ಲದ ಹಾಗೆ ಬರ ಹೋಗುವ ಜನಸಂಖ್ಯೆ ಬೆಳೆಯುತ್ತಿದ್ದಂತೆ ಆ ದೇಗುಲವನ್ನು ಕೆಳಗಿಳಿಸಬೇಕಾಯಿತು. ಸುಂದರ ಸಮಾಜ ರಚನೆಗಾಗಿ, ನಗರದ ಅಂದಚಂದಕ್ಕಾಗಿ ದೇಗುಲವನ್ನು ನೆಲಸಮ ಮಾಡುವುದಕ್ಕೆ ಯಾರ ವಿರೋಧವು ಆಗೂ ಇರಲಿಲ್ಲ, ಈಗಲೂ ಇಲ್ಲ. 'ಇಲ್ಲೊಂದು ದೇಗುಲವಿತ್ತು. ಈಗದು ನೆಲಸಮವಾಗಿದೆ. ಎಂದು ನೆನಪು ಮಾಡುವುದಕ್ಕೆ ದೇಗುಲದ ಶಿಖರ, ಬೃಹತ್ ಶಿಖರವೊಂದು ಈಗಲೂ ನಿಂತಿದೆ. ಮೂರನೆಯ ಎಡ್ವರ್ಡನ ಕಾಲದಿಂದಲೂ ಹಾಗೆಯೆ ನಿಂತಿರುವ ಆ ಶಿಖರದ ಕೆಳಗಡೆ ಹುಡುಗ ಹುಡಿಗಿಯರು 'ಭೇಟಿ'ಯ ಸ್ಥಳವನ್ನು ಈಗಲೂ ಆಯ್ದುಕೊಳ್ಳುತ್ತಾರೆ.

ಗೋಪುರದ ಗಂಟೆ ದಿನ ನಿತ್ಯವೂ ಸಂಧ್ಯಾಕಾಲದಲ್ಲಿ ನಿನದಿಸುತ್ತಿರುವುದನ್ನು ಕೇಳುತ್ತಿರುವಾಗ ಆಕ್ಸಫರ್ಡಿನ ಯಾತ್ರಿಕನು ಎಂಟು ಶತಮಾನಗಳ ಹಿಂದೆ ಬಾರಿಸುತ್ತಿರುವ ಗಂಟೆಯ ಸಪ್ಪಳವನ್ನೇ ಕೇಳುತ್ತಾನೆ. ಅದೇ ಗಂಟೆ, ಅದೇ ಸಪ್ಪಳ, ಅದೇ ಸಂದೇಶ! ಸತ್ಯಂ ಶಿವಂ ಸುಂದರಂ!

## ಸ್ಮಾರಕ ಶಿಲೆ

ಕಾರಫ್ಯಾಕ್ಸ ಗೋಪುರದ ಮುಂಗಡೆಯಲ್ಲಿ ನಿಂತರೆ ಎಡಕ್ಕೆ ತಿರುಗುವ ರಸ್ತೆ ಕಾನನ ಮಾರ್ಕೆಟ್, ಬಲಕ್ಕೆ ಇರುವುದು ಸೇಂಟ ಅಲ್‌ಡೇಟ ರಸ್ತೆ, ಇದಿರಿಗೆ ಕಾಣುವುದು 'ಹಾಯ್ ಸ್ಟ್ರೀಟ' ಕಾನನ ಮಾರ್ಕೆಟ್ ಬೀದಿಯಲ್ಲಿ ಬಹಳ ಕಾಲದ ಹಿಂದೆ ನಮ್ಮ ಸಂತೆಯಲ್ಲಿನ ಹಾಗೆ ಕಾಳು ಕಡಿ ಅಂಗಳದಲ್ಲಿ ಇರಿಸಿ ಮಾರುತ್ತಿದ್ದರು. ಆ ಬೀದಿಯಲ್ಲಿ ನಾವು ನೋಡಬೇಕಾದ ಎರಡು ಕ್ರಿಸ್ತಿ ದೇಗುಲಗಳು ಮೈಕಲ್ ಹಾಗೂ ಮಾಡ್‌ಲೇನರ ಹೆಸರಿನಲ್ಲಿ ನಿಂತಿರುವ ಭವ್ಯಾಕಾರದ ಕಟ್ಟಡಗಳು. ಮಾಡಲೇನ್ ದೇಗುಲದ ಹೊರಬಾಗಿಲಿನ ಕಮಾನು, ಅದರ ಗೋಪುರ ಹದಿನಾರನೆಯ ಶತಮಾನದಲ್ಲಿ ಪುನಃ ನಿರ್ಮಾಣವಾದುವು. ಈ ದೇಗುಲದ ಮುಂಗಡೆ ನೇರವಾಗಿ ಉತ್ತರಕ್ಕೆ ಹೋದರೆ, ಅಲ್ಲಿ 'ಸೇಂಟ ಜಾಯಿಲ್ಸ' ರಸ್ತೆ ಕೂಡುತ್ತದೆ. ಅಲ್ಲಿರುವ ಸ್ಮಾರಕಶಿಲೆ ನಮ್ಮ ವಂದನೆಗೆ ಅರ್ಹವಾದುದು. ತಾವು ನಂಬಿದ ಧರ್ಮಕ್ಕಾಗಿ, ತಾವು ನಂಬಿದ ತತ್ತ್ವಕ್ಕಾಗಿ ಮೂವರು ಧರ್ಮಗುರುಗಳು ಕ್ರ್ಯಾನ್‌ಮರ, ರಿಡ್ಲೆ ಮತ್ತು ಲ್ಯಾಟಿಮರ್ ರನ್ನು ಜೀವಂತವಾಗಿ ಸುಟ್ಟರು. ಅವರ ಸ್ಮಾರಕಕ್ಕಾಗಿ ಆ ಶಿಲೆ ನಿಂತಿದೆ! ಪೂಜ್ಯರನ್ನು ಕೊಲ್ಲುವುದು, ಕೊಂದವರನ್ನು ಅಮರತ್ವಕ್ಕೇರಿಸುವ ಕಾರ್ಯ ಆಕ್ಸಫರ್ಡಿನಲ್ಲಿ ಅವ್ಯಾಹತವಾಗಿ ಎಂದಿನಿಂದಲೂ ನಡೆದಿದೆ! ಈಗಲೂ ತಾನು ನಂಬಿದ ಸತ್ಯಕ್ಕಾಗಿ ಜೀವಕೊಡಲು ಆಕ್ಸಫರ್ಡಿನ ಅಧ್ಯಾಪಕನು ಸಿದ್ಧನಿದ್ದಾನೆ. ಅವನು ಆ ಹೋರಾಟದ ಗರಡಿಯಲ್ಲಿ ಜೀವವನ್ನು ಕೊಡುತ್ತಾನೆ. 'ಸತ್ತು ಬದುಕು' ಎನ್ನುವುದೇ ಆಕ್ಸಫರ್ಡಿನ ಆಚಾರ್ಯರ್ಕಳ ಚಿರನೂತನ ಸಂದೇಶವಾಗಿದೆ. ಆ ಸಂದೇಶವನ್ನು ಪ್ರತಿಧ್ವನಿಸುವಂತೆ 'ಸೇಂಟ ಜಾಯಿಲ್ಸ' ದಲ್ಲಿ ಸ್ಮಾರಕಶಿಲೆ ಗಾಳಿಮಳೆಗಳನ್ನು ಲೆಕ್ಕಿಸದೆ ಶತಮಾನಗಳ ಪರ್ಯಂತ ಹಾಗೆಯೆ ನಿಂತಿದೆ.

## ಮನ್ನಣೆ ಪಡೆದ ಬ್ಲೂಮೌಂಟ ಸ್ಟ್ರೀಟ

ಹುತಾತ್ಮರ ಹೆಸರಿನಲ್ಲಿ ನಿಂತಿರುವ ಆ ಸ್ಮಾರಕಶಿಲೆಯತ್ತ ಮುಖಮಾಡಿಕೊಂಡು ನಿಂತರೆ ಎಡಗಡೆಗೆ ಇರುವ ಬೀದಿ 'ಬ್ಲೂ ಮೌಂಟ ಸ್ಟ್ರೀಟ' ಈ ರಸ್ತೆಗೊಂದು ಮನ್ನಣೆ ಸಿಕ್ಕಿದೆ. ಅದರ ಒಂದು ಅಂಚಿನಲ್ಲಿ, ನಿಮ್ಮ ನೋಟಕ್ಕೆ ಬೀಳುವ ಒಂದು ಬೃಹದಾಕಾರದ ಕಟ್ಟಡ ಕಾಣುತ್ತಿದೆ. ಅದೇ 'ಅಶ್ಮೋಲಿಯನ್ ಮ್ಯುಜಿಯಮ್' ಈ ವಸ್ತು ಸಂಗ್ರಹಾಲಯ ವಾಸ್ತುಶಿಲ್ಪದ ದೃಷ್ಟಿಯಿಂದ ಅತ್ಯಂತ ಮಹತ್ವದ ಕಟ್ಟಡವಾಗಿದೆ. ಸಮಾಜವಿಜ್ಞಾನ ಶಾಸ್ತ್ರದ ಓದುಗರು ಈ ಕಟ್ಟಡದ ಒಳಗಿರುವ ವಾಸ್ತುಶಿಲ್ಪದ ಅವಶೇಷಗಳಲ್ಲಿ ಇತಿಹಾಸವನ್ನೂ, ಜನಜೀವನವನ್ನೂ ಓದಲು ಬರುತ್ತಾರೆ. ಕಟ್ಟಡದ ಇದಿರಿಗಿರುವ ಹೋಟೇಲ್ ರ್‍ಯಾಂಡಾಲ್ಫ, ಅದರ ಪಕ್ಕದ ಗೃಹ ಆಕ್ಸಫರ್ಡಿನ ಹೆಮ್ಮೆಯ ಮಂದಿರ! ಅದಕ್ಕೆ 'ಪ್ಲೇ ಹೌಸ' (ನಾಟಕಗೃಹ) ಎನ್ನುತ್ತಾರೆ. ಈ ನಾಟಕ ಗೃಹವೀಗ ಆಕ್ಸಫರ್ಡ ವಿಶ್ವವಿದ್ಯಾನಿಲಯದ ನೇತೃತ್ವದಲ್ಲಿಯೇ ನಡೆಯುತ್ತಿದೆ. ವಿಶ್ವವಿದ್ಯಾನಿಲಯದ ಹುಡುಗ ಹುಡಿಗೆಯರಿಲ್ಲಿ ನಾಟಕಮಾಡುತ್ತಾರೆ, ವಾದ್ಯ ಸಮ್ಮೇಲನ ನೆರವೇರಿಸುತ್ತಾರೆ. ನಮ್ಮ ಉದಯ ಶಂಕರ ರಾಮಗೋಪಾಲರಿಂದ ಮೊದಲ್‌ಗೊಂಡು ಯೆಹೂದಿ ಮನುಹಿಸ್ ಮುಂತಾದವರೆಲ್ಲ ಇಲ್ಲಿ ತಮ್ಮ ಕಲೆ ಪ್ರದರ್ಶಿಸಿದ್ದಾರೆ. ಈ ನಾಟಕಗೃಹದ ಕೆಳಗಡೆ ಕಾಣುವ ಆ ಭವ್ಯ ವಿದ್ಯಾನಿಲಯದ ಹೆಸರು ವೂಸ್ಟರ್ ಕಾಲೇಜು! ಸುಮಾರು ೧೮ನೆಯ ಶತಮಾನದಲ್ಲಿಯೇ ವೂಸ್ಟರ್‌ಕಾಲೇಜಿನ ಬಹುಭಾಗ ರಚಿತವಾಗಿತ್ತು. ಅದರ ಎಡಭಾಗದ ಕಟ್ಟಡ ಎರಡು ಶತಮಾನಗಳಾಚೆ ತಪೋಧನರ 'ವಿಹಾರ' 'ರಂಗಮಂಟಪ'ಗಳಾಗಿದ್ದುವು. ವೂಸ್ಟರ ಕಾಲೇಜು ಸುತ್ತಿಸುಳಿದು ಬಂದಾಗ ನಾವು ಮರೆಯಲಾರದಂತೆ ಮನಸ್ಸಿನ ಮೇಲೆ ಮೂಡಿನಿಲ್ಲುವುದೇ ಅದರ ತೋಂಟು! ವಸಂತ ಋತು ಆರಂಭದಲ್ಲಿ ವೂಸ್ಟರ ಕಾಲೇಜು ವಿದ್ಯಾರ್ಥಿಗಳು 'ಬಯಲಾಟ' ಆಡುತ್ತಾರೆ. ಆ ಆಟಗಳಿಗೆ ಹೆಚ್ಚು ಕಡಿಮೆ ಶೆಕ್ಸಪಿಯರ್ ಮಹಾಕವಿಯ ನಾಟಕಗಳನ್ನೇ ಆಯ್ದುಕೊಳ್ಳುತ್ತಾರೆ. ಮೇಲೆ ನೀಲಿಬಾನು, ಬಾನಿನಲ್ಲಿ ತೇಲುವ ಚಂದಿರ. ಕೆಳಗಡೆ ಕುತನಿಯ ಅರಿವೆಯನ್ನು ಹಾಸಿದಂತೆ ಕಂಗೊಳಿಸುವ ಹಸಿರು, ಅದರ ಮೇಲೆ ನಗುಮುಖದಿಂದ ಸುತ್ತಿಸುಳಿಯುವ ಆಕ್ಸಫರ್ಡಿನ ಹುಡುಗ ಹುಡಿಗೆಯರು, ಇದಿರಿನಲ್ಲಿ ತಿಳಿಗೊಳ. ಕೊಳದಲ್ಲಿ ನಲಿಯುವ ರಾಜಹಂಸ, ಆ ಕಾಲದಲ್ಲಿ ಆ ಸುಂದರ ವಾತಾವರಣದಲ್ಲಿ ನೀವಿದ್ದರೆ 'ಆಕ್ಸಫರ್ಡಿನಲ್ಲಿ ಹುಟ್ಟಬರುವುದೆ ಒಂದು ಪುಣ್ಯ' ಎಂದೆನ್ನಿಸುತ್ತಿದೆ!

## ಅಪೂರ್ವ ವಿದ್ಯಾಮಂದಿರ

ಬಂದ ದಾರಿಯಲ್ಲಿ ಹಿಂದಿರುಗಿ ಸೇಂಟ ಜಾಯಿಲ್ಸ ಬೀದಿಯತ್ತ ನಡೆದಾಗ ನಮಗೆ ಕಾಣುವ ಇನ್ನೊಂದು ಅಪೂರ್ವ ವಿದ್ಯಾಮಂದಿರ — ಅದೇ ಸೇಂಟ ಜಾನ ಕಾಲೇಜು! ಅದು ಮೊದಲು ಬರ್ನಾರ್ಡ ಧರ್ಮರ್ಷಿಯ ಹೆಸರಿನಲ್ಲಿ ಮೂಡಿ ಬಂದಿತ್ತು. ೧೫೫೫ ರಲ್ಲಿ ಸರ್ ಥಾಮಸ್ ವ್ಹಾಯಿಟ್ ದತ್ತಿಯನ್ನು ಕೊಟ್ಟು ಅದಕ್ಕೆ 'ಸೇಂಟ ಜಾನ್' ಎಂದು ನಾಮಕರಣ ಮಾಡಿದರು. ಸೇಂಟ ಜಾನ್ ಕಾಲೇಜಿನ ಹೂದೋಟ ರಾಮಣೀಯಕವಾಗಿದೆ. ಮೂರು ಎಕರೆ ವಿಸ್ತಾರವಾದ ಆ ತೋಟದಲ್ಲಿ ತಿರುಗಾಡಿ ಬಂದಾಗ ಕಾಯ್ದ ಮನಸ್ಸು ತಂಪಾಗಿರುತ್ತದೆ. ಆ ವಿದ್ಯಾಮಂದಿರದ ವಾಚನಾಲಯವೂ ಅಷ್ಟೇ ಬೃಹತ್ತಮವಾದುದು.

ಮತ್ತೆ ಕೆಳಗಡೆ ಸೇಂಟ ಜಾಯಲ್ಸಿನತ್ತ ನಡೆದರೆ ಕವಲೊಡೆದ ಬೀದಿಗಳನ್ನು ನೀವು ಕಾಣುತ್ತೀರಿ. ಎಡಗಡೆಗೆ ಹೋಗುವ ರಸ್ತೆ 'ಬ್ಯಾಂಬರಿ', ಬಲಗಡೆಗೆ ಹೋಗುವುದು ವುಡ್‌ಸ್ಟಾಕ್'. ಈ ಎರಡೂ ರಸ್ತೆಗಳು ಬ್ಯಾಂಬರಿ ಮತ್ತು ವುಡ್‌ಸ್ಟಾಕ್ ಊರುಗಳಿಗೆ ಹೋಗುತ್ತವೆ, ಮತ್ತು ನಾನು ಇರುವ ಮನೆಗೂ ಹೋಗುತ್ತವೆ. ನಾನಿರುವ ಮನೆ 'ಸಮರ ಟೌನಿನಲ್ಲಿ ಥಾನ್ ಕ್ಲಿಪ್ ರಸ್ತೆ ೧೪ ನಂಬರಿನ ಮನೆ.' ಅಲ್ಲಿಂದ ಬಲಗಡೆಯ ರಸ್ತೆ ಹಿಡಿದು ಹೋದರೆ ವುಡ್‌ಸ್ಟಾಕ್ ಹಳ್ಳಿಯಲ್ಲಿ ಇರುವ ಸುಂದರ 'ಬ್ಲೆನ್ ಹ್ಯಾಮ್' ಅರಮನೆಗೂ ಮುಂದಕ್ಕೆ ಅದೇ ದಾರಿಯಲ್ಲಿ ಪಯಣ ಕೈಕೊಂಡರೆ ಕಾಟ್ಸವಲ್ಡ ಪ್ರದೇಶಕ್ಕೂ. ಇನ್ನೂ ಮುಂದಕ್ಕೆ ಹೋದರೆ ಶೆಕ್ಸಪೀಯರ ಕವಿಯ ಹಳ್ಳಿಗೂ ನೀವು ಹೋಗುವಿರಿ.

ಸೇಂಟಜಾಯಿಲ್ಸ ಬಳಿ ಕವಲೊಡೆಯುವ ಬ್ಯಾಂಬರಿ ಬೀದಿಯಲ್ಲಿ ಬಲಗಡೆಗೆ ಇರುವ ರಸ್ತೆ 'ಕೀಬಲ್ ರೋಡ್' ಅಲ್ಲಿ ವಿಶ್ವವಿದ್ಯಾನಿಲಯದ ಪ್ರಖ್ಯಾತ ಗೋಷ್ಠಿ (Faculties)ಗಳಿವೆ. ಸಮಾಜ ಶಾಸ್ತ್ರ (Anthropology), ಅರಣ್ಯಶಾಸ್ತ್ರ, ಮಾನಸಶಾಸ್ತ್ರ, ಶಿಕ್ಷಣಶಾಸ್ತ್ರ, ಇತ್ಯಾದಿಗಳಿವೆ. ಆ ಬೀದಿಯ ಬಲಗಡೆಗೆ ಇರುವದು ಕೀಬಲ್ ಕಾಲೇಜು, ಎದುರುಗಡೆ ಕಾಣುವುದು ಯುನಿವ್ಹರ್ಸಿಟಿ ಮೈದಾನ ಇನ್ನು ಮುಂಗಡೆಗೆ ಈಚೆಗೆ ಪಕ್ಕದಲ್ಲಿ ಕಾಣುವುದು ವಿಶ್ವವಿದ್ಯಾನಿಲಯ ವಸ್ತುಸಂಗ್ರಹಾಲಯ. ಕೀಬಲ್ ಕಾಲೇಜಿನ ದೇಗುಲದಲ್ಲಿ ನೀವು ನೋಡಬೇಕಾದ ಒಂದು ಚಿತ್ರವಿದೆ. ಅದೆಂದರೆ ಹೋಮನ್ ಹಂಚಿನ ಸುಪ್ರಸಿದ್ಧ ಚಿತ್ರ "ವಿಶ್ವದ ಬೆಳಕು" (The light of the world).

## ವಿಶ್ವವಿದ್ಯಾನಿಲಯ ವಸ್ತುಸಂಗ್ರಹಾಲಯ

ಯುನಿವ್ಹರ್‌ಸಿಟಿ ಮ್ಯುಜಿಯಂನಲ್ಲಿ ನಾನು ಎರಡು ವರುಷ ತಿರುಗಾಡಿದ್ದೇನೆ, ಓದಿದ್ದೇನೆ, ನನ್ನನ್ನೇ ನಾನು ಮರೆತು ಅಲ್ಲಿನ ಪಂಡಿತರನ್ನು ಓಲಯಿಸಿದ್ದೇನೆ. ಈ ಮ್ಯುಝಿಯಂ ಕ್ಯೂರೇಟರ ಹೆಸರು "ಟಿ. ಕೆ. ಪೆನಿಮನ್"

ವರುಷಕ್ಕೆ ಅವರಿಗೆ ೫೦ ಸಾವಿರ ರೂ. ಸಂಬಳ ಬರುತ್ತದೆ. ಪೆನಿಮನ್ ಇರುವ ಮನೆ ನಾನಿರುವ ಥಾರ್ನ್ಕ್ಲಿಪ್ ರಸ್ತೆಯಲ್ಲಿದೆ. ಮುಂಜಾನೆ ಹತ್ತಕ್ಕೆ ಮ್ಯೂಝಿಯಂಗೆ ಬಂದವರು ಸಂಜೆ ಎಂಟಕ್ಕೆ ಅವರು ಮನೆಗೆ ಹೋಗುತ್ತಾರೆ. ಮಧ್ಯಾಹ್ನ ಅವರು ಊಟ ಮಾಡುವುದು ಒಂದು ಚಿಕ್ಕ ಕೆಫೆ — ಅದು ಬಡತನಕ್ಕೆ ಪಕ್ಕದವರಿಗೆ ಆಶ್ರಯಕೊಡುವ ಕೆಫೆ. ಅಲ್ಲಿ ಪೆನಿಮನ್ ಹೋಗುತ್ತಾರೆ. ಅವರನ್ನು ನೀವಲ್ಲಿ ಆಕಸ್ಮಾತ್ ಕಂಡರೆ ನೀವವರಿಗೆ 'ನಮಸ್ಕಾರ' ಹೇಳಿದರೆ ಪೆನಿಮನ್ ಅದನ್ನು ಸ್ವೀಕರಿಸುವುದಿಲ್ಲ. ನನ್ನಷ್ಟಕ್ಕೆ ನನ್ನನ್ನು ಬಿಡಿರಿ. ನನ್ನನ್ನು ಗುರುತಿಸುವ ಅವಶ್ಯಕತೆ ಇಲ್ಲ. ಇದು ನನ್ನ ಊಟದ ವೇಳೆ. ಕೇವಲ ನನ್ನ ವಿಶ್ರಾಂತಿಗಾಗಿ ಇರಿಸಿದ ಜಾವ. ಯಾರ ನೋಟವೂ ನನಗೀಗ ಬೇಡ! ಎಂಬರ್ಥದ ವಿವರಣೆಯನ್ನು ಮೌನದಿಂದಲೇ ನಿಮಗೆ ಅವರು ತಿಳಿಸುತ್ತಾರೆ. ಸಾಯಂಕಾಲದಲ್ಲಿಯೂ ಅವರು ಹಾಗೇನೆ! ಮನೆಗೆ ಹೋಗುವಾಗ ಅಲ್ಲಿನ ಒಂದು 'ಬಾರಿ' ನಲ್ಲಿ ಕುಳಿತು ಒಬ್ಬರೇ ಒಂದೆರಡು ಬೀರ ಕುಡಿದು ಮನೆಗೆ ನಡೆದುಕೊಂಡೇ ಹೋಗುತ್ತಾರೆ. ಅವರ ಉಡುಗೆ ತೊಡುಗೆ, ಅವರ ಇರುವಿಕೆ, ಅವರ ಮನೆ ಎಲ್ಲಾ ತುಂಬ ಸರಳವಾಗಿವೆ. ವರುಷದುದ್ದಕ್ಕೂ ಒಂದೇ ಕೋಟು, ಒಂದೆರಡು ಚಣ್ಣ ಇಷ್ಟೇ ಉಪಯೋಗಮಾಡುತ್ತಿರುತ್ತಾರೆ ಪೆನಿಮನ್‌ರಿಗೆ ಈಗ ಸುಮಾರು ೬೫ ವರುಷ. ಅವರಿಗೆ ವಯಸ್ಸು ಬೆಳೆದಂತೆಯೆ ಪಾಂಡಿತ್ಯವೂ ಬೆಳೆದಿದೆ. ಅವರು ಬರೆದಿರುವ "ಸಮಾಜಶಾಸ್ತ್ರದ ನೂರುವರುಷ" (Hundred years of Anthropology) ಅವರ ಮಾಗಿದ ವಯಸ್ಸಿಗೆ, ಪರಿಪಕ್ವವಾದ ಪಾಂಡಿತ್ಯದ ಸಾಕ್ಷಿ. ಪೆನಿಮನ್ ಮದುವೆಯಾಗಿಲ್ಲ!

ಕುಮಾರಿ ಬ್ಲ್ಯಾಕವುಡ್ ಮ್ಯುಜಿಯಮ್‌ನಲ್ಲಿ ನಾವು ಕಾಣಬೇಕಾದ ಇನ್ನೊಂದು ಸರಳ ಜೀವ. ಅವರಿಗೂ ಈಗ ೫೫ ವರುಷ ತುಂಬುತ್ತ ಬಂದವು. ಮದುವೆಯಾಗದ ಬ್ಲ್ಯಾಕವುಡ್ ತಮ್ಮ ದೀರ್ಘಾಯುಷ್ಯವನ್ನೇ ಮ್ಯುಜಿಯಮ್ ಕಟ್ಟುವಲ್ಲಿ ಸುರುವಿದ್ದಾರೆ. ಜಗತ್ತಿನ ಎಂಟೂ ದಿಕ್ಕಿನಲ್ಲಿ ತಿರುಗಿ 'ಕಾಡು ಜನಾಂಗ' 'ಅನಾಗರಿಕ ಜನಾಂಗ' ದ ಬಳುವಳಿಯಾಗಿರುವ ಸಂಸ್ಕೃತಿಯನ್ನು ವಿಸ್ತರಿಸುವ ಸಾಧನ ಸಾಮಗ್ರಿಗಳನ್ನು ಸಂಗ್ರಹಿಸುವಲ್ಲಿ ಬ್ಲ್ಯಾಕ್‌ವುಡ್ ತಮ್ಮ ಜೀವನವನ್ನೇ ಧಾರೆ ಎರೆದಿದ್ದಾರೆ. ಆಸ್ಟ್ರೇಲಿಯದ ಕಾಡುಜನಾಂಗವಾದ 'ಅರುಂಟಾ' ಜನತೆಯ ಸಂಸ್ಕೃತಿಯಲ್ಲಿ ಮಹತ್ತ್ವದ ವಸ್ತುವಾದ 'ಬೂಮರ್‍ಯಾಂಗ' (ಕವಣೆಗಲ್ಲು) ಕೈಯಲ್ಲಿ ಹಿಡಿದು ಅದನ್ನು ತಿರುಗಿಸುತ್ತ ವಿವರಣೆ ಕೊಡುತ್ತಿರುವ ಬ್ಲ್ಯಾಕವುಡ್‌ರನ್ನು ಒಮ್ಮೆ ಕಂಡರೆ ಮರೆಯುವುದು ಕಷ್ಟ! ಆಕೆಯ ನಗು ಮಕ್ಕಳ ನಗು, ಆಕೆಯ ಭೌಗೋಲಿಕ ವಿಜ್ಞಾನ ತಪೋಧನರ ಭಾಗ್ಯಸಂತರ, ಆಕೆಯ ಮನಸ್ಸು ವಿರಾಗಿಣಿಯ ನಿರ್ಮಲ ಮನಸ್ಸು! ಆಕೆಯ ವ್ಯಾಸಂಗ ಮತ್ತು ಮೃದು ಹೃದಯದ ಕಥನದಲ್ಲಿ ಆಕ್ಸಫರ್ಡಿನ ಗುರುವಿನ ಕಥನದ ಇತಿಹಾಸ 'ನೆಲದ ಮರೆಯ ನಿದಾನ' ದಂತೆ ಕಂಗೊಳಿಸುವುದು!

## ಬ್ಲೇಕ್–ವಿಲ್ಕಿನ್ಸರ ಕಾವ್ಯಸ್ಫೂರ್ತಿಯ ಮಂದಿರ

ಪಕ್ಕದ ರ್‍ಯಾಡ್‌ಕ್ಲಿಪ್ ಸಾಯಿನ್ಸ ಲಾಯಬ್ರರಿ, ಸೌಥ ಪಾರ್ಕ ಬೀದಿಯಲ್ಲಿನ ರೋಡ್ಸ ಮಂದಿರಗಳನ್ನು ನೋಡಿಕೊಂಡು ಮತ್ತೆ ಪಾರ್ಕ ರಸ್ತೆಯಲ್ಲಿ ಬಂದಾಗ ಮುಂದಕ್ಕೆ ಕಾಣುವ ವಿದ್ಯಾಮಂದಿರವೇ 'ವಾಧ್ಯಾಮ್ ಕಾಲೇಜು'. ಈ ವಿದ್ಯಾನಿಲಯಕ್ಕೆ ೧೭ನೆಯ ಶತಮಾನದಲ್ಲಿ ನಿಕೋಲಸ್ ವಾಧ್ಯಾಮ್ ಮತ್ತು ಅವರ ಹೆಂಡತಿ ಡೊರೋತಿ ದತ್ತಿ ಕೊಟ್ಟು ಈ ಮಂದಿರವನ್ನು ಕಟ್ಟಿದಂದಿನಿಂದ ಅದರ ರಚನೆಯಲ್ಲಿ ಹೇಳಿಕೊಳ್ಳುವ ಬದಲಾವಣೆಯಾಗಿಲ್ಲ. ವಾಧ್ಯಾಮ್ ಮಂದಿರದ ರಂಗಮಂಟಪ ಚಿರನೂತನವೆಂಬಂತೆ ಈಗಲೂ ಕಂಗೊಳಿಸುತ್ತಿದೆ. ಈ ವಿದ್ಯಾಮಂದಿರದಲ್ಲಿ ಸರ್ ಕ್ರಿಸ್ಟೋಫರ್ ರೆನ್, ಕ್ರಾಮವೆಲ್ ದೊರೆಯ ಅಳಿಯ ಓದಿದರು. ಕವಿ ಆ್ಯಡ್ಮಿರಲ್ ಬ್ಲೇಕ್ ಮತ್ತು ಜಾನ್ ವಿಲ್ಕಿನ್ಸ್ ತಮ್ಮ ಕಾವ್ಯ ಸೃಷ್ಟಿಯ ಸ್ಫೂರ್ತಿಯನ್ನು ಪಡೆದುದು ಇಲ್ಲಿಯೇ! ಅವರ ಭಾವಚಿತ್ರಗಳನ್ನು ಈ ವಿದ್ಯಾಮಂದಿರದ ಭಿತ್ತಿಗಳಲ್ಲಿ ನೀವು ಇಂದಿಗೂ ಕಾಣುವಿರಿ!

## ಆಕ್ಸಫರ್ಡಿನ ಮಿದುಳು

ಅನತಿದೂರದಲ್ಲಿ — ಎಂದರೆ ಹತ್ತು ಹೆಜ್ಜೆ ಮುಂದಿಟ್ಟು ಬಂದರೆ — ಅಲ್ಲಿ ಬ್ರಾಡ್ ಸ್ಟ್ರೀಟ ಕಾಣುತ್ತದೆ. ಆಕ್ಸಫರ್ಡಿನಲ್ಲಿ 'ಬ್ರಾಡ್ ಸ್ಟ್ರೀಟ ಎಲ್ಲಿದೆ?' ಎಂದು ಕೇಳುವುದೆ ಒಂದು ಪ್ರಮಾದ. ಅದು ಆಕ್ಸಫರ್ಡಿನ 'ಬ್ರೇನ್' (ಮಿದುಳು). ಅಲ್ಲಿ ವಿಶ್ವವಿಖ್ಯಾತಿಯನ್ನು ಪಡೆದ ವಾಚನಾಲಯಗಳಿವೆ. ಹಳೆಯ 'ಬಾಡ್ಲೇನ್' ಹೊಸ 'ಬಾಡ್ಲೇನ್' ವಾಚನಾಲಯಗಳು, 'ಇಂಡಿಯನ್ ಇನ್‌ಸ್ಟಿಟ್ಯೂಟ ವಾಚನಾಲಯ' ಗಳು ಅದ್ಭುತವಾಗಿವೆ! ಭಾರತೀಯರ ಸಮಗ್ರ ಜೀವನದ ಮೇಲೆ 'ಕ್ಷ' ಕಿರಣ ಹಿಡಿಯುವುದಕ್ಕೆ ಬೇಕಾಗುವ ಎಲ್ಲ ಸಾಹಿತ್ಯ ಸಾಧನ ಇಲ್ಲಿವೆ. ಇಲ್ಲಿಯೇ ಘನವಿದ್ವಾಂಸ ಪ್ರೊಫೆಸರ್ ಬರೋ ಓದುತ್ತಾರೆ, ಬರೆಯುತ್ತಾರೆ, ಪಾಠ ಹೇಳುತ್ತಾರೆ! ಹಳೆಯ ಬಾಡ್ಲೇನ್ ವಾಚನಾಲಯದಲ್ಲಿ ಜಗತ್ತಿನಲ್ಲಿ ಪ್ರಕಟವಾಗುವ ಎಲ್ಲ ಪ್ರಸಿದ್ಧ ಹೊತ್ತಿಗೆಗಳೂ ಸಿಗುತ್ತವೆ. ಯುದ್ಧ ಕಾಲದಲ್ಲಿ ಈ ವಾಚನಾಲಯಕ್ಕೆ ಧಕ್ಕೆ ಹತ್ತಬಾರದೆಂದು ನೆಲಮನೆ ಕಟ್ಟಿ ಅಲ್ಲಿ ಗ್ರಂಥ ಸಂಗ್ರಹಿಸಿರುತ್ತಾರೆ. ಮೇಲೆ, ವಾಚನಾಲಯದಲ್ಲಿ ಓದುವ ಸಾವಿರಾರು ವಿದ್ಯಾರ್ಥಿಗಳಿಗೆ ಕೆಳಗಿನ ಮನೆಯಿಂದ ಯಂತ್ರದ ತೊಟ್ಟಿಲದ ಮೂಲಕ ಪುಸ್ತಕಗಳು ಮೇಲೆ ಬರುತ್ತವೆ. ಈ ಗ್ರಂಥಾಲಯದ ಸಮಗ್ರ ಹೊತ್ತಗೆಗಳನ್ನು ಪರೀಕ್ಷಿಸುವುದಕ್ಕೆ ಒಂದು ಜೀವಮಾನ ಸಾಲಲಾರದೆನ್ನಿಸುತ್ತದೆ. ಆಕ್ಸಫರ್ಡಿನ ಸಂಶೋಧಕವಿದ್ಯಾರ್ಥಿ ಬಾಡ್ಲೇನ್ ವಾಚನಾಲಯದಲ್ಲಿ ಒಂದೆರಡು ವರುಷ ಕಾಲ ಕಳೆದು ಬಂದ ಮೇಲೆ ಇನ್ನುಳಿದ ವಾಚನಾಲಯಗಳು ರವಿಯ ಮುಂದೆ ಬೆಳಗುವ ಹೊನ್ನಿಯ ಹುಳದಂತೆ ತೋರುವಲ್ಲಿ ಏನು ಸಂದೇಹ!

ಹಳೆಯ ಬಾಡ್ಲೆನ್‌ವಾಚನಾಯಲಕ್ಕೆ ಹೊಂದಿಕೊಂಡಿರುವ ಆ ಕಟ್ಟಡ 'ಕ್ಲ್ಯಾರೆಂಡನ್ ಮಂದಿರ' ಅಲ್ಲಿ ವಿಶ್ವವಿದ್ಯಾನಿಲಯದ ಆಡಳಿತದ ಕಚೇರಿ ಇದೆ. ಅದರ ಬಳಿಯೆ "ಶೆಲ್ಡೋನಿಯನ್ ಥಿಯೆಟರ್" ಇದೆ. 'ಶೆಲ್ಡೋನಿಯನ್ ಥಿಯೇಟರ್' ಎಂದೆ! ಎಂದರೆ ಅದು ನಾಟಕಗೃಹವಲ್ಲ! ಅದು "ಘಟಿಕೋತ್ಸವ ಮಂದಿರ" ಅಲ್ಲಿ ಆಕ್ಸಫರ್ಡಿನ ಪದವೀಧರನು ತನ್ನ ಪದವಿಯನ್ನು ಸ್ವೀಕರಿಸುತ್ತಾನೆ. ಅದನ್ನು ಕಟ್ಟಿಸಿದವರು ಆರ್ಕಬಿಶಪ್ ಶೆಲ್ಡೋನಿಯನ್. ಈ ಘಟಿಕೋತ್ಸವ ಮಂದಿರ ನಿರ್ಮಾಣವಾಗುವುದಕ್ಕಿಂತ ಪೂರ್ವದಲ್ಲಿ, ಸಮಾರಂಭಗಳು ವೈರಾಗಿಣಿ ಮೇರಿದೇಗುಲದಲ್ಲಿ ನಡೆಯುತ್ತಿದ್ದವು. ಜಗದ್ಗುರು ಶೆಲ್ಡೋನಿಯನ್ ಈ ಘಟಿಕೋತ್ಸವವನ್ನು ಕಟ್ಟಿದಂದಿನಿಂದ (೧೬೬೯) ಜಗತ್ತಿನ ಎಂಟೂ ದಿಕ್ಕಿನಿಂದ ಪಂಡಿತರಿಲ್ಲಿಗೆ ಬಂದು ತಮ್ಮ ಪಾಂಡಿತ್ಯ ಪ್ರದರ್ಶಿಸಿ ಗೆಲವು ಬಿರುದುಗಳನ್ನು ಪಡೆದಿದ್ದಾರೆ! ಇಲ್ಲಿ ಪದವಿಯನ್ನು ಸ್ವೀಕರಿಸುವವನು ಆದಿತೀರ್ಥಂಕರ ಪುರಾಣದಲ್ಲಿ ದಿಗ್ವಿಜಯಕ್ಕೆಂದು ಹೊರಟು ಮೇರು ಪರ್ವತದಲ್ಲಿ ಬಂದಿಳಿದ ಭರತ ಚಕ್ರವರ್ತಿ ಪಡುವ ಕಷ್ಟವನ್ನೇ ಪಡುತ್ತಾನೆ! ಜಗತ್ತನ್ನೇ ಗೆಲಿದು ಮೇರುಪರ್ವತವನ್ನೇರಿ ಅಲ್ಲಿ ತನ್ನ ದಿಗ್ವಿಜಯ ಸ್ಮಾರಕಶಿಲೆಯನ್ನೂರಲೆಳಸಿದ ಚಕ್ರವರ್ತಿ ಅವಾಕ್ಕಾದನು! ಶಿಲೆಯನ್ನೂರಲಿಕ್ಕೆ ತಾಣವೇ ಅಲ್ಲಿಲ್ಲ! ಅವನಿಗಿಂತಲೂ ಪೂರ್ವದಲ್ಲಿ ಚಕ್ರವರ್ತಿಗಳು ದಿಗ್ವಿಜಯ ಮಾಡಿ ಸ್ಮಾರಕ ಶಿಲೆಗಳನ್ನೂರಿ ಹೋಗಿದ್ದರು. ಅಂತಹ ಶಿಲೆಗಳಿಂದಲೇ ತುಂಬಿದ ಆ ಪರ್ವತದ ಶ್ರೇಣಿಯಲ್ಲಿ ಭರತಚಕ್ರವರ್ತಿಗಳಿಗೆ ಇಂಬಿರಲಿಲ್ಲ. ಅದೇ ಕಷ್ಟವನ್ನು ಪದವಿಯನ್ನು ಪಡೆಯುವ ವಿದ್ಯಾರ್ಥಿಯೂ ಅನುಭವಿಸುತ್ತಾನೆ. ಶೆಲ್ಡೋನಿಯನ್ ಥಿಯೇಟರ್ ಪ್ರಪಂಚದ ಪಾಂಡಿತ್ಯಕ್ಕೆ ಆಹ್ವಾನವಾಗಿದೆ!

## ಅತ್ಯಂತ ಪ್ರಾಚೀನ ವಿದ್ಯಾಮಂದಿರ

ಬ್ರಾಡ್ ಸ್ಟ್ರೀಟನಲ್ಲಿ ಬಲಗಡೆ ಟ್ರಿನಿಟಿ ಬೇಲಿಯಲ್ ಕಾಲೇಜುಗಳು, ಎಡಗಡೆ ಟರ್ಲ ಬೀದಿಯಲ್ಲಿ ಎಕ್ಷಿಟರ ಮತ್ತು ಜೀಸಸ್

ಲಿಂಕನ್ ಕಾಲೇಜುಗಳು ಇವೆ. ಟ್ರಿನಿಟಿಯಲ್ಲಿ ನ್ಯೂಮನ್ ಕವಿ ಓದಿದರು. 'ಕರುಣಾಳು ಬಾ ಬೆಳಕೆ' ಎಂದು ಹಾಡಿದ ಆ ಕವಿಗೆ ಗೌರವ ವನ್ನು ಟ್ರಿನಿಟಿ ಕಾಲೇಜು ಅತ್ಯಂತ ಪ್ರೀತಿ ಯಿಂದ ಸಲ್ಲಿಸುತ್ತಿದೆ. ಕವಿಯ ಪುತ್ಥಳಿಯನ್ನು ಕಾಲೇಜಿನ ಹೂದೋಟದಲ್ಲಿ ಸ್ಥಾಪಿಸಿದ್ದಾರೆ. ಅದರ ಪಕ್ಕದಲ್ಲಿ, ಮೇಗಡೆ ಆ ಖೋಲಿಯಲ್ಲಿ ನ್ಯೂಮನ್ ಕವಿ ವಿದ್ಯಾರ್ಥಿ ದಿನಗಳಲ್ಲಿ ವಾಸ ವಾಗಿದ್ದರು. ಬೇಲಿಯಲ್ ಕಾಲೇಜು ಸ್ಥಾಪಿತ ವಾದ ಕಾಲ ೧೨೬೩. ಢರ್‌ಹ್ಯಾಮ್ ನಗರದ ಕೋಟೆ ನಾಯಕನ ಮಡದಿ ದೇವೋರ್‌ಗಿಲಾ ಬೇಲಿಯಲ್ ಆ ಕಾಲೇಜಿಗೆ ಉಂಬಳಿ ಹಾಕಿ ಕೊಟ್ಟಳು. ಆಕ್ಸಫರ್ಡಿನ ಅತ್ಯಂತ ಪ್ರಾಚೀನ ವಿದ್ಯಾಮಂಧಿರಗಳಲ್ಲಿ ಬೇಲಿಯಲ್ ಒಂದು! ಈ ವಿದ್ಯಾಮಂದಿರದಲ್ಲಿ ಬ್ರಿಟನ್ನಿನ ಶ್ರೇಷ್ಠ ಕವಿ ಗಳೂ ಸಾಹಿತಿಗಳೂ ರಾಜಕಾರಣಿಗಳೂ ಓದಿ ದ್ದಾರೆ. ರಾಬರ್ಟ ಬ್ರೌನಿಂಗ, ಆಸ್ಕರ ವಾಯಿಲ್ಡ, ಆ್ಯಡಾಮ್ ಸ್ಮಿತ್, ಮಾಥು ಅರ್ನಾಲ್ಡ, ಆ್ಯಂಡ್ರ್ಯು ಲ್ಯಾಂಗ, ಲಾರ್ಡ ಆ್ಯಸ್ಕ್ವಿತ್, ಬೆಂಜಾಮಿನ್ ಜೊಲೆಟ್ ಬೇಲಿಯಲ್ ವಿದ್ಯಾರ್ಥಿಗಳು!

ಟ್ರಿನಿಟಿ ಕಾಲೇಜಿನ ಇದಿರಿರುವ ಟಲನ ಅಡ್ಡಬೀದಿಯಲ್ಲಿ ನಡೆದು ಮುಂಬಂದರೆ ಎಕ್ಷೀಟರ್! ೧೩೧೪ ರಲ್ಲಿ ಈ ಕಾಲೇಜಿನ ಸಂಸ್ಥಾಪನೆ ಆಯಿತು. ಎಕ್ಷೀಟರ್ ನಗರದ ಧರ್ಮಗುರುಗಳು ಅದನ್ನು ಆರಂಭಿಸಿದರು. ೧೬೧೮ ಅದರ ರಂಗಮಂಟಪವನ್ನು ಸರ ಜಾನ್ ಆಕ್ಲಂಡ ಕಟ್ಟಿಸಿದರು. ಎಕ್ಷೀಟರ್ ಬಳಿ ಇರುವ ಜೀಸಿಸ್ ಕಾಲೇಜನ್ನು ೧೫೭೧ ರಲ್ಲಿ ವೇಲ್ಸ ದೇಶದಿಂದ ಬರುವ ವಿದ್ಯಾರ್ಥಿಗಳಿ ಗೆಂದು ಕಟ್ಟಿಸಲಾಯಿತು. ಜೀಸಸ್ ವಿದ್ಯಾ ಮಂದಿರದ ಒಳಭಿತ್ತಿಯ ಮೇಲೆ ರಾಣಿ ಎಲಿಝಾಬೆತ್, ಒಂದನೆಯ ಹಾಗೂ ಎರಡ ನೆಯ ಚಾರ್ಲಸ್ ದೊರೆ ಮುಂತಾದವರ ಚಿತ್ರ ಗಳಿವೆ. ಈ ಕಾಲೇಜಿನಲ್ಲಿ ಓದಿದವರಲ್ಲಿ ಗಣ್ಯ ರಾದವರೂ ಹಲವರು 'ವೇಲ್ಸದ ದೇವದೂತ' ನೆಂದು ಪ್ರಖ್ಯಾತನಾಗಿರುವ ಪಾವೆಲ್, ಇತಿ ಹಾಸಕಾರ ಜಾನರೀಸ ಇಲ್ಲಿಯೇ ಓದಿದರು. ಲಿಂಕನ್ ಕಾಲೇಜಿನಲ್ಲಿ ಮಾರ್ಕ ಪ್ಯಾಟಿಸನ್, ಡೆವಿನಂಟ್ ವ್ಯಾಸಂಗ ಮಾಡಿದ್ದರು.

## ಆಕ್ಸಫರ್ಡಿನ ಹೃದಯ

ಈಗ ನಾವು 'ಹಾಯ್ ಸ್ಟ್ರೀಟ' ಗೆ ಬರುತ್ತೇವೆ. ಆಕ್ಸಫರ್ಡಿನಲ್ಲಿ 'ಹಾಯಸ್ಟ್ರೀಟ' ಎಲ್ಲಿ? ಎಂದು ಕೇಳುವುದು ಇನ್ನೊಂದು ಪ್ರಮಾದ. ಏಕೆಂದರೆ ಅದು ಆಕ್ಸಫರ್ಡಿನ ಹೃದಯ (Heart). 'ಹಾಯ್' ಬೀದಿಗೆ ಹೊಂದಿ 'ಆಲ್ ಸೇಂಟ್ಸ' ದೇಗುಲ, ರ್‍ಯಾಡ್‌ಕ್ಲಿಪ್ ಚೌಕೋನ, ರ್‍ಯಾಡ್‌ಕ್ಲಿಪ್ ಕ್ಯಾಮರಾ, ಬ್ರೇಜ ನೋಜ, ಹರ್ಟಫರ್ಡ, ನ್ಯೂ ಕಾಲೇಜು, ಎಡ್ಮಂಡಹಾಲ್, ಕ್ವೀನ್ಸ, ಯುನಿವ್ಹರ್ಸಿಟಿ, ಆಲ್ ಸೋಲ್ಸ, ಓರಿಯಲ್, ಕಾರ್ಪಸ್‌ಕ್ರಿಸ್ತಿ, ಮರ್ಟನ್, ಪೆಂಬ್ರುಕ್ ಕಾಲೇಜುಗಳಿವೆ! ಜೀವನದ ಹಲವಾರು ರಂಗಗಳಲ್ಲಿ ಯೋಧ ರನ್ನು, ಸೇನಾನಿಗಳನ್ನು ತಯಾರು ಮಾಡುವು ದಕ್ಕೆ ನಾ ಮುಂದೆ ನೀ ಮುಂದೆ ಎಂದು ಸ್ಪರ್ಧಿ ಸುವ ಗರಡಿಗಳಂತೆ ಒಂದೊಂದು ವಿದ್ಯಾ ಮಂದಿರವೂ ಸ್ಪರ್ಧಿಸುವಂತೆ ಯಾತ್ರಿಕನ ಕಣ್ಣಿಗೆ ಅವು ಗೋಚರವಾಗುವವು. ವಿದ್ಯಾ ಮಂದಿರದ ಗೋಪುರಗಳು ನಕ್ಷತ್ರದ ಎಣಿಕೆ ಯನ್ನು ಮಾಡುವುದಕ್ಕೆ ಆಗ ಸಕ್ಕೇರ ತೊಡಗಿದಂತೆ ವೇದ್ಯವಾಗುತ್ತದೆ.

ಮಾಡಲೇನ್ ಅತ್ಯಂತ ಸುಂದರ ವಿದ್ಯಾ ಮಂದಿರ. ಬೇಸಗೆಯ ಸಂಜೆ ಓದು ಮುಗಿಸಿ ಆಕ್ಸಫರ್ಡಿನ ಪಶ್ಚಿಮದತ್ತ ಇರುವ ಮನೆಯ ಕಡೆಗೆ ಮರಳಿ ಹೊರಟ ವಿದ್ಯಾರ್ಥಿಗೆ ಮಾಡ ಲೇನ್ ಮಂಜಿನ ಲೋಕದಲ್ಲಿ ಮಲ್ಲಿನ ಬಟ್ಟೆ ಯನ್ನುಟ್ಟುಕೊಂಡು ಬಳುಕುವ ಲಾಸ್ಯ ದೇವತೆಯಂತೆ ಕಾಣುತ್ತದೆ. ಇಡಿಯ ಮಂ- ದಿರವೇ ವಿದ್ಯುದ್ದೀಪದ ಬೆಳಗಿನಲ್ಲಿ ಲಕಲಕ ಹೊಳೆಯುತ್ತಿರುತ್ತದೆ. ಆಕಾಶವೆ ಕಮಾನು. ಮಾಡಲೇನ್ ಗೋಪುರಗಳೇ ಚಟ್ಟು ಹೊಡೆ ದಂತೆ ಮಿನುಗುವ ನಕ್ಷತ್ರಗಳು.' ಅವುಗಳ ಕೆಳಗಡೆ, 'ಚಾರವೆಲ್' ನದಿಯ ಮೇಲೆ ಹಿಮದಿಂದ ಮಾಡಿದ ಅರಮನೆಯೊಂದು ತೇಲುವ ಹಾಗೆ ಮಾಡಲೇನ್ ವಿದ್ಯಾದೇವತೆ ನೋಟಕ್ಕೆ ಅಂದವಾಗಿ ಮೆರೆಯುತ್ತಾಳೆ! ಆಕೆಯ ಉಡಿಯಲ್ಲಿ ಬೆಳೆದವರು ವೂಲ್ಸೇ' ಹ್ಯಾಂಪಡನ್, ಆ್ಯಡಿಸನ್!

## ಪ್ರಭಾವಿ ಭವ್ಯತೆ

"ಹಾಯ್ ಸ್ಟ್ರೀಟ"ನಲ್ಲಿ ಹಾಯ್ದುಹೋಗು ವಾಗ ನಮಗೆ ನಾವರಿಯದಂತೆ ಆಕ್ಸಫರ್ಡಿನ ಭವ್ಯತೆಗೆ ಮರುಳಾಗಿ ಹೋಗಿರುತ್ತೇವೆ. ಮನ ಸ್ಸಿನ ಮೇಲೆ ಅಷ್ಟೊಂದು ಪರಿಣಾಮಕಾರಿ ಯಾದ ಪ್ರಭಾವ ಮೂಡಿರುತ್ತದೆ. "ಇದೇ ರಸ್ತೆಯಲ್ಲಿ ಬ್ರಿಟನ್ನಿನ ರಾಜರಾಣಿಯರು ಈ ವಿದ್ಯಾನಿಲಯಗಳನ್ನು ಕಟ್ಟಿಸುವುದಕ್ಕೆ ತಿರು ಗಾಡಿದರು. ಆಲ್‌ಫ್ರೆಡ್ ದಿ ಗ್ರೇಟ ಯುನಿವ್ಹ- ರ್ಸಿಟಿ ಕಾಲೇಜ ಕಟ್ಟಿಸಿದ, ಎರಡನೆಯ ಎಡ್ವರ್ಡ ಓರಿಯಲ್ ಸ್ಥಾಪಿಸಿದ ೧ ನೆಯ ಜೇಮ್ಸ ಪೆಂಬ್ರುಕ್ ಬೆಳಸಿದರು, ಎಂಟನೆಯ ಹೆನ್ರಿ ಮತ್ತು ವೂಲ್ಸೆ ಸಂಸ್ಥಾಪಿಸಿದರು, ಅಂತಹ ದೊರೆಗಳಿಂದ ಧರ್ಮದಾನಿಗಳಿಂದ, ಧರ್ಮ ಗುರುಗಳಿಂದ ಸಂಸ್ಥಾಪಿತವಾದ ಈ ಪುಣ್ಯ ಭೂಮಿಯ ಮೇಲೆ ಕವಿಗಳು ತತ್ತ್ವಜ್ಞಾನಿ ಗಳು, ರಾಜರ್ಷಿಗಳು, ರಾಜಕಾರಣ ಧುರಂ- ಧರರೆಲ್ಲ ಅಲೆದಾಡಿದರು-ವಿದ್ಯಾರ್ಜನೆಗಾಗಿ ಆತ್ಮದಭಿವೃದ್ಧಿಗಾಗಿ, ಲೋಕಸಂಗ್ರಹಕ್ಕಾಗಿ! ರ್‍ಯಾಲೆ, ಥಾಮಸ್ ಮೋರ್, ನ್ಯೂಮನ್, ಡಾ. ಅರ್ನಾಲ್ಡ, ಕೀಬಲ್‌ರು 'ಓರಿಯಲ್ಲ' ನಲ್ಲಿ, ಜರ್ಮಿ ಟೇಲರ್, ರ್‌ಫಸ್ಟ್ಯಾಕ್ರಿ ರೆನ್ 'ಆಲ್‌ಸೋಲ್ಸಿ'ನಲ್ಲಿ, ಶೆಲಿ 'ಯುನಿವ್ಹರ್ಸಿಟಿ' ಯಲ್ಲಿ, ರಸ್ಕಿನ್ 'ಕ್ರಿಸ್ತಿ'ನಲ್ಲಿ, ಡಾ. ಜಾನ್‌ಸನ್ ವ್ಹಿಚ್ ಫೀಲ್ಡ, "ಶೆನ್‌ಸ್ಟೋನ್ 'ಪೆಂಬ್ರುಕ್' ನಲ್ಲಿ ಓದಿದರು. ಅವರು ಓದಿದ ನೆಲ ಇನ್ನೂ ಅಚ್ಚಳಿಯದೆ ಹಾಗೆ ಇದೆ. ಅದೇ ನೆಲ, ಅದೇ ಜಲ, ಅದೇ ಜನ, ಅದೇ ಮನ! ಭಿನ್ನತೆಗೆ ವೈಷಮ್ಯಕ್ಕೆ, ದ್ವೇಷ ಅಸೂಯೆಗಳಿಗೆ ಇಲ್ಲಿ ಇಂಬಿಲ್ಲ. "ಯಾತ್ರಿಕನೆ, ಕೈಮುಗಿದು ಒಳಗೆ ಬಾ ಇಲ್ಲಿ" ಎಂಬ ಸಂದೇಶವನ್ನು ಮೌನದಿಂದ ಬಿತ್ತರಿಸುವವೊ ಎನ್ನುವ ಹಾಗೆ "ಹಾಯರ ಸ್ಟ್ರೀಟ್"ನಲ್ಲಿಯ ವಿದ್ಯಾಮಂದಿರಗಳು ಕೈಸನ್ನೆ ಮಾಡುವಂತೆ ಮನೋವೇದ್ಯವಾಗುವುದು!

## ಕ್ರೈಸ್ತ ಚರ್ಚ ವಿದ್ಯಾಲಯ

ನಾವು ಮತ್ತೆ ಕಾರಫ್ಯಾಕ್ಸ ಕೂಟಕ್ಕೆ ಬರುತ್ತೇವೆ. ಅಲ್ಲಿ ಮುಂಧಕ್ಕೆ ಭವ್ಯವಾಗಿ ತೋರು ವುದೇ "ಕ್ರೈಸ್ತ ಚರ್ಚ" ವಿದ್ಯಾಲಯ. ಅದರ ರಂಗಮಂಟಪ ಯುರೋಪಿನ, ಏಶಿಯದ ಯಾವುದೇ ಮಹಾವಿದ್ಯಾಲಯಕ್ಕೆ ಅನುಕರಣ ನೀಯವಾದ ರಂಗಮಂಟಪವಾಗಿದೆ. ಅಲ್ಲಿ ಬೋಲಿಂಗ್ ಬ್ರುಕ್, ಗ್ರೆನ್‌ವಿಲೆ, ಗ್ಲಾಡಸ್ಟನ್ ಜಾನ್ ಲಾಕೆ, ಫಿಲಿಪ್ ಸಿಡ್ನೆ ಓದಿದರು.

"ಕ್ರೈಸ್ತ ಚರ್ಚ" ವಿದ್ಯಾನಿಲಯವನ್ನು ಸಂದರ್ಶಿಸಿದ ನಂತರ ಆಕ್ಸಫರ್ಡ ವಿಶ್ವವಿದ್ಯಾ ನಿಲಯದ ಒಂದು ಸುತ್ತು ಹಾಕಿ ಬಂದಂತಾ ಯಿತು. ದಾರಿಯಲ್ಲಿ ಬರುವಾಗ ಕರಿಯ ನಿಲುವಂಗಿಯನ್ನು ಹಾಕಿಕೊಂಡು ಬಂದವರೇ ಹುಡುಗರು, ಅಧ್ಯಾಪಕರು! ಆ ನಗರದಲ್ಲಿ ತಿರುಗುವಾಗ 'ನಾಗರಿಕನಾರು, ಸ್ನಾತಕ ನಾರು?' ಎಂಬ ಪ್ರಶ್ನೆಗೆ ಉತ್ತರಹುಡುಕು ವುದೇ ಕಷ್ಟ. ಅಲ್ಲಿ ನಾಗರಿಕ, ವಿದ್ಯಾರ್ಥಿ ಮತ್ತು ಪ್ರಾಧ್ಯಾಪಕ ಮೂವರೂ ತ್ರಿಮೂರ್ತಿ ಗಳಂತೆ ಬದುಕಿ, ತ್ರಿಮೂರ್ತಿಗಳಂತೆ ಬಾಳಿ ಆ ನಾಡಬಾಳನ್ನು ಹಸನುಗೊಳಿಸುತ್ತಿದ್ದಾರೆ.

ವಿದ್ಯಾಲಯಗಳನ್ನು ಸುತ್ತಿ, ರಂಗಮಂಟಪ ಗಳನ್ನು ಸಂದರ್ಶಿಸಿ, ಕಾರಫ್ಯಾಕ್ಸಕೂಟನಿಂದ ಹೊರಟು ಕಾರಫ್ಯಾಕ್ಸ ಕೂಟಗೆ ಬಂದು ಮುಟ್ಟಿದಾಗ ಆಕ್ಸಫರ್ಡ ವಿಶ್ವವಿದ್ಯಾನಿಲ ಯದ ರಚನೆಯನ್ನು ಅರಿಯದವರು ಸಾಮಾನ್ಯವಾಗಿ ಒಂದು ಪ್ರಶ್ನೆ ಕೇಳುತ್ತಾರೆ. "ಯುನಿವ್ಹರ್ಸಿಟಿ ಕಟ್ಟಡವನ್ನಷ್ಟು ನೋಡ ಬೇಕಲ್ಲ."

ಆಕ್ಸಫರ್ಡ ವಿಶ್ವವಿದ್ಯಾನಿಲಯವೆಂದರೆ ಒಂದು ಕಟ್ಟಡವಲ್ಲ, ಒಂದು ವಿಸ್ತರಣವಲ್ಲ, ಪದವಿಗಳನ್ನು ಕೊಡುವ ಒಂದು ಕಾರಖಾನೆ ಯಲ್ಲ! ಅದೊಂದು ನಗರ. ಅದು ಸತ್ಯ ಸೌಂದರ್ಯದ ಬುನಾದಿಯ ಮೇಲೆ ನಿಂತಿದೆ. ಆ ಸತ್ಯಸೌಂದರ್ಯದೆಡೆಗೆ ಬದುಕನ್ನು ಕೊಂಡೊಯ್ಯುವುದು ಹೇಗೆನ್ನುವುದನ್ನು ತಿಳಿಸುವುದಕ್ಕೆ ಅಲ್ಲಿ ಅಧ್ಯಯನ ಅಧ್ಯಾಪನ ನಡೆಯುತ್ತಿದೆ.

# ನಮ್ಮ ಜ್ಞಾನತೃಷೆ ಏಕೆ ಬೆಳೆದಿಲ್ಲ?

ಜಗತ್ತಿನ ಮುಂದುವರಿದ ರಾಷ್ಟ್ರಗಳೊಡನೆ ನಮ್ಮನ್ನು ಹೋಲಿಸಿಕೊಂಡು ನೋಡಿದಾಗ ಅವರ ಮಿಂಚಿನೋಟ ನಮ್ಮನ್ನು ಬಾಧಿಸದೇ ಇರುವದಿಲ್ಲ. ಅದಕ್ಕೆ ಮುಖ್ಯ ಕಾರಣ ಅವು ಸಾಧಿಸಿದ ವೈಜ್ಞಾನಿಕ ಪ್ರಗತಿ. ನಮ್ಮ ಶಿಕ್ಷಣದ ರೀತಿಯಲ್ಲಿ ಜ್ಞಾನಪಿಪಾಸೆ ಬೆಳೆಯಲು ತಕ್ಕ ಅವಕಾಶವಿಲ್ಲದಿರುವದೂ ಇದಕ್ಕೊಂದು ಕಾರಣ. ಅದಕ್ಕಾಗಿ ಮೂರು ಹಂತದ ಯೋಜನೆಯೊಂದನ್ನು ಲೇಖಕರು ಇಲ್ಲಿ ಸೂಚಿಸಿದ್ದಾರೆ.

••

ಲೇಖಕರು : ಶ್ರೀ ಶಿವರಾಮ ಕಾರಂತ, ಪುತ್ತೂರು

ನಾವಿಂದು ಪ್ರಪಂಚದೊಡನೆ ನಮಗೆ ಬೇಕಾಗಿಯೋ, ಬೇಡಾಗಿಯೋ ನಿಕಟಸಂಬಂಧ ಬೆಳೆಯಿಸಿಕೊಂಡಿದ್ದೇವೆ. ಪ್ರಪಂಚದ ಮುಂದುವರಿದ ರಾಷ್ಟ್ರಗಳ ವ್ಯಾಪಾರ, ಉದ್ಯಮ, ವೈಜ್ಞಾನಿಕ ಮುನ್ನಡೆಗಳ ಮಿಂಚಿನ ಓಟ, ಮಿಂಚಿನ ವೇಗ, ನಮಗೆ ಇಷ್ಟವಿರಲಿ, ಇಲ್ಲದಿರಲಿ ನಮ್ಮ ಜೀವನವನ್ನು ಬಾಧಿಸಿಯೇ ಬಾಧಿಸುತ್ತವೆ. ಎಲ್ಲಿಯ ತನಕ ನಾವು ಈ ಓಟಕ್ಕೆ ಕಾರಣವಾದ ವಿವಿಧ ಶಕ್ತಿಗಳನ್ನು ತಿಳಿಯಲು ಪ್ರಯತ್ನಿಸುವುದಿಲ್ಲವೋ, ಅಲ್ಲಿಯ ತನಕ ಪ್ರಪಂಚದ ಮುಂದುವರಿದ ರಾಷ್ಟ್ರಗಳೊಡನೆ ಸ್ಪರ್ಧಿಸಲು ಅಶಕ್ತರಾಗುತ್ತೇವೆ. ಒಂದಿಷ್ಟು ವಿವೇಚನೆ ಮಾಡಿದ್ದಾದರೆ, ನಮ್ಮ ಭೂಗೋಲದಲ್ಲಿ ಕಾಲಿರಿಸಿದ ಈ ಹೊಸ ಶಕ್ತಿ ವಿಜ್ಞಾನ ಮತ್ತು ಅದರಿಂದ ಹುಟ್ಟಿಕೊಂಡ ತಂತ್ರಶಾಸ್ತ್ರಗಳೆಂದು ಮನಗಾಣಬಹುದು. ಇವು ನಮ್ಮ ಜೀವನದ ಎಲ್ಲ ಮುಖಗಳನ್ನೂ ಆವರಿಸಿಕೊಂಡಿವೆ. ಸಾರಿಗೆ, ಸಂಪರ್ಕ, ಉದ್ಯಮ, ಉತ್ಪಾದನೆಗಳ ಕ್ಷೇತ್ರವನ್ನೆಲ್ಲ ಆವರಿಸಿವೆ. ಕೃಷಿ, ಪಶುಪಾಲನೆ ಆರೋಗ್ಯ-ಇಂಥ ಕ್ಷೇತ್ರಗಳಲ್ಲೂ ಇನ್ನಿಲ್ಲದ ಪ್ರಭಾವ ವಿಜ್ಞಾನ ಮತ್ತು ತಂತ್ರಶಾಸ್ತ್ರಗಳಿಂದ ನಡೆಯುತ್ತಿದೆ. ಕ್ರಿಸ್ತಶಕದ ಆದಿಯಿಂದ ೧೯ನೆಯ ಶತಮಾನದ ಆದಿಗೆ ಸಲ್ಲುವ ೧೯ ಶತಮಾನಗಳಲ್ಲಾದ ತಾಂತ್ರಿಕ ಮತ್ತು ವೈಜ್ಞಾನಿಕ ಪ್ರಗತಿಗಳನ್ನು ಕೇವಲ ೧೯ನೆಯ ಶತಮಾನದ ಪ್ರಗತಿ ಮೀರಿಸಿದೆ. ಈ ಶತಮಾನದ ಐದಾರು ತಲೆಮಾರುಗಳ ವೈಜ್ಞಾನಿಕ ಓಟ ಮತ್ತು ತಾಂತ್ರಿಕ ಪ್ರಗತಿಗಳು ಕಳೆದ ಶತಮಾನದ ಓಟ ಪ್ರಗತಿಗಳಿಗಿಂತ ನಾಲ್ಮಡಿ ಮೀರಿದೆ. ಪುರಾತನ ಭಾರತದಂತಿದ್ದ ರಶ್ಯಾದೇಶ ನಾಲ್ಕು ದಶಕಗಳಲ್ಲಿ ಯುನೈಟೆಡ್‌ಸ್ಟೇಟ್ಸನ್ನು ಸ್ಪರ್ಧಿಸುತ್ತಿದೆಯಾದರೆ—ಅದು ಕೇವಲ ವೈಜ್ಞಾನಿಕ ಪ್ರಗತಿಯಿಂದ ಸಾಧಿಸಿದ ಪುರುಷಾರ್ಥವೆಂದರೂ ತಪ್ಪಾಗದು.

ಇಂಥ ಮುನ್ನಡೆಗಳ ಇದಿರಿನಲ್ಲಿ ನಮ್ಮದೇಶ ಹಾಕುತ್ತಿರುವ ಹೆಜ್ಜೆ ಜೆಟ್ ವಿಮಾನಗಳ ಇದಿರಿಗೆ ಇರುವೆ ನಡೆದಂತೆ. ನಮ್ಮಲ್ಲಿ ವಿಜ್ಞಾನವೇನೆಂಬುದೇ ತಿಳಿಯದ ಜನಗಳ ಸಂಖ್ಯೆ ನೂರಕ್ಕೆ ೯೯ರಷ್ಟಿದೆ.

ಬರಿಯ ಅಕ್ಷರಾಭ್ಯಾಸ ಮಾಡಿದವರ ಸಂಖ್ಯೆ ಇನ್ನೂ ಸೇಕಡಾ ೨೦ನ್ನು ಮೀರಿಲ್ಲ. ಈ ಓದಿದವರು ಕೂಡ ಬರಿಯ ಅಕ್ಷರಾಭ್ಯಾಸ ಮಾಡಿದವರು. ವಿಜ್ಞಾನ ಮತ್ತು ತಂತ್ರಶಾಸ್ತ್ರಗಳ ಓಟದ ರಹಸ್ಯವನ್ನಾಗಲಿ ಗತಿಯನ್ನಾಗಲಿ ತಿಳಿದವರಲ್ಲ. ನಮ್ಮಲ್ಲಿ ಸೇಕಡ ನೂರು ಜನ ಓದು ಕಲಿತವರಾಗುವಕಾಲ ಇನ್ನೆಂದು ಬರಬೇಕೋ? ವಿಶ್ವವಿದ್ಯಾಲಯಗಳಿಂದ ಹೊರಬಿದ್ದ ಸ್ನಾತಕರು ಕೂಡ ಇಂಥ ಪ್ರಗತಿಗೆ ಜಡರಾದವರಂತೆ ಕಾಣಿಸುವುದೇತಕ್ಕೆ ?

## ಜ್ಞಾನಪಿಪಾಸೆ ಬೆಳೆಯಿಸದ ಶಿಕ್ಷಣದ ರೀತಿ

ನಮ್ಮ ಶಿಕ್ಷಣದ ರೀತಿ ಕೂಡ ಜ್ಞಾನಪಿಪಾಸೆಯನ್ನು ಬೆಳೆಯಿಸದಂಥ ರೀತಿಯಾಗಿದೆ. ಇದರೊಳಗಣ ಮೂಲ ದೋಷಗಳನ್ನು ಹೋಗಲಾಡಿಸದಿದ್ದರೆ, ಶಾಲೆ ಕಾಲೇಜುಗಳ ಸಂಖ್ಯೆ ಹೆಚ್ಚಿದರೂ ಗುಮಾಸ್ತರ ಸಂಖ್ಯೆ ಹೆಚ್ಚಾದೀತೇ ವಿನಾ ಉತ್ಪಾದಕರ ಸಂಖ್ಯೆ ಹೆಚ್ಚಾಗಲಾರದು; ಹೊಸ ಸೃಷ್ಟಿಮಾಡತಕ್ಕವರ ಸಂಖ್ಯೆ ಹೆಚ್ಚಾಗಲಾರದು. ಪರರನ್ನು ನಾವು ಅನುಕರಿಸಬಹುದು; ಅವರಿಂದ ನಾವು ಯಂತ್ರ ಸಾಮಗ್ರಿಗಳನ್ನು ಕೊಳ್ಳಬಹುದು; ಅವುಗಳನ್ನು ಬಳಸುವುದಕ್ಕೂ ಕಲಿಯಬಹುದು. ಆದರೆ ಅಂಥ ವಿವಿಧ ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಅಳಾಗಲಾರೆವು. ಅಂಥ ಜ್ಞಾನ ನಮಗಿಲ್ಲ. ಅಂಥ ಜ್ಞಾನಪಿಪಾಸೆ ನಮಗೆ ಬಂದಿಲ್ಲ. ಇದೇ ಮೂಲತಃ ಕಾಣಿಸುವ ದೋಷ.

ನಮ್ಮ ಮುಂದೆ ಆಧುನಿಕ ಯಂತ್ರಗಳು ಬರುತ್ತಿವೆ. ಅವುಗಳನ್ನು ಕುರಿತಾದ ಶಾಸ್ತ್ರಗ್ರಂಥಗಳೂ ಅವುಗಳಲ್ಲಡಕವಾದ ತತ್ವಗಳನ್ನು ವಿವರಿಸುವ ವೈಜ್ಞಾನಿಕ ಗ್ರಂಥಗಳೂ ಧಾರಾಳವಾಗಿವೆ. ಆದರೆ ಅವುಗಳಿರುವುದು—ಜರ್ಮನ್, ಫ್ರೆಂಚ, ಅಥವಾ ಇಂಗ್ಲಿಷ್ ಭಾಷೆಗಳಲ್ಲಿ. ನಮ್ಮ ವಿಶ್ವವಿದ್ಯಾಲಯಗಳಲ್ಲಿ ಇಂಗ್ಲೀಷ ಹೇಳಿಕೊಡುತ್ತಿದ್ದಾರೆ. ನಮ್ಮ ಕೆಲವಾದರೂ ಪ್ರಮುಖ ವಾಚನಾಲಯಗಳಲ್ಲಿ ಅಂಥ ಗ್ರಂಥಗಳಿವೆ. ಆದರೆ ನಮ್ಮ ವಿಧ್ಯಾರ್ಥಿಗಳು ಅವುಗಳನ್ನು ಓದುತ್ತಿದ್ದಾರೆಯೋ ? ಬಹುಮಟ್ಟಿಗೆ ಆ ಗ್ರಂಥಗಳು ಅವರ ಪಾಲಿಗೆ ಕನ್ನಡಿಯೊಳಗಣ ಗಂಟು. ಏತಕ್ಕೆ ಹೀಗಾಗುತ್ತದೆ ?

ಈಗಣ ವಿದ್ಯಾರ್ಥಿಗಳ ಪಾಲಿಗೆ ಇಂಗ್ಲೀಷ್ ಭಾಷೆ ದಿನೇ ದಿನೇ ಕಷ್ಟವಾಗುತ್ತಿದೆ. ದೇಶಭಾಷೆಯ ಪ್ರೇಮ ನಮಗಿದ್ದರೂ ಮಾತೃಭಾಷೆಯಲ್ಲಿ ಶಿಕ್ಷಣ ಕೊಡುತ್ತಿದ್ದರೂ ನಮ್ಮ S. S. C. ಹುಡುಗರು ಇಂಗ್ಲೀಷನ್ನು ಓದು-ಬರೆಯುವುದಿರಲಿ, ಕನ್ನಡವನ್ನೂ ಚೆನ್ನಾಗಿ ಬರೆಯಲಾರರು. ನಮ್ಮ ಮುಂದೆ ಭಾಷೆಗಳ ಗೊಂದಲ ಹುಟ್ಟಿದೆ. ಮಾತೃಭಾಷೆ, ಪ್ರಾಂತೀಯ ಭಾಷೆ, ಇಂಗ್ಲೀಷ್, ಹಿಂದೀ—ಬೇಕಾದರೆ ಸಂಸ್ಕೃತ ಇಷ್ಟೊಂದು ಭಾಷೆಗಳಿವೆ. ಶಿಕ್ಷಣಕ್ರಮದಲ್ಲಿ ಒಂದು ಭಾಷೆಯಲ್ಲಿ ಸರಿಯಾದ ಪರಿಣತಿ ಬರುವುದಕ್ಕಿಂತ ಮುಂಚೆಯೆ ಇಂಗ್ಲಿಷ್ ಮತ್ತು ಹಿಂದಿ ಸಂಸ್ಕೃತಗಳನ್ನು ತುರುಕಿಸಿದರೆ ಏನಾದೀತು. ಒಂದೊಂದು ಭಾಷೆಗೆ ತನ್ನದಾದ ವ್ಯಾಕರಣವಿದೆ. ಅದನ್ನು ಕೇಳಿ ಕಲಿಯುವ ಬದಲು ವ್ಯಾಕರಣದಿಂದ ಕಲಿಯಬೇಕಾದ ಪ್ರಮೇಯವಿರುವಲ್ಲಿ ಮಕ್ಕಳ ಮನಸ್ಸು ಗೊಂದಲಕ್ಕೆ ಗುರಿಯಾಗಿ ಯಾವ ಒಂದು ಭಾಷೆಯೂ ಸಮನಾಗಿ ತಿಳಿಯದಂಥ ಪರಿಣಾಮವುಂಟಾಗಿದೆ. ಎರಡು-ಮೂರು ಭಾಷೆಗಳನ್ನು ಕಲಿಯಬೇಕೆಂಬ ಒತ್ತಾಯವಿದೆಯೋ ಹೊರತು ಕಲಿಸುವ ಮತ್ತು ಕಲಿಯುವ ಇತಿಮಿತಿಗಳ ಜ್ಞಾನ ನಮಗುಂಟಾಗಿಲ್ಲ. ಇದರಿಂದ ಓದಬೇಕೆಂಬ ಬಯಕೆ ಮಕ್ಕಳಲ್ಲಿ ಇದ್ದದ್ದೂ ಸಾಯುತ್ತಿದೆ.

## ಇಂದಿನ ಸಾಹಿತ್ಯಾಭ್ಯಾಸ

ಈಗ ಜ್ಞಾನತೃಷೆಯ ವಿಚಾರ, ಹೆಚ್ಚೆಂದರೆ ನಮ್ಮ ಹುಡುಗರು ಕನ್ನಡದಲ್ಲಿ ಕತೆ, ಕಾದಂಬರಿಗಳನ್ನೇ ಓದುತ್ತಾರೆ. ಮನೆಯ ಮುದುಕರೂ ಅವನ್ನೇ ಓದುತ್ತಾರೆ. ವಿಶ್ವವಿದ್ಯಾಲಯದಿಂದ ಹೊರಬಿದ್ದವರೂ ಬರಿಯ ಅವನ್ನೇ ಓದುತ್ತಾರೆ. ಈ ಓದುಗಾರಿಕೆಗೂ ಸಿನೇಮಾ ನೋಡಿ ಸಂತೋಷಪಡುವ ದೂರದ ತೃಪ್ತಿಗೂ ವ್ಯತ್ಯಾಸವೇ ಇಲ್ಲದಾಗಿದೆ. ಸಾಹಿತ್ಯಾಭ್ಯಾಸ ಕೇವಲ ಕತೆ ಕೇಳುವ ಲವಲವಿಕೆಯಾಗಿ ಉಳಿದಿದೆ. ಅಷ್ಟಕ್ಕೇ ಓದುವುದು. ಆ ಕತೆಯನ್ನೊಂದು ಅಜ್ಜಿ ಹೇಳಿದರೆ ಓದುವ ಕೆಲಸವನ್ನೂ ಬಿಟ್ಟಾರು. ಕತೆಗಳನ್ನು ಮೀರಿ ಇನ್ನೊಂದೂ ವಿಷಯವನ್ನು ಓದುವವರಿಲ್ಲ. ಅಂಥವರಲ್ಲಿ ಜ್ಞಾನಪಿಪಾಸೆ ಹೇಗೆ ಬೆಳೆಯಬೇಕು ?

ಜ್ಞಾನಸಂಬಂಧವಾದ ಗ್ರಂಥಗಳಿಂದ ಅವು ಹುಟ್ಟಬೇಕು. ವಿಶ್ವವಿದ್ಯಾಲಯಗಳನ್ನು ದಾಟಿ ಬರುವವರಲ್ಲಿಯೂ ಅದು ಹುಟ್ಟಲ್ಲವಾದರೆ ಏತಕ್ಕೆ ಹುಟ್ಟಲ್ಲ ? ಓದುವ ಇಚ್ಛೆ ಎಳೆತನದಿಂದ ಬೆಳೆದು ಬಂದಿರಬೇಕು. ಕಾಲೇಜನ್ನು ಸೇರಿದೊಡನೆಯೋ ಅದು ಬರುವುದಿಲ್ಲ. ಆಗ ವಿದ್ಯಾರ್ಥಿಗಳನ್ನು ಕಾಡುವುದು ಪರೀಕ್ಷೆಯ ಗೀಳು. ಆ ದೆವ್ವದ ಬಾಯಿಂದ ತಪ್ಪಿಕೊಂಡರೆ ಪಾರಾದೆನಲ್ಲ ಎಂದು ವಿದ್ಯಾರ್ಥಿ ತಿಳಿಯುತ್ತಾನೆ. ಇದಕ್ಕೆ ವಿಶ್ವವಿದ್ಯಾಲಯಗಳು ಬೇಕೇ ? ಕಾಲೇಜುಗಳು ಬೇಕೇ ?

ಕನ್ನಡದಲ್ಲಿ ಶಿಕ್ಷಣ ಕೊಡುವುದರಿಂದಲೂ ಈ ಕೆಲಸ ಸಾಧ್ಯವಾಗುವುದಿಲ್ಲ. ಮಕ್ಕಳಲ್ಲಿ ಜ್ಞಾನಪಿಪಾಸೆ ಬೆಳೆಯಬೇಕಾದರೆ, ಅವರವರ ವಯೋಧರ್ಮಕ್ಕನುಗುಣವಾದ ರೀತಿಯಲ್ಲಿ ವಿವಿಧ ವಿಷಯಗಳ ಮೇಲೆ ಆಕರ್ಷಕವಾಗಿ ಪಾಠಹೇಳುವ, ಜ್ಞಾನವೊದಗಿಸುವ ಕೆಲಸ ನಡೆಯಬೇಕಾಗುತ್ತದೆ. ಇಲ್ಲಿ — ಆಕರ್ಷಣೆ ಎಷ್ಟು ಅವಶ್ಯವೋ ವಯೋಧರ್ಮ ಅಷ್ಟೇ ಗಮನಾರ್ಹ. ಬುಡದಿಂದಲೇ ಇದನ್ನು ಕಟ್ಟಿಕೊಂಡು ಹೋಗಬೇಕು. ಎಷ್ಟೇ ಟೆಕ್ನಿಕಲ್ ಕಾಲೇಜುಗಳನ್ನು ಕಟ್ಟಿದರೂ ಬುಡದ ಸೋಪಾನಗಳನ್ನು ನಿರ್ಮಿಸದೆ ಹೋದರೆ, ನಮ್ಮ ವಿದ್ಯಾರ್ಥಿಗಳು ಕೊನೆಯ ಘಟ್ಟವನ್ನು ಸೇರಲಾರರು.

## ಮೂರು ಹಂತಗಳ ಯೋಜನೆ

ಕನಿಷ್ಟ ಮೂರು ಹಂತಗಳಲ್ಲಿ ನಾವು ಇದಕ್ಕೆ ಸಂಪೂರ್ಣವಾದ ಯೋಜನೆಯನ್ನು ಸಿದ್ಧಪಡಿಸಬೇಕು. ಹದಿನೆರಡು ವರ್ಷಪ್ರಾಯದೊಳಗಣ ಎಳೆಯರ ಸಲುವಾಗಿ ಆಕರ್ಷಕವಾದ ಚಿಕ್ಕ ಚಿಕ್ಕ ಗ್ರಂಥಗಳನ್ನು ಪ್ರಕಟಿಸಬೇಕು. ಜನಜೀವನ, ಪ್ರಾಣಿಜೀವನ, ಚರಿತ್ರೆ, ಖಗೋಲ, ಭೂಗೋಲ ಮೊದಲಾದ ಯಾವತ್ತು ವಿಷಯಗಳಲ್ಲಿ ಒಂದೊಂದು ಸಣ್ಣ ವಿಷಯಕ್ಕೆ

ಒಂದೊಂದು ಸ್ವತಂತ್ರ ಬರಹ ಬರಬೇಕು. ಕುತೂಹಲವೆಬ್ಬಿಸುವ ಹತ್ತಾರು ವಾಕ್ಯಗಳಿಂದ ಸುಂದರ ಚಿತ್ರ ಮತ್ತು ನಕ್ಷೆಗಳಿಂದ ಅವನ್ನು ಸಿದ್ಧಪಡಿಸಬೇಕು. ಹದಿನೆರಡರಿಂದ ಹದಿನೆಂಟು ವರ್ಷ ಪ್ರಾಯದವರ ಸಲುವಾಗಿ ಇಂಥ ವಿಷಯಗಳ ಮೇಲೆಯೇ ಇನ್ನಷ್ಟು ಹೆಚ್ಚು ವಿವರಗಳನ್ನೂ ಅನುಭವಗಳನ್ನೂ ಪ್ರತ್ಯಕ್ಷ ನಿದರ್ಶನಗಳಿಂದ, ಚಿತ್ರಗಳಿಂದ ಸುಲಭ ಭಾಷೆಯಲ್ಲಿ ವಿವರಿಸಬೇಕು. ಅನಂತರದ ಹೆಜ್ಜೆ ಇದಕ್ಕಿಂತ ಉತ್ಕಟವಾದ ಕುತೂಹಲವನು ಬೆಳೆಯಿಸುವ ಹೆಜ್ಜೆ. ಈ ಹೆಜ್ಜೆ ಕೂಡ ಶುದ್ಧ ವೈಜ್ಞಾನಿಕ ಪರಿಭಾಷೆಯ ಪ್ರಯೋಗವಾಗಬಾರದು. ಜನಸಾಮಾನ್ಯರಿಗೂ ಭಾಷೆ ಕಷ್ಟವಾಗದಂತೆ, ವಿಷಯದ ವ್ಯಾಪ್ತಿ ಮತ್ತು ವಿಸ್ತಾರ ಕೆಡದಂತೆ, ತಿಳಿವನ್ನು ಹುಟ್ಟಿಸುವ ಪ್ರಯತ್ನ ಮಾಡಬೇಕು. ವಿಜ್ಞಾನ ಪ್ರಪಂಚವನ್ನು ಬರೆಯುವುದರಲ್ಲಿ 'ನಾನು ಕೈಕೊಂಡ ಹೆಜ್ಜೆ ಈ ಮೂರನೆಯ ಹಂತದ್ದು. ಇದರ ಕೆಳಗಿನ ಎರಡು ಹಂತಗಳನ್ನು ನಮ್ಮ ವಿದ್ಯಾವಂತರು ಪೂರೈಸದಿದ್ದರೆ ನಾನುಮಾಡುತ್ತಿರುವ ಈ ಶ್ರಮವೂ ನೂರಕ್ಕೆ ೧೦ರಷ್ಟು ಫಲತರುವುದು ಕಷ್ಟ. ಇಷ್ಟೆಲ್ಲ ನಡೆಯಬೇಕಾದದ್ದು ಆಯಾಯ ಜನಗಳ ಮಾತೃಭಾಷೆಯಲ್ಲಿ. ಇನ್ನು ಮುಂದಿನ ಕೆಲಸ—ಶಾಸ್ತ್ರೀಯ ಗ್ರಂಥಗಳ ರಚನೆ. ಅವನ್ನು ಬರೆಯಬೇಕಾದವರು ಒಂದೊಂದು ಶಾಸ್ತ್ರವನ್ನೇ ಅಭ್ಯಸಿಸಿದ ತಜ್ಞರು, ವಿಜ್ಞಾನದ ಕುತೂಹಲ, ತಂತ್ರಶಾಸ್ತ್ರದ ಕುತೂಹಲ ಉಂಟಾದರೆ ಆಯಾಯ ಕ್ಷೇತ್ರದಲ್ಲಿ ಪರಿಣತಿ ಪಡೆಯಲಪೇಕ್ಷಿಸುವವನು ಇಂಗ್ಲೀಷನ್ನು ಕಲಿಯುತ್ತಾನೆ. ಫ್ರೆಂಚ್, ಜರ್ಮನ್ ಭಾಷೆಗಳನ್ನು ಕಲಿತಾದರೂ ಶಾಸ್ತ್ರಾಭ್ಯಾಸ ಮಾಡುತ್ತಾನೆ. ಮುಂದೆ ಬರಬಹುದಾದ ಪಾರಿಭಾಷಿಕ ಶಬ್ದಗಳು ಅಂತಾರಾಷ್ಟ್ರೀಯ ಸ್ವರೂಪದವು. ಅವುಗಳನ್ನು ನಾವು ಮೂಲದಲ್ಲಿದ್ದಂತೆ ಬಳಸಬಹುದು. ಆವಶ್ಯಕ ಸಂದರ್ಭಗಳಲ್ಲಿ ಅವುಗಳ ಅರ್ಥ ತಿಳಿವ ರೀತಿಯ ಪದಯೋಜನೆಗಳಿಂದ ನಮ್ಮ ಕೆಲಸ ಸಾಧಿಸಬಹುದು. ಆದರೆ ಈ ಕೆಲಸದಲ್ಲಿ 'ಕೂಡಿಸು' 'ಕಳೆ' ಎಂಬ ಮಾತುಗಳಿಗೆ ಪ್ರತಿಯಾಗಿ ನಾವು 'ಸಂಕಲನ' 'ವ್ಯವಕಲನ' ಪದಗಳನ್ನು ಉಪಯೋಗಿಸುವುದಾದರೆ, ಅಂಥ ಪಾರಿಭಾಷಿಕ ಅನುವಾದಗಳೇ ಜ್ಞಾನತೃಷೆಗೆ ಮೃತ್ಯುವಾಗಲೂಬಹುದು. ಡಾ. ರಘುವೀರರ ಶಬ್ದಕೋಶ ಇಂಥ ಶಬ್ದದೈತ್ಯರ ಪೀಡೆಗೆ ಕಾರಣವಾದರೆ ಏನು ಗತಿ?



# ಸಿರಿಬಾಳಸೂತ್ರ

( ಕೆಲವು ಸಾರಜ್ಞಾಂಕಿತ ತ್ರಿಪದಿಗಳು )

ಬಲು ಜೋಕೆ ಇರು ಮನದ
ಚಲನ-ವಲನದ ಬಗೆಗೆ ;
ಒಳಮನದಿ ನಡೆವ ಜಲುಪನೆಗಳೆಲ್ಲವನು
ಸಲೆ ಕೇಳ್ವ ಶಿವನು! ಸಾರಜ ॥ ೧ ॥

ಇರುವೆಯುಂದದೊಳಾರು
ವರ ಬೋಧ ಮಾಡುವರು ?
ಧರಿಸಿ ಮೌನವನು ಕಾಯಕದಿ
ಬೆರತಿಹುದೆ
ವರ ಬೋಧ ನಿಜದಿ ! ಸಾರಜ್ಞ ॥ ೨ ॥

ಇಂದಿನುದರದೊಳಿಹುದು
ಮುಂದಿನಾ ಭವಿತವ್ಯ ;
ಇಂದನ್ನು ಚೆಂದವೆಸಗಿದರೆ ಮುಂದಿನದು
ಚೆಂದ ತಾನಕ್ಕು ಸಾರಜ್ಞ ॥ ೩ ॥

ಕರ್ತಾರ ತನ್ನೊಬ್ಬ
ಭೃತ್ಯನನು ಕಳುಹುವನು
ಕರ್ತವ್ಯಶೀಲ ಶರಣಂಗೆ ನೆರವಾಗೆ
ಹಸ್ತಕನ ಮಾಡಿ ಸಾರಜ್ಞ ॥ ೪ ॥

ಕರ್ತವ್ಯವೊಂದಕ್ಕೆ
ಮತ್ತೆ ಬಾ ಎಂದೆನಲು,
ಮತ್ತೆ ಬಂದಪುದು—ಹತ್ತೆಂಟು
ಹೊಸವನ್ನು
ಹೊತ್ತು ತಂದಪುದು ಸಾರಜ್ಞ ॥ ೫ ॥

ಹೆರವರವ ಗುಣಗಳನು
ಜರಿದಾಡುವುದಕಿಂತ
ನಿರುಕಿಸುತ ನಿನ್ನ ಕೊರತೆಗಳ ನೀಗುವುದೆ
ಪರಮ ಪೌರುಷವು ! ಸಾರಜ್ಞ ॥ ೬ ॥

ಪರಿಪೂರ್ಣ ಮಾನವರು
ದೊರಕುವರೆ ಲೋಕದಲಿ ?.
ಬರಿ ಕೊರತೆಗಳನೆ ಕೆದಕದಿರು;
ಗುಣದೆಡೆಗೆ
ಹರಿಸು ದೃಷ್ಟಿಯನು ಸಾರಜ್ಞ ॥ ೭ ॥

ಕ್ಷುಲ್ಲಕರು ಬೈವಾಗ
ಒಳ್ಳೆಯದು ತನಿಮೌನ ;
ಗಲ್ಲಿಸುತ ತಿರುಗಿ ಬೈದಲ್ಲಿ ಕೆಸರಿನಲಿ
ಕಲ್ಲನೆಸೆದಂತೆ ! ಸಾರಜ್ಞ ॥ ೮ ॥

ಬಂದುಕದ ಗುಂಡಿನೊಲು
ಮುಂದೆ ಸಾಗುವರವರು—
ಬಂಧುರದ ನೀತಿ ನಯಮಾರ್ಗವನು
ಬಿಡದೆ
ಹೊಂದಿ ನಡೆವವರು ಸಾರಜ್ಞ ॥ ೯ ॥

ಕೈಯುಳವಿನೊಳಗಿರುವ
ಕಾರ್ಯಕ್ಕೆ ಕೈ ಹಚ್ಚು ;
ಕೈಯುಳವಿನಾಚೆಗಿರುವ ಕಾರ್ಯವು ತಾನೆ
ಕೈಯೊಳಗೆ ಬರ್ಕು ಸಾರಜ್ಞ ॥ ೧೦ ॥

ಉದ್ದೇಶವೆದ್ದು ಕಟ-
ಬದ್ಧವಪ್ಪುದೆ ಸ್ಫೂರ್ತಿ !
ಇದ್ದೀತು ನಿನಗೆ ಹುಟ್ಟುಗುಣ ;
ಬೆಳೆಸಲ್ಕೆ
ತಿದ್ದಿತೀಡದನು ! ಸಾರಜ್ಞ ॥ ೧೧ ॥

ಹಿರಿಯ ಕೆಲಸಗಳಿರಲಿ,
ಕಿರಿಯ ಕೆಲಸಗಳಿರಲಿ,
ಸರಿಯಾಗಿ ಮಾಡು; ಸರಿ ಮಾಳ್ಪ
ಹಿಡಿತವದು
ಸಿರಿಬಾಳ ಸೂತ್ರ ಸಾರಜ್ಞ ॥ ೧೨ ॥

ಗುರಿಯನ್ನು ಪ್ರತಿ ದಿನವು
ಪರಿ ಭಾವಿಸೈ ಮನದಿ;
ಪರಿ ಭಾವಿಸುತ್ತ ನಡೆವಂಗೆ ಗುರಿಯು ಗಿರಿ
ಕರತಲದ ರತ್ನ! ಸಾರಜ್ಞ ॥ ೧೩ ॥

ಎಲ್ಲಂದದಲಿ ನಿತ್ಯ
ಗೆಲ್ಲುತ್ತ ನಡೆದಿಹೆನು ;
ನಿಲ್ಲದೆಯೆ ನಾನು ಗುರಿಯ
ಮುಟ್ಟುವೆನೆಂಬ
ಸೊಲ್ಲಿರಲಿ ಮನದಿ ಸಾರಜ್ಞ ॥ ೧೪ ॥

ಮಾಡಬಲ್ಲೆನು ಎಂಬ
ಪ್ರೌಢಿಯುಳ್ಳಾತನಿಗೆ
ರೂಢಿಯಲಿ ಸರ್ವಸಿದ್ಧಿಗಳು ವಶವಾಗಿ
ಜೋಡಿಪವು ಕರವ ಸಾರಜ್ಞ ॥ ೧೫ ॥

ನಂಬುಗೆಯ ನೆಲದಲ್ಲಿ
ಹೊಂಬಯಕೆ ಗಿಡ ಹಚ್ಚಿ
ತಾಂ ಬಿಡದೆ ಕೃಷಿಯ ಮಾಳ್ಪವನ
ಜೀವನದ
ತುಂಬೆಲ್ಲ ಸಿರಿಯು ! ಸಾರಜ್ಞ ॥ ೧೬ ॥

ಸೆಲೆಯು ಹತ್ತುವ ತನಕ
ನಿಲಿಸದಿರು ಖನನವನು
ಸೆಲೆಯು ತಾನೊಮ್ಮೆ ಹತ್ತಿತೆಂದರೆ ಜಲವು
ನಿಲದೆ ಪುಟಿಯುವುದು ! ಸಾರಜ್ಞ ॥ ೧೭ ॥

ಒಳಮನದ ಬಲುಗಡಲ
ತಳತನಕ ಮುಳುಗಿದರೆ
ಮಳೆಬಿಲ್ಲ ಬೀಜದಂತಿರುವ ರತ್ನಗಳ
ನೆಲೆಯು ವಶವಕ್ಕು ! ಸಾರಜ್ಞ ॥ ೧೮ ॥

ಹಿರಿಯಾಶೆಗಳ ಚಿತ್ರ
ಬರೆಯುತಿರು ಬಗೆಯಲ್ಲಿ ;
ಬರಿ ನಿರಾಶೆಯಲಿ ಕೊರಗದಿರು ;
ಭವಿಷ್ಯದಿ
ಭರವಸೆಯ ತಾಳು ! ಸಾರಜ್ಞ ॥ ೧೯ ॥

ನೀನು ನಗು ; ನಿನ್ನೊಡನೆ
ತಾನು ನಗುವುದು ಜಗವು ;
ಆನಂದರಸವೆ ದೇವನೆಂದಿದೆ ಶಾಸ್ತ್ರ ;
ಆನಂದ ಹೊಂದು ! ಸಾರಜ್ಞ ॥ ೨೦ ॥

ಪರಮಾನು ಭವರಸದ
ಪರಿಮಳದ ಪದ್ಮಗಳು
ವರಕವಿಯ ಕಾವ್ಯ ಜೀವನದ
ಸರಸಿಯಲಿ
ಅರಳುವವು ನಗುತ ! ಸಾರಜ್ಞ ॥ ೨೧ ॥

—ಗಂಗಪ್ಪ ವಾಲಿ, ಹುಬ್ಬಳ್ಳಿ



# ಯಾತ್ರಿಕ

೧

ದೂರದೂರಿನ ನೇರದಾರಿಯು ಹಿಡಿದ
ಪಥಿಕನೆ, ಕಣ್ಣಿಗೆ
ನಡುವೆ ಮೂಡಿದ ಇಂದ್ರಜಾಲದ ಬಣ್ಣ-
ವಾಯಿತೆ ಮೆಚ್ಚಿಗೆ ?

೨

ಸೂರ್ಯ ಚಂದ್ರರು ಬೆಳೆಸಿದೊಲವಿನ
ಪುಷ್ಪವನದ ವಿಹಾರಿಯೆ,
ಮತಿಗೆ ಮರೆವಿನ ಸಿಡಿಲು ಬಡಿಯಲು
ಕಾಣದಾಯಿತೆ ದಾರಿಯೆ ?

೩

ಬರಿಯ ಮಣ್ಣೊ, ಕಣ್ಣ ಕುಕ್ಕುವ
ಬಣ್ಣ ಬಣ್ಣದ ಆಗರ
ಇಹದ ಸಮ್ಮೋಹನಕೆ ಮರುಳಾ-
ಗಿರುವ ಸುಂದರ ಹಂದರ,
ಒಳಗೆ ನೆಲದೀಸ್ವಪ್ನಮಧುವನು
ಕುಡಿದ ಹಕ್ಕಿಯು ಜಾಗರ
ಕಾವು ಕುಳಿತಿದೆ ರಾಗತಲ್ಪದ
ಮೇಲೆ ಅಲ್ಲೇ ನಾಗರ

೪

ದಿಗ್ದಿಗಂತದ ಅಂಚಿನಲಿ ಮಳೆಬಿಲ್ಲು
ರಂಗನು ತೊದಲಿದೆ,
ಮಿಂಚು ಗೊಂಚಲ ಕೆದರಿದೆ,
ಮುಗಿಲು ನೀಲಿಯು ಹರಡಿದೆ,
ಹೂವು ಗಂಧದ ಲಾಲಿ ಹಾಡಿದೆ; ಧೂಪ ಕಿಲ-
ಕಿಲ ನಕ್ಕಿದೆ—
ತಿಮಿರದಾಳದ ಕೆಸರೊಳಿಳಿಯುವ ಜೀವ
ತನ್ನನೆ ಮರೆತಿದೆ ;
ಮೇಲುನಾಡಿನ ಬೆಳಕ ಕರೆಯೂ ವ್ಯರ್ಥ-
ವಾಯಿತೆ, ರುಚಿಸದೆ!

೫

ಭೋಗ ವಿಷಯಗಳಾಸೆ ನಿದ್ರಾಲಸದ
ವಿಭ್ರಮ, ಸಂಭ್ರಮ,
ಘೋರ ಸಾಗರದೊಂದು ದ್ವೀಪದೊಳರ್ಥ
ಗಳಿಗೆಯ ಸಂಗಮ.

೬

ಪಟ್ಟ ಅನುಭವ ಹೆಣೆದ ನೆನಪಿನ
ತೊಟ್ಟಿಲೋ ಈ ಬಾಳುವೆ
ಇಲ್ಲಿ ನಿಟ್ಟುಸಿರಳಲು ಜೊತೆಯಲಿ
ಗೆಲುವು ಸಂತಸ ತೂಗಿವೆ!

೭

ಮೌನ ನಗುತಿದೆ ಬಿಮ್ಮನೆ
ಸುತ್ತ ಬೆಳಕಿನ ಭಾವನೆ
ಕಲ್ಪಕಲ್ಪಾಂತರದ ಸುಮಧುರ ಸ್ವಪ್ನಸಾರದ
ಅರಮನೆ
ಮೀರಿ ನಿಂತಿದೆ ಸ್ವರ್ಗದಾಚೆಯು ಮೇರೆ
ಮಿಂಚಿದ ಗೆರೆಯನೆ.
ಗಾಳಿಯಾಡದ ಕಪ್ಪುಗವಿಯಲಿ ದೇಹ
ಮೆರೆದಿದೆ ಜುಮ್ಮನೆ ;
ದಿವ್ಯ ಕಲ್ಪನೆ ಅರ್ಥವಿಲ್ಲದೆ ಅಲ್ಲೆ
ಬಿದ್ದಿದೆ ಸುಮ್ಮನೆ.

೮

ಮರೆತೆಯಾ, ಆ ದೂರದೂರಿನ ನೇರ-
ದಾರಿಯ ಮುಗ್ಧನೆ ?
ಇಂದ್ರಜಾಲದ ಮೋಹದಾಟಕೆ ಮಾರಿ-
ಕೊಂಡೆಯ ನಿನನೆ ?

—ಕೆ. ಎಸ್. ನಿಸಾರ್ ಅಹಮದ್, ಬೆಂಗಳೂರು
( ಆಕಾಶವಾಣಿ ಕೃಪೆಯಿಂದ )



# ಕೋಗಿಲೆಗೆ

ಕುಹೂ ಕುಹೂ—ಕೋಗಿಲೆ !
ಅಯ್ಯೋ ಪಾಪ ಏನು ಕತೆ
ಯಾರಿಗಾಗಿ ನಿನ್ನ ವ್ಯಥೆ ?

ತೊಟ್ಟ ತುಟಕೂ ಜಿನುಗು ಮಳೆ,
ಆಷಾಢದಿ ಕದಡಿದಿಳೆ
ಇಲ್ಲ ಚೂರು ಬಿಸಿಲಿನೆಳೆ
ಆದರಿಂಥ ಹೊತ್ತಿನೊಳೇ
ಯಾಕೆ ಬಂದು ಕಿರುಚುವೆ
ಬಂದ ದಾರಿ ಹಿಡಿದು ನಡೆ

ಕವಿ ಸಮಯಕೆ ಇದು ವಿರುದ್ಧ
ಈ ಕಾಲಕೊ ಇದು ನಿಷಿದ್ಧ ;
ಪಾಪ, ನಿನಗೆ ಏನು ಗೊತ್ತು,
ಏನು ಬಂತೊ ನಿನಗೆ ಹೊತ್ತು
ಮಳೆಯಲ್ಲೂ ಕಿರುಚುವೆ
ನೆಮ್ಮದಿಯನೆ ಪರಚುವೆ.

ಬಂದು ವೇಳೆ ಆ ವಸಂತ-
ಮಾಸದಲ್ಲೆ ನೀ ಹಾಡಲು,
ಕೇಳುವ ಕವಿಯಿಲ್ಲವೀಗ ;
ನಿನ್ನ ಕುರಿತು ಕವಿತೆ ಬರೆದು
ಓದುವುದೂ ಸಲ್ಲದೀಗ.

ಅಯ್ಯೊ, ನಿನಗೆ ಹೇಗೆ ಗೊತ್ತು
ಸಾಹಿತ್ಯದೊಳಾದ ಕ್ರಾಂತಿ !
ಕೋಗಿಲೆ ದನಿ ಹೃದ್ಯ ನಿಜ,
ಅದನು ಕುರಿತ ಪದ್ಯ ವಜಾ ;
ಭಂಡಬಿದ್ದು ಬರೆದ ಕವಿಗೆ
ವಿಮರ್ಶಕರ ಕಠಿಣ ಸಜಾ !
ಹೀಗಾಗಿರೆ ಕವಿಯ ಸ್ಥಿತಿ
ನಿನ್ನ ಹಾಡಿಗೆಲ್ಲಿ ಗತಿ ?

ಹಳಗಾಲದ ವಸ್ತು ನೀನು,
ನೀನು ಹೇಗೆ ಕೂಗಲೇನು ?
ನಿನ್ನ ದನಿಯೊ, ಅದೇ ರಾಗ,
ವ್ಯತ್ಯಾಸವೆ ಇಲ್ಲವಲ್ಲೊ !
ಹೊಸ ಕಾಲಕೆ ತಕ್ಕ ಹಾಗೆ
ರೈಲು-ಕಾರು-ಮಿಲ್ಲು ಹೀಗೆ
ಕೂಗುವುದನು ಕಲಿಯಲಿಲ್ಲ,
ಹೊಸ ಕವಿಗಳ ಸೆಳೆಯಲಿಲ್ಲ,
ತಡವಾದರು ಚಿಂತೆಯಿಲ್ಲ,
ಈಗಾದರು ನೋಡಿ ಕಲಿ
ಏನಾದರು ಆಗಲಿ.

ಪಾಪ, ನಿನಗೆ ತಿಳಿಯಲಿಲ್ಲ,
ಪಕ್ಷಿ ಮಹಾಸಂಘದಲ್ಲಿ
ಚುನಾವಣೆಯ ಗಡಿಬಿಡಿ,
ನೀನು ಕೂಡ ಮೆಂಬರಾಗಿ
ಏನಾದರು ಜಾಗ ಹಿಡಿ
ಹಾಗಾದರೆ ನಿನಗೆ ಸ್ಥಾನ,
ಅದಕ್ಕೆ ತಕ್ಕ ಹಾಗೆ ಮಾನ
ಇದನು ಕೇಳಿ ಈಗಾದರು
ಹೊಂದಿ ನಡೆವ ಬಾಳ ಕಲಿ,
ನಿನ್ನ ಕುರಿತು ಯಾರೊಬ್ಬರು
ಪದ್ಯ ಬರೆಯರಿದನು ತಿಳಿ,
ಹೇಳಬೇಡ ಮತ್ತಾರಿಗು
ನಾನೀ ತೆರ ನಿನ್ನ ಕುರಿತು,
ಅನುಕಂಪೆಗೆ ಪದ್ಯ ಬರೆದು
ಇಟ್ಟುಕೊಂಡ ಸುದ್ದಿಯ.
ನೂರು ಬಗೆಯ ಅನುಭವದಲಿ
ಕಲಿಯಬೇಕು ಬುದ್ಧಿಯ.

—ಜಿ. ಎಸ್. ಶಿವರುದ್ರಪ್ಪ, ಮೈಸೂರು

# ದೀವಳಿಗೆ!

ಬಂದಿತೇ ದೀವಳಿಗೆ—
ನರಕಾಸುರನ ಬಾಳಕೊನೆಗಳಿಗೆ!
ಮನದ ಕತ್ತಲೆಯು—
ಅಂಗಳದ ಹೊರಗೆ!

ಬೀದಿ-ಬೀದಿಯು ತುದಿಗೆ—
ಮನೆ-ಮನೆಯು ಬಾಗಿಲವರೆಗೆ!
ಪಣತಿ ದೀಪದ ಸಾಲು—
ಮುಗಿಲು ಮಿಂಚಿನ ಕೋಲು!
ಇರುಳು ಕಿತ್ತಿತೆ—ಕಾಲು!

ಬಂದಿತೇ—ದೀವಳಿಗೆ—
ಮನದ ಕತ್ತಲೆಯು
ಅಂಗಳದ ಹೊರಗೆ!

× × ×

ಬಂದಿತೇ— ದೀವಳಿಗೆ—
ಕಾಡು ಇರುಳಿನ ಮನೆಯು— ಬಾಗಿಲಿನ ವರೆಗೆ!
ಏನು, ಕತ್ತಲು ಒಳಗೆ—
ಚಿಮಣಿ ಗಂಟಲು— ಒಣಗೆ!
ತಿಳಿಯುಬಾರದೆ ನಿನಗೆ—
ವರುಷ-ವರುಷಕು—ಸುಲಿಗೆ!
ನಿಲ್ಲಬಾರದೆ ಹೊರಗೆ—
ಒಂದುಗಳಿಗೆ!

ಬಂದಿತೇ ದೀವಳಿಗೆ—
ಕಾಡು ಇರುಳಿನ ಮನೆಯು—
ಬಾಗಿಲಿನ ವರೆಗೆ!

× × ×

ಬಂದೆಯಾ, ಬಾ, ದೀವಳಿಗೆ—
ನಗರವಾಸಿಯು ಬರಡು ಬಾಳಿನ ಮನೆಯು ವರೆಗೆ!
ನಡುಗುತಿದೆ— ಶ್ವಾಸವೇಕೋ ಎದೆಯು ಗುಂಡಿಗೆಯೊಳಗೆ!
ಏನು ಗದ್ದಲವಲ್ಲಿ—
ಮುನಸಿಪಾಲಟಿ—ನಲ್ಲಿ!
ಯಾರು, ಗುದ್ದಿದರವಗೆ—
ಹೋ!........ ಹೋ!!........!!!
ಅಯ್ಯೋ!— ಅಯ್ಯೋ!—
ಏನನ್ಯಾಯ!


"ಜೇಬಿನೊಳಗಿನ— ಪಾಕೀಟಿ ಇಲ್ಲ!"
ಹಾರಿಸಿದನೇ— ಕಳ್ಳ!
ಹಾ!...... ರಾಮ!...... ರಾಮ!......

ಕತ್ತಲುಗೂಡಿದವೆ— ಕಣ್ಣು!—
ರೆಪ್ಪೆ ಸುಲಿಯುದ— ಹಣ್ಣು!

ಕೋಡಿಹರಿಯಿತೆ ಹಳ್ಳ—
ರೆಪ್ಪೆ—ಚಿಪ್ಪಿನ ಕೊಳ್ಳ!

ಬಂದೆಯಾ, ಬಾ, ದೀವಳಿಗೆ!
ಅಂಗಳದ ಕತ್ತಲಿನ ಬೇಲಿಯು ವರೆಗೆ—
ಅಲ್ಲೆ ಸಾಲಾಗಿ ಕೂತ ಮಣ್ಣಿನ ಹಣತೆಯೊಳಗೆ!
ಅಲ್ಲೆ ಕೂತಿರು ಹಣಕಬೇಡ, ಕಿಟಕಿಯೊಳಗೆ!
ಇಲ್ಲೆ ಕೊಡುವೆನು— ಎಣ್ಣೆಯುನೆ ಬಲಿಯಾಗಿ— ನಿನಗೆ!

— ರಾಘವೇಂದ್ರ, ಹುಬ್ಬಳ್ಳಿ




ಏನಿದೀ ಹನಿಹನಿಯ ತೆನೆತೆನೆ ಸಿವುಡುಗಟ್ಟುತ ಒಗೆವುದು !
ಗುಡ್ಡ ಗುಡ್ಡಕೆ ಗೂಡು ಬಡಿಯುತ ಬೇರೆ ಸುಗ್ಗಿಯ ಬಗೆವುದು.
ಸೆಳಸೆಳಕು ಬೆಳೆ ಕೊಯಿದರೂ ಆ ಮೋಡದೊಕ್ಕಲು ತಂಗದು
ಬಾನ ಮೇಟಿಗೆ ಸೋನೆ ತೂರುತ ರಾಶಿಮಾಡದೆ ಹಿಂಗದು.

ಏನು ಬೆಳ್ಳಗೆ ಎಷ್ಟು ತೆಳ್ಳಗೆ ಮಳೆಯ ಮಸ್ಲಿನ್ ಪರದೆಯು !
ಒಳಗೆ ಸುಮ್ಮನೆ ಕುಳಿತು ನೋಡುವಳಾರು ಹೇಳಾ ಮುಗದೆಯು ?
ಹೂ ಬಿಸಿಲ ಕರವಸ್ತ್ರದಲಿ ತರತರದ ಹೆಣಿಕೆಯ ನಕ್ಷೆಯು
ದೂರ ಹೋದವರಿಂದು ಬರುವರೆ, ಎಂದು ಬರುವ್ಯನಿರೀಕ್ಷೆಯು ?

ನೋಡು, ಮೋಡದ ಬಸ್ಸು ಭರ ಭರ ತುಂಬಿಕೊಂಡೇ ಸಾಗಿವೆ
ಯಾವ ಗಿರಿ ಶಿಖರದಲಿ ಜಾತ್ರೆಯೊ, ಏಳುಕೊಳ್ಳಕೆ ಬಾಗಿವೆ.
ದೂರ ದೇಶದ ಯಾತ್ರಿಕರು ತಾ ಬೇರೆ ದೇಶಕೆ ಬಂದರು
ಕಂಡ ಗುಡಿ ಗೋಪುರಕೆ ಕೈ ಮುಗಿಯುತ್ತ ಅಲ್ಲಿಯೆ ನಿಂದರು.

ಏನು ಕಳಕೊಂಡಿರುವೆ ಗಾಳಿಯೆ ಏಕೆ ಈ ಪರಿ ಹುಡುಕುವೆ ?
ಕಿಡಕಿ ಬಾಗಿಲು ಮುಚ್ಚಿರಲು ಕಿರು ಬಿರುಕಿನಲಿ ಬಿಸಿಸುಯ್ಯುವೆ.
ಆ ಹಿಮಾಲಯದಿಂದ ನಿನ್ನನು ಬೀಸಿ ಒಗೆದರೆ ಇಲ್ಲಿಗೆ ?
ಸಪ್ತಸಾಗರ ಸುತ್ತಿ ಬಂದೆಯ, ಮತ್ತೆ ಹೋಗುವದೆಲ್ಲಿಗೆ !

ಮೋಡ ನೂತೇನೂಲುವದು ಬಿಳಿದಾರ ಧಾರಾಕಾರದಿ
ಗುಡ್ಡ ಮರಡಿಗೆ ಸುತ್ತಿ ಕುಕ್ಕಡಿ ಮಾಡಿ ತುಂಬಿದೆ ಕೊಳ್ಳದಿ,
ಹಳ್ಳ-ಹೊಳೆ ಮಗ್ಗದಲಿ ನೇಯುತ ಹೊರಗೆ ಕಳಿಸಿದೆ ಮಾಲನು
ಗದ್ದೆ ಹೊಲ ತೋಟಕ್ಕೆ ಹೊಚ್ಚಿದೆ ಕೆಂಪು ಖಾದಿಯ ಶಾಲನು.

ಹಗಲು ಇರುಳೂ ಕೆಲಸವೇನಿದೆ ಮಳೆಗೆ ?— ಬಂದೇ ಬರುವದು
ನಡುವೆ ಚಕ್ಕನೆ ಹಸುರ ಮಧ್ಯಕೆ ಸೂರ್ಯ ಸರ್ಚ್‌ಲೈಟ್ ಕೆಡವಲು
ಹನುಮನೆದೆಯೊಳು ರಾಮ ಸೀತೆಯರಂತೆ ಕಣ್ಣಿಗೆ ಹೊಳೆವುದು.
ಮರುಚಣವೆ ಆಕಾಶವೆಲ್ಲವು ಹರಿದು ಬಿದ್ದೋಲು ಸುರಿವುದು.

ಕಾರಹುಣ್ಣಿವೆ ಕರಿಹರಿದು ಮಣ್ಣೆತ್ತು ನೀರನು ಕುಡಿದವು.
ಬಂತು ಪಂಚಮಿ ಬೋಲಬಗರಿಗೆ, ಹೆಣ್ಣು ತವರಿಗೆ ಮಿಡಿದವು.
' ಅರಳು ಮರಳಿ'ನ ಕವಿಯು ಕರೆದನು 'ಬಾರೋ ಸಾಧನಕೇರಿಗೆ'
ಬಂತು ಶ್ರಾವಣ ಬಳಗದೊಂದಿಗೆ ' ಮಳೆಯು ಎಳೆಯುವ ತೇರಿಗೆ'

ಗಣಪತಿಯು ಇಲಿಯೇರಿ ಭರ್ಜರಿ ವೇಷದಲ್ಲಿಯೆ ಬಂದನು
ಕರಿಕೆ ಪತ್ರಿಯ ಪೂಜೆ ಸಂದಿತು ಕಡಬು ಹೋಳಿಗೆ ತಿಂದನು.
ಘಟಸ್ಥಾಪನೆಯಾಯ್ತು ; ಮೊಡದ ಕೊಡವು ಬುಡಮೇಲಾಯಿತು
ಸೀಗೆ ಹುಣ್ಣಿವೆಗಾ ಮಸಾರಿಯು ಹಸುರು ಪುಚ್ಚವ ತೆರೆಯಿತು.

ಗೌರಿ ಹುಣ್ಣಿವೆ ಹಾಲ್ಗುಡಿದು ಬಿಳಿಜೋಳ ಧ್ವಜವನ್ನೆತ್ತಿತು
ಗೋದಿ ಹೊಡೆಗಚ್ಚಿರಲು ಕಡಲೆಯ ಮಡಿಲು ಹೂಮಿಡಿ ತುಂಬಿತು;
ಕುಸುಬೆ ಹೂಗಳ ಜರದ ಪೀತಾಂಬರದ ಹಬ್ಬಕೆ ಉಟ್ಟಿತು
ಮೊದಲೆ ದೀಪಾವಳಿಗೆ ಒಲುಮೆಯ ದೀಪ ಬೆಳಗಿಸಿಕೊಂಡಿತು.

ಏನು ಈ ಗಿಡ ಬಳ್ಳಿ ಮರಗಳಿಗೆಲ್ಲ ಎಂತಹ ಜಳಕವು !
ಹಸುರು ಹಚ್ಚನೆ ನಿಮಿರಿ ನಿಂತಿಹ ನೆಲಕೆ ಹರ್ಷದ ಪುಳುಕವು.
ಎಲ್ಲಿಯಾದರು ಕಸರು ಕಡ್ಡಿಯ ಹುಡುಕಿ ತೆಗೆಯಿರಿ ನೋಡುವ
ಕೆಸರೊ ಬೇಕಾದಷ್ಟು— ನಡೆಯಿರಿ ನಗರ ಸಭೆಗೇ ತೂರುವ.

ಕೊಡೆ ಹಿಡಿದು ಕಾಯ್‌ಪಲ್ಲೆ ತಂದರೆ ಪ್ಯಾಂಟು ಕೂಡಲೆ ಪಚಡಿಯು
ಕಾರು ಹಾಯ್ದರೆ ಬಾಯ್ಗೆ ಸಿಡಿವುದು ಕೆಂಪು ಗೋದಿಯ ಕಿಚಡಿಯು.
ಮಳೆಯ ಪಂಜರದಲ್ಲಿ ಸೆರೆಯಾಗಿಹೆವು ಸರ್ಕಸ್ ಹುಲಿಗಳು
ಅಲ್ಲಿ ಹೊಲ ಗದ್ದೆಯಲಿ ಕೊಪ್ಪೆಯ ಹೊತ್ತು ಗೆಯ್ವರೆ ಕಲಿಗಳು.



ಬೂಟು ಚಪ್ಪಲು ಮಾಡದಲ್ಲಿಯೆ ಬುರುಸುಗಟ್ಟಿವೆ ಥಂಡಿಗೆ—
ಕೋಟು ಸ್ವೆಟರಿನ ಮೇಲೆ ಸ್ಕಾರ್ಫನು ಸುತ್ತಿ ಹೊರಟಿರ ದಂಡಿಗೆ ?
ಬಿಸಿಲ ಮೋರೆಯ ಕಾಂಬುದಾಯಿತು ಬರಿಯ ಮನಸಿನ ಮಂಡಿಗೆ
ಜೀವ ಬೇಡಿದೆ ಕಾಫಿ ದೋಸೆಯು ಕರಿದ ಹಪ್ಪಳ ಸಂಡಿಗೆ.

ಒಲೆಯ ಬದಿಯಲಿ ತಲೆಯ್ನ ಹುದುಗಿಸಿ ಮಲಗಿಕೊಂಡಿಹ ಬೆಕ್ಕಿಗೆ
ಕನಸಿನಲ್ಲಿಯು ಇಲಿಯು ಬಾರದು; ಹಕ್ಕಿ ಗೂಡೊಳು ತೆಪ್ಪಗೆ.
ಮೈಯುಡುಗಿ ನಡಗುತ್ತ ದನಕರು ಮೇದು ಬರುತಿವೆ ಒಟ್ಟಿಗೆ
ಮನೆಯ ಒಳಗೇ ಕುಳಿತು ಕಾತರಿಸಿಹೆನು ಗೆಳೆಯರ ಭೆಟ್ಟಿಗೆ.

ಬಿಸೇ ಚುರುಮರಿ ಕಡಲೆ ಮಾರುವ ಮುದುಕಿ ಬಂದರೆ ಕರೆಯಿರಿ
ಮಕ್ಕಳೊಂದಿಗೆ ಕುಳಿತು, ಕುರುಕುರು ತಿಂದು ಹೊರಜಗ ಮರೆಯಿರಿ
ಅಷ್ಟುಮಿಕ್ಕೀ ಬೇಸರಾದರೆ ರೇಡಿಯೊ ಕಿವಿ ತಿರುವಿರಿ,
ರಾತ್ರಿಯಾಗಲು ಊಟತೀರಿಸಿ ಜೊತೆಗೆ ಬೆಚ್ಚಗೆ ಮಲಗಿರಿ.

— ಚೆನ್ನವೀರ ಕಣವಿ

# ವಿಡಂಬನೆ

ಬರೆದವರು : ಶ್ರೀರಂಗ


‘ ಕನ್ನಡ ಸಾಹಿತ್ಯ’ದ ಒಂದು ಪ್ರಭಾವಶಾಲಿಯಾದ ಪ್ರಕಾರವಾಗಿರುವ ವಿಡಂಬನೆಯ ಬಗೆಗೆ ಜನತೆ ಹೆಚ್ಚು ಅರಿತುಕೊಳ್ಳುವದು ಅವಶ್ಯವಿರುವದು. ಸಂಸ್ಕೃತಿಯ ಬೆಳವಣಿಗೆಯ ಲಕ್ಷಣವಾಗಿರುವ ವಿಡಂಬನೆಯ ರೂಪ, ಅದರಲ್ಲಿಯ ಮಹತ್ವದ ಅಂಶಗಳನ್ನು ಲೇಖಕರು ಇಲ್ಲಿ ವಿಶದಪಡಿಸಿರುವರು. . . . .

ವಿಡಂಬನೆ ಇಂದಿನ ಕನ್ನಡ ಸಾಹಿತ್ಯದ ಒಂದು ಪ್ರಭಾವಶಾಲಿಯಾದ ಪ್ರಕಾರವಾಗಿದೆ. ಆ ಬಗ್ಗೆ ನಮ್ಮಲ್ಲಿ ಇನ್ನೂ ಹೆಚ್ಚಾದ ಅಭ್ಯಾಸವಾಗಿಲ್ಲ. ಒಂದು ದೃಷ್ಟಿಯಿಂದ ಹೇಳುವುದಾದರೆ ಇಂದಿನ ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಅನೇಕ ಹೊಸ ಮಾದರಿಗಳ ಅಭ್ಯಾಸವಾಗಲಿ, ಪರಿಚಯವಾಗಲಿ ಕನ್ನಡ ಓದುಗರಿಗೆ ಆಗಿಲ್ಲ ಎನ್ನಬಹುದು. ತಾವು ಓದುತ್ತಿರುವ ಸಾಹಿತ್ಯದ ಸ್ವರೂಪವೇನು, • ಸಾಹಿತ್ಯದ ಬೆಳೆವಣಿಗೆಯ ದೃಷ್ಟಿಯಿಂದ ಅದರ ಸ್ಥಾನ-ಮಹತ್ವಗಳು ಯಾವುವು, ಸಮಾಜ ಜೀವನಕ್ಕೂ ಅಂತಹ ಸಾಹಿತ್ಯಮಾದರಿಗೂ ಯಾವ ತರದ ಸಂಬಂಧ—ಮುಂತಾದ ಅನೇಕ ಪ್ರಶ್ನೆಗಳಿಗೆ ಸಮರ್ಪಕ ಇಲ್ಲವೆ ಸಹಾಯಕ ಉತ್ತರವನ್ನು ಕೊಡಬಲ್ಲ ವಿಮರ್ಶಾಶಾಸ್ತ್ರವೂ ನಮ್ಮಲ್ಲಿ ಬೆಳೆದಿಲ್ಲ. ಕನ್ನಡದ ಪಂಡಿತರು, ಕನ್ನಡದ ಪ್ರಾಧ್ಯಾಪಕರು, ಸಾಹಿತ್ಯದ ವಿದ್ಯಾರ್ಥಿಗಳು ಮಾಡಬೇಕಾದ ಕೆಲಸವದು. ಅಂತಹ ವಿಮರ್ಶೆಯಿಂದ ಓದುಗರಲ್ಲಿ ಅಭಿರುಚಿ ಮೂಡುವುದಲ್ಲದೆ ಆ ಅಭಿರುಚಿ ಕ್ರಮೇಣ ಉತ್ತಮಗೊಂಡು ಮುಂದೆ ಹೆಚ್ಚು ಉತ್ತಮವಾದ ಸಾಹಿತ್ಯದ ಹುಟ್ಟಿಗೆ ಪ್ರೇರಕವಾಗುವುದು. ಅಂತಹ ವಿಮರ್ಶ್ಯಾಗ್ರಂಥಗಳು ಇನ್ನೂ ಹುಟ್ಟಿಲ್ಲವಾದ್ದರಿಂದ ಇಂದಿನ ನಮ್ಮ ಸಾಹಿತ್ಯವನ್ನು ಸರಿಯಾಗಿ ಅರಿತು ಓದಿಕೊಂಡವರು ಇಲ್ಲ ಎನ್ನದಿದ್ದರೂ ಕಡಿಮೆ ಎಂದು ಖಂಡಿತವಾಗಿ ಹೇಳಬೇಕಾಗುವುದು. ಓದುಗರ ಅಭಿರುಚಿ ಸಂಸ್ಕೃತಗೊಳ್ಳದಿದ್ದಾಗ ಹೆಚ್ಚು ಓದುಗರು ಜೇಬು ಕತ್ತರಿಸುವ ಕೃತಿ (pocket edition) ಗಳನ್ನೆ ಓದಿದ್ದರೆ ಆಶ್ಚರ್ಯವಲ್ಲ, ವಿಷಾದಪಡಬೇಕಾಗಿಯೂ ಇಲ್ಲ.

## ಮಾತಿನ ರೀತಿ ಮಹತ್ವದ್ದು

ಈ ಸಾಮಾನ್ಯ ಮಾತುಗಳನ್ನು ಬರೆಯುವುದಕ್ಕೆ ನನ್ನ ಸ್ವಾರ್ಥದ ಕಾರಣವೊಂದಿದೆ. ಸದ್ಯದ ವಿಷಯದ ಮೇಲೆ ನಾನು ಈ ಲೇಖವನ್ನು ಬರೆಯುತ್ತಿದ್ದೇನೆ. ಕನ್ನಡ ಪಂಡಿತನೂ ಅಲ್ಲ ನಾನು, ಕನ್ನಡ ಪ್ರಾಧ್ಯಾಪಕನೂ ಅಲ್ಲ ನಾನು. ಇದಲ್ಲ ಇಂದು ವಿಡಂಬನಾಸಾಹಿತ್ಯವನ್ನು ಬರೆಯುವ ನಾಲ್ಕಾರು ಲೇಖಕರಲ್ಲಿ ನಾನೂ ಒಬ್ಬ, ತಕ್ಕಮಟ್ಟಿಗೆ ಹಳಬ. ಹೀಗೆ ಎರಡೂ ದೃಷ್ಟಿಗಳಿಂದ ನನ್ನಂತಹನಿಗೆ ಹಕ್ಕಿಲ್ಲವಾದರೂ ಬರೆಯುವುದು ಅನಿವಾರ್ಯವಾಗಿದೆ. ಈ ಪರಿಸ್ಥಿತಿ ಕಳೆಯಬೇಕು. ಬರೆದವನೆ ತನ್ನ ಬರೆವಣಿಗೆಯ ವಿಮರ್ಶೆಯನ್ನು ಬರೆಯುವದು ಸಾಹಿತ್ಯಕ್ಕೆ ಅಗೌರವ, ಸಾಹಿತಿಗೆ ಅನ್ಯಾಯ. ಇದನ್ನರಿತು ನಾನು ಈ ಲೇಖವನ್ನು ಬರೆಯುತ್ತಿದ್ದೇನೆ ಎಂಬುದನ್ನು ವಾಚಕರು ಲಕ್ಷ್ಯದಲ್ಲಿ ಇಟ್ಟುಕೊಳ್ಳಬೇಕು.

ವಿಡಂಬನೆಯ ವಿಷಯದ ವಿವೇಚನೆಯನ್ನು ಒಂದು ದೃಷ್ಟಾಂತದಿಂದಲೆ ಪ್ರಾರಂಭಿಸುವೆ. ಕನ್ನಡ ಭಾರತದಲ್ಲಿ ದ್ರೌಪದೀಸ್ವಯಂವರದ ಸಂದರ್ಭದಲ್ಲಿ ಬ್ರಾಹ್ಮಣ ವೇಷದಲ್ಲಿದ್ದ ಅರ್ಜುನನು ಸ್ವಯಂವರ ಮಂಟಪದಲ್ಲಿ ಧನುರ್ಭಂಗಕ್ಕಾಗಿ ಎದ್ದಾಗ ಅವನನ್ನು ನೋಡಿ ದ್ರೌಪದಿಯ ಕೆಳದಿಯರು ಈ ಮಾತನ್ನು ಹೇಳುತ್ತಾರೆ:—



“ ....ನಳಿನಮುಖಿಯನು ವರಿಸು ಬಾ ”

ಎಲವೊ ಮಟ್ಟಿಯ ಮದನ; ದರ್ಭೆಯ
ತಿಲದ ಮನ್ಮಥ, ವಿಮಲಧೋತ್ರದ
ತಳಿರುಗಾಸೆಯ ಕಾಮ, ಕೃಷ್ಣಾಜಿನದ
ಕಂದರ್ಪ ॥

ನಳಿನಮುಖಿಯನು ವರಿಸು ಬಾ—(ಮುಂತಾಗಿ)
[ ಸಂಧಿ ೧೫, ಶ್ಲೋ. ೨೧ ]

ಈ ಮಾತಿಗಾಗಿ ನಮ್ಮಲ್ಲಿ ನಗೆ ಮೂಡುವುದು. ನಿಜವಾಗಿ ಮಟ, ದರ್ಭೆ, ತಿಲ; ತಳಿರುಗಾಸೆಯ ವಿಮಲಧೋತ್ರ, ಕೃಷ್ಣಾಜಿನ—ಇವು ಬ್ರಾಹ್ಮಣನಿಗೆ ಶೋಭಿಸುವ ಲಕ್ಷಣಗಳು. ಆದರೂ ನಾವು ನಗುತ್ತೇವೆ. ಕಾರಣವೆಂದರೆ ಸಂದರ್ಭಕ್ಕೆ ವಿಸಂಗತವಾದ ಲಕ್ಷಣಗಳಿವು. ಧನುರ್ಭಂಗದಂತಹ ಸಾಹಸದ ಕಾರ್ಯಕ್ಕೆ ಈ ಲಕ್ಷಣಗಳು ಪ್ರಯೋಜನಕಾರಿಗಳಲ್ಲ. ಇದಕಾಗಿ ಸಹಜವಾಗಿಯೆ ಶೋಭಿಸಬಹುದಾದುದು ಸಂದರ್ಭದಲ್ಲಿ ಬೇರೊಂದು ಭಾವನೆಯನ್ನು ಮೂಡಿಸುತ್ತಿದೆ. ಅದೆಂದರೆ, ಆ ಲಕ್ಷಣಗಳಿಂದ ಪೂಜನೀಯನಾಗಿರಬೇಕಾದ, ಸ್ವಭಾವದಿಂದ ಬುದ್ಧಿವಂತನಾಗಿರಬೇಕಾದ ಬ್ರಾಹ್ಮಣನೊಬ್ಬನುಇಲ್ಲಿ ಬುದ್ಧಿಗೇಡಿತನವನ್ನು ತೋರಿಸುತ್ತಿದ್ದಾನೆ ಎಂದು. ಆ ಬುದ್ಧಿಗೇಡಿತನವನ್ನು ಹಿಡಿದೆತ್ತಿ ನಮಗೆ ತೋರಿಸುವದು ಈ ಮಾತಿನ ಉದ್ದಿಶ್ಯ. ವಿಡಂಬನೆಯ ಮೂಲ ಇಲ್ಲಿದೆ ಎನ್ನಬಹುದು. ಇಷ್ಟೆ ಅಲ್ಲ. ಮೇಲೆ ಹೇಳಿದಂತೆ ಹೇಳದೆ “ ಎಲವೊ, ಮಟ್ಟ-ಥರ್ಬೆ-ತಿಲ-ಕೃಷ್ಣಾಜಿಗಳನ್ನೇ ಉಪಯೋಗಿಸುವ ಕೈವಾಡದ ನಿನಗೆ ಧನುರ್ಭಂಗ ಮಾಡಬಲ್ಲೆನೆಂಬ ವಿಚಾರ ಮೂರ್ಖತನವಲ್ಲವೆ ? ” ಎಂದು ಸ್ಪಷ್ಟವಾಗಿ ಕೇಳಿದರೆ ಆ ಮಾತಿಗಾಗಿ ಯಾರೂ ನಗುವುದು ಶಕ್ಯವಿಲ್ಲ. ಎಂದರೆ ವಿಡಂಬನೆಯಲ್ಲಿ ಉದ್ದಿಶ್ಯದಷ್ಟೆ ಮಾತಿನ ರೀತಿಯೂ ಮಹತ್ವದ್ದಾಗಿದೆ ಎನ್ನಬೇಕಾಗುವುದು.



" ರಾಯರ ಮೇಲೆ ವಾರಂಟಿತ್ತು. ೧೬೦೦೦ದ್ದು ಬಂದೆ "

ಇನ್ನೊಂದು ದೃಷ್ಟಾಂತವನ್ನು ನೋಡೋಣ. ಶ್ರೀ. ಕೋ. ಶಿ. ಕಾರಂತರ " ಮೂರ್ತಿಯ ಮದುವೆ " ಎಂಬ ಏಕಾಂಕದಲ್ಲಿ " ಭಾರೀ ಮನೆತನದ ಭಾರೀ " ರಾಯರೊಬ್ಬರಿದ್ದಾರೆ. " ಕಾಸು ಉಳಿದರೆ ಸರಿಯೆ ? ಮಾನ ಉಳಿಯ ಬೇಡವೇ ? " ಎನ್ನುವ ತಿಪ್ಪಾಭಟ್ಟರಂತಹರಿಂದ ಪ್ರೋತ್ಸಾಹಿತರಾಗುತ್ತಿದ್ದ ರಾಯರು ಮನೆಗೆ ಮಣಿಗಾರ ಶ್ಯಾಮರಾಯರು ಬರುವರೆಂದು ಕೇಳಿದೊಡನೆ " ಎಂಟು ಸೀಯಾಳ ಕೆಳಕ್ಕಿಳಿಸಿ ಬಿಡು . . . ಖಾವಂದರಿಗೆ ಒಂದು ಅಭ್ಯಂಜನವಾಗಲಿ " ಮುಂತಾಗಿ ಹುಕುಂ ಹೊರಡಿಸುವರು. ಈ ರಾಯರ ಮಗನ ಮದುವೆಯ ತಯ್ಯಾರಿಗಾಗಿ ಯೋಚಿಸಿದ್ದನ್ನು ಕೇಳಬೇಕೆ ? ಕೊನೆಗೆ ಅಮೀನರೊಬ್ಬರು ಬರುತ್ತಾರೆ. ಯಾಕೆ ? ಕೇಳಿ, ಅಮೀನರು ಹೇಳುತ್ತಾರೆ :-

" ರಾಯರ ಮೇಲೆ ಒಂದು ವಾರಂಟಿತ್ತು. ೧೬೦೦೦ದ್ದು ಬಂದೆ." ರಂಗಭೂಮಿಯ ಮೇಲೆ ಈ ದೃಶ್ಯವನ್ನು ನೋಡುವಾಗ ಇದುವರೆಗಿನ ವೈಭವದ ಮಾತಿಗೂ ಈ ಕೊನೆಗೂ ಇರುವ ವ್ಯತ್ಯಾಸಕ್ಕಾಗಿ ನಮಗೆ ಒಮ್ಮೆಲೆ ನಗೆ ಬರುವದು. ರಾಯರ ಬಗ್ಗೆ ಒಂದು ಜಿಗುಪ್ಸೆ ಹುಟ್ಟುವದು. ಸಾಲಮಾಡಿ, ಅದನ್ನು ಮುಟ್ಟಿಸಲು ಅಸಮರ್ಥನಾದಾಗ್ಯೂ ಮನೆತನದ ವೈಭವವನ್ನು ಬಿಡಬಾರದೆಂಬ ನಮ್ಮ ಸಮಾಜದ ಕೆಲವರ ಮೂರ್ಖತನಕ್ಕಾಗಿ ಜಿಗುಪ್ಸೆ ಎನ್ನಿಸಿ, ನಕ್ಕು ಅವರ ಬಗ್ಗೆ ನಮ್ಮ ತಿರಸ್ಕಾರವನ್ನು ವ್ಯಕ್ತಪಡಿಸುತ್ತೇವೆ.

ಇವೆರಡು ದೃಷ್ಟಾಂತಗಳಿಂದ ಒಂದೆರಡು ಸಂಗತಿಗಳು ಸ್ಪಷ್ಟವಾಗುವವು. ಮೊದಲನೆಯದೆಂದರೆ ಯಾವುದೇ ವ್ಯಕ್ತಿಯ ಇಲ್ಲವೆ ವರ್ಗದ ದೋಷ ಇಲ್ಲವೆ ದಡ್ಡತನ ಇಲ್ಲವೆ ದೌರ್ಬಲ್ಯವನ್ನು ಎತ್ತಿ ತೋರಿಸುವುದೆ ವಿಡಂಬನೆಯ ಉದ್ದಿಶ್ಯ; ಎರಡನೆಯದೆಂದ ಹಾಗೆ ತೋರಿಸುವಾಗ ಆ ವ್ಯಕ್ತಿ ಇಲ್ಲವೆ ವರ್ಗದ ಬಗ್ಗೆ ಒಂದು ತಿರಸ್ಕಾರಭಾವವನ್ನು ಹುಟ್ಟಿಸುವುದು ಮತ್ತು ಮೂರನೆಯದಾಗಿ, ವಿಡಂಬನೆಯ ಶೈಲಿ ಹಾಸ್ಯಕ್ಕೆಯೇ ಅವಕಾಶವನ್ನು ಒದಗಿಸಿ ಕೊಡುವುದು.

## ಚಾಟಿಯ ಏಟು

ಈ ಮಾತುಗಳಿಗಾಗಿ ವಿಡಂಬನೆಯ ಪ್ರಕಾರ ಪ್ರಭಾವಶಾಲಿಯಾಗಿದೆ ಎಂಬ ಪ್ರಾರಂಭದ ವಾಕ್ಯ ಸಾರ್ಥಕ ಎನ್ನಿಸುವದು. ವಿಡಂಬನೆ ಚಾಟಿಯ ಏಟಿನಂತೆ. ಆದರೆ ಸಮಾಜದಲ್ಲಿ ಹಾಗೆ ಏಟು ತಿನ್ನುವ ದೃಶ್ಯವನ್ನು ಕಂಡಾಗ ನಮ್ಮಲ್ಲಿ ನಗೆ ಎಂದಿಗೂ ಮೂಡುವದಿಲ್ಲವಾದರೆ; ಸಾಹಿತ್ಯದಲ್ಲಿ ವಿಡಂಬನೆಯ ಚಾಟಿಯ ಏಟನ್ನು ನಾವೇ ತಿನ್ನುವಾಗಲೂ ನಮ್ಮಲ್ಲಿ ನಗೆ ತಡೆಯದಾಗಿ ಹೊರಹೊಮ್ಮುವದು. ನನ್ನ 'ಅಶ್ವಮೇಧ' ಎಂಬ ಏಕಾಂಕದ ದೃಷ್ಟಾಂತವನ್ನು ನೋಡಬಹುದು. ವಯಸ್ಸಿಗೆ ಬಂದ ಮಗಳ ಮದುವೆಗಾಗಿ ತಂದೆ ಪಡುವ ಕಷ್ಟ ಎಂತಹ ಅಸಹ್ಯವಾದುದು ಎಂಬ ಚಿತ್ರವನ್ನೇ ಅಲ್ಲಿ ತೋರಿಸುವಾಗಲೂ ಪ್ರೇಕ್ಷಕರು ನಗೆಗಡಲಿನಲ್ಲಿ ಮುಳುಮುಳುಗಿ ಏಳುತ್ತಾರೆ. ತಮ್ಮ ಕಣ್ಮುಂದೆ ನಡೆಯುತ್ತಿದ್ದ ಚಿತ್ರ ತಮ್ಮದೆ ಎಂದೆನಿಸಿದರೂ ಅವರ ನಗೆ ತಡೆಯುವುದಿಲ್ಲ. ಆದರೆ ಆ ನಗೆಯಿದ್ದಾಗಲೂ ಎಲ್ಲಿಯೊ ಒಂದೆಡೆ ಪೆಟ್ಟು ತಟ್ಟಿದಂತಾಗುವುದು; ಪ್ರೇಕ್ಷಾಗೃಹದ ಜನಸಮ್ಮರ್ದದಭಾಗಿಯಾಗಿ ನಕ್ಕರೂ ಒಬ್ಬನೇ ಕುಳಿತು ನೆನೆದುಕೊಂಡಾಗ ಮೈ ನಡುಗಬಹುದು. ಇಂತಹ ಕಟುಹಾಸ್ಯವಿಲ್ಲದಿದ್ದಲ್ಲಿ ವಿಡಂಬನೆ ಸಫಲವಾಗುವುದಿಲ್ಲ. ವ್ಯಕ್ತಿ—ವರ್ಗ—ಇಲ್ಲವೆ ವಿಷಯದ ಬಗ್ಗೆ ಜಿಗುಪ್ಸೆ ಇಲ್ಲವೆ ತಿರಸ್ಕಾರವನ್ನು ಹುಟ್ಟಿಸಬೇಕಾದಲ್ಲಿ ಕಟುಹಾಸ್ಯ ಅನಿವಾರ್ಯವಾಗುವುದು. ಆದರೆ ಮಗುವನ್ನು ಸನ್ಮಾರ್ಗಕ್ಕೆ ಹಚ್ಚಲು ಹೊಡೆವ ತಾಯಿಯಂತೆ ವಿಡಂಬನೆಯು ಏಟುಗಳನ್ನು ಕೊಡುವುದು. ರೋಗವನ್ನು ಗುಣಪಡಿಸಲು ಶಸ್ತ್ರಕ್ರಿಯೆಯನ್ನು ಮಾಡುವ ಡಾಕ್ಟರನಂತೆ ವಿಡಂಬನೆಯು ನೋವನ್ನುಂಟುಮಾಡುವುದು.

ವಿಡಂಬನೆಯ ಧ್ಯೇಯ ಸಾಹಿತ್ಯದ ಧ್ಯೇಯವೆ ಆಗಿದೆ. ನಮ್ಮ ಪರಿಭಾಷೆಯಲ್ಲಿ ಹೇಳುವುದಾದರೆ " ರಾಮಾದಿವತ್ ವರ್ತಿತವ್ಯಂ ನ ರಾವಣಾದಿವತ್ " ಎಂಬ ಮಾತನ್ನೆ ವಿಡಂಬನೆಯು ತನ್ನ ದಾರಿಯಲ್ಲಿ ಹೇಳಿಕೊಡುತ್ತಿದೆ. ಮಿಕ್ಕ ಪ್ರಕಾರದ ಸಾಹಿತ್ಯವು ರಾಮನ ಸದ್ಗುಣಗಳನ್ನೂ ರಾವಣನ ದುರ್ಗುಣಗಳನ್ನೂ ತೋರಿಸಿ ಉಪದೇಶ ಮಾಡಿದರೆ ವಿಡಂಬನೆಯು ರಾವಣನ ಹತ್ತು ತಲೆಗಳನ್ನೆ ತೋರಿಸಿ ಅವನು ಹತ್ತುಪಟ್ಟು ಮೂರ್ಖ ಹೇಗಾದ ಎಂಬುದನ್ನು ತೋರಿಸುವುದು; ನಗಿಸುವುದಾದ್ದರಿಂದ ಮರೆಯಲು ಶಕ್ಯವಿಲ್ಲ, ಮರೆಯುವದಿಲ್ಲವಾದ್ದರಿಂದ ಸಫಲತೆ ಖಂಡಿತ.

## ಅತಿಶಯೋಕ್ತಿ

" ಹತ್ತು ತಲೆಗಳಿದ್ದಲ್ಲಿ ಹತ್ತುಪಟ್ಟು ಮೂರ್ಖ " ಎಂಬ ಮಾತಿನಲ್ಲಿ ವಿಡಂಬನೆಯ ಇನ್ನೊಂದು ವೈಶಿಷ್ಟ್ಯ ಅಡಕವಾಗಿದೆ. ಅದೆಂದರೆ ಅತಿಶಯೋಕ್ತಿಯ ರೀತಿ. ನನ್ನ ಅಶ್ವಮೇಧದ ಕೊನೆಗೆ " ಯಾರಾರಿಗಿದೆ ಉದರ। ನಿರ್ವಾಹ ಶಕ್ತಿ ಆ ತರುಣಿರಿವಳಂ ತಡೆದು ಮದುವೆಯಾಗಲಿ ನೋಳ್ಪುವೆ—(ಎಂದು ಮಗಳ ಹಣೆಗೆ ಪಟ್ಟಿಯನ್ನು ಬಡೆದು) ವೆಂಕಪ್ಪ ಓಡಿಹೋಗುವನು. ಮಗಳನ್ನು




ಈ ರೀತಿ ಸಾಕ್ಷಾತ್ತಾಗಿ ಅಶ್ವಮೇಧದ ಕುದಿರೆ ಎಂದು ಯಾವ ತಂದೆಯೂ ವ್ಯವಹರಿಸುವುದಿಲ್ಲ; ನಿಜ. ಆದರೆ ಅದಕ್ಕಾಗಿ ಇದು ಸಮಾಜ ಜೀವನದ ಪ್ರತಿಬಿಂಬವಲ್ಲ, ಆದ್ದರಿಂದ ಸಾಹಿತ್ಯವಲ್ಲ ಎಂದು ಹೇಳುವುದು ತಪ್ಪಾಗುವುದು. ಮಗಳ ಮದುವೆಗಾಗಿ ಈ ರೀತಿ ತಂದೆ ಕಷ್ಟಪಡಬೇಕಾದ ಸ್ಥಿತಿಯನ್ನು ಒದಗಿಸುವ ಸಮಾಜ, ಮಗಳ ಹಣೆಗೆ ಪಟ್ಟಿಯನ್ನು ಬಡೆಯುವ ತಂದೆಯಂತೆ ಅಪಹಾಸ್ಯವಾಗಿದೆ ಎಂದು ತೋರಿಸುವುದೆ ಈ ವಿಡಂಬನಾದೃಶ್ಯದ ಉದ್ದೇಶ. ಅಪಹಾಸ್ಯತೆ ಮೂಡಲು ಸಹಾಯಕವಾಗುವಂತೆ ಚಿತ್ರ ಅತಿಶಯೋಕ್ತಿಯುದಾಗಿರುವುದು.

ಅತಿಶಯೋಕ್ತಿಯು ವಿಡಂಬನೆಯ ಶೈಲಿಯ ವೈಶಿಷ್ಟ್ಯವಾಗಿದ್ದರೆ ಪ್ರಸಿದ್ಧತೆಯು ವಿಡಂಬನೆಯ ವಸ್ತುವಿನ ವೈಶಿಷ್ಟ್ಯವಾಗಿರುವುದು. ದೋಷ - ಲೋಪಗಳನ್ನು ತೋರಿಸುವದಷ್ಟೆ ವಿಡಂಬನೆಯ ಉದಿಶ್ಯವಲ್ಲ. ಅದಿಷ್ಟೆಆಗಿದ್ದರೆ ವಿಡಂಬನಾಸಾಹಿತ್ಯಕ್ಕೆ ದ್ವೇಷ-ಮತ್ಸರ ಮೊದಲಾದ ದುರ್ಗುಣಗಳೆ ಪ್ರೇರಕವಾಗಬಹುದಿತ್ತು ಶ್ರೋತೃಗಳಲ್ಲಿ ತಿರಸ್ಕಾರ ಭಾವ ಮೂಡಿದರೂ ಅದನ್ನು ಬರೆಯುವ ಸಾಹಿತಿ ತಿರಸ್ಕಾರದಿಂದ ಸ್ಫೂರ್ತಿತನಾಗಿರುವುದಿಲ್ಲ. ಮೊದಲು ತಿರಸ್ಕಾರ, ಆ ಮೇಲೆ ಕನಿಕರ, ಕೊನೆಗೆ ಅದನ್ನು ತಿದ್ದಿಕೊಳ್ಳುವ ಆತುರ, ಇದರಿಂದಾಗಿ ಕೃತಿ ನಿರ್ಮಾಣ. ಈ ಕಾರಣಕ್ಕಾಗಿ ಎಷ್ಟೊಂದು ಕಟುವಾಗಿದ್ದರೂ ವಿಡಂಬನೆಯು ಓದುಗರಲ್ಲಿ ದ್ವೇಷ-ಮತ್ಸರಗಳನ್ನು ಹುಟ್ಟಸುವದಿಲ್ಲ. ವಿಡಂಬನೆಯ ವಸ್ತುವು ಕೂಡ ವಿಶಾಲ ಮತ್ತು ಸುಪ್ರಸಿದ್ಧವಾದುದಿರಬೇಕಾಗುವುದು. ಇಲ್ಲವಾದರೆ ವ್ಯಕ್ತಿಯ ಕುತ್ಸಿತ ಟೀಕೆ, ಜನಸಮ್ಮತವಾದ ಧರ್ಮ-ನೀತಿಗಳ ಬಗ್ಗೆ ಅಪಪ್ರಚಾರ, ಸ್ವಂತದ ಒಂದು ದೂರಿನ ಬಗ್ಗೆ ವಿಕೋಪ—ಇಂತಹವೆಲ್ಲ ಸಾಹಿತ್ಯವೆನ್ನಿಸಬಹುದಾದೀತು. ಸಮಾಜದ ಮುಂದಾಳು, ರಾಜಕಾರಣಿ, ತಪ್ಪು ಧರ್ಮದ ಅಂಧಶ್ರದ್ಧೆ, ಅಜ್ಞಾನಿಯ ಸಿರಿವಂತಿಕೆ ಇಂತಹವು ಸಾಮಾನ್ಯವಾಗಿ ವಿಡಂಬನೆಯ ವಿಷಯವಾಗುವುವು. ವಿಡಂಬನೆ ಯಾವಾಗಲೂ ವಿಶಾಲಹೃದಯತೆಯ ಬಾಹ್ಯ ಸಂಕೇತವಾಗಿರುವುದು. ಅನ್ಯರ ದೋಷಗಳನ್ನು ಗುರುತಿಸುವ ಉತ್ಸಾಹದಿಂದಲೆ ತನ್ನ ದೋಷವನ್ನು ಗುರುತಿಸುವ ದೊಡ್ಡ ಮನಸ್ಸು ಇಲ್ಲದಲ್ಲಿ, ಜನರ ಇಚ್ಛೆಯ ವಿರುದ್ಧ ಅಧಿಕಾರ ಇಲ್ಲವೆ ಪ್ರಭುತ್ವ ನಡೆದಲ್ಲಿ ವಿಡಂಬನೆಯು ಉಪಯುಕ್ತವಾದ ಸಾಧನವೆನ್ನಿಸಿದೆ.

ವಿಡಂಬನ ಸಾಹಿತ್ಯದ ಬೆಳೆವಣಿಗೆ ಜನತೆಯ ಸಂಸ್ಕೃತಿಯ ಬೆಳೆವಣಿಗೆಯ ಲಕ್ಷಣವಾಗಿದೆ. ಪರಮತ ಸಹಿಷ್ಣುತೆ ಇದ್ದಲ್ಲಿ ವಿಡಂಬನೆ ಬೆಳೆಯುವುದು; ಅದಕ್ಕೆ ವಿರುದ್ಧವಾಗಿ ದಬ್ಬಾಳಿಕೆ ಇದ್ದಲ್ಲೂ ವಿಡಂಬನೆ ಹಟದಿಂದ ಚಿಗುರುವುದು, ಚಿವುಟ ಒಗೆದಷ್ಟು ಹೆಚ್ಚೆಚ್ಚು ಬೆಳೆಯುವುದು, ಕೊನೆಯದಾಗಿ ವಿಡಂಬನೆಗೆ ಆವಶ್ಯಕವಾದುದು ವಕ್ರಶೈಲಿ. ಯಾವ ಸಾಹಿತ್ಯದಲ್ಲಿ ವಿಡಂಬನೆ ಸಚೇತನವಾಗಿದೆಯೊ ಆ ಸಾಹಿತ್ಯ ಸತ್ತ್ವಶಾಲಿಯಾದುದು ಎನ್ನಬಹುದಾಗಿದೆ.





ಲೇಖಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ,
ಧಾರವಾಡ

# ಸಾಹಿತ್ಯ ವಿಮರ್ಶೆ

—೧—

(ವಿವೇಚನಾತ್ಮಕ ಪ್ರಬಂಧ)

ಮಾನವನ ಅಂತರಂಗದ ಸೌಂದರ್ಯವನ್ನು ಹೆಚ್ಚಿಸುವ ಸಾಹಿತ್ಯದ ಸರ್ವತೋಮುಖ ಪರೀಕ್ಷೆ ನಡೆಸುವದನ್ನೇ ಸಾಹಿತ್ಯವಿಮರ್ಶೆಯೆಂದು ಹೇಳಬಹುದು. ಸಾಹಿತ್ಯದ ಬೆಳೆ ಹುಲುಸಾಗಿದ್ದರೂ ಒಳ್ಳೆಯದು ಕೆಟ್ಟದು ಯಾವುದೆಂಬುದನ್ನು ವಿಮರ್ಶಕ ಜನತೆಗೆ ತಿಳಿಸಿಹೇಳಿ ಉಪಕರಿಸಬೇಕು. ಆದರೆ ಇಂದು ನಾವು ಕನ್ನಡ ಸಾಹಿತ್ಯರಂಗದಲ್ಲಿ ಕಾಣುತ್ತಿರುವದೇನು? ಎಂಬುದನ್ನು ಲೇಖಕರು ಇಲ್ಲಿ ಸಾದ್ಯಂತವಾಗಿ ವಿವರಿಸಿರುವರು. . . . . . . .

ಸಾಹಿತ್ಯ ವಿಮರ್ಶೆಯೆಂಬುದು ನಮ್ಮ ಸುಶಿಕ್ಷಿತ ಪ್ರಪಂಚಕ್ಕೆ ಸಾಕಷ್ಟು ಪರಿಚಯದ ಪದವಾಗಿದೆಯಾದರೂ ನಿಜವಾದ ಸಾಹಿತ್ಯ ವಿಮರ್ಶೆಯೆಂಬುದು ಇದುವರೆಗೂ ನಮ್ಮಲ್ಲಿ ಅಪೂರ್ವವಾಗಿಯೆ ಇದೆಯೆಂದು ಹೇಳುವಂತಿದೆ. ಸಾಹಿತ್ಯವು ಇರುವಲ್ಲಿ ವಿಮರ್ಶೆಯೆಂಬುದೂ ಇರಲೇಬೇಕಾಗುತ್ತದೆ. ವಿಮರ್ಶೆಯನ್ನು ಕಾಣದ ಸಾಹಿತ್ಯ ತನ್ನ ನೆಲೆ ಬೆಲೆಗಳನ್ನು ಸರಿಯಾಗಿ ಪ್ರಕಟಿಸದು. ಚಿನ್ನದ ಬಣ್ಣವನ್ನು ಕಂಡು ಹಿಡಿದು ಅದರ ಪರಿಶುದ್ಧತೆಯನ್ನು ನಿರ್ಣಯಿಸುವುದು ಒರೆಗಲ್ಲು. ಹಾಗೆಯೇ ಸಾಹಿತ್ಯದ ಬಣ್ಣವನ್ನು ವಿಶ್ಲೇಷಿಸಿ, ಅದರ ಪರಿಶುದ್ಧ ಸ್ವರೂಪವನ್ನು ನಿರ್ಣಯಿಸಿ ತೋರಿಸುವ ಸಾಧನವೆಂದರೆ ವಿಮರ್ಶೆ.

ಬೆಲೆಬಾಳುವ ಪದಾರ್ಥಗಳನ್ನು ಸಂಪೂರ್ಣವಾಗಿ ಪರೀಕ್ಷೆಮಾಡಿ ತೆಗೆದುಕೊಳ್ಳಬೇಕಾಗುವುದು. ರತ್ನಾಭರಣಗಳನ್ನು ಧರಿಸಬೇಕೆನ್ನುವವರು, ಒಮ್ಮೆಲೆ ಪೇಟೆಗೆ ಹೋಗಿ, ರತ್ನಪಡಿವ್ಯಾಪಾರಿಕೊಟ್ಟ ರತ್ನಗಳನ್ನು ತೆಗೆದುಕೊಳ್ಳುವುದಿಲ್ಲ. ತಮ್ಮ ನಂಬುಗೆಯ ಪರೀಕ್ಷಕನನ್ನು ಜೊತೆಯಲ್ಲಿ ಕರೆದೊಯ್ಯುವರು. ಅವನು ಪರೀಕ್ಷೆಮಾಡಿ, ಒಪ್ಪಿತವನ್ನು ಸೂಚಿಸಿದ ಮೇಲೆ, ಆ ಪರೀಕ್ಷಕನಿಂದಲೇ ಸರಿಯಾದ ಬೆಲೆ ಮಾಡಿಸಿ ಆ ಮಣಿಭೂಷಣಗಳನ್ನು ಕೊಳ್ಳುವರು ಮಣಿಭೂಷಣಗಳನ್ನು ಧರಿಸುವವರು ಬಹಳ ಜನರು; ಆದರೆ ಆ ಮಣಿಗಳನ್ನು ಪರೀಕ್ಷಿಸಿ ಗುಣ-ಬೆಲೆಗಳನ್ನು ಹೇಳುವವರು ತೀರ ಕಡಿಮೆ ಜನರು. ಪರೀಕ್ಷಕನ ಒರೆಗಲ್ಲಿಗೆ ಇಳಿದ ಮಣಿಗಳನ್ನು, ಕೊಂಡು ಧರಿಸುವವರ ಮನಸ್ಸಿಗೂ ಒಂದು ಬಗೆಯ ಸಮಾಧಾನ. ಮಣಿಯ ಶಾಶ್ವತ ಬೆಲೆ ಮಣಿಗೆ ಇದ್ದೇ ಇರುವುದು.

## ಸಾಹಿತ್ಯ ಸೌಂದರ್ಯ ಮತ್ತು ವಿಮರ್ಶೆ

ಮಣಿಭೂಷಣಗಳಂತೆಯೇ ಸಾಹಿತ್ಯವೂ ಸೌಂದರ್ಯ ಪ್ರಪಂಚಕ್ಕೆ ಸೇರಿದುದು. ಮಣಿಭೂಷಣಗಳು ಮಾನವನ ಬಹಿರಂಗದ ಸೌಂದರ್ಯವನ್ನು ಹೆಚ್ಚಿಸಬಲ್ಲುವಾದರೆ, ಸಾಹಿತ್ಯವು ಆತನ ಅಂತರಂಗದ ಸೌಂದರ್ಯವನ್ನು ಹೆಚ್ಚಿಸುವಂತಹದು. ಮಾನವನ ಮಾನವತೆ ಸಿದ್ಧವಾಗುವುದು ಅವನ ಬಹಿರಂಗ ಸೌಂದರ್ಯದಿಂದ ಅಲ್ಲ; ಅಂತರಂಗ ಸೌಂದರ್ಯದಿಂದ. ಮನಸ್ಸು ಬುದ್ಧಿ-ಹೃದಯಗಳ ವಿಕಾಸವಿಲ್ಲದವನು ಬೇಕಾದಷ್ಟು ರತ್ನಾಭರಣಗಳನ್ನು ತೊಟ್ಟುಕೊಳ್ಳಲಿ; ಮಾನವ ಸಂಸ್ಕೃತಿಯ ದೃಷ್ಟಿಯಿಂದ ಅವುಗಳಿಗೆ ಬೆಲೆಯೇನು ? ಕತ್ತೆಗೆ ಮುತ್ತಿನ ಮೊಗರಂಬ ಹಾಕಿದರೂ ಅದು ಕತ್ತೆಯೆ. ಆ ಕತ್ತೆಗೂ ಬೆಲೆಯಿಲ್ಲ; ಅದಕ್ಕೆ ಅಲಂಕಾರವಾದ ಮುತ್ತುಗಳೂ ತಮ್ಮ ಬೆಲೆಯನ್ನು ಕಳೆದುಕೊಳ್ಳುವವು. ಅದೇ, ಮನಸ್ಸು-ಬುದ್ಧಿ-ಹೃದಯಗಳು ವಿಕಾಸಹೊಂದಿದ ಮನುಷ್ಯನಿಗೆ ಬಾಹ್ಯಾಂಗದ ಅಲಂಕಾರಗಳ ಅಗತ್ಯವೇ ಇರದು ; ಅವನ ಮಾತೇ ಮುತ್ತಿನ ಬೆಲೆ ಪಡೆಯುವುದು ; ಅವನ ರೀತಿಯೇ ರತ್ನದ ಮೂಲ್ಯವನ್ನು ಮೀರಿನಿಲ್ಲುವುದು. ಸಾಮಾನ್ಯ ಬಹಿರಂಗ ಸೌಂದರ್ಯದ ಸಾಧನಗಳಾದ ಮುತ್ತು-ರತ್ನಗಳನ್ನು ಕೊಳ್ಳಲು, ನಾವು ಎಷ್ಟೆಷ್ಟೋ ಅವುಗಳ ಪರೀಕ್ಷೆಯನ್ನು ನಡೆಸುವೆವು. ಹೀಗಿರುವಾಗ ಮಾನವನ ಅಂತರಂಗದ ಸೌಂದರ್ಯವನ್ನು ಹೆಚ್ಚಿಸುವ ಶಬ್ದಮಣಿ ಭೂಷಣಗಳನ್ನು—ಎಂದರೆ ಸಾಹಿತ್ಯವನ್ನು ಸರ್ವತೋಮುಖವಾಗಿ ಪರೀಕ್ಷೆ ಮಾಡಿ ನೋಡಬೇಕಾದುದು ಅತ್ಯಗತ್ಯದ್ದಲ್ಲವೆ ? ಈ ಬಗೆಯ ಸಾಹಿತ್ಯ ಪರೀಕ್ಷಣವನ್ನೇ ಸಾಹಿತ್ಯ ವಿಮರ್ಶೆಯೆಂದು ಹೇಳುವರು. ಇಂದು ಪ್ರಗತಿಶಿಖರಕ್ಕೇರಿದ ಎಲ್ಲ ಭಾಷಾ ಸಾಹಿತ್ಯಗಳಲ್ಲಿಯೂ ವಿಮರ್ಶೆ ತುಂಬ ಬೆಲೆಯನ್ನು ಪಡೆದಿದೆ. ಸಾಹಿತ್ಯವಿಮರ್ಶೆಯೆಂಬುದೇ ಆ ಆ ಭಾಷಾಸಾಹಿತ್ಯಗಳಲ್ಲಿ ಒಂದು ವಿಶಿಷ್ಟ ಭಾಗವನ್ನು ಆಕ್ರಮಿಸಿ ಕುಳಿತಿದೆ.

## ಅಜ್ಞಾತ ಕಾಲ

ಆಧುನಿಕ ಕನ್ನಡನಾಡಿನಲ್ಲಿ ಬಹುಕಾಲದ ವರೆಗೆ ಸ್ವತಂತ್ರ ಸಾಹಿತ್ಯ ನಿರ್ಮಿತಿಯೇ ಇರಲಿಲ್ಲ; ಎಂತಲೆ ಸಾಹಿತ್ಯ ವಿಮರ್ಶೆಯ ಅಗತ್ಯದ ಕಲ್ಪನೆಯೂ ಆ ಕಾಲದಲ್ಲಿ ಮೂಡಿರಲಿಲ್ಲ. ಪರಭಾಷೆಯಲ್ಲಿ ಒಳ್ಳೆಯವೆಂದು ಪ್ರಸಿದ್ಧಿ ಪಡೆದ ಸಾಹಿತ್ಯ ಗ್ರಂಥಗಳು ಭಾಷಾಂತರವಾಗಿಯೋ, ಅನುವಾದಿತವಾಗಿಯೋ ಆಗ ಕನ್ನಡದಲ್ಲಿ ಬರುತ್ತಿದ್ದುವು. ಬಂದುವುಗಳನ್ನು ವಿಮರ್ಶೆಯ ಆವಶ್ಯಕತೆಯನ್ನರಿಯದೆ--ನಮ್ಮ ವಾಚಕರು ಓದುತ್ತಿದ್ದರು. ಪುಸ್ತಕರೂಪದಿಂದಬಂದುವೆಲ್ಲ ಒಳ್ಳೆಯವೆಂದೂ ಸತ್ಯವೆಂದೂ ತಿಳಿದುಕೊಳ್ಳುವ ಕಾಲ, ಒಮ್ಮೆ ಇದ್ದಿತು. ಹಾಗೆ ಇದ್ದಿಲ್ಲವಾದರೆ, ಬಳ್ಳಾರಿ-ಬೆಂಗಳೂರುಗಳ ಸೆಟ್ಟರು ಮುದ್ರಿಸಿ ಪ್ರಕಟಿಸುತ್ತಿದ್ದ ಅವಾಸ್ತವ ಅಶ್ಲೀಲ ಪುಸ್ತಕಗಳಿಗೆ ಗ್ರಾಹಕರೆಲ್ಲಿ ದೊರೆಯುತ್ತಿದ್ದರು? ಮನಸ್ಸಿಗೆ ಎಂತಹದಾದರೂ ಸಾಹಿತ್ಯಿಕ ಸಂವೇದನೆ ಬೇಕೆಂಬ ಬಯಕೆಯಿಂದ ನಮ್ಮ ಜನ, 'ಹುಚ್ಚುಮುಂಡೆಯರ ಕಥೆಗಳು' ಎಂಬ ಪುಸ್ತಕವನ್ನೂ ಓದಿತು. 'ಪ್ರಭಾವತೀ ಶುಕಮಂಜರೀ ಕಥೆಗಳು' ಎಂಬ ಅಶ್ಲೀಲ ವೃತ್ತಗಳನ್ನೂ ಓದಿತು. 'ಶೃಂಗಾರ ಸ್ತ್ರೀ ಶುಕಸಪ್ತತಿ ಕಥೆಗಳು' ಎಂಬ ಕಂತೆ ಪುರಾಣ, ಅಂದಿನ ಕಾಲದಲ್ಲಿ ಅಪೂರ್ವ ಗ್ರಂಥವಾಗಿದ್ದಿತು. ಇಂತಹ ಗ್ರಂಥಗಳನ್ನು ಎಲ್ಲರೂ ಓದುತ್ತಿದ್ದರು; ಆದರೆ ಆ ಗ್ರಂಥಗಳಲ್ಲಿಯ ಅಸ್ವಾಭಾವಿಕತೆ, ಅವಾಸ್ತವತೆಗಳನ್ನು ಕುರಿತು ಯಾರೂ ಚರ್ಚಿಸುತ್ತಿರಲಿಲ್ಲ. ಆ ಮೇಲೆ ಪರಭಾಷೆಯಿಂದ ಅನುವಾದಿತವಾಗಿ ಬಂದ ಗ್ರಂಥಗಳನ್ನೂ ನಮ್ಮ ಜನ ಓದಿದರು; ಓದಿ ಆನಂದವನ್ನೂ ಅನುಭವಿಸಿದರು. ಆದರೆ ಅವು ಮೂಲದಿಂದ ಕನ್ನಡಕ್ಕೆ ಇಳಿದು ಬರುವಾಗ, ಎಂತೆಂತಹ ವಿಕೃತಿಯನ್ನು ಪಡೆದಿವೆ; ಯಾವ ಯಾವ ಕೊರತೆಗಳಿಂದ ಕೂಡಿವೆ? — ಎಂಬುದರ ವಿಚಾರವನ್ನು ಮಾಡಿದವರೇ ಇಲ್ಲ. ಹಾಗೆ ವಿಚಾರ ಚರ್ಚೆಗಳೇನಾದರೂ ನಡೆದಿದ್ದರೆ, ದಿವಂಗತ ಬಿ. ವೆಂಕಟಾಚಾರ್ಯರೂ ಅವರ ಸಮಕಾಲೀನ ಭಾಷಾಂತರಕಾರರೂ ತಮ್ಮ ಬರೆವಣಿಗೆಯ ರೀತಿ-ನೀತಿಗಳಲ್ಲಿ ಆಗಲೇ ಮಾರ್ಪಾಡು ಮಾಡಿಕೊಳ್ಳಬಹುದಾಗಿತ್ತು. ಹಾಗಾಗಲಿಲ್ಲವಷ್ಟೇ ಅಲ್ಲ ; ಅವರ ರೀತಿ ನೀತಿಗಳನ್ನೇ ಆದರ್ಶವೆಂದು ಭಾವಿಸಿ, ವಿದ್ಯಾರ್ಥಿಗಳಿಗೆ ಪಾಠ್ಯಪುಸ್ತಕಗಳನ್ನಾಗಿ ಅವುಗಳನ್ನು ನಿಯಮಿಸಲಾಯಿತು. ಇದೆಲ್ಲವನ್ನೂ

ನೋಡಿದರೆ, ನಮ್ಮ ನಾಡಿನಲ್ಲಿ, ಸಾಹಿತ್ಯ ವಿಮರ್ಶೆಯ ವಿಷಯಕವಾದ ಅಜ್ಞಾತಕಾಲವೊಂದು ಇದ್ದುದು ಸ್ಪಷ್ಟವಾಗಿ ಕಂಡುಬರುತ್ತದೆ.

## ಇಂಗ್ಲೀಷ ಸಾಹಿತ್ಯಾಭ್ಯಾಸದ ಪರಿಣಾಮ

ಈ ಸಾಹಿತ್ಯ ವಿಮರ್ಶೆಯ ಅಜ್ಞಾತ ಕಾಲಕ್ಕೆ ಒಂದು ವಿಶಿಷ್ಟ ಕಾರಣವು ಇಲ್ಲದೆ ಇಲ್ಲ. ಭಾರತದಲ್ಲಿ ಸಾಹಿತ್ಯ ವಿಮರ್ಶೆಯ ನೂತನ ಪ್ರಜ್ಞೆ ಜಾಗೃತವಾದುದು ಇಂಗ್ಲಿಷ್ ಭಾಷೆಯ ಉಚ್ಚ ಸಾಹಿತ್ಯದ ಅಭ್ಯಾಸದ ಮೂಲಕ. ಕರ್ನಾಟಕದಲ್ಲಿ ಇಂಗ್ಲಿಷ್ ಭಾಷೆಯ ಉಚ[illegible]ಣ ಪ್ರಾರಂಭವಾದುದು ಬಹಳ ತಡವಾಗಿ. ಅಲ್ಲದೆ ಇಂಗ್ಲಿಷನ್ನು ಕಲಿತವರು ಬಹುಕಾಲದ ವರೆಗೆ ಕನ್ನಡದ ಕಡೆಗೆ ದೃಷ್ಟಿಯನ್ನೇ ಹಾಯಿಸಲಿಲ್ಲ. ಸಂಸ್ಕೃತ ಸಾಹಿತ್ಯಾಭ್ಯಾಸದ ಮೂಲಕ ಕೆಲವೆ ಜನ ಪಂಡಿತರಿಗೆ, ಹಳೆಯ ಪರಂಪರೆಯ ಸಾಹಿತ ವಿಮರ್ಶೆಯ ಅರಿವು ಇದ್ದಿರಬಹುದಾದರೂ ಅದು ಕನ್ನಡ ನಾಡಿನ ಸಾಮಾನ್ಯ ವಾಚಕವರ್ಗಕ್ಕೆ ಸಹಾಯ ಮಾಡಲು ಮುಂದೆ ಬರಲಿಲ್ಲ. ಬಹಳವೆಂದರೆ, ಅಂತಹ ಸಂಸ್ಕೃತ ಪಂಡಿತರು ಕೆಲವೊಂದು ಸಂಸ್ಕೃತ ಸಾಹಿತ್ಯವನ್ನು ತಮಗೆ ಗೊತ್ತಿದ್ದ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ ಕೊಟ್ಟರು; ಸಂಸ್ಕೃತ ರೀತಿಯ ವಿಮರ್ಶೆಯ ಪ್ರಜ್ಞೆಯನ್ನು ಸಾಮಾನ್ಯ ವಾಚಕವರ್ಗದಲ್ಲಿ ಹುಟ್ಟಿಸಲಿಲ್ಲ. ಸಂಸ್ಕೃತ ಭಾಷೆಯಲ್ಲಿ ಶ್ರೇಷ್ಠ ಕವಿಗಳಿಂದ ನಿರ್ಮಿತವಾದ ಗ್ರಂಥಗಳು ಕನ್ನಡದಲ್ಲಿ ದೊರೆತುವೆಂದು ವಾಚಕರು ಹಿಗ್ಗಿ ಓದಿದುದೆಷ್ಟೋ ಅಷ್ಟೆ! ಆ ಕೃತಿ ಏಕೆ ಶ್ರೇಷ್ಠವೆನಿಸಿಕೊಂಡಿರಬಹುದೆಂಬುದನ್ನು ವಿಚಾರ ಮಾಡುವವರು ಇರಲೇ ಇಲ್ಲ. ಇಂಗ್ಲಿಷ್ ಸಂಸ್ಕೃತ ಸಾಹಿತ್ಯಪಂಡಿತರ ದುರ್ಲಕ್ಷ್ಯದ ಮೂಲಕ ಆ ಕಾಲದ ಕನ್ನಡ ಜನತೆಯ ಮನದಿಂದ ಸಾಹಿತ್ಯ ವಿಮರ್ಶೆಯೆಂಬುದು ದೂರವೇ ಉಳಿದುಬಿಟ್ಟಿತು. ಆದುದರಿಂದಲೇ ಆ ಕಾಲ ವಿಮರ್ಶೆಗೆ ಅಜ್ಞಾತವಾಗಿಯೆ ಉಳಿಯಿತು.

## ಪ್ರಾಚೀನಕಾಲದಲ್ಲಿ

ಸುಮಾರು ೧೫೦೦ ವರ್ಷಗಳಿಗಿಂತ ಮೊದಲಿನಿಂದಲೂ ಬೆಳೆಯುತ್ತ ಬಂದ ಕನ್ನಡ ಸಾಹಿತ್ಯಸಾಗರ, ಸಾಹಿತ್ಯವಿಮರ್ಶೆಯ ಪ್ರಜ್ಞೆಯಿಲ್ಲದೆ ಬೆಳೆಯಿತೆಂದು ಹೇಳಲು ಬರುವಂತಿಲ್ಲ. ಕನ್ನಡ ಸಹೃದಯರಲ್ಲಿ ಒಂದು ಬಗೆಯ ವಿಮರ್ಶಕಬುದ್ಧಿ ಜಾಗೃತವಾಗಿ ಇದ್ದಿತೆಂತಲೇ ನಮ್ಮ ಸಾಹಿತ್ಯಾಕಾಶದಲ್ಲಿ ಕಾಲಕಾಲಕ್ಕೆ ಸೀಮಾಪುರುಷರೆನಿಸಿಕೊಳ್ಳಬಲ್ಲ ಬೇರೆಬೇರೆ ಕವಿತಾರಕೆಗಳು ತೊಳಗಿವೆ; ಸಾಹಿತ್ಯದ ರೂಪ-ರೀತಿಗಳಲ್ಲಿ ಕ್ರಾಂತಿಗಳು ನಡೆದಿವೆ. ಕವಿರಾಜಮಾರ್ಗದ ನೃಪತುಂಗನು ಕನ್ನಡ ನಾಡವರನ್ನು ಕುರಿತು ಬಳಸಿದ 'ಪದನರಿದು ನುಡಿಯಲುಂ ನುಡಿದುದನು ಅರಿದು ಆರಯಲುಂ ಆರ್ಪರ್ ಆ ನಾಡವರ್ಗಳ್; ಚದುರರ್, ನಿಜದಿಂ ಕುರಿತೋದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್' ಎಂಬ ಮಾತುಗಳನ್ನು ನೋಡಿದರೆ, ಸಾಹಿತ್ಯವಿಮರ್ಶೆಯೆಂಬುದು ನಮ್ಮ ಜನರಿಗೆ ಸಹಜಜ್ಞಾತವೂ ಅನಿವಾರ್ಯವೂ ಆದ ಸಂಗತಿಯಾಗಿದ್ದಿತೆಂಬುದು ಒಡೆದು ತೋರುವುದು. ಅಂದಿನವರ ಕಲ್ಪನೆಯಂತೆ ಕಾವ್ಯ-ನಾಟಕಗಳು ಮಾತ್ರ ಸಾಹಿತ್ಯವೆನಿಸಿಕೊಳ್ಳುತ್ತಿದ್ದವು. ಆ ಕಾವ್ಯ ನಾಟಕಗಳು ಹೇಗೆ ಹೇಗೆ ಇರಬೇಕೆಂಬುದನ್ನು ಹೇಳಲು ಲಕ್ಷಣಶಾಸ್ತ್ರಗಳು ಚಾಟಿಯನ್ನು ಹಿಡಿದುಕೊಂಡು ನಿಂತಿರುತ್ತಿದ್ದುವು. ಆ ಶಾಸ್ತ್ರಗಳ ಶಾಸನಗಳಿಗೆ ಒಳಗಾಗಿ, ತನ್ನ ಗ್ರಂಥದಲ್ಲಿ ನಾವೀನ್ಯವನ್ನು ತರಬೇಕೆಂದರೆ, ಅಂದಿನ ಗ್ರಂಥಕಾರನಲ್ಲಿ ಒಂದು ವಿಶಿಷ್ಟ ವ್ಯಕ್ತಿತ್ವವೇ ಇರಬೇಕಾಗುತ್ತಿದ್ದಿತು. ಅಂತಹ ವ್ಯಕ್ತಿತ್ವವಿರದ ಕೃತಿಕಾರರ ಕೃತಿಗಳು ಒಂದೇ ಪಡಿಯಚ್ಚಿನಲ್ಲಿ ಒತ್ತಿ ತೆಗೆದ ಮೂರ್ತಿಯಂತಾಗಿ ಸ್ವತಂತ್ರ ಸೌಂದರ್ಯವನ್ನೇ ಕಳೆದುಕೊಂಡು ಬಿಡುತ್ತಿದ್ದುವು. ನಮ್ಮಲ್ಲಿಯ ಅನೇಕ ಪ್ರಾಚೀನ ಕೃತಿಗಳು, ಕೇವಲ ಮತ-ಪಂಥಗಳ ಭಾವನೆಯಿಂದ ಬದುಕಿಕೊಂಡು ಬಂದಿವೆ ಹೊರತು, ಅಂತಃಸೌಂದರ್ಯದ ಮೂಲಕವಾಗಿ ಅಲ್ಲ. ಸಾರ್ವಕಾಲಿಕ ಸಾರ್ವದೇಶಿಕ ಸೌಂದರ್ಯದ ಆವಿಷ್ಕಾರವೇ ಅತ್ಯುತ್ತಮ ಕಲಾಕೃತಿಯೆನಿಸಿಕೊಳ್ಳುವುದು. ಆದರೆ ಆ ಬಗೆಯ ಸೌಂದರ್ಯದ ಮಟ್ಟಕ್ಕೇರಿ ನಿಲ್ಲಬಲ್ಲ ಪ್ರಾಚೀನ ಸಾಹಿತ್ಯಕೃತಿಗಳ ಸಂಖ್ಯೆ ತೀರ ಕಡಮೆಯೆಂದು ಇಂದಿನ ವಿಮರ್ಶಕ ಹೇಳಬಹುದು; ಅದನ್ನು ಒಪ್ಪುವ ಸಹೃದಯರೂ ಇಂದು ಹೆಚ್ಚಿರಬಹುದು. ಆದರೆ ನಮ್ಮ ಪ್ರಾಚೀನ ಕೃತಿಗಳನ್ನು ಸೂಕ್ಷ್ಮವಾಗಿ ಅಭ್ಯಾಸಮಾಡುವವರಿಗೆ, ಅವರು ತಾತ್ಕಾಲಿಕವಾದ ಒಂದು ವಿಶಿಷ್ಟ ವಿಮರ್ಶಾಶಾಸ್ತ್ರವನ್ನು ಅರಿತವರಿದ್ದರೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಕನ್ನಡ ಸಾಹಿತ್ಯದ ಸೀಮಾಪುರುಷರೆನಿಸಿಕೊಂಡ ಕವಿನಾಯಕರು, ತಮ್ಮ ಕೃತಿಗಳ ಪ್ರಸ್ತಾವನಾಭಾಗದಲ್ಲಿ ತಮ್ಮ ಕಾಲದ ಸಾಹಿತ್ಯವಿಮರ್ಶೆಯ ಉದ್ದಗಲ, ಆಳ ಎಂತಹದಿದ್ದಿತೆಂಬುದನ್ನು ಅಲ್ಲಲ್ಲಿ ತಿಳುಹಿದ್ದಾರೆ. ಪ್ರಾಚೀನ ಕನ್ನಡಸಾಹಿತ್ಯದಲ್ಲಿ ವಿಮರ್ಶೆಯ ವಿಷಯಕವಾದ ಸ್ವತಂತ್ರ ಗ್ರಂಥಗಳ ನಿರ್ಮಿತಿಯಾದುದು ಕಂಡುಬರುವುದಿಲ್ಲವಾದರೂ, ವಿಮರ್ಶೆಯ ಪ್ರಜ್ಞೆ ಅದರಲ್ಲಿ ಸಾಕಷ್ಟು ಪ್ರಭಾವವನ್ನು ಬೀರಿದ್ದಿತೆಂಬುದನ್ನು ನಾವು ಅಭ್ಯಾಸದಿಂದ ಅರಿತುಕೊಳ್ಳಬಹುದು.

## ವಿಮರ್ಶೆಯ ಪ್ರಜ್ಞೆ

ವಿಮರ್ಶೆಯ ಪ್ರಜ್ಞೆ ಕಾಲಕಾಲಕ್ಕೆ ಸಾಹಿತ್ಯಕನಲ್ಲಿ ನವ-ನವೀನ ಸೌಂದರ್ಯದ ಕಲ್ಪನೆಗಳನ್ನು ಹುಟ್ಟಿಸಿ, ಅವುಗಳ ಪರಿಣಾಮ ಸಾಹಿತ್ಯಲೋಕದಲ್ಲಿ ಆಗುವಂತೆ ಮಾಡುವುದು. ಪ್ರಾಚೀನ ವಸ್ತುಕರೀತಿ, ಮಧ್ಯಕಾಲದಲ್ಲಿ ವರ್ಣಕ ರೀತಿಗಿಳಿದುದು ಇಂತಹ ಪರಿಣಾಮದಿಂದಲೇ! ಎಲ್ಲರೂ ವಸ್ತುಕರೀತಿಯ ಬೆನ್ನು ಹತ್ತಿದ್ದರೆ, ಕನ್ನಡಿಗರಿಗೆ ಹರಿಹರ-ರಾಘವಾಂಕರ ನೂತನತೆ ಎಲ್ಲಿ ದೊರೆಯುತ್ತಿತ್ತು? ಅಲ್ಲಮ-ಬಸವೇಶ್ವರರ ವಚನರಚನೆ ಎಲ್ಲಿ ಸಿಕ್ಕುತ್ತಿತ್ತು? ಕುಮಾರವ್ಯಾಸ-ಲಕ್ಷ್ಮೀಶರ ಸ್ವತಂತ್ರ ವ್ಯಕ್ತಿತ್ವ ಎಲ್ಲಿ ಉದಯಿಸುತ್ತಿತ್ತು? ರತ್ನಾಕರಸಿದ್ಧ ಕನಕದಾಸನ ಸಾಂಗತ್ಯಗೀತ ನಮಗೆಲ್ಲಿ ದೊರೆಯುತ್ತಿತ್ತು? ನಮ್ಮ ಆದ್ಯರಲ್ಲಿಯ ವಿಮರ್ಶಕ ಬುದ್ಧಿಯೇ ನಮ್ಮ ಸಾಹಿತ್ಯಪ್ರಪಂಚದಲ್ಲಿ ಬಣ್ಣಬಣ್ಣದ ಕಾಮನಬಿಲ್ಲನ್ನು ಮೂಡಿಸಿ, ರಸಿಕರ ಒಳಗಣ್ಣುಗಳಿಗೆ ವಿವಿಧ ಸೌಂದರ್ಯವನ್ನು ತೋರಿಸಿತು. ಮುಂದೆ ಬಂದ ರಸದುಷ್ಕಾಲ, ನಮ್ಮ ನಾಡಿನಲ್ಲಿಯ ವಿಮರ್ಶಾಪ್ರಜ್ಞೆಯ ಮೇಲೆ ಹೇಗೂ ಏನೋ ಮುಸುಕು ಹಾಕಿತು. ಆಗ ಅಕ್ಷರವನ್ನರಿತ ಬರೆಹಗಾರರು ಪುಸ್ತಕಗಳೆಂದು ಏನನೋ ಬರೆಯುತ್ತಿದ್ದರು. ಏನನಾದರೂ ಓದಬೇಕೆಂದು ಓದುಗರು, ಕೈಗೆ ದೊರೆತ

ಪುಸ್ತಕಗಳನ್ನು ಓದುತ್ತಿದ್ದರು. ಬರೆಯುವವರಿಗೂ ವಿಮರ್ಶೆಯ ವಿವೇಕವಿರಲಿಲ್ಲ; ಓದುವವರಲ್ಲಿಯೂ ವಿಮರ್ಶೆಯ ವಿವೇಕವಿರಲಿಲ್ಲ. ಈ ಕಾಲದಲ್ಲಿ ಲೇಖಕರೆನಿಸಿಕೊಂಡು ಮುಂದೆ ಬಂದವರ ಹೆಸರನ್ನು ಕೇವಲ ಸಾಹಿತ್ಯ ಚರಿತ್ರೆಗಾಗಿ ಜ್ಞಾಪಕದಲ್ಲಿಟ್ಟುಕೊಳ್ಳಬೇಕೇ ಹೊರತು, ಅವರ ಕೃತಿಮಹತ್ವದ ಕಾರಣದಿಂದ ಅಲ್ಲ.

ಇಂದು ಇಂಗ್ಲಿಷ ಸಾಹಿತ್ಯಾಭ್ಯಾಸದ ಪ್ರಭಾವದಿಂದಾಗಿ, ನಮ್ಮ ಜನರಲ್ಲಿಯ ವಿಮರ್ಶಾಪ್ರಜ್ಞೆ ಮತ್ತೆ ಜಾಗೃತವಾಗಿದೆ. ಆ ಪ್ರಜ್ಞೆ ಹಳೆಯ ವಿಮರ್ಶೆಯ ಅಳೆಗೋಲನ್ನು ಬಿಟ್ಟುಕೊಟ್ಟು, ಕಾಲೋಚಿತವಾದ ಹೊಸ ಅಳೆಗೋಲನ್ನು ಕೈಯಲ್ಲಿ ಹಿಡಿದುಕೊಂಡಿದೆ. ಆದರೆ ಅಳೆಗೋಲನ್ನು ಹಿಡಿದುಕೊಂಡು ನಿಂತಿದೆಯಾದರೂ ಅಳೆಯುವ ಕಾರ್ಯವನ್ನು ಮಾತ್ರ ಮಾಡಲೊಲ್ಲದಾಗಿದೆ. ಇದಕ್ಕೆ ಕಾರಣವೆಂದರೆ ಭೀತಿ-ದಾಕ್ಷಿಣ್ಯಗಳು. ಸಾಹಿತ್ಯವಿಮರ್ಶೆಯ ಕಾರ್ಯವೆಂದರೆ ಸತ್ಯ-ಸೌಂದರ್ಯಗಳ ಪರಿಶೋಧನೆ. ಈ ಪರಿಶೋಧನೆಯಿಂದ ಯಾರಾದರೂ ಕೆರಳಿ ದ್ವೇಷ-ಮತ್ಸರಗಳು ಹರಡಲು ಕಾರಣವಾದರೆ ?— ಎಂಬ ಭೀತಿಯ ಮೂಲಕ ನಮ್ಮ ಸಾಹಿತ್ಯವಿಮರ್ಶೆ ನಿಷ್ಕ್ರಿಯವಾಗಿದೆ. ಅದರಂತೆಯೆ ತನ್ನ ನಿರ್ದಾಕ್ಷಿಣ್ಯ ಕಾರ್ಯದ ಕಾರಣದಿಂದ ಯಾರಾದರೂ ನೊಂದು ದುಃಖ-ವಿಷಾದಗಳಿಗೆ ಗುರಿಯಾಗಬಹುದಲ್ಲ !— ಎಂಬ ದಾಕ್ಷಿಣ್ಯಭಾವವೂ ಅದನ್ನು ಮುಂದುವರಿಯದಂತೆ ತಡಹಿಡಿದಿದೆ. ಭೀತಿ-ದಾಕ್ಷಿಣ್ಯಗಳೆರಡೂ ಸಾಹಿತ್ಯವಿಮರ್ಶೆಯ ನಿಜವಾದ ಶತ್ರುಗಳು. ಇವೆರಡನ್ನೂ ಗೆದ್ದವನೇ ನಿಜವಾದ ಸಾಹಿತ್ಯವಿಮರ್ಶಕನೆನಿಸಿಕೊಳ್ಳುತ್ತಾನೆ. ಈ ಸತ್ಯವನ್ನು ನಮ್ಮ ನಾಡಿನ ಸಾಹಿತ್ಯನಿರ್ಮಾತೃಗಳೂ ಲಕ್ಷ್ಯದಲ್ಲಿ ಇರಿಸಿಕೊಂಡರೆ ವಿಮರ್ಶೆಯ ಮಾರ್ಗ ಸುಗಮವಾದೀತು.

## ಸ್ವತಂತ್ರ ಸಾಹಿತ್ಯದ ಕೃಷಿ

ಇಂದು ನಮ್ಮ ನಾಡಿನಲ್ಲಿ ಸ್ವತಂತ್ರಸಾಹಿತ್ಯದ ಕೃಷಿ ಹೆಚ್ಚಾಗಿ ನಡೆದಿದೆ. ದಿನದಿನವೂ ಸಾಹಿತ್ಯದ ಬೆಳಸು ಬೆಳೆದು ಪೇಟೆಯಲ್ಲಿ ತುಂಬುತ್ತಲಿದೆ. ಸಾಮಾನ್ಯ ಆಹಾರಪದಾರ್ಥಗಳನ್ನು ತೆಗೆದುಕೊಳ್ಳಲು ನಾವು ಪೇಟೆಗೆ ಹೋದಾಗ, ಒಂದಲ್ಲ ಹತ್ತು ಕಡೆಗೆ ತಿರುಗುತ್ತೇವೆ. ಒಳ್ಳೆಯವಾಗಿ ಕಂಡ ಪದಾರ್ಥಗಳನ್ನು ತೆಗೆದುಕೊಳ್ಳುತ್ತೇವೆ. ನಿತ್ಯಪರಿಚಯದ ಮೂಲಕ ಈ ಆಹಾರ-ಪದಾರ್ಥಗಳ ಒಳಿತು-ಕೆಡುಕಿನ ಜ್ಞಾನಸಾಮಾನ್ಯವಾಗಿ ಎಲ್ಲರಿಗೂ ಇರುವುದು. ಅವೆಲ್ಲ ವ್ಯಕ್ತವಸ್ತುಗಳಾದುದರಿಂದ ಅವುಗಳ ಒಳಿತು-ಕೆಡಕುಗಳನ್ನು ಎಲ್ಲರೂ ಸಹಜವಾಗಿ ತಿಳಿದುಕೊಳ್ಳಬಲ್ಲರಾದುದರಿಂದ, ಈ ವ್ಯಾಪಾರದಲ್ಲಿ ಮೋಸಹೋಗುವವರು ತೀರ ಕಡಮೆ. ಹತ್ತಿರದಲ್ಲಿರುವ ಹಣದ ಪ್ರಮಾಣದಿಂದ, ಒಳ್ಳೆಯ ವಸ್ತುಗಳ ತರ-ತಮಗಳನ್ನು ಪಡೆಯಬೇಕಾಗುವುದು ಇಷ್ಟೆ. ಯಾರೂ ಹುಳಿತ, ಕೊಳೆತ, ರುಚಿ ಕೆಟ್ಟ ಆಹಾರಪದಾರ್ಥಗಳನ್ನು ಪಡೆಯಲಾರರು. ಇಲ್ಲಿ ಗ್ರಾಹಕನ ವ್ಯವಹಾರಬುದ್ಧಿಯೇ ವಿಮರ್ಶಕನ ಕಾರ್ಯವನ್ನು ಮಾಡುವುದು.

ಸಾಹಿತ್ಯವೆಂಬುದೂ ಒಂದು ಬಗೆಯ ಆಹಾರ ಪದಾರ್ಥವೆ. ಇದರಿಂದ ಮಾನವನ ಮನಸ್ಸು, ಬುದ್ಧಿ, ಹೃದಯಗಳು ಬೆಳೆಯುವವು. ಆದರೆ ಆ ಆಹಾರಪದಾರ್ಥ ವ್ಯಕ್ತರೂಪದ್ದಾದರೆ, ಈ ಆಹಾರ ಅವ್ಯಕ್ತರೂಪದ್ದಾಗಿರುವುದು. ಆ ಆಹಾರಪದಾರ್ಥಗಳ ಒಳಿತು-ಕೆಡಕುಗಳ ಸ್ಥಿತಿಯನ್ನು ಎಲ್ಲರೂ ಸುಲಭವಾಗಿ ಕಂಡುಹಿಡಿಯುವಂತೆ, ಈ ಆಹಾರ ಪದಾರ್ಥಗಳ ಒಳಿತು-ಕೆಡಕುಗಳನ್ನು ಎಲ್ಲರೂ ಸುಲಭವಾಗಿ ಕಂಡುಹಿಡಿಯಲಾರರು. ಇವುಗಳ ಒಳಿತು-ಕೆಡಕುಗಳನ್ನು ಸರಿಯಾಗಿ ಅರಿತುಕೊಂಡು, ಬಹುಜನರಿಗೆ ಅದನ್ನು ಅರುಹುವ ಜೀವನ ವಿಜ್ಞಾನಿಯೊಬ್ಬನ ಅಗತ್ಯವಿರುತ್ತದೆ. ಇಂತಹ ಜೀವನ-ವಿಜ್ಞಾನಿಯೇ ಸಾಹಿತ್ಯವಿಮರ್ಶಕನೆನಿಸಿಕೊಳ್ಳುವನು. ಇವನು ಜನತೆಯ ಮನಸ್ಸು, ಬುದ್ಧಿ, ಹೃದಯಗಳಿಗೆ ಪಥ್ಯಕರವಾವುದು—ಅಪಥ್ಯಕರವಾವುದು ಎಂಬುದನ್ನು, ಸಾಹಿತ್ಯಾಹಾರದಲ್ಲಿ ವಿಂಗಡಿಸಿ ತೋರಿಸಬಲ್ಲ. ವಿಮರ್ಶಕನ ದಿಗ್ದರ್ಶನವಿಲ್ಲದೆ ಹೋದರೆ, ಕೈಗೆ ಸಿಕ್ಕ ಸಾಹಿತ್ಯಾಹಾರವನ್ನು ಸೇವಿಸಿ ಜನರು ಕೇಡಿಗೊಳಗಾಗಬಹುದು.

## ಸಾಹಿತ್ಯವಿಮರ್ಶೆಯ ಜ್ಞಾನೋದಯ

ಬಾಹ್ಯಾಂಗಕ್ಕೆ ಬೇಕಾಗುವ ಆಹಾರಪದಾರ್ಥಗಳನ್ನು ಆಯ್ದುಕೊಳ್ಳುವ ಪ್ರಜ್ಞೆಯನ್ನು ಪ್ರತಿಯೊಬ್ಬನು ಪಡೆದಂತೆ, ತನ್ನ ಅಂತರಂಗಕ್ಕೆ ಬೇಕಾಗುವ ಸಾಹಿತ್ಯಾಹಾರವನ್ನು ಆಯ್ದುಕೊಳ್ಳುವ ಪ್ರಜ್ಞೆಯನ್ನು ಪ್ರತಿಯೊಬ್ಬನೂ ಪಡೆಯಲೇಬೇಕು; ಎಂದರೆ ಪ್ರತಿಯೊಬ್ಬನೂ ಸಾಹಿತ್ಯವಿಮರ್ಶಕ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಆದರೆ ಇದನ್ನು ಬೆಳೆಸಿಕೊಳ್ಳಲೂ ಆತನಿಗೆ ಪ್ರಾರಂಭದಲ್ಲಿ ವಿಮರ್ಶಕನ ನೆರವಿನ ಅಗತ್ಯವಿರುತ್ತದೆ. ವಿಮರ್ಶಕನ ನೆರವು ಸಾಮಾನ್ಯವಾಚಕನ ಹೃದಯ-ಬುದ್ಧಿ-ಮನಸ್ಸುಗಳಿಗೆ, ಸಾಹಿತ್ಯದಲ್ಲಿಯ ಸ್ವಾದ್ಯ ರಸವಾವುದು ತ್ಯಾಜ್ಯವಾವುದು ಎಂಬುದನ್ನು ಕಲಿಸಿಕೊಡುತ್ತದೆ. ಒಮ್ಮೆ ಇದರ ಅರಿಕೆಯಾಯಿತೆಂದರೆ ವಾಚಕನಿಗೆ ಸಾಹಿತ್ಯಿಕ ವಿಷದ ಭೀತಿಯಿರದು. ಅದನ್ನು ತ್ಯಜಿಸುವ ಗುಣವು ಅವನಲ್ಲಿ ಸಹಜವಾಗಿ ಬೆಳೆಯುತ್ತಿರುತ್ತದೆ. ಅದರ ಬೆಳವಣಿಗೆಯ ಪೂರ್ಣತೆಯೆಂದರೆ, ಸಾಹಿತ್ಯವಿಮರ್ಶೆಯ ಜ್ಞಾನೋದಯ.

ಸಾಹಿತ್ಯದ ಗ್ರಾಹಕ ಪೇಟೆಗೆ ಹೋಗಿ ತನಗೆ ಬೇಕಾದ ಸಾಹಿತ್ಯವನ್ನು ಪಡೆಯುವುದಕ್ಕಿಂತ ಮೊದಲು, ವಿಮರ್ಶಕ ಅದರ ಗುಣದೋಷಗಳನ್ನು ವಿಶ್ಲೇಷಿಸಿ ನೋಡಿ, ಅದರ ಸತ್ವ-ಶಕ್ತಿಗಳೆಂತಹವೆಂಬುದನ್ನು ನಿರ್ಣಯಿಸಿರಬೇಕು. ಇಲ್ಲವಾದರೆ ಗ್ರಾಹಕ, ತನ್ನ ಸಾಹಿತ್ಯವಾಚನದ ಹಸಿವನ್ನು ಹಿಂಗಿಸಲು ಎಂತಹ ಸಾಹಿತ್ಯವನ್ನೂ ಕೊಂಡು ಉಪಯೋಗಿಸಿಕೊಳ್ಳಬಹುದು, ಮರಿಗಿಳಿಯ ಕಿವಿಗೆ ಒಳ್ಳೆಯ ಮಾತುಗಳು ಬೀಳುತ್ತಿದ್ದರೆ ಸರಿ; ಕೀಳು ನುಡಿಗಳು ಬೀಳುತ್ತಿದ್ದರೆ ಅವನ್ನೇ ಅದು ಕಲಿತು ಗಳಪುವುದು. ಅದರಂತೆಯೆ ಇನ್ನೂ ಮರಿಗಿಳಿಯ ಅವಸ್ಥೆಯಲ್ಲಿರುವ ಮನಸ್ಸು-ಬುದ್ಧಿ-ಹೃದಯಗಳಿಗೆ ಒಳ್ಳೆಯ ಸಾಹಿತ್ಯಾನ್ನ ದೊರೆತರೆ ಅದು ಸುಸಂಸ್ಕೃತಿಯನ್ನು ಪಡೆಯಬಹುದು; ಅದಿಲ್ಲದೆ ಒಳ್ಳೆಯದಲ್ಲದ ಸಾಹಿತ್ಯಾನ್ನ ದೊರೆತರೆ, ಅದರಿಂದ ಕುಸಂಸ್ಕಾರವನ್ನು ಹೊಂದಬಹುದು. ಒಳ್ಳೆಯ ವಿಮರ್ಶಕ ಜನತೆಯ ಸುಸಂಸ್ಕೃತಿಗೆ ಕಾರಣಪುರುಷ.

## ವಿಮರ್ಶಕನ ಉನ್ನತಸ್ಥಾನ

ವಿಮರ್ಶಕನ ಸ್ಥಾನ ಇಷ್ಟೊಂದು ಎತ್ತರದ್ದಾದರೂ ಇಂದು ನಮ್ಮ ನಾಡಿನಲ್ಲಿ ಬಹುಜನ ಸಾಹಿತ್ಯಿಕರಿಗೆ ವಿಮರ್ಶಕನೆಂದರೆ ಒಬ್ಬ ವೈರಿಯಾಗಿ ಪರಿಣಮಿಸಿದ್ದಾನೆ. ಆದುದರಿಂದಲೇ ನಮ್ಮಲ್ಲಿ ವಿಮ-

ಶ೯ಕರಾಗುವ ಸಾಹಸಕ್ಕೆ ಕೈಹಾಕುವವರು ಬಹಳ ಕಡಮೆ. ನಿಜವಾಗಿ ನೋಡಿದರೆ ವರ್ಧನಶೀಲ ಸಾಹಿತ್ಯಕ್ಕೆ ವಿಮರ್ಶಕರ ಅಗತ್ಯ ತುಂಬ ಇದೆ. ಅವರಿಲ್ಲದೆ ಹೋದರೆ, ಹಾಲಾವುದು, ಹುಳಿಯಾವುದು ತಿಳಿಯದೆ ಹೋಗಬಹುದು. ಕಲ್ಲಿದ್ದಲುಗಳ ನಡುವೆ ಜ್ಯೋತಿರ್ಮಣಿ ಮರೆಯಾಗಬಹುದು. ಕಾಗೆ-ಕೋಗಿಲಗಳ ಕೂಗುಗಳ ವ್ಯತ್ಯಾಸವೇ ತಿಳಿಯದೆ ಹೋಗಬಹುದು. ಮಲ್ಲಿಗೆ-ಮುಳ್ಳುಜಾಜಿಗಳ ಗುಣ-ದೋಷಗಳೇ ಗೊತ್ತಾಗದೆ ಇರಬಹುದು. ಹಾಗಾದರೆ ಬಹುಜನ ಸಾಹಿತ್ಯಿಕರು ವಿಮರ್ಶಕನನ್ನು ವೈರಿಯೆಂದು ಏಕೆ ಕಾಣುವರು?

### ವಿಮರ್ಶಕನ ಕಾರ್ಯವೇನು?

ನಿಜವಾದ ಸಾಹಿತ್ಯಿಕ ನಿಜವಾದ ವಿಮರ್ಶಕನನ್ನು ವೈರಿಯೆಂದು ಎಂದೂ ತಿಳಿಯಲಾರ. ಏಕೆಂದರೆ ನಿಜವಾದ ಸಾಹಿತ್ಯ ವಿಮರ್ಶಕ, ಸಾಹಿತಕನ ಕೃತಿಯ ನೆಲೆ-ಬೆಲೆಗಳನ್ನು ಸರಿಯಾಗಿ ತೂಗ್ಗಿ ಹೇಳಬಲ್ಲ. ಅವನು ಕುರುಡುಬುದ್ಧಿಯವರಂತೆ ಕಾರಣವಿಲ್ಲದೆ ಕೃತಿಯನ್ನು ಹೊಗಳಲೂ ಆರ; ತೆಗಳಲೂ ಆರ. ಗುಣಗಳನ್ನು ಎತ್ತಿ ತೋರಿಸಬೇಕಾದರೂ, ಆ ಗುಣಗಳಿಗೆ ಸರ್ವ ಸಮ್ಮತವೆನಿಸುವಂತಹ ಸೌಂದರ್ಯಪ್ರಮಾಣಗಳನ್ನು ತೋರಿಸಬಲ್ಲ; ಅದರಂತೆಯೇ ದೋಷಗಳನ್ನು ಎತ್ತಿ ತೋರಿಸಬೇಕಾದರೂ ಅವುಗಳಿಗೆ ಕಾರಣವಾದ ಅಸೌಂದರ್ಯ ಪ್ರಮಾಣಗಳನ್ನು ವಿವರಿಸಿ ಹೇಳುವನು. ಇಂತಹ ವಿಮರ್ಶಕನ ಕಣ್ಣೆದುರು ಸಾಹಿತ್ಯಿಕನು ಇರುವುದೆ ಇಲ್ಲ; ಆತನ ಕೃತಿಯು ಮಾತ್ರ ಇರುತ್ತದೆ. ಸಾಹಿತ್ಯಿಕನೇನು ಚತುರ್ಮುಖನಲ್ಲ; ಸಹಸ್ರನೇತ್ರನಲ್ಲ; ಆತನ ಜೀವನದರ್ಶನವೂ ಪರಿಮಿತವಾದುದಿರುವುದು. ಜೀವನವೂ ಪರಮಾತ್ಮನಂತೆ ಅನಾದ್ಯನಂತವಾದುದು. ಒಳ್ಳೆಯ ವಿಮರ್ಶಕ ಸಾಹಿತ್ಯಿಕನ ದರ್ಶನದಲ್ಲಿಯ ಕೊರತೆಯನ್ನು ಸಪ್ರಮಾಣವಾಗಿ ತೋರಿಸಿದರೆ, ಸಹೃದಯಿಯಾದ ಸಾಹಿತ್ಯಿಕ ಅದನ್ನು ಒಪ್ಪಿಕೊಳ್ಳಲೇಬೇಕು; ಇಷ್ಟೇ ಅಲ್ಲ ವಿಮರ್ಶಕನ ವಿಷಯದಲ್ಲಿ ಕೃತಜ್ಞತಾ ಭಾವವನ್ನು ಇರಿಸಿಕೊಳ್ಳಬೇಕು. ಈ ರೀತಿಯ ವಿಮರ್ಶಕನ ವಿಮರ್ಶೆ, ಸಾಹಿತ್ಯಿಕರ ಸಹಾನುಭೂತಿ ಇವು ಸಾಹಿತ್ಯದ ಉನ್ನತಿಗೆ ಕಾರಣವಾಗುವುವು. ಇನ್ನು ನಿಜವಾದ ಸಾಹಿತ್ಯಿಕನ ಸಾಹಿತ್ಯ ಆಭಾಸವಿಮರ್ಶಕನ ಕೈಯಲ್ಲಿ ಸಿಕ್ಕಿ ಒದ್ದಾಡುವ ಸಂದರ್ಭವೂ ನಮ್ಮ ನಾಡಿನಲ್ಲಿ ಇಲ್ಲದೆ ಇಲ್ಲ. ಆ ಸಾಹಿತ್ಯಿಕ ಅಂತಹ ಆಭಾಸ ವಿಮರ್ಶಕನ ವಿಮರ್ಶೆಯನ್ನು ಕಂಡು, ಉಪೇಯಿಂದ ಸುಮ್ಮಗಿದ್ದುಬಿಡಬಹುದಷ್ಟೇ ಹೊರತು, ಅವನನ್ನು ವೈರಿಯೆಂದೇನೂ ಭಾವಿಸಲಾರ. ಅಜ್ಞಾನದ ವಿಷಯದಲ್ಲಿ ಉಪೇಕ್ಷೆ-ಕರುಣೆಗಳನ್ನು ತೋರಿಸದವನು ಒಳ್ಳೆಯ ಸಾಹಿತಿಯೆಂದಾದರೂ ಏತಕ್ಕೆ ಕರೆಯಿಸಿಕೊಳ್ಳುವನು?



### ಗುಣ ದೋಷಗಳು

ಅನಧಿಕಾರಿ ಸಾಹಿತ್ಯಿಕ, ಒಳ್ಳೆಯ ವಿಮರ್ಶಕನನ್ನೂ ವೈರಿಯನ್ನಾಗಿ ತಿಳಿಯುವನು; ಆಭಾಸ ವಿಮರ್ಶಕನನ್ನೂ ವೈರಿಯನ್ನಾಗಿ ತಿಳಿಯುವನು. ಏಕೆಂದರೆ ತಾನು ಬರೆದುದೆಲ್ಲವೂ ಒಳ್ಳೆಯದಿದೆಯೆಂದು ಅವನು ಭಾವಿಸಿರುವನು; ಮಿಕ್ಕವರೂ ಅದನ್ನು ಒಳ್ಳೆಯದೆಂದು ಹೊಗಳಬೇಕೆಂದು ಅಪೇಕ್ಷಿಸುವನು. ತನ್ನ ಭಾವನೆ-ಅಪೇಕ್ಷೆಗಳಿಗೆ ಬೀಳುವ ಆಘಾತಗಳಿಗೆ ಕಾರಣ, ತನ್ನ ಕೃತಿಯಲ್ಲಿಯ ಕುಂದು-ಕೊರತೆಗಳೆಂಬುದನ್ನು ಅವನೆಂದೂ ಒಪ್ಪಿಕೊಳ್ಳಲಾರ; ಆದರೆ ಹಾಗೆ ಆಘಾತಗಳು ಬೀಳಲು ಕಾರಣನಾದ ವಿಮರ್ಶಕ, ಎಷ್ಟೊಂದು ಸತ್ಯಪಕ್ಷಪಾತಿಯಾಗಿದ್ದರೂ ಆ ಸಾಹಿತ್ಯಿಕನ ವೈರಕ್ಕೆ ಪಾತ್ರನಾಗುವುದಕ್ಕಂತೂ ಹೆಚ್ಚಿನ ಕಾರಣಗಳು ಬೇಕಾಗುವುದೇ ಇಲ್ಲ. ಏಕೆಂದರೆ ಇಂತಹ ವಿಮರ್ಶಕ, ಎಲ್ಲರ ಕೃತಿಗಳನ್ನೂ ದೋಷೈಕ ದೃಷ್ಟಿಯಿಂದ ನೋಡುವನು; ಅವು ನಿಜವಾದ ದೋಷಗಳಿರಲಿ, ಸ್ವಾಜ್ಞಾನಕಲ್ಪಿತ ದೋಷಗಳಿರಲಿ, ಅವುಗಳನ್ನು ತೂಕತಪ್ಪಿದ ಮಾತುಗಳಿಂದ—ಯಾವ ಪ್ರಮಾಣಗಳನ್ನೂ ತೋರಿಸದೆ ಬೈಯ್ಯಲು ಮುಂದಾಗುವನು. ಇಂತಹ ವಿಮರ್ಶಕ ಬರಿಯೆ ಸಾಹಿತ್ಯಿಕ ವೈರಿಯಿಷ್ಟೇ ಅಲ್ಲ; ಸಮಾಜದ ವೈರಿ; ದೇಶದ ವೈರಿ.

ತನಗೆ ಬೇಕಾದವರನ್ನು ಬಾಯಿತುಂಬ ಹೊಗಳುವ—ಬೇಡವಾದವರನ್ನು ಬಾಯಿಗೆ ಬಂದಂತೆ ತೆಗಳುವ ಸ್ವಾರ್ಥಸಾಧುವೂ ಇಂದು ವಿಮರ್ಶಕನೆಂಬ ಹೆಸರನ್ನಿಟ್ಟುಕೊಂಡು ಸಾಹಿತ್ಯಪ್ರಪಂಚದಲ್ಲಿ ಸುಳಿದಾಡುತ್ತಿದ್ದಾನೆ. ಈತನಿಗೆ ಸಾಹಿತ್ಯಿಕನ ವ್ಯಕ್ತಿತ್ವ ಮುಖ್ಯವಾದುದೇ ಹೊರತು ಆತನ ಕೃತಿಯು ಮುಖ್ಯವಾದುದಲ್ಲ. ಇಂತಹ ವಿಮರ್ಶಕನ ಕೈಯಲ್ಲಿ ಸಾಮಾಜಿಕ ಸ್ಥಾನಮಾನಗಳನ್ನು ಪಡೆದಿದ್ದವನು—ಎಂತಹ ದಡ್ಡನಿದ್ದರೂ—ಮಹಾಸಾಹಿತಿಯಾಗಿ ರೂಪುಗೊಳ್ಳುತ್ತಾನೆ; ಅಂತಹ ಸ್ಥಾನಮಾನಗಳಿಲ್ಲದ ಎಂತಹ ದೊಡ್ಡ ಸಾಹಿತಿಯೂ ದಡ್ಡನಾಗಿ ಪರಿಣಮಿಸುತ್ತಾನೆ.

### ಇಂದಿನ ವಿಮರ್ಶಾರಂಗ

ಇಂತಹ ವಿಷಯವಿಮರ್ಶೆಯ ಮೂಲಕವಾಗಿಯೆ ಸಾಹಿತ್ಯರಂಗ ರಣರಂಗವಾಗಿ ನಿಲ್ಲುವುದುಂಟು. ಇದೇ ಹೆದರಿಕೆಯಿಂದ ನಿಜವಾದ ವಿಮರ್ಶಕರು ನಮ್ಮಲ್ಲಿ ವಿಮರ್ಶಾರಂಗಕ್ಕೆ ಇಳಿಯಲು ಹೆದರಿ ಹಿಂಜರಿಯುತ್ತಿದ್ದಾರೆ. ನಿಜವಾದ ಸಾಹಿತ್ಯದ ಪ್ರಗತಿಗೆ ಇದು ಪಥ್ಯಕರವಾದುದೇನೂ ಅಲ್ಲ. ನಮ್ಮ ಪತ್ರಿಕೆಗಳಲ್ಲಿ ಅಲ್ಲಲ್ಲಿ ಪ್ರಕಟವಾಗುತ್ತಿರುವ ವಿಮರ್ಶೆಯ ತುಣುಕು-ಮಿಣುಕಿನಿಂದ ನಾವು ಸ್ವಲ್ಪವೂ ತೃಪ್ತಿಪಡುವಂತಿಲ್ಲ. ನಿಜವಾದ ಸಾಹಿತ್ಯ ವಿಮರ್ಶೆಯಿಲ್ಲದೆ, ಇಂದಿನ ಗಾಂಧಾರೀ ಸಂತಾನದಂತಹ ಸಾಹಿತ್ಯನಿರ್ಮಿತಿಯಿಂದ ನಮ್ಮ ಜನತಾವಾಂಛಾಲಿಗೆ ಮುಕ್ತಿಯಿಲ್ಲ. ಮಾನವತೆಯ ಬೆಲೆಯನ್ನರಿಯದ, ಮಾನವಧರ್ಮದ ಮರ್ಮವನ್ನರಿಯದೆ, ಮಾನವನ ಮನಸ್ಸು-ಹೃದಯಗಳ ಸಂಸ್ಕೃತಿಯ ಕಡೆಗೆ ಗಮನ ಕೊಡದೆ, ತ್ರಿಕಾಲದ ವಿವೇಕವಿಲ್ಲದೆ ಬಾಯಿಗೆ ಬಂದುದು—ಕೈಬರೆದುದು—ಎಲ್ಲವೂ ಸಾಹಿತ್ಯವೆಂಬ ಹೆಸರಿನಿಂದ ರಾಶಿಯಾಗಿ ಬೀಳುತ್ತಿರುವ ಈ ಕಾಲದಲ್ಲಿ, ಭೀತಿ—ದಾಕ್ಷಿಣ್ಯಗಳನ್ನು ಬದಿಗೊತ್ತಿ ಸಾಹಿತ್ಯವಿಮರ್ಶೆಯ ಕಾರ್ಯ ಮುಂದುವರೆಯಬೇಕು. ಸ್ವಾತಂತ್ರ್ಯವೆಂಬ ಹೆಸರಿನಿಂದ ಎಲ್ಲ ಕ್ಷೇತ್ರಗಳಲ್ಲಿಯಂತೆ ಸಾಹಿತ್ಯಕ್ಷೇತ್ರದಲ್ಲಿಯೂ ಸ್ವೈರವೃತ್ತಿ ತನ್ನ ಬೀಭತ್ಸ ತಾಂಡವವನ್ನು ನಡೆಸಿದೆ. ಸಾಹಿತ್ಯವೆಂಬುದು ಸೌಂದರ್ಯದ ಒಂದು ಪ್ರತಿಕೃತಿ ಸೌಂದರ್ಯಕ್ಕೆ ಸ್ವೈರಕೂಡದು; ಸಂಯಮ ಬೇಕು. ಈ ಸಂಯಮವೆಂಬುದು ಮಾನವಕಲ್ಯಾಣಕಾರಿಯಾಗಿರಬೇಕು. ಸಂತೃಪ್ತಿ-ಸಂತುಷ್ಟಿಗಳನ್ನು ಹರಡುವಂತಹದಾಗಿರಬೇಕು. ಅಂತಹ ಕಾರ್ಯಕ್ಕೆ ಅಸಮರ್ಥವೂ ವಿರೋಧಕವೂ ಆದ ಸಾಹಿತ್ಯ ಭಾಗ ವಾವುದೆಂಬುದನ್ನು, ಸಪ್ರಮಾಣವಾಗಿ ನಮ್ಮ ಜನರಿಗೆ ತೋರಿಸಬೇಕಾದ ಆವಶ್ಯಕತೆಯಿಂದು ತುಂಬ ಇದೆ. ಅದನ್ನು ನಿಜವಾದ ಸಾಹಿತ್ಯವಿಮರ್ಶಕನೇ ಮಾಡಬಲ್ಲ.

# ಭವಭೂತಿಯ ಹೃದಯಾನುಭೂತಿ

ಲೇಖಕರು : ಶ್ರೀ. ಎನ್. ಭೀಮಭಟ್ಟ, ಸಾಹಿತ್ಯ ಶಿರೋಮಣಿ, ಕನ್ಯಾನ

ಸಂಸ್ಕೃತದ ಹೆಸರಾಂತ ಕವಿ ಭವಭೂತಿ. ಅನೇಕ ಸೊಗಸಾದ ನಾಟಕಗಳನ್ನು ಬರೆದಿರುವನು. ಮಾನಸ್ವಭಾವದ ಸಂಪೂರ್ಣ ಪರಿಚಯವನ್ನು ಮಾಡಿ ಕೊಡುವದರೊಂದಿಗೆ ಜನಮನದ ಮೇಲೆ ಅವನ ಪಾತ್ರಗಳು ಸಂಪೂರ್ಣ ಅಚ್ಚೊತ್ತುವವು. ಇದಕ್ಕೆ ಕಾರಣ ಅವನಲ್ಲಿರುವ ಹೃದಯಾನು-ಭೂತಿಯ ಸಾಮರ್ಥ್ಯ. ಅವನ ಈ ಸಾಮರ್ಥ್ಯವನ್ನೇ ಲೇಖಕರಿಲ್ಲಿ ಸೋದಾಹರಣವಾಗಿ ವಿವರಿಸಿರುವರು. . . . . .

ಮಹಾಕವಿ ಭವಭೂತಿಯು ಸಂಸ್ಕೃತಸಾಹಿತ್ಯದಲ್ಲಿ ಅಮರಸ್ಥಾನವನ್ನು ಗಳಿಸಿಕೊಂಡಿದ್ದಾನೆ. "ನಾಟಕಾಂತಂ ಕವಿತ್ವಂ" ಎಂಬ ಮಾತು ಅವನ ಬಗ್ಗೆ ಸಂಪೂರ್ಣ ಸಾರ್ಥಕವಾಗಿದೆ.

ಭವಭೂತಿಯ ನಾಟಕಗಳಲ್ಲಿ ಕಂಡುಬರುವ ಸೊಗಸು ಹೃದಯಾನುಭೂತಿಯ ಪರಿಪಕ್ವ ಸ್ವರೂಪವಾಗಿದೆ. ಅವನ ಹೃದಯಾನುಭೂತಿಯು ಸಹೃದಯರ ಸಹಾನುಭೂತಿಯನ್ನು ವಿಶೇಷವಾಗಿ ಗಳಿಸಿಕೊಂಡಿದೆ. ಗೋವರ್ಧನಾಚಾರ್ಯನು ತನ್ನ ಆರ್ಯ ಸಪ್ತಶತಿಯಲ್ಲಿ ಭವಭೂತಿಯ ಬಗ್ಗೆ ನುಡಿದ ವಿಚಾರವು ಯಥಾರ್ಥವಾದುದು.

"ಭವಭೂತೇಃ ಸಂಬಂಧಾತ್ ಭೂಧರಭೂರೇವ
ಭಾರತೀ ಭಾತಿ ।
ಏತತ್ಕೃತಕಾರುಣ್ಯೇ ಕಿಮನ್ಯಥಾ ರೋದಿತಿ
ಗ್ರಾವಾ ॥"

ಪರ್ವತರಾಜನ ಮಗಳು ಭವನ ಭೂತಿಯ ಅರ್ಥಾತ್ ಶಿವನ ಮೈಯ ಬೂದಿಯ ಸಂಪರ್ಕದಿಂದ ಶೋಭಿಸುವಂತೆ ಭವಭೂತಿಯ ಸಂಬಂಧದಿಂದಾಗಿ ಸರಸ್ವತಿಯು ಕಂಗೊಳಿಸುತ್ತಾಳೆ. ಭವಭೂತಿಯ ವಾಣಿಯು ಕರುಣವ್ಯಂಜನೆಯಿಂದ ಚೇತನವುಳ್ಳ ಪ್ರಾಣಿಗಳು ಮಾತ್ರವೇ ಏಕೆ? ಜಡಪದಾರ್ಥವಾದ ಕಲ್ಲೂ ರೋದಿಸುತ್ತದೆಯಂತೆ! ಹೃದಯಶೂನ್ಯವಾದ ಕಲ್ಲನ್ನೂ ಕರಗಿಸುವಂಥ ಶಕ್ತಿ ಭವಭೂತಿಯ ವಾಣಿಯಲ್ಲಿ ತುಂಬಿರುವಾಗ, ಅವನ ಹೃದಯಾನುಭೂತಿಯ ಸಾಮರ್ಥ್ಯವೆಷ್ಟಿರಬೇಡ ಎಂಬುದನ್ನು ನಾವು ಊಹಿಸಬಹುದು.

## ರಸೋಲ್ಲಾಸದ ಮೂಲಬೀಜ

ಹೃದಯಾನುಭೂತಿಯು ಸಹೃದಯ ಸಂವೇದನೆಯ ಮೂಲ. ಸಹೃದಯತೆಯ ಸಿದ್ಧಿಗೆ ಹೃದಯಾನುಭೂತಿ ಅತ್ಯವಶ್ಯ. ಸಹೃದಯ ಹೃದಯಾನುಭೂತಿಯೇ ರಸಸಂವೇದನೆಗೆ ಆದಿಕಾರಣ. ಪರಿಪಕ್ವವಾದ ಅನುಭವವು ಕವಿಹೃದಯದಿಂದ ರಸಸ್ರೋತಸ್ಸಿನ ಮೂಲಕ ಪ್ರವಹಿಸಿಬಂದಾಗ ಸಹೃದಯ ಹೃದಯದ ಸೇಚನೆಯಾಗುತ್ತದೆ. ಆಗ ಸಹೃದಯನಾದ ಕವಿಯ ಹೃದಯಾನುಭೂತಿ ಸಕಲಸಹೃದಯ ಹೃದಯಕ್ಕೂ ಗೋಚರವಾಗುತ್ತದೆ. ಕವಿ ಸಹೃದಯರ ಹೃದಯಾನುಭೂತಿಯಿಂದಲೇ ರಸದ ಪೂರ್ಣಸಿದ್ಧಿಯಾಗುತ್ತದೆ ಎಂದು ರಸಜ್ಞರು ಅಭಿಪ್ರಾಯಪಟ್ಟಿದ್ದಾರೆ. ಇದು ಮಹಾಕವಿ ವಾಣಿಯಲ್ಲಿ ಅಭಿವ್ಯಕ್ತವಾಗುವ ಸತ್ಯ. ಮಹಾಕವಿ ಭವಭೂತಿಯು ಶಬ್ದ-ಬ್ರಹ್ಮನ ಸಾಕ್ಷಾತ್ಕಾರದಿಂದ ಇಂಥ ಸತ್ಯದ ಮೇಲೆ ಬೆಳಕು ಚೆಲ್ಲಿದ್ದಾನೆ.

" ಬುಧಾಃ ಶಬ್ದಬ್ರಹ್ಮವಿದಃ ಕವೇಃ ಪರಿಣತಾಂ
ಪ್ರಾಜ್ಞಸ್ಯ ವಾಣೀಮಿಮಾಂ "

ಎಂಬುದರಿಂದ ಕವಿಯ ಪರಿಣತವಾದ ವಾಣಿಯನ್ನು ಶಬ್ದಬ್ರಹ್ಮವಿದರಾದ ವಿದ್ವಾಂಸರು ಅನುಭವಿಸುವಂತೆ ಕವಿ ಕೇಳಿಕೊಂಡಿದ್ದಾನೆ. ಶಬ್ದಬ್ರಹ್ಮನನ್ನು ಅವನು ಅರಿತಿರುವ ಅಂಶವೂ ಇದರಿಂದ ಗಮ್ಯವಾಗುತ್ತದೆ. ಶಬ್ದಬ್ರಹ್ಮನ-ಸಾಕ್ಷಾತ್ಕಾರ, ರಸಸಿದ್ಧಿಗಳಿಗೆ ಕವಿ ಸಹೃದಯರಿಬ್ಬರ ಹೃದಯಾನುಭೂತಿಯು ಸುಂದರ ಮಾಧ್ಯಮವೆನ್ನಬಹುದು.

ಅನುಭೂತಿ ಎಂದರೆ ಅನುಭವ. ಹೃದಯಸ್ಪರ್ಶಿಯಾದ ಅರ್ಥಾತ್ ಮಾರ್ಮಿಕವಾದ ಅನುಭೂತಿ ರಸೋಲ್ಲಾಸಕ್ಕೆ ಮೂಲ ಬೀಜ. ಪ್ರತಿಯೊಬ್ಬ ಕವಿಗೂ ಇದು ಅನಿವಾರ್ಯ. ಆದರೆ ಭವಭೂತಿಯಲ್ಲಿ ಇದು ಅಭಿವ್ಯಕ್ತವಾದ ಬಗೆ ಅನ್ಯಾದೃಶವಾದುದು. ಮಹಾವೀರ-ಚರಿತೆಗಿಂತಲೂ ಹೆಚ್ಚು ಮಾಲತೀಮಾಧವದಲ್ಲಿ, ಇವೆರಡಕ್ಕಿಂತಲೂ ಹೆಚ್ಚು ಉತ್ತರರಾಮಚರಿತದಲ್ಲಿ ಇದನ್ನು ಮನಗಾಣಬಹುದು. "ಉತ್ತರೇ ರಾಮಚರಿತೇ ಭವಭೂತಿರ್ವಿಶಿಷ್ಯತೇ". ಉತ್ತರಾಮಚರಿತದಲ್ಲಿ ಅವನ ಸ್ಥಾನ ಅಷ್ಟು ವಿಶಿಷ್ಟವಾದುದು ಇದೇ ಕಾರಣದಿಂದ ಎನ್ನುವದರಲ್ಲಿ ಸಂದೇಹವಿಲ್ಲ.

## ಸ್ನೇಹಾನುಭೂತಿ–ಕಾವ್ಯವಿಭೂತಿ

ಭವಭೂತಿಯ ಹೃದಯಾನುಭೂತಿಯೆಂದರೆ ಪ್ರೇಮದ ಸುಂದರವ್ಯಾಖ್ಯೆ ಎನ್ನಬಹುದು. ಸ್ನೇಹ ಅಥವಾ ಪ್ರೇಮದ ಗಾಢವಾದ ಅನುಭೂತಿಯೇ ಅವನ ಕಾವ್ಯದ ಜೀವಾಳ. ಮಾಲತೀಮಾಧವ — ಉತ್ತರರಾಮಚರಿತಗಳಲ್ಲಿ ಇದು ಸ್ಫುಟವಾಗುತ್ತದೆ.

" ವ್ಯತಿಷಜತಿ ಪದಾರ್ಥಾನಾಂತರಃ ಕೋಪಿ
ಹೇತುಃ,
ನ ಖಲು ಬಹಿರುಪಾಧೀನ್ ಪ್ರೀತಯಃ
ಸಂಶ್ರಯಂತೇ ।
ವಿಕಸತಿ ಹಿ ಪತಂಗಸ್ಯೋದಯೇ ಪುಂಡರೀಕಂ,
ದ್ರವತಿ ಚ ಹಿಮರಶ್ಮಾವುದ್ಗತೇ ಚಂದ್ರಕಾಂತಃ"

ಒಳಗಿನ ಯಾವದೋ ಒಂದು ಹೇತುವೇ ಪರಸ್ಪರ ಪ್ರೇಮ ಸಂಬಂಧದ ಬೆಸುಗೆಯನ್ನುಂಟುಮಾಡುತ್ತದೆ. ಪ್ರೀತಿಯೆಂದೂ ಬಾಹ್ಯೋಪಾಧಿಗಳನ್ನವಲಂಬಿಸಿಲ್ಲ. ಸೂರ್ಯನು ಮೂಡಿ ಬಂದಾಗ ತಾವರೆ ಹೇಳದೆ ಕೇಳದೆ ಅರಳಿ ನಿಲ್ಲುತ್ತದೆ. ಚಂದ್ರೋದಯವಾದಾಗ

ಚಂದ್ರಕಾಂತವು ದ್ರವಿಸಿಬಿಡುತ್ತದೆ. ತಾವರೆ-ಸೂರ್ಯ, ಚಂದ್ರ, ಚಂದ್ರಕಾಂತ ಇವುಗಳೊಳಗೆ ಎಲ್ಲಿಯ ನಂಟು ? ಬಾಹ್ಯವಾದ ಸಂಪರ್ಕ ನಮಗೆ ಗೋಚರಿಸದಿದ್ದರೂ ಅಂತರಂಗಿಕ ವ್ಯಾಪಾರವೇ ಬೆಸುಗೆಯಾಗಿದೆ. ಸ್ನೇಹದ ಹೃದಯಸ್ಪರ್ಶಿಯಾದ ಅನುಭೂತಿಯೇ ಭವಭೂತಿಯ ಕಾವ್ಯವಿಭೂತಿಯಾಗಿ ರೂಪುಗೊಂಡಿದೆ. ಲೋಕೋತ್ತರವಾದ ತನ್ನ ಎರಡು ನಾಟಕಗಳಲ್ಲಿ [ ಮಾಲತೀಮಾಧವ-ಉತ್ತರಾಮಚರಿತ ] ಭವಭೂತಿಯು ಇದನ್ನು ಚಿತ್ರಿಸಿದ್ದಾನೆ.

ಮಾಲತೀಮಾಧವದಲ್ಲಿ ಕವಿಯು ಪ್ರೇಮವನ್ನು ವಿಶೇಷವಾಗಿ ಶೃಂಗಾರವನ್ನು ಸಮಗ್ರವಾಗಿ ನಿರೂಪಿಸಿದ್ದಾನೆ. ಮಾಲತೀ-ಮಾಧವರೊಳಗಿನ ಅಂತರವಾದ ಪ್ರೇಮವು ಬೆಸುಗೆಗೊಂಡುದರಲ್ಲಿ ಹೃದಯಾನುಭೂತಿಯ ಪಾತ್ರ ಹಿರಿದಾಗಿದೆ. ಮಾಧವನ ಮಿತ್ರನಾದ ಮಕರಂದನಿಗೆ ಪ್ರತಿಪಕ್ಷದ ನಂದನನ ತಂಗಿ ಮದಯಂತಿಕೆಯ ಸಂಯೋಗವಾದುದೂ ಪ್ರೇಮದ ಅಂತರಂಗಿಕ ವ್ಯಾಪಾರದ ಸುಂದರ ನಿದರ್ಶನವಾಗಿದೆ. ಮಾಲತೀ ಮಾಧವದಲ್ಲಿ ಸಂಯೋಗ-ವಿಪ್ರಲಂಭಗಳ ಹೃದಯಸ್ಪರ್ಶಿಯಾದ ಚಿತ್ರಣವು ಶೃಂಗಾರದ ಸೌಂದರ್ಯವನ್ನು ತೋರಿಸಿಕೊಡುತ್ತದೆ. ಪ್ರೇಮದ ಹೃದಯಾನುಭೂತಿ-ಪೂರ್ಣವಾದ ನಿರೂಪಣೆಯನ್ನು ಇಲ್ಲಿ ಕಾಣಬಹುದು.

## ಸ್ನೇಹ–ಕರುಣೆಗಳ ವಿಶ್ವರೂಪ

ಉತ್ತರ ರಾಮಚರಿತದಲ್ಲಿ ಸ್ನೇಹ ಅಥವಾ ಪ್ರೇಮದ ವಿಶ್ವರೂಪವು ಗೋಚರಿಸುತ್ತದೆ. ಅಲ್ಲಿ ಪ್ರೇಮದ ಅನುಭೂತಿಯು ಹೃದಯ ದ್ರಾವಕವಾಗಿ ಬಂದು ಕರುಣೆಯಾಗಿ ಹರಿದಿದೆ. ಪೂರ್ವದಲ್ಲಿ ಅನುಭವಕ್ಕೆ ಬಂದ ಪ್ರೇಮದ ಒತ್ತಡವು ಹೃದಯದ ಆತ್ಯಂತಿಕ ಸಹಾನುಭೂತಿಯಿಂದ ಕರುಣಾಮಯವಾಗಿ ಹೊರಹೊಮ್ಮಿದುದು ಉತ್ತರ ರಾಮಚರಿತದಲ್ಲಿ ವ್ಯಕ್ತವಾಗುತ್ತದೆ.

"ಏಕೋ ರಸಃ ಕರುಣ ಏವ ನಿಮಿತ್ತಭೇದಾತ್
ಭಿನ್ನಃ ಪೃಥಕ್ ಪೃಥಗಿವ ಶ್ರಯತೇ
ವಿವರ್ತಾನ್ ।
ಆವರ್ತ ಬುದ್ಬುದ ತರಂಗಮಯಾನ್
ವಿಕಾರಾನ್
ಅಂಭೋ ಯಥಾ ಸಲಿಲಮೇವ ಹಿ ತತ್
ಸಮಸ್ತಂ ॥

ಕರುಣವೊಂದೇ ರಸ. ಆದರೆ ನಿಮಿತ್ತಭೇದದಿಂದ ಅದು ಬೇರೆ ಬೇರೆ ಹೆಸರನ್ನು ಪಡೆಯುತ್ತದೆ. ಮೂಲತಃ ನೀರು ಒಂದೇ. ಆದರೆ ಬೇರೆ ಬೇರೆ ಸಂದರ್ಭಗಳಲ್ಲಿ ತೆರೆ, ಸುಳಿ, ಗುಳ್ಳೆ [ ಬುದ್ಬುದ ] ಮೊದಲಾದ ಬೇರೆ ಬೇರೆ ಹೆಸರು ಬರುತ್ತದೆ. ಆದರೂ ಮೂಲತಃ ಅದು ನೀರೇ ಆಗಿರುತ್ತದೆ. ಅಂತೆಯೇ ಕರುಣರಸವು ನಾನಾ ರೂಪಗಳನ್ನು ತಾಳುತ್ತದೆ ಎಂದು ಭವಭೂತಿಯು ಹೇಳಿದ್ದಾನೆ.

ಕರುಣವು ಸ್ನೇಹದ ದ್ರವಮಯವಾದ ಪರಿಪಾಕ. ಆದುದರಿಂದ ಕರುಣವು ನಾನಾರೂಪಗಳನ್ನು ತಳೆಯುವಂತೆ, ಸ್ನೇಹವೂ ವಿವಿಧ ರೂಪಗಳಿಂದ ಹೃದಯಾನುಭೂತಿ ಗೋಚರವಾಗುತ್ತದೆ ಎಂಬುದನ್ನೂ ಭವಭೂತಿ ನಿರೂಪಿಸಿದ್ದಾನೆ. ಸ್ನೇಹವೆಂಬ ಶಬ್ದವು ವ್ಯಾಪಕವಾದುದು. ಸತಿ—ಪತಿಯರಲ್ಲಿ, ಪ್ರಿಯ—ಪ್ರೇಯಸಿಯರಲ್ಲಿ ಅದು 'ಪ್ರೇಮ' ವೆನಿಸಿಕೊಂಡರೆ, ಮಗನಲ್ಲಿ ತಂದೆಗೆ 'ವಾತ್ಸಲ್ಯ', ಮಗನಿಗೆ ತಂದೆಯಲ್ಲಿ 'ಭಕ್ತಿ', 'ಗೌರವ' ಎಂದೂ ಮಿತ್ರರೊಳಗೆ 'ಗೆಳೆತನ' ವೆಂದೂ ಹೇಳಿಸಿಕೊಳ್ಳುತ್ತದೆ. ಇದು ಹೃದಯಾನುಭೂತಿಯ ವ್ಯಾಪಾರವೈವಿಧ್ಯ. ಇದರ ಚಿತ್ರಣದಲ್ಲೇ ಭವಭೂತಿ ಪ್ರೇಮದ ವ್ಯಾಖ್ಯೆಯನ್ನು ಮಾಡಿದ್ದಾನೆ.

ಸೀತಾ-ರಾಮರ ಪ್ರೇಮಮಯವಾದ ದಾಂಪತ್ಯದ ಅನುಭೂತಿಯು ಪ್ರಧಾನವಾಗಿ ಬರುತ್ತದೆ. "ನಿಕೃಂತನ್ ಮರ್ಮಾಣಿ ಕ್ರಕಚ ಇವ ಮನ್ಯುರ್ವಿರಮತಿ" ಗರಗಸದಂತೆ ಸಿಟ್ಟು ಮರ್ಮಗಳನ್ನು ಕೊರೆಯುತ್ತದೆ ಎಂದು ಒಮ್ಮೆಗೆ ಗೋಚರಿಸಿದರೂ ಜನಕನ ಹೃದಯದಲ್ಲಿ ಉಕ್ಕಿ ಬರುವ ವಾತ್ಸಲ್ಯ, ಕೌಸಲ್ಯೆ, ಅರುಂಧತಿ ಇವರ ವಾತ್ಸಲ್ಯಗಳೆಲ್ಲ ಕರುಣಾನುಭೂತಿಗೆ ಪೋಷಕವಾಗಿ ಬಂದಿವೆ. ಲಕ್ಷ್ಮಣನ ಭ್ರಾತೃಭಕ್ತಿಯು ಕರುಣೆಯ ಮಳೆಗರೆದರೆ, ವಾಸಂತಿ, ವನದೇವತೆ ಮೊದಲಾದವರ ಸ್ನೇಹವೂ ಇದರೊಂದಿಗೆ ಕಾಲುವೆಯಾಗಿ ಸೇರಿಕೊಳ್ಳುತ್ತದೆ. ಹೀಗೆ ಸ್ನೇಹವು ವಿವಿಧಹೃದಯಾನುಭೂತಿಯ ಬಲದಿಂದ ಕರುಣಾರ್ಣವವಾಗಿ ರೂಪುಗೊಂಡಿದೆ.

## ದುಃಖದ ಆತ್ಯಂತಿಕ ಸಂವೇದನೆ

ಕರುಣೆಯ ಅನುಭೂತಿಯ ಅಭಿವ್ಯಕ್ತಿಗಾಗಿ ಕವಿಯು ಅನುಸರಿಸಿದ ಸಂವಿಧಾನ ಚಾತುರ್ಯವು ವಿಶಿಷ್ಟವಾದುದು. ಕಲಾವಿದನೊಬ್ಬನು ಬಿಡಿಸಿದ ತನ್ನ ಜೀವನದ ಹಿಂದಿನ ಚಿತ್ರಗಳನ್ನು ಸೀತೆಯೊಂದಿಗೆ ಶ್ರೀರಾಮನು ನೋಡುತ್ತ ಬರುವದು ನೂತನ ವಿಧಾನವಾಗಿದೆ. ಜೀವನದ ಹಿಂದಿನ ಸವಿನೆನಹು, ವನವಾಸದ ಸುಂದರಾನುಭವವೇ ಇಲ್ಲಿ ಹೃದಯಾನುಭೂತಿಯಾಗಿ ಅಭಿವ್ಯಕ್ತವಾಗಿದೆ.

ತಾಟಕೆಯ ಸಂಹಾರದ ಕಾಲದಲ್ಲಿ ದಿವ್ಯಾಸ್ತ್ರಗಳ ಲಾಭ, ವಿವಾಹಸಮಾರಂಭ, ಗುರುಹಿರಿಯರೊಂದಿಗೆ ಅಯೋಧ್ಯೆಯಲ್ಲಿದ್ದ ಸುದಿನಗಳು, ವನವಾಸದ ಘಟನೆ, ಅಲ್ಲಿನ ಪ್ರಕೃತಿ-ಸುಂದರಸನ್ನಿವೇಶ, ಹೃದಯವಿದ್ರಾವಕ ಘಟನೆಗಳು, ಸೀತಾವಿರಹ ಸಂದರ್ಭ, ಮೊದಲಾದ ಎಲ್ಲ ಘಟನೆಗಳನ್ನೂ ಚಿತ್ರಗಳ ಮೂಲಕ ಕಂಡು ಶ್ರೀರಾಮ, ಲಕ್ಷ್ಮಣರ ಹೃದಯಾನುಭೂತಿ ದ್ರವಿಸಿಹೋಗಿದೆ. ರಾಮಾಯಣದ ಉತ್ತರಕಾಂಡದ ಕರುಣಚಿತ್ರಕ್ಕೆ ರಾಮಾಯಣ ಕಥೆಯ ಮೂಲಕ ಪರಿಪುಷ್ಟಿಯನ್ನೊದಗಿಸಿ ಹೃದಯಾನುಭೂತಿಯನ್ನು ಪ್ರದರ್ಶಿಸಿದ ಕವಿಯ ಚಾಕಚಕ್ಯ ಶ್ಲಾಘನೀಯವಾಗಿದೆ.

ಜನಸ್ಥಾನದಲ್ಲಿ ಸುವರ್ಣಮೃಗದ ನೆವದಿಂದ ಸೀತೆಯ ಅಪಹಾರವಾದಾಗ ರಾಮನ ವರ್ತನೆಯನ್ನು ನೋಡಿದರೆ ಕಲ್ಲೂ ಕರಗಬಹುದು ಎಂದು ಲಕ್ಷ್ಮಣನು ನೆನೆಸಿಕೊಳ್ಳುತ್ತಾನೆ. "ಅಪಿ ಗ್ರಾವಾ ರೋದಿತ್ಯಪಿ ದಲತಿ ವಜ್ರಸ್ಯ ಹೃದಯಂ" ಕಲ್ಲಾದರೂ ಅಳಬಹುದು, ವಜ್ರವಾದರೂ ಬಿರಿಯಬಹುದು. ಅಂಥ ವೇದನೆ ಶ್ರೀರಾಮನಿಗೆ ಉಂಟಾಗಿತ್ತು. ಇದರಿಂದ ಕರುಣೆಯ ಆಳವಾದ ಅನುಭೂತಿಯನ್ನು ಗುರುತಿಸಬಹುದು. ಶ್ರೀರಾಮನ ಈ ಬಗೆಯ ಅನುಭೂತಿಯನ್ನು ಕಲ್ಲೂ ಕರಗುವಂತೆ, ವಜ್ರ ಬಿರಿಯುವಂತೆ ಭವಭೂತಿಯು ಚಿತ್ರಿಸಿದ್ದಾನೆ.

ಶ್ರೀರಾಮನು ಜಾನಕಿಯ ಮೇಲೆ ಅಪವಾದವನ್ನು ಕೇಳಿದಾಗ ಅವನ ಹೃದಯದ ಮೇಲಾದ ಆಘಾತ ಅಸಹನೀಯವಾದುದು.

" ದುಃಖಸಂವೇದನಾಯೈವ ರಾಮೇ ಚೈತನ್ಯ-
ಮಾಗತಂ ।
ಮರ್ಮೋಪಘಾತಿಭಿಃ ಪ್ರಾಣೈರ್ವಜ್ರಕೀಲಾಯಿ-
ತಂ ಹೃದಿ"

ತನಗೆ ಚೈತನ್ಯ ಬಂದುದು ದುಃಖಾನುಭೂತಿಗಾಗಿಯೋ! ಮರ್ಮವನ್ನೇ ನೋಯಿಸುವ ಪ್ರಾಣಗಳು ಹೃದಯದಲ್ಲಿ ವಜ್ರದ ಕೀಲುಗಳಂತೆ ನೆಟ್ಟವೆ ಎಂದು ಶ್ರೀರಾಮನು ಹೇಳುತ್ತಾನೆ. ವಜ್ರದ ಕೀಲಿನಿಂದ ಹೃದಯಕ್ಕೆ ಆಗುವ ವೇದನೆ, ಪ್ರಿಯವಾದ ಪ್ರಾಣಗಳೇ ಮರ್ಮಘಾತಿಗಳಾಗಿರುವಷ್ಟು ನೋವು ಶ್ರೀರಾಮನಿಗಾದುದು ಕಂಡು ಬರುತ್ತದೆ. ಇದು ವೇದನೆಯ ಪರಾಕಾಷ್ಠೆಯೆನ್ನಬಹುದು. ಇದನ್ನು ಭವಭೂತಿಯು ನಿರೂಪಿಸಿದ ಪಾಂಡಿತ್ಯವು ಶ್ಲಾಘನೀಯವಾದುದು. ಪ್ರೇಮದ ಈ ವಿಧವಾದ ಅನುಭೂತಿಯೇ ಕರುಣಾನುಭೂತಿಯ ಹಿನ್ನೆಲೆಯಾಗಿದೆ.

## ಸಂವಿಧಾನದ ಚಾತುರ್ಯ

ಭವಭೂತಿಯು ಕಥಾಸಂವಿಧಾನದ ಮೂಲಕ ಕೆಲ ವೈಶಿಷ್ಟ್ಯಗಳನ್ನು ಸಾಧಿಸಿದ್ದಾನೆ. ರಾಮಾಯಣದ ಉತ್ತರಕಾಂಡದ ಕಥೆಯಲ್ಲಿ ಮಾಡಿದ ಪರಿವರ್ತನೆ ಈ ವೈಶಿಷ್ಟ್ಯದ ದ್ಯೋತಕವಾಗಿದೆ. ಸೀತೆಯನ್ನು ವನವಾಸಕ್ಕೆ ಕಳಿಸುವುದಷ್ಟೇ ಮೂಲ ಕಥೆ. ಆದರೆ ಭವಭೂತಿಯ ಸೀತೆ ಗಂಗೆಯಲ್ಲಿ ಬಿದ್ದು ಮಕ್ಕಳಿಗೆ ಜನನವೀಯುತ್ತಾಳೆ. ಮಕ್ಕಳನ್ನು ವಾಲ್ಮೀಕಿ ಸಲಹುತ್ತಾನೆ. ಸೀತೆ ರಸಾತಳದಲ್ಲಿರುತ್ತಾಳೆ. ಶ್ರೀರಾಮನು ವಾಲ್ಮೀಕಿಯ ತಪೋವನಕ್ಕೆ ಬಂದಾಗ ಸೀತೆಯ ನೆನಹುಂಟಾಗುವದು ಕರುಣಾಮಯವಾಗಿದೆ. ಅಲ್ಲಿ ಸೀತೆ ಅದೃಶ್ಯಳಾಗಿ ವಿಲಪಿಸುವದು, ಶ್ರೀರಾಮನು ಸೀತಾಸ್ಪರ್ಶಾನುಭೂತಿಯಿಂದ ಎದೆ ಬಿರಿಯುವಂತೆ ವಿಲಪಿಸುವ ಕರುಣಾಮಯ ನಿರೂಪಣೆ ನಾಟಕದ ಹೃದಯಭಾಗ. ಇಲ್ಲಿ ಭವಭೂತಿಯ ಹೃದಯಾನುಭೂತಿ ಸಮಗ್ರ ರಸವಾಹಿನಿಯಾಗಿ ಪ್ರವಹಿಸಿದೆ.

ವಾಲ್ಮೀಕಿಯ ಆಶ್ರಮಕ್ಕೆ ಕೌಸಲ್ಯೆ, ವಸಿಷ್ಠ, ಅರುಂಧತಿ, ಜನಕ ಮೊದಲಾದವರು ಬಂದಾಗ ವಾತ್ಸಲ್ಯಮಯ ಸನ್ನಿವೇಶವು ಕರುಣೆಗೆ ಸಮಗ್ರವಾಗಿ ಪೋಷಕವಾಗುತ್ತದೆ. ಇದೂ ಭವಭೂತಿಯ ನೂತನ ಸಂವಿಧಾನ. ಅಶ್ವಮೇಧದ ಕುದುರೆಗಾಗಿ ಲವನೂ ಚಂದ್ರಕೇತುವೂ [ಲಕ್ಷ್ಮಣನ ಮಗ] ಹೋರಾಡುತ್ತಿರುವಲ್ಲಿಗೆ ಶ್ರೀರಾಮನು ಬಂದು ಲವನನ್ನು ನೋಡಿ ಆನಂದಿಸುವನು. ಆಗ ಶ್ರೀರಾಮನ ಹೃದಯ ತುಂಬಿಬರುತ್ತದೆ. ಯಾವದೋ ಒಂದು ಬಗೆಯ ಅಂತರವಾದ ಪ್ರೇಮಾನುಭೂತಿ ಅವನ ಹೃದಯದಲ್ಲಿ ಉಕ್ಕೇರುತ್ತದೆ. ವಾತ್ಸಲ್ಯವಾಹಿನಿಯಾಗಿ ಹರಿಯುತ್ತದೆ.

ಸೀತಾಪರಿತ್ಯಾಗದ ಅನಂತರದ ಕಥೆಯನ್ನು ನಾಟಕರೂಪದಿಂದ ಪ್ರದರ್ಶಿಸಿ ಶ್ರೀರಾಮ ಸೀತೆಯರನ್ನೊಂದುಗೂಡಿಸುವದು ಕವಿಯ ನೂತನ ಪ್ರಯೋಗ. ಇದರಿಂದ ಶ್ರೀರಾಮನ ಹೃದಯದ ಮೇಲೆ ವಿಶೇಷ ಪರಿಣಾಮವಾಗುತ್ತದೆ. ಗಂಗೆ ಭೂದೇವಿ ಇಬ್ಬರ ಪಾತ್ರಗಳಿಂದ ಶ್ರೀರಾಮನ ನೋವು ಹೆಚ್ಚುತ್ತದೆ. ಕೊನೆಗೆ ವಾಲ್ಮೀಕಿಯು ಸೀತೆ, ಕುಶಲವರನ್ನು ಶ್ರೀರಾಮನಿಗೊಪ್ಪಿಸುತ್ತಾನೆ. ರಾಮಾಯಣದಲ್ಲಿ ದುಃಖಾಂತ ಕಥೆಯಿದ್ದರೆ ಇಲ್ಲಿ ಸುಖಾಂತವಾಗಿದೆ. ನಾಟಕ ದೃಷ್ಟಿಯಿಂದ ಈ ವಿಪರ್ಯಾಸವು ಅನಿವಾರ್ಯವಾಯಿತು. ಇದಕ್ಕಾಗಿ ನಾಟಕದೊಳಗೊಂದು ನಾಟಕವನ್ನಾಡಿ ಹೃದಯಾನುಭೂತಿಯನ್ನು ಗಳಿಸುವದು ಕವಿಗೆ ಅವಶ್ಯವಾಯಿತು.

ಹೀಗೆ ಕರುಣವೊಂದೇ ರಸವು ವಿವಿಧ ರೂಪವನ್ನು ತಳೆಯುತ್ತದೆ ಎಂಬ ಭವಭೂತಿಯ ಮಾತು ಕೃತಿಯಲ್ಲಿ ಸಮಗ್ರತೆಯಿಂದ ವ್ಯಕ್ತವಾಗಿದೆ. ವೀರವಿಪ್ರಲಂಭಾದಿ ರಸಗಳೂ ಇಲ್ಲಿ ಕರುಣಾಮಯವಾಗಿ ಬಂದಿವೆ. ಇದರಿಂದ ಮನಸ್ಸು ಬಹಳ ಆರ್ದ್ರವಾಗಿದೆ.


"ಶೃಂಗಾರೇ ವಿಪ್ರಲಂಭಾಖ್ಯೇ ಕರುಣೇ ಚ
ಪ್ರಕರ್ಷವತ್ ।
ಮಾಧುರ್ಯಮಾರ್ದ್ರತಾಂ ಯಾತಿ
ಯತಸ್ತತ್ರಾಧಿಕಂ ಮನಃ"

ವಿಪ್ರಲಂಭಶೃಂಗಾರ, ಕರುಣ ರಸಗಳಲ್ಲಿ ಮಾಧುರ್ಯವು ಹೆಚ್ಚಾಗಿದ್ದು ಮನಸ್ಸು ಆರ್ದ್ರವಾಗುತ್ತದೆ. ಕರುಣರಸದಲ್ಲಿ ಮನಸ್ಸು ಇನ್ನಷ್ಟು ಆದ್ರವಾಗಿರುತ್ತದೆ ಎಂದು ಧ್ವನ್ಯಾಚಾರ್ಯರು ಸಾರಿದ್ದಾರೆ. ಕರುಣದಲ್ಲಿ ಹೃದಯದ ಆರ್ದ್ರತೆ ಬಹಳವಾದುದರಿಂದ ಹೃದಯಾನುಭೂತಿಯ ಅಂಶ ಹೆಚ್ಚು ಬೇಕಾಗುತ್ತದೆ. ಇದನ್ನು ಭವಭೂತಿಯು ಚೆನ್ನಾಗಿ ಗಮನಿಸಿದ್ದಾನೆ.

## ಮಾರ್ಮಿಕ ಸನ್ನಿವೇಶಗಳು

ಭವಭೂತಿಯು ಹೃದಯೋದ್ವೇಗವನ್ನು ನಿರೂಪಿಸಿದ ವಿಧಾನ ಅಸಾಧಾರಣವಾದುದು. "ಸ್ಫುಟತಿ ಹೃದಯಂ" [ಹೃದಯವು ಸ್ಫೋಟಗೊಳ್ಳುತ್ತದೆ], "ದಲತಿ ಹೃದಯಂ" [ಹೃದಯವು ತುಂಡಾಗುತ್ತದೆ.] "ಹೃನ್ಮರ್ಮವ್ರಣ ಇವ ವೇದನಾಂ ತನೋತಿ" [ಹೃದಯದ ಮರ್ಮದಲ್ಲಾದ ಹುಣ್ಣಿನಂತೆ ವೇದನೆಯನ್ನುಂಟುಮಾಡುತ್ತದೆ] "ಪ್ರಹರತಿ ವಿಧಿರ್ಮರ್ಮಚ್ಛೇದೀ" [ಮರ್ಮಚ್ಛೇದ ಮಾಡುವಂತೆ ವಿಧಿಯು ಹೊಡೆಯುತ್ತಾನೆ], "ದಹತಿ ಯದವಸ್ಕಂದ್ಯ ಹೃದಯಂ" [ಹೃದಯವನ್ನು ಸುಡುತ್ತದೆ], "ಮರ್ಮಾಣಿ ಕೃಂತನ್"[ಮರಗಳನ್ನು ಚುಚ್ಚುತ್ತ] "ದ್ರವ ಇವ ಹೃದಯಸ್ಯ" [ಹೃದಯ ಕರಗಿದಂತೆ], ಮೊದಲಾದ ನಾನಾಭಂಗಿಗಳಿಂದ ಹೃದಯದ ಮಾರ್ಮಿಕ ಸನ್ನಿವೇಶವನ್ನು ಚಿತ್ರಿಸಿದ್ದಾನೆ. ಹೃದಯದ ಮೇಲೆ ನೇರವಾಗಿ ಪರಿಣಾಮವನ್ನುಂಟುಮಾಡುವ ಹೃದಯಾನುಭೂತಿಯ ಚಿತ್ರಣವೇ ಕವಿಯ ಮುಖ್ಯೋದ್ದೇಶವೆನ್ನಬಹುದು.

ಇನ್ನು ಕೆಲ ವಿಶಿಷ್ಟಸಂದರ್ಭಗಳಲ್ಲಿ ಹೃದಯಾನುಭೂತಿಯನ್ನು ಕವಿ ಚಿತ್ರಿಸಿದ ಅಂಶ ಗಮನಾರ್ಹವಾಗಿದೆ. ತನ್ನನ್ನು ತ್ಯಾಗ ಮಾಡಿದ ಪತಿಯನ್ನು ಕಂಡಾಗ ಉಂಟಾಗುವ ಸೀತೆಯ ಹೃದಯಾವಸ್ಥೆಯ ನಿರೂಪಣೆ ಇದಕ್ಕೆ ಒಂದು



ಪ್ರಮುಖ ನಿದರ್ಶನ. "ದ್ರವೀಭೂತಂ ಪ್ರೇಮ್ಣಾ ತವ ಹೃದಯಮಸ್ಮಿನ್ ಕ್ಷಣ ಇವ" ಎಲ್ಲಾ ವಿರೋಧವೂ ದೂರವಾಗಿ ಹೃದಯವು ಪ್ರೇಮದಿಂದ ದ್ರವವಾಗಿ ಹರಿದುದು ಕಂಡು ಬರುತ್ತದೆ.

"ಚಿರಾದ್ ವೇಗಾರಂಭೀ ಪ್ರಸೃತ ಇವ ತೀವ್ರೋ ವಿಷರಸಃ
ಕುತಶ್ಚಿತ್ ಸಂವೇಗಾತ್ ಪ್ರಚಲ ಇವ ಶಲ್ಯಸ್ಯ ಶಕಲಃ।
ವ್ರಣೋ ರೂಢಗ್ರಂಥಿಃ ಸ್ಫುಟಿತ ಇವ ಹೃನ್ಮರ್ಮಣಿ ಪುನಃ
ಪುರಾಭೂತಃ ಶೋಕೋ ವಿಕಲಯತಿ ಮಾಂ ನೂತನ ಇವ॥

ಬಹುಕಾಲದ ವಿರಹದ ವಿಷವೇದನೆ, ಬಾಣದಂತೆ ಇರಿಯುವ ನೋವು, ಹೃದಯದಲ್ಲಿ ಹುಣ್ಣಿನಂತೆ ಅಂಟಿಕೊಂಡ ಬೇನೆ ಇವುಗಳನ್ನೆಲ್ಲಾ ಹಿಂದಿನ ದುಃಖವು ಹೊಸ ದುಃಖದಂತೆ ಹೆಚ್ಚಿಸುತ್ತದೆ.

ಸೀತೆಯನ್ನು ಕಂಡಾಗ ಶ್ರೀರಾಮನಿಗಾಗುವ ಆನಂದ ಅತಿಶಯವಾದುದು.

ಆಲಿಂಪನ್ನಮೃತಮಯೈರಿವ ಪ್ರಲೇಪೈಃ
ಅಂತರ್ವಾ ಬಹಿರಪಿ ವಾ ಶರೀರಧಾತೂನ್।
ಸಂಸ್ಪರ್ಶಃ ಪುನರಪಿ ಜೀವಯನ್ನಕಸ್ಮಾತ್
ಆನಂದಾದಪರಮಿವಾದಧಾತಿಮೋಹಂ॥

ಸೀತಾಸ್ಪರ್ಶದಿಂದ ಅಮೃತದ ಲೇಪವಾದಂತೆ ಶ್ರೀರಾಮನಿಗೆ ಆನಂದಕ್ಕಿಂತಲೂ ಹೆಚ್ಚಿನ ಮೋಹವನ್ನುಂಟು ಮಾಡುತ್ತದೆ ಎನ್ನುವ ಹಾರ್ದಿಕವಾದ ಅನುಭೂತಿ ಗಮನಾರ್ಹವಾದುದು. ಪ್ರೇಮದ ಮೋಹಾವಸ್ಥೆ ಹಾಗೂ ಹೃದಯದ ಅನುಭೂತಿವಿಶೇಷವನ್ನು ಇಲ್ಲಿ ಕಾಣಬಹುದು.

ಸೀತೆ ಶ್ರೀರಾಮನನ್ನು ಕಂಡಾಗ ಉಂಟಾಗುವ ಇನ್ನೊಂದು ಅನುಭೂತಿ ಹೀಗಿದೆ.

ಆಶ್ಚ್ಯೋತನಂ ನು ಹರಿಚಂದನಪಲ್ಲವಾನಾಂ,
ನಿಷ್ಪೀಡಿತೇಂದು ಕರಕಂದಲ ಜೋನುಸೇಕಃ।
ಆತಪ್ತ ಜೀವನಮನಃ ಪರಿತರ್ಪಣೋಯಂ
ಸಂಜೀವನೌಷಧಿರಸೋ ಹೃದಿನು ಪ್ರಸಕ್ತಃ॥

ಹರಿಚಂದನದ ಚಿಗುರುಗಳಿಂದ ರಸ ಸುರಿದಂತೆ, ಚಂದ್ರಕಿರಣಗಳ ಸೇಕವಾದಂತೆ, ಸಂತಪ್ತ ಜೀವನ ಮನಗಳಿಗೆ ಸಂಜೀವನದ ಔಷಧಿರಸ ಹರಿದುಬಂದಂತೆ ಅವಳಿಗೆ ಭಾಸವಾಗಿದೆ. ಇದರಲ್ಲಿ ಹೃದಯದ ಸಹಜವಾದ ಸುಂದರಾನುಭೂತಿ ಮೂಡಿದೆ.

ವಾಸಂತಿ ಕಾಡಿನ ಹಿಂದಿನ ಜೀವನ ಘಟನೆಯೊಂದನ್ನು ನೆನಪು ಮಾಡಿಕೊಡುವದು ಮನೋಹರವಾಗಿದೆ. "ಅಸ್ಮಿನ್ನೇವ ಲತಾಗೃಹೇ" ಎಂಬ ಶ್ಲೋಕದಲ್ಲಿ ಇದು ಸ್ಪಷ್ಟವಾಗಿದೆ. "ಇದೇ ಲತಾಗೃಹದಲ್ಲಿ ನಿಂತುಕೊಂಡು ಸೀತೆಯ ದಾರಿಯನ್ನು ನೀನು ನೋಡುತ್ತಿದ್ದೆ. ಅವಳು ಗೋದಾವರಿಯ ದಡದಲ್ಲಿ ನಿಂತುಕೊಂಡು ಹಂಸಗಳೊಂದಿಗೆ ವಿನೋದಿಸುತ್ತಿದ್ದಳು. ತುಸು ಸಮಯ ಕಳೆದಾಗ ನೀನು ಆಕಡೆ ನೋಡಿದೆ. ಆಗ ಅವಳು ಕಮಲದ ಮೊಗ್ಗೆಯಂಥ ಕೈಗಳನ್ನು ಜೋಡಿಸಿ ವಂದಿಸಿದಳು! ಇಂಥ ಗತಜೀವನದ ಮಧುರ ಸ್ಮೃತಿಗಳು ಹೃದಯದ ಸಹಾನುಭೂತಿಯನ್ನು ವಿಶೇಷವಾಗಿ ಗಳಿಸುತ್ತವೆ.

**ಆಳವಾದ ಅನುಭೂತಿ**

ಹೃದಯದ ಆಳವನ್ನು ನೋಡುವ ಭವಭೂತಿಯ ದೃಷ್ಟಿ ಅಗಾಧವಾದುದು. "ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ। ಲೋಕೋತ್ತರಾಣಾಂ ಚೇತಾಂಸಿ ಕೋಹಿ ವಿಜ್ಞಾತುಮರ್ಹತಿ" ಶ್ರೀ ರಾಮನು ಸೀತೆಯನ್ನು ತ್ಯಾಗ ಮಾಡಿದಾಗ ವಜ್ರಹೃದಯಿಯಂತೆ ಕಂಡರೆ, ಸೀತೆಯ ಬಂಗಾರದ ಪ್ರತಿಮೆ ಮಾಡಿಸಿದುದನ್ನು ಕಂಡಾಗ ಅವನ ಹೃದಯದ ಸುಮಕೋಮಲತೆ ವ್ಯಕ್ತವಾಗುತ್ತದೆ. ಸೀತೆಯನ್ನು ತ್ಯಜಿಸುವಲ್ಲಿ ತೋರಿದ ಕಾಠಿನ್ಯವನ್ನು ಪುನರ್ವಿವಾಹದಲ್ಲಿ ತೋರಿಸಬಹುದಾಗಿತ್ತು. ಆದರೆ ಅಲ್ಲಿ ಹೃದಯದ ಕೋಮಲತೆ ಪ್ರೇಮಾನುಭೂತಿ ಹೆಚ್ಚಿನದು. ಮಹಾಪುರುಷರ ಲೋಕೋತ್ತರ ಹೃದಯಭೂತಿಯನ್ನು ಭವಭೂತಿಯು ಕಂಡ ರೀತಿ ನೂತನವಾದುದು. ಲೋಕ ನಾಯಕನಾದ ಶ್ರೀರಾಮನು ಲೋಕಾರಾಧನೆಗಾಗಿ ಸ್ನೇಹ, ದಯೆ, ಸೌಖ್ಯ ಮಾತ್ರವೇ ಏಕೆ ಜಾನಕಿಯನ್ನಾದರೂ ಬಿಡಲು ವ್ಯಥಿಸುವವನಲ್ಲವೆಂದು ಭವಭೂತಿ ನಿರೂಪಿಸಿದ್ದಾನೆ. ಇದರಿಂದ ಶ್ರೀರಾಮನ ಧೀರೋದಾತ್ತ ಪ್ರಕೃತಿ ವ್ಯಕ್ತವಾಗಿದೆ. ಆದರೆ ಪ್ರೇಮಮಯವಾದ ಹೃದಯದ ಅನುಭೂತಿಯನ್ನು ನಿರೂಪಿಸುವಾಗ ಅವನು ಸುಂದರ ರಸಪಾಕವನ್ನು ಸಿದ್ಧಗೊಳಿಸಿ ಬಿಟ್ಟಿದ್ದಾನೆ. ಸ್ನೇಹದ ವಿಶಾಲ ತತ್ತ್ವವನ್ನೂ ವಿವಿಧ ಪ್ರಕಾರಗಳನ್ನೂ ಕರುಣದಲ್ಲಿ ಸಮನ್ವಯಗೊಳಿಸಿ ಸಹೃದಯಾನುಭೂತಿಯನ್ನು ವಿಶೇಷವಾಗಿ ಸಂಪಾದಿಸಿಕೊಂಡಿದ್ದಾನೆ.

---

ಪರಧರ್ಮವು ಶ್ರೇಷ್ಠವೆಂದು ತಿಳಿದನಂತರ ಅದನ್ನು ಗ್ರಹಣಮಾಡುವದರಲ್ಲಿ ನನ್ನ ಕಲ್ಯಾಣವಾದರೂ ಏನಿದೆ? ಸೂರ್ಯಪ್ರಕಾಶವು ನನಗೆ ಬಹಳೇ ಪ್ರಿಯವಾಗಿದೆ. ಅದೇ ಪ್ರಕಾಶದಲ್ಲಿ ನಾನು ಬೆಳೆದು ದೊಡ್ಡವನಾಗುತ್ತಿದ್ದೇನೆ. ಸೂರ್ಯನು ನನಗೆ ವಂದನೀಯನಿರುವನು. ಆದರೆ ಅದಕ್ಕಾಗಿ ನಾನು ಭೂಮಿಯನ್ನು ಬಿಟ್ಟು ಅವನ ಬಳಿಗೆ ಹೋಗಲಿಚ್ಛಿಸಿದರೆ ಸುಟ್ಟು ಭಸ್ಮವಾಗುವೆನು.

— ಆಚಾರ್ಯ ವಿನೋಬಾ.

# ಅಹಂ ಬ್ರಹ್ಮಾಸ್ಮಿ


beechi

ಸರ್ವಧರ್ಮ ಸಮ್ಮೇಳನವೊಂದು ಸೇರಿದಾಗ ಶ್ರೀಶಂಭೂನಾಥಾವಧಾನಿಗಳು 'ಅಹಂ ಬ್ರಹ್ಮಾಸ್ಮಿ'— ನಾನು ಬ್ರಹ್ಮ ಎಂದು ಸಭೆಗೆ ತಾತ್ವಿಕ ವಿವೇಚನೆ ನೀಡಿದರು. ಆದರೆ ಮಗನ ಕೈಗೆ ಸಿಕ್ಕಾಗ ಏನಾಯಿತು! ವ್ಯಂಗ್ಯ ಬರೆಹಗಾರರಲ್ಲಿ ಹೆಸರಾದ ಬೀchi ಇಲ್ಲಿ ಒಂದು ವಿನೋದಲಹರಿಯನ್ನು ಹರಿಬಿಟ್ಟಿದ್ದಾರೆ.

ಜೈ ರಘುವೀರ ಸಮರ್ಥ ಮಹಾಸ್ವಾಮಿಗಳವರ ದಿವ್ಯ ಸತ್ಕೀರ್ತಿ ಸೂರ್ಯಕಿರಣಗಳಂತೆ ದಿಗ್ದಿಗಂತಕ್ಕೂ ವ್ಯಾಪಿಸಿದ್ದಿತು. ಮಂಡ್ಯದಿಂದ ಮದ್ದೂರಿಗೂ ಹುಬ್ಬಳ್ಳಿಯಿಂದ ಅಮರಗೋಳಕ್ಕೂ ಗುಂಡಾದಿಂದ ಹಗರಿ ಬೊಮ್ಮನಹಳ್ಳಿಗೂ ಮೂರನೆ ವರ್ಗದ ರೈಲ್ವೆಡಬ್ಬಿಯಲ್ಲಿ ಪ್ರವಾಸ ಮಾಡುವ ಕಾಚಿಪೂಚಿ ಗುರುವಲ್ಲ ರಘುವೀರ ಸಮರ್ಥರು. ಹಿಮಾಚಲದಿಂದ ಹಿಡಿದು ಧನುಷ್ಕೋಟಿಯ ವರೆಗೂ ಗಜ, ತುರಗ, ಪಲ್ಲಕ್ಕಿ, ಒಂಟೆಗಳ ಮೇಲೆ ಕುಳಿತು ಸರ್ವಸಕಲ ವೈಭವ ಪರಿವಾರದೊಂದಿಗೆ ಅದೆಷ್ಟೋ ಬಾರಿ ಸುತ್ತಾಡಿ ಶಿಷ್ಯಕೋಟಿಗೆ ಸಂದರ್ಶನವನ್ನಿತ್ತ ಮಹಾಪ್ರಭು ಅವರು. ಈ ಸ್ವಾಮಿಗಳ ತಪೋಬಲ, ಕ್ರಿಯಾಶಕ್ತಿ, ಶ್ರುತಿ ಸ್ಮೃತಿ —. ವೇದಾಧ್ಯಯನ, ಪಾಂಡಿತ್ಯ ಪೂರ್ಣ ವಾಕ್ಪಟುತ್ವ, ವಾಕ್ಶುದ್ಧಿ, ವಾಕ್ಸಿದ್ಧಿ, ಮಾನಸಪೂಜಾ, ಮೇಧಾಶಕ್ತಿ ಎಲ್ಲವೂ ಜಗತ್ಪ್ರಸಿದ್ಧಿಯಾಗಿ ಮಹಾಸ್ವಾಮಿಗಳು ಪ್ರಖ್ಯಾತ ಪುಣ್ಯಪುರುಷಪುಂಗವರೆನಿಸಿದ್ದರು. ಜೈ ರಘುವೀರ ಸಮರ್ಥ ಮಹಾಸ್ವಾಮಿಗಳವರಿಗೆ ಈ ವೃದ್ಧಾಪ್ಯದಲ್ಲಿ ಒಂದೇ ಒಂದು ಆಕಾಂಕ್ಷೆ - ತಮ್ಮ ಘನ ಅಧ್ಯಕ್ಷತೆಯಲ್ಲಿ ಒಂದು ಸಲ ಸರ್ವಧರ್ಮ ಸಮ್ಮೇಳನವನ್ನು ಸೇರಿಸಬೇಕು. ತಾವು ತಮ್ಮ ಜರತಾರಿ ಶಾಲನ್ನು ತಲೆಗೆ ಸುತ್ತಿ ಅಗ್ರಪೀಠದಲ್ಲಿ ಕುಳಿತು ಸರ್ವ ಕುಲ, ಜಾತಿ, ಧರ್ಮಗಳ ಸಮ್ರಾಟರೆನಿಸಿಕೊಳ್ಳಬೇಕು.

ಕುಂಭಕೋಣದಲ್ಲಿದ್ದು ದಕ್ಷಿಣದಲ್ಲೆಲ್ಲಾ ಬಿಜಯಮಂಗೈಯುತ್ತಿದ್ದ ಉತ್ತರಾದಿ ಮಠಾಧೀಶರಿಗೆ ಆಹ್ವಾನಪತ್ರವನ್ನು ಬರೆಯಿಸಿದರು. ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಮಠದ ಘನಪಂಡಿತರೂ ಚತುರ್ವೇದ ಪಾರಂಗತರೂ ಅಧ್ಯವಾಗ್ಮಿಗಳೂ ಆದ ಕಡಲೆಬೇಳೆ ಕೃಷ್ಣಮೂರ್ತಾಚಾರ್ಯರನ್ನು ಕಳುಹಿ ಸಮ್ಮೇಳನವನ್ನು ಯಶಸ್ವಿಯಾಗಿ ಮಾಡಿಕೊಡಬೇಕೆಂದು. ಶೃಂಗೇರಿ ಪೀಠದಿಂದ ಸರ್ವಶಾಸ್ತ್ರಪಾರಂಗತರಾದ ಶ್ರೀ ಶಂಭುನಾಥಾವಧಾನಿಗಳು, ತ್ರಿಷಷ್ಠಿ ಪುರಾತನ ಮಠಾಧೀಶರಿಂದ ಅಪ್ಪಣೆಪಡೆದು 'ಪಂಚಾಚಾರ್ಯ ಪ್ರದೀಪಿಕಾ' ಎಂಬ ದ್ವಿವಾರ್ಷಿಕ ಪತ್ರಿಕೆಯ ಸಂಪಾದಕ ಮಹಾಶಯರುಗಳಾದ ತೋಂಟದಾರ್ಯ ಶರಣ ಸೂಗೂರು ಶಂಭುವೀರ ಶರ್ಮರೂ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಉರ್ದು ಮುನುಷಿ ಸಾಹೇಬರಾಗಿ ಒಂಭತ್ತು ತಿಂಗಳು ಗಳಿದ್ದು ನಂತರ ಗಡ್ಡ ಬಿಟ್ಟು, ಮೆಕ್ಕಾ ಮದಿನಾಗಳಿಗೆ ಪಾದಚಾರಿಯಾಗಿ ತೆರಳಿ ಮರಳಿ ಬಂದಿದ್ದ ಜನಾಬ್ ಖಾಜಿ ದರ್ಗಾ ಹುಮಾಯೂನ್ ಉಸ್ತಾದ್ ಸಾಹೇಬರು, ಶ್ರವಣಬೆಳಗೊಳದಿಂದ ತಿಂಗಳಿಗೊಮ್ಮೆ ತಪ್ಪದೆ ಹೊರಡುವ ವಾರಪತ್ರಿಕೆಯಾದ "ಜೈನ ಧರ್ಮ ಜ್ಯೋತಿ"ಯ ಮುಖ್ಯ ಮತ್ತು ಏಕಮಾತ್ರ ಸಂಪಾದಕರಾದ ಊರ್ಜಿತಕಾಮೇಂದ್ರರೂ, ಲೆಕ್ಕವಿಲ್ಲದಷ್ಟು ಕಾಲೇಜು ಲೆಕ್ಚರರೂ ಶ್ಯಾಮ್ಯುಲ್ ಬಸವನಗೌಡರೂ ಚಿಲ್ಲರೆ ಸಾಹಿತಿಮರಿಗಳೂ ಪುಡಿ ಪತ್ರಿಕಾಕರ್ತರೂ ದೇಶದ ದಿಶೆದಿಶೆಗಳಿಂದ ಬಂದಿಳಿದರು. ಆ ಸರ್ವಧರ್ಮ ಸಮ್ಮೇಳನವು ಮಧ್ವ, ಶಂಕರ, ರಾಮಾನುಜ, ಬಸವಣ್ಣ ಬುದ್ಧ, ಕ್ರಿಸ್ತ ಪೈಗಂಬರ ಮುಂತಾದ ಬಡ ಪ್ರಾಣಿಗಳು ತಿಕೀಟು ಪಡೆದು' ಬಂದು ನಿಂತು ನೋಡುವಂತಿದ್ದಿತು.

ಸರ್ವ ಧರ್ಮ ಪರೀಕ್ಷಕ, ಮತ್ತು ಪರಿಪಾಲಕರೆನಿಸಿಕೊಂಡಿದ್ದ ಶ್ರೀ ಜೈಸದ್ಗುರು ಸಮರ್ಥ ಸ್ವಾಮಿಗಳು ಶ್ವೇತಚ್ಛತ್ರದಡಿಯಲ್ಲಿ, ಸರ್ವವೇಷಭೂಷಣಾಲಂಕೃತರಾಗಿ, ಸಿಂಹಾಸನಾರೂಢರಾದರು. ತಮ್ಮ ಅಮೃತ ವಾಣಿಯಿಂದ ಆರಂಭದಲ್ಲಿಯೆ ಸಕಲ ಪಂಡಿತ ಪಾರಂಗತರನ್ನು ಅವರವರ ಗುರು ಮುಖೇನ ಆಶೀರ್ವದಿಸಿ, ಒಬ್ಬೊಬ್ಬರಾಗಿ ತಂತಮ್ಮ ಜ್ಞಾನ ಮಾರ್ಗ ಪ್ರಕಾಶವನ್ನು ಶ್ರೋತೃ ವೃಂದಕ್ಕೆ ಈಯತಕ್ಕದ್ದೆಂದು ಅಪ್ಪಣೆ ದಯಪಾಲಿಸಿದರು.



ಅವಧಾನಿಗಳು 'ಅಹಂ ಬ್ರಹ್ಮಾಸ್ಮಿ' ಎಂದೊಡನೆ ಅವರ ಮಗ ತಿಮ್ಮ ತಲೆಯೆತ್ತಿ ಅವರನ್ನು ಮಿಕಿ ಮಿಕಿ ನೋಡಿದ.

ಕೋಯಂಬತ್ತೂರಿನ ವೇದಮೂರ್ತಿ ಕಡಲೆಬೇಳೆ ಕೃಷ್ಣಮೂರ್ತಾಚಾರ್ಯರ ಭಾಷೆ ಕನ್ನಡ ಮಿಶ್ರಿತ ಸಂಸ್ಕೃತ, ಉಚ್ಚಾರ ತಮಿಳು, ಓಟ ಮಲಿಯಾಳ; ವಿಷಯ 'ಹರಿಸರ್ವೋತ್ತಮ— ವಾಯು ಜೀವೋತ್ತಮ'. ಭಾಷಣದ ಸಾರ "ನಾವು ಕುಂಭಕೋಣ, ಸೇಲಂ, ಕೊಯಿಲ್ ಪಟ್ಟಿ, ಸೇತುಪಟ್ಟಿ, ಧಕಲ್ ಪಟ್ಟಿ, ಬದರಿಕಾಶ್ರಮಗಳಲ್ಲಿ ಮಾಧ್ವ ವಿದ್ಯಾರ್ಥಿಗಳಿಗ ಮಾತ್ರ ಸಂಸ್ಕೃತ ಪಾಠಶಾಲಾಗಳನ್ನು ಸ್ಥಾಪಿಸಬೇಕೆಂದಿದ್ದೇವೆ. ಸರ್ವರಿಂದಲೂ ನಮಗೆ ಧನಸಹಾಯ ಅವಶ್ಯಕ"

ಎಂಬುದು ತನ್ನಧ್ಯೇ 'ಗೀತಾಪ್ರದೀಪ ಪರಿಮಳ' ಮತ್ತು 'ಶ್ರೀಮಧ್ವಮೂಲ ಪ್ರಶಸ್ತಿಕೆ ದಾರಿ ತಪ್ಪಿ ಬಂದು ಹೋದುವು ಅದೇಕೊ.

ರಾಮಾನುಜಾಚಾರ್ಯರ ಅನುಯಾಯಿಗಳೆನಿಸಿಕೊಂಡು ಧನುಷ್ಕೋಟಿಯಿಂದ ದಕ್ಷಿಣಕ್ಕೂ ಹಿಮಾಲಯದಿಂದ ಉತ್ತರಕ್ಕೂ ಸತ್ಕೀರ್ತಿ ಪಡೆದಿದ್ದ ರಾಜದೇಶಕಾಚಾಯರ ಪ್ರಥಮ ಪತ್ನಿಯ ದ್ವಿತೀಯ ಪುತ್ರರಾದ ಪುಳಿಹೋರಂ ಪಾರ್ಥಸಾರಥಿ ಅಯ್ಯಂಗಾರರು ಸಭೆಯಲ್ಲಿ ಎದ್ದುನಿಂತು ಒಂದೂವರೆ ಡಜನ್ ಪ್ರಾರ್ಥನಾ ಶ್ಲೋಕಗಳನ್ನು ತಾಳಬದ್ಧವಾಗಿ ಅಶ್ವಧಾಟಿಯಲ್ಲಿ ಹಾಡಿ, ವಿಶಿಷ್ಟಾದ್ವೈತ ಧರ್ಮದ ತತ್ತ್ವಸಾರವನ್ನುಹೇಳುತ್ತೇನೆಂದುಮೈಲುದ್ದದ ಉಪೋದ್ಘಾತವನ್ನು ಮಾಡಿದರು. ಅತಿರಥಿ ಮಹಾರಥಿಗಳಾದ ಕಡಲೆಬೇಳೆಕೃಷ್ಣಮೂರ್ತಾಚಾರ್ಯರೂ ಮತ್ತು ಪುಳಿಹೋರಂ ಪಾರ್ಥಸಾರಥಿ ಅಯ್ಯಂಗಾರರೂ ಇಡೀ ದಿನವನ್ನುವಿನಿಯೋಗಿಸಿ ಉಳಿದೆಲ್ಲ ಕಾರ್ಯಭಾಗವನ್ನು ನಾಳೆಗೆ ಎಳೆದು ಕೈಬಿಟ್ಟರು.

ಎರಡನೆಯ ದಿನದ ಮಹಾಸಭೆ 'ಪಂಚಾಚಾರ್ಯ ಪ್ರದೀಪಿಕೆ' ದ್ವಿವಾರ್ಷಿಕ ಪತ್ರಿಕೆಯ ಏಕಮಾತ್ರ, ಅಸಹಾಯ ಮತ್ತು ನಿಸ್ಸಹಾಯ ಸಂಪಾದಕ ಮಹಾಶಯರುಗಳಾದ ತೋಂಟದಾರ್ಯ ಶರಣ ಸೂಗೂರು ಶಂಭುವೀರ ಶರ್ಮರುಗಳಿಂದ ಆರಂಭಿಸಲ್ಪಟ್ಟು ಅವರಿಂದಲೇ ಸಮಾಪ್ತಿಗೊಳಿಸಲ್ಪಟ್ಟಿತು. ಜ್ಞಾನದೀವಟಿಗೆಯನ್ನು ಹೊತ್ತಿಸಿ ಭವಿಜನಾಂಗಕ್ಕೆ' ವೀರಶೈವ ಮತದ ಧರ್ಮೋಪದೇಶವನ್ನುಮಾಡುವ ವಾಗ್ದಾನವನ್ನು ಮಾಡಿ ಶ್ರೀ ಶರಣರು ತಮ್ಮ ತೃತೀಯ ವಿವಾಹದ ವಿಷಯ, ಮತ್ತು ಆ ಕಾರಣಾಂತರದಿಂದ ತಾವು ದೇಶಪರ್ಯಟನ ಮಾಡಿದ ಸಮಾಚಾರವನ್ನು ಸಭೆಗೆ ತಿಳಿಸಿದರು.

ಜನಾಬ್ ಖಾಜಿ ದರ್ಗಾ ಹುಮಯೂನ್ ಉಸ್ತಾದ್ ಸಾಹೇಬರು ಭಾಷಣವನ್ನು ಆರಂಭಿಸಿದಿದು ಮಾತ್ರವೇ ಸಭಾಂಗಣಕ್ಕೆ ಗೊತ್ತು. ಅವರ ಭಾಷಣವು ಕೈದು ಆದುದು ಎಂದು, ಯಾವಾಗ, ಏಕೆ ಎಂದು ಹೇಳುವುದು ಇಡೀ ಸಭೆಗೇ ತಿಳಿಯದ ಅಂಶ--ಸಭೆಯಲ್ಲಿ ಆಗ ಯಾರಾದರೂ ಇದ್ದಿದ್ದರೆ ತಾನೇ? ಪರ್ಶಿಯನ್ ಶಬ್ದಗಳಿಗೆ ಅರ್‍ಯಾಬಿಕ್ ಪ್ರತ್ಯಯಗಳನ್ನು ಹಚ್ಚಿ ಉರ್ದುಭಾಷೆಯಲ್ಲಿ ಖಾಜಿಸಾಹೇಬರು ಆರಂಭಿಸಿದ ಅರ್ಧಗಂಟೆಯಲ್ಲಿಯೇ ಮೊದಲೇ ಮೂಕರಾಗಿದ್ದಸಭಿಕಮಹಾಶಯರು ಮೂಢರಾದರು. 'ಹೇಗೂ ಉಸ್ತಾದ್ ಸಾಹೇಬರ ಅಡಿಗೆ,ಊಟಬೇರೆ. ತಾವೇಕೆ ಕಾಯಬೇಕು?' ಎಂದು ಹಿಂದೂ ಬಾಂಧವರೆಲ್ಲರೂ ಜ್ಞಾನದಾಹವನ್ನು ಖಾಲಿ ಕುರ್ಚಿಗಳಿಗೆ ಬಿಟ್ಟುಕೊಟ್ಟು, ತಮ್ಮ ಕ್ಷುದ್ಬಾಧಾ ನಿವಾರಣೋಪಾಯವನ್ನು ಕೈಗೊಂಡರು. ಸಾಹೇಬರು ತಮ್ಮ ಭಾಷಣವನ್ನು ಖತಂ ಮಾಡಿದಾಗ ಪೈಗಂಬರರ ಕಣ್ಣೂ ಬೆಳ್ಳಗಾಗಿದ್ದುವು.

ಜಿನರಾಜರಾದ ಊರ್ಜಿತ ಕಾಮೇಂದ್ರರು ತಮ್ಮ ಭಾಷಣಕ್ಕೆ ತಾವೇ ಮೆಚ್ಚಿ ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಂಡು ಕುಳಿತರು.

ಶ್ಯಾಮ್ಯುಯೆಲ್ ಬಸವನಗೌಡರು ತಮ್ಮ ಅಲ್ಪ ಪ್ರಾಣ ಮಹಾ ಪ್ರಾಣ ದೋಷ ಸಹಿತವಾದ ಹಂಡ ಬಂಡ ಭಾಷೆಯಲ್ಲಿ ಹೊಂದು ಕೆನ್ನೆಗೆ ವಡೆಧವನಿಗೆ ಹಿನ್ನೊಂಧು ಕೆನ್ನೆಯನ್ನು ಒಡ್ಡು ಎಂದು ನಮ್ಮ ಕ್ರೈಸ್ತನು ಏಳಿದ್ದಾನೆ.' ಎಂದು ಅಜ್ಞಾನಿಗಳಾದ ಈ ಮಾನವ ಕುರಿಗಳಿಗೆ ಕ್ರೈಸ್ತ ದೇವನ ವಚನಾಮೃತವನ್ನು ಬೋಧಿಸಿ "ಹಿದನ್ನು ಯಾವ ನನ್ನ ಮಗನಾದರೂ ಸುಳ್ಳು ಹೆಂದರೆ ಅವನ ಎರಡೂ ಕೆನ್ನೆಗಳನ್ನೂ ಮುರಿಯುವಂತೆ ಒಡೆಯುತ್ತೇವೆ" ಎಂದು ನುಡಿದು ಕಣ್ಣು ಕೆಂಪು ಮಾಡಿದರು.

ಕಾಲೇಜು ಪ್ರೊಫೆಸರು ಬಕರಾಗಳು, ಸಾಹಿತಿ ಮರಿಗಳು, ಪತ್ರಿಕಾಕರ್ತ ಪುಡಿಗಳು ಮತ್ತಿತರರ ಸರತಿ ಬಂದಿತು. ಭಾಷಣ ಮಾಡಲು ಇವರಿಗೆ ವಿಷಯಗಳೇ ಉಳಿಯದಿದ್ದ ಕಾರಣ ಈ ಚಿಲ್ಲರೆ ಪ್ರಾಣಿಗಳು 'ಮಾನವ ಧರ್ಮ'ದ ಮೇಲೆ ಮಾತನಾಡಿ ಕುಳಿತುವು. ಇದನ್ನೂ ಅರಿಯದ, ಹೊಸತಾಗಿ ಲಗ್ನವಾಗಿದ್ದ ವಿದ್ಯಾರ್ಥಿಭೂಪರು 'ಮಾನವ ಧರ್ಮ'ದ ಮೇಲೆ ಪ್ರಖರವಾದ ಭಾಷಣಗಳನ್ನು ಮಾಡಿ ತಮ್ಮ ಪರಸ್ಪರ ಏರ್ಪಾಟಿನ ಮೇರೆಗೆ ಒಬ್ಬರಿಗೊಬ್ಬರು ಕರತಾಡನ ಮಾಡಿಕೊಂಡು, ಪತ್ರಿಕೆಗಳಿಗೆ ವರದಿಗಳನ್ನು ಸ್ವಹಸ್ತದಿಂದ ಬರೆದುಕೊಂಡರು.



ಜನಾಬ ಖಾಜಿ ಅವರ ಭಾಷಣ ಪ್ರಾರಂಭವಾದಾಗ ಹಿಂದೂ ಬಾಂಧವರೆಲ್ಲ ಜ್ಞಾನ ದಾಹವನ್ನು ಖಾಲಿ ಕುರ್ಚಿಗಳಿಗೆ ಬಿಟ್ಟುಕೊಟ್ಟರು.

ಮಾರನೆ ದಿನ, ಶೃಂಗೇರಿ ಪೀಠದಿಂದ ಆಗಮಿಸಿದ್ದ ಸರ್ವಶಾಸ್ತ್ರಪಾರಂಗತ ಶ್ರೀ ಶಂಭುನಾಥಾವಧಾನಿಗಳ ಕಾರ್ಯಕ್ರಮ. ತಮ್ಮ ಏಕಮಾತ್ರ ಪುತ್ರ, ಮತ್ತು ಏಕೈಕ ಪತ್ನಿಯೊಂದಿಗೆ ಅವಧಾನಿಗಳು ಅಟ್ಟಹಾಸದಿಂದ ದಯಮಾಡಿಸಿದಾಗ ಸಾಕ್ಷಾತ್ ಶಂಕರಾಚಾರ್ಯರೇ ಆ ಸಭೆಯಲ್ಲಿದ್ದಿದ್ದರೆ ಅವರೇ ಎದ್ದು ನಿಲ್ಲುತ್ತಿದ್ದರೋ ಏನೋ, ತಾವೇ ಗುರುಗಳೆಂಬುದನ್ನೂ ಮರೆತು? ರುದ್ರಾಕ್ಷಿಮಾಲೆ, ಯಜ್ಞೋಪವೀತ, ಬಲಕ್ಕೆ ಮುಂಗೈಯಲ್ಲಿ ಚಿನ್ನದ ತೋಡಾ, ಲಲಾಟದಲ್ಲಿ ವಿಭೂತಿ, ಭ್ರೂಮಧ್ಯೇ ಕುಂಕುಮ, ಮುಖ್ಯವಾಗಿ ಅವರ ಎಡಮುಷ್ಟಿಯಲ್ಲಿದ್ದ ಬಹುದೊಡ್ಡ ಬೆಳ್ಳಿಯ ನಶ್ಯದ ಡಬ್ಬಿ ಸಾರಿಸಾರಿ ಹೇಳುತ್ತಿದ್ದುವು. ಇವರೇ ಶೃಂಗೇರಿ ಶಂಭುನಾಥಾವಧಾನಿಗಳು ಎಂದು. ಬಾಚಣಿಕೆಯ ಪರಿಚಯವೇ ಇಲ್ಲದ ಅವರ ಗೋ-ಪಾದದಷ್ಟು ಜುಟ್ಟು ಅವರಂತೆಯೇ ಅನುಗಾಲವು ಸೆಟೆದುನಿಂತು, ಉತ್ತರಮುಖಿಯಂತೆ ಮುಗಿಲನ್ನೇ ನೋಡುತ್ತಿದ್ದಿತು.

ಎರಡೆರಡು ಬಾರಿ ಕೆಮ್ಮಿ ಗಂಟಲನ್ನು ಸರಿ ಮಾಡಿಕೊಂಡು ಘರ್ಜಿಸಿದರು ಅವಧಾನಿಗಳು.

"ಅಹಂ ಬ್ರಹ್ಮಾಸ್ಮಿ"

ಅವಧಾನಿಗಳ ಚಿರಂಜೀವನಾದ ತಿಂಮ ತಲೆ ಎತ್ತಿ ತಂದೆಯವರ ಮುಖವನ್ನು ಮಿಕಿಮಿಕಿ ನೋಡಿದ. ಅವನಿಗೆ ಏನು ಅರ್ಥವಾಗಬೇಕು, ಪಾಪ!

"ನಾನು ಇಲ್ಲಿಗೆ ಆಗಮಿಸಿರುವಂತೆ ಆ ಬಾಲಕ ವಿವೇಕಾನಂದ ಕೂಡ ಒಂದು ಬಾರಿ ಅಮೇರಿಕೆ ಎಂಬ ಊರಿಗೆ ಹೋಗಿದ್ದ, ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು. ಆ ಹುಡುಗನೊ ನಮ್ಮಂತೆಯೇ-ನಮ್ಮಷ್ಟು ಅಲ್ಲದಿದ್ದರೂ ತನ್ನ ಯೋಗ್ಯತೆಗೆ ತಕ್ಕಂತೆ- ವಾಗ್ಮಿಯೆಂದು ಕೇಳಿಪಟ್ಟಿದ್ದೇವೆ. ಸತ್ಯಾಂಶ ವೆಷ್ಟೊ ನಮಗೆ ಗೊತ್ತಿಲ್ಲ. ತತ್ವಜ್ಞಾನದ ವಾಸನೆಯನ್ನೇ ಅರಿಯದ ಆ ಮ್ಲೇಂಛ ಪಾಶ್ಚಿಮಾತ್ಯರನ್ನು ಸೋಲಿಸುವುದು ಯಾವ ಮಹಾಕಾರ್ಯ? ಆಗ ನಾವಿರಬೇಕಿತ್ತು. ಆ ವಿವೇಕಾನಂದನಿಗೂ ಮೂಗು ಹಿಡಿಸುತ್ತಿದ್ದೆವು— ಆ ಮಾತು ಈಗ ಅಪ್ರಸ್ತುತ.

ಆ ಹುಡುಗನು ಅದ್ವೈತವಾದವನ್ನು ಸಮರ್ಥಕವಾಗಿ ಮಂಡಿಸಿ "ಅಹಂ ಬ್ರಹ್ಮಾಸ್ಮಿ"

ಎಂದು ಕಡೆಗೆ ನುಡಿದು ಕುಳಿತನಂತೆ. ಆ ತಕ್ಷಣವೇ ಮುಂದೆ ಕುಳಿತಿದ್ದ ಆಂಗ್ಲ ದೊರೆಗಳೊಬ್ಬರು ಅವನ ಮೇಧಾಶಕ್ತಿಗೆ ಮೆಚ್ಚಿ ತಮ್ಮಲ್ಲಿ ದ್ದೊಂದು ಚಿನ್ನದ ಪದಕವನ್ನು ಅರ್ಪಿಸಿದರಂತೆ. ವಿವೇಕಾನಂದನು ಪುನಃ ಅದನ್ನು ಅವರ ಅಂಗಿಗೆ ತಗುಲಿಸಿದನಂತೆ.

"ಇದನ್ನು ನಾನು ನಿಮಗೆ ಕೊಟ್ಟದ್ದೇನೆ. ನನಗೇ ಏಕೆ ಹಾಕುತ್ತೀರಿ?" ಎಂದು ಆ ದೊರೆಗಳು ಕೇಳಿದಾಗ ಆ ಹುಡುಗ ವಿವೇಕಾನಂದನು ಇತ್ತ ಉತ್ತರವು ಬಹು ಅರ್ಥಗರ್ಭಿತವಾಗಿದೆ.

"ಅಹಂ ಬ್ರಹ್ಮಾಸ್ಮಿ" ಎಂಬುದನ್ನು ನಾವಿಬ್ಬರೂ ಒಪ್ಪಿಕೊಂಡನಂತರ, ಅದ್ವೈತ ತತ್ತ್ವವನ್ನು ಸ್ವೀಕಾರ ಮಾಡಿದ ನಂತರ, ಈ ಚಿನ್ನದ ಪದಕದ ಸಲುವಾಗಿ ಈ ನಾನು ಬೇರೆ, ಆ ನೀವು ಬೇರೆ ಆಗಲು ಅದು ಹೇಗೆ ಸಾಧ್ಯ?"

"ಈ ರೀತಿಯಾಗಿ ಅಹಂಬ್ರಹ್ಮಾಸ್ಮಿ ಎಂಬುದು ನಿಮ್ಮೆಲ್ಲರ ಹೃದಯಾಂತರಾಳದಲ್ಲಿ ಮನೆಮಾಡಿ ಮೂಡಬೇಕು. ರಕ್ತಗತವಾಗಿ ಬಿಡಬೇಕು."

ಶ್ರೀ ಶಂಭುನಾಥಾವಧಾನಿಗಳು ಮಧ್ಯಾಹ್ನ ಮೀರುವ ವರೆಗೂ ಒಂದೇಸಮನೆ ಭಾಷಣವನ್ನು ಕುಟ್ಟಿದರು. ಅಂತೂ ಸಾಯಂಕಾಲ ನಾಲ್ಕಕ್ಕೆ ಅವಧಾನಿಗಳು ಹಸಿದಸಭೆಗೆ ಪ್ರಾಣದಾನಮಾಡಿ ಪುಣ್ಯದಲ್ಲಿ ಮತ್ತು ಭೋಜನದಲ್ಲಿ ಭಾಗಿಗಳಾದರು. ಕಟ್ಟಕಡೆಗೆ 'ಅಹಂ ಬ್ರಹ್ಮಾಸ್ಮಿ' ಎಂದು ಘರ್ಜಿಸಿ ತಮ್ಮ ಆಸನವನ್ನು ಸ್ವೀಕರಿಸಿದರು.

ಊಟಕ್ಕೆ ಕುಳಿತಾಗ ತಿಂಮ ತಂದೆಯವರನ್ನು ಕೇಳಿದ.

"ಅಹಂಬ್ರಹ್ಮಾಸ್ಮಿ ಎಂದರೇನಯ್ಯಾ?"

"ಅಯ್ಯೋ ಅವಿವೇಕಿ! ಇಷ್ಟುಹೊತ್ತು ನಾನು ಹೇಳಿದುದೇನು? ಅಹಂಬ್ರಹ್ಮಾಸ್ಮಿ ಎಂದರೆ ನಾನೇ ಬ್ರಹ್ಮ.'

ಹೊತ್ತು ಮೀರಿದ ಊಟ, ಅಲ್ಲದೆ ಸಿಹಿಯೂಟ, ಮಠದಲ್ಲಿ! ಶ್ರೀ ಅವಧಾನಿಗಳು ಮಾಮೂಲಿನಂತೆ ಕೈ ಸಡಿಲುಬಿಟ್ಟು ಹೊಡೆಹೊಡೆದರು. ತಾಂಬೂಲ ಸೇವನೆಯಾಗುತ್ತಿರುವಾಗಲೇ ಕುಳಿತಲ್ಲಿಯೇ ಆಕಳಿಸಿ, ತೂಕಡಿಸಿ, ಬೆರಳಲ್ಲಿದ್ದ ನಶ್ಯವನ್ನು ಮೂಗಿಗೇರಿಸಲು ಸಹ ಮರೆತು ಶಾಲಿನ ಮುಸುಗಿಕ್ಕಿ ಮಲಗೇಬಿಟ್ಟರು. ಕಲಿಯುಗದ ಕುಂಭಕರ್ಣರಾದರು!

ಸಾಯಂಕಾಲದ ಚಹ ರಾತ್ರಿಗೇ ಸಿದ್ಧವಾಯಿತು. ಅವಧಾನಿಗಳನ್ನು ಎಬ್ಬಿಸುವ ಅಸಾಧ್ಯವಾದ ಕೆಲಸವು ತಿಂಮನ ತಲೆಯ ಮೇಲೆ ಬಿದ್ದಿತು.

"ಬ್ರಹ್ಮಾ! ಬ್ರಹ್ಮಾ!! ಏ ಬ್ರಹ್ಮಾ!!!"

ತಿಂಮ ಕೂಗಿ ಕೂಗಿ ಬೇಸತ್ತು ಕಡೆಗೆ ಮೆಲ್ಲನೆ 'ಅಯ್ಯಾ' ಎಂದ.

ತಕ್ಷಣವೇ ಅವಧಾನಿಗಳು ಎದ್ದು ಕುಳಿತರು.

"ಅರ್ಧಗಂಟೆಯಿಂದ ಕೂಗಿದೆ ನಿಮ್ಮನ್ನು"

"ಯಾವಾಗೋ ತಿಂಮಾ?"

"ಬ್ರಹ್ಮಾ ಬ್ರಹ್ಮಾ ಎಂದು ಕೂಗಿದೆ."

"ಬ್ರಹ್ಮಾ! ಅದು ನನ್ನ ಹೆಸರೇನು?!"

"ಅಹಂ ಬ್ರಹ್ಮಾಸ್ಮಿ ಎಂದಿರಲ್ಲ ಸಭೆಯಲ್ಲಿ?"

"ಮುಂಡೇದೇ! ಅದು ಸಭೆಗಷ್ಟೇ ಹೇಳಲಿಕ್ಕೆ"

ಲೇಖಕರು :
ಶ್ರೀ. ಜಿ. ಜಿ. ಹೆಗಡೆ

# ಸೋತ ಅಳಿಯ

'ಜಾಮಾತೊ ದಶಮುಗ್ರಹ.' ಎಂಬುದು ಸಾಮಾನ್ಯವಾಗಿ ಕಂಡುಬಂದರೆ ಮನೋಹರನ ವಿಷಯದಲ್ಲಿ ಇದು ತಿರುವುಮುರುವಾಗಿ ಮಾವನೆ ಅವನಿಗೆ ದಶಮುಗ್ರಹನೆನಿಸಿದನು. ಈ ಸ್ವಾರಸ್ಯಕರವಾದ ಪ್ರಸಂಗವನ್ನೇ ಲೇಖಕರು ಈ ನಾಟಕದಲ್ಲಿ ಚಿತ್ರಿಸಿರುವರು . . . . . . .



" ನಿಮಗೆ ಸುಖ ಕೊಡೋದು ನನ್ನ ಹಣೇಲಿ ಬರೆದಿಲ್ಲ. ಆದ್ರೆ ನಿಮ್ಮ ಕಾಲ ಮುಟ್ಟಿ ಕಡೇ ನಮಸ್ಕಾರ ಮಾಡ್ತೇನಿ " ಎಂದು ಸುಮಾ ಅಳುತ್ತ ಹೇಳಿದಳು.

( ನಿವೃತ್ತ ಪೋಲೀಸ್ ಇನಸ್ಪೆಕ್ಟರ್ ರಂಗರಾಯರ ಮನೆ. ರಂಗರಾಯರು ತಮ್ಮ ಕೋಣೆಯಲ್ಲಿ ಆರಾಮು ಖುರ್ಚಿಯ ಮೇಲೆ ಕುಳಿತಿದ್ದಾರೆ–ಮಧ್ಯಾಹ್ನ ೨ ಗಂಟೆಯ ಸಮಯ. ರಂಗರಾಯರ ಮಗಳು ಸುಮತಿ ಒಂದು ಕೈಲಿ ಚಹದ ಕಪ್ಪು, ಇನ್ನೊಂದು ಕೈಲಿ ಒಂದು ಪತ್ರ ಹಿಡಿದುಕೊಂಡು ಬರುತ್ತಾಳೆ. )

ಸುಮತಿ— ಅಪ್ಪಾ, ಚಹ ತಗೋರಿ.

ರಂಗ— ತಾ. ಅದು ಯಾರ ಪತ್ರ? ಯಜಮಾನರದ್ದೇನು? ಏನಂತಾರ? ಎಂದ ಬರ್ತಾರಂತ?

ಸುಮತಿ— (ಪತ್ರ ಕೊಟ್ಟು) ಆರಾಮಿದ್ದಾರಂತೆ. ಇಂದೇ ಸಂಜೆ ಗಾಡೀಗೆ ಬರ್ತೇನಿ ಅಂತ . . .

ರಂಗ— ಹೀಗೇನು? ಭೇಷಾತ ಬಿಡು. ಉಡುಗರೆ ಸಾಮಾನು ಅವನ ಕಣ್ಣಿಗೆ ಹಾಕೇ ತಗೊಂಡರಾತು. ತಗೋ ನಿನ್ನ ಪತ್ರ. ನಿನ್ನ ಗಂಡನ ಪತ್ರ ಅಂದ್ರೆ ಪ್ರೇಮಪತ್ರ ಇರಬೇಕು. ' ಪ್ರಿಯೆ, ರಾಣಿ . . ." ನಾಟಕದೊಳಗಿನ ಮಾತೆಲ್ಲ ಬರದಿರಬೇಕು. ನಾ ಓದಿ ಮಾಡೂದೇನದ?

ಸುಮತಿ— ಅಲ್ಲ ಅಪ್ಪಾ! ಹಾಂಗೇನಿಲ್ಲ. ಸಾದಾಪತ್ರ. ನಿನಗ ತಿಳಿಸಬೇಕು ಅಂತ

ರಂಗ— ಸಾದಾ ಪತ್ರ ಅಂದ್ರೆ ಬರೇ ಕ್ಷೇಮಸಮಾಚಾರ ಬರದಾನೇನು? ಅದನ್ನಾದರೂ ನಾ ಓದಿ ಮಾಡೂದೇನದ? ನೀ ಹೇಳಿದರೆ ಸಾಕಲ್ಲ? ಮತ್ತೆ ನನಗ ಏನ ತಿಳಿಸಬೇಕಂತಾನ? ಏನಾದ್ರೂ ಲಿಸ್ಟ ಗಿಸ್ಟ ಕಳಿಸ್ಯಾನೇನು ಸಾಮಾನಿಂದು? ಇದ್ದರೆ ನೀನೆ ಹೇಳಿಬಿಡು. ನಾ ತಗೊಬೇಕು ಅಂತ ಮಾಡಿದ್ದು ಬಿಟ್ಟು ಅಂವ ಹೇಳಿದ್ದೇ ತಗೊಂಡರಾತು!

ಸುಮತಿ— ಹಾಂಗಲ್ಲಪ್ಪ !! ಅವರು . . .

ರಂಗ— ಹೇಳಲ್ಲಾ ಅದಕೇನು?

ಸುಮತಿ— ನೀನೇ ಓದಿಬಿಡಪ್ಪಾ ಪತ್ರ.

ರಂಗ— ಅಂದರೆ ಕೇಳಬಾರದ್ದ ಕೇಳ್ಯಾನೇನು ಮತ್ತೆ? ನೂಲ ಕೊಟ್ರ ಹಚಡಾ ನುಂಗೂ ಜಾತಿ ಅಳಿಯಂದರದ್ದು, ಆದ್ರೂ ಹೇಳು. ದೇವರ ದಯದಿಂದ–ಅಥವಾ ನನ್ನ ನೌಕರೀ ಪುಣ್ಯದಿಂದ ಅಂತನ್ನು ಬೇಕಾದ್ರ ಅಂವ ಕೇಳಿದ್ದು ಕೊಡಲಾರದ ಸ್ಥಿತಿ ಏನಿಲ್ಲ ನಂದು! ಮತ್ತೆ ನನಗಾದ್ರೂ ನೀ ಒಬ್ಬೇ ಮಗಳು. ನಂದೇನದೆ ಎಲ್ಲಾ ನಿಂದೇ ಅಂದ್ರೆ ನಿನ್ನ ಗಂಡಂದೇ. ಒಬ್ಬೇ ಮಗಳು, ಮನಸ ನೋಯಿಸಬಾರದು ಅಂತೇ ಅಲ್ಲೇನು? ಇವಂಗ ಕೊಟ್ಟು ನಿನ್ನ ಲಗ್ನ ಮಾಡಿದ್ದು. ಇಲ್ಲಾಂದ್ರೆ ಈ ಧ್ಯೇಯ ತತ್ತ್ವ ಅನ್ನೂವರನ್ನ ಕಂಡ್ರ ಆಗದಿದ್ದ ನಾನು ಇವನ್ನ ಅಳಿಯಾ ಅಂತ ಒಪ್ಪತಿದ್ದೆನೇನು? ಆದ್ರೆ, ನಿನಗ ಗೊತ್ತಿರದಿದ್ರೂ ನನಗೆ ಗೊತ್ತದ ಎಲ್ಲಾ! ಪುರಾಣ ಓದಲಿಕ್ಕೆ ಅಂತ ಮಾಡ್ಯಾರ ಸುಮಾ. ಬದನೇಕಾಯಿ ತಿನ್ಲಿಕ್ಕೆ ಅಂತ ಮಾಡ್ಯಾರ. ( ನಕ್ಕು ) ಅಲ್ಲಾ, ವರದಕ್ಷಿಣೆ ತಗೊಳ್ಳೂದು ಅಂದ್ರೆ ತನ್ನ ಮಾರಿಕೊಂಡ ಹಾಂಗೆ ಅಂತ ಇವನೇ ನಿನ್ನ ಗಂಡ ಮನೋಹರನೇ ಎಷ್ಟು ಹಾರ್ರ್ಯಾಡಲಿಲ್ಲ? ತನ್ನ ಧ್ಯೇಯಕ್ಕೆ, ತನ್ನ ತತ್ತ್ವಕ್ಕೆ ಅದು ವಿರುದ್ಧ, ತಾ ತಗೊಳ್ಳೂದಿಲ್ಲ ಅಂತ ಎಷ್ಟ ಹಾರ್ರ್ಯಾಡಲಿಲ್ಲ! ಆದ್ರೆ ಕಡೇಗೇನಾತು? ಅಷ್ಟ ಮನಸ್ಸಿದ್ರ ನನಗೆ ಕೊಡೂ ರೊಕ್ಕದ ದಾಗಿನೆ ಮಾಡ್ಸಿ ನಿಮ್ಮ ಮಗಳೀಗೆ

ಹಾಕ್ರಿ ಅಂತಿದ್ದ. "ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ" ಹೆಂಡತೀ ಕೈಲಿದ್ದರೇನು, ತನ್ನ ಕೈಲಿದ್ದರೇನು ಅಂತ ಗೊತ್ತಿಲ್ಲೇನು ಫರ್ಸ್ಟ ಕ್ಲಾಸ್ ಎಂ. ಎ. ಪಾಸಾದ ಇಂವಂಗ.

**ಸುಮಾ—** ಅವರು ಒಪ್ಪಿದ್ದು . , . .

**ರಂಗ—** ನೀ ಏನಾದ್ರೂ ಹೇಳು? ಅವಂ ಏನಾದ್ರೂ ಹೇಳಲಿ. ಎಲ್ಲಾದರ ಅರ್ಥ ಒಂದೇ. ರೊಕ್ಕ ಅಂದ್ರೆ ಯಾರಿಗೆ ಬ್ಯಾಡಾಗಿರ್ತದ! ಯಾವ ತತ್ತ್ವನೂ. ಯಾವ ಧ್ಯೇಯನೂ ರೊಕ್ಕಾ ತಂದ ಕೊಡೂದಿಲ್ಲ ಅನ್ನೂದು ಏಳತೊಳಗೆ ಹುಟ್ಟಿದ ಕೂಸಿಗೂ ಗೊತ್ತಿರ್ತದ. ಇರಲಿ ಬಿಡು. ಹೀಂಗಾತು ಅಂತ ನನಗೇನೂ ಕೆಡಕೆನಿಸಲಿಲ್ಲ. ತತ್ತ್ವ, ಧ್ಯೇಯ ಅಂತ ನಿನ್ನ ಮತ್ತೆ, ನಿನ್ನ ಸಂಗಡ ಬರೂ ರೊಕ್ಕಾ ಕಳಕೊಳ್ಳುವಷ್ಟು ಮೂರ್ಖ ಮನೋಹರ ಅಲ್ಲಾ ಅಂತ ನನಗೆ ಗೊತ್ತಾತು. ಸಾಕು ಅಷ್ಟೇ? ಹೇಳು. ಏನ ಬರ ದಾನ? ಏನ ಬೇಕಂತೆ ಅಂವಗ?

**ಸುಮಾ—** ಅವರೀಗೆ . . . .

**ರಂಗ—** ಯಾಕ ನಾಚಕಿ! ಹೇಳಲಾ ಅದಕೇನು? ನನ್ನ ಅಳಿಯಾ ರೊಕ್ಕದ ಮ್ಯಾಲೆ ಪ್ರೀತಿ ತೋರಿಸಿದಷ್ಟೂ ನನಗೆ ಸಂತೋಷ. ಯಾವಯಾವದೊ ಪುಸ್ತಕಾ ಓದಿ, ಯಾರ್‍ಯಾರದೊ ಲೆಕ್ಚರ್ ಕೇಳಿ ತಲಿ ಕೆಡಿಸಿಕೊಂಡು ಮಂದೀ ಉದ್ಧಾರ ಮಾಡ್ತೇನಿ ಅಂತ ದೊಡ್ಡ ದೊಡ್ಡ ಮಾತ ಆಡಿಕೋತ ಅಡ್ಡಾಡಿ ತಮ್ಮ ಹೆಂಡ್ರೂಮಕ್ಕಳೀಗೆ ದೇವ್ರೇ ಗತಿ ಅಂತ ಮಾಡೂ ಹುಚ್ಚರೂ ಈ ಜಗತ್ತಿನಾಗ ಇದ್ದಾರೆ. ಇವನ ಲಕ್ಷಣಾ ನೋಡಿ, ವರದಕ್ಷಿಣೆ ಒಲ್ಲೆ ಅಂತ ಹಾರ್‍ಯಾಡಿದ್ದು ನೋಡಿ, ಫರ್ಸ್ಟಕ್ಲಾಸ ಸರಕಾರಿ ನೌಕರಿ ಸಿಗವ್ಹಾಂಗ ಇದ್ದದ್ದನ್ನೂ ಬಿಟ್ಟು ದೇಶೋದ್ಧಾರ, ಜನೋದ್ಧಾರ, ಪವಿತ್ರ ಕಾರ್ಯ ಅಂತ ಅಂದು ಸಾಲೀ ಮಾಸ್ತರನ ನೌಕರೀ ಇಂವ ಹಿಡದದ್ದು ನೋಡಿ ಯಾಕಾರ ಇಂವಗ ಮಗಳ್ನ ಕೊಟ್ಟೆನೊ ಅಂತ ಆಗಿಹೋಗಿತ್ತು ನನಗೆ? ಖರೇ ಹೇಳ್ಬೇಕು ಅಂದ್ರೆ ನನ್ನ ಕಪಾಳಕ್ಕೇ ಎರಡು ಹೊಡಕೊಳ್ಳಬೇಕು ಅಂತ ಅನಿಸಿತ್ತು. ಆದ್ರೆ ಮಾಡೂದೇನದ ಅಂತ ಸುಮ್ಮನಾದೆ. ನುಂಗಿದರೆ ಗಂಟಲ ಸುಡತದ, ಉಗುಳಿದರೆ ಹಾಳಾಗಿಹೋಗ್ತದ ಅನ್ನುವಂಥ ತುತ್ತ ಬಾಯೊಳಗೆ ಇಟ್ಟು-ಕೊಂಡಿದ್ದೆ. ಏನೇ: ಆಗ್ಲಿ, ಮಂದೀ ಉದ್ಧಾರ ಮಾಡ್ತೇನಿ ಅಂದಕೋತ ಲಂಡ ಪಂಜಾ ಉಟ್ಟು ಊರೂರು ಅಡ್ಡಾಡದೆ ಎಂಥಾದ್ದರೇ—ಮಾಸ್ತರಿ-ಕೀದೇ ಆಗ್ಲಿ ನೌಕರಿ ಹಿಡಿದನಲ್ಲ, ಪಗಾರ ಸಾಲದಿದ್ರೂ, ನಾ ಮಾಡಿಟ್ಟ ಆಸ್ತಿ ಅದ, ಇಂವನ ಸಂಸಾರ ಹೊಟ್ಟೆತುಂಬಿಕೊಂಡೀತು ಅಂತ ಸಮಾಧಾನ ಹಚ್ಚಿಕೊಂಡು ಸುಮ್ಮನಾದೆ.

**ಸುಮಾ—** ಅಪ್ಪಾ, ಅವರ ಪಗಾರದೊಳಗೆ—

**ರಂಗ—** ಏನಂದಿ? ನೀ ಗಂಡನ ಪಕ್ಷ ಹಿಡದು ಮಾತಾಡೂದೇನೂ ತಪ್ಪಲ್ಲ ಅನ್ನೂ. ಮಗಳಲ್ದೆ ಬ್ಯಾರೇದವ್ರು ನನ್ನ ಮಾತೀಗೆ ಹೀಂಗ ಅಡ್ಡ ಅಂದಿದ್ರೆ ಗುಂಡಹಾಕ್ತಿದ್ದೆ ಗುಂಡು. ಅವನ ಪಗಾರ ಏನು ಈ ದಿವಸದಾಗ ಸಾಲ-ತದ ಮಣ್ಣು? ಅಂವಗ ಈಗ ಎಷ್ಟು ಸಿಗತದೆ. ೭೦–೫–೧೨೫ ಬಾರ್ ೧೦-೨೦೦ ರ ಗ್ರೇಡ್ ಹೌದಲ್ಲೊ. ನನಗೆ ೪೦೦ ಪಗಾರ ಇದ್ದಾಗ ಸುದ್ಧಾ ಬರೋ ಪಗಾರು ಖರ್ಚೀಗೆ ಸಾಲತಿರಲಿಲ್ಲ. ಏನೊ ನಮ್ಮ ನೌಕರಿ ಅಂತ ಅಂಥಾ ಜಬರದಸ್ತ ಖರ್ಚ ನೀಗಿ ಒಂದರ್ಧ ಲಕ್ಷದಷ್ಟು ಆಸ್ತಿ ಆತು.

( ಒಳಗಿಂದ "ಸುಮಾ, ಸುಮಾ" ಎಂದು ಪಾರ್ವತಿಬಾಯಿ ಕೂಗುವರು. )

**ಸುಮಾ—** ಅಪ್ಪಾ, ಅವ್ವ ಕರೀತಾಳ. ನೀ ಓದು ಪತ್ರಾನ್ನ. ನಾ ಹೋಗ್ತೇನಿ.

**ರಂಗ—** ಏನ ಅವಸರಂತ ಅವಳೀಗ? ಇಷ್ಟ ವರ್ಷ ನನ್ನ ಸಂಗಡ ಇದ್ರೂ ಅವಳಿಗೇನು ಬುದ್ಧಿ ಬರಲಿಲ್ಲ. ಒಬ್ಬರು ಕೆಲಸ ಮಾಡತಿರುವಾಗ, ಮಾತಾಡ ತಿರುವಾಗ ನಡುವೆ ಬರಬಾರ್‍ದು ಅಂತ ನನ್ನ ಸರ್ವಿಸ ಸುರು ಆದಾಗಿಂದೂ ಹೇಳಕೋತ ಬಂದೇನಿ. ನನಗ ಪೆನ್ಶನ್ ಆದ್ರೂ ಇವಳ ಚಟಾ ಏನು ತಪ್ಪಿಲ್ಲ. (ಸುಮಾ, ಸುಮಾ ಅಂತ ಮತ್ತೆ ಕೂಗು ಕೇಳಿಸುವದು.) ಹೋಗು ನೀ ಇನ್ನು ದೀಪಾವಳಿ ಫಳಾರದ ತಯಾರಿ ನಡದಿರಬೇಕು ಅಲ್ಲ! ನನಗೂ ಒಂದಿಷ್ಟು ತಾಜಾ ಕಳಿಸಿಕೊಡು. ಸಂಗಡವೇ ಇನ್ನೊಂದು ಕಪ್ಪ ಚಹಾನೂ ಬೇಕು. ಪೋಲೀಸ ಇನಸ್ಪೆಕ್ಟರಕೀಯಿಂದ ಪೆನ್ಶನ್ ಆದಮ್ಯಾಲೆ ಬ್ಯಾರೆ ಕೆಲಸ ಅರೆ ಏನದ ನನಗ? (ಸುಮತಿ ಹೋಗುವಳು. ರಂಗರಾಯರು ಪತ್ರವನ್ನ ಓದಿ

ಒಮ್ಮೆಲೆ ಅದನ್ನು ಮೇಜಿನ ಮೇಲಿಸದು ಸಿಟ್ಟಿನ ಧ್ವನಿಯಲ್ಲಿ) ನಾನ್ಸೆನ್ಸ್ ಹೋಪಲೆಸ್, ಸುಮಾ, ಏ ಸುಮಾ ಬಾ ಇಲ್ಲಿ. ಹಾಗೇ ಅವಳನ್ನೂ ಕರಕೊಂಡ ಬಾ ಇಲ್ಲೆ. ನಾನ್ಸೆನ್ಸ್ ಏನು ಹುಡುಗಾಟಿಕಿ ಆಗಿ ಹೋತೇನು ಇವನೀಗೆ ? ನಾ ರಿಟಾಯರ್ಡ ಆದ್ರೂ ಪೋಲೀಸ ಇನಸ್ಪೆಕ್ಟರ್ ಇದ್ದೇನಿ. ಮರತ ಹಾಂಗ ಕಾಣಸ್ತದ ಮಗ. ಸುಮೀ ಕರದದ್ದು ಕೇಳಿಸಲಿಲ್ಲೇನು ? (ಸುಮತಿ ಬರುವಳು.)

**ಸುಮ—** ಏನಪ್ಪಾ ?

**ರಂಗ—** ನಾ ಏನ ಹೇಳಿದ್ದೆ? ನಾ ರಿಟಾಯರ್ಡ ಆದೆ ಅಂತ ನಿಮಗೂ! ಹಗರಾಗಿ ಹೋದ್ನೇನು ? ಅವಳನ್ನೂ ಕರಕೊಂಡು ಬಾ ಅಂತ

**ಸುಮ—** ಅವ್ವ ಬುಂದೀಕಾಳ ಕರೀಲಿಕ್ಕೆ ಹತ್ಯಾಳ. ಅವಳು ಬಂದರೆ ಹೊತ್ತಿ

**ರಂಗ—** ಹೊತ್ತಿದರೆ ಹೊತ್ತಲಿ. ಇಲ್ಲಿ ಮನೀ ಅಬ್ರುನೇ ಹೊತ್ತಿ ಹುರಪಳಸಲಿಕ್ಕೆ ಹತ್ಯದ. ಇವಳ ಬುಂದೀಕಾಳ ಹೊತ್ತತಾವಂತ. ಕರಿ ಅವಳನ್ನು ಇದ್ದಕ್ಕಿದ್ದ ಹಾಗೆ ಕರಿ. ಆರ್ಡರ್ ಈಜ್ ಆರ್ಡರ್. ಕರದ ಕೂಡ್ಲೆ ಬರ್ಲಿಕ್ಕೆ ಏನ ಧಾಡಿ ಇವಳಿಗೆ ? ನಾನ್ಸೆನ್ಸ್, ಹೋಪಲೆಸ್ ಹಾಳಾದ್ರೆ ನನ್ನ ರೊಕ್ಕ ಹಾಳಾಗ್ತದ. ಗಳಸಿದಂವ ನಾ. ಇವಳೀಗೆ ಯಾಕೆ ಅದರ ವ್ಯಥೆ ? ಶಿಸ್ತು ಅನ್ನೂದು ನಿಮ್ಮ ಜನ್ಮಕ್ಕೆ ಬರ್ಲಿಲ್ಲ.

**ಪಾರ್ವತಿ—** (ಮುಸುರೆ ಕೈಯಿಂದಲೇ ಬಂದು) ಏನ ಅಷ್ಟ ಅವಸರ . . .

**ರಂಗ—** ಶಟಅಪ್. ಶಟಅಪ್ ಅಂದೆ. ಕರದ ಒಂದು ತಾಸಾದ ಮೇಲೆ ಬರೂದು, ಮತ್ತೆ ನನಗೇ ಅವಸರ ಅಂತ ಕೇಳೂದು !

**ಪಾರ್ವತಿ—** ನೀವು ಹೀಂಗ ಸಿಟ್ಟು ಮಾಡೂದಾದ್ರ ನಾ ಒಳಗೇ ಹೋಗಿ ಬಿಡ್ತೇನಿ. ಅಲ್ಲಿ ಒಲೀ ಮ್ಯಾಲೆ—

**ರಂಗ—** ಹಾಳಾಗಿ ಹೋಗ್ಲಿ ಒಲೀಮ್ಯಾಲಿಂದು. ಹೋಪಲೆಸ್, ಯೂಸಲೆಸ್. ನಮ್ಮಪ್ಪ ನನ್ನ ಕೇಳಿ ಲಗ್ನ ಮಾಡಿದ್ರೆ—ಹೋಗ್ಲಿ ಆ ಮಾತು. ಇಷ್ಟ ದಿವಸಾನೇ ನಿನ್ನ ಜೋಡಿ ಕಳದೇನಂತ. ಇನ್ನು ನಮ್ಮ ಅವತಾರ ಮುಗಿಯುವ ಹೊತ್ತಿನಲ್ಲಿ ಯಾಕ ತಲೀ ಕೆಡಿಸಿಕೊಳ್ಳೂದು ! ನಿನ್ನ ಗೂಡ ವಿಚಾರಾ ಮಾಡೂದು ಅಂದ್ರೆ ನಮಗೆ ಹುಚ್ಚು ಹಿಡಿಸಿಕೊಂಡ ಹಾಂಗ . . . ನಾ . .

**ಸುಮತಿ—** ಅಪ್ಪಾ, ಇದೀಗ ನಾ ಚಾ ತಂದ ಕೊಟ್ಟಾಗ ಇಲ್ಲದ ಸಿಟ್ಟು ಈಗ ಒಮ್ಮಿಂದೊಮ್ಮೆ ಯಾಕ ಬಂತು ? ಸುಮ್ಮನೇ ಅವ್ವನ ಮ್ಯಾಲೆ . . .

**ರಂಗ—** ಯೂ ಆಲ್ಸೊ ಶಟಅಪ್ ಸುಮೀ. ಆಕೀ ಧಡ್ಡಿ ಅಂತ ಇಲ್ಲದ ವಾದ ಹಾಕ್ತಾಳ, ಬೈಸಿಕೋತಾಳ. ನೀ ಶಾಣ್ಯಾಕಿ ಅಂತ ವಾದಾ ಹಾಕಿ ಬೈಸಿಕೊಬ್ಯಾಡ.

**ಪಾರ್ವತಿ—** ಆದದ್ದಾರೇ ಏನೀಗ ಅಂಥಾದ್ದು ! ದೀಪಾವಳಿ ಹಬ್ಬ ಹಾಂಗ ಮಾಡ್ಬೇಕು ಹೀಂಗ ಮಾಡ್ಬೇಕು ಅಂತ ನಿನ್ನೆ ಇಡೀ ದಿನಾ ಹೇಳೇ ಹೇಳಿದ್ರಿ ನಿಮ್ಮ ಮಾತಿನಂತೆ ನಾವು ತಯಾರಿ ಮಾಡ್ಲಿಕ್ಕೆ ಹತ್ತಿದ್ರೆ . . .

**ರಂಗ—** ಅದನ್ನೆ ಹೇಳ್ಲಿಕ್ಕೆ ಕರದೇನೇ ಪುಣ್ಯಾತ್ಮಗಿತ್ತಿ. ನಿನ್ನ ಮುಂದೆ ತಲಿ ಜಜ್ಜಿಕೊಂಡರೆ ಸೈ. ಕೇಳು ನಿನ್ನ ಮಗಳಿಗೆ — ಅವಳ ಗಂಡ ಏನ ಬರದಾನಂತ ?

**ಸುಮ—** ಅವ್ರು ಬರದದ್ದಕ್ಕೆ . . .

**ರಂಗ—** ( ಗಟ್ಟಿಯಾಗಿ ) ಸುಮ್ಮನಿರ್ರಿ ಇಬ್ರೂ. ಆರ್ಡರ್ ಈಜ್ ಆರ್ಡರ್. ನೋ ಅಂದ್ರ ನೋ. ನಿಮ್ಮ ಜೋಡಿ ವಿಚಾರಾ ಮಾಡ್ಲಿಕ್ಕೆ ನಿಮ್ಮನ್ನ ಕರದಿಲ್ಲ ನಾ. ನಾ ಹೇಳೂದನ್ನ ಕೇಳ್ರಿ, ನಾ ಹೇಳಿದ್ಹಾಂಗ ಮಾಡ್ರಿ. ಅಂದ್ರೆ ಮಾತ್ರ ಬದುಕುಳಿತೀರಿ ತಿಳೀತೇನು ?

**ಪಾರ್ವತಿ—** ಹೂಂ ಅಂದಬಿಡವ್ವಾ ಸುಮಿ. ಅವರ ಸ್ವಭಾವ ಗೊತ್ತಿಲ್ಲೇನು ನಿಮಗೆ ? ಎಷ್ಟಂದ್ರೂ ಪೊಲೀಸ ಇನಸ್ಪೆಕ್ಟ್ರ ಅವ್ರು. ಮಂದೀನ್ನ ಜಬರಿಸಿಗೋತ, ಬೆದರಿಸಿಗೋತ, ಬಡಕೋತ ಇದ್ದವ್ರು.

**ರಂಗ—** ಯಸ್. ದೆಟೀಜ ರ್‍ಯಾಟ್. ನಾ ರಿಟಾಯರ ಆದೆ ಅಂತ ನನ್ನ ದರ್ಪ ಹೋಗ್ಯದ, ಸ್ವಭಾವ ಬದಲಾಗ್ಯದ. ಶಿಸ್ತು ಮುರದದ ಅಂತ ತಿಳಕೋಬ್ಯಾಡ್ರಿ. ಕೇಳ್ರಿ ಈಗ. ಇಂವಾ, ಈ ಸುಮೀ ಗಂಡ ಬರದಾನ ( ಪತ್ರ ಓದುತ್ತ ) " ಪ್ರಿಯ ಸುಮಾ, ನಿನ್ನ ಮತ್ತು ನಿನ್ನ ತಂದೆಯ ಆಗ್ರಹದ ಆಮಂತ್ರಣ ಮುಟ್ಟಿತು. ಖಂಡಿತ ದೀಪಾವಳಿಗೆ ಬರುವೆ. ಆದರೆ ಅಳಿಯನಿಗೆ ಉಡುಗರೆ ಗಿಡುಗರೆ ಎಂದು ಏನಾದರೂ ಖಂಡಿತ ಕೊಡಬಾರದು. ಏನೋ ನಿನ್ನ ಮುಖಾನೋಡಿ, ಮಾವನವರ ಒತ್ತಾಯಕ್ಕೆ ಬಿದ್ದು ಲಗ್ನದಲ್ಲಿ ಪ್ರತ್ಯಕ್ಷ ವರದಕ್ಷಿಣೆ ರೂಪದಲ್ಲಿ ಅಲ್ಲದಿದ್ದರೂ ಹಣ ತೆಗೆದುಕೊಂಡಂತಾಗಿದೆ. ನನ್ನ ಧ್ಯೇಯಕ್ಕೆ ಈಗಾಗಿರುವ ಕುಂದೇ ಸಾಕು. ನನ್ನ ಮನಃಶಾಂತಿಯನ್ನು ಹಾಳು ಮಾಡುವ ಅಂಥದೇ ಕೃತಿಯನ್ನು ಮತ್ತೆ ಮಾಡಲಾರೆ. ನಾನು ಬಂದಕೂಡಲೆ ನನ್ನ ಮಾತಿಗೆ ಮಾವನವರ ಒಪ್ಪಿಗೆಯನ್ನು ನೀನು ತಿಳಿಸಬೇಕು. ಅವರು ಒಪ್ಪುವದಿಲ್ಲವಾದರೆ ನಾನು ಹಾಗೆಯೆ ತಿರುಗಿ ಬರುವೆ. ಮುಂದೆ ನನ್ನ ಧ್ಯೇಯರಕ್ಷಣೆಗಾಗಿ ನಿನ್ನ ಸಂಬಂಧ ಕಡಿದುಕೊಳ್ಳುವಂಥ ಪ್ರಸಂಗ ಬಂದರೂ ನಾನೇನೂ ಹಿಂಜರಿಯುವದಿಲ್ಲ." ಕೇಳಿದ್ರೇನು ? ಶತಮೂರ್ಖನ್ನ ತಂದು ! ದೂರದಿಂದ ಹೀಂಗೆ ಪತ್ರ ಬರಿಯು ಬದ್ಲು ನನ್ನ ಎದುರಿಗೆ ನಿಂತು ಇದೇ ಮಾತಾಡಿದ್ರೆ ಗುಂಡು ಹಾಕ್ತಿದ್ದೆ, ಗುಂಡು. ಉಡುಗೆ ತಗೊಳ್ಳೂದಿಲ್ಲಂತೇನು ? ನನ್ನ ಮಗಳ ಸಂಬಂಧ ಹರದ್ರೂ ಹರೀಲಿ ಅಂತಾನೇನು ? ಲಾಕಪ್ಪಿನೊಳಗೆ ಇಡಸಿ ಬಿಟ್ಟೇನು ? ನಾ ರಿಟಾಯರ್ ಆದ್ರೂ ಡಿಪಾರ್ಟಮೆಂಟಿನೊಳಗೆ ನನ್ನ ವರ್ಚಸ್ಸೇನು ಕಡಿಮೆಯಾಗಿಲ್ಲ ತಿಳೀತೇನು ? ಸಬ್ ಇನಸ್ಪೆಕ್ಟರಗೆ ಒಂದ ಮಾತು ಹೇಳಿದ್ರ ಸಾಕು, ಗಾಡಿ ಇಳಿಯೂತ್ಲೆ ಇವನ್ನ ಹಿಡಕೊಂಡು ಹೋದಾನು. ಮಾವನ ಕಡಿಂದ ಸಿಗೂ ಬಂಗಾರದ ರಿಸ್ಟ್‍ವಾಚಿನ ಬದಲು ಈ ಅಳಿಯ ಬಹಾದ್ದೂರನ ಕೈಗೆ ಕಬ್ಬಿಣದ ಬಳಿ ಬಿದ್ದಾವು. ಏನಂತ ತಿಳಕೊಂಡಾನ ?

**ಪಾರ್ವತಿ—** ಅಲ್ಲಾ, ಅಂವಗ ಬ್ಯಾಡಾದ್ರೆ

**ರಂಗ—** ನಡುವೆ ಬಾಯಿ ಹಾಕಬ್ಯಾಡಾ ಅಂತ ಹೇಳಿದ್ದಿಲ್ಲ ನಿನಗ? ಬ್ಯಾಡಾದ್ರೆ ಅಂತ ನನಗೆ ಹೇಳ್ತೀಯೇನು ? ಯಾಕ ಬ್ಯಾಡಾಗ್ತದ ? ಸನ್ಯಾಸಿಯೇನು ಇಂವಾ ! ತನಗೆ ಮರ್‍ಯಾದಿ ಇಲ್ಲ, ದೊಡ್ಡಿಸ್ತನ ಇಲ್ಲ ಅಂತ ನನಗೂ ಇಲ್ಲಂತ ತಿಳದಾನೇನು ಇಂವಾ ? ನಾ ಅವನ ಹಾಂಗ ಸೊಟ್ಟ ಮಾಸ್ತರ ಅಲ್ಲ ! ಮೊದಲನೇ ದೀಪಾವಳೀಗೆ ಬಂದ ಅಳಿಯಗ ಉಡುಗರೆ ಸುದ್ದಾ ಕೊಡ್ಲಿಲ್ಲ ಅಂತ ನಾಳೆ ಮಂದಿ ನನ್ನ ಮೋರೆ ಮ್ಯಾಲೆ ಉಗಳಿಯಾರು ? ಬ್ಯಾಡಾಂತ

ನಲ್ಲ. ಅವನ ಡ್ರೆಸ್ ನೋಡಿ ಇಂವ ನನ್ನ ಅಳಿಯ ಅಂತ ಹೇಳಿಕೊಳ್ಳಿಕ್ಕೆ ನಾಚಿಕೆಯಾಗ್ತದ. ಒಂದು ಖಾದೀ ಪಾಯಜಾಮಾ ಒಂದು ನೆಹರೂ ಶರ್ಟು! ಥುತ್. ಕೈಗೆ ಒಂದ ಗಡಿಯರಾನ? ಕಿಸೇಗೆ ಒಂದ ಫೌಂಟನ್ ಪೆನ್? ಒಂದು ಸೂಟ? ನಮ್ಮ ಅಳಿಯ, ನಾಕ ಮಂದಿಯೊಳಗೆ ಎದ್ದ ಕಾಣಲಿ ಅಂತ ಇವನ ಹತ್ತರ ಇಲ್ಲದ್ದು ನಾವಾಗಿ ಕೊಡ್ತೇನಿ ಅಂದ್ರೆ— ಇಂವಗ ಬ್ಯಾಡಂತ, ಏ., ಅಂವ ಬಂದ ಕೂಡ್ಲೆ ನೀ ಹೇಳು. ಸುಮೀ ನೀನೂ ಹೇಳು. ಇವೆಲ್ಲ ನನ್ನ ಮುಂದೆ ನಡಿಯೂದಿಲ್ಲಾಂತ.

ಸುಮತಿ— ಮತ್ತೆ ಅವ್ರು ಸಿಟ್ಟಿಗೆದ್ದು ಹೋಗಿಬಿಟ್ರೆ.

ರಂಗ— ಹೋಗ್ಲಿ. ನೀ ಏನು ಉಪವಾಸ ಬೀಳೂದಿಲ್ಲ ತಿಳೀತೇನು? ನೀ ಮುಂದ ಕಲಿ. ಡಾಕ್ಟರ ಆಗು, ಪ್ರೊಫೆಸರ ಆಗು. ಬ್ಯಾಡಾ ಎಜ್ಯುಕ್ಯಾಶನಲ್ ಇನಸ್ಪೆಕ್ಟರ ಆಗಿ ಅವನ ಖುರ್ಚಿ ಮ್ಯಾಲೀ ಕುಳಿತು ಅವನ ಫಜೀತಿಮಾಡು.

ಸುಮತಿ—ಆದರ . . . .

ರಂಗ— ಅದ್ರಿಲ್ಲ ಗೀದ್ರಿಲ್ಲ. ಅಂವ ೫ರ ಗಾಡೀಗೆ ಬರ್ತಾನಲ್ಲ! ಅಂವ ಬಂದಾಗ ನಾ ಇಲ್ಲಿದ್ರೆ ನನಗೆ ಸಿಟ್ಟು ತಡಕೋಳ್ಳಿಕ್ಕೆ ಆಗ್ಲಿಕ್ಕಿಲ್ಲ. ನಾ ಕ್ಲಬ್ಬೀಗೆ ಹೋಗಿ ಬಿಡ್ತೇನ. ಸಂಜ ಏಳಕ್ಕೆ ತಿರುಗಿ ಬರ್ತೇನೆ. ನನ್ನ ಮಾತೀಗೆ ಅವನ ಒಪ್ಪಿಗೆ ಇತ್ತು ಅಂದ್ರ. ನೀ ಅವನ ಕಿವಿ ಹಿಂಡಿ ಒಪ್ಪಿಕೊಳ್ಳವ್ಹಾಂಗ ಮಾಡು. ಒಪ್ಪಿಗೆ ಇತ್ತೂ ಅಂದ್ರ ಅಂವ ಇಲ್ಲಿರ್ಲಿ. ಇಲ್ಲಾಂದ್ರ ನಾ ಬರೂದರೊಳಗೆ ಹೋಗಿ ಬಿಡ್ಲಿಕ್ಕೆ ಹೇಳು. ಇದು ನನ್ನ ಆರ್ಡರೂ ಅನ್ನು. ಎಲ್ಲಾ ಮಾವಂದಿರ ಹಾಂಗೆ ನಾ ಅಲ್ಲ, ಅಳಿಯನ ಮರ್ಜಿ ಕಾಯಂವ ಅಲ್ಲಾ ಅಂತ ಅಂವಗ ಸ್ಪಷ್ಟ ಹೇಳಿಬಿಡು, ತಿಳೀತೇನು?

ಪಾರ್ವತಿ— ನೀವು ಹಿಂಗ ಹಟ ಹಿಡಿದ್ರೆ ನಾಳೆ . . . .

ರಂಗ— ಶಟಅಪ್, ದೊಡ್ಡ ತಿಳಿದವ್ರ ಹಾಂಗ ಮಾತಾಡಬ್ಯಾಡ. ಅಂವ ಸಿಟ್ಟಿಗೆದ್ರ ಅವನ್ನ ಮೂರು ಮಿನಿಟಿನೊಳಗ ಮೆತ್ತಗೆ ಮಾಡೂ ಥಾಕತ್ ನನ್ನ ಹತ್ತರ ಅದ. ಪೋಲೀಸಖಾತೇದಾಗ ಫುಕ್ಕ ೨೫ ವರ್ಷ ಸರ್ವಿಸ್ ಮಾಡ್ಡಿಲ್ಲ ನಾ. ಅವನ ವಿರುದ್ಧ ನಾಳೆ ಬೆಳಗಾಗುದರೊಳಗಾಗಿ ಹತ್ತ ಸಾಕ್ಷಿ ತಯಾರ್ಮಾಡಿ ಅವನ ಮ್ಯಾಲೆ ಕೇಸ ಹಾಕಸೇನು? ಇದೆಲ್ಲ ಅಂವಗ ಹೇಳ್ರಿ. ಹುಚ್ಚನ ಹಾಂಗ ಮಾಡಬ್ಯಾಡ ಅನ್ರಿ. ಹಂ ತಿಳೀತೇನು? ಎಂಥೆಂಥವ್ರನ್ನೇ ಹಣ್ಣ ಮಾಡಿದ ನನಗೆ ಈ ಹುಡುಗಂದು ಏನು ಮಹಾ! ಹೋಗ್ರಿನ್ನು ನೀವು ನಿಮ್ಮ ಕೆಲಸಕ್ಕೆ. . . .

ಸುಮಿ— ಅಪ್ಪಾ, ಆದ್ರೂ.

ರಂಗ— ಹೋಗ್ರಿ ನಿಮ್ಮ ಕೆಲಸಕ್ಕೆ. ಆರ್ಡರ್ ಅಂದಮ್ಯಾಲೆ ಆರ್ಡರ್. ನಾ ಕಬ್ಬೀಗೆ ಹೋಗಿ ಬರೂದರೊಳಗೆ ಎಲ್ಲಾ ಮುಗಸಿಬಿಡ್ರಿ ತಿಳೀತೇನು? ಹುಂ.



( ೨ )

(ರಂಗರಾಯರ ಮನೆ. ಬಾಗಿಲಲ್ಲಿ ಸುಮತಿ ನಿಂತು ರಸ್ತೆಯ ಕಡೆಗೇ ನೋಡುತ್ತಿದ್ದಾಳೆ. ದೂರದಲ್ಲಿ ಒಂದು ಟಾಂಗಾ ಬರುವದು. ಕಾಣಿಸಿದೊಡನೆ)

ಸುಮ— ಅವ್ವಾ, ಅವರು ಬಂದ್ಹಾಂಗ ಕಾಣಸ್ತದ. ಹೌದು. ಅವರೇ ...

ಪಾರ್ವತಿ— (ಒಳಗಿಂದ) ಬಂದನ. ಬಂದಕೂಡ್ಲೆ ಯಾವ ಮಾತೂ ಎತ್ತಬ್ಯಾಡ. ಅತ್ಲಾಗ ಅವರು ಸಿಟ್ಟಿಗೆದ್ದಾರ. ಇತ್ಲಾಗ ಇಂವ ಸಿಟ್ಟಿಗೆದ್ದರೆ ತೀರೇ ಹೋತು. ಹಂಗಸರ ಹಣೇಬರಾನೇ ಹೀಗೆ. ಯಾವಾಗಲೂ ಅತ್ಲಾಗ ಬಿದ್ರೆ ಬಾಂವಿ, ಇತ್ಲಾಗ ಬಿದ್ರೆ ಕೆರಿ (ಟಾಂಗಾ ಬಂದು ನಿಂತದ್ದು ಕೇಳಿ ಹೊರಗೆ ಬಂದು) ಬಂದೆಯಾ. ಬಾರಪಾ ಮನೋಹರಾ. ಸುಮೀ, ಸುಮೀ, ಎಲಾ ಈಗ ಇಲ್ಲಿ ನಿಂತಿದ್ದವಳು ಯಾವಾಗ ಒಳಗೆ ಓಡಿದ್ಲು? ಸುಮೀ, ಭಡಕ್ಕನೆ ಸ್ಟೋವ್ಹ್ ಹೊತ್ತಿಸಿ ಚಾಕ್ಕ ...

ಮನೋ— ನಾ ಚಾ ಕುಡಿಯೂದಿಲ್ಲ ಅನ್ನೂದನ್ನ ಮರತೀರೇನು ಅತ್ತೆ?

ಪಾರ್ವತಿ— ಹೌದಲ್ಲ. ಸುಮೀ, ಒಂದು ಕಪ್ಪು ಹಾಲೇ ಬಿಸಿಮಾಡಿ ...

ಮನೋ— ಬ್ಯಾಡ ಈಗ. ಊಟದ ನಡುವೆ ನಾ ಏನೂ ತಗೊಳ್ಳು ರೂಢಿ ಇಲ್ಲ. ಅಷ್ಟಿದ್ರೆ ಒಂದಿಷ್ಟು ನೀರು ಬೆಲ್ಲ.

ಪಾರ್ವತಿ— ಥೆ! ಥೆ! ಮೊದಲನೆ ಸಲ ಹಬ್ಬಕ್ಕೆ ಬಂದ ಅಳಿಯಗ ಬರೀ ನೀರು-ಬೆಲ್ಲ ಕೊಡೂದಾದರೂ ಹ್ಯಾಂಗ. ಅದೇನು ರೀತಿಯಲ್ಲ, ರಿವಾಜಲ್ಲ. ನಿನ್ನ ನೇಮ ಈಗೊಂದ ಸಲ ಮುರದುಬಿಡು. ಈಗ ಹಾಲು ಕುಡಿ.

ಮನೋ— (ನಗುತ್ತ) ಈಗೊಂದು ಸಲ, ಆಗೊಂದು ಸಲ ಅಂತ ಹೀಂಗೆಲ್ಲಾ ಮುರಿಯೂದಾದ್ರೆ ನೇಮಾನಾದ್ರೂ ಯಾಕೆ ಹಿಡೀಬೇಕು ಅಂತೇನಿ.

ಪಾರ್ವತಿ— ಅದೆಲ್ಲ ನನಗೆ ಗೊತ್ತಿಲ್ಲಪ್ಪಾ. ಮೊದಲನೇ ಸಲ ನೀ ದೀಪಾವಳೀಗೆ ಅಂತ ಬಂದೀದಿ. ನಾವು ಮಾಡೂದನ್ನ ಮಾಡ್ಬೇಕು ಅಂತ ಮಾತ್ರ ನನಗೆ ಗೊತ್ತು. ಕೈಕಾಲು ತೊಳಕೊಂಡು ಕೂಡ್ರು. ಒಂದಿಷ್ಟು ಹಾಲ ಕುಡದು ಅರಾಮ ತಗೊ. ಅವ್ರು ಕ್ಲಬ್ಬೀಗೆ ಹೋಗ್ಯಾರ. ಏಳು ಗಂಟೆ ಹೊತ್ತೀಗೆ ಬಂದಾರು.

ಮನೋ— ಬರ್ಲಿ, ಅವರಿಲ್ಲದಿದ್ದರೇನಾತಂತ. ಮಾವಂದಿರು ಅಳಿಯಗೆ ಸುಳ್ಳೆ ಮಹತ್ವ ಕೊಟ್ಟು ಅವನ ಉಧೋಉಧೋ ಮಾಡ್ತಾರಂತೇ ಅಳಿಯಂದಿರಿಗೆಲ್ಲ ಘಮೀಂಡಿ ಬಂದು ಮಾವಂದಿರ ಗೋಳು ಹೊಯ್ಕೊತಾರ. ನನಗೆ ಅದೆಲ್ಲ ಸೇರೂದಿಲ್ಲ.

ಪಾರ್ವತಿ— ಇರ್ಲಿ ಬಿಡಪಾ. ಹೋಗಿ ಕೈಕಾಲು ತೊಳಕೊಂಡು ಬಾ. (ಮನೋಹರ ಎದ್ದು ಬಚ್ಚಲಮನೆಗೆ ಹೋಗುವನು. ಪಾರ್ವತಿಬಾಯಿ ಒಳಗೆ ಬಂದು) ಸುಮಿ, ಅವನ ಗೂಡ ಹ್ಯಾಂಗ ಮಾತ ತಗೀಬೇಕು, ಅಂವನ ಹ್ಯಾಂಗ ಒಪ್ಪಿಸಬೇಕು ನನಗೆ ತಿಳೀವಲ್ದು. ನಾ ರಾಧಾಬಾಯಿ ಮನೀಗೆ ಹೋಗಿ ಒಂದರ್ಧ ತಾಸು ಇದ್ದು ಬರ್ತೇನಿ. ನೀ ಕಲತಾಕಿ, ಶಾಣ್ಯಾಕಿ ನೀನೇ ಹೇಳಿ ಅವನ ಒಪ್ಪಸು. ನಾ ಇದ್ರೆ ನಿನಗೆ ಮೈಛಳಿಬಿಟ್ಟು ಮಾತಾಡ್ಲಿಕ್ಕೆ ಆಗ್ಲಿಕ್ಕಿಲ್ಲ. ಮನೋಹರ ಕೈಕಾಲು ತೊಳಕೊಂಡು ಬಂದ್ಹಾಂಗ ಕಾಣಸ್ತದ. ಹಾಲು ಒಯ್ದು ಕೊಡು. (ಮನೋಹರನಿಗೆ) ನೀ ಒಂದಿಷ್ಟು ಆರಾಮ ತಗೋ. ನಾ ಇಲ್ಲೆ ರಾಧಾಬಾಯರ ಮನೀಗೆ ಹೋಗಿಬರ್ತೇನಿ. ತುಸಾ ಕೆಲಸದ. ನಿನಗೆ ಏನಾದ್ರೂ ಬೇಕಾದ್ರೆ ಹೇಳಿ ತಗೊ. ಸುಮಿ ಇರ್ತಾಳ ಮನೀ ಒಳಗೆ. (ಹೋಗುವಳು. ಸುಮತಿ ಹಾಲು ತಂದು ಕೊಡುವಳು.)

ಮನೋ— ಏನು, ರಾಣೀಸಾಹೇಬರು! ಆರಾಮಿದ್ದೀರೋ ಇಲ್ಲೋ?

**ಸುಮ—** ಮುಂಜಾನೆ ತನಕ ಇದೆ.

**ಮನೋ—** ಅಂದ್ರೆ? ಈಗೇನಾಗ್ಯದ? ಜ್ವರ ಗಿರ ಬಂದಾವೇನು! (ಕೈ-ಹಿಡಿದು) ಮೈ ಥಣ್ಣಗೇ ಅದಲ್ಲ.

**ಸುಮ—** ಹೌದು. ಇನ್ನೊಂದು ತಾಸ ಎರಡ ತಾಸಿನೊಳಗೆ ಪೂರಾ ಥಣ್ಣಗಾಗ್ತದ.

**ಮನೋ—** ಅಂ! ಅಂದ್ರೆ? "ಲಗೂ ಬರ್ರಿ, ಮುದ್ದಾಂಬರ್ರಿ, ಬರದಿದ್ದರೆ ನನ್ನಾಣೆ" ಅಂತ ಹತ್ತಿಪ್ಪತ್ತು, ಪತ್ರಾ ಬರ್ದಿ. ಈಗ ನಾ ಬಂದ ತಾಸ ಎರಡು ತಾಸಿನೊಳಗೆ ಮೈ ಥಣ್ಣಗಾಗ್ತದ ಅಂತ ಅಂತಿ! ಏನ ಹಾಂಗಂದ್ರ!

**ಸುಮ—** ನಾ ಏನ ಹೇಳ್ಲಿ? ನಿಮಗೇ ಗೊತ್ತದ ಆ ಮಾತು.

**ಮನೋ—** ಅಂದ್ರೆ? ಒಳ್ಳೇ ಒಗಟ ಹಾಕಿಕ್ಕೆ ಹತ್ತಿದಿಯಲ್ಲ. ಇಲ್ನೋಡು ನಾ, ಎಂ.ಏ. ಪಾಸ ಮಾಡಿದ್ದು ಫಿಲಾಸಫಿಯೊಳಗ, ಗೃಹಶಾಸ್ತ್ರದಲ್ಲಲ್ಲ. ಆ ಶಾಸ್ತ್ರದೊಳಗೆ ನಾ ಇನ್ನೂ ವಿದ್ಯಾರ್ಥಿ. ನಿನ್ನ ಜೋಡಿ ಸಂಸಾರ ಹೂಡಿ ನಾಲ್ಕಾರು ವರ್ಷ ಆದ ಮ್ಯಾಲೆ ಆ ಶಾಸ್ತ್ರದೊಳಗೂ ಪಾಸಾದೇನು. ಕಲಸಿ ಸರಿಯಾಗಿ ಹೌದಲ್ಲೋ?

**ಸುಮ—** ಸುಳ್ಳೇ ಏನಾದ್ರೂ ಮಾತಾಡಬೇಡ್ರಿ, ಇಷ್ಟು ಛಂದಾಗಿ ಮಾತಾಡವ್ರಿಗೆ, ಫಸ್ಟ್‌ಕ್ಲಾಸ ಎಂ. ಎ. ಆದವ್ರೀಗೆ ಸಾದಾ ಮಾತೂ ತಿಳಿಯೂದಿಲ್ಲ ಅಂದ್ರೆ ಮಂದಿ ನಕ್ಕಾರು. ಒಟ್ಟು ನಿಮಗೇನು ನನ್ನ ಗೋಳು ಹೊಯ್ಕೊಬೇಕು ಅಂತ ಮಾಡೀರಿ ತೀರ್ತು. ಹೀಂಗ ಕೂದಲಿಂದ ಕುತ್ತಿಗೀ ಕೊಯ್ಯೊ ಬದಲು ಪಸಂದ ಕತ್ತಿ ತಗೊಂಡು ಕುತ್ತಿಗಿ ಕಡದು ಹಾಕಿ ಬಿಡ್ರಿ. ಒಣಾ ತಾಪ ಆದ್ರೂ ತಪ್ಪೀತು. (ಕಣ್ಣು ಒರೆಸಿಕೊಳ್ಳುವಳು).

**ಮನೋ—** ಸುಮಾ, ಸುಮಾ, ಏನಾತು? ಆದದ್ದಾದ್ರೂ ಏನು? ಬಿಡಿಸಿ ಹೇಳಲ್ಲಾ! ನನ್ನಿಂದ ನಿನಗೆ ತ್ರಾಸ ಆಗಿದ್ರೆ—ನಾ ಅಂತೂ ತಿಳಿದು ಏನೂ ಮಾಡಿಲ್ಲ. ಇನ್ನು ತಿಳೀದೆ ಏನಾದ್ರೂ ಆಗಿದ್ರೆ ತಿದ್ದಿಕೋತೇನಿ. ಆತೋ ಇಲ್ಲೊ? ಅಲ್ಲೇ, ಇನ್ನೂ ಸಂಸಾರ ಶುರೂ ಆಗೂದರೊಳಗೇ ನೀ ಕುತ್ತಿಗೀ ಕಡಿಯೂ ಮಾತು ಎತ್ತಿದ್ರೆ ನನ್ನ ಗತಿ ಏನಾಗಬೇಕು ಹೇಳು.

**ಸುಮ--** ಅಲ್ಲಿ ಮೇಜಿನ ಮ್ಯಾಲೆ ಬಿದ್ದದ ಪತ್ರ. ಅದನ್ನೋದ್ರಿ. ಅಂದ್ರೆ ನಿಮಗೆ-ನೀವೆಂಥ ... ...

**ಮನೋ--** ಪತ್ರ! ಯಾವ ಪತ್ರ? ಎಲಾ! ಇದು ನನ್ನ ಪತ್ರ. ನಿನ್ನ ಅಪ್ಪಗೆ ನನ್ನ ಪತ್ರ ತೋರಿಸ್ಸಿ ಹೌದಲ್ಲೊ. ಅವರು ಸಿಟ್ಟಿಗೆದ್ದಾರೇನು ಮತ್ತೆ ಸಿಟ್ಟಿಗೆದ್ದಿರಬೇಕು. ಹೇಳಿ ಕೇಳಿ ಪೋಲೀಸ ಇನಸ್ಪೆಕ್ಟರರ್ರು ಅವ್ರು. ಅಲ್ಲೆ, ಹುಚ್ಚಿ. ಅವ್ರು ಸಿಟ್ಟಿಗೆದ್ರೆ ನಾ ನಿನ್ನ ಕುತ್ತಿಗಿ ಕಡೀಬೇಕೇನು? ಒಳ್ಳೇ ನ್ಯಾಯ ನಿಂದು! ಅವರ ಸಿಟ್ಟಿಗದ್ರೆ ನೀ ಯಾಕ ಅಂಜಬೇಕು ಅಂತೇನಿ? ಅವ್ರು ಸಿಟ್ಟಿಗೆದ್ರ ನೀನೂ ಸಿಟ್ಟಿಗೆದ್ದು ನಾ ಇದ್ದಲ್ಲಿ-ಬಂದು ಬಿಡಲ್ಲಾ! ಅದಕ್ಕೇನಂತ?

**ಸುಮ--** ನೀವು ಹೇಳಿದಷ್ಟು ಸುಲಭ ಅಲ್ಲ ಅದು. ಉಡುಗರೆ ಬ್ಯಾಡ ಅಂತ ನೀವು ಬರದದ್ದ ನೋಡಿ ಅಪ್ಪಗ ಬ್ರಹ್ಮಾಂಡ ಸಿಟ್ಟ ಬಂದದ. ತಾ ಹೇಳಿದ್ಹಾಂಗ ಕೇಳದಿದ್ರ ನಿಮ್ಮನ್ನ ಲಾಕಪ್ಪಿನಾಗ ಹಾಕಿಸ್ತಾನಂತ. ನಿಮ್ಮ ಗೂಡ ನನ್ನ ಇರಗೊಡೂದಿಲ್ಲಂತ.

**ಮನೋ--** ನನ್ನ ಲಾಕಪ್ಪಿನಾಗ! ಉಡುಗರೆ ಬ್ಯಾಡ ಅನ್ನೂದು ಯಾವ ಕಾಯಿದೆ ಪ್ರಕಾರ ಅಪರಾಧ ಆಗ್ತದಂತ! ಹಾಕಸ್ಲಿ ನೋಡೋಣ. ಲಗ್ನ ಆದ ಮ್ಯಾಲೆ ಮಗಳ ಮ್ಯಾಲೆ ತಂದೀ ಅಧಿಕಾರ ಇರೂದಿಲ್ಲಾ ಅನ್ನೂದೂ ಗೊತ್ತಿಲ್ಲೇನು?

**ಸುಮ--** ಕಾಯದೆ ತಗೊಂಡು ಏನ ಮಾಡ್ತೀರಿ? ಪೋಲೀಸರ ಸಹವಾಸ ನಿಮಗಿನ್ನೂ ಗೊತ್ತಿಲ್ಲಂತ ಹೀಂಗೆಲ್ಲ ಮಾತಾಡ್ತೀರಿ. ಅಪ್ಪಾ ಮನಸಮಾಡಿದ ಅಂದ್ರೆ ನೀವು ಐದ ಮಿನಿಟಿನಾಗ ಕಳ್ಳ ಆದೀರಿ. ಕಳ್ಳಭಟ್ಟಿ ವ್ಯಾಪಾರಿ ಆದೀರಿ. ಮೂರು ಮಿನಿಟಿನಾಗ ನಿಮ್ಮ ಮರ್ಯಾದಿ ಅನ್ನೂದು.

**ಮನೋ--** ಅಂ! ಎಲಾ!

**ಸುಮ--** ಹೌದು. ಅಪ್ಪಗೆ ದೊಡ್ಡಿಸ್ತನದ ಹ್ಯಾಂವ ಬಹಳ. ನೀವು ಉಡುಗರೆ ತಗೊಳ್ಳದಿದ್ರೆ ಮಂದಿ ತಾನೇ ಕಂಜೂಷಿ ಅಂತ ತಿಳ್ದು ತನ್ನ ಚ್ಯಾಷ್ಟಿ ಮಾಡ್ಯಾರು ಅಂತ ಅಂವ ತಿಳಕೊಂಡಾನ. ನೀವು ವರದಕ್ಷಿಣೆ ಬ್ಯಾಡಂತ ಅಂದಾಗ ಮದವೀನೇ ಮುರದು ಹೋಗೂ ಪ್ರಸಂಗ ಬಂದಿತ್ತು. ಮರತಿರೀನು? ಸುಮ್ಮನೆ ಅಪ್ಪಕೊಟ್ಟದ್ದು ತಗೊಂಡು ಬಿಡ್ರಿ. ನಿಮ್ಮ ಗಂಟೇನು ಹೋಗ್ತದ. ಒಂದು ರಿಸ್ಟ್‌ವಾಚು, ಒಂದು ಸೂಟು, ಒಂದೆ ಪಾರ್ಕರ ಪೆನ್ನು...

**ಮನೋ—** ಎಲ್ಲಾ ಕೊಡ್ತಾರೆ ಹೌದೋ ಅಲ್ಲೋ? ಅಲ್ಲ, ಆದ್ರೆ ನಾ ಹ್ಯಾಂಗ ತಗೊಳ್ಲಿ ಹೇಳು! ನನ್ನ ಧ್ಯೇಯದ ಗತಿ ಏನಾಗಬೇಕು? ನನ್ನ ತತ್ವದ ನಿಷ್ಠೆ ಎಲ್ಲಿ ಹೋಗ್ಬೇಕು ಹೇಳು? "ಮಾವ ಪೋಲೀಸ ಇನಸ್ಪೆಕ್ಟರ ಆಗಿದ್ದಂವ. ಬೇಕಾದಷ್ಟು ಗಂಟು ಮಾಡಿಟ್ಟುಕೊಂಡಾನ ಮೊದಲನೇ ದೀಪಾವಳೀಗೆ ಹೋಗ್ತೀರಿ. ನಿಮ್ದೇ ಮಜಾ ಅದ." ಅಂತ ಅಂದವ್ರೀಗೆಲ್ಲಾ ನಾ ಒಂದು ಕುರುಡು ಕಾಸಿನ ಸಾಮಾನೂ ತಗೊಳ್ಳೂದಿಲ್ಲ ಅಂತ ಹೇಳಿ ಬಂದೇನಿ. ನನ್ನ ಲೇಖದೊಳಗೆ, ಲೆಕ್ಚರಿನೊಳಗೆ "ವರದಕ್ಷಿಣೆ ತಗೊಳ್ಳೂದು ಶುದ್ಧ ಅನ್ಯಾಯ. ಉಡುಗೊರೆ ನೆವದಲ್ಲಿ ರೊಕ್ಕ ಎತ್ತಿ ಹಾಕೋದು ಮಹಾ ಪಾಪ" ಅಂತ ಪ್ರತಿಪಾದಿಸೇನಿ. ಈಗ ನಾನೇ ಈ ಸಾಮಾನೆಲ್ಲ ತಗೊಂಡ್ರೆ ಜನ ಏನಂದಾರು? ನನ್ನ ಮರ್ಯಾದೆ ಏನಾದೀತು? ಪ್ರಾಣಾನಾದ್ರೂ ಕಳಕೊಂಡೇನು, ಆದ್ರೆ ಮಾನಾ ಮಾತ್ರ ಕಳಕೊಳ್ಳಲಿಕ್ಕಿಲ್ಲ, ತಿಳೀತೇನು?

**ಸುಮ—** ತಿಳೀತು. ತಿಳದದ. ಅದಕ್ಕೇ ಆಗ್ಲೇ ಹೇಳ್ದೆ, ನನ್ನ ಕುತ್ತಗಿ ಕಡ್ದು ಬಿಡ್ರಿ ಅಂತ. ಅಪ್ಪ ತನ್ನ ಹಟ ಹಿಡಿಯೂದು, ನೀವು ನಿಮ್ಮ ಹಟಾ ಹಿಡಿಯೂದು. ಆಗಿ ಅಪ್ಪ ಖರೇನೂ ನಿಮ್ಮನ್ನ ಪೇಚಿನೊಳಗೆ ಹಾಕಿದ್ರೆ ನಾ ಏನ ಮಾಡ್ಲಿ?

**ಮನೋ—** ಒಳೇ ಬಂತು ಇದು. ಮಾವಂದಿರಿಗೆಲ್ಲಾ ಅಳಿಯಂದಿರು ದಶಮಗ್ರಹ ಆದ್ರೆ, ನನಗೆ ಮಾವನೇ ದಶಮಗ್ರಹ ಆದನಲ್ಲ. ಅಲ್ಲೆ, ನಿಮ್ಮ ಅಪ್ಪ ಅಂದೆ ದುಷ್ಟಬುದ್ಧಿಯೇನು ಮತ್ತೆ? ಮಗಳು ವಿಧವೆಯಾದ್ರೂ ಅಡ್ಡಿಯಿಲ್ಲ ಅಂತ ಚಂದ್ರಹಾಸನ್ನ ಕೊಲ್ಲಿಸಿದ್ಹಾಂಗೆ ಇವ್ರೂ ಏನಾದ್ರೂ ಮಾಡಿದರೆ—ಮಾಡಿದರೆ ಮಾಡ್ತಾರ ಬಿಡು. ಮನುಷ್ಯನಿಗಲ್ದೆ ಮರಕ್ಕೆ ಬರ್ತದೇನು ಕಷ್ಟ? ನಾಕ ದಿನಾ ತ್ರಾಸಾದೀತು? ಬೆಂಕೀಲಿ ಹಾಕಿಸಿಕೊಂಡ ಮ್ಯಾಲೆ ಚಿನ್ನ ಹೊಳಿಯೂವಾಂಗೇ ನಾನೂ ಮತ್ತೆ ಪ್ರಕಾಶಿಸೇನು? ನೀ ಏನು ಹೆದರಬ್ಯಾಡ. ದುಷ್ಟ-ಬುದ್ಧಿ ಚಂದ್ರಹಾಸನ ಕೊಲ್ಲಿಸಿದ್ರೂ ಕಡೆಗೆ ಮತ್ತೆ ಅಂವಾ ಬದುಕಿಕೊಂಡ.

**ಸುಮ—** ಹು. ಆದರೆ ಇದು ಆ ಕಾಲ ಅಲ್ಲ ಅಂದೆ. ದೇವ್ರು ಪ್ರತ್ಯಕ್ಷ ಆಗೂ ದಿನ ಅಲ್ಲಾ ಇದು. ನೀವೇನಾದ್ರೂ ಜೇಲಿಗೆ ಹೋದ್ರಿ ಅಂದ್ರೆ ಮುಂದೆ ಮರ್ಯಾದೆಯಿಂದ ಬಾಳ್ವೆ ಮಾಡೂದಾದೀತೇನು? (ಅಳು ಧ್ವನಿಯಲ್ಲಿ) ನಿಮ್ಮನ್ನ ಜೇಲಿಗೆ ಕಳಸದಿದ್ರ ನನ್ನ ಮುಂದಕ್ಕೆ ಓದ್ಸಿ ಎಜ್ಯುಕ್ಯಾಶನಲ್ ಇನಸ್ಪೆಕ್ಟರ್ ಮಾಡಿ ನಿಮ್ಮ ಅಪಮಾನ ಮಾಡಸ್ತಿನಂತ.

**ಮನೋ—** ಹಂ! ಭಾರಿ ವಿಚಾರ ಮಾಡ್ಯಾರ ಅನ್ನು. ಏನು ಬಂತು ಫಜೀತಿ ಅಂತೇನಿ. ನಡೀ ಸುಮಾ, ಮಾವ ಬರೂದರೊಳಗೆ ನಾವಿಬ್ರೂ ಹೋಗಿ ಬಿಡೋಣ. ಆ ಮ್ಯಾಲೆ . . . . .

**ಸುಮ—** ಛೆ! ಛೆ! ಅದು ಹ್ಯಾಂಗಾದೀತು? ನಾಲ್ಕ ಮಂದೀಯೊಳಗೆ ಫಜೀತಿ ಮಾಡಿಸಿಕೊಂಡರೆ ಏನ ಬಂದ್ಹಾಂಗ ಆತು! ನನ್ನ ಮಾತು ಕೇಳ್ರಿ ಅಪ್ಪನ ಮಾತೀಗೆ ಹೂಂ ಅನ್ರಿ,

**ಮನೋ—** ಅಂದ್ರೆ ನಾನೇ ಸುಮಾರಾಗ್ಲಿ ಹೌದಲ್ಲೊ.

**ಸುಮ—** ಅಯ್ಯ! ಮಾವ, ತಾನಾಗಿ ಕೊಟ್ಟಿದ್ದನ್ನ ಇಸಗೊಂಡ್ರ ಸುಮಾರೇನು ಆಗ್ತದ.

**ಮನೋ—** ಆದ್ರೆ ನನ್ನ ಗೆಳೆಯರೆಲ್ಲ

**ಸುಮ—** ಚ್ಯಾಷ್ಟಿ ಮಾಡಿದ್ರೆ ಮಾಡ್ತಾರ. ನೀವು ಬರಿಗೈಲೆ ಹೋದ್ರೂ ಅವರು ಚ್ಯಾಷ್ಟಿ ಮಾಡೂದು ಬಿಡ್ತಾರೇನು? ಮಾವ ಕೊಡೂದಿಲ್ಲಾಂತ ಗೊತ್ತಿದ್ದೇ ಈ ಸೋಗ ಹಾಕಿದ್ದ ಅಂತ ಅನ್ನದಿದ್ರೆ ನನ್ನ ಕೇಳ್ರಿ. ವರದಕ್ಷಿಣೆ ನೀವು ಬ್ಯಾಡ ಅಂದಾಗ "ಶಾಭಾಸ್" ಅಂದವ್ರೇ, ನೀವು ದಾಗಿನಿ ರೂಪದಲ್ಲಿ ಅದನ್ನ ತಗೊಂಡಾಗ "ತನ್ನ ಛಲಾ ಬಿಟ್ಟು ಮದವೀ ನಡಿಯೂಹಾಂಗ ಮಾಡಿದ ಭೇಷ್" ಅನ್ನಿಲ್ಲೇನು? ಈಗ್ಲೂ ಹಾಂಗೇ ಆಗ್ತದ.

**ಮನೋ—** ಇಲ್ಲ ಸುಮಾ. ಆಗ ನಾ ಮಾಡಿದ್ದು ತಪ್ಪಾತು. ಮಂದೀ ನನ್ನ ಹೊಗಳಿದ್ರೂ ನನ್ನ ವಿವೇಕ ಮಾತ್ರ ನನ್ನ ಹಂಗಿಸದೆ ಬಿಡಲಿಲ್ಲ. ಮತ್ತೂ ಅಂಥಾ ತಪ್ಪನ್ನೇ.

**ಸುಮ—** ಆತು. ಆಗ್ಲಿ ಹಾಂಗೇ. ನೀವಂದ ಹಾಂಗೇ ಆಗ್ಲಿ. ತನ್ನ ಮಾತೀಗೆ ಒಪ್ಪಲಿದ್ರೆ ತಾ ಬರೂದರೊಳಗೆ ನೀವು ಇಲ್ಲಿಂದ ಹೋಗಿಬಿಡ್ಬೇಕು ಅಂತ

ಅಪ್ಪ ಹೇಳಿಟ್ಯಾನ. ನೀವು ಹೋಗ್ರಿ. ಮನೀಗೆ ನಳಾ ಅದ ಅಂತ ನಮ್ಮ ಅಪ್ಪ ಹಿತ್ತಲದಾಗಿನ ಭಾವೀ ಏನ ಮುಚ್ಚಿಲ್ಲ. ಯಾವಾಗಾದ್ರೂ ನಳ ಬಂದಗಿಂದಾದ್ರೆ ಉಪಯೋಗಕ್ಕೆ ಬಂದೀತು ಅಂತ ಹಾಂಗೇ ಇಟ್ಯಾನ. ಇಂದ ರಾತ್ರಿ ಆ ಭಾವೀ ಉಪಯೋಗ ಆಗ್ತದ. ನಾಳೆ ನಿಮಗೆ ತಾರ ಬರ್ತದ. ನಿಮಗ ಕಾಟ ತಪ್ತದ. ಆಮ್ಯಾಲೇ ನೀವೇ ನೀವು, ನಿಮ್ಮ ಧ್ಯೇಯಾನೇ ಧ್ಯೇಯ, ತತ್ತ್ವಾನೇ ತತ್ತ್ವ. ( ಅಳುತ್ತ ) ಆದ್ರೆ—ಆದ ಹೋಗೂ ಮುಂದ . . . . . . .

**ಮನೋ—** ಸುಮಾ, ಅಳಬೇಡ ಸುಮಾ.

**ಸುಮ—** ಹೋಗು ಮುಂದ . . . . . ನಾ ಏನ ಮಾಡ್ಲಿ ? ನಿಮಗೆ ಸುಖಾ ಕೊಡೂದು ನನ್ನ ಹಣೇಲಿ ಬರದಿಲ್ಲ. ಆದ್ರೆ ನಿಮ್ಮ ಕಾಲ ಮುಟ್ಟಿ ಕಡೇ ನಮಸ್ಕಾರ ಮಾಡ್ತೇನಿ. ಮತ್ತೇನೂ ನಾ ಮಾಡವ್ಹಾಂಗಿಲ್ಲ. ಮುಂದಿನ ಜನ್ಮದೊಳಗಾದ್ರೂ ನಿಮ್ಮ ಹೆಂಡತಿಯಾಗಿ ನಿಮ್ಮ ಸೇವಾ ಮಾಡೂ ಭಾಗ್ಯ ನನಗ ಸಿಗಲಿ ಅಂತ ಆಶೀರ್ವಾದ ಮಾಡಿ ಬಿಡ್ರಿ.

**ಮನೋ—** ಸುಮಾ, ಸುಮಾ, ಛೆ! ಛೆ! ಏಳು ಏಳು ! ಅಳಬೇಡ ಸುಮಾ. ಆಗ್ಲಿ ನೀ ಅಂದ ಹಾಂಗೆ. ನಿನ್ನ ಅಪ್ಪ ಹೇಳಿದ್ಹಾಂಗೇ ಆಗ್ಲಿ. ಎಲ್ಲಾದಕ್ಕೂ ಸಮಯ ಬೇಕು. ನನ್ನ ನಿರ್ಧಾರ ಅಚಲ ಆಗಿದ್ರೆ, ನಿಷ್ಠೆ ಸತ್ಯವಾಗಿದ್ರೆ . . .

**ಸುಮ—** ಅಪ್ಪ ಹೇಳಿದ್ಹಾಂಗೇ ಆಗ್ಲಿ ಹೌದಲ್ಲೊ. ನನ್ನ ಜೀವಾ ಉಳಸಿದ್ರಿ. ದೇವರಾಣೆಯಾಗೂ ನಿಮಗೆ ಈ ಮಾತಿನ ಪಶ್ಚಾತ್ತಾಪ ಆಗದ ಹಾಂಗೆ ನಾ . . . . . .

**ಮನೋ—** ನನಗೆ ಗೊತ್ತು ಸುಮಾ. ಅದಕ್ಕೆ ನನ್ನ ಧ್ಯೇಯಾನ್ನ ಬದೀಗೆ ಸರಿಸಿ ನಿನ್ನ ಮಾತು ನಡೆಸಬೇಕು ಅಂತ ಮಾಡ್ದೆ. ಇನ್ನ — ಹೋಗು ಕಣ್ಣೀರ ಒರಸಿಕೊಂಡು ಮುಖಾ ತೊಳಕೊಂಡು ಬಾ. ನಾನೂ ಸ್ವಲ್ಪ ಹೊರಗೆ

**ಸುಮ—** ಛಿ ! ಹೊರಗೆ ಏನ ಕೆಲಸ ಅದೆ. ನನಗೆ ಎಷ್ಟು ಸಂತೋಷ ಆಗಿದೆ ಗೊತ್ತದೇನು ? ಅವ್ವ ಬರು, ಹೊತ್ತ ಆಗಿರದಿದ್ರೆ ನನಗ ವರಾ ಕೊಟ್ಟ ಈ ದೇವಿ,ಗೆ ಹೂವು ಏರಿಸಿ ಮಂಗಳಾರತಿ ಮಾಡ್ತಿದ್ದೆ.

(ಪಾರ್ವತಿಬಾಯಿ ಬರುವಳು.)

**ಪಾರ್ವತಿ—** ಸುಮಾ, ಇಲ್ಲೆ ಕೂತೀಯೇನು ? ಏನಾರ ಫಲಾಹಾರಕ್ಕಾದ್ರೂ ಕೊಟ್ಟೆಯೋ ಅಥವಾ ಮಾತಿನಲ್ಲೆ ಕೈಲಾಸ ಮನೀ ಗಂಡಗ ...

(ರಂಗರಾಯರು ಬರುವರು.)

**ರಂಗ—** ಓಹೋಹೋ ! ಅಳಿಯಂದಿರ ಸವಾರಿ ಬಂದದೇನು ? ಛೇಷಾತು ? ಅಳಿಯಂದಿರು ಬರ್ತಾರ, ಮಾವ ಇಲ್ಲದ್ದು ಕಂಡು ಸಿಟ್ಟಗಿಟ್ಟ ಆದಾರು ಅಂತ ಕ್ಲಬ್ಬಿನಿಂದ ಬೇಗ ಬಂದ್ಬಿಟ್ಟೆ. ಏನು ಸುಮಾ, ಎಲ್ಲಾ ಠೀಕಾತು ಹೌದಲ್ಲೊ. ಲಗೂನೇ ಒಂದಿಷ್ಟು ಚಾಹಾನೋ ಕಾಫೀನೋ ಏನಾದ್ರೂ ಕೊಡು ನಮ್ಮ ಬ್ಯರೀಗೆ. ಮನೋಹರನ ಕರಕೊಂಡು ಹೋಗಿ ವಾಚು ಪೆನ್ನು ಎಲ್ಲಾ ಬೇಕಾಗ್ಯದ. ಸೂಟೂ ಹೊಲಸಬೇಕಾಗ್ಯದ.

**ಮನೋ—** ಏನ ಮಾಡ್ತೀರಿ ಬಿಡ್ರಿ. ಹಬ್ಬಕ್ಕೆ ಎರಡೇ ದಿನ ಅದ. ಟೇ[illegible] ಸೂಟೇನು ಹೊಲದ ಕೊಡ್ತಾನ. ಮತ್ತೆ ನನ್ನ ಹತ್ತಿರ ಟ್ಯಾಯಿವ್ ಬ[illegible] ಅದ. ವಾಚ ಯಾಕೆ ಬೇಕು.

**ರಂಗ—** ಹೌದು. ಮಶೀ ದೌತಿ ಟಾಕು ಅದ, ಪೆನ್ ಯಾಕೆ ಬೇಕು ಹೌದ[illegible] ಮನೋಹರಾ, ಅದಕ್ಕೇ ನಿನಗೆ ಮಾಸ್ತರ ಆಗಬ್ಯಾಡೋ ಅಂದ[illegible] ಮಾಸ್ತರ ಜನರೀಗೆ ವ್ಯವಹಾರ ಜ್ಞಾನ ಅನ್ನೂದೇ ಇರೂದಿಲ್ಲ. ನಾ ಸ[illegible] ನೊಳಗೆ ಇದ್ದಾಗ ಏನಾದ್ರೂ ಸರಕಾರೀ ಕೆಲಸಕ್ಕೇ ಅಂತ ನನ್ನ ಕ[illegible] ಬರೂದಾದ್ರೂ ಕೈಕಾಲು ನಡಗಸಿಕೋತ ಬರುತಿದ್ದು. ಈ ಮಾಸ್ತರ ಜ[illegible] ಒಳ್ಳೇ ಫಸ್ಟ್ ಕ್ಲಾಸ್ ಸರಕಾರೀ ನೌಕರಿ ಹಿಡಿ, ವಾಚ್ ಯಾಕೆ ಬೇಕು. [illegible] ಯಾಕೆ ಬೇಕು, ಅವನ್ನ ಹ್ಯಾಂಗೆ ಸಂಪಾದಿಸಬೇಕು ತಾನೇ ತಿಳೀ[illegible] ಒಂದೇ ಉದಾಹರಣೆ ಹೇಳತೇನಿ. ದೀಪಾವಳಿ ಹಬ್ಬ. ಭಾಳ ಕೆ[illegible] ಇರ್ತದ, ದರ್ಜಿ ಏನ ಸೂಟು ಹೊಲದ ಕೊಟ್ಯಾನ ಅಂತಂದಿ ಹೌದ[illegible] ಬಾ ನನ್ನ ಸಂಗಡ. ದರ್ಜಿ ಗೂಡ ನಾ ಮಾತಾಡು ರೀತಿ, ಅಂವ ನನ್ನ ಗ[illegible] ಮಾತಾಡೂ ರೀತಿ ನೋಡು. ಈಗೆಷ್ಟು, ಆರುಗಂಟೆಯಾಗದೆ. ಇಪ್ಪತ್ತನಾ[illegible] ತಾಸಿನೊಳಗೆ ನಿನ್ನ ಸೂಟೂ ಬರ್ತದೋ ಇಲ್ಲೋ ನೋಡು. ಏನ[illegible] ಮನೋಹರ, ನನಗೆ ಒಂದೇ ಒಂದ ಆಶಾ ಅದ ನೋಡು. ನೀ ಧ್ಯೇ[illegible] ತತ್ತ್ವ ಅಂತ ಮಚ್ಚುಚ್ಚಾರ ಆಡಿದ್ರೂ ಎರಡು ಮಾತು ಹೇಳಿದ್ರೆ ಹಾದ[illegible] ಬರ್ತಿಯಲ್ಲಾ ಅದೇ ಸಂತೋಷ. ನಾಳೆ ನೀನೂ ಒಬ್ಬ ಮನುಷ್ಯ ಅಂತ [illegible] ಅಂತ ಖಾತ್ರಿ ಅನಸ್ತದ. ಈ ದೀಪಾವಳಿ ಸೂಟೆ, ನಿಮ್ಮ ಮಾಸ್ತರ ಜನ[illegible] ಹ್ಯಾಂಗೂ ತಿಂಗಳೊಪ್ಪತ್ತು ಇರ್ತದ. ಇಲ್ಲೇ ಇದ್ದು ಬಿಡು. ನನ್ನ ಗ[illegible] ಮಾತಾಡು. ತಿರಗಾಡು. ಜಗತ್ತು ತೋರಸ್ತೇನಿ, ನೋಡಿ ಕಲತಕ[illegible] ಸೂಟೆ ಮುಗದ ಮ್ಯಾಲೆ ಸರಕಾರೀ ನೌಕರಿಬೇಕು ಅಂತೆ. ನೀನೇ ಹೇ[illegible] ಸುಮಾ, ಆತಿಲ್ಲೋ ಕಾಫಿ.

**ಮನೋ—** ಇನ್ನೂ ಇದೇ ಈಗ ಹೇಳಿದ್ರಿ. ೨ ಮಿನಿಟಿನೊಳಗೆ.

**ರಂಗ—** ಶಟಅಪ್. ಆರ್ಡರ್ ಈಜ್ ಆರ್ಡರ್. ಸಾರಿ, ಸಾರಿ. ಅಂ. ನಿನ[illegible] ಆರ್ಡರು ಮಾಡಿದ್ದು, ಸುಮಿಗೆ. ಆರ್ಡರು ಮಾಡಿ ಮಾಡಿ ಚಟಾ ಬಿದ್ದ [illegible] ದಪ್ಪಾ. ಆದ್ರೂ ಆರ್ಡರು ಮಾಡಿಸಿಕೊಳ್ಳೂದಕ್ಕಿಂತ ಆರ್ಡರು ಮಾ[illegible] ಚಟಾನೇ ಛಲೋದು. ಹಾಕ್ಕೊ ಶರ್ಟು. ಕಾಫಿ ಕುಡದ ಕುಡ್ಲೆ ಹೊ[illegible] ಬಿಡೋಣ.

ಸೂಚನೆ :— ಲೇಖಕರ ಲಿಖಿತ ಅಪ್ಪಣೆಯಿಲ್ಲದೆ ಇದನ್ನು ಯಾರೂ ಅ[illegible] ನಯಿಸಕೂಡದು.

# ರಾಜತಂತ್ರ ಪ್ರವೀಣ ಭೀಷ್ಮರು ಬೋಧಿಸಿದ ಲೋಕನೀತಿ

ಲೇಖಕರು :
ಶ್ರೀ. ಜಿ. ಆರ್. ಪಾಂಡೇಶ್ವರ
ಧಾರವಾಡ

‘ ಅತ್ಯುನ್ನತಿಯೊಳ್ ಅಮರಸಿಂಧೂದ್ಭವಂ ’ ಎಂದು ಪಂಪ ಮಹಾಕವಿ ಭೀಷ್ಮಾಚಾರ್ಯರ ಹಿರಿಮೆಯನ್ನು ಹೇಳಿದ್ದಾನೆ. ಲೌಕಿಕ ಪಾರಮಾರ್ಥಿಕಗಳೆರಡನ್ನೂ ವಿಶದವಾಗಿ ಆಳವಾಗಿ ಅವರು ಅಭ್ಯಸಿಸಿದವರು ತಾವು ಋಗ್ಣಶಯ್ಯೆಯಲ್ಲಿದ್ದಾಗ ತಮ್ಮನ್ನು ಕಾಣಲು ಬಂದ ಧರ್ಮರಾಜನಿಗೆ ಲೋಕನೀತಿಯನ್ನು ಕುರಿತು ವಿವರಿಸಿದರು. ಇಂದು ಬದಲಾದ ಪರಿಸ್ಥಿತಿಯಲ್ಲಿಯೂ ಈ ಉಪದೇಶವು ಎಷ್ಟೊಂದು ಸಮಂಜಸವಾಗಿದೆ ಯೆಂಬುದನ್ನು ಈ ಲೇಖದಲ್ಲಿ ಕಾಣಬಹುದು . . . . . .

ಪಂಪಕವಿಯು ಮಹಾಭಾರತದ ನಾಯಕ ಪ್ರತಿನಾಯಕ ಪರಿವಾರದಲ್ಲಿ ಎಂಟುಮಂದಿ ಮಹಾನುಭಾವರನ್ನೆತ್ತಿಕೊಂಡು ಅವರವರ ವ್ಯಕ್ತಿವೈಶಿಷ್ಟ್ಯವನ್ನು ಬಣ್ಣಿಸಿದ್ದಾನೆ. “ ಅತ್ಯುನ್ನತಿಯೊಳ್ ಅಮರ ಸಿಂಧೂದ್ಭವಂ ” ಎಂದು ಭೀಷ್ಮಾಚಾರ್ಯರನ್ನು - ಇತರರಾರೂ ಅವರ ಬಳಿಗೆ ಕೂಡಾ ಸುಳಿಯಲಾಗದಷ್ಟು ಎತ್ತರದಲ್ಲಿರಿಸಿ - ಪೂಜೆಸಲಿಸಿದ್ದಾನೆ. “ ನೆಲಕಿರಿವೆನೆಂದು ಬಗೆದಿರೆ? ಛಲಕಿರಿವೆಂ !” ಎಂದು ಗರ್ಜಿಸಿದ ಕೌರವೇಶ್ವರನು ‘ಛಲದಂಕಮಲ್ಲ’ತೆಗೆ ಹೆಸರಾಗಿದ್ದರೆ, ಸ್ವಪಕ್ಷ-ವಿಪಕ್ಷವೆಂಬ ಭೇದ ಭಾವಕ್ಕೆಡೆಗೊಡದೆ ಸರ್ವರಿಗೂ ತನ್ನ ಹೃದಯವನ್ನು ತೆರೆದು ತೋರಿದ ಕರ್ಣನು ಸತ್ಯನಿಷ್ಠೆಗೂ ತ್ಯಾಗಕ್ಕೂ ಕೀರ್ತಿತನಾಗಿದ್ದನು ; ಹೊಡೆತಕ್ಕೆ ಪ್ರತಿ ಹೊಡೆತಕೊಡುವುದನ್ನೇ ಗುರಿಯಾಗಿಟ್ಟು ಕೊಂಡಿದ್ದ ಭೀಮಸೇನನು ‘ಗಂಡೆದೆತನ’ಕ್ಕೂ ಸೋಲರಿಯದ ಸಾಹಸಕ್ಕೆ ಅರ್ಜುನನೂ ಖ್ಯಾತವಿದ್ಯಾವಿಶಾರತೆಗೆ ದ್ರೋಣನೂ ದೇಹ ಬಲಕ್ಕೆ ಶಲ್ಯನೂ ಚಿತ್ತಶುದ್ಧಿಗೆ ಧರ್ಮರಾಜನೂ ಆ ಯುಗದ ಆದರ್ಶ ಪುರುಷರಾಗಿದ್ದರು. ಆದರೆ, ಈ ಎಲ್ಲರಲ್ಲಿಯೂ ಯಾವ್ಯಾವ ಗುಣವಿಶೇಷಗಳಿದ್ದುವೋ ಅವೆಲ್ಲವೂ ಅವರಲ್ಲಿದ್ದುದಕ್ಕಿಂತ ದೊಡ್ಡ ಪ್ರಮಾಣದಲ್ಲಿ ಸಮ್ಮಿಳಿತವಾಗಿದ್ದುವೆಂದರೆ ಭೀಷ್ಮರೊಬ್ಬರಲ್ಲಿಯೇ! ಇದಕ್ಕೆ, ಆಮರಣ ಬ್ರಹ್ಮಚರ್ಯವ್ರತಪಾಲಿಸಿದ್ದ ಅವರ ಉಜ್ವಲ ಜೀವನದ ಪ್ರತಿಯೊಂದು ಘಟನೆಯೂ ಸಾಕ್ಷಿ ಹೇಳುತ್ತಿದೆ. ಹದಿನೆಂಟುದಿನಗಳ ಘನಘೋರ ಸಂಗ್ರಾಮದಲ್ಲಿ ಸತತ ಹತ್ತು ದಿನಗಳ ಯುದ್ಧ ಭಾರವನ್ನು ಅವರೊಬ್ಬರೇ ಹೊತ್ತರು. ಬ್ರಾಹ್ಮ-ಕ್ಷಾತ್ರ ಉಭಯ ತೇಜೋಪೇತರಾಗಿದ್ದ ದ್ರೋಣರು ಐದುದಿನವಷ್ಟೇ ಆ ಧುರವನ್ನು ಸಹಿಸಿಕೊಳ್ಳಲಾಗಿದ್ದರು. ರುದ್ರಾವತಾರಿಯಾಗಿದ್ದು, ನಾರಾಯಣಾಸ್ತ್ರವನ್ನು ಬಲ್ಲವನಾಗಿದ್ದ ಅಶ್ವತ್ಥಾಮ, ನೂರಾನೆಯ ಬಲದ ಶಲ್ಯ, ಭೀಮನಿಗಿಂತ ಮೊದಲೇ ಜರಾಸಂಧನನ್ನು[1] ಸೀಳಿ, ಜೋಡಿಸಿ, ಜೀವದಾನವಿತ್ತಿದ್ದ ಕರ್ಣ- ಇವರೆಲ್ಲರೂ ಕೂಡಿ ಮುಂದಿನ ಎರಡುದಿನದ ಕಾಳಗವನ್ನು ನಿರ್ವಹಿಸಿದರು. ಅಂದಮೇಲೆ, ಭೀಷ್ಮರ ಅತ್ಯುನ್ನತಿಗೆ ಬೇರೆ ಮಾತುಂಟೆ ?

## ಭೀಷ್ಮರ ಅತ್ಯುನ್ನತಿ

ಅವರ ಈ ‘ಅತ್ಯುನ್ನತಿ’ಯೇ, ಜನ್ಮತಃ ಕ್ಷತ್ರಿಯರಾಗಿದ್ದರೂ ಅವರಿಗೆ, ಆಚಾರ್ಯ ಪದವಿಯನ್ನುಂಟು ಮಾಡಿಕೊಟ್ಟದ್ದಿತು. ಲೌಕಿಕ ಪಾರಮಾರ್ಥಿಕ ಎರಡನ್ನೂ ಅವರಷ್ಟು ವಿಶದವಾಗಿಯೂ ಆಳವಾಗಿಯೂ ಅರಿತವರು ಆಗಿನ ಕಾಲದಲ್ಲಿ ಬೇರೆ ಯಾರೂ ಇರಲಿಲ್ಲ. ಯುಗಪುರುಷನೂ ಅವತಾರಿಯೂ ಆಗಿದ್ದ ಶ್ರೀಕೃಷ್ಣನನ್ನು ಕೂಡಾ ಸಿಟ್ಟಿಗೆಬ್ಬಿಸಿ, ಚಕ್ರಪಾಣಿಯಾಗಿ, ತಮ್ಮ ಮೇಲೆ ಹರಿಹಾಯುವಂತೆ ಮಾಡಿದ ಮಹಾ ಮಹಿಮರವರು! [2] “ಈ ಚಕ್ರಾಯುಧದಿಂದ ನಿನ್ನನ್ನೀಗಲೇ ಸಂಹರಿಸಿ ಬಿಡುತ್ತೇನೆ” ಎಂದು ರೇಗಿದ ಕೃಷ್ಣನನ್ನು “ ಕೃಷ್ಣಾ, ನೀನು ಸಾಕ್ಷಾತ್ ಪರಬ್ರಹ್ಮ ಸ್ವರೂಪಿಯೇನೋ ಹೌದು ; ಆದರೆ, ಇಚ್ಛಾಮರಣಿಯಾಗಿರುವ ಈ ಭೀಷ್ಮನ ಒಂದು ರೋಮವನ್ನಾದರೂ ನೀನು ನಾಶಮಾಡಲಾರೆ ಎಂಬುದನ್ನು ಮರೆತೆಯಾ?” ಎಂದು ಪ್ರಶ್ನಿಸಿ ಮೂದಲಿಸಿ, ಆತನ ಚಂಡಕೋಪವನ್ನು ತಣಿಸಿ, ನಾಚಿಕೆ ಪಡಿಸಿಬಿಟ್ಟರು. ಜನಕ್ಷಯದಿಂದಾಗಿ ಧರ್ಮರಾಜನಲ್ಲಿ ವಿರಕ್ತಿ ತಲೆದೋರಲು ಮುನಿಶ್ರೇಷ್ಠರಾದ ವ್ಯಾಸರು,[3] ಭೀಷ್ಮರ ಈ ‘ಅತ್ಯುನ್ನತಿ’ಯನ್ನು ಬಗೆದಂದೇ “ಧರ್ಮರಾಜಾ, ನೀನು ಧರ್ಮಾಧರ್ಮ ವಿವೇಕವನ್ನರಿತುಕೊಳ್ಳಬೇಕು. ಅದಕ್ಕಾಗಿ ಕುರುಕುಲಪಿತಾಮಹನಾದ ಭೀಷ್ಮನಲ್ಲಿಗೆ ಹೋಗು. ಆತನು ಧರ್ಮರಹಸ್ಯವನ್ನೆಲ್ಲ ಬಲ್ಲವನು ನಿನ್ನ ಸಂದೇಹಗಳನ್ನೆಲ್ಲ ನಿವಾರಿಸುವನು. ದೈತ್ಯದಾನವರ ಗುರುವೆನಿಸಿದ ಭೃಗುವಿನಿಂದ ಆತನು ಅರ್ಥಶಾಸ್ತ್ರವನ್ನು ಕಲಿತಿದ್ದಾನೆ; ಭೃಗುಪುತ್ರ ಪರಶುರಾಮನಿಂದ ಧನುರ್ವೇದವನ್ನೂ ಚ್ಯವನಋಷಿಯಿಂದ ಆಯುರ್ವೇದವನ್ನೂ ಬ್ರಹ್ಮಮಾನಸಪುತ್ರ ಸನತ್ಕುಮಾರನಿಂದ ಆತ್ಮವಿದ್ಯೆಯನ್ನೂ ಮಾರ್ಕಂಡೇಯನಿಂದ ಸಂನ್ಯಾಸಧರ್ಮವನ್ನೂ ಕಲಿತಿದ್ದಾನೆ. ಆದ್ದರಿಂದ, ಆತನು ದೇಹತ್ಯಾಗ ಮಾಡುವ ಮುನ್ನವೇ ಆತನ ಬಳಿಗೈದಿ, ಎಲ್ಲವನ್ನೂ ಕೇಳಿ ತಿಳಿದುಕೋ.” ಎಂದು ಸೂಚಿಸುತ್ತಾರೆ. ವ್ಯಾಸರಂತೆ [4] ಶ್ರೀಕೃಷನು ಕೂಡಾ ಭೀಷ್ಮನ ‘ಮಹೋನ್ನತಿ’ ಯನ್ನು ಕೊಂಡಾಡುತ್ತ “ಭೀಷ್ಮನು ಸಕಲ ವಿದ್ಯೆಗಳಿಗೂ ಆಧಾರನು (ಆಧಾರಃ ಸರ್ವವಿದ್ಯಾನಾಂ) ಧರ್ಮವನ್ನು ತಿಳಿದವರಲ್ಲಿ ಅಗ್ರೇಸರನು ( ಧರ್ಮವಿದಾಂ ಶ್ರೇಷ್ಠಃ) ” ಎನ್ನುತ್ತಾನೆ. ತಾನು ತೊಟ್ಟಿದ್ದ ಪುರುಷವ್ರತಪ್ರತಿಜ್ಞೆಯನ್ನು ಕಾದುಕೊಳ್ಳುವ ಸಲುವಾಗಿ ಆತನು ಗುರು ಪರಶುರಾಮನೊಡನೆ ಅಹೋರಾತ್ರಿ ಇಪ್ಪತ್ತು ಮೂರುದಿನ ಹೋರಾಡಿಯೂ ಬಗ್ಗದೆ, ಗುರುವಿನ ಪ್ರಶಂಸೆಗೆ ಪಾತ್ರನಾದ ಮಹಾಮಹಿಮನೆಂದೂ ಆತನು ಮರಣಪಟ್ಟಮೇಲೆ ಈ ಲೋಕವು ಚಂದ್ರನಿಲ್ಲದ ರಾತ್ರಿಯಂತಾಗುವುದೆಂದೂ ಅದ್ದರಿಂದ ನಂದುತ್ತಿಗುವ ಅಗ್ನಿಯಂತೆ ಶರತಲ್ಪಗತನಾಗಿರುವ ಆತನಲ್ಲಿಗೆ ಈಗಲೇ ಹೊರಡಬೇಕೆಂದೂ ಸಲಹೆ ಕೊಡುತ್ತಾನೆ.

1. ಶಾಂತಿಪರ್ವ ೪ನೇ ಅಧ್ಯಾಯ— ಕರ್ಣ ಪರಾಕ್ರಮ ವರ್ಣನೆ.
2. ಭೀಷ್ಮಪರ್ವ ೫೯ ನೇ ಅಧ್ಯಾಯ “ ಶ್ರೀಕೃಷ್ಣ- ಸ್ಯಾಕ್ರಮಣಂ ”
3. ಶಾಂತಿಪರ್ವ ೩೭ ನೇ ಅಧ್ಯಾಯ
4. ಶಾಂತಿಪರ್ವ ೫೦ ನೇ ಅಧ್ಯಾಯ.

ಹೀಗೆ, ಮಹಾಮಹಿಮರಿಬ್ಬರ ಮನಃಪೂರ್ವಕವಾದ ಮೆಚ್ಚುಗೆಗೆ ಪಾತ್ರರಾಗಿದ್ದ ಭೀಷ್ಮರಲ್ಲಿಗೆ ಧರ್ಮರಾಜನು ಸಕಲ ಪರಿವಾರ ಯುಕ್ತನಾಗಿ ಹೋಗುತ್ತಾನೆ. ಕುರುಕ್ಷೇತ್ರದ ಒಂದೆಡೆಯಲ್ಲಿ ಶರತಲ್ಪಶಾಯಿಯಾಗಿ, ಉತ್ತರಾಯಣದ ನಿರೀಕ್ಷಣೆಯಲ್ಲಿದ್ದ ಭೀಷ್ಮರ ಸುತ್ತುಮುತ್ತಲೂ ಜ್ಞಾನಪಿಪಾಸುಗಳಾದ ಅನೇಕಾನೇಕ ಋಷಿ-ಮುನಿಗಳು ಆಗಲೇ ಬಂದು ನೆರೆದಿದ್ದರು. ಕುರುಧರೆಯನ್ನೆಲ್ಲ ಏಕಚ್ಛತ್ರಾಧಿಪತಿಯಾಗಿ ಅನೇಕ ವರ್ಷ ಕಾಲ ಆಳಿಕೊಂಡು ಬಂದಿದ್ದ ರಾಜಕಾರಣಧುರಂಧರರಾದ ಭೀಷ್ಮರು ರಾಜಧರ್ಮ-ಲೋಕಧರ್ಮಗಳ ಒಂದು ಅಕ್ಷಯ್ಯಭಾಂಡಾರವೇ ಆಗಿದ್ದರು. ಅಂತಹ ಭಾಂಡಾರವನ್ನು ತನ್ನ ಆಸ್ಥಾನದಲ್ಲಿರಿಸಿಕೊಂಡಿದ್ದರೂ ಕೌರವೇಶ್ವರನು ಅದರ ಸದುಪಯೋಗ ಮಾಡಿಕೊಳ್ಳಲಾರದೆ ಸರ್ವನಾಶಕರವಾದ ವಿಪತ್ತಿಗೆ ಗುರಿಯಾದನು! ಕೌರವನ ಸ್ಥಿತಿ ಮನೆಯಲ್ಲಿ ಕಾಮಧೇನುವನ್ನಿಟ್ಟುಕೊಂಡು ಹಾಲಿಗಾಗಿ ಅಲೆದಾಡುವ ಮೂರ್ಖನಂತಾಗಿದ್ದರೆ, ಭೀಷ್ಮರ ಸ್ಥಿತಿ "ಬೀದಿಯಲ್ಲಿ ಬಿದ್ದ ಮಲಬೊಮ್ಮ" ದಂತಾಗಿದ್ದಿತು. ಧರ್ಮರಾಜನಿಗೆ ಮಾತ್ರ ಆ ಜ್ಞಾನನಿಧಿ ಈಗ ಲಭ್ಯವಾದಂತಾಯಿತು. ಆತನು ಪ್ರಶ್ನಿಕೇಳುತ್ತ ಹೋಗುವನು, ಭೀಷ್ಮರು ಉತ್ತರವೀಯುತ್ತ ಹೋಗುವರು. ಅವರ ಮುಖದಿಂದ ರಾಜಧರ್ಮನೀತಿಯೂ ಮೋಕ್ಷಧರ್ಮತತ್ತ್ವಗಳೂ ಅಮೃತಧಾರೆಯಾಗಿ ಹರಿಯುತ್ತ ಹೋಗುವುವು. ಅವರ ನಿರೂಪಣೆಯು ಅತ್ಯಂತ ಚಿತ್ತಾಕರ್ಷಕವಾಗುವಂತೆ ಅನೇಕಾನೇಕ ಸುಂದರ ಕಥೆಗಳನ್ನೂ ರಸವತ್ತಾದ ಉಪಮೆಗಳನ್ನೂ ಅವರು ಹೇಳುತ್ತಾರೆ. ಸರ್ವರೂ ದತ್ತಚಿತ್ತರಾಗಿ ಆಲಿಸುತ್ತ ನವಚೈತನ್ಯವನ್ನು ಪಡೆಯುತ್ತಾರೆ. ರಹಸ್ಯವಾದ ಬೆಳಕುಗಳನ್ನು ನೋಡಿ ಆನಂದಪಡುತ್ತಾರೆ. ಮುಂದಿನ ಯುಗಕ್ಕೆ ಆ ಅಕ್ಷಯ್ಯ ಭಾಂಡಾರವನ್ನು ಅಕ್ಷರರೂಪವಾಗಿ ವ್ಯಾಸರು ಹಿಡಿದಿಟ್ಟುಕೊಡುತ್ತಾರೆ!

## ಮೋಕ್ಷಧರ್ಮದ ಹೃದಯಸ್ಪರ್ಶಿ ವಿವರಣೆ

ಉಪನಿಷತ್ತುಗಳು ಶ್ರೇಯಸ್ಸು-ಪ್ರೇಯಸ್ಸುಗಳ ಎರಡು ಮಾರ್ಗಗಳನ್ನೂ ವಿಶದವಾಗಿ ವಿವರಿಸುವಂತೆ, ಭೀಷ್ಮರು ಮೋಕ್ಷಧರ್ಮ-ಲೋಕಧರ್ಮಗಳೆರಡನ್ನೂ ಹೃದಯಸ್ಪರ್ಶಿಯಾಗಿ ವಿವರಿಸುತ್ತಾರೆ. ಲೋಕಧರ್ಮಕ್ಕೆ ರಾಜ (ಸರಕಾರ)ನು ಮುಖ್ಯನಾದರೆ, ಮೋಕ್ಷಧರ್ಮಕ್ಕೆ ಗುರು(ಮಠ) ಮುಖ್ಯನಾಗುತ್ತಾನೆ. ಆದಿಕಾಲ (ಕೃತಯುಗ)ದಲ್ಲಿ ಜನಸಂಖ್ಯೆಯು ತೀರ ಚಿಕ್ಕದಾಗಿದ್ದು, ಜೀವನಾಧಾರವಾದ ಭೂಸಂಪತ್ತು ವಿಪುಲವಾಗಿದ್ದಿತು. "ಬೆಳೆಯೇನೋ ಬಹಳವಿದೆ, ಕೊಯ್ಯುವವರು ಮಾತ್ರ ವಿರಳ" ಎಂದಂತೆ ಆಗಿನ ಸ್ಥಿತಿಯಾಗಿದ್ದಿತು. ಹಾಗಾಗಿ, ಎಲ್ಲರೂ ಅರಸರು, ಎಲ್ಲರೂ ಪ್ರಜೆಗಳು— ಎಂಬಂತಹ ಸರ್ವಸಮಾನತೆಯು ಸುಖಸಮೃದ್ಧಿಯಿಂದ ಬಾಳುತ್ತಿದ್ದರು. ಬರಬರುತ್ತ ಜನಸಂಖ್ಯೆಯು ಹೆಚ್ಚುತ್ತ, ಜೀವನಾಧಾರ ವಸ್ತುಗಳ ಮೇಲೆ ಮೋಹವೂ ಲೋಭವೂ ಹೆಚ್ಚುತ್ತ ಹೋದುವು. ಅವುಗಳ ಸಲುವಾಗಿ ಸ್ಪರ್ಧೆಯು ಪ್ರಾರಂಭಿಸಿತು. ಈ ಸ್ಪರ್ಧೆಯಲ್ಲಿ ರಾಗ - ದ್ವೇಷಗಳು ತಲೆಯಿಕ್ಕಿದುವು; ಕಾರ್ಯಾಕಾರ್ಯವಿವೇಚನೆಯೆಲ್ಲ ಮಾಯವಾಗಿ ಬಡಿದಾಟಗಳುಂಟಾದುವು. ನ್ಯಾಯವಂತನೇ ಬಲವಂತನೆಂಬುದು ಹೋಗಿ, ಬಲವಂತನೇ ನ್ಯಾಯವಂತ—ಎಂಬುದು ರೂಢಿಗೆ ಬರತೊಡಗಿತು. ಆಗ, ನ್ಯಾಯವಂತರಲ್ಲಿ ಶ್ರೇಷ್ಠನೆನಿಸಿದ ಬ್ರಹ್ಮನು ಒಂದು ಲಕ್ಷ ಅಧ್ಯಾಯಗಳುಳ್ಳ "ದಂಡನೀತಿ" ಎಂಬ ಗ್ರಂಥವನ್ನು ರಚಿಸಿಕೊಟ್ಟು, ಎಲ್ಲರೂ ಅದರಲ್ಲಿ ಹೇಳಿದಂತೆ ನಡೆಯತಕ್ಕದ್ದೆಂದು ವಿನಂತಿಸಿಕೊಂಡನು. ಇದರಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳನ್ನು ನ್ಯಾಯರೀತಿಯಿಂದ ಸಾಧಿಸುವ ವಿಧಾನಗಳನ್ನು ಹೇಳಲಾಗಿದೆ; ಹಾಗೂ ಆ ನ್ಯಾಯರೀತಿಯನ್ನು ಬಿಟ್ಟು ನಡೆಯುವವರಿಗೆ ತಕ್ಕ ದಂಡನೆಯನ್ನೂ ವಿಧಿಸಲಾಗಿದೆ.[5]


"ಉಪಕಾರಾಯ ಲೋಕಸ್ಯ ತ್ರಿವರ್ಗಸ್ಥಾಪನಾಯ ಚ । ನವನೀತಂ ಸರಸ್ವತ್ಯಾ ಬುದ್ಧಿರೇಷಾ ಪ್ರಭಾವಿತಾ । ದಂಡೇನ ನಹಿ ತ್ಯಾದ್ಯೈಷಾ ಲೋಕರಕ್ಷಣಕಾರಿಕಾ। ನಿಗ್ರಾಹಾನುಗ್ರಹರತಾ ಲೋಕಾನನುಚರಿಷ್ಯತಿ ॥ ದಂಡೇನ ನೀಯತೇಚೇದಂ ದಂಡಂ ನಯತಿ ವಾ ಪುನಃ । ದಂಡನೀತಿರಿತಿಖ್ಯಾತಾ ತ್ರೀಲ್ಲೋಕಾನಭಿವರ್ತತೇ ॥"—ಅಂದರೆ, ಲೋಕೋಪಕಾರಕ್ಕಾಗಿಯೂ ಧರ್ಮಾರ್ಥಕಾಮಗಳ ಯೋಗ್ಯ ಸಾಧನೆಗಾಗಿಯೂ ರಚಿಸಿದ ಈ 'ದಂಡನೀತಿ'ಯು ಸಕಲಶಾಸ್ತ್ರಗಳನ್ನು ಮಥಿಸಿ ತೆಗೆದ ಬೆಣ್ಣೆಯಂತಿದೆ. ಕೆಟ್ಟದನ್ನು ನಿಗ್ರಹಿಸಿ, ಒಳ್ಳೆಯದನ್ನು ಅನುಗ್ರಹಿಸುವುದಕ್ಕೆ ನೆರವಾಗುವುದರಿಂದಲೇ ಇದಕ್ಕೆ ದಂಡನೀತಿ ಎಂಬ ಹೆಸರು ಬಂದಿದ್ದು, ಇದು ಮೂರುಲೋಕಕ್ಕೂ ಮಾರ್ಗದರ್ಶಕವಾಗಿದೆ. ಭೀಷ್ಮರು ಈ ರೀತಿಯಾಗಿ ದಂಡನೀತಿ ಗ್ರಂಥದ ಸಾರಸರ್ವಸ್ವವನ್ನು ಉಪದೇಶಿಸುತ್ತ, ರಾಜ್ಯ(ಸರಕಾರ)ವು ಹುಟ್ಟಿಕೊಂಡ ಮೂಲಸಂದರ್ಭವನ್ನು ವಿವರಿಸಿದ್ದಾರೆ.

## ಆದಿ ಕಾಲದಲ್ಲಿ

ಈ ಕುರಿತು ಕೂರ್ಮ ಪುರಾಣದ ೩ಂನೆಯ ಅಧ್ಯಾಯದಲ್ಲಿ ಬರುವ ವಿವರಗಳನ್ನಿಲ್ಲಿ ಎತ್ತಿ ಹೇಳುವಂತಿದೆ. ಆರಂಭ ಕಾಲವಾದ ಕೃತಯುಗವು.

"ಕೃತೇತು ಮಿಥುನೋತ್ಪತ್ತಿ:ವೃತ್ತಿ:ಸಾಕ್ಷಾದಲೋಲುಪಾ । ಪ್ರಜಾಃ ತೃಪ್ತಿ: ಸದಾ ಸರ್ವಾ: ಸರ್ವಾನಂದಾಶ್ಚಭೋಗಿನ: ॥ ಅಧಮೋತ್ತಮತ್ವಂ ನಾಸ್ತ್ಯಾಸಾಂ ನಿರ್ವಿಶೇಷಾಃ ಪುರಂಜಯಃ"

ಅಂದರೆ, ಆದಿ ಕಾಲದಲ್ಲಿ ಗಂಡು ಹೆಣ್ಣುಗಳ ಸಂಯೋಗದಿಂದ ಪ್ರಜಾವೃದ್ಧಿ ಮಾಡುವದೇ ಮುಖ್ಯವಾಗಿದ್ದಿತು. ಅದನ್ನಾದರೂ ವಿಷಯಸುಖೇಚ್ಛೆಯಿಂದ ಮಾಡುತ್ತಿದ್ದಿಲ್ಲ. ಆಗ ಸರ್ವತೂ ಸದಾ ತೃಪ್ತರೂ ಭೋಗಾನಂದಭರಿತರೂ ಆಗಿದ್ದರು. ಅವರಲ್ಲಿ ಮೇಲು - ಕೀಳೆಂಬ ಭಾವವಿಲ್ಲದೆ ಸರ್ವರು ಸಮಾನರಾಗಿದ್ದರು. ಮತ್ತು "ತುಲ್ಯಮಾಯು: ಸುಖಂ




5. ಶಾಂತಿಪರ್ವ ಅಧ್ಯಾಯ ೫೮

ರೂಪಂ, ತಾಸು ತಸ್ಮಿನ್ ಕೃತೇಯುಗೇ। ವಿಶೋಕಾಸ್ತತ್ತ್ವ ಬಹುಲಾ ಏಕಾಂತ ಬಹುಲಾಸ್ತಥಾ" (ಅಂದರೆ, ಪ್ರಜೆಗಳೆಲ್ಲರೂ ಪೂರ್ಣಾಯುಷಿಗಳೂ ಸುಖಿಗಳೂ ಸುಂದರರೂ ಆಗಿದ್ದು ಶೋಕರಹಿತರೂ ಪ್ರಾಮಾಣಿಕರೂ ತತ್ತ್ವವಿಚಾರ ಮಗ್ನರೂ ಆಗಿದ್ದರು) ಪರ್ವತೋದಧಿವಾಸಿನ್ಯೋ ಹ್ಯನೀಕೇತಾ : ಪರಂತಪ। ರಸೋಲ್ಲಾಸಃ ಕಾಲಯೋಗಾತ್ ತ್ರೇತಾಯ್ಯೇ ನಶ್ಯತಿದ್ವಿಜಾಃ॥ (ಅಂದರೆ- ಪರ್ವತ ಸಮುದ್ರ ತೀರಗಳಲ್ಲಿ ನೆಲಸುತ್ತಿದ್ದ ಅವರಿಗೆ ಮನೆಗಳೇ ಇದ್ದಿಲ್ಲ. ತ್ರೇತಾಯುಗ ಬರಲು ಅವರ ಆರಸೋಲ್ಲಾಸ ವೃತ್ತಿಯು ಕ್ಷೀಣಿಸಿತು) ಆಗಿನ ಪರಿಸ್ಥಿತಿಯನ್ನು ಕೂರ್ಮ ಪುರಾಣದ ೩೦ ನೇ ಅಧ್ಯಾಯದಲ್ಲಿ ಚೆನ್ನಾಗಿ ವರ್ಣಿಸಲಾಗಿದೆ. ಅದು ಇಂತಿರುವದು:

### ತ್ರೇತಾಯುಗದಲ್ಲಿ

ಗುಡುಗುತ್ತ ಮೇಘಗಳು ಮಳೆಗರೆಯಲು ಜಗತ್ತಿಗೆ ಮೊದಲನೆಯ ಸ್ನಾನವಾಯಿತು. ಸಸ್ಯೋತ್ಪತ್ತಿಯಾಯಿತು. ಜನರಿಗೆ ಮರಗಳ ಬುಡವೇ ಮನೆಗಳಾದವು. ಮರಗಳಿಂದ ಅವರು ಅನೇಕ ಉಪಯೋಗ ಪಡೆಯುತೊಡಗಿದರು. ಆಗ ಆ ಮರಗಳ ಸಲುವಾಗಿ ಅವರಲ್ಲಿ ಪರಸ್ಪರ ರಾಗಲೋಭಗಳುಂಟಾಗಿ ಅವುಗಳನ್ನೆಲ್ಲ ನಾಶಮಾಡಿಬಿಟ್ಟರು. ಕಾಡುಗಳೆಲ್ಲ ಕಳೆದದ್ದರಿಂದ ಮರೆಯೆಂಬುದೇ ತಪ್ಪಿಹೋಯಿತು. ಜನರು ನಗ್ನರಾಗಿ ಬೆರೆಯಲು ನಾಚಿ, ಪುನಃ ಕಾಡುಗಳನ್ನು ಬೆಳೆಸತೊಡಗಿದರು, ಮರಗಳಿಂದ ತಿನ್ನುವ ಹಣ್ಣುಗಳನ್ನೂ ತೊಗಟೆ ನಾರುಗಳಿಂದ ಮೈಮುಚ್ಚಿಕೊಳ್ಳುವ ವಸ್ತ್ರಗಳನ್ನೂ ಪಡೆದರು. ಶೀತೋಷ್ಣಗಳ ದ್ವಂದ್ವಕ್ಕೆ ಗುರಿಯಾಗಿ, ಆವರಣ ಕಟ್ಟಿಕೊಳ್ಳತೊಡಗಿದರು; ಆಹಾರೋತ್ಪಾದನಕ್ಕೆ ಸುರುಮಾಡಿದರು. ಆರಂಭದಲ್ಲಿ, ಅಡವಿಗಳಲ್ಲಿ ತಾವಾಗಿಯೇ ಬೆಳೆದ ಗಡ್ಡೆಗೆಣಸುಗಳನ್ನೇ ತಿನ್ನತೊಡಗಿದರು. ಅವಕ್ಕೆ ಆರಣ್ಯಕವೆಂಬ ಹೆಸರಾಯಿತು. ಮುಂದೆ ತಾವೇ ಬೆಳೆಸಿದ ಧಾನ್ಯಗಳನ್ನು ತಿನ್ನತೊಡಗಿದರು. ಅವು ೧೪ ಬಗೆಯವಿದ್ದುವು. ಅವಕ್ಕೆ ಗ್ರಾಮ್ಯವೆಂಬ ಹೆಸರನ್ನಿಟ್ಟರು. ಮುಂದೆ ಈ ವಸ್ತು (ಅರ್ಥ)ಗಳಿಗಾಗಿ ಜನರಲ್ಲಿ ಲೋಭ ಹೆಚ್ಚಾಗಲು, ಅವರು ನದೀತೀರ ಮತ್ತು ವಿಪುಲ ಜಲವೃಕ್ಷಗಳ ಪರ್ವತಪ್ರದೇಶಗಳನ್ನು ವಶಪಡಿಸಿಕೊಳ್ಳಲು ಪರಸ್ಪರ ಸ್ಪರ್ಧಿಸತೊಡಗಿದರು. ಜನಸಂಖ್ಯೆ ಬಹಳ ಬೆಳೆದು ಹೋಗಲು, ತಾನಾಗಿಯೇ ಬೆಳೆದಿದ್ದ ಈ ಪ್ರಾಕೃತಿಕ ಆಹಾರಗಳು ಸಾಲದಾದುವು. ಆಗ ಪೃಥುರಾಜನು ಬುದ್ಧಿಶಾಲಿಯಾದ ಬ್ರಹ್ಮನ ಮಾರ್ಗದರ್ಶನದಿಂದ ಕೃಷಿಯನ್ನು ಸುರುಮಾಡಿದನು. ಈಗ ಕೃಷಿಯೋಗ್ಯವಾದ ಭೂಮಿಗಾಗಿಯೂ ತಮ್ಮ ತಮ್ಮ ಶ್ರಮಜನ್ಯ ಫಲವನ್ನು ತಾವೇ ಅನುಭೋಗಿಸಬೇಕೆಂಬ ಲೋಭದಿಂದಾಗಿಯೂ ಜನರಲ್ಲಿ ಪರಸ್ಪರ ಅಸೂಯೆ, ಕೋಪ ಮೊದಲಾದುವು ಸುರುವಾದುವು. ಕಾಲವು ಹೀಗೆಯೇ ಮುನ್ನಡೆಯುತ್ತ ಜನರಲ್ಲಿ ಬಲಾತ್ಕಾರವು ತಲೆದೋರಿತು. ಬಲವಂತರು ತಮ್ಮ ಬಲದಿಂದ ಎಲ್ಲವನ್ನೂ ತಾವೇ ಉಪಭೋಗಿಸಲಣಿಯಾದರು. ನ್ಯಾಯನೀತಿಯ ಸದಾಚಾರವು ಮಾಯವಾಯಿತು. ಆಗ, ನ್ಯಾಯವಂತರಾದ ದುರ್ಬಲರಿಗೂ ಸುಖಸಿಗುವ ದೃಷ್ಟಿಯಿಂದ ಬ್ರಾಹ್ಮಣ ಕ್ಷತ್ರಿಯಾದಿ ನಾಲ್ಕು ವರ್ಣಗಳನ್ನು ವಿಂಗಡಿಸಲಾಯಿತು. ಮುಂದೆ, ಆ ವರ್ಣಗಳೊಳಗೆ ವೈಷಮ್ಯ ವೃದ್ಧಿಯಾಗಿ, ರಜಸ್ತಮೋಗುಣಗಳು ಹೆಚ್ಚಲಾರಂಭಿಸಿದುವು.

ಹೀಗೆ, ಆರಂಭಕಾಲದ ಚರಿತ್ರೆಯನ್ನು ಲಕ್ಷಿಸಿ ನೋಡಿದರೆ, ನ್ಯಾಯನೀತಿಯನ್ನು ನೆಲೆಗೊಳಿಸುವುದೇ ರಾಜ್ಯವೆಂದೂ ಅದಕ್ಕೆ ತಕ್ಕ ಸಲಹೆಯನ್ನೀಯುವವನೇ ಬ್ರಾಹ್ಮಣನೆಂದೂ ಆ ಸಲಹೆಯಂತೆ ತಪ್ಪಿತಸ್ಥರನ್ನು ದಂಡಿಸಿ ಹಾದಿಗೆ ತರುವವನೇ ಕ್ಷತ್ರಿಯ (ರಾಜ)ನೆಂದೂ ಸ್ಪಷ್ಟವಾಗುವದು. ಆಗ್ಗೆ ವರ್ಣ ವರ್ಣಗಳೊಳಗೆ ಶರೀರಸಂಬಂಧವಿದ್ದಿತು; ಹಾಗೂ ಹುಟ್ಟಿನಿಂದ ಎಲ್ಲರೂ ಸಮಾನಸ್ಕಂಧರಾಗಿರುತ್ತಿದ್ದರು. ಮುಂದೆ, ಆಯಾ ವರ್ಣದವರ ಗುಂಪುಗಳು ಬೆಳೆಯುತ್ತಹೋದಂತೆ, ಅವರವರ ಆಚಾರ ವಿಚಾರಗಳು ಪರಸ್ಪರ ಒಂದೇ ತೆರದವಿದ್ದುದರಿಂದ, ಆಯಾ ಗುಂಪಿನವರು ಆಯಾ ಗುಂಪಿನೊಳಗೇ ಶರೀರಸಂಬಂಧ ಬೆಳೆಸುವುದು ಹಿತಕರವೆಂಬ ತಿಳಿವಳಿಕೆಯುಂಟಾಯಿತು. ಪ್ರತಿಯೊಂದು ವರ್ಣದವರೂ ತಂತಮ್ಮ ಕ್ಷೇತ್ರಕ್ಕೇ ಪರಿಮಿತರಾಗಿ, ತಮಗೆ ಆನುವಂಶಿಕವಾಗಿ ಬಂದಿದ್ದ ಕರ್ತವ್ಯಗಳನ್ನು ಮಾಡುತ್ತ, ಒಟ್ಟು ಜನಾಂಗದ ಸುಖಸಂತೋಷಕ್ಕೆ ಧಕ್ಕೆಯಾಗದಂತೆ ಬಾಳಬೇಕೆಂಬ ತತ್ತ್ವವು ಮನ್ನಣೆ ಪಡೆಯಿತು. ಅದಕ್ಕೆ ಈಗಿನ ಕಾಲದ ನಾವು 'ಸಹಜೀವನತತ್ತ್ವ' ಎನ್ನಬಹುದು. ಆಗಿನವರು ಅದನ್ನು 'ವರ್ಣಧರ್ಮ'ವೆಂದು ಕರೆದರು.

### ವರ್ಣಧರ್ಮ—ರಾಜಧರ್ಮ

ಭೀಷ್ಮರು ಅದನ್ನೆಲ್ಲ ಚೆನ್ನಾಗಿ ಅರಿತ ಮಹಾನುಭಾವರಾದ್ದರಿಂದ ಅವರು ವರ್ಣಧರ್ಮವನ್ನು ಕಾದುಕೊಂಡು ಬರುವುದೇ ರಾಜಧರ್ಮವೆಂದು ಸಾರಿದರು. ಸಹಜೀವನವೆಂಬುದಕ್ಕೆ "ಜನಹಿತಕರವಾದ ಒಳ್ಳೆಯ ಆಚಾರವಿಚಾರಗಳ ಸಹಜೀವನ" ಎಂದೇ ತಿಳಿಯಬೇಕು. ಇಲ್ಲವಾದರೆ, ದರೋಡೆಗಾರರು ತಮ್ಮ ಕಾರ್ಯವನ್ನು ನಡೆಸಲು ತಮಗೆ ಸಹಜೀವನತತ್ತ್ವವೇ ಆಧಾರವೆಂದೂ ಆದ್ದರಿಂದ ತಮಗೆ ಯಾರೂ ಅಡ್ಡ ಬರಬಾರದೆಂದೂ ಹೇಳಿಬಿಡಬಹುದು! ಜನಹಿತಕ್ಕೆ ಅನಿಷ್ಟಕರವಾದ ಎಷ್ಟೋ ಸಾಮಾಜಿಕ ರೂಢಿಗಳನ್ನು ಹಾಗೆಯೇ ನಡೆಯಗೊಡುವುದೇ ಸಹಜೀವನವೆಂದು ವಾದಿಸಿ ಬಿಡಬಹುದು. ಸತೀ ಹೋಗುವುದು, ನರಬಲಿ ಕೊಡುವುದು, ಬಹುಪತ್ನೀತ್ವ ನಡೆಸುವುದು, ವಿಧವಾ ವಿವಾಹ ನಿಷೇಧಿಸುವುದು—ಮೊದಲಾದುವನ್ನೆಲ್ಲ ನಡೆಯಗೊಡಬೇಕೆಂದೂ ಅದು "ಸಹಜೀವನ"ದ ನೀತಿಯೆಂದೂ ಹಟಹಿಡಿಯಬಹುದು. ಪ್ರತಿಯೊಂದು ವರ್ಣಕ್ಕೂ ಅದರದರ ವಿಶಿಷ್ಟ ಕರ್ತವ್ಯಾಧಿಕಾರಗಳಿರುವುದನ್ನು ಭೀಷ್ಮರು ಬಹು ರಸವತ್ತಾಗಿ ವಿವರಿಸುತ್ತಾರೆ; ಹಾಗೂ ಅವುಗಳಿಗೆ ಚ್ಯುತಿಬರದಂತೆ ರಾಜನು (ಅರ್ಥಾತ್ ಸರಕಾರದ ಮುಖ್ಯಸ್ಥನು) 'ದಂಡನೀತಿ'ಯನ್ನು ಅನುಸರಿಸಬೇಕೆನ್ನುತ್ತಾರೆ. ಜನ್ಮಾಂತರಗಳಲ್ಲಿ ನಂಬಿಕೆಯುಳ್ಳವರಾಗಿದ್ದ ಭೀಷ್ಮರು, ಮನುಷ್ಯನ ಕರ್ಮಾಕರ್ಮಗಳಿಗೆಲ್ಲ ಹಿಂದಣ ಜನ್ಮದ ವಾಸನೆಯೇ ಕಾರಣವೆಂದು ಹೇಳಿ, ಎಲ್ಲವನ್ನೂ 'ದೈವ' (Fate) ದ ಮೇಲೆ ಹೇರಹೋಗುವುದಿಲ್ಲ. ಆದ್ದರಿಂದಲೇ ಅವರು ಧರ್ಮರಾಜನಿಗೆ ಉಪದೇಶಾರಂಭದಲ್ಲಿಯೇ ಹೀಗೆನ್ನುತ್ತಾರೆ:—[6]

"ಸಾಧಾರಣಂ ದ್ವಯಂ ಹ್ಯೇತದ್ದೈವಮುತ್ಥಾನಮೇವಚ।
ಪೌರುಷಂ ಹಿ ಪರಂ ಮನ್ಯೇ ದೈವಂ ನಿಶ್ಚಿತಮುಚ್ಯತೇ॥

6. ಶಾಂತಿಪರ್ವ ೫೬ ನೇ ಅಧ್ಯಾಯ.

ಸಹ್ಯುತ್ಥಾನಮೃತೇ ದೈವಂ ರಾಜ್ಞಾಂ ಅರ್ಥಂ
ಪ್ರಸಾದಯೇತ್!

ಉತ್ಥಾನೇನ ಸದಾ ಪುತ್ರ ಪ್ರಯತೇಥಾ ಯುಧಿ
ಷ್ಠಿರ॥

(ಅಂದರೆ- ಲೋಕದಲ್ಲಿ ದೈವ-ಪೌರುಷಗಳೆಂಬ ಎರಡು ಬಗೆಯ ಪ್ರಯತ್ನಗಳನ್ನು ಹೇಳುತ್ತಾರಾದರೂ ದೈವಕ್ಕಿಂತ ಪುರುಷಪ್ರಯತ್ನವೇ ಹೆಚ್ಚಿನದು. ರಾಜನಾದವನು ಸದಾ ಪುರುಷ ಪ್ರಯತ್ನದಿಂದಲೇ ನಡೆಯಬೇಕು.) ತಮ್ಮ ದುಷ್ಕರ್ಮ ಪ್ರವೃತ್ತಿಗೆ ದೈವವೇ ಕಾರಣವೆಂದು ಹೇಳಿ ಜನರು ಸತ್ಕರ್ಮದ ಅವಶ್ಯಕತೆಯನ್ನೇ ಕಡೆಗಣಿಸುವ ಸಂಭವವಿರುತ್ತದಲ್ಲವೆ? ಜನರಲ್ಲಿ ಮುಖ್ಯನಾದ, ಅರ್ಥಾತ್ ಪ್ರಪ್ರಥಮ ಪ್ರಜೆ ( First-citizen ) ಯಾದ ಅರಸನು (ಅಥವಾ, ಪ್ರಜಾಸತ್ತೆಯಲ್ಲಿ, ಮುಖ್ಯಮಂತ್ರಿಯು ಅಥವಾ ರಾಷ್ಟ್ರಪತಿಯು) ತಾನೇ 'ದೈವ' ದ 'ಪುರುಷ' ಪ್ರತಿನಿಧಿಯಾಗಿ ನಡೆಕೊಳ್ಳಬೇಕು. ಆದ್ದರಿಂದಲೇ ಭೀಷ್ಮರು ('ರಾಜಾಕಾಲಸ್ಯ ಕಾರಣಂ') ಕಾಲ ಕೆಡಲಿಕ್ಕೂ ಒಳ್ಳೆಯದಾಗಲಿಕ್ಕೂ ರಾಜನೇ ಕಾರಣನೆಂದು ಹೇಳುತ್ತಾರೆ. "ರಾಜಾಪ್ರತ್ಯಕ್ಷ ದೇವತಾ" (ರಾಜನೇ ಕಣ್ಣೆದುರಿಗಿರುವ ದೇವರು) "*King can do no wrong*" (ರಾಜನೆಂದಿಗೂ ತಪ್ಪು ಮಾಡನು) "ಯಥಾ ರಾಜಾ ತಥಾ ಪ್ರಜಾಃ" (ರಾಜನೆಂತೊ ಅಂತೆ ಪ್ರಜೆಗಳು) ಎಂಬೀ ಮಾತುಗಳು ರೂಢಿ ವಡೆದಿರುತ್ತವೆ.

## ವರ್ಣಾಶ್ರಮ ಧರ್ಮ

ರಾಜ ಅಥವಾ ಆಡಳಿತ ನಡೆಸುವವನು ಸಮಾಜದ ಸುವ್ಯವಸ್ಥೆಯು, (ಅರ್ಥಾತ್ ವರ್ಣವ್ಯವಸ್ಥೆಯು) ಕೆಡದಂತೆ ನೋಡುವುದೇ ರಾಜ್ಯದ ಅಭಿವೃದ್ಧಿಯೆನಿಸುವುದು. ವರ್ಣವ್ಯವಸ್ಥೆಯಲ್ಲಿ ಬ್ರಾಹ್ಮಣನಿಗೆ ಪ್ರಥಮಸ್ಥಾನವು ಕೊಡಲ್ಪಟ್ಟಿದೆಯಷ್ಟೆ.[7] ಆ ಬ್ರಾಹ್ಮಣನ ಗುಣ ಲಕ್ಷಣಗಳನ್ನು ಭೀಷ್ಮರು ನಿಸ್ಸಂಧಿಗ್ಧವಾದ ಮಾತುಗಳಲ್ಲಿ ಹೇಳುತ್ತಾರೆ:— ಸಿಟ್ಟಿಲ್ಲದಿರುವುದು, ಸತ್ಯ ಹೇಳುವುದು, ದಾನಶೀಲನಾಗಿರುವುದು, ಸ್ವಭಾರ್ಯೆಯಲ್ಲೇ ಆಸಕ್ತನಾಗಿರುವುದು, ಶುಚಿಯಾಗಿರುವುದು, ದ್ರೋಹಮಾಡದಿರುವುದು, ಆಶ್ರಿತರನ್ನು ಕೈ ಬಿಡದಿರುವುದು— ಇವು ಎಲ್ಲ ವರ್ಣದವರಿಗೂ ಸಮಾನವಾದ ಸದಾಚಾರಗಳಾಗಿದ್ದರೆ, ಬ್ರಾಹ್ಮಣನಿಗೆ, ಇಂದ್ರಿಯನಿಗ್ರಹ, (ದಮ), ವೇದಾಧ್ಯಯನ, ಅನ್ಯರಿಗೆ ವೇದ ಓದಿಸುವುದು, ಶಾಂತನಾಗಿ ಜ್ಞಾನಾರ್ಜನೆಯಲ್ಲೇ ಇದ್ದು, ಅನ್ಯವರ್ಣಗಳ ವೃತ್ತಿಗೆ ಹೋಗದೆ, ಸ್ವಧರ್ಮದಲ್ಲೇ ನಿರತನಾಗಿ ಸಕಲರ 'ಮೈತ್ರ' ನಾಗಿರುವದು ಮುಖ್ಯ ಕರ್ತವ್ಯವಾಗಿದೆ.[8] ಬ್ರಾಹ್ಮಣನಾದವನು,

"ಜ್ಯಾಕರ್ಷಣಂ ಶತ್ರುನಿಬರ್ಹಣಂಚ
ಕೃಷಿರ್ವಣಿಜ್ಯಾ ಪಶುಪಾಲನಂಚ।
ಶುಶ್ರೂಷಣಂ ಚಾಪಿ ತಥಾರ್ಥಹೇತೋಃ
ಅನಾರ್ಯಮೇತತ್ ಪರಮಂ ದ್ವಿಜಸ್ಯ॥"
ಸೇವ್ಯಂತು ಬ್ರಹ್ಮಷಟ್‌ಕರ್ಮ ಗೃಹಸ್ಥೇನ ಮನೀಷಿಣಾ।
ಕೃತಕೃತ್ಯಸ್ಯಚಾರಣ್ಯೇ ವಾಸೋವಿಪ್ರಸ್ಯಶಸ್ಯತೇ॥
ರಾಜಪ್ರೇಷ್ಯಂ ಕೃಷಿಧನಂ ಜೀವನಂಚ ವಣಿಕ್ಪಥಾ॥
ಕೌಟಿಲ್ಯಂ ಕೌಲಟೇಯಂಚ ಕುಸೀದಂಚ ವಿವರ್ಜಯೇತ್॥
ಶೂದ್ರೋ ರಾಜನ್ ಭವತಿ ಬ್ರಹ್ಮ ಬಂಧುಃ
ಶ್ಚಾರಿತ್ರೋ ಯಶ್ಚ ಧರ್ಮಾದಪೇತಃ॥
ಏತೇಸರ್ವೇ ಶೂದ್ರಸಮಾಭವಂತಿ."

ಸೈನಿಕನಾಗಿ ಯುದ್ಧ ಮಾಡುವುದು, ಶತ್ರುಗಳನ್ನು ಕೊಲ್ಲುವುದು, ವ್ಯವಸಾಯ, ವ್ಯಾಪಾರ, ಮೃಗಜಾತಿಗಳನ್ನು ಸಾಕುವುದು, ಧನಾರ್ಜನೆಗಾಗಿ ನೌಕರಿಮಾಡುವುದು, ರಾಜಾಸ್ಥಾನದಲ್ಲಿ ಕೆಲಸಕ್ಕೆ ಸೇರುವುದು, ವಂಚನೆ, ವ್ಯಭಿಚಾರ ಮಾಡುವುದು—ಇವೇ ಮೊದಲಾದ ಕಾರ್ಯಗಳನ್ನು ಸರ್ವಥಾ ಕೈಕೊಳ್ಳಕೂಡದು. ಅಂಥವನು ಬ್ರಾಹ್ಮಣನಾಗಿ ಹುಟ್ಟಿದರೂ ಶೂದ್ರನೇ.[9] ಆಪದ್ಧರ್ಮವೆಂದು ಬ್ರಾಹ್ಮಣನಾದವನು, ವೈಶ್ಯವೃತ್ತಿ ಮಾಡಬಹುದು; ಆದರೆ,

"ಸುರಾಲವಣಮಿತ್ಯೇವ ತಿಲಾನ್ ಕೇಸರಿಣಃ
ಪಶೂನ್।
ವೃಷಭಾನ್ ಮಧು ಮಾಂಸಂಚ ಕೃತಾನ್ನಂಚ
ಯುಧಿಷ್ಠಿರ॥
ಸರ್ವಾಸ್ವವಸ್ಥಾಸ್ವೇತಾನಿ ಬ್ರಾಹ್ಮಣಾಃ
ಪರಿವರ್ಜಯೇತ್।
ಏತೇಷಾಂ ವಿಕ್ರಯಾತ್ ತಾತ ಬ್ರಾಹ್ಮಣೋ
ನರಕಂ ವ್ರಜೇತ್"॥

ಎಂತಹ ಕೆಡುಗಾಲಬಂದರೂ ಆತನು, ಸುರೆ, ಉಪ್ಪು, ಎಳ್ಳು, ಕುದುರೆ, ಆಕಳು, ಎತ್ತು, ಜೇನು, ಮಾಂಸ ಪಕ್ವಾನ್ನಗಳು— ಇವನ್ನು ಸರ್ವಥಾ ಮಾರಬಾರದು. ಹಾಗೆ ಮಾರುವ ಬ್ರಾಹ್ಮಣನು ನರಕಭಾಜನನಾಗುವನು ಎಂದು ಭೀಷ್ಮರು ನಿರ್ದೇಶಿಸುತ್ತಾರೆ. ಆದರಿಂದು ಬ್ರಾಹ್ಮಣನು ಇವೆಲ್ಲ ನಿಷಿದ್ಧ ಕೆಲಸ ಕಾರ್ಯಗಳನ್ನು ಮಾಡುವ ದುರ್ಧರಪ್ರಸಂಗ ಬಂದಿದೆ. ಬ್ರಾಹ್ಮಣನು ಹೀಗೆ ಮಾಡಹತ್ತಿದ ಬಳಿಕ ಇತರ ವರ್ಣದವರೂ ಸ್ವೋಚಿತ ಕರ್ಮಗಳನ್ನು ಬಿಟ್ಟದ್ದರಲ್ಲಿ ಆಶ್ಚರ್ಯವಿಲ್ಲ.

ತಲೆಗೊಂದು ಮತದ ಪ್ರಜಾಪ್ರತಿನಿಧಿತ್ವವು ಆನುವಂಶಿಕ ರಾಜತ್ವದ ಸ್ಥಾನದಲ್ಲಿ ವಿರಾಜಿಸುತ್ತಿದೆಯಾದ್ದರಿಂದ ಪ್ರತಿಯೊಬ್ಬನೂ ತನಗೆ ತಾನೇ ರಾಜ, ತನಗೆ ತಾನೇ ಪ್ರಜೆಯಾಗಿದ್ದಾನೆ. ಆದರೆ, ಭೀಷ್ಮರು ಬೋಧಿಸಿದ್ದ ಸದಾಚಾರ ಸದ್ವೃತ್ತಿಗಳ ಅನುಷ್ಠಾನವಿಲ್ಲದೆ, ಪ್ರಜಾಸತ್ತೆಯು ಬಲಾತ್ಕಾರಕ್ಕೂ ಸ್ವೈರವೃತ್ತಿಗೂ ಆಮಂತ್ರಣವೀಯುತ್ತಿದೆ.

ಹೀಗೆ ನಡೆಯುವುದೇ ಪ್ರಗತಿಯ ಚಿಹೆ ಎಂದೂ ಅದನ್ನು ಬಲಗೊಳಿಸುವುದೇ ಜನಾಂಗದ ಸುಖಾಭಿವೃದ್ಧಿಯೆಂದೂ ಕಾರವೂ ಜನತಾ ಮುಖಂಡರೂ ಬೋಧಿಸುತ್ತಿದ್ದಾರೆ. ಅವರ ಆದರ್ಶಗಳನ್ನನುಸರಿಸಿ, ಇತರರೆಲ್ಲರೂ ನಡೆಯತೊಡಗುತ್ತಾರೆ. ಹಾಗೆ ಮಾಡುವವರು ವೇದ, ಉಪನಿಷತ್ತು, ಪುರಾಣಗಳ ಲೋಕನೀತಿ - ದಂಡನೀತಿಗಳ ಶ್ರೇಷ್ಠತೆಯನ್ನೆತ್ತಿಕೊಂಡಾಡುವುದು ಮಾತ್ರ ವಿಸಂಗತವೆನಿಸುವುದು! ಮಹಾತ್ಮಾ ಗಾಂಧಿಯವರು ಕಣ್ಮರೆಯಾಗಿ ಇನ್ನೂ ಹನ್ನೆರಡು ವರ್ಷವಾಗಿಲ್ಲ, ಅಷ್ಟರೊಳಗೇ ಅವರು ಬೋಧಿಸಿದ್ದ, 'ಉದಾತ್ತನೀತಿಯ ಸಾದಾಜೀವನ' ವನ್ನು ಅವರ ಅನುಯಾಯಿಗಳೇ ಗಾಳಿಗೆ ತೂರಿಬಿಟ್ಟಿದ್ದಾರೆ! ಲೌಕಿಕ ಸಂಪದಧಿಕಾರಗಳೇ ಜೀವಿತದ ಸರ್ವಸ್ವವೆಂಬ ಚಾರ್ವಾಕಸಿದ್ಧಾಂತವನ್ನು ಆಚರಣೆಗೆ ತರುತ್ತಿದ್ದಾರೆ. ಹೊಸ ಸಮಾಜದ ನಿರ್ಮಿತಿಯ ಹೆಸರಿನಲ್ಲಿ, ಧರ್ಮದ ಪುನರುತ್ಥಾನದ ಸೋಗಿನಲ್ಲಿ ವಿಪ್ಲವಕಾರಕ ಪರಿಸ್ಥಿತಿಯೇ ಬಲಿಯುತ್ತ ಬರುತ್ತಿದೆ; ಮತ್ತೊಂದು ಮಹಾಭಾರತ ಯುದ್ಧಕ್ಕೆ ಸಿದ್ಧತೆ ನಡೆದಂತೆ ಭಾಸವಾಗುತ್ತದೆ. ಆದರೆ, ಮತ್ತೊಬ್ಬ ಭೀಷ್ಮಾಚಾರ್ಯರು ಮಾತ್ರ ಕಾಣದಾಗಿದ್ದಾರೆ!

7. ಶಾಂತಿಪರ್ವ ೬೩ ನೇ ಅಧ್ಯಾಯ.

8. ಶಾಂತಿಪರ್ವ ೬೩ನೇ ಅಧ್ಯಾಯ.

9. ಶಾಂತಿಪರ್ವ ೭೮ ನೇ ಅಧ್ಯಾಯ.



ದಕ್ಷಿಣ ಭಾರತದ ಧರ್ಮಾಪುರದ ಮಹಾಲಕ್ಷ್ಮಿ — ದುರ್ಗಾದೇವಿಯ ಸುಂದರ ಮೂರ್ತಿ

ಅಷ್ಟಾದಶ ಭುಜಗಳಲ್ಲಿ ಒಂದೊಂದರಲ್ಲಿ ಒಂದೊಂದು ಆಯುಧ ಹಿಡಿದಿರುವಳು.
ಮಹಿಷನ ತಲೆಯ ಮೇಲೆ ಕಮಲದಲ್ಲಿ ನಿಂತಿರುವಂತೆ ದೇವಿವಿಗ್ರಹವನ್ನು ಕೆತ್ತಲಾಗಿದೆ.
ನವರಾತ್ರಿಯಲ್ಲಿ ಇಲ್ಲಿ ಚಂಡಿಹೋಮ ನಡೆಯುವದು.

ಫೋಟೊ : ಎನ್. ರಾಮಕೃಷ್ಣ ಮಯೂರನ್.

# ಸರಸ್ವತಿಯು ನೀರು-ನೆಲೆ

ಲೇಖಕರು: ಸತ್ಯಕಾಮ

ಇಂದು ವಿದ್ಯಾಧಿದೇವತೆಯೆನಿಸಿದ ಸರಸ್ವತಿ ವೇದಕಾಲದಲ್ಲಿ ಶಕ್ತಿಸ್ವರೂಪಳೇ ಆಗಿದ್ದಳು; ವಿಶ್ವದ ಮಹಾಮಾತೆಯಾಗಿದ್ದಳು. ವಾಕ್ ಎಂಬುದು ಅವಳ ಆದಿ ಸ್ವರೂಪ–ಸೃಷ್ಟಿ. ಕಾಲದ ಸೆಳವಿನಲ್ಲಿ ಸಿಕ್ಕ ನೀರಾದವಳು, ಬ್ರಹ್ಮನ ರಾಣಿಯಾದವಳು. ಅವಳು 'ರಸೈ'ಕಬೋಧನಪರಳು. ಶ್ರೀಅರವಿಂದರೂ ಮಹಾಸರಸ್ವತಿಯ ಸ್ವರೂಪವನ್ನು ಬಹು ನವೀನವಾಗಿ ಚಿತ್ತಗ್ರಾಹ್ಯವಾಗುವಂತೆ ಹೇಳಿದ್ದಾರೆ. ಸರಸ್ವತಿಯ ವಿವಿಧ ಮುಖಗಳ ಪರಿಚಯವನ್ನು ಲೇಖಕರು ಇಲ್ಲಿ ಮಾಡಿಕೊಟ್ಟಿರುವರು.

ಎಲ್ಲರಿಗೂಒಳ್ಳೆಯ ಸ್ತೋತ್ರಗಳನ್ನುಕೊಟ್ಟ ದೇವತೆಗೇ ಯಾರೂ ಬಹಳಷ್ಟು ಸ್ತೋತ್ರ ಕೊಡಲಿಲ್ಲವೆಂಬುದು ವಿಚಿತ್ರವಲ್ಲವೆ? ಈ ವಿಚಿತ್ರದೇವತೆಯಾದ ಸರಸ್ವತಿ ಇನ್ನೂಹಲವು ವೈಚಿತ್ರ್ಯಗಳ ಆಗರವಾಗಿದ್ದಾಳೆ. ಆರಂಭದಲ್ಲಿ ಆಪೋದೇವತೆಯಾಗಿ ಬಂದ ಇವಳು ಪುರಾಣದಲ್ಲಿ ಬ್ರಹ್ಮನ ಕೈಹಿಡಿದ ರಾಣಿಯಾದಳು. ನೀರಿಗೆ ನೆಲೆಯಾದವಳು ವಿದ್ಯೆಗೆ ಆಸರಳಾಗಿ ನಿಂತಳು. ಯಾರು ಇವಳನ್ನು ನೀರು ಬಿಡಿಸಿ ಬ್ರಹ್ಮನ ಅಡುಗೆಯ ಮನೆಗೆ ಅಟ್ಟಿದ್ದು? ವಿಧಾತನ ಜತೆಗೆ ಇವಳ ಬ್ರಹ್ಮಗಂಟು ಯಾರು ಹಾಕಿದರು? ಅಥವಾ ಇದು ವರ್ಣಮಾಲೆ ಬಂದ ಯಾರದಾದರೂ ಕೈಗಂಟೆ? ಇದೆಲ್ಲವೂ ಒಂದು ಬಿಚ್ಚಲಾರದ ಗಂಟಿನಷ್ಟು ಬಿಗಿ ಇದೆ.

ಸರಸ್ವತಿ ಆಪೋದೇವತೆಯಾಗಿದ್ದಾಗಲೂ ಮಾತಿಗೂ ಅವಳಿಗೂ ಸಂಬಂಧವಿತ್ತು. ಏಕೆಂದರೆ ಅನೇಕ ಋಷಿಗಳು ಸರಸ್ವತಿಯನ್ನು ಕುರಿತು ಒಳ್ಳೆ ಸ್ತೋತ್ರಗಳನ್ನು ಕರುಣಿಸುವಂತೆ ಕೇಳಿದ್ದಾರೆ. ಇದೇನು ಚಮತ್ಕಾರವಲ್ಲವೆನ್ನಿಸಬಹುದು. ಹೀಗೆ ಕೇಳುವಾಗ ಅವಳು ವಿಧಾತನ ಪೂರ್ವಪತ್ನಿಯಾಗಿರಲಿಲ್ಲ. ಇದಕ್ಕಿಂತ ಸ್ವಲ್ಪ ಕವಲು ಸಾಗಿದಾಗ ಅನೇಕ ಆಪೋದೇವತಾಸ್ತುತಿಪ್ರಸಂಗದಲ್ಲಿ ನಮಗೆ ಸುಂದರ ಸ್ತೋತ್ರಗಳನ್ನು ಕರುಣಿಸೆಂದು ಬಂದಿದ್ದು ತಿಳಿಯುವುದು. ಇದು ಬಿಸವಂದವಲ್ಲವೆ?

ಒಂದು ದೃಷ್ಟಿಯಿಂದ ನೀರಿಗೂ ಮಾತಿಗೂ ಬಹಳ ಹಿಂದೆಯೇ ಬಿಡಲಾರದ ನಂಟು ಇದ್ದಿರಬೇಕು! ಇಂದಿನ ಜಗತ್ತನ್ನು ಹುಟ್ಟಿಸುವ ಕೆಲಸದ ಮೇಲಿದ್ದ ಪುರಾಣಪ್ರಸಿದ್ಧ ನಾಲ್ಕು ತಲೆಯ ಬ್ರಹ್ಮನು ಬಹಳ ಹಿಂದಿನ ಕಾಲದಲ್ಲಿ ಮತ್ತಾವುದೋ ಕೆಲಸದಲ್ಲಿರಬೇಕು. ಪುರಾಣದ ಪ್ರಪಂಚ ಆರಂಭವಾದಾಗ ವೈದಿಕ ದೇವತೆಗಳು ಬೇರೆ ಶಾಖೆಗಳಿಗೆ ವರ್ಗಾಯಿಸಲ್ಪಟ್ಟುದೂ ಆಶ್ಚರ್ಯವಿಲ್ಲ. ಈ ಬದಲಾವಣೆ ತೀರಸಂಕೇತರಹಿತವೂ ಆಗಿಲ್ಲ. ಬ್ರಹ್ಮನು ವೇದದಲ್ಲಿ ವಾಗ್ದೇವತಾರೂಪನೇ ಆಗಿದ್ದ. ಬ್ರಹ್ಮ ಎಂಬ ದೇವತೆ ವೇದದಲ್ಲಿ ಇಲ್ಲವಾದರೂ ಬ್ರಹ್ಮಣಸ್ಪತಿ ಇದ್ದಾನೆ. ಈ ಬ್ರಹ್ಮಣಸ್ಪತಿ ಒಂದು ದೃಷ್ಟಿಯಿಂದ ಆಪೋದೇವತೆಯ ಗಣಕ್ಕೆ ಸೇರಿದವ. ಶಬ್ದಕ್ಕೂ ಬ್ರಹ್ಮ-ಬ್ರಹ್ಮಣಸ್ಪತಿಗೂ ನಾಂತರೀಯಕತೆ ಇದೆ. ಸರಸ್ವತಿ— ಹಾಗು ಬ್ರಹ್ಮರನ್ನು ಒಂದೇ ಕಡೆಗೆ ಸ್ತುತಿಸಿದ ದೃಷ್ಟಾಂತ ವೇದದಲ್ಲಿ ಅಪರೂಪವೆನ್ನುವಷ್ಟು ಅಲಭ್ಯವಾಗಿದೆ. ಆದರೂ ಕಣ್ವನು ತನ್ನ ಪ್ರಸಿದ್ಧ ಸೂಕ್ತದಲ್ಲಿ "ಪ್ರೈತು ಬ್ರಹ್ಮಣಸ್ಪತಿಃ ಪ್ರ ದೇವ್ಯೇತು ಸೂನೃತಾ" ಬ್ರಹ್ಮಣಸ್ಪತಿ-ಸರಸ್ವತಿಯರನ್ನು ಕರೆಯುತ್ತಾನೆ. ವಿಶ್ವಾಮಿತ್ರ ಗೃತ್ಸಮದರು ಬ್ರಹ್ಮನನ್ನು 'ವಾಕ್' ಎಂದೇ ಬಳಸಿದ್ದಾರೆ. "ವಿಶ್ವಾಮಿತ್ರಸ್ಯ ಬ್ರಹ್ಮೇದಂ ರಕ್ಷತಿ ಭಾರತಂ ಜನಂ" ವಿಶ್ವಾಮಿತ್ರನ ಈ ಮಾತು ಭಾರತದ ಜನತೆಯನ್ನು ಕಾಪಾಡುತ್ತಿದೆ. ಒಂದು ದೃಷ್ಟಿಯಿಂದ ಬ್ರಾಹ್ಮೀವಾಕ್-ಮಂತ್ರ— ಈ ಬ್ರಹ್ಮಣಸ್ಪತಿಯಿಂದಲೇ ಆವಿರ್ಭವಿಸಿತೆಂಬುದು ಗೃತ್ಸಮದ ಸಿದ್ಧಿಯ ಅನುನಯವಾಗಿದೆ.

## ಶಕ್ತಿರೂಪಳು

ಅಂತೂ ವೇದದಲ್ಲಿ ಬ್ರಹ್ಮನಿಲ್ಲದಿದ್ದರೂ ಬ್ರಹ್ಮಣಸ್ಪತಿ ಇದ್ದ. ಅವನಿಗೆ ಶಕ್ತಿರೂಪಳಾಗಿ ಸರಸ್ವತಿ ಇದ್ದಳು. ಮೂಲತಃ ಇವರಿಬ್ಬರೂ ಆಪೋದೇವತೆಗಳ ಕುಲಕ್ಕೆ ಸೇರಿದವರೇ ಸರಿ! ವಾಗಂಭ್ರಣೀ ಸೂಕ್ತದಲ್ಲಿ "ಮಮ ಯೋನಿರಪ್ಸು" ಎಂದು ಸ್ವತಃ ಹೇಳುತ್ತಾಳೆ ವಾಕ್.

'ಸರಸ್ವತಿಯು' ಆಪೋದೇವತೆಯಾಗಿದ್ದಳೆಂದೇ ವಿದ್ಯೆಗೆ ಅಧಿಷ್ಠಾತ್ರಿಯಾದಳು. ವಿದ್ಯೆಯು ಅಮೃತಕ್ಕಾಗಿ ಇದೆ. "ಸಾ—ವಿಮುಕ್ತಯೇ" ಅಮೃತವು ನೀರಿನಲ್ಲಿಯೇ ಇದೆ. ಮೇಧಾತಿಥಿ "ಅಪ್ಸು ಮೇ ಸೋಮೋ ಅಬ್ರವೀದಂತರ್ವಿಶ್ವಾನಿ ಭೇಷಜಂ" ಈ ನೀರಿನಲ್ಲಿ ಅಮೃತವಿದೆ ಎಂದು ಸೋಮ ಹೇಳಿದನು ಎನ್ನುತ್ತಾನೆ. "ಆಪೋ ವಾ ಅಮೃತಂ" ಎಂಬುದು ಶತಪಥವಚನವು.

'ರಸ' ತತ್ತ್ವವು ಪರಮವು. 'ರಸೋ ವೈ ಸಃ' ಅವನು ರಸರೂಪನೇ ಎಂಬುದು ತೈತ್ತಿರೀಯಶ್ರುತಿ. ಸರಸ್ವತಿಯು ರಸಸಹಿತಳು. ಜಲವು ಅಮೃತದ ಪ್ರತೀಕ ಸರ್ವಜೀವರಸದ ಸ್ಥೂಲಸಂಕೇತ ಅಷ್ಟೆ! ಒಮ್ಮೆ ಮೇಧಾತಿಥಿ ಪ್ರಾರ್ಥಿಸುತ್ತಾನೆ.

"ಆಪೋ ಅದ್ಯಾನ್ವಚಾರಿಷಂ
ರಸೇನ ಸಮಗ ಸ್ಮಹಿ
ಪಯಸ್ವಾನಗ್ನ ಆಗಹಿ
ತಂ ಮಾ ಸಂ ಸೃಜ ವರ್ಚಸಾ"

"ಇಂದು ನಾನು ನೀರಿನೊಳಹೊಕ್ಕಿದ್ದೇನೆ, ನೀರ ಮಿಂದು ನಿಂತಿದ್ದೇನೆ. ಓ ಅಗ್ನಿ! ಜಲದಲ್ಲಿ ಇರುವ ನೀನು ಎದ್ದು ಬಾ, ನಿನ್ನಂತೆ ಮಿಂದ ನನ್ನನ್ನೂ ಬೆಳಗಿಸು. ನನ್ನೊಳಗೆ ಒಡಮೂಡು ಬಾ." ಮೇಧಾತಿಥಿಯ ಈ ಸೂಕ್ತದ ಹಿನ್ನೆಲೆ, ಅಲ್ಲಿಯ ಆಪೋದೇವತೆಯ ವ್ಯಾಪ್ತಿ, ಅಗ್ನಿಗೆ ಅಲ್ಲಿರುವಶಕ್ಯತೆ, ಅಗತ್ಯ ಇವುಗಳೆಲ್ಲವನ್ನು ಮನದಂದರೆ ಸರಸ್ವತಿ ವಿಶ್ವದ ಮಹಾಮಾತೆ ಎನ್ನುವುದು ಸುಸ್ಪಷ್ಟವಾಗುವುದು. ಸರಸ್ವತಿಯನ್ನು ಹಾಡುವಾಗ ಋಷಿಗಳು—

"ಅಂಬಿತಮೇ ದೇವೀತಮೇ
ನದೀತಮೇ ಸರಸ್ವತಿ."

ಎಂದೇ ಸ್ತುತಿಸುತ್ತಾರೆ. ದೇವತೆಗಳ ಆದಿಮಾತೃಸ್ವರೂಪಿಯಾದ ಅದಿತಿಗೆ ಈ ಸರಸ್ವತಿ ಸ್ನೇಹಭಾಜನಳು. ಕುತ್ಸನು ಇವಳನ್ನು 'ಮಾತೃತಮಾ' ಎಂದು ಹಿಗ್ಗಿನಿಂದ ಹಾಡ ಹತ್ತಿ ನಮ್ಮ ಇಷ್ಟಸಿದ್ಧಿಗಾಗಿ ದೇವತೆಗಳನ್ನು ಕರೆಯಲು ಒಳ್ಳೆಯ ಸ್ತೋತ್ರಗಳನ್ನು ಕೊಡುವವಳು ಎಂದು ಹೇಳುತ್ತಾನೆ. ಕಾಣ್ವನಾದ ಮೇಧಾತಿಥಿಯು ಅಥರ್ವಋಷಿಯಂತೆ

"ಅಂಬಯೋ ಯಂತ್ಯಧ್ವರೀಭಿ" ಎಂದು
"ಜಲವು ತಾಯಿ, ಈ ನೀರು ತಾಯಿ
ಆ ನೀರೆ ಕೂಡ ತಾಯಿ"

"ಆಪೋವಾ ಅಂಬಯಃ"

ಕೌಷೀತಕಿ ಉದ್ಗರಿಸುತ್ತಾನೆ. ಮಾತೃತ್ವವು ಸರಸ್ವತಿಯ ಆದಿಲಕ್ಷಣವಾಗಿದೆ. ಜನಿ-ಜನ್ಮ-ಹುಟ್ಟು ಎಂಬುದೆಲ್ಲವೂ ನೀರಿನಿಂದಲೇ

ಬಂದುದು ಎಂದು ಪುರುಕುತ್ಸನ ಅಭಿಪ್ರಾಯ. ಸೃಷ್ಟಿ ಎನ್ನುವುದರ ತಾಯಿ ಈ ಸರಸ್ವತಿ. ಆಕಾಶದಿಂದ ಪ್ರಥಮ ಶಬ್ದ ಜನಿಸಿ ಆ ಮೂಲಕ ಪ್ರಪಂಚವೆಲ್ಲವೂ ಪ್ರಸ್ತಾರಗೊಂಡಿತು ಎಂಬುದು ಆರ್ಯರಾಜನಾದ ವಿಮದನ ಮತ. ಈ ಸರ್ವಮತಗಳ ಸಮಾಲೋಚನೆಯು ಸರಸ್ವತಿಯ ವಿಶಾಲ ವ್ಯಾಪ್ತಿಯನ್ನು ಹೇಳುತ್ತಿದೆ.



### ವಾಕ್–ಸರಸ್ವತಿ

ಜಲವು-ರಸದ ಸಂಕೇತವಾಗಿ ರಸವು ಪರಮಾತ್ಮನ ಸ್ವರೂಪವಾಗಿ ಜಗತ್ಕಾರಣವಾಗಿರುವಾಗ ಸರಸ್ವತೀಶಕ್ತಿಯು ಅದನ್ನು ಪ್ರತಿನಿಧಿಸುವುದು ಬಹು ಸಾಂಕೇತಿಕವೇ ಆಗಿದೆ. ವಾಕ್ ಎಂಬುದು ಸರಸ್ವತಿಯ ಆದಿಸೃಷ್ಟಿ. ಅದನ್ನು ಸೃಷ್ಟಿಸಿ ಈ ದೇವಿ ಅದರಲ್ಲಿ ಅನುಪ್ರವೇಶ ಮಾಡಿದಳು. "ತತ್ ಸೃಷ್ಟ್ವಾ ತದೇವಾನುಪ್ರವಿಶತ್" ಆದ್ದರಿಂದ ಅನಂತರದ ವಾಕ್ ಪೂರ್ವದ ಸರಸ್ವತಿಯೇ ಸರಿ. ಈ ವಾಕ್ ನಮ್ಮ ಕಿವಿಗೆ ಕೇಳಬರುವ ಜಿಹ್ವಾಮೂಲೀಯಶಬ್ದ ಸಂತಾನವಲ್ಲ. ಶಬ್ದಕ್ಕೆ ನಾಲ್ಕು ಮುಖಗಳು. ಶ್ರುತಿಯು ಅದರ ಒಂದು ಗುಣಮುಖ ಅಷ್ಟೆ. ಶಬ್ದ-ಬ್ರಹ್ಮ-ದ ಈ ನಾಲ್ಕು ಮೈಗಳೇ ಪುರಾಣದಲ್ಲಿ ಬ್ರಹ್ಮದೇವನ ಚತುರ್ಮುಖಗಳಾಗಿರುವುದು ಗಮ್ಯವಾಗಿದೆ.

ಋಗ್ವೇದದ ೧೦ನೆಯ ಮಂಡಲದ ಸೂಕ್ತಗಳಲ್ಲಿ ಬರುವ ಸಾರಸ್ವತ ಋಕ್ಕುಗಳೇ ಅಥರ್ವ ಸಂಹಿತೆಯಲ್ಲಿಯೂ ಬಂದಿವೆ. ಋಗ್ವೇದದ ಪ್ರಥಮ ಮಂಡಲದಲ್ಲಿ ಸರಸ್ವತಿಯ ಜತೆಗೆ ಇಳಾ-ಭಾರತಿ ಎಂಬ ಇನ್ನಿಬ್ಬ ದೇವತೆಗಳ ಪ್ರಸ್ತಾವ ಬರುತ್ತಿದೆ. ಗೃತ್ಸಮದನು ಇದನ್ನು ಸ್ಪಷ್ಟೀಕರಿಸುತ್ತಾನೆ. "ತಿಸ್ರೋದೇವ್ಯಾಃ ಇಳಾ ಭಾರತೀ ಸರಸ್ವತೀ ಚ" ಮಧುಚ್ಛಂದನು ಮಾತ್ರ ಸರಸ್ವತಿಯ ಸ್ವಭಾವವನ್ನು ನಿಚ್ಚಳವಾಗಿ ಉಲ್ಲೇಖಿಸುತ್ತಾನೆ. ಇದು ಸಾರಸ್ವತ ಹೃಲ್ಲೇಖ ಎನ್ನಿಸಿದೆ. ಈ ಮೂವರು ಸಹೋದರೀ ದೇವತೆಗಳು ಪುರಾಣಪ್ರಪಂಚದಲ್ಲಿ ವಿಭಕ್ತರಾಗಿ ಪೃಥ್ವಿ-ವಾಯು- ಹಾಗೂ ಬ್ರಹ್ಮಶಕ್ತಿಯಾಗಿ ಪರಿಣಮಿಸಿದರು. ಇಳಾಸತ್ಯವೇ-ಅನ್ನಮಯತೆಯನ್ನು ಪ್ರತಿನಿಧಿಸುವ ಧರ್ಮಶಕ್ತಿ. ಭಾರತಿಯು ವಾಯುವನ್ನು ಪ್ರೇರಿಸುವ ಕರ್ಮಮಯ ಗತಿಶಕ್ತಿ. ಪ್ರಾಣರೂಪಳು. ಸರಸ್ವತಿ ಅಧಿಮನದ ಬ್ರಹ್ಮಣಸ್ಪತಿಯ ಮನೋಮಯ ಹಾಗು ಅದರಾಚೆಗಿನ ವಿಶ್ವಂಭರಾ ಪ್ರಜ್ಞೆ.

ಚೋದಯಿತ್ರೀ ಸೂನೃತಾನಾಂ
ಚೇತಂತೀ ಸುಮತೀನಾಂ
ಯಜ್ಞಂ ದಧೇ ಸರಸ್ವತೀ".

"ಸತ್ಯವಚನಕ್ಕೆ ಪ್ರೇರಣೆ ನೀಡುವವಳು ಸದ್ಬುದ್ಧಿಯನ್ನು ಪ್ರೇರಿಸುವವಳು ಈ ಸರಸ್ವತಿ". ರಸಮಯವಾದ ವಾಕ್-ಸೂನೃತಾ ವಾಕ್ ಮಾತ್ರ ಸರಸ್ವತೀನಿಯಂತ್ರಿತ. ನಾಲಗೆ ನುಡಿದದ್ದೆಲ್ಲ ಸರಸ್ವತಿಯ ಪ್ರಸಾದವಲ್ಲ. ಏಕೆಂದರೆ "ಭದ್ರೈಷಾಂ ಲಕ್ಷ್ಮೀರ್ನಿಹಿತಾಧಿ ವಾಚಿ" ಅವರ ಮಾತಿನಲ್ಲಿ ಕಲ್ಯಾಣಶಕ್ತಿ ಮನೆ ಮಾಡಿದ್ದಾಳೆ.

ಕಾಲದ ಹೊಳೆ ಭರದಿಂದ ಹರಿದು ಸಾಗುವಾಗ ಉಪನಿಷತ್ತಿನ ಶರತ್ಕಾಲ ದಾಟಿ ಪುರಾಣದ ಮಳೆಗಾಲವೂ ಬಂತು. ಆಗ ಅನಂತ ಅಕ್ಷರವಾದ ವಿದ್ಯೆ "ಸರ್ವವರ್ಣ" ಗಳ ಸೊತ್ತಾಯಿತು. 'ಅಕ್ಷರ'ಗತವಾದ ವಿದ್ಯೆ ವೈಖರಿಯ ವಶವಾದಾಗಲೆ ಸರಸ್ವತಿಯ ರಸಭೂಯಿಷ್ಠತೆ ಗೌಣವಾಗಿರಬೇಕು. ಪುರಾಣದ ಸರಸ್ವತಿ ಸಾಕಷ್ಟು ಮಧ್ಯಮಕಾಲದ ಗೃಹಿಣಿಯೇ ಆಗಿದ್ದಾಳೆ. ಅವಳು ಬ್ರಹ್ಮನ ಮಾನಸಿಯಾಗಿಯೂ ಅವನ ಸುವಾಸಿನಿಯಾಗಿದ್ದಾಳೆ. ಆದರೆ ಪ್ರಾಚೀನ ಯೋಗ್ಯ ಸರಸ್ವತಿಗೆ "ಅಹಂ ಸುವೇ ಪಿತರಮಸ್ಯ"-ಈ ಜಗದ ತಂದೆಯ ಹಡೆದವ್ವನೇ ನಾನು ಎಂಬ ಆತ್ಮಪ್ರೌಢಿಮೆ ಇದೆ.

### ಎರಡು ಅವಸ್ಥೆಗಳು

ಸರಸ್ವತಿಯು ಕಾಲದ ಸೆಳವಿನಲ್ಲಿ ಸಿಕ್ಕು ನೀರಾದವಳು ಘನವಾದಳು. ಹಾಗೆಯೆ ಅನಂತನಾದ ನಾದಮೂಲಬ್ರಹ್ಮನು ಉಪನಿಷತ್ತಿನಲ್ಲಿ ಶಬ್ದವ್ಯಕ್ತಿತ್ವವನ್ನು ಮರೆತ ಪರಮಾತ್ಮನಾಗಿದ್ದ. ಆದರೆ ಈ ಬ್ರಹ್ಮನ ಹಣೆಬರಹ ಪುರಾಣದಲ್ಲಿ ಸರಸ್ವತೀಪತಿಯಾಗಿ ಮಾತ್ರ ಉಳಿಯುವಂತಾಯಿತು. ಈ ರೀತಿ ಉಳಿಯಲು ದೇವತಾ ಬದಲಾವಣೆಗಿಂತಲೂ

ವಿದ್ಯೋಪಾಸನೆಯ ಕ್ರಮವಿಪರ್ಯೆಯೇ ಹೆಚ್ಚು ಮಟ್ಟಿಗೆ ನಿಮಿತ್ತ. ಗಂಭೀರವಾದ ವಿದ್ಯೆ ಅಗ್ರಾಹ್ಯವಾದಾಗೂ ಸರಸ್ವತಿ ಅದರ ಅಭಿಮಾನಿಯಾಗಿ ಉಳಿದಳು. ಮನೆಯಲ್ಲಿಯೂ ಮಹತ್ವವಿಲ್ಲದ ಮಗುವಿಗೆ ವಿಷ್ಣು ಎಂದು ಹೆಸರಿಟ್ಟು ಸಮಾಧಾನ ಪಡುವದಿಲ್ಲವೇ ನಾವು ! ಈ ಮಾತಿಗೆ ಸ್ವಲ್ಪ ವಿರೋಧವಾದ ಒಂದು ದೊಡ್ಡ ಮಾತನ್ನು ಭಾರ್ಗವನೊಬ್ಬ ಹೇಳುತ್ತಾನೆ.

" ಬ್ರಹ್ಮೇಷು ಓಕಾಂಸಿ ಚಕ್ರಿರೇ ದೇವಾಃ
ಯಕ್ಷ ಸಾಧ್ಯಾಃ ಚ "

ಅವನ ಅಭಿಪ್ರಾಯದ ಮೇರೆಗೆ ಸರಸ್ವತಿಗೆ ಊರ್ಜಸ್ವಿ ಹಾಗು ಮನಸ್ವಿ ಎಂಬೆರೆಡು ಅವಸ್ಥೆಗಳಿವೆ ಎಂಬ ಅನುಮಾನವು ವಿಪಕ್ಷವೆಂದು ಹೇಳಲು ಬರುವುದಿಲ್ಲ. ಪುರಾಣದಲ್ಲಿ ನದಿಯ ಹೆಸರಿನಿಂದ ಬಂದ ಸರಸ್ವತಿಯು ಗುಪ್ತಗಾಮಿಯಾಗಿದ್ದಾಳೆಂಬುವುದು ಭಾರ್ಗವರ ಅನುಮಾನಕ್ಕೆ ವಿನಿಗಮವಾಗಿದೆ. ಇಂದು ಸರಸ್ವತಿಯ ದೈವಿಕತೆಯ ಬಗ್ಗೆ ಅವಗ್ರಹ ಅನಗತ್ಯ.

ಮೂಲದಲ್ಲಿ ಇಷ್ಟು ಊರ್ಜಸ್ವಿಯಾದ ಸರಸ್ವತಿ 'ಸವರ್ಣ'ಳಾಗಿ ಉಳಿದರೂ ಅವಳ ವರ್ಣವು ಮಾತ್ರ ಅಂದಿನದು ಇಂದಿಗೂ ಇದೆ. ಅದೇನು ಕವಿಸಮಯವಾಗಿ ಸಂಪ್ರದಾಯವಾಗಿ ರೂಢವಾಯಿತೊ ಕವಿಗಳ ದಾರ್ಶನಿಕ ದೃಷ್ಟಿಯಿಂದ ಹೃದಯದಿಂದ ಅಂಕಿತವಾಯಿತೋ ಇಲ್ಲವೆ ಅವಳು ಜಲದೇವತೆಯೋ ಎನ್ನುವ ಹೆಸರಿನಿಂದ ಅದು ಇನ್ನು ಅಂತರ್ ಅನ್ವರ್ಥಕವಾಗಿದೆಯೋ ಯಾರಿಗೆ ಗೊತ್ತು? ಆದರೆ ಸರಸ್ವತಿ ಅಂದಿನಂತೆ ಇಂದಿಗೂ ಸರ್ವ ಶುಕ್ಲಳಾಗಿಯೇ ಇದ್ದಾಳೆ. ಸರ್ವದರ್ಶನಗಳಿಗೂ ನೀರಿನ ಶುಕ್ಲತ್ವವು ಗ್ರಾಹ್ಯವಾಗಿದೆ. ಇಷ್ಟು ಕರ್ಕಶವೆನ್ನಿಸಿದರೂ ಸತ್ಯದ ಬಗೆ ಬಹಳ ನಿಷ್ಠುರವಾದ ತರ್ಕವೂ ಕೂಡ ತನ್ನ ಆರಂಭದ ಪಾಠಗಳಲ್ಲಿ ನೀರಿನ ವರ್ಣವನ್ನು- "ಅಪಾಂ ಶುಕ್ಲ ಏವ " - ಬಿಳಿ - ಶುಕ್ಲವೇ-ಎಂದು ಉದ್ಘೋಷಿಸುತ್ತಿದೆ. ಈ ಶುಕ್ಲಕ್ಕೆ ತಂತ್ರ ಶಾಸ್ತ್ರದಲ್ಲಿ ಒಂದು ಸುಂದರ ಸಮಂಜಸ ಭಾಷ್ಯವಿದೆ. (" ಶುಕ್ಲತ್ವಂ ನಾಮ ವಿಮಲತ್ವಂ ಮಲತ್ವಂ ಅಪಿ ರಾಗದ್ವೇಷಜನಕತ್ವಂ ತಥಾ ಚ ಶುಕ್ಲತ್ವಂ ರಾಗದ್ವೇಷಾಭಾವವತ್ವಂ" ಶ್ರೀಹೃದಯದೀಪಿಕಾಯಾಂ ) ವೇದದ ಅನುಶ್ರುತಿಯಂತೆ, ಸರಸ್ವತಿ ವಾಗ್ರೂಪಳಾಗಿರುವಾಗ ಅವಳು ' ರಸ್ಯೆ'ಕಬೋಧನಪರಳು. " ತತ್ಪರಾ ಯೋನಿನಿಷ್ಠಾ" ಎಂಬ ಅನ್ವೀಕ್ಷಕೀ ವಚನವೂ ಇದನ್ನೇ ಅನುವಾದಿಸುತ್ತದೆ. ನೀರಸವಾದುದು ಅದ್ವೈವಿ ಎಂಬುದನ್ನರಿತರೆ ಸರಸ್ವತಿಯ ವಿಭೂತಿಯೋಗ ಪ್ರತೀತಿಗೆ ಬರುತ್ತಿದೆ. ಅಶ್ಲೀಲದಲ್ಲಿ, ಮಾಲಿನ್ಯದಲ್ಲಿ ಸರಸ್ವತಿ ಇಲ್ಲವೆಂದಾಗ ಅವಳ ಸರ್ವವ್ಯಾಪಕತೆಯನ್ನು ಶಂಕಿಸುವುದು ಬುದ್ಧಿಕಾಣರ ಲಕ್ಷಣ. ಈ ಶುಕ್ಲತ್ವವು ಪಾರ್ಥಿವಪ್ರಕಾಶ ಎನ್ನುವುದು ಅತ್ಯಂತ ಸ್ಪಷ್ಟವಿದೆ. ಏಕೆಂದರೆ ಸರಸ್ವತಿ ತಾನು ಜಲದೇವತೆಯಾದರೂ ಅಗ್ನಿಗೆ ಜನ್ಮವಿತ್ತವಳು. ಲೋಕದ ಸಮಸ್ತಧಾವಲ್ಯವೂ ಸರಸ್ವತಿಯ ಶುಕ್ಲಾನುವರ್ತಿ ಎಂಬುದು ಗುಣವಂತನ ಊಹಾವಚನವಲ್ಲ; ದರ್ಶನ.

## ಮಹಾಸರಸ್ವತಿಯ ಸ್ವರೂಪ

ಶ್ರೀ ಅರವಿಂದರುಮಹಾಸರಸ್ವತಿಯ ಸ್ವರೂಪವನ್ನುಬಹುನವೀನವಾಗಿ ಚಿತ್ತಗ್ರಾಹ್ಯವಾಗುವಂತೆ ಹೇಳಿದ್ದಾರೆ. ವಿಶ್ವಾಮಿತ್ರನು ಈ ದರ್ಶನದ ಆದಿಮಬಿಂದುಗಳನ್ನು ಗುರುತಿಸಿದ್ದ. ಚೈತ್ಯ ಪುರುಷನ ಸಂಸ್ಕಾರಕೇಂದ್ರವಾಗಿರುವ ದೇವತೆ ಪರಾತ್ಪರಪುರುಷನ ನಿರ್ವಾಹಕೇಂದ್ರವೂ ಆದ ಮಹಾಮಾತೆಯೂ ಆಗಿದ್ದಾಳೆನ್ನುವುದೂ ಈ ದರ್ಶನದಿಂದ ವಿಶೇಷವಾದ ಅಂಶವು. ಶ್ರೀ ಅರವಿಂದರು ಸರಸ್ವತಿಗೆ ಮಹಾಮಾತೆಯ ನಾಲ್ಕುಮುಖದಲ್ಲಿ 'ಕನೀಯಾ' ಎನ್ನುವರು. ಆದರೆ ಆಯುತ್ತದಲ್ಲಿ ಇವಳು ಸರ್ವಗರೀಯಸೀ ಆದಿಮಾತೆ ಎಂಬುದು ಶ್ರೀಅರವಿಂದರ ಘೋಷ. ವೈದಿಕ ಸರಸ್ವತಿಯು ಕೇವಲ ಪ್ರಕೃತಿಧರ್ಮದ ಉಪದೇವತೆಯಾಗಿರದೆ ಪುರುಷಸತ್ವದ ಅಧಿದೇವತೆಯೂ ಆಗಿದ್ದಾಳೆ. ಪುರಾಣಗಳು ಅವಳ ಪ್ರಕೃತಿಯನ್ನು ಮಾತ್ರ ಸರಿಯಾಗಿಟ್ಟರೂ 'ಪ್ರಾಪಂಚಿಕ' ಶರ್ಮವನ್ನು ಲಾಘವವಾಗಿಸಿವೆ. ಇದು ಆರೋಪವಲ್ಲ. ಏಕಂದರೆ ಪುರಾಣಕ್ಕೂ ಇತಿ ಕರ್ತವ್ಯವಿತ್ತು. ಅದು ತನ್ನ ಇತಿಮಿತಿಯಲ್ಲಿ ಸಾಧುವಾದು-

ದನ್ನೇ ತೋರಿತು.

'ಪ್ರಾಚೀನಯೋಗ್ಯೋಪಾಸ್ತ'

ಎಂಬುದು ಶ್ರುತಿಯ ಆದೇಶ. ಇದನ್ನು ಕಿವಿಯ ಮೇಲೆ ಹಾಕಿಕೊಳ್ಳುವ ಎದೆ ಇದ್ದವರು ಸರಸ್ವತಿಯ ಹೃದಯ ಸಮುದ್ರಕ್ಕಿಳಿಯಲಿ. "ಮಹೋ ಅರ್ಣಃ ಸರಸ್ವತೀ ಪ್ರಚೇತಯತಿ ಕೇತುನಾ । ಧಿಯೋ ವಿಶ್ವಾ ವಿರಾಜತಿ" ಸರಸ್ವತಿಯು ಜಲರೂಪದಿಂದಲೇ ತನ್ನ ಪರಿಚಯ ಮಾಡಿಕೊಡುತ್ತಾಳೆಂಬ ಮಾತಿನಲ್ಲಿ ಮಧುಚ್ಛಂದನ ವಿಶ್ವಾಸ ಅಪರಿಮಿತ. ಲೋಕ ವ್ಯವಹಾರದಲ್ಲಿ ಒಂದು ಉಕ್ತಿ: ಹೆಣ್ಣು-ನೀರು ಅಗಾಧವಾಗಿವೆ; ಅವುಗಳ ನೆಲೆ ಹತ್ತದು. ಆದರೆ ಸರಸ್ವತಿಯ ನೆಲೆ ಅರಿಯುವವರು ಮೊದಲು ನೀರಿನ ಬೆಲೆ ತಿಳಿಯಬೇಕು. ನೀರಿಗಿಳಿಯದವರು ಸರಸ್ವತಿಯನ್ನು ತಿಳಿಯಲಾರರು.

ವೈಖರಿಯ ಸಾರಸ್ವತಪುತ್ರರು ತಮ್ಮಲ್ಲಿ ಎಷ್ಟು ನೀರಿದೆ ಎಂಬುದನ್ನು ಅರಿತುಕೊಳ್ಳದೆ ಶುಷ್ಕ ಸರಸ್ವತೀ ಅನುಗ್ರಹದ ಡಿಂಡಿಮ ಹೊಡೆಯುವುದು ಮಾತೃವಿಸ್ಮರಣೆಯ ಲಕ್ಷಣ. ಸರ ಸಂಕ್ಷೋಭಿಣಿಯೋ ಸಾರಸ್ವತಮುದ್ರೆಯುಳ್ಳ ಸರ್ವವಿದ್ಯಾವಿಣಿಯ ಅವಳ ಮಹಾಮುದ ಯಾದೀತು. ಏಕೆಂದರೆ ಅವಳ ವಿಗ್ರಹ ಆಪೋಮಯವಾಗಿ ವಿದ್ರವಣಶೀಲವೇ ಆಗಿದೆ ಸಾಹಿತ್ಯದ ಉಪಾಸಕರು ಸರಸ್ವತಿಯ ಮೂಲ ರೂಪವನ್ನು ಮರೆತರೆ ಅವರ ಕೃತಿ 'ನೀರಸ' ವಲ್ಲದೆ ಇನ್ನೇನು? ಆದ್ದರಿಂದ ಸರಸ್ವತಿಯ ಉಪಾಸಕರು "ಪ್ರಾಚೀನಯೋಗ್ಯ" ಸರಸ್ವತಿಯ ಕಡೆಗೆ ಸ್ವಲ್ಪ ಹೃದಯ ತೆರಲಿ.

## ಮನದೆನ್ನೆಗೆ

ಕಣ್ಣ ಕಣ್ಣಲಿಯಿಟ್ಟು
    ಒಡಲಿನಾಳವ ಕಂಡೆ ।

ಕೆನ್ನೆ ಕೆನ್ನೆಯ ಕಚ್ಚಿ
    ಹಣ್ಣಿನಾ ರುಚಿ ಕಂಡೆ ।


ಎದೆಮ್ಯಾಲೆ ಎದೆಯಿಟ್ಟು
    ಒಲವಿನಾದನಿ ಕೇಳ್ದೆ ।

ತುಟಿ ತುಟಿ ಮ್ಯಾಲೆ ತುಟಿನಿಟ್ಟು
    ತುಟಿ ಜೇನ ಕುಡಿಕುಡಿದೆ ।

ಬಿಗಿದಪ್ಪಿ ಸವಿ ಸವಿದೆ
    ಪ್ರೇಮ ರಸನೆರೆದೆ ।

"—ಬಿಸ್ರಾ"

ನೋಡಲಿಕ್ಕೆ ಬಂದ ವರಗಳ ಮುಂದೆ ವಧುವಾಗಿ ಕುಳಿತ ಮಂಜುಳೆ ಬೇಸತ್ತು ಹೋಗಿದ್ದಳು. ಇದಕ್ಕೇನು ಪರಿಹಾರವಿಲ್ಲವೇ ಎಂದುಕೊಳ್ಳುತ್ತಿದ್ದಾಗ ಕನಸೊಂದನ್ನು ಕಂಡಳು. ಅವಳಲ್ಲಿ ಹುದುಗಿದ್ದ ಸೇಡಿನ ಪ್ರತಿರೂಪವಾಗಿತ್ತದು. ಅದರಲ್ಲಿಯೇ ಅವಳು ಮುಂದಿನ ದಾರಿಯನ್ನು ಕಂಡುಕೊಂಡಳು.



# ವಿಮಾನ ಪರಿಚಾರಿಕೆ

ಕತೆಗಾರ ಚಿದಂಬರಾನಂದ

ಆ ವಿಮಾನವು ನೆಲವನ್ನು ಬಿಟ್ಟು ಬಾನಿಗೆ ಹಾರಿದಾಗ ವಿಮಾನ ಪರಿಚಾರಿಕೆಯ ಕೋಣೆಯಲ್ಲಿ ಕುಳಿತು ತನ್ನ ವೇಷಭೂಷಣಗಳನ್ನು ಸರಿಪಡಿಸಿಕೊಳ್ಳುತ್ತಿದ್ದ ಮಂಜುಳಾ "ಅಹಾ ! ಒಮ್ಮೆ ಮದುವೆಯ ಮಾರುಕಟ್ಟೆಯಿಂದ ಪಾರಾದಂತಾಯಿತು. ಇನ್ನು ಈ ವಿಮಾನದಂತೆ ಬಾಳಬಾನಿನಲ್ಲಿ ನಾನೂ ಸ್ವತಂತ್ರಳಾಗಿ ಸಂಚರಿಸಬಹುದು" ಎಂದು ನಿಶ್ಚಿಂತೆಯ ನಿಟ್ಟುಸಿರನ್ನು ಬಿಟ್ಟಳು.

ಆ ನಿಟ್ಟುಸಿರಿನ ಹಿಂದೆಯೇ "ಇಂದು ನನ್ನ ಕಾಲಮೇಲೆ ನಾನೇ ನಿಲ್ಲುವಂತಾದೆ. ಇನ್ನು ಮೇಲೆ ಮದುವೆಯಾಗುವದು ಬಿಡುವದು ನನ್ನ ಕೈಯಲ್ಲಿದೆ." ಎಂಬ ನಿರ್ಧಾರವೂ "ಹುಂ ! ಒಂದಿಲ್ಲೊಂದು ಕಾರಣವನ್ನು ಮುಂದೊಡ್ಡಿ ನನ್ನನ್ನು ನಿರಾಕರಿಸಿದ ಆ ವರಗಳು ಈಗ ಭೆಟ್ಟಿಯಾಗಲಿ. ಅವರ ಮುಖದ ಮೇಲಿನ ನೀರು ಇಳಿಯುವಂತೆ ಮಾತನಾಡಿ ಕಳಿಸುತ್ತೇನೆ" ಎಂಬ ಹಟವೂ ಅವಳಲ್ಲಿ ಕಾಣಿಸಿಕೊಂಡವು.

ತನ್ನ ಕೈಬುಟ್ಟಿ ( vanity bag ) ಯಲ್ಲಿದ್ದ ಕನ್ನಡಿಯಲ್ಲಿ ತನ್ನ ಮೊಗವನ್ನು ನಿಟ್ಟಿಸುತ್ತಿದ್ದ ಮಂಜುಳೆಗೆ ತನ್ನ ಪ್ರತಿಬಿಂಬ ಚೆಲುವಾಗಿಯೇ ಕಂಡಿತು. ತನ್ನ ಪ್ರತಿಬಿಂಬವನ್ನು ನೋಡಿಕೊಂಡು "ನಾನು ನಿಜವಾಗಿಯೂ ಅಷ್ಟು ಕುರೂಪಿಯೇ ? ಅಲ್ಲ. ಅಲ್ಲ" ಎಂದು ಉದ್ಗಾರ ತೆಗೆದಳು.

ನಿಜವಾಗಿಯೂ ಮಂಜುಳೆ ಕುರೂಪಿಯೇನೂ ಆಗಿರಲಿಲ್ಲ. ಮೈ-ಬಣ್ಣ ಗೋದಿಗೆಂಪಾದರೂ ಅವಳಲ್ಲಿ ಒಂದು ಸೊಂಪು ಇತ್ತು. ಅವಳ ಮುಂದೆ ಹಾಯ್ದು ಹೋಗುವ ಯಾವ ತರುಣನೂ ಅವಳನ್ನು ಮತ್ತೊಮ್ಮೆ ಕಣ್ಣೆತ್ತಿ ನೋಡದೆ ಮುಂದೆ ಸಾಗುತ್ತಿರಲಿಲ್ಲ. ಇಪ್ಪತ್ತೆರಡರ ಹೊಸತಿಲಲ್ಲಿ ಕಾಲಿಡುತ್ತಿದ್ದ ಮಂಜುಳೆಯ ದುಂಡು ದುಂಡಾದ ಮೈಯಲ್ಲಿ ಯೌವನವು ತುಂಬಿ ತುಳುಕುತ್ತಲಿತ್ತು. ಅವಳ ಹೊಳೆ. ಯುವ ಕಣ್ಣುಗಳು, ನೀಳಾದ ಕೇಶಪಾಶ, ತುಂಬಿದ ಎದೆ, ಹರವಾದ ನಿತಂಬಗಳು, ಮೆಲ್ಲಡಿಯ ನಡೆ ಎಂಥವರನ್ನೂ ಕ್ಷಣಹೊತ್ತು ಮುಗ್ಧಗೊಳಿಸದೇ ಇರುತ್ತಿರಲಿಲ್ಲ.

ಹೀಗಿದ್ದ ತನ್ನ ಚೆಲುವನ್ನು ಆ ಕನ್ನಡಿಯಲ್ಲಿ ನೋಡಿದಾಗ ಅವಳಿಗೆ ನಿಜವಾಗಿಯೂ ವಿಷಾದವಾಯಿತು, 'ಪೊಸ ಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದೇ' ಎಂಬ—ತಾನು ಎಸ್. ಎಸ್.ಸಿ. ಯಲ್ಲಿ ಕಲಿತ—ಮಾತು ನೆನಪಾಯಿತು. ಮರುಕ್ಷಣವೇ 'ನನ್ನ ಬಾಳು ಅದೇಕೆ ಬಾಡಿಹೋಗಬೇಕು ? ನಾನು ಮನಸ್ಸು ಮಾಡಿದರೆ ಮುಡಿಯುವ ಭೋಗಿಗಳು ದೊರೆಯಲಾರರೇ? ಮದುವೆಯ ಮಾರು ಕಟ್ಟೆಯಲ್ಲಿ ನನಗೆ ಬೆಲೆ ಬರದಿದ್ದರೇನಾಯಿತು ? ವಿಮಾನ ಪರಿಚಾರಿಕೆಯಾಗಿ ನಾನು ಬಾಳಿನಲ್ಲಿ ಯಶಸ್ವಿಯಾಗಲಾರನೇ ?' ಎಂಬ ಭಾವ ಬಂದು ಅವಳು ಉತ್ಸಾಹಿತಳಾದಳು.

ಆ ಉತ್ಸಾಹದ ಭರದಲ್ಲಿಯೇ ಪ್ರಯಾಣಿಕರ ಯೋಗಕ್ಷೇಮ ವಿಚಾರಿಸಲು ತನ್ನ ಕೋಣೆಯಿಂದ ಹೊರಗೆ ಬಂದಳು. ಬಂದು ಸುತ್ತಲೂ ಒಮ್ಮೆ ನೋಟವನ್ನು ಹಾಯಿಸಿದಳು.

ಹಾಗೆ ನೋಟವನ್ನು ಬೀರಿದಾಗ ಪ್ರಯಾಣಿಕರೆಲ್ಲ ಗಂಡಸರೇ ಆಗಿರುವರೆಂಬ ಮಾತು ಅವಳ ಗಮನಕ್ಕೆ ಬಂದಿತು. ಆಗ "ಈ ವಿಮಾನದಲ್ಲಿ ನಾನೊಬ್ಬಳೇ ಪರಿಚಾರಕಳು. ಇವರೆಲ್ಲರೂ ಗಂಡಸರು. ನನ್ನನ್ನು ನೋಡಿ ನಿರಾಕರಿಸಿ ಹೋದ ವರಗಳಂತೆ ಇವರೂ ಒಬ್ಬೊಬ್ಬರು ಒಂದೊಂದು ಸ್ವಭಾವದವರಾಗಿದ್ದರೆ ಹೇಗೆ ಮಾಡಲಿ ? ಇವರ ಕೂಡ ನಾನು ಹೇಗೆ ನಡೆದುಕೊಳ್ಳಲಿ ? ಅದರಲ್ಲಿಯೂ ಇದು ನನ್ನ ನೌಕರಿಯ ಮೊದಲ ಅನುಭವ" ಎಂಬ ವಿಚಾರವು ಬಂದು ಅವಳು

ತುಸು ಗಾಬರಿಯಾದಳು.

ಆದರೂ ಧೈರ್ಯತಂದುಕೊಂಡು ಪ್ರಯಾಣಿಕರ ಕಡೆಗೆ ಮತ್ತೊಮ್ಮೆ ನೋಡಿದಾಗ ಅವರ ಮುಖಗಳೆಲ್ಲ ಅವಳಿಗೆ ಪರಿಚಿತ ವಿದ್ದಂತೆ ಭಾಸವಾಯಿತು.

ಆಗ ಅವಳು ಕುತೂಹಲದಿಂದ ಒಂದೊಂದೇ ಮೊಗವನ್ನು ನಿರೀ- ಕ್ಷಿಸತೊಡಗಿದಳು.

ಗುಂಗುರುಗೂದಲಿನಿಂದ ಅಂದವಾದ ಹಾಗೂ ಮುಗುಳ ನಗೆ ಯಿಂದ ಸೊಗಯಿಸುವ ಮೊದಲನೆಯ ಮೊಗವನ್ನು ನೋಡಿ ಆಕೆ "ಅಯ್ಯೋ ಇವನೇಕೆ ಇಲ್ಲಿ ಬಂದಿದ್ದಾನೆ? ನನ್ನನ್ನು ನೋಡಲು ಬಂದು ನಗಲೂ ಅರಿಯದ ಈ ಹೆಣ್ಣನ್ನು ನಾನು ಮದುವೆಯಾಗು ವದೇ ಎಂದು ನನಗೆ ಹೆಸರಿಟ್ಟು ಹೋದವನು ಇವನೇ ಅಲ್ಲವೇ?" ಎಂದು ತನ್ನಷ್ಟಕ್ಕೇ ಉದ್ಗಾರ ತೆಗೆದು ಎರಡು ಹೆಜ್ಜೆ ಹಿಂದಕ್ಕೆ ಸರಿ



ದಳು. "ಆದರೆ ನಾನು ಈಗ ವಿಮಾನ ಪರಿಚಾರಿಕೆಯಲ್ಲವೇ? ವಿಮಾನದಲ್ಲಿ ಪ್ರಯಾಣ ಮಾಡುವವರ ಯೋಗಕ್ಷೇಮವನ್ನು ನೋಡಿ ಕೊಂಡು ಪ್ರಯಾಣವು ಸುಖಕರವಾಗುವಂತೆ ಮಾಡುವದು ನನ್ನ ಕರ್ತವ್ಯವಲ್ಲವೇ? ಅಂದಮೇಲೆ ಪ್ರಯಾಣಿಕನು ಯಾರಾದರೇನು?" ಎಂದು ಮತ್ತೆ ತನಗೆ ತಾನೇ ಸಮಾಧಾನಮಾಡಿಕೊಂಡಳು.

ಅವನ ಮೊಗದಿಂದ ತನ್ನ ನೋಟವನ್ನು ಕಿತ್ತುಕೊಂಡು ಇನ್ನೊಂದು ಮೊಗದ ಕಡೆಗೆ ಹೊರಳಿಸಿದಾಗ ಅಲ್ಲಿಯೂ ಅವಳಿಗೆ ಪರಿಚಯದ ಮೊಗವೇ ಕಂಡಿತು. ಅವನಾರು ಆಗಿರಬಹುದು ಎಂದು ನೋಡಿ "ಅಯ್ಯೋ! ಇವನೂ ನನ್ನನ್ನು ನೋಡಲು ಬಂದ ವರನೇ ಹೌದು. ಆ ಕನ್ನಡಕ ಆಗ ಹೇಗೆ ಇತ್ತೋ ಈಗೂ ಹಾಗೇ ಇದೆ. ಆ ಕನ್ನಡಕದಿಂದ ಆಗ ನನ್ನನ್ನು ಕದ್ದು ನೋಡಿದಂತೆ ಈಗಲೂ ಕದ್ದು ನೋಡುತ್ತಿದ್ದಾನೆ" ಎಂದು ಅಂದುಕೊಂಡಳು. ಆಮೇಲೆ "ಇವನು ನನ್ನನ್ನು ಮದುವೆಯಾಗಲು ಯಾಕೆ ನಿರಾಕರಿಸಿದನು?....ಹಾ.... ಹೌದು. ನಾನು ಬಿ. ಏ. ವರೆಗೆ ಕೂಡ ಕಲಿತಿಲ್ಲ. ತನಗೆ ಬಿ. ಏ. ಆದ ಕನ್ಯೆಯೇ ಬೇಕು ಎಂದು ಹೇಳಿಹೋದನಲ್ಲವೆ? ಆದರೆ ನಾನು ಬಿ. ಏ. ಆಗಿಲ್ಲವೆನ್ನುವದು ಗೊತ್ತಿದ್ದೂ ನೋಡಲು ಏಕೆ ಬರಬೇಕಾ ಗಿತ್ತು?.... ಹಾಂ....ಹೌದು.

ಅವನ ತಾಯಿತಂದೆಗಳು 'ಹುಡುಗಿಯನ್ನಾದರೂ ಒಮ್ಮೆ ನೋಡು. ನಿನ್ನ ಮನಸ್ಸಿಗೆ ಬಂದರೆ ಮದುವೆಯಾದ ಮೇಲೆ ಬಿ. ಏ. ವರೆಗೆ ಕಲಿಸುವಿಯಂತೆ' ಎಂದು ಹೇಳಿ ಕರೆದುತಂದಿದ್ದರಂತೆ. ಎಲ್ಲ ವಿಚಿತ್ರವೇ! ದಾಂಪತ್ಯಜೀವನವು ಸುಖಕರವಾಗಲು ಬಿ. ಏ. ಪರೀ ಕ್ಷೆಯನ್ನೇ ಪಾಸಾಗಿರಬೇಕೇನು? ಬಿ. ಏ. ಪಾಸಾಗದೆ ಇದ್ದವರ ಬಾಳೆಲ್ಲ ಹಾಳಾಗಿಯೇ ಹೋಗಿದೆಯೇನು? ಈ ಗಂಡಸರಿಗೆ ಎಂದು ಬುದ್ಧಿ ಬರುವದೋ ದೇವರಿಗೇ ಗೊತ್ತು. ಇಂಥವನ ಮುಖವನ್ನು ನೋಡಲು ಕೂಡ ನನಗೆ ಜಿಗುಪ್ಸೆಯೆನ್ನಿಸುತ್ತದೆ" ಎಂದು ನುಡಿದು ಅವನ ಮೊಗದಿಂದ ತನ್ನ ನೋಟವನ್ನು ತಿರುಗಿ ತೆಗೆದುಕೊಂಡಳು.

ಇನ್ನೊಂದೆಡೆಗೆ ಮೊಗ ತಿರುವಿದಾಗ ಅತ್ತ ಕುಳಿತ ಇನ್ನೊಬ್ಬ ಪಯಣಿಗನ ಮುಖ ಅವಳಿಗೆ ಕಂಡಿತು. ಸ್ವಲ್ಪ ಲಕ್ಷ್ಯಗೊಟ್ಟು ನೋಡಲು ಅದೂ ಪರಿಚಯದ ಮೊಗವೇ ಆಗಿತ್ತು. "ಓಹೋ ಇವನೂ ಇಲ್ಲಿ ಬಂದಿರುವನೋ! 'ಈ ಹುಡುಗಿ ಕಪ್ಪು ನಾನು ಮದುವೆಯಾಗುವದಿಲ್ಲ' ಎಂದು ಅಟ್ಟಹಾಸದಿಂದ ಹೇಳಿ ಹೋದ. ಇವನ ಯೋಗಕ್ಷೇಮವನ್ನು ವಿಚಾರಿಸಲು ನಾನು ಹೇಗೆ ಅವನ ಬಳಿಗೆ ಹೋಗಲಿ? ತಾನು ತೊಳೆದ ಕೆಂಡವಾಗಿದ್ದರೂ ನನಗೆ ಕಪ್ಪು ಎಂದು ಹೆಸರಿಟ್ಟನಲ್ಲವೆ? ಆದರೂ ಲಿಂಬೆಹಣ್ಣಿನ ಮೈಬಣ್ಣದ ಚಲುವೆ ಯನ್ನು ಮದುವೆಯಾಗಲು ಹಂಬಲಿಸುತ್ತಿದ್ದಾನೆ. ಮದುವೆ ಮಾರು ಕಟ್ಟೆಯಲ್ಲಿ ಗಂಡು ಹೇಗಿದ್ದರೂ ನಡೆಯುತ್ತದೆ. ಹೆಣ್ಣು ಮಾತ್ರ ಗೌರಿಯಾಗಿರಬೇಕು. ಅಲ್ಲ. ದಾಂಪತ್ಯಜೀವನದ ಸುಖವೆಲ್ಲ ಬರೀ ಬಣ್ಣವನ್ನೇ ಅವಲಂಬಿಸಿರುವದೇ? ಭಾರ್ಯಾ ರೂಪವತೀ ಶತ್ರುಃ ಎಂಬ ಸುಭಾಷಿತ ಇವನಿಗೆ ಗೊತ್ತಿಲ್ಲ ಕಾಣುತ್ತದೆ.

ಟೊಮೆಟೋ ಹಣ್ಣಿನ ಮೈಬಣ್ಣದವಳನ್ನೇ ಇಂದು ಮಾಡಿಕೊಂ- ಡರೂ ರೋಗ ಬಂದು ಅವಳ ಬಣ್ಣವೇ ಬದಲಾದರೆ? ಅಥವಾ ತಾವು ಚಲುವರೆಂದು ತಿಳಿದ ತಮಗೆ ಏನಾದರೂ ಆಗಿ ತಾವೇ ಕುರೂಪಿಗಳಾ ದರೆ? ಅಂತೂ ಈಗಿನ ಕಾಲದ ವಿವಾಹಪದ್ಧತಿಗಳೇ ವಿಚಿತ್ರವಾ ಗಿವೆ."

ಹೀಗೆ ಅಂದುಕೊಂಡ ಮಂಜುಳಾ ತನ್ನ ಮೊಗವನ್ನು ಇನ್ನೊಂದೆ-

ಡೆಗೆ ತಿರುಗಿಸಿದಳು. ಅತ್ತ ಕುಳಿತ ಪಯಣಿಗನ ಮೊಗವೂ ಅವಳಿಗೆ ಪರಿಚಯದ್ದೆನಿಸಿತು. ಅದಾರದಿರಬಹುದು ? ಅದೂ ಅವಳನ್ನು ನೋಡಲು ಬಂದ ಒಬ್ಬ ವರನದೇ ಆಗಿತ್ತು. ಅವನನ್ನು ನೋಡಿ "ಅಹಾ ! ಇವನೂ ಪ್ರಯಾಣಿಕನಾಗಿ ಬಂದಿರುವನೇ ? ನನ್ನನ್ನು ನೋಡಿ ಹೋಗಿ 'ನಿಮ್ಮ ಹುಡುಗಿ ನನ್ನ ಮನಸ್ಸಿಗೆ ಬಂದಿರುವಳು. ಆದರೆ ಅವಳು ಸಾಕಷ್ಟು ಸೊಸಿಯಲ್ (social) ಇದ್ದಂತೆ ನನಗೆ ಕಂಡುಬರಲಿಲ್ಲ. ಆದುದರಿಂದ ನಿಮ್ಮ ಹುಡುಗಿಯನ್ನು ಎರಡು ದಿನ ನಮ್ಮ ಮನೆಗೆ ಕಳಿಸಿರಿ. ನಮ್ಮ ಮನೆಯಲ್ಲಿ ಅವಳು ಹೇಗೆ ಇರುವಳೆಂಬುವನ್ನು ಎರಡು ದಿನ ನೋಡಿ ಆಮೇಲೆ ಅವಳನ್ನು ಮಾಡಿಕೊಳ್ಳುವ ಬಗ್ಗೆ ನನ್ನ ಅಭಿಪ್ರಾಯವನ್ನು ತಿಳಿಸುತ್ತೇನೆ.' ಎಂದು ಪತ್ರ ಬರೆದವನು ಇವನೇ ಅಲ್ಲವೇ ? ಅಲ್ಲ ಶನಿ ಮಹಾತ್ಮೆಯಲ್ಲಿ ಬರುವ ಆಲೋಲಿಕೆಯಂತೆ ಇವನೂ ಇಂದು trial marriage ಬಳಕೆಯಲ್ಲಿ ತಂದಿರುವನೇ ? social ಅಂದರೆ ಏನು ಅರ್ಥ ? ಭೆಟ್ಟಿಯಾದವರನ್ನೆ ಅಪ್ಪಿ ಮುದ್ದಿಡುವದೇ ? ಅಥವಾ ಸಲುಗೆಯಿಂದ ಹೆಗಲ ಮೇಲೆ ಕೈಹಾಕಿ ಹರಟೆ ಕೊಚ್ಚುವದೆ? ಇಲ್ಲವೆ ಸ್ತ್ರೀಯೆಂದರೆ ಒಂದು unsocial animal ಎಂದು ಬಗೆದಿರುವನೇ ? ಈಗ ನನ್ನನ್ನು ನೋಡಿ ನನಗೆ ಮತ್ತೆ ಅನ್-ಸೋಸಿಯಲ್ ಎಂದು ಎಲ್ಲಿ ಹೆಸರಿಡುವನೋ ಈ ಮಹಾರಾಯ. ಇವನ ಸನಿಹಕ್ಕೆ ಹೋಗುವದೇ ಬೇಡ."

ಹೀಗೆ ಚಿಂತಿಸಿ ಸುಮ್ಮನೇ ನಿಂತಿದ್ದ ಮಂಜುಳೆಗೆ ಮತ್ತೊಂದು ಪರಿಚಯದ ಮೊಗ ಕಂಡಿತು. ಅದನ್ನು ನೋಡಿ ಓಹೋ ! ಇವನೂ ನನ್ನನ್ನು ನಿರಾಕರಿಸಿ ಹೋದವನೇ 'ನಿಮ್ಮ ಮಗಳು ಯಾವ ಸಿನೇಮಾ ತಾರೆಯನ್ನೂ ಹೋಲುವದಿಲ್ಲ. ಅದೂ ಹೋಗಲಿ ನಾನು ಮೆಚ್ಚಿದ ಸಿನೇಮಾ ನಟಿಯಂತೆ ಅಲಂಕಾರ ಮಾಡಿಕೊಂಡಿದ್ದಾಳೆಂದರೆ ಅದೂ ಇಲ್ಲ. ಅಂದಮೇಲೆ ಇಂಥವಳನ್ನು ಮದುವೆಯಾಗುವದರಿಂದ ನನಗೇನೂ ಸುಖ ಸಿಗುವದಿಲ್ಲ' ಎಂದು ಕಾರಣ ಹೇಳಿ ಇವನು ನನ್ನನ್ನು ನಿರಾಕರಿಸಿದನಲ್ಲವೇ ?....ಅಲ್ಲ, ತಾನು ಮದುವೆಯಾಗುವ ಹುಡುಗಿ ಒಬ್ಬ ಸಿನೇಮಾ ನಟಿಯನ್ನು ಹೋಲುವದಕ್ಕೂ ದಾಂಪತ್ಯ ಜೀವನವು ಸುಖಮಯವಾಗುವದಕ್ಕೂ ಏನು ಸಂಬಂಧ ? ಈಗಿನ ತರುಣರ ಬುದ್ಧಿಯೇ ಭ್ರಂಶವಾಗಿರುವದೋ ? ಅಥವಾ ಬರಿ ಬಾಹ್ಯಾಡಂಬರದಿಂದಲೇ ಜೀವನದಲ್ಲಿ ಸುಖ ಸಿಗುವದೋ ?"

ಹೀಗೆ ವಿಚಾರಿಸುತ್ತ ನಿಂತಾಗ ಇನ್ನೊಂದು ಮೊಗ ಅವಳ ಲಕ್ಷ್ಯವನ್ನು ಸೆಳೆಯಿತು. ಅತ್ತನೋಡಿ ಅವಳು ಅಪ್ರತಿಭಳಾದಳು. ಅವಳ ಎದೆ ಜೋರಾಗಿ ಬಡಿದುಕೊಳ್ಳಲಾರಂಭಿಸಿತು. 'ಇವನೇಕೆ ಇಲ್ಲಿ ಬಂದಿರುವನು ?' ಎಂದು ಅವಳು ತುಸು ಗಾಬರಿಯಾದಳು. ಯಾಕಂದರೆ ಅವನ ಬಗ್ಗೆ ಅವಳ ಹೃದಯದಲ್ಲಿ ಪ್ರೇಮವು ನೆಲೆಸಿತ್ತು. ಅವನು ಇನ್ನಾರೂ ಆಗಿರದೆ ಅವಳ ಮನೆಯಲ್ಲಿದ್ದು ಊಟ ಮಾಡಿ ಕಾಲೇಜು ಕಲಿಯುವ ಹುಡುಗನಾಗಿದ್ದನು. ಅವನು ಕಾಲೇಜು ವಿದ್ಯಾರ್ಥಿಯಾಗಿದ್ದರೂ ಸದ್ಗುಣಿಯಾಗಿದ್ದ; ಸುಶೀಲನಾಗಿದ್ದ. ಅವನ ನಡೆನುಡಿಗಳು ಅವಳ ಮನವನ್ನು ಗೆದ್ದಿದ್ದವು. ಅವನು ಬಡವನಾದರೂ ಅದನ್ನು ಲೆಕ್ಕಿಸದೆ ಅವಳು ತನ್ನ ಪ್ರೇಮವನ್ನು ಅವನ ಮುಂದೆ ತೋಡಿಕೊಂಡಾಗ ಅವನು "ನಾನು ನಿನ್ನನ್ನು ನನ್ನ ತಂಗಿಯಂತೆ ಕಾಣುತ್ತ ಬಂದಿದ್ದೇನೆ. ಆದುದರಿಂದ ನಿನ್ನ ಪ್ರೇಮವನ್ನು ನಾನು ಸ್ವೀಕರಿಸಲಾರೆ. ನಾನು ಜೀವನದಲ್ಲಿ ಒಂದು ಆದರ್ಶವನ್ನಿಟ್ಟುಕೊಂಡು ನಡೆದಿದ್ದೇನೆ. ಅದಕ್ಕಾಗಿ ನಾನು ಮದುವೆಯಾಗದೇ ಇರುವ

ಪ್ರಸಂಗ ಬಂದರೂ ಬರಬಹುದು" ಎಂದು ಹೇಳಿ ಅವಳ ಮನೆಯಿಂದ ಮರುದಿನವೇ ಕಂಬಿ ಕಿತ್ತಿದ್ದ. ಈ ಪ್ರಯಾಣಿಕರಲ್ಲಿ ಅವನೂ ಸೇರಿಕೊಂಡದ್ದರಿಂದ ಅವನನ್ನು ನೋಡಿ ಅವಳಲ್ಲಿ ಪ್ರೇಮ, ವಿಷಾದ, ಕನಿಕರ, ಜಿಗುಪ್ಸೆ ಎಲ್ಲವೂ ಒಮ್ಮೆಲೇ ಉಂಟಾಗಿದ್ದವು. ಈಗ 'ಅವನೊಬ್ಬ ಹೇಡಿ' ಎಂದು ಅವಳು ತೀರ್ಮಾನಿಸಿದ್ದಳು. ಆದುದರಿಂದ ಅವನೆಡೆಗೆ ಹೋಗಲು ಅವಳ ಕಾಲುಗಳೇ ಎತ್ತಲಿಲ್ಲ.

ಅವನೆಡೆಗೆ ನೋಡದೆ ಇನ್ನೊಂದು ದಿಕ್ಕಿಗೆ ಮೊಗ ಹೊರಳಿಸಿದಾಗ ಮತ್ತೊಂದು ಮೊಗ ಅವಳಿಗೆ ಕಂಡಿತು. 'ಓಹೋ ಇವನೂ ಒಬ್ಬ ಹೇಡಿಯೇ. ಅಲ್ಲವೇನು ಮತ್ತೆ? ನನ್ನನ್ನು ನೋಡಿ 'ಹುಡಿಗೆ ಮನಸ್ಸಿಗೆ ಬಂದಿದ್ದಾಳೆ' ಎಂದು ಹೇಳಿ ನಂತರ ಅವನ ತಾಯಿ ತಂದೆಗಳು ವರದಕ್ಷಿಣೆಯ ಸಲುವಾಗಿ ಮದುವೆಯನ್ನು ಮುರಿಯಲು ನಿಂತಾಗ ಅದು ಸರಿಯಲ್ಲವೆಂದು ಒಂದು ಮಾತನ್ನೂ ಆಡದೆ ನನ್ನನ್ನು ನಿರಾಕರಿಸಿದ' ಎಂದು ಅತ್ತ ಮತ್ತೆ ನೋಡಲಿಲ್ಲ.

ಹೀಗೆ ಎತ್ತನೋಡಿದರೂ ಅವಳಿಗೆ ತನ್ನನ್ನು ಒಂದಿಲ್ಲೊಂದು ಕಾರಣದಿಂದ ನಿರಾಕರಿಸಿದ ವರಗಳ ಮುಖಗಳೇ ಕಾಣಬರತೊಡಗಿದವು. ಅವಳು ಹಾಗೇ ಒಂದು ಸಲ ಕಣ್ಣು ಹಾಯಿಸಿದಾಗ ತಾನು ದಪ್ಪನಾಗಿದ್ದರೂ ಮಂಜುಳೆಯೇ ಬಹಳ ದಪ್ಪನಾಗಿರುವಳು ಎಂದು ಹೇಳಿದವನು, ತಾನು ಕಲಿತ ಹುಡುಗಿಯನ್ನು ಮದುವೆ ಮಾಡಿಕೊಳ್ಳುವದಿಲ್ಲವೆಂದು ಹೇಳಿದವನು, ತಾನು ವಯಸ್ಸಾದವನಾಗಿದ್ದರೂ ಮಂಜುಳೆಯನ್ನು ಮದುವೆಯಾಗಲು ಬಯಸಿದವನು, ಮದುವೆಮಾಡಿಕೊಳ್ಳುವ ಆಸೆ ತೋರಿಸಿ ಅವಳನ್ನು ತನ್ನ ಬಲೆಗೆ ಹಾಕಿಕೊಂಡು ಆನಂತರ ಅವಳನ್ನು ಕೈ ಬಿಡಬೇಕೆಂದು ಲೆಕ್ಕ ಹಾಕಿ ಪ್ರಯತ್ನಿಸಿ ವಿಫಲನಾದವನು—ಈ ಎಲ್ಲರ ಮೊಗಗಳು ಅವಳ ಲಕ್ಷ್ಯವನ್ನು ಸೆಳೆದವು.

ಈ ಪ್ರಯಾಣಿಕರನ್ನು ನೋಡಿ ಅವಳು ಗಾಬರಿಯಾದಳು. "ಇವರೆಲ್ಲರೂ ಮಾತನಾಡಿಕೊಂಡು ಬಂದು ಇಲ್ಲಿ ಕುಳಿತಿರುವರೇ? ಇವರ ಯೋಗಕ್ಷೇಮವನ್ನು ನೋಡಿಕೊಂಡು ಇವರೆಲ್ಲರಿಗೂ ವಿಮಾನ ಸಂಚಾರ ಸುಖಕರವೆನಿಸುವಂತೆ ನಡೆಯಬೇಕೆ? ಇದು ಎಂದಿಗೂ ನನ್ನಿಂದ ಸಾಧ್ಯವಿಲ್ಲ" ಎಂದು ಅವಳು ನಿರ್ಧಾರದಿಂದ ಅಲ್ಲಿಯೇ ನಿಂತಳು.

ಆ ವಿಮಾನವು ಮಾತ್ರ ಒಳ್ಳೇ ರಭಸದಿಂದ ಆಗಸದಲ್ಲಿ ಮುನ್ನಡೆದಿತ್ತು. ಅದರ ವೇಗವು ಹೆಚ್ಚಾದಂತೆ ಅವಳ ತಲೆಯಲ್ಲಿ ವಿಚಾರಗಳ ತಾಕಲಾಟವೂ ಹೆಚ್ಚಾಯಿತು. "ನಾನು ಮದುವೆಯ ಮಾರುಕಟ್ಟೆಯಿಂದ ಪಾರಾಗಿ ಸ್ವತಂತ್ರಳಾದೆ, ಸ್ವಾವಲಂಬಿಯಾದೆ ಎಂದು ಬಗೆದಿದ್ದೆ. ಆದರೆ ನಾನೊಂದು ಬಗೆದರೆ ದೈವವೊಂದು ಬಗೆದಂತಾಯಿತಲ್ಲ. ಈ ಪಯಣಿಗರಿಂದ ನಾನು ತಪ್ಪಿಸಿಕೊಳ್ಳುವಂತಿಲ್ಲವೇ?" ಎಂದು ಅವಳು ವಿಚಾರಿಸತೊಡಗಿದಳು.

ಆಗ ಥಟ್ಟನೆ ಒಂದು ವಿಷಯವು ಅವಳಿಗೆ ಹೊಳೆಯಿತು. ಆ ಕಲ್ಪನೆ ಬಂದ ಕೂಡಲೇ ಅವಳು ಉತ್ಸಾಹಿತಳಾದಳು "ಹೌದು. ಹೀಗೇಕಾಗಬಾರದು? ವಿಮಾನಗಳಿಗೆ ಬಾನಿನಲ್ಲಿಯೇ ಬೆಂಕಿಹತ್ತಿ ಅವು ಕೆಳಗೆ ಬಿದ್ದು ಅದರಲ್ಲಿದ್ದ ಪ್ರಯಾಣಿಕರೆಲ್ಲ ಸತ್ತುಹೋದ ಉದಾಹರಣೆಗಳು ಎಷ್ಟಿಲ್ಲ? ಅಂದ ಮೇಲೆ ಈ ವಿಮಾನಕ್ಕೂ ಹಾಗೆ ಬೆಂಕಿಬಿದ್ದು ಇದೂ ಅಪಘಾತಕ್ಕೀಡಾಗಬಾರದೇಕೆ? ಹೌದು. ಇದು ಅಸಂಭವವೇನೂ ಅಲ್ಲ. ದೇವರೇ ಇದಕ್ಕೂ ಬೇಗನೇ ಬೆಂಕಿಹತ್ತಲಿ" ಎಂದು ಅವಳು ಪ್ರಾರ್ಥಿಸತೊಡಗಿದಳು.

ಹೀಗೆ ಪ್ರಾರ್ಥಿಸುತ್ತಿರುವಾಗಲೇ ಅವಳಿಗೆ ಇನ್ನೊಂದು ವಿಚಾರವೂ ಬಂದಿತು. "ಎಷ್ಟಾದರೂ ನಾನು ವಿಮಾನ ಪರಿಚಾರಿಕೆ. ಇದರಲ್ಲಿ ಪ್ರಯಾಣಮಾಡುವವರ ಸೇವೆಗೈಯುವುದು ನನ್ನ ಕೆಲಸ. ಅಂದ ಮೇಲೆ ವಿಮಾನಕ್ಕೆ ಬೆಂಕಿಬಿದ್ದು ಪ್ರಯಾಣಿಕರೆಲ್ಲ ನಾಶವಾಗಲಿ ಎಂದು ಬಯಸುವದು ಸರಿಯೇ?"

ಆದರೆ ಈ ವಿಚಾರ ಬಹಳ ಹೊತ್ತು ನಿಲ್ಲಲಿಲ್ಲ. "ಅಲ್ಲ ನನ್ನನ್ನು ನೋಡಿ ನಿರಾಕರಿಸಿದ ವರಗಳೆಲ್ಲ ಒಟ್ಟಾಗಿ ಇಲ್ಲಿ ಏಕೆ ಬರಬೇಕು? ಅವರೆಲ್ಲ ಕೂಡಿ ಮಾತನಾಡಿಕೊಂಡೇ ಇಲ್ಲಿ ಬಂದು ಕುಳಿತಿರಬೇಕಲ್ಲವೇ? ಅವರಿಗೆಲ್ಲ ಏನೋ ಒಂದು ದುರುದ್ದೇಶ ಇರಲೇಬೇಕಲ್ಲವೇ? ಅವರು ನನ್ನ ಕೇಡನ್ನು ಬಯಸಿದಾಗ ನಾನೇಕೆ ಅವರ ನಾಶವನ್ನು ಬಯಸಬಾರದು? ಎಂದು ಮತ್ತೊಂದು ವಿಚಾರ ಅವಳಲ್ಲಿ ಮೂಡಿ ನಿಂತು ಆ ವಿಮಾನಕ್ಕೆ ಬೆಂಕಿಬೀಳುವ ದಾರಿಯನ್ನೇ ನೋಡಹತ್ತಿದಳು.

ಆಗ ಇನ್ನೂ ಒಂದು ವಿಚಾರ ಅವಳ ತಲೆಯಲ್ಲಿ ಸುಳಿಯಿತು. "ಅಲ್ಲ ಎಷ್ಟೋ ಸಲ ಅಪಘಾತವಾಗಲಿ ಎಂದು ನಾವು ಬಯಿಸಿದಾಗ ಅಪಘಾತವಾಗದಿರಲಿ ಎಂದು ನಾವು ಇಚ್ಛಿಸುತ್ತಿದ್ದಾಗ ಅಪಘಾತವಾಗಿಯೇ ಬಿಡುತ್ತದೆ. ಇಲ್ಲಿಯೂ ಹಾಗೇ ಆದರೆ....? ಏನಿಲ್ಲ. ಈಗ ಅಪಘಾತವಾಗುವ ಲಕ್ಷಣ ತೋರದಿದ್ದರೆ ನಾನೇ ಈ ವಿಮಾನಕ್ಕೆ ನನ್ನ ಕೈಯಿಂದಲೇ ಬೆಂಕಿ ಹಚ್ಚುತ್ತೇನೆ. ಈ ಪ್ರಯಾಣಿಕರನ್ನು ಸುಟ್ಟುಹಾಕುತ್ತೇನೆ" ಎಂದು ಅವಡುಗಚ್ಚಿ ಉನ್ಮತ್ತಳಾಗಿ ಅವಳು ತನ್ನ ಕೋಣೆಯನ್ನು ಪ್ರವೇಶಿಸಿದಳು.

ಆದರೆ ಆ ಕೋಣೆಯಲ್ಲಿ ಆಗಲೇ ಹೊಗೆ ತುಂಬಿತ್ತು. ಆ ಹೊಗೆಯನ್ನು ತಾಳಲಾರದೆ ಅವಳು ಹೊರಗೆ ಬಂದಾಗ ಆ ವಿಮಾನಕ್ಕೆ

ಜವಾಗಿಯೂ ಬೆಂಕಿ ಹತ್ತಿತ್ತು. ವಿಮಾನದಲ್ಲಿ ಗದ್ದಲ ಸುರುವಾತ್ತು. ಪ್ರಯಾಣಿಕರ ಕೋಣೆಯ ತುಂಬ ಹೊಗೆತುಂಬಿತ್ತು. ಅಲ್ಲಿದ್ದ ಯಣಿಗರು ವಿಮಾನದ ಬಾಗಿಲು ತೆರೆದು ಹೊರಗೆ ಜಿಗಿಯಲು ಯತ್ನಿಸ ೊಡಗಿದರು. ಆಗ ಮಂಜುಳೆ ಓಡಿಹೋಗಿ ಆ ಬಾಗಿಲು ತೆರೆಯ ಂತೆ ಅದಕ್ಕೆ ಅಡ್ಡ ನಿಂತಳು. ಅಷ್ಟರಲ್ಲಿ 'ಢಂ' ಎಂಬ ಒಂದು ೊಡ್ಡ ಸ್ಫೋಟವಾಯಿತು. 'ಅಯ್ಯೋ ಸತ್ತೆ' ಎಂದು ಚೀರಿ ುಂಜುಳೆ ಕಣ್ಣು ಮುಚ್ಚಿದಳು.

* * * *

ಮಂಜುಳೆ ಕಣ್ಣು ತೆರೆದಾಗ ತಾನೆಲ್ಲಿರುವೆನೆಂಬದೇ ಅವಳಿಗೆ ತಿಳಿ ುಲಿಲ್ಲ. ಮೈಮೇಲೆ ಕೈಯಾಡಿಸಿಕೊಂಡಾಗ ಕೈಕಾಲು ಮುರಿದು ಹೋಗಿರಲಿಲ್ಲ. ಸುತ್ತಲೂ ಕಣ್ಣು ಹೊರಳಿಸಿ ನೋಡಿದಾಗ ತನ್ನ ುನೆಯಲ್ಲಿ ತಾನು ಮಲಗಿಕೊಂಡಂತೆ ಅವಳಿಗೆ ಎನಿಸಿತು.

ಅವಳು ಎದ್ದು ಚಟ್ಟನೇ ಕುಳಿತು ಕಣ್ಣು ಉಜ್ಜಿಕೊಂಡು ಸುತ್ತಲೂ ೋಡಿದಳು. ಹೊಂಬಿಸಿಲು ಅವಳ ಕೋಣೆಯನ್ನು ಅಲಂಕರಿಸಿತ್ತು. ಳಗಿನ ತಂಗಾಳಿ ತೀಡುತ್ತಲಿತ್ತು. ಎದುರುಮನೆಯ ಬಾನುಲಿ ದೊಂದು ದೇವರನಾಮ ಹೇಳುತ್ತಲಿತ್ತು.

"ಹಾಗಾದರೆ ನಾನು ವಿಮಾನ ಪರಿಚಾರಿಕೆಯಾದದ್ದು, ವಿಮಾನ ಪಘಾತವಾದದ್ದು ಎಲ್ಲ ಸುಳ್ಳೇ ?" ಎಂದು ವಿಚಾರಿಸತೊಡಗಿ ಳು. ಆಗ ಅದೊಂದು ಕನಸು ಎಂಬುದು ಅವಳಿಗೆ ತಿಳಿದುಬಂದಿತು.

"ಅಬ್ಬಾ ಎಂಥ ಕನಸು ಅದು !" ಎಂದು ಉದ್ಗಾರ ತೆಗೆದಳು.

ಅಷ್ಟರಲ್ಲಿ "ಮಂಜುಳಾ ಬೇಗನೆ ಏಳು. ಈಗ ನಿನ್ನನ್ನು ನೋಡಲು ಬರುವವರಿದ್ದಾರೆಂಬುದನ್ನು ಮರೆತೇ ಬಿಟ್ಟಿರುವಿಯೇನು ? ಬೇಗನೇ ಹೆಳಲು ಹಾಕಿಕೊಂಡು ಮೈತೊಳೆದುಕೊಂಡು ಹೊಸ ಸೀರೆ ಉಟ್ಟುಕೋ. ಈ ಸಾರೆಯಾದರೂ ದೇವರ ದಯದಿಂದ ಕೂಡಿ ಬರಲಿ" ಎನ್ನುತ್ತ ಮಂಜುಳೆಯ ತಾಯಿ ಕೋಣೆಯಲ್ಲಿ ಬಂದರು.

ಆಗ ಮಂಜುಳೆ "ನಾ ಒಲ್ಲೆ. ಇನ್ನು ಮೇಲೆ ನಾನು ಯಾವ ವರನ ಮುಂದೂ ಕುಳಿತುಕೊಳ್ಳುವದಿಲ್ಲ. ಇಲ್ಲಿಯ ವರೆಗೂ ನಡೆದ ಪ್ರದರ್ಶನ ಸಾಕು" ಎಂದು ಸಿಡುಕಿನಿಂದಲೇ ಹೇಳಿದಳು.

ಆಗ ಅವಳ ತಾಯಿ "ಹೀಗೆ ಸಿಡುಕು ಮಾಡಿದರೆ ಹೇಗೆ ನಡೆದೀತು. ಹೆಣ್ಣಾಗಿ ಹುಟ್ಟಿದ ಮೇಲೆ ಮದುವೆ ಮಾಡಿಕೊಳ್ಳುವದು ಬಿಟ್ಟದ್ದಲ್ಲ ನೋಡು" ಎಂದು ರಮಿಸುವ ದನಿಯಲ್ಲಿ ಹೇಳಿದರು. ಅದನ್ನು ಮಂಜುಳೆ ಕಿವಿಯ ಮೇಲೆ ಹಾಕಿಕೊಳ್ಳದೇ "ನಾನು ಎಲ್ಲಿಯಾದರೂ ನೌಕರಿ ಮಾಡಿ ಸ್ವತಂತ್ರಳಾಗಿರುತ್ತೇನೆ. ಆದರೆ ಈ ವರಗಳ ಮುಂದೆ ಕೂಡ್ರಲಾರೆ" ಎಂದು ಹಟವನ್ನೇ ಹಿಡಿದಳು.

"ಹೀಗೆ ಹುಚ್ಚಿಯಂತೆ ಮಾಡಬೇಡ. ನೌಕರಿ ಹಿಡಿದು ಸ್ವತಂತ್ರವಾಗಿದ್ದರೆ ನೀನು ಸುಖದಿಂದ ಇರುವಿ ಎಂಬ ಕಲ್ಪನೆ ತಪ್ಪು. ಹೆಣ್ಣಿಗೆ ಗಂಡಿನ ಆಸರವಿಲ್ಲದೆ ನಡೆಯುವದೇ ಇಲ್ಲ. ಸ್ವತಂತ್ರಳಾಗಿದ್ದು ನಾಳೆ ಯಾವದೋ ಗಂಡಿನ ಆಸರೆ ಪಡೆಯುವದಕ್ಕಿಂತ ಈಗ ಗಂಡನ ಆಸರದಲ್ಲಿದ್ದು ಒಳ್ಳೆಯ ಹೆಂಡತಿಯಾಗಿ ಮಕ್ಕಳ ತಾಯಿಯಾಗಿ ಬಾಳುವದು ಲೇಸು" ಎಂದು ಉಪದೇಶ ಮಾಡಿದರು.

ಮಂಜುಳೆ ಏನೂ ಮಾತನಾಡದೆ ಎದ್ದು ಹೋಗಿ ಮುಖ ತೊಳೆದುಕೊಂಡು ಬಂದು ತನ್ನ ಕೋಣೆಯಲ್ಲಿದ್ದ ಕನ್ನಡಿಯ ಮುಂದೆ ಕುಳಿತಳು.

ಕನ್ನಡಿಯ ಮುಂದೆ ಕುಳಿತು ಮುಖ ನೋಡಿಕೊಂಡಾಗ ತಾನು ವಿಮಾನ ಪರಿಚಾರಿಕೆಯಾದದ್ದು ಅವಳಿಗೆ ನೆನಪಾಯಿತು. ಆ ಕನಸಿನ ಅಚ್ಚು ಅವಳ ಮನಸ್ಸಿನಿಂದ ಇನ್ನೂ ಮಾಸಿರಲಿಲ್ಲ. ಅವಳು "ಅಯ್ಯೋ ಎಂಥ ಕನಸು ! ಇಂಥ ಕನಸು ಏಕೆ ಬಿದ್ದಿತು ?" ಎಂದು ವಿಚಾರಿಸುತ್ತಿದ್ದಾಗ ತನ್ನ ಹಾಸಿಗೆಯ ಮೇಲೆ ಬಕ್ಕಬೋರಲಾಗಿ ಬಿದ್ದ ಮಾಸಪತ್ರಿಕೆಯೊಂದು ಕನ್ನಡಿಯಲ್ಲಿ ಕಂಡಿತು. ಅದನ್ನು ಎತ್ತಿಕೊಂಡು ಸರಿಯಾಗಿ ಹಿಡಿದು ನೋಡಿದಾಗ **"ನೀವೂ ವಿಮಾನ ಪರಿಚಾರಿಕೆಯಾಗಬಹುದು."** ಎಂಬ ದಪ್ಪ ಅಕ್ಷರದ ಒಂದು ಲೇಖನ ಕಂಡಿತು. ಅದನ್ನು ಒಬ್ಬ ವಿಮಾನ ಪರಿಚಾರಿಕೆ ಬರೆದಿದ್ದಳು.

ಆ ಲೇಖನನನ್ನು ನೋಡಿದ ಕೂಡಲೇ ಕಳೆದ ರಾತ್ರಿ ತಾನು ಆ ಲೇಖನವನ್ನು ಓದಿದ್ದೂ ಅದರ ನಂತರ ಇಂದು ಬರಲಿರುವ ವರನ ಬಗ್ಗೆ ಇಲ್ಲಿಯ ವರೆಗೂ ನಡೆದ ತನ್ನ ಪ್ರದರ್ಶನದ ಬಗ್ಗೆ ತಾನು ವಿಚಾರಿಸುತ್ತಿರುವಾಗಲೇ ನಿದ್ದೆ ಹತ್ತಿದ್ದೂ ನೆನಪಾದವು. ಆಗ ಅವಳ ಮೊಗದಲ್ಲಿ ಒಂದು ಮೆಲುನಗೆ ಮೂಡಿತು. ಕನ್ನಡಿಯಲ್ಲಿ ಪ್ರತಿಬಿಂಬಿತವಾದ ಆ ನಗುಮೊಗವನ್ನು ನೋಡುತ್ತ ಕನಸಿನ ಲೋಕವು ಬಹಳ ವಿಚಿತ್ರವಾಗಿದೆಯಲ್ಲವೇ ? ಎಂದು ಪ್ರಶ್ನೆ ಮಾಡುತ್ತ ಬರಲಿರುವ ವರನಿಗಾಗಿ ಸಿಂಗರಿಸಿಕೊಳ್ಳಲೆಂದು ಮಂಜುಳಾ ತನ್ನ ಜಡೆಯನ್ನು ಬಿಚ್ಚತೊಡಗಿದಳು.

# ಚಂದ್ರಲೋಕವನ್ನು ಸೇರಿದ ಲೂನಿಕ್

ಲೇಖಕರು : ಶ್ರೀ. ಯು. ರಾಘವೇಂದ್ರಆಚಾರ್ಯ, ಎಂ. ಎ.

ರಷಿಯವು ಭೂ-ಭೌತಿಕ ವಿಜ್ಞಾನದಲ್ಲಿ ಯಶಸ್ವಿಯಾಗಿ ಮುನ್ನಡೆದಿದೆಯೆಂಬುದಕ್ಕೆ ಚಂದ್ರಲೋಕ ಸೇರಿದ ಲೂನಿಕ್, ಚಂದ್ರಲೋಕದ ಸುತ್ತಲೂ ಪರಿಭ್ರಮಣಗೊಳ್ಳುವ ಸ್ವಯಂಚಲಿತ ಅಂತರಗ್ರಹ ನಿಲ್ದಾಣವೊಂದನ್ನು ಹಾರಿಸಿದುದು ಪ್ರತ್ಯಕ್ಷ ನಿದರ್ಶನವಾಗಿರುವವು. ಈ ವೈಜ್ಞಾನಿಕ ತಂತ್ರದ ಹಿನ್ನೆಲೆಯೇನೆಂಬುದನ್ನು ಈ ಲೇಖನದಲ್ಲಿ ಸ್ಥೂಲವಾಗಿ ಲೇಖಕರು ವಿವರಿಸಿರುವರು.

೧೯೫೯ನೇ ಇಸ್ವಿ ಸಪ್ಟಂಬರ ದಿನಾಂಕ ೧೨ರಲ್ಲಿ ರಶ್ಯಾದೇಶವು 'ಲೂನಿಕ್' ಎಂಬ ತನ್ನ ರಾಕೇಟೊಂದನ್ನು ಪ್ರಯೋಗಿಸಿ ಅದು ದಿನಾಂಕ ೧೪ ರ ಮುಂಜಾನೆ ಚಂದ್ರಲೋಕವನ್ನು ಸೇರಿತು ಎಂಬ ವಾರ್ತೆ ಇಡೀ ಜಗತ್ತನ್ನೇ ವಿಸ್ಮಯಗೊಳಿಸಿರುವುದಷ್ಟೆ! ಗಗನ ವಿಹಾರ ಕ್ಷೇತ್ರದಲ್ಲಿ ಅಮೇರಿಕಾಕ್ಕು ರಶ್ಯಾಕ್ಕೂ ಕಳೆದ ಮೂರು ವರ್ಷಗಳಿಂದಲೂ ಸ್ಪರ್ಧೆ ನಡೆಯುತ್ತಿತ್ತು. ಆದರ ಪ್ರತಿ ಒಂದು ಘಟ್ಟದಲ್ಲೂ ಈ ವರೆಗೂ ರಶ್ಯಾ ದೇಶವೇ ಜಯಶಾಲಿಯಾಗಿದ್ದುದು ಅಮೇರಿಕಾದ ದರ್ಪಕ್ಕೂ ಸ್ವಾಭಿಮಾನಕ್ಕೂ ಒಂದು ಧಕ್ಕೆಯಾಗಿತ್ತು. ೧೯೫೭ ನೆಯ ಇಸ್ವಿ ಅಕ್ಟೋಬರ್ ೪ ರಲ್ಲಿ ಕೃತಕಚಂದ್ರನನ್ನು ಸೃಷ್ಟಿಸಿದ ಕೀರ್ತಿಯೂ ರಶ್ಯಾದ ಪಾಲಿಗೆಸೇರಿತ್ತು. 'ಸ್ಪುಟ್ನಿಕ್' ಎಂಬ ಕೃತಕಚಂದ್ರವು ಸುಮಾರು ಎರಡು ಅಡಿ ವ್ಯಾಸವುಳ್ಳದ್ದಾಗಿ ಹೆಚ್ಚುಕಡಿಮೆ ೨೨೦ ರಾತಲು ಭಾರವಾಗಿತ್ತು. ಇದಾದ ಕೆಲವು ದಿವಸಗಳಲ್ಲೇ ಅಮೇರಿಕಾವೂ ಒಂದು ಕೃತಕಚಂದ್ರನನ್ನು ಸೃಷ್ಟಿಸಲು ಪ್ರಯತ್ನಿಸಿತು. ಆದರೆ ದುರದೃಷ್ಟವಶಾತ್ ಈ ರಾಕೇಟು ನಡುದಾರಿಯಲ್ಲೇ ಸ್ಫೋಟಗೊಂಡು ಪ್ರಯೋಗವು ನಿಷ್ಫಲವಾಯಿತು. ಇದರಿಂದ ಅಮೇರಿಕಾಕ್ಕೆ ಮುಖಭಂಗವಾಯಿತು. ಇದರ ಹಿಂದೆಯೇ ಅಂದರೆ ನವಂಬರ ತಿಂಗಳಲ್ಲಿ ರಶ್ಯಾವು ಸುಮಾರು ಅರ್ಧಖಂಡಿ ಭಾರದ ಇನ್ನೊಂದು ಸ್ಪುಟ್ನಿಕನ್ನು ಯಶಸ್ವಿಯಾಗಿ ಹಾರಿಸಿತು. ಇದರಲ್ಲಿ ಒಂದು ನಾಯಿ ಕೂಡಾ ಇದ್ದಿತು. ರಶಿಯನ್ನರ ಈ ಸಾಹಸದಿಂದ ಅಮೇರಿಕವು ಇನ್ನಷ್ಟು ರೇಗಿತು. ಈ ಪ್ರಯೋಗದಿಂದ ಬಡನಾಯಿ ಸತ್ತಿತೆಂದೂ ನಾಯಿಯನ್ನು ವೃಥಾ ಕೊಂದದ್ದು ರಶ್ಯನರ ನಿರ್ದಯತೆಯ ಸೂಚಕವೆಂದೂ ಅಮೇರಿಕಾ ಸಾರಿತು. ಮನುಷ್ಯನ ಆಹಾರಕ್ಕಾಗಿ ಪ್ರತಿದಿನ ಲಕ್ಷಾಂತರ ಪಶುಗಳು ಕಟುಕನಿಂದ ಕೊಲ್ಲಲ್ಪಡುವಾಗ ಈ ಪ್ರಯೋಗದಿಂದಾಗಿ ಒಂದು ನಾಯಿ ಸತ್ತಲ್ಲಿ ಅದೊಂದು ಕ್ರೌರ್ಯವೆನಿಸುವದೇ? ಅಮೇರಿಕವು ಭಗೀರಥ ಪ್ರಯತ್ನ ಮಾಡಿ-ಕೊಟ್ಯಂತರ ಡಾಲರುಗಳನ್ನು ವೆಚ್ಚಮಾಡಿ ಕೊನೆಗೆ ಹೇಗೂ ೨೦ ರಾತಲು ಭಾರದ ಕೃತಕಚಂದ್ರನನ್ನು ಜನವರಿ ೧೯೫೮ ರಲ್ಲಿ ನಿರ್ಮಿಸಿ ತನ್ನ ಮರ್ಯಾದೆಯನ್ನು ಉಳಿಸಿಕೊಂಡಿತು.

ಅಮೇರಿಕಾದ ಉಪರಾಷ್ಟ್ರಪತಿ ನಿಕ್ಸನರು ರಶ್ಯಾಕ್ಕೆ ಬಂದಾಗ ಕ್ರುಶ್ಚೇವರು ಪತ್ರಿಕಾಪ್ರತಿನಿಧಿಗಳೊಡನೆ ಮಾತನಾಡುತ್ತಾ 'ನಾವು ಅರ್ಧ ಖಂಡಿ ಭಾರದ ಕೃತಕಚಂದ್ರನನ್ನು ನಿರ್ಮಿಸುತ್ತಿರುವಾಗ ಅಮೇರಿಕಾ ಬರೇ ಕಿತ್ತಳೆ ಹಣ್ಣಿನಂತೆ ಕ್ಷುದ್ರವಸ್ತುವನ್ನು ಹಾರಿಸುತ್ತಿದೆ' ಎಂದು ಚೇಷ್ಟೆಮಾಡಿದರು. ತಾವು ಇನ್ನು ಕೆಲವು ದಿನಗಳಲ್ಲೇ ರಾಕೇಟನ್ನು ಚಂದ್ರಲೋಕಕ್ಕೆ ಕಳುಹಿಸುವುದಾಗಿಯೂ ಜಂಭಕೊಚ್ಚಿಕೊಂಡರು.

## ರಶಿಯನ್ನರ ಮುನ್ನಡೆ

೧೯೫೯ ನೇ ಇಸ್ವಿ ಜನವರಿಯಲ್ಲಿ ರಶ್ಯವು ತನ್ನ ಮೊದಲನೆಯ 'ಲೂನಿಕ' ನ್ನು ಚಂದ್ರಲೋಕಕ್ಕೆ ಕಳುಹಿಸಲು ಪ್ರಯತ್ನಪಟ್ಟಿತು ಅದರೆ ಅದು ಸ್ವಲ್ಪ ಗುರಿತಪ್ಪಿ, ಚಂದ್ರಲೋಕಕ್ಕೆ ತಗಲದೆ ಅದಕ್ಕಿಂತಲೂ ಆಚೆ ಹಾರಿ ಹೋಯಿತು. ಈ ರಾಕೇಟು ಭೂಮಿಯ ಆಕರ್ಷಣೆಯನ್ನು ದಾಟಿದ್ದುದರಿಂದ ಅದು ಭೂಮಿಗೆ ಹಿಂತಿರುಗದೆ ಒಂದು ಹೊಸ ಗ್ರಹದಂತೆ ಸೂರ್ಯನಿಗೆ ಪ್ರದಕ್ಷಣೆ ಬರಲು ತೊಡಗಿತು. ಅನಿರೀಕ್ಷಿತವಾಗಿಯಾದರೂ ಹೊಸ ಗ್ರಹವನ್ನು ಪ್ರಥಮ ಬಾರಿ ಸೃಷ್ಟಿಸಿದ ಕೀರ್ತಿಯೂ ರಶ್ಯಾಕ್ಕೆ ದೊರಕಿತು. 'ಅಡಿಗೆ ಬಿದ್ದರೂ ಮೂಗು ಮೇಲು' ಎಂಬಂತೆ ಪ್ರಯೋಗವು




ಇದು ಚಂದ್ರಗ್ರಹದ ನಕ್ಷೆ. ಖಗೋಲಶಾಸ್ತ್ರಜ್ಞರು ವಿವಿಧ ಭಾಗಗಳಿಗೆ ಬೇರೆ ಬೇರೆ ಹೆಸರುಗಳನ್ನು ಕೊಟ್ಟಿರುವರು. ಎರಡನೆ ಲೂನಿಕ್ ನಿರ್ಮಲತೆಯ ಸಾಗರ ಇಲ್ಲವೇ ಇಬ್ಬನಿಯ ಸಾಗರ ಅಥವಾ ಸ್ವಾಸ್ಥ್ಯ ಸಾಗರದ ಪ್ರದೇಶದಲ್ಲಿ ಇಳಿದಿರಬಹುದೆಂದು ತರ್ಕವಿದೆ.

ಎಣಿಸಿದ ಫಲವನ್ನು ಕೊಡದೆ ಹೋದರೂ ತಾವು ಕೃತಕ ಗ್ರಹವನ್ನೇ ಸೃಷ್ಟಿಸಲು ಪ್ರಯೋಗನಡೆಸಿದ್ದೆಂದು ರಶ್ಯನರು ಜಂಭ ಕೊಚ್ಚಿದರು.

ಅಂತೂ ಕ್ರುಶ್ಚೇವರು ಅಮೇರಿಕಾಕ್ಕೆ ಹೋಗುವ ಮುಂಚಿತವಾಗಿಯೇ ರಶ್ಯಾವು ತನ್ನ ಎರಡನೇ ಲೂನಿಕನ್ನು ಚಂದ್ರಲೋಕಕ್ಕೆ ಕಳುಹಿಸಿಯೇ ಬಿಟ್ಟಿತು. ವೈಜ್ಞಾನಿಕ ಸಂಶೋಧನೆಯಲ್ಲೂ ಖಂಡಾಸ್ತ್ರ (Inter Continental Ballistic Missile), ರಾಕೇಟು ಮೊದಲಾದ ಯುದ್ಧೋಪಯೋಗಿ ಸಲಕರಣ ಸಾಮಗ್ರಿಗಳಲ್ಲೂ ಅಮೇರಿಕಕ್ಕಿಂತಲೂ ತಮ್ಮದೇ ಒಂದು ಕೈಮೇಲು ಎಂಬ ಭಾವನೆಯನ್ನು ಇಟ್ಟುಕೊಂಡೇ ಕ್ರುಶ್ಚೇವರು ತಮ್ಮ ಅಮೇರಿಕಾಯಾತ್ರೆಯನ್ನು ಆರಂಭಿಸಿದರು. ತಾವೆಣಿಸಿದ್ದಕ್ಕಿಂತಲೂ ತಮ್ಮ ಲೂನಿಕೆಗೆ ವೇಗವು ಸ್ವಲ್ಪ ಅಧಿಕವಾಗಿರುವುದರಿಂದ ಅದು ಚಂದ್ರಲೋಕವನ್ನು ೪ ಮಿನಿಟು ಮುಂಚಿತವಾಗಿಯೇ ಸೇರುವುದೆಂದು ಸಾರಿ ಈ ಪ್ರಯೋಗದ ಮೇಲೆ ತಮಗಿರುವ ಸಂಪೂರ್ಣ ಹತೋಟಿಯನ್ನು ರಶಿಯವು ಪ್ರದರ್ಶಿಸಿತು. ಅಮೇರಿಕದ ನಿಲ್ದಾಣದಲ್ಲಿ ಇಳಿದಾಗಲೇ ಒಂದು ಭಾಷಣದಲ್ಲಿ ಕ್ರುಶ್ಚೇವರು ತಮ್ಮ ಲೂನಿಕಿನ ಸಾಹಸ ಜಂಭವನ್ನು ಕೊಚ್ಚಿಕೊಳ್ಳದಿರಲಿಲ್ಲ. ತಮ್ಮ ಪ್ರಯೋಗದಿಂದಾಗಿ ಭೂಮಿಯ ಭಾರ ಸ್ವಲ್ಪ ಕಡಿಮೆಯಾಯಿತು. ಅಷ್ಟೇ ಮಟ್ಟಿಗೆ ಚಂದ್ರಲೋಕದ ಭಾರ ಏರಿತು ಎಂದರು. ತಮ್ಮ ನಿಶಾನೆಯನ್ನು ಚಂದ್ರಲೋಕದಲ್ಲಿ ಊರಿದ್ದೇವೆ. ಅದು ಅಮೇರಿಕಾದ ನಿಶಾನೆಯನ್ನು ಎದುರು ನೋಡುತ್ತಿದೆ ಎಂದೂ ಹೇಳಿದರು. ಇಂತಹ ಮಾತಿನಿಂದ ಚುಚ್ಚಿದ್ದು ಸಾಲದೆ 'ಗಂಡಸ್ಯೋಪರಿ ಪಿಟಕಃ' ಎಂಬಂತೆ ಲೂನಿಕಿನ ಒಂದು ಚಿಕ್ಕ ಪ್ರತಿರೂಪವನ್ನು ಐಸೆನ್‌ಹಾವರರಿಗೆ ಉಡುಗರೆ ಕೊಟ್ಟರು. ಕ್ರುಶ್ಚೇವರ ಈ ಎಲ್ಲಾ ವರ್ತನೆ ಅಮೇರಿಕಕ್ಕೆ ಅವಮಾನದ ಗಾಯದ ಮೇಲೆ ಬರೆಬಿದ್ದಂತಾಯಿತು.

ಅಮೇರಿಕಾದ ಜನರು ರೇಗಿ ಹುಚ್ಚರಂತಾದರು. ಕ್ರುಶ್ಚೇವರು ಅಮೇರಿಕಾವನ್ನು ಬಿಟ್ಟು ಹೋಗುವುದರೊಳಗೆ ತಾವೂ ಒಂದು ರಾಕೆಟನ್ನು ಚಂದ್ರಲೋಕಕ್ಕೆ ಕಳುಹಿಸಿ ಮಾನ ಉಳಿಸಿಕೊಳ್ಳಬೇಕೆಂದು ಭಗೀರಥಪ್ರಯತ್ನ ಪಟ್ಟರು. ಇದಕ್ಕಾಗಿ ಎಷ್ಟು ಹಣ ಬೇಕಾದರೂ ವೆಚ್ಚಮಾಡಲಿಕ್ಕೆ ತಯಾರಿದ್ದರು. ಪ್ರಯೋಗವನ್ನು ಅಮೇರಿಕಾದ ವಿಜ್ಞಾನಿಗಳು ಮಾಡದೆ ಇರಲಿಲ್ಲ. ಆದರೆ ಈ ಸಲವೂ ದುರದೃಷ್ಟವಶಾತ್ ಈ ರಾಕೇಟು ನಡುದಾರಿಯಲ್ಲೇ ಒಡೆದುಹೋಯಿತು. ಕ್ರುಶ್ಚೇವರು ತಮ್ಮ ವಿಜಯಯಾತ್ರೆಯನ್ನು ಮುಗಿಸಿಕೊಂಡು ಸಪ್ಟಂಬರ ೨೮ ರಲ್ಲಿ ಮಾಸ್ಕೋವಿಗೆ ಹಿಂತಿರುಗಿದರು.

## ಲೂನಿಕ್ ಚಂದ್ರಲೋಕ ತಲುಪಿದ್ದೆಂತು?

ಲೂನಿಕ್ ಚಂದ್ರಲೋಕವನ್ನು ತಲುಪಿದ್ದು ಹೇಗೆ ಮತ್ತು ಅದರ ವೈಜ್ಞಾನಿಕ ಹಿನ್ನೆಲೆ ಏನು ಎಂಬುದನ್ನು ಸ್ಥೂಲವಾಗಿ ವಿವರಿಸುವುದೇ ಈ ಲೇಖನದ ಉದ್ದೇಶ.

ನಾವು ಯಾವುದಾದರೂ ಒಂದು ವಸ್ತುವನ್ನು ಭೂಮಿಯಿಂದ ಮೇಲಕ್ಕೆಸೆದರೆ ಅದು ಸ್ವಲ್ಪ ಎತ್ತರ ಹೋಗಿ ತಿರುಗಿ ಭೂಮಿಗೇ ಬೀಳುವುದು ಎಂಬುದು ಎಲ್ಲರಿಗೂ ತಿಳಿದಿದೆ. ಭೂಮಿಗೆ ಎಲ್ಲಾ ವಸ್ತುವನ್ನು ತನ್ನ ಕೇಂದ್ರದೆಡೆಗೆ ಎಳೆಕೊಳ್ಳುವ ಒಂದು ಬಲ ಇದೆ. ಭೂಮಿಯ ಕೇಂದ್ರದಿಂದ ದೂರ ಸರಿದಂತೆ ಈ ಬಲವು ದೂರದ ವರ್ಗಕ್ಕೆ ಸರಿಯಾಗಿ ಕಡಿಮೆಯಾಗುತ್ತಾ ಹೋಗುತ್ತದೆ. ದೂರವು ಮೂರು ಪಾಲಷ್ಟು ಹೆಚ್ಚಿದರೆ ಈ ಬಲವು ೯ ಪಾಲಷ್ಟು ಕುಂದುತ್ತದೆ. ಸುಮಾರು ಹತ್ತು ಲಕ್ಷ ಮೈಲು ಎತ್ತರ ಹೋದರೆ ಅಲ್ಲಿ ಭೂಮಿಯ ಆಕರ್ಷಣ ಬಲ ಅತಿ ಅಲ್ಪ— ಇಲ್ಲವೆ ಇಲ್ಲವೆಂತಲೂ ಅನ್ನಬಹುದಷ್ಟು—ಅಲ್ಪವಾಗುವುದು. ಇದೇ ಭೂಮಿಯ ಆಕರ್ಷಣದ ಗಡಿ.

ನಾವು ಒಂದು ವಸ್ತುವನ್ನು ಮೇಲಕ್ಕೆಸೆಯುವಾಗ, ರಭಸದಿಂದ ಎಸೆದರೆ ಅದು ಹೆಚ್ಚು ಮೇಲಕ್ಕೆ ಹೋಗುವುದು. ಎಸೆಯುವ ರಭಸವು ಏರಿದಂತೆ ಅದು ತಲುಪುವ ಎತ್ತರವೂ ಏರುತ್ತಾ ಹೋಗುವುದು. ನಾವು ಎಸೆಯುವ ರಭಸವು ಒಂದು ಸೆಕೆಂಡಿಗೆ ಏಳು ಮೈಲು ಆದರೆ, ಆ ವಸ್ತುವು ಒಂದು ದಶಲಕ್ಷ ಮೈಲು ಎತ್ತರಹಾರಿ ಭೂಮಿಯ ಆಕರ್ಷಣ ಗಡಿಯನ್ನು ದಾಟುವುದು. ನಂತರ ಆ ವಸ್ತುವು ಭೂಮಿಗೆ ಹಿಂದೆ ಬೀಳಲಾರದು. ಈ ವೇಗಕ್ಕೆ 'ಗಡಿಪಾರು ವೇಗ' (Escape velocity) ಎಂದು ಹೆಸರು. ಈ ವೇಗದಿಂದಾಗಿ ಆ ವಸ್ತುವು ಭೂಮಿಯ ಆಕರ್ಷಣದಿಂದ ತಪ್ಪಿಸಿಕೊಂಡರೂ ಸೂರ್ಯನ ಆಕರ್ಷಣದಿಂದ ತಪ್ಪಿಸಿಕೊಳ್ಳಲಾರದು. ಆದರೆ ಅದು ಎಲ್ಲಾ ಗ್ರಹಗಳಂತೆ (ನಮ್ಮ ಭೂಮಿಯಂತೆಯೂ) ಸೂರ್ಯನಿಗೆ ಪ್ರದಕ್ಷಿಣೆ ಬರಲು ಆರಂಭಿಸುತ್ತದೆ. ಆಗ ಅದು ಕೃತಕಗ್ರಹವಾಗುವುದು.

ನಾವು ಒಂದು ವಸ್ತುವನ್ನು ಸೆಕೆಂಡಿಗೆ ೫ ಮೈಲು ವೇಗದಲ್ಲಿ ಮೇಲಕ್ಕೆಸೆದರೆ ಅದು ಭೂಮಿಯ ತಳದಿಂದ ಸುಮಾರು ೫೦೦ ಮೈಲು ಎತ್ತರವನ್ನು ತಲುಪಿದಾಗ ಅದನ್ನು ೯೦ ಡಿಗ್ರಿಗಳಷ್ಟು ಮಾಲಿಸಿದರೆ ಅದು ಭೂಮಿಗೆ ಸುತ್ತು ಬರಲು ಆರಂಭಿಸುವುದು. ಅದೇ ಕೃತಕಚಂದ್ರ. ಭೂಮಿಯ ವಾತಾವರಣವು ಸುಮಾರು ೫೦೦ ಮೈಲು ಎತ್ತರದ ವರೆಗಿರುವುದು. ಅದರ ಮೇಲೆ ನಿರ್ವಾತ ಪ್ರದೇಶವೆಂದರೂ ಅನ್ನಬಹುದು. ಅಲ್ಲಿ ಚಲಿಸುವಾಗ ಕೃತಕಚಂದ್ರನಿಗೆ ಯಾವ ತರದ ಘರ್ಷಣೆಯ ತೊಂದರೆಯಿಲ್ಲದೆ ಅದು ನಿರಾತಂಕವಾಗಿ ಸುತ್ತುತ್ತಿರಬಹುದು. ಅದರ ವೇಗವು ಕಡಿಮೆಯಾಗುವುದಿಲ್ಲ. ಮತ್ತು ಅದರ ಪ್ರದಕ್ಷಿಣೆಗೆ ಯಾವ ಪೆಟ್ರೋಲೂ ಖರ್ಚಿಲ್ಲ. ತನ್ನಷ್ಟಕ್ಕೇ ಅದು ತಿರುಗುತ್ತಿರುತ್ತದೆ.

### ನ್ಯೂಟನ್ನನ ತತ್ತ್ವ

ನಮ್ಮ ಚಂದ್ರನು ಭೂಮಿಗೆ ಸುಮಾರು ೨೪೦ ಸಾವಿರ ಮೈಲು ದೂರದಲ್ಲಿ ಪ್ರದಕ್ಷಿಣೆ ಬರುತ್ತಿದೆ. ಹೀಗೆ ಪ್ರದಕ್ಷಿಣೆ ಬರಲು ಆರಂಭವಾಗಿ ಸುಮಾರು ೨೦೦ಕೋಟಿ ವರ್ಷಕ್ಕಿಂತಲೂ ಹೆಚ್ಚು ಆಗಿರಬಹುದು. ಅದು ಭೂಮಿಗೆ ಒಟ್ಟು ಎಷ್ಟು ಸಲ ಪ್ರದಕ್ಷಿಣೆ ಬಂದಿರಬಹುದೆಂದು ನೀವೇ ಊಹಿಸಿರಿ. ಇಷ್ಟು ಪ್ರದಕ್ಷಿಣೆಗೂ ಅದಕ್ಕೆ ಪೆಟ್ರೋಲು ಖರ್ಚಿಲ್ಲ. ಮೊದಲು ಅದಕ್ಕೆ ಹೇಗೋ ಶಕ್ತಿದೊರಕಿತು. ಆ ಶಕ್ತಿ ವ್ಯಯವಾಗಲಿಲ್ಲ. ಹಾಗೆಯೇ ತಿರುಗಿಕೊಂಡಿದೆ. ಶಕ್ತಿ ವ್ಯಯವಾಗದಿದ್ದರೆ— ವಿರೋಧಿಸುವ ಬಲ ಯಾವುದೂ ಇಲ್ಲದಿದ್ದರೆ— ತಿರುಗುವ ವಸ್ತು ತಿರುಗಿಕೊಂಡೇ ಇರುತ್ತದೆಂಬುದು ನ್ಯೂಟನ್ನನ ತತ್ತ್ವ.

ಅಂತೆಯೇ ನಮ್ಮ ಭೂಮಿ ವರ್ಷಕ್ಕೊಮ್ಮೆ ಸೂರ್ಯನಿಗೆ ಪ್ರದಕ್ಷಿಣೆ ಬರುತ್ತಿದೆ. ಹಾಗೆ ಬರಲಿಕ್ಕೆ ಆರಂಭವಾಗಿ ೨೦೦ ಕೋಟಿ ವರ್ಷಕ್ಕಿಂತಲೂ ಹೆಚ್ಚು ಆಗಿರಬಹುದು. ಭೂಮಿಯು ಚಾಚು ತಪ್ಪದೆ ಇಷ್ಟುಕಾಲವೂ ಸ್ವಲ್ಪವೂ ಪೆಟ್ರೋಲು ಖರ್ಚಿಲ್ಲದೆ ತಿರುಗಿಕೊಂಡೇ ಇದೆ. ಇದೇ ಸೃಷ್ಟಿಯ ಚಮತ್ಕಾರ. ಅಂತೆಯೇ ನಮ್ಮ ಸ್ಪುಟ್ನಿಕಗೂ ಮೊತ್ತಮೊದಲು ಸೆಕೆಂಡಿಗೆ ೫ ಮೈಲು ವೇಗವನ್ನು ಒದಗಿಸಿಕೊಟ್ಟು ಮೇಲಕ್ಕೆ ಪ್ರಯೋಗಿಸಿದರಾಯಿತು. ಅದು ಮೇಲೆ ಹೇಳಿದಂತೆ ಕೃತಕಚಂದ್ರವಾಗಿ ನಿರಂತರವೂ ಭೂಮಿಗೆ ಪ್ರದಕ್ಷಿಣೆ ಬರುತ್ತಿರುತ್ತದೆ. ಅಮೇರಿಕವು ಪ್ರಯೋಗಿಸಿದ ಒಂದೆರಡು ಕೃತಕಚಂದ್ರರು ಈಗಲೂ ಭೂಮಿಗೆ ಸುತ್ತು ಬರುತ್ತಿವೆ.

ಚಂದ್ರಲೋಕವನ್ನು ಹೋಗಿ ಸೇರಬೇಕಾದರೂ ಆ ವಸ್ತುವಿಗೆ ಸೆಕೆಂಡಿಗೆ ಏಳು ಮೈಲು ಅಥವಾ ಗಂಟೆಗೆ ೨೫ ಸಾವಿರ ಮೈಲು ವೇಗದ ಅವಶ್ಯವಿದೆ. ಇಷ್ಟು ವೇಗವನ್ನು ಒದಗಿಸಿಕೊಟ್ಟರೂ ಅದಕ್ಕೆ ಎರಡುದಿವಸದ ಪ್ರಯಾಣ ಇದೆ. ಇದರವೇಗ ಗಂಟೆಗೆ ೨೫ ಸಾವಿರ ಮೈಲು ಚಂದ್ರಲೋಕಕ್ಕೆ ದೂರ ೨೪೦ ಸಾವಿರ ಮೈಲು. ಆದುದರಿಂದ ಅದು ೧೦ ಗಂಟೆಯ ಒಳಗೇ ತಲುಪಬೇಕೆಂದು ನೀವು ಲೆಕ್ಕಹಾಕಬಹುದು. ಅದು ಸರಿ ಅಲ್ಲ. ಏಕೆಂದರೆ ಆ ವಸ್ತುವಿಗೆ ಭೂಮಿಯ ಸಮೀಪದಲ್ಲಿ ಮಾತ್ರ ಘಂಟೆಗೆ ೨೫ ಸಾವಿರ ಮೈಲು ವೇಗ, ಮೇಲೆ ಹೋದಂತೆ ಅದರ ವೇಗವು ಭೂಮಿಯ ಆಕರ್ಷಣೆಯಿಂದಾಗಿ ಕಡಿಮೆಯಾಗುತ್ತ ಹೋಗುವುದು. ಕೊನೆಗೆ ಅದರ ವೇಗವು ಬರೀ ಅತ್ಯಲ್ಪವಾಗುವುದು. ಆದರೆ ಚಂದ್ರನ ಸಮೀಪ ಹೋದಂತೆ ಅದರ ವೇಗವು ತಿರುಗಿ ವೃದ್ಧಿಯಾಗುವುದು.

### ವಿದ್ಯುದಲೆಗಳ ಮೂಲಕ ಸಾರಥ್ಯ

ಚಂದ್ರನಿಗೆ ಗುರಿಯಿಟ್ಟೇ ಲೂನಿಕನ್ನು ಭೂಮಿಯಿಂದ ಎಸೆಯಬೇಕು. ಚಂದ್ರನು ೨ ದಿವಸಗಳಲ್ಲಿ ಆಕಾಶದಲ್ಲಿ ಯಾವ ಸ್ಥಾನದಲ್ಲಿ ಇನ್ನು ಇರಬಹುದೆಂದು ಮೊದಲೇ ಗೊತ್ತು ಹಚ್ಚಿ ನಮ್ಮ ರಾಕೇಟು ಅದನ್ನು ಮುಟ್ಟುವಂತೆ ಮಾಡಬೇಕು. ಈ ತರದ ಸಾರಥ್ಯವನ್ನು (guidance) ಭೂಮಿಯಿಂದಲೇ, ವಿದ್ಯುದಲೆಗಳ ಮೂಲಕ ನಡೆಯಿಸಬೇಕು. ಇದಕ್ಕೆ ನಮ್ಮ ರಾಕೇಟಿನ ಸ್ಥಾನ ನಿಖರವಾಗಿ ತಿಳಿಯಬೇಕು. ಈ ಸ್ಥಾನವನ್ನು ರೇಡಿಯೋ ಅಲೆಗಳ ಮೂಲಕ ಪತ್ತೆ ಹಚ್ಚಿಕೊಂಡು ರಾಕೇಟಿನ ಮಾರ್ಗವನ್ನು ಗುಣಿಸಿಕೊಳ್ಳಬೇಕು. ಈ ಮಾರ್ಗದಲ್ಲಿ ಎಲ್ಲಿಯಾದರೂ ಚಾಚೂ ತಪ್ಪಿದರೆ ರಾಕೇಟು ಗುರಿಯನ್ನು ಮುಟ್ಟಲಾರದು. ಈ ಎಲ್ಲಾ ಗುಣಾಕಾರ, ಲೆಕ್ಕಾಚಾರವನ್ನು ವಿದ್ಯುನ್ಮಿದುಳಿನ ( Electronic Brain ) ಸಹಾಯದಿಂದ ಮಾಡಬೇಕು. ಇದೇ ಜನೆವರಿಯಲ್ಲಿ ಕಳುಹಿಸಿದ ಲೂನಿಕ್‌ನ ಲೆಕ್ಕಾಚಾರ ಗುಣಾಕಾರದಲ್ಲಿ ಒಂದು ಡಿಗ್ರಿಯ ೫ ನೇ ಒಂದಂಶ ತಪ್ಪಾಗಿ ಅದು ಚಂದ್ರಲೋಕವನ್ನು ಸೇರದೆ ಇನ್ನೂ ಮುಂದಕ್ಕೆ ಧಾವಿಸಿತು. ಪ್ರಯೋಗವು ಸಫಲವಾಗಲಿಲ್ಲ. ಆದರೆ ಎರಡನೇ ಲೂನಿಕ್‌ನ ಗುಣಾಕಾರ ಸರಿಯಾಯಿತು, ಸಾರಥ್ಯವೂ ಸಾಧ್ಯವಾಯಿತು. ಪ್ರಯೋಗವು ಸಫಲವಾಯಿತು.

### ರಾಕೇಟಿನ ವೇಗ

ಈಗ ರಾಕೇಟಿಗೆ ಘಂಟೆಗೆ ೨೫ ಸಾವಿರ ಮೈಲಿನ(ಸೆಕಂಡಿಗೆ ೭ ಮೈಲು) ವೇಗ ಹೇಗೆ ದೊರಕಿತೆಂದು ಯೋಚಿಸೋಣ. ರಾಕೇಟಿನಲ್ಲಿ ಆಲ್ಕೊಹೊಲ್ ದ್ರವವನ್ನು ಉರಿಸುತ್ತಾರೆ. ಉರಿಯಲಿಕ್ಕೆ ಬೇಕಾದ ಅಮ್ಲಜನಕವನ್ನು ದ್ರವರೂಪದಲ್ಲಿ ರಾಕೇಟಿನಲ್ಲೇ ಇಟ್ಟು ಪಂಪುಗಳ ಮೂಲಕ ಕ್ಷಣಕ್ಕೆ ಒಂದು ಖಂಡಿಯಂತೆ ಸುರಿಯುತ್ತಾರೆ, ಸುಟ್ಟ ಗಾಳಿ ಹಿಂದೆ ಧಾವಿಸುತ್ತದೆ- ರಾಕೇಟು ಅದರ ಪತಿಕ್ರಿಯೆಯಿಂದ ಮುಂದೆ ಮುಂದೆ ಧಾವಿಸುತ್ತದೆ. ಸುಮಾರು ೫೦೦ ಖಂಡಿ ಭಾರದ ರಾಕೇಟಿನಲ್ಲಿ ೪೫೦ ಖಂಡಿ ಇಂಧನ ದ್ರವಗಳು ಉಳಿದ ೫೦ ಖಂಡಿ ಇತರ ಸಾಮಗ್ರಿಗಳಿರುತ್ತವೆ. ಈ ೪೫೦ ಖಂಡಿ ದ್ರವ ಸುಟ್ಟಾಗ ರಾಕೇಟಿಗೆ ಸೆಕಂಡಿಗೆ ೨.೪ ಮೈಲು ವೇಗ ದೊರಕುತ್ತದೆ. ೪೫೦ ಖಂಡಿ ದ್ರವವನ್ನಿಟ್ಟಿದ್ದ ಭಾಂಡಗಳು ಈಗ ಖಾಲಿಯಾದುದರಿಂದ ರಾಕೇಟಿನಿಂದ ಕಳಚಿ ಪೆರಚೂಟ ಮೂಲಕ ಕೆಳಗೆ ಬೀಳುತ್ತವೆ. ಈ ೫೦ ಖಂಡಿ ಭಾರದ ಮೂತಿಯಲ್ಲಿ ೪೫ ಖಂಡಿ ಇಂಧನ ದ್ರವಗಳೂ ೫ ಖಂಡಿ ಮಾತ್ರ ಇತರ ಸಾಮಗ್ರಿಗಳೂ ಇರುತ್ತವೆ. ಈಗ ಈ ಇಂಧನಕ್ಕೆ ಬೆಂಕಿ ತಗಲುತ್ತದೆ. ಈ ೪೫ ಖಂಡಿ ಸುಟ್ಟಾಗ ರಾಕೇಟಿಗೆ ತಿರಿಗಿ ಸೆಕಂಡಿಗೆ ೨.೪ ಮೈಲು ವೇಗ ದೊರಕುತ್ತದೆ. ಅಂದರೆ ರಾಕೆಟ್ಟಿನ ಒಟ್ಟು ವೇಗ ಸೆಕಂಡಿಗೆ ೪.೮ ಮೈಲು ಆಯಿತು. ಖಾಲಿಯಾದ ಭಾಂಡಗಳು ಈಗಲೂ ಕಳಚಿಬೀಳುತ್ತವೆ. ೫ ಖಂಡಿ ಭಾರದ ಮೂತಿಯಲ್ಲಿ ತಿರಿಗಿ ೪॥ ಖಂಡಿ ಇಂಧನದ್ರವಗಳೂ ಅರ್ಧಖಂಡಿ ಮಾತ್ರ ಇತರ ಸಾಮಗ್ರಿಗಳೂ ಇರುತ್ತವೆ. ಈ ೪॥ ಖಂಡಿ ಇಂಧನ ದಹಿಸಿದಾಗ ರಾಕೇಟಿಗೆ ತಿರುಗಿ ಕ್ಷಣಕ್ಕೆ ೨.೪ ಮೈಲು ವೇಗ ದೊರಕುವುದು. ಅಂದರೆ ರಾಕೇಟಿನ ಈಗಿನ ವೇಗ ಸೆಕಂಡಿಗೆ ೭.೨ ಮೈಲುಗಳು. ಖಾಲಿಯಾದ ಭಾಂಡಗಳು ಈಗಲೂ ಕಳಚಿಬೀಳುತ್ತವೆ. ಅರ್ಧಖಂಡಿ ಭಾರದ ರಾಕೇಟಿನ ಮೂತಿ ಮಾತ್ರ ಈಗ ಸೆಕಂಡಿಗೆ ೭ ಮೈಲಿಗಿಂತಲೂ ಅಧಿಕ ವೇಗದಲ್ಲಿ ಚಲಿಸುತ್ತಿರುತ್ತದೆ. ಇದನ್ನು ರೇಡಿಯೋ ಅಲೆಗಳ ಮೂಲಕ ಅನುಸರಿಸುತ್ತ ಹೋಗಬಹುದು. ಕೆಳಗಿನಿಂದಲೇ ಸಾರಥ್ಯವನ್ನು ನಡೆಸಿ ಅರ್ಧ ಖಂಡಿ ಭಾರದ ಮೂತಿಯನ್ನು ಚಂದ್ರನ ಕಡೆಗೆ ಕಳುಹಿಸಬಹುದು. ಈ ಮೂತಿಯಲ್ಲಿ ಅನೇಕ ಸಂಶೋಧಕ ಸಲಕರಣೆಗಳನ್ನು ಇಟ್ಟಿರುವುದರಿಂದ ಎಷ್ಟೋ ನೂತನ ವೈಜ್ಞಾನಿಕ ವಿಷಯಗಳ ಅರಿವು ಉಂಟಾಗುವುದು. ಚಂದ್ರಲೋಕದ ಸ್ಥಿತಿಗತಿಯನ್ನು ಈ ಸಲಕರಣೆಗಳು ಕಂಡು ಹಿಡಿದು ವರ್ತಮಾನವನ್ನು ನಮಗೆ ಹಿಂದೆ ಕಳುಹಿಸುವುವು.

ಈ ಲೂನಿಕಿನ ಮೂತಿಯಲ್ಲಿ ಯಾವ ಕ್ರಿಮಿಕೀಟಗಳು ಇಲ್ಲದಂತೆ ಮುಂಜಾಗ್ರತೆ ತೆಗೆದುಕೊಂಡಿದ್ದರು. ಮನುಷ್ಯನು ಚಂದ್ರಲೋಕಕ್ಕೆ ಹೋಗುವ ಮುಂಚೆ ಇಲಿ, ಮೊಲ, ಕಪಿ ಮೊದಲಾದ ಜಂತುಗಳನ್ನು ಕಳುಹಿಸಿ ಪ್ರಯೋಗ ಮಾಡಬೇಕಷ್ಟೇ.

### ಖಂಡಾಸ್ತ್ರ ಮತ್ತು ಶೀತಲ ಯುದ್ಧ

ಈ ಲೂನಿಕಿಗೂ ಈಗ ರಶ್ಯಾ ಮತ್ತು ಅಮೇರಿಕದೊಳಗಿರುವ ಶೀತಲ ಯುದ್ಧಕ್ಕೂ ಏನು ಸಂಬಂಧ ಎಂದು ಯೋಚಿಸೋಣ. ರಾಕೇಟನ್ನು ಸುಮಾರು ೫೦೦೦ ಮೈಲು ದೂರಕ್ಕೆ ಎಸೆಯಬಹುದು. ಹೀಗೆ ಎಸೆಯಬೇಕಾದರೆ ಅದಕ್ಕೆ ಸೆಕೆಂಡಿಗೆ ೫ ಮೈಲು ವೇಗವನ್ನು ಒದಗಿಸಬೇಕಾಗಿದೆ. ಈ ರಾಕೇಟಿನ ಮೂತಿಯಲ್ಲಿ ಜಲಜನಕ ಬಾಂಬನ್ನು ಇಟ್ಟು ರಶ್ಯಾದಿಂದ ಅಮೇರಿಕಕ್ಕೂ ಅಮೇರಿಕಾದಿಂದ ರಶ್ಯಾಕ್ಕೂ ಎಸೆಯಬಹುದು. ಈ ಅ… ಇವರಿಬ್ಬರ ಹತ್ತಿರವೂ ಇದೆ. ಇದ… 'ಖಂಡಾಸ್ತ್ರ' (Inter Continental Ba… stic Missile) (Guided Missil… ಎಂದು ಹೆಸರು. ಆದರೆ ಇಷ್ಟು ದೂರದಿಂ… ಎಸೆಯುವಾಗ ಬೇಕಾದ ಗುರಿಗೆ ಅಸ್ತ್ರ ಬೀ… ವಂತೆ ಮಾಡಬೇಕಾದರೆ ಆ ಅಸ್ತ್ರವನ್ನು ಸಾರ… ಕುದುರೆಯನ್ನು ನಡೆಸುವಂತೆ ನಡೆಯಿ… ಬೇಕು. ಈ 'ಸಾರಥ್ಯ' ಭೂಮಿಯಿಂದ… ನಡೆಸಬೇಕು. ರಶ್ಯನರು ಲೂನಿಕನ್ನು ಚಂ… ಲೋಕಕ್ಕೆ ಕಳುಹಿಸಿದ್ದುದರಿಂದ ಅ… ಕೈಯಲ್ಲಿ ಈ ತರದ ಸಾರಥಿ ಇದೆ ಎಂದ… ವಾಯಿತು. ಸೆಕಂಡಿಗೆ ೭ ಮೈಲು ವೇ… ವನ್ನು ಒದಗಿಸಿಕೊಡುವ ಉಪಾಯ… ಇದೆ ಎಂದಾಯಿತು. ಅವರ ಕೈಯಲ್ಲಿ ಜ… ಜನಕಬಾಂಬು ಹೇಗೂ ಇದೆ. ಆದುದರಿಂ… ರಶ್ಯನರು ಈಗ ತಮ್ಮ ಖಂಡಾಸ್ತ್ರವನ್ನು ರ… ದಿಂದ ಪ್ರಯೋಗಿಸಿ ಅಮೇರಿಕಾದ ಯಾ… ಪಟ್ಟಣಕ್ಕೆ ಬೇಕಾದರೂ ಗುರಿ ಇಡಬಹು… ಎಂದು ನಿರ್ವಿವಾದವಾಗಿ ಹೇಳಬಹುದ… ಇದರಲ್ಲಿ ಅಮೇರಿಕನ್ನರು ರಶ್ಯನರಿಗಿಂತ ಸ್ವ… ಹಿಂದೆ ಬಿದ್ದಿದ್ದಾರೆ. ಭಗೀರಥಪ್ರಯ… ಮಾಡುತ್ತಿದ್ದಾರೆ. ಐಸೆನ್‌ಹಾವರರು ರಶ್ಯ… ಭೇಟಿ ಕೊಡುವ ಒಳಗಾದರೂ ಈ ಸಾ… ದಲ್ಲಿ ಜಯಶಾಲಿಗಳಾಗಬೇಕೆಂದಿದ್ದಾ… ಐಸೆನ್‌ಹಾವರರು ರಶಿಯಾಕ್ಕೆ ಹೋಗು… ಕಾರ್ಯಕ್ರಮವು ಇದರ ಮೇಲೆ ಹೊ… ಕೊಂಡಿದೆ. ಸುಮಾರು ಬರುವ ಮಾರ್ಚ್ ಎಪ್ರಿ… ನಲ್ಲಿ ಐಸೆನ್‌ಹಾವರರು ರಶ್ಯಾಕ್ಕೆ ಹೋ… ಬಹುದೆಂಬ ವಾರ್ತೆಯಿದೆ. ಆದರೊಳಗೆ ಅಮೆ… ರಿಕನ್ನರಿಗೆ ತಾವು ಚಂದ್ರಲೋಕವನ್ನು ತ… ಪುವ ರಾಕೇಟನ್ನು ಪ್ರಯೋಗಿಸಬಹುದೆಂ… ಧೈರ್ಯವಿದೆ.

ಅಂತೂ ಇವರೊಳಗಿನ ಕಚ್ಚಾಟದಲ್ಲಿ ವೈಜ… ನಿಕ ಸಂಶೋಧನೆ ಭರದಲ್ಲಿ ಸಾಗುತ್ತಿದೆ. ಸಾ… ರಣ ೧೦ ವರ್ಷ ತಗಲಬೇಕಾದ ಸಂಶೋಧ… ಈಗಿನ ಶೀತಲಯುದ್ಧದ ವಾತಾವರಣ… ಬೇಗೆಯಲ್ಲಿ ೧ ವರ್ಷದಲ್ಲಿ ಸಾಧಿಸಲಾಗುತ್ತ… ವೈಜ್ಞಾನಿಕ ಸಂಶೋಧನೆಗೆ ಈಗ ಮಾ… ವಷ್ಟು ಖರ್ಚು ಈ ವರೆಗೆ ಎಲ್ಲೂ ನಡೆದಿ… ಅಂತೂ ಈಗಿನ ಯುದ್ಧವು ಘೋರ ಘೋ… ತಮವಾಗಿ ಪರಿಣಮಿಸುತ್ತಿರುವುದು. ಜೀ… ನದ ವಿಕಾಸದ ಹೋರಾಟದಲ್ಲಿ ಪ್ರಾಣಿಗ… ಬೆಳೆಯುತ್ತ ಹೋಗಿ ಸುಮಾರು ೧೦೦ ಅ… ಉದ್ದ ಬೆಳೆದು ಕೊನೆಗೆ ಜಗತ್ತಿನಿಂದ ಮಾ… ವಾದಂತೆ ಈ ಯುದ್ಧವೂ ಮಾಯವಾಗು… ದೆಂದು ಲೇಖಕನ ಆಶಯ.

# ಲೇಡೀಸ್ ಅಂಬರೆಲ

ಮಳೆಯಲ್ಲಿ ನೆನೆಯಬಾರದೆಂದು ಮನೆಯೊಂದನ್ನು ನುಗ್ಗಿದಾಗ, ಪಾಪ! ಅಳಿಯನ ಪ್ರಾಧ್ಯಾಪಕರೆಂದು ಮುಗಳಿಂದ ಕಾಫಿಕೊಡಿಸಿ, ಮಳೆನಿಲ್ಲದಿರಲು ಕೊಡೆ ಕೊಟ್ಟು ಕಳಿಸಿದರು. ಆದರೆ ಅವರ ಕೊಟ್ಟ ಕೊಡೆಯೇ ಇಲ್ಲದ ಅನರ್ಥಗಳಿಗೆ ಕಾರಣವಾಯಿತು. ಅದು ಹೇಗೆಂಬುದನ್ನು ಇಲ್ಲಿ ಓದಿರಿ.

ಲೇಖಕರು : **ನಾ. ಕಸ್ತೂರಿ, ಬೆಂಗಳೂರು**

ಕೊಡೆ ಹಿಡಿದು ನಾನು ಹೊರಕ್ಕೆ ಹೊರಟರೆ, ಮಳೆಯೇ ಬಾರದು. ನನಗೂ ಸಾಕಾಗಿ ಹೋಯ್ತು, ಅನ್ಯಾಯವಾಗಿ ಹೊರೆ ಹೊತ್ತು ತಿರುಗಲಾರದೆ ಹೋದೆ. ಬಿಸಿಲಿಗಂತೂ ಬೆಂಗಳೂರಲ್ಲಿ ಕೊಡೆ ಹಿಡಿಯುವವನು, ಹುಚ್ಚನೇ ಸರಿ.

ಹೀಗಾಗಿ, ನನ್ನ ಪಾಡು ನಾಯಿ ಪಾಡಾಯಿತು. ಏಕೆಂದರೆ, ಪಟ ಪಟ ಎಂದು ಇದ್ದಕ್ಕಿದ್ದ ಹಾಗೆ ಮಳೆ ಬಂದಾಗಲೆಲ್ಲ ಬೀದಿ ನಾಯಿಗಳಂತೆ ನಾನೂನೂ ಪುಸಕ್ಕನೆ ಯಾವುದಾದರೂ ಒಂದು ಜಗುಲಿ ಹತ್ತಿ ನ್ಮೈ ಕೊಡವುತ್ತ ನಡುಗುವೆ.

ಆ ಹೊತ್ತು ಸಂಜೆ, ನಾನು ಏರಿದ ಜಗುಲಿ ಒಳ್ಳೇ ಜಗುಲಿ! ಏಕೆಂದರೆ, ಮನೆ ಯಜಮಾನ ನನ್ನನ್ನು ಒಳಕ್ಕೆ ಭರಮಾಡಿಕೊಂಡು, ನನ್ನೊಂದಿಗೆ ಮಾತು ಪ್ರಾರಂಭಿಸಿ, ನಾನು ಅವರ ಅಳಿಯನ ಉಪಾಧ್ಯಾಯ ಎಂಬುದನ್ನು ನನ್ನ ನೆನಪಿಗೆ ತಂದು, ಮಗಳ ಕೈಯಲ್ಲಿ ಕಾಫಿ ತರಿಸಿ, ಮಳೆ ನಡೆಯುವುದರಿಂದಾಗುವ ಅನಾಹುತಗಳನ್ನೆಲ್ಲ ವಿವರಿಸಿ, ನನಗಾಗಿ ಬಹಳ ಶ್ರಮವಹಿಸಿದರು. ಸೋನೆಮಳೆ ಆ ಹೊತ್ತು ನಿಲ್ಲಲೇ ಇಲ್ಲ, ನಿಲ್ಲುವ ಸೂಚನೆಗಳೂ ಕಾಣಿಸಲಿಲ್ಲ. ಆದ್ದರಿಂದ, ರಾತ್ರಿ ಊಟದ ವರೆಗೂ ಅಲ್ಲಿ ನಾನು ಬೀಡು ಬಿಡುತ್ತೇನೋ ಏನೋ ಎಂದು ಹೆದರಿ, ನನ್ನನ್ನು ಒಂದು ಕೊಡೆಸಹಿತ ಹೊರಕ್ಕಿಳಿಸಿದರು. ಕೊಡೆ ಬೇಡ, ಅದನ್ನು ಹಿಂತಿರುಗಿಸುವುದು ಕಷ್ಟ, ಮಳೆ ನಿಂತಮೇಲೆ ಹೊರಟರೆ ಸಾಕು ನನಗೆ, ಪೆನ್‌ಷನ್ ಪಡೆದ ಮಾಸ್ತರಿಗೆ ಏನು ಅಂಥ ಅವಸರ, ಎಂದೆಲ್ಲ ನಾನು ವಾದಿಸಿದರೂ ಆತ ಕೊಡೆಯನ್ನು ಬಿಚ್ಚಿ ಕೈಗೆ ಕೊಟ್ಟೇಬಿಟ್ಟ; ಮೆಟ್ಟಲು ಜಾರುತ್ತೆ ನಿಧಾನವಾಗಿ ಇಳಿಯಿರಿ, ಎಂದು ಹೇಳೇಬಿಟ್ಟ.



ಆತ ಕೊಡೆಯನ್ನು ಬಿಚ್ಚಿ ಕೊಟ್ಟೇ ಬಿಟ್ಟ!

ಇನ್ನು ರಸ್ತೆಗಿಳಿಯದೆ ವಿಧಿ ಇಲ್ಲ. ಕೊಡೆ ಹಿಡಿದು ನಾನು ಹೊರಕ್ಕೆ ಹೊರಟರೆ ಮಳೆಯೆ ಬಾರದು, ಎಂಬ ನನ್ನ ಗ್ರಹಚಾರದ ಜಾತಕವನ್ನೇ ನಂಬಿ, ಇಳಿದೆ. ಆದರೆ, ಆ ಕೊಡೆಯ ಪ್ರಭಾವವೋ ಏನೋ, ತುಂತುರು ಬೀಳುತ್ತಲೇ ಇತ್ತು. ಅರ್ಧ ಫರ್ಲಾಂಗ್ ಆಚೆ ಇದ್ದ ಬಸ್‌ಸ್ಟಾಪಿನ ಕಡೆ ನಡೆದಾಗ, ೩—೪ ಕಾಲೇಜು ಹುಡುಗರು ನನ್ನನ್ನೇ ದುರುಗುಟ್ಟಿ ನೋಡಿದಂತೆ ನನಗೆ ಭಾಸವಾಯಿತು. ಅಥವಾ, ಅದು ನನ್ನ ಭ್ರಮೆಯೋ ಏನೋ, ಖಂಡಿತ ಹೇಳಲಾರೆ! ಒಬ್ಬ, ನನ್ನ ಹಿಂದೆಯೇ ಎರಡು ಹೆಜ್ಜೆ ಬಂದು, ತುಟಿಗಳನ್ನುರುಳಿಸಿ ಕಣ್ಣುಗಳನ್ನಗಲಿಸಿ ಅರೆ ನಿಮಿಷ ಕಾಲ ಶಿಲ್ಪಿ ಹೊಡೆದ; ಅಥವಾ, ಅದೂ ನನ್ನ ಕಿವಿಯೊಳಗಣ ಸುಳ್ಳು ಮೊಳಗೋ ಏನೋ, ಹೇಳಲಾರೆ! ನನ್ನ ನಡಿಗೆ ಕೂಡ, ಕೊಂಚ ನಿಧಾನವಾಯಿತು. ಎಂದೂ ನಾನು ಅಷ್ಟು ಮೆಲ್ಲಗೆ, ತೂಗುತ್ತ, ಓಲಾಡುತ್ತ, ನಡೆದಂತೆ ನೆನಪಿಲ್ಲ. ನನ ಸೊಂಟ ಕೂಡ ಎರಡು ಮೂರು ಬಾರಿ ಚಕ್ಕರ್ ಕೊಟ್ಟಿತು. ನೆಟ್ಟಗೆ ನಿಲ್ಲದೆ, ಅನಾಯಾಸವಾಗಿ ಬೆನ್ನನ್ನು ಹೊರದೆ, ಅಲ್ಪ ಸ್ವಲ್ಪ ಬಳುಕಿತು. ಇಂದೇಕೆ ಹೀಗೆ? ಎಂದು ಮೂಗಿನ ಮೇಲೆ ಬೆರಳಿಟ್ಟೆ. ಈ ಹೊಸ ದೈಹಿಕ ಚೇಷ್ಟೆಗಳನ್ನೆಲ್ಲ ನೆನಪಿನಲ್ಲಿರಿಸಿಕೊಂಡು, ಬೆಳಗಾಗುತ್ತಲೂ ನನ್ನ ಆಪ್ತಮಿತ್ರರಾದ ಡಾಕ್ಟರರೊಬ್ಬರಿಗೆ ಹೇಳಿ, ತಕ್ಕ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು, ಎಂದುಕೊಂಡೆ. ಸಾಮಾನ್ಯವಾಗಿ ನಾನು ಯಾವುದಾದರೂ ನೋವು ನವೆ ಅಂತ ಹೋದಾಗಲೆಲ್ಲ ಅವರು ನನ್ನನ್ನು ಹಾಸ್ಯ ಮಾಡಿ, ನಗಿಸಿ, ಕಳುಹಿಸಿ ಬಿಡುವರು. ಇನ್ನು ನಾಳೆ ಅವರ ಹತ್ತಿರ ಹೋಗಿ, ಸೊಂಟ ಬಗ್ಗಿತು, ನಡಿಗೆ ನಿಧಾನವಾಯಿತು, ಅಂದರೆ, ಅವರ ಲೇವಡಿ ಇನ್ನೂ ಹೆಚ್ಚುತ್ತದಲ್ಲಾ, ಎಂದು ಹೆದರಿದೆ. ಯಾರಾದರೂ ಒಬ್ಬರು ಒಳ್ಳೆಯ ಲೇಡಿ ಡಾಕ್ಟರ ಹತ್ತಿರಕ್ಕೇ ಹೋದರೇನಂತೆ ಮಹಾ, ಎಂಬ ಅಧಿಕಪ್ರಸಂಗಕ್ಕೂ ಎಡೆಗೊಟ್ಟಿತು, ನನ್ನ ಮನಸ್ಸು! ಇವತ್ತೇಕೆ ಬುದ್ಧಿ ಇಷ್ಟು ವಕ್ರವಾಯಿತು, ಎಂದುಕೊಂಡೆ, ನನ್ನೊಳಗೆ ನಾನೇ!

ಬಸ್ ಸ್ಟಾಪಲ್ಲಿ ಆಗಲೇ ಕ್ಯೂ ನಿಂತಿದ್ದರು, ಜನ; ಕೋಕುಳಲ್ಲಿ ಮಕ್ಕಳನ್ನು ಹೊತ್ತು ನಿಂತ ಒಂದು ಸಾಲು, ಮುಂದೆ ನಿಂತಿದ್ದವರ ಕೈಪೇಪರೋದುತ್ತ ನಿಂತ ಹಿಂದಿನವರ ಪಂಕ್ತಿ ಮತ್ತೊಂದು. ಅವರಿಗೆಲ್ಲ ಆಗಲೇ ಟಿಕೀಟುಗಳನ್ನು ಮಾರುತಿದ್ದ ಕಂಡಕ್ಟರ್ ಮಹಾಶಯ,—ಶೀಘ ಹೊಸಬನಂತೆ ಕಾಣಿಸಿತು,




ಒಬ್ಬ ನನ್ನ ಹಿಂದೆಯೇ ಎರಡು ಹೆಜ್ಜೆ ಬಂದು ಶಿಲ್ಪಿಹೊಡೆದ

ನನಗೆ—ನನ್ನನ್ನ "ಅತ್ತಲಾಗೆ ಹೋಗಿರಿ, ಅಲ್ಲಿ ನಿಂತುಕೊಳ್ಳಿರಿ" ಎಂದು ಗದರಿಸಿದ!, ನಿಷ್ಕಾರಣವಾಗಿ, ಅರ್ಧ ಹೆಜ್ಜೆ ಅತ್ತಲಾಗಿನ ಪಂಕ್ತಿಯ ಕಡೆ ನನ್ನ ಪಾದಗಳನ್ನು ಬೆಳೆಸಿರಬಹುದು, ನಾನು. ಆದರೂ ಎಲ್ಲಿಂದಲೋ ಧುಮುಕಿ ನನ್ನೆದುರು ಪ್ರತ್ಯಕ್ಷವಾಗಿ, ಹಾಗೇಕೆ ಅವನು ಕಣ್ಣು ಗುಡ್ಡೆಗಳನ್ನು ತಿರುಗಿಸಬೇಕು? ಪೋಲೀಸಿನವರಿಗಿರುವ ಹಾಗೆ ಈ ಕಂಡಕ್ಟರುಗಳಿಗೂ ಹೆಗಲ ಮೇಲೆ ನಂಬರ್ ಹಾಕಿಸ

ಬೇಕು ; ಆಗ ಸಲೀಸಾಗಿ ಅದನ್ನು ಗುರುತು ಮಾಡಿಕೊಂಡು, ಅವರ ದುರ್ನಡತೆಗಳಿಗಾಗಿ ಪೋಲಿಸಿನವರಿಗೆ ಫಿರ್ಯಾದು ಮಾಡಬಹುದಾಗಿತ್ತು, ಎನಿಸಿತ್ತು, ನನಗೆ!

ಮಳೆ ಗೋಳಾಡಿಸುತ್ತಲೇ ಇತ್ತು. ನಾಯಿಕೊಡೆಯಷ್ಟಗಲದ್ದಾದರೂ ಮರ್ಯಾದೆ ಕಾಪಾಡಿಕೊಂಡು ಬೀದಿಯಿಂದ ನಡೆಯಲು ಕೈಯಲ್ಲೊಂದು ಕೊಡೆ ಇದೆಯಲ್ಲಾ, ಎಂದು ನಾನು ಮನಃಪೂರ್ವಕವಾಗಿ ಹಿಗ್ಗಿದೆ. ಮಾರು ದೂರದಲ್ಲಿ ನಿಂತಿದ್ದ ಮಹಿಳೆಯರ ಸಾಲಿಗೆ ಸೇರಿದ ಒಬ್ಬಾಕೆಯ ಕೂಸು ನನ್ನನ್ನು ಅಲ್ಲಿಂದಲೇ ಕೂಗಿ, ಕೈನೀಡಿ ಕೇಕೆಹಾಕಿತು. ಎಂಥ ಜಾಣ ಮರಿ ಏನು ಚುರುಕು, ಅದನ್ನೆತ್ತಿಕೊಂಡು ಬಿಡೋಣ ಎನಿಸಿತು, ನನಗೆ! ಅದರ ಬಾಯಿಗೆ ಬಿಸ್ಕತ್ತು ಕೊಡಬಾರದು, ಮುತ್ತು ಕೊಡಬೇಕು ಎಂಬ ಆಸೆ ಆಯಿತು. ಆದರೆ, ಜನಸಂದಣಿ, ಮಳೆ, ಅಪರಿಚಿತ ಆಕೆ, ಎಲ್ಲ ನೆನೆದಾಗ, ನಾಚಿಕೆ ಆವರಿಸಿ ತಲೆ ತಗ್ಗಿಸಿದೆ.

ಕ್ಯೂ ಪದ್ಧತಿಯನ್ನು ಕಂಡು ಹಿಡಿದು ಪ್ರಚಾರಕ್ಕೆ ತಂದ ಮಹಿಳೆ, ( ಮಹನೀಯನಾಗಿರಬಾರದೇಕೆ? ಆದರೂ ಆಗ, ಆ ಸಂಜೆ, ಮಹಿಳೆಯೆಂದೇ ನನ್ನ ಬುದ್ಧಿಗೆ ತೋರಿತು ) ತಿರುಪೆವೃತ್ತಿಯವಳಾಗಿರಬೇಕು, ಎಂದುಕೊಂಡೆ. ಏಕೆಂದರೆ, ಭಿಕ್ಷೆ ಬೇಡುವುದಕ್ಕೆ ಸಾಲುಸಾಲು ಮನೆಗಳಿರುವ ಬೀದಿ ಎಷ್ಟು ಅನುಕೂಲವೋ, ಸಾಲು ಮನುಷ್ಯರೂ ಅಷ್ಟೇ ಅನುಕೂಲ. ಅವರಿಗಾಗಿಯೇ ನಮ್ಮನ್ನು ಆ ಬಸ್ ಸ್ಟಾಪಲ್ಲಿ ಅಷ್ಟುಹೊತ್ತು ನಿಲ್ಲಿಸಿದರೋ ಏನೋ. ಸರ್ಕಾರಿ ಬಸ್ ಇಲಾಖೆಯವರು? ಗಂಡು ಧಾಂಡಿಗರಿಗೆ ನಾನು ಒಂದು ನಯಾಪೈಸಾನೂ ಕೊಡಲಿಲ್ಲ. ಯಾವಳೊ ಒಬ್ಬಳು ಒಂದು ಕುರುಡು ಕೂಸನ್ನು ಎತ್ತಿ ತಂದು ಅದರ ಕೈಯನ್ನು ಎಳೆದು ನನ್ನ ಮುಂದು ಹಿಡಿದಾಗ, ನಾನು ಎಡಗೈ ಅಲ್ಲಾಡಿಸಿದೆ, ನೇತಾಡುವ ಪರ್ಸಿಗಾಗಿ! ತಕ್ಷಣ, ಪತ್ತೆ ಹಚ್ಚಿಕೊಂಡೆ, ಅಲ್ಪ ಸ್ವಲ ಚಿಲ್ಲರೆ ಇರುವುದು, ಸೊಂಟದಲ್ಲಿ, ಎಂಬುದನ್ನ . . . . ಆದರೂ, ಬಹಳ ಹೊತ್ತಿನವರೆಗೆ ಆ ವಿಚಾರ ನನ್ನ ತಲೆಯನ್ನು ತಿನ್ನುತ್ತಲೇ ಇತ್ತು, ಪುಡಿ ಕಾಸು ಬೇಕಾಗಿ ಬಂದಾಗ, ಎಡಗೈ ಮುಂಗೈಗೆ ಒಂದು ಸಣ್ಣ ಬ್ಯಾಗು ನೇತಾಡುತ್ತೆ, ಅದರೊಳಗೆ ಚಿಲ್ಲರೆ ಇರುತ್ತದೆ, ಎಂಬ ನಿರೀಕ್ಷಣೆ ಏಕೆ ಆ ಹೊತ್ತು ನನ್ನ ತಲೆಯನ್ನು ಹೊಕ್ಕಿತು? ಎಷ್ಟು ಅಸಂಬದ್ಧವಾದದ್ದು ಆ ನಿರೀಕ್ಷಣೆ! ಅಂತಹ ರಂಗುರಂಗಿನ ಥಳುಕಿನ ಬ್ಯಾಗನ್ನು ನಾನೆಂದೂ ತಗುಲಿಸಿಕೊಂಡು ಮೆರೆದೇ ಇಲ್ಲ. ಮತ್ತೇಕೆ ನನ್ನ ಒಳಮನ ಅತ್ತಕಡೆ ಎಳೆಯಿತು. ನನ್ನ ದೃಷ್ಟಿಯನ್ನ, ಎಂಬುದೇ ಒಂದು ಭಾರಿ ಸಮಸ್ಯೆಯಾಗಿ ನನ್ನ ಮೆದುಳನ್ನು ಕೊರೆಯಿತು.

ಆಗ, ಆ ಸ್ಟಾಪಲ್ಲಿ ನಿಲ್ಲುವ ನಂಬರನ್ನು




ಒಬ್ಬಾಕೆಯ ಕೂಸು ಅಲ್ಲಿಂದಲೇ ಕೈನೀಡಿ ಕೇಕೆ ಹಾಕಿತು.

ಹೊತ್ತ ಬಸ್ಸೊಂದು ಸಮೀಪಿಸಿತು. ಮುಂಕ್ಕಾಲು ಗಂಟೆಯಿಂದ ಶಿಸ್ತನ್ನು ಪಾಲಿಸುತ್ತ ನಿಂತಿದ್ದ ಕ್ಯೂ ಸಾಲುಗಳು ಇನ್ನೂ ಅದನ್ನೇ ಪಾಲಿಸುತ್ತ ಇರಬೇಕೆಂದರೆ ಸಾಧ್ಯವೆ? ಕದನ ಕಲಹ ನೂಕುನುಗ್ಗಲು ಪ್ರಾರಂಭವಾಯಿತು. ಕೊಡೆಯನ್ನು ಮಡಿಸಿ ಕೊಂಕುಳಲ್ಲಿರಿಸಿಕೊಂಡು, ನಾನೂ ಮುಂದಿನ ಬಾಗಿಲಿಂದ ತೂರಿಕೊಂಡೆ, ಕಿಟಕಿಯ ಹತ್ತಿರದ ಸೀಟೊಂದನ್ನು ಸಂಪಾದಿಸಿಕೊಂಡೆ. ಉತ್ತರೀಯದ ಸೆರಗಿಂದ ನೆತ್ತಿಯ ಮೇಲಿನ ನೀರನ್ನು ಒರಸಿದೆ. ಚಳಿಗಾಳಿಗೆ ಮೈ ಎಲ್ಲ ತಣ್ಣಗಾಗಿ, ಎದುರು ಸೀಟಿನಲ್ಲಿ ಕುಳಿತ ಹೆಂಗಸನ್ನು ಎಲೆ ಅಡಿಕೆ ಕೇಳಿ ಬಿಸಿಬಿಸಿಯಾಗಿ ಜಗಿಯೋಣವೆನಿಸಿತು. ಆದರೆ, ಆಕೆಯ ಬಾಯಿಗೆ ಹೆದರಿ ನಾನು ಬಾಯಿ ಬಿಡಲಿಲ್ಲ.

ಅಷ್ಟರಲ್ಲೇ, ಬಸ್ ತುಂಬಿತು, ತುಳುಕಾಡಿತು. ಎಂಟು ಹತ್ತು ಜನ ಹೆಣ್ಣುಮಕ್ಕಳಿಗೆ ಕೂರಲು ತಾವಿಲ್ಲದೆ, ಅವರು ಇಕ್ಕಟ್ಟಿನಲ್ಲಿ ಸಿಕ್ಕಿ ರೇಗುತ್ತಿದ್ದರು. ಕಂಡಕ್ಟರ್, ಕಂಡಕ್ಟರ್ ಎಂದು ಅವರು ಅರಚಿಕೊಂಡರೆ, ಅತ ಏನು ಪುಷ್ಪಕ ವಿಮಾನ ನಡೆಯಿಸುತ್ತಿದ್ದಾನೆಯೆ, ನುಗ್ಗಿದವರಿಗೆಲ್ಲ ನಾಲ್ಕು ನಾಲ್ಕು ಮೊಳದಷ್ಟು ಸೀಟ್ ಕೊಡುವುದಕ್ಕೆ? ಆ ಕಂಡಕ್ಟರೋ, ಶುದ್ಧ ಬೃಹಸ್ಪತಿ! ನನ್ನನ್ನೇ ಎಬ್ಬಿಸಿದ, ಕಂಬಿ ಹಿಡಿದು ನಿಂತುಕೊಳ್ಳಿರಿ, ಲೇಡೀಸ್ ಸೀಟಿನಲ್ಲಿ ಒಬ್ಬರೇ ನವಾಬನ ಹಾಗೆ ಕುಳಿತರೆ ಹೇಗ್ರಿ, ಎಂದು ರೇಗಿದ! ಹೌದು, ಅವನು ಹೇಳುವುದು ನ್ಯಾಯವೇ ಆಗಿತ್ತು. ನಾನು ಏಳಲೇಬೇಕಿತ್ತು. ಎದ್ದು, ಮೂರು ನಾಲ್ಕು ಹೆಣ್ಣುಮಕ್ಕಳಿಗೆ ಸೀಟ್ ಕೊಡುತ್ತಿದ್ದಾಗ, ಮುಂದಿನಾಲಗೆ ಸುಮ್ಮನೆ ಬಿದ್ದಿರುತ್ತದೆಯೆ? ಬಾಯೊಳಗೆ ಅಲ್ಲಾಡದೆ, ಒಟಗುಟ್ಟದೆ?

"ಆತ ಆ ಒದ್ದೆ ಕೊಡೆಯನ್ನು ಕೊಂಕುಳಲ್ಲಿರಿಸಿಕೊಂಡು, ಅತ್ತಕಡೆಯ ಬಾಗಿಲಿಂದ ಒಳಕ್ಕೆ ಬಂದು ಆ ಬೆಂಚಿಗೆ ಹೋದಾಗಲೇ, ಆತನಿಗೆ ಹೇಳೋಣಾ ಅಂತ ಇದ್ದೆ, ಬೇಡ್ರಿ, ಕಂಡಕ್ಟರ್ ಬಂದು ಎಬ್ಬಿಸುತ್ತಾನೆ ಅಂತ...." ಎಂದ ಒಬ್ಬ. "ಈಗಿನ ಕಾಲದಲ್ಲೇನಪ್ಪ, ಇಬ್ಬರಿಗೂ ಕುತ್ತಿಗೆ ತುಂಬ ಚೈನು, ಕತ್ತಿನ ವರೆಗೂ ಕ್ರಾಪ್, ಬುಷ್‌ಕೋಟು, ಇಬ್ಬರೂ ಹಿಡಿತಾರೆ ಒಂದೇ ತೆರನ ಕೊಡೆ, ನೀವು ಗಂಡು, ನಿಮಗೆ ಈ ಸೀಟು ಎಂದು ಎಚ್ಚರಿಸುವುದೇ ಯದ್ವಾತದ್ವಾ ಆಗಿಬಿಟ್ಟೀತು!" ಎಂದ ಇನ್ನೊಬ್ಬ.

ನಾನು ನಾಚಿ ಕೆಂಪಗಾದೆ. ಬಲಗೈಯನ್ನೆತ್ತಿ, ಅಷ್ಟು ಜನರೆದುರು ಧೈರ್ಯವಾಗಿ ಮೇಲಿನ ಕಂಬಿಯನ್ನು ಹಿಡಿದು ನಿಲ್ಲುವುದು ನಾಚಿಗೆಗೇಡು ಎನಿಸಿತು, ನನಗೆ. "ರೀ! ಬೀಳುತ್ತೀರಿ! ಹಿಡಿದುಕೊಳ್ಳಿರಿ, ಕಂಬೀನ" ಎಂದು ಹತ್ತಾರು ಜನ ಕೂಗಿದರು. ಆದರೂ ಎಡಗೈಯಲ್ಲಿ ಕೊಡೆ ಹಿಡಿದಿದ್ದೆ. ಬಲಗೈ ಮೇಲಕ್ಕೆ ಹೋಗಲೇ ಇಲ್ಲ. ಡ್ರೈವರ ಸೀಟಿನ ಹಿಂದೆ ಇದ್ದ ಕಂಬವನ್ನೇ ಹಿಡಿದು ಅದಕ್ಕೇ ಅರ್ಧ ಒರಗಿಕೊಂಡೆ. ಅಲ್ಲಿ ನಿಂತಿದ್ದಾಗಲೇ ನನ್ನ ದೃಷ್ಟಿ ಡ್ರೈವರೆದುರಿಗಿದ್ದ ಕನ್ನಡಿಯ ಕಡೆ ಹರಿಯಿತು. ಕನ್ನಡಿಯಲ್ಲಿ ಮುಖ ನೋಡುವಾಗಲೆಲ್ಲ ಸಾಮಾನ್ಯವಾಗಿ ಅಸಹ್ಯಪಡುವುದೇ ನನ್ನ ಹಣೆಯಬರಹ; ಆದರೆ, ಆ ರಾತ್ರಿ ಆ ಬಸ್‌ನಲ್ಲಿ ಏಕೋ ಏನೋ ನಾನು ಕತ್ತು ನೀಡಿ ಕತ್ತು ಕೊಂಕಿಸಿ ಆ ಕನ್ನಡಿಯಲ್ಲಿ ನನ್ನ ಪ್ರತಿಬಿಂಬ ಬಿದ್ದಾಗಲೆಲ್ಲ ಹಿಗ್ಗಿದೆ; ಡ್ರೈವರ್ ಮಹಾಶಯನೂ ಅದರೊಳಗಿನ ನನ್ನ ಪ್ರತಿಬಿಂಬವನ್ನು ಗಮನಿಸುತ್ತಿದ್ದಾನೆ, ಎಂದು ಪತ್ತೆ ಹಚ್ಚಿದಾಗ, ನಾನು ಹಿಮ್ಮೆಟ್ಟಿದೆ; ಕಂಬಕ್ಕೊರಗಿದೆ.

ರಾತ್ರಿ ಆಗಲೇ ಎಂಟೂವರೆ ಗಂಟೆ. ತುಂತುರು ಮಳೆಯಿಂದಾಗಿ, ರಸ್ತೆಯಲ್ಲಿ ಜನರ ಓಡಾಟ ಬಹಳ ಕಡಮೆಯಿತ್ತು. ಅಲ್ಲೊಂದು ಇಲ್ಲೊಂದು ವ್ಯಕ್ತಿ ಆ ಕಡೆಯಿಂದ ಈ ಕಡೆಗೆ ಹೆದರಿದ ದೆವ್ವದಂತೆ ಧಾವಿಸಿತು, ಅಷ್ಟೆ. ನನ್ನ ಮನೆ ಬಸ್ ರೋಡಿನಲ್ಲಿರಲಿಲ್ಲ. ಅದು ನಿಲ್ಲುವ ತಾಣದಿಂದ, ಒಂದು ಫರ್ಲಾಂಗ್ ದೂರ ನಡೆದುಹೋಗಬೇಕಿತ್ತು. ಹೋಗುವಾಗ, ಉದ್ದಕ್ಕೂ ಮನೆಗಳಿರಲಿಲ್ಲ. ನಡುವೆ, ಮುಸಲ್ಮಾನ ಮಹಾತ್ಮನೊಬ್ಬನ ಗೋರಿ, ಬೇರೆ. ಈ ಬೆಂಗಳೂರು ಬೀದಿ ದೀಪಗಳೋ ಮೋಡದ ನಡುವೆ ಅಪ್ಪಿ ತಪ್ಪಿ ಕೊಂಚ ಮಿಂಚು ಹಳ್ಳಿರಿದರೆ ಸಾಕು, ಆರಿ ಹೋಗಿ ಬಿಡುತ್ತವೆ; ಗಾಳಿಗೆ ಆರಿ ಹೋಗುವ ನಮ್ಮ ಪ್ರಾಚೀನ ಕಾಲದ ಕಲ್ಲೆಣ್ಣೆ ಬುಡ್ಡಿಗಳಿಗಿಂತ ಹೊಲಸು. ಅವು ಸಿಡಿಲು ಮಿಂಚು ಗುಡುಗಿಗೆ ಹೆದರುತ್ತಿರಲಿಲ್ಲ. ಇವು ಎಳೆಯ ಕೂಸುಗಳ ಹಾಗೆ, ಗುಡುಗು ಕೇಳಿದರೆ ನಡುಗುತ್ತವೆ! ನನ್ನ ಬಸ್ಸು ಹಾದು ಬಂದ ಎರಡು ಮೆಯಿನ್ ರೋಡುಗಳ ಉದ್ದಕ್ಕೂ ಕಂಬಗಳಿಗೆ ಕುರುಡು ಬಡಿದಿತ್ತು.

ಇನ್ನು ನಾನು ನನ್ನ ಬಸ್ ಸ್ಟಾಪಲ್ಲಿ ಳಿದು,....? ಎದೆ ಡವ ಡವ ಎಂದಿತು. ಎದೆಯ ವಿಷಯ ಯೋಚನೆ ಮಾಡುವುದಕ್ಕೂ, ನಾಚಿಕೆ, ಹೆದರಿಕೆ! ದೇವರ ದಯೆಯಿಂದ, ನಾನು ಇಳಿಯುವಲ್ಲೇ ಇನ್ನೂ ಯಾರಾದರೂ ಇಳಿದರೆ? ಅವರೂ ನನ ಬೀದಿಯವರೊ ಅದರೆ? ನನ್ನ ಮನೆ ಬಾಗಿಲ ತನಕ ಬಂದರೆ?....ಬೇಡ, ಬೇಡ, ಅದರಲ್ಲೂ ಅಪಾಯ ಇದೆ; ಎಲ್ಲ ಕೀರ ಕೆಟ್ಟು ಹೋಗಿದೆಯಂತೆ. ಪೇಪರಲ್ಲಿ ದಿನವೂ ಅಚ್ಚು ಹಾಕುತ್ತಿರುತ್ತಾರೆ, ಯಾರದೋ ಓಲೆ ಕಿತ್ತರು; ಸರ ಕತ್ತರಿಸಿದರು; ಅತ್ಯಾಚಾರ ನಡೆಯಿತು, ಎಂದು. ಹೀಗೆ ಓಡಿತು, ನನ್ನ ಮನಸ್ಸು ಯಾವ ಯಾವುದನ್ನೋ ಕಲ್ಪಿಸಿಕೊಂಡು! ನನ್ನ ಹತ್ತಿರವೂ ಓಲೆ ಇತ್ತು, ಆದರೆ, ಕಿವಿಯಲ್ಲಲ್ಲ, ಕಿಸೆಯಲ್ಲಿ, ಎಂದು ಕಂಡುಕೊಂಡಾಗ, ನಾನು ನಕ್ಕೆ. ಕೂಡಲೇ ಹಲ್ಲು ಕಂಡೀತು, ಎಂದು ಬಾಯಿಯನ್ನು ಮುಚ್ಚಿಕೊಂಡೆ. ಇನ್ನು, ಸರ? ಅವಸರವೆ? ನನ್ನ ಬಳಿ ಇದ್ದ ಸರ! ಅತ್ಯಾಚಾರದ ಭಯ ನನಗೇಕೆ, ಎಂದು ನನಗೆ ನಾನೇ ಟೀಕಿಸಿಕೊಂಡೆ.

ಆದರೂ ಹಾಳು, ಆ ನನ್ನ ಬಸ್ ಸ್ಟಾಪ್ ಸಮೀಪಿಸಿದಂತೆಲ್ಲ, ಅಲ್ಲಿಂದ ಹೇಗೆ ಮಾನ ಮರ್ಯಾದೆ ಉಳಿಸಿಕೊಂಡು, ನನ್ನ ಮನೆ ಸೇರುವುದು, ಎಂಬ ಯೋಚನೆ ಮೆದುಳನ್ನು ಹೆಚ್ಚು ಕಾಡಿಸಿತು. ಗೋರಿಯ ಮಂಟಪದಲ್ಲಿ ಸಾಂಬ್ರಾಣಿ ಧೂಪ ಹಾಕಿರುತ್ತಾರಲ್ಲಾ, ಅದನ್ನು ಒಳಕ್ಕೆಳೆದುಕೊಂಡರೆ, ದೆವ್ವ ಮೆಟ್ಟಿಕೊಳ್ಳುವುದಂತಲ್ಲಾ!... ಅರ್ಥವಿಲ್ಲದ ಭಯಗಳು, ಕರುಳನ್ನು ಹಿಂಡಿ ಹುಡಿ ಮಾಡುವ ಡಾಕಿನಿ ಶಾಕಿನಿಗಳ ರೂಪರೇಖೆಗಳು! ಅವುಗಳ ಕಾಟ ಜಾಸ್ತಿ ಆಯಿತು.

ಬಸ್ ಸ್ಟಾಪೂ ಬಂತು... ದೀಪದ ಕಂಬಗಳೂ ಕಣ್ಣು ಮುಚ್ಚಿದ್ದುವು! ಕೊಡೆ ಸಹಿತ, ರಸ್ತೆಗಿಳಿದೆ. ಅದನ್ನು ಬಿಚ್ಚಿ ಹಿಡಿಯದೆ, ಮುಂದಿನ ಪ್ರಯಾಣವನ್ನು ಕೈಕೊಳ್ಳಬಹುದೆಂದು ಭಾಸವಾಯಿತು. ಕೊಂಕುಳಿಂದ ಈಚೆಗೆ ಎಳೆಯಲಿಲ್ಲ. ನಾನೊಬ್ಬನೇ ಅಲ್ಲಿ ಇಳಿದದ್ದು! ಅಯ್ಯೊ! ಒಬ್ಬಂಟಿಗನಾಗಿ, ಆ ಒಂದು ಫರ್ಲಾಂಗ್ ರಸ್ತೆಯನ್ನು, ೨೨೦ ಗಜದಷ್ಟು ದೂರವನ್ನು, ಒಂಬತ್ತು ಗಂಟೆ ಕತ್ತ

ಅಲ್ಲಿ, ಹೇಗೆ ನಡೆದೇನು ? ಗೋರಿ ಬೇರೆ ಮಧ್ಯ !

ಯಾರೋ, ಎದುರಿಗೆ ಬಂದರು. ಪುಸಕ್ಕನೆ, ಒಂದು ಮರದ ಹತ್ತಿರಕ್ಕೆ ಓಡಿದೆ. ಆತ ಅತ್ತ ತೊಲಗುತ್ತಲೂ ಪುಸಕ್ಕನೆ ಮತ್ತೊಂದು ಮರದ ಬುಡಕ್ಕೆ ಓಡಿದೆ. ಆಗ, ದೈವಾನುಗ್ರಹದಿಂದ, ಒಂದು ಆಟೋರಿಕ್ಷಾ ಬಂತು ! ಖಾಲಿ! ಫರ್ಲಾಂಗ್ ದೂರಕ್ಕೆ ಅವನು ಒಂದು ರೂಪಾಯಿ ಕೇಳಿದ. ಬಹುಶಃ, ಬೆದರಿಕೆಯಿಂದ ಬಿಳುಪೇರಿದ್ದ ನನ್ನ ಮುಖವನ್ನು ನೋಡಿ, ಅವನು ಹಾಗೆಂದನೋ, ಏನೋ ? ಹಾಳಾದವನು, ಮುಖಕ್ಕೆ ಟಾರ್ಚ್ ಬಿಟ್ಟು ಮಾತನಾಡಿದ. ಆಗ, ನನ್ನ ಮುಖ ಹೇಗಿತ್ತೋ, ದೇವರೇ ಬಲ್ಲ.

ಆಟೋರಿಕ್ಷಾದಲ್ಲಿ ಕುಳಿತರೆ, ಅವನು ನನ್ನನ್ನು ಇನ್ನೆಲ್ಲಿಗೋ ಸಾಗಿಸಿ, ಮೈಮೇಲಿನದನ್ನೆಲ್ಲ ಕಿತ್ತುಕೊಂಡರೆ; ಗತಿ ಏನು ? ಒಬ್ಬರೇ ಕೂಡಬಾರದು ಎಂತಲೇ ಸರ್ಕಾರದವರು ಇಬ್ಬರಿಗೇರ್ಪಾಟು ಮಾಡಿರುವುದು, ಅಲ್ಲವೆ ? ಆದ್ದರಿಂದ, ನಾನು ಅದನ್ನು ಬೇಡವೆಂದು ನಿರಾಕರಿಸಿದೆ. ಆದರೆ, ಅವನು ಬಿಡಬೇಕಲ್ಲಾ ? ನೀವು ಏನು ಕೊಡುತ್ತೀರೋ, ಕೊಡಿ, ಎಂಬ ಉಪಾಯ ತೆಗೆದ, ನನ್ನನ್ನು ತನ್ನ ಬುಟ್ಟಿಯಲ್ಲಿ ಬೀಳಿಸುವುದಕ್ಕಾಗಿ.

ಪುಣ್ಯಕ್ಕೆ, ಆ ಸಮಯಕ್ಕೆ ಸರಿಯಾಗಿ, ನನ್ನ ಮನೆ ಔಟ್‌ಹೌಸದಲ್ಲಿ ಬಾಡಿಗೆಗಿರುವ ಮೋಟಾರ್ ಡ್ರೈವರ್ ಮಾದಪ್ಪನವರು ಬೀಡಿ ಸಹಿತ ಪ್ರತ್ಯಕ್ಷನಾದರು. ಬೀಡಿ ತರುವುದಕ್ಕಾಗಿ ಅವರು ಅಂಗಡಿಗೆ ಹೋಗಿದ್ದರಂತೆ. "ಇಲ್ಲಿಂದಲ್ಲಿಗೆ ಯಾಕೆ, ಸ್ವಾಮಿ, ಈ ರಾಕ್ಷಸ ವಾಹನ ?" ಎಂದರು. ಆತನ ಹಿಂದೆಯೆ ಮನೆಗೆ ಹೊಡೆ. ಆತನೋ ಧಾಂಡಿಗ! ಹಿಂದಿನ ಮನೆಯವರ ಯಜಮಾನ ! ಆತನ ಜೊತೆ ನಾನು ಹೋಗುತ್ತಿರುವುದನ್ನು, ಆತನ ಮನೆಯವರು ಕಂಡರೆ, ನನ್ನನ್ನು ಅವರು ಸುಮ್ಮನೆ ಬಿಟ್ಟಾರೆಯೆ?, ಎಂದು ನಡುಗುತ್ತ, ಅಡಿ ಇಟ್ಟೆ.



ಅಪ್ಪಾ ನೀನೊಬ್ಬ ಹೆಂಗಸು, ಲೇಡಿಸ ಅಂಬರ್ಲ ಹಿಡಿದಿದ್ದಿ ಎಂದ ಪುಟ್ಟು.

ಮನೆ ಬಾಗಿಲು ತಟ್ಟಿದೆ; ತೆಗೆದರು. ಒಳಕ್ಕೆ ಸೇರಿ, ಉತ್ತರೀಯದ ಸೆರಗಿನಿಂದ ಬೆವರೊರಸಿಕೊಂಡೆ. ಕೊಂಕುಳಲ್ಲಿದ್ದ ಕೊಡೆಯನ್ನು ಕಂಡು ನನ್ನ ನಾಲ್ಕನೆಯವ, ಪುಟ್ಟರಾಮು, " ಅಪ್ಪಾ ! ನೀನೊಬ್ಬ ಹೆಂಗಸು, ಲೇಡೀಸ್ ಅಂಬರ್ಲ ಹಿಡಿದಿದ್ದೀ" ಎಂದ.

"ಹೌದೋ, ಮಗನೇ," ಎಂದು ಹೇಳುತ್ತ, ಅದನ್ನ ತೆಗೆದು, ಮೇಜಿನ ಮೇಲಿರಿಸಿದೆ, ಅಲ್ಲಿಂದ, ಅದು ನನ್ನನ್ನು ನೋಡಿ ನಗುವಂತೆ ಇತ್ತು !

ದಾರಿ ಉದ್ದಕ್ಕೂ, ... ಇದರದೇನೋ ಪ್ರಭಾವ ?, ಎಂದು ನಾನು ಆಶ್ಚರ್ಯಪಟ್ಟೆ!

ಜ್ಯೋತಿಷಿ : ಶ್ರೀ ಕೃಷ್ಣಶಾಸ್ತ್ರಿ ಭಿಡೆ
ಭವಿಷ್ಯ ಕಥನ ಕಾರ್ಯಾಲಯ,
ಮನೆ ನಂ. ೨೪೮೦ ಪೋಲೀಸ ಸ್ಟೇಶನ್ ಎದುರಿಗೆ
ಖಡೇಬಜಾರ, ಬೆಳಗಾವ

# ★ ವರ್ಷ ಭವಿಷ್ಯ ★

**ಶಕೆ ೧೮೮೧ ಕಾರ್ತಿಕ ಶುದ್ಧ ೧ ರವಿವಾರದಿಂದ ಶಕೆ ೧೮೮೨ ಆಶ್ವಿನ ಬ|| ೩೦ ಗುರವಾರ ವರೆಗಿನ ಅಂದರೆ ನವಂಬರ ೧, ೧೯೫೯ ರಿಂದ ೧೯೬೦ ಅಕ್ಟೋಬರ ೨೦ ರ ವರೆಗೆ.**

( ಈ ದೀಪಾವಳಿಯಿಂದ ಮುಂದಿನ ದೀಪಾವಳಿಯ ವರೆಗೆ )

**ಸೂಚನೆ :—** ಈ ವರ್ಷದಲ್ಲಿ ಬೇರೆ ಬೇರೆ ಗ್ರಹಗಳು ಆಯಾ ರಾಶಿಯುವರ ಮೇಲೆ ಯಾವ ಒಳಿತು ಕೆಟ್ಟ ಪರಿಣಾಮುಗಳನ್ನುಂಟು ಮಾಡುವವೆಂಬದನ್ನು ಸಂಕಲಿತ ರೀತಿಯಿಂದ ಇಲ್ಲಿ ಭವಿಷ್ಯವನ್ನು ಹೇಳಲಾಗಿದೆ. ಇದನ್ನೋದಿ ತಮ್ಮ ಭವಿಷ್ಯ ಫಲಗಳ ಅಂದಾಜು ಬಹುಶಃ ಎಲ್ಲರಿಗೆ ಆಗಬಹುದು.

ವಾಸ್ತವಿಕವಾಗಿ ಪ್ರತಿಯೊಬ್ಬನ ಭವಿಷ್ಯವನ್ನು ಅವನ ಜನ್ಮಕುಂಡಲಿಯಿಂದ ವಿಚಾರಿಸಿದ್ದಾದರೆ ಅದು ಪೂರ್ಣವಾಗಿ ಕೂಡಿ ಬರುತ್ತದೆ. ಆದರೂ ಈ ಭವಿಷ್ಯವನ್ನು ನೋಡಿದರೆ ಈ ವರ್ಷದಲ್ಲಿ ಸುಖದುಃಖಗಳ ವಾತಾವರಣದ ಕಲ್ಪನೆ ಬರುವದರಲ್ಲಿ ಸಂದೇಹವಿಲ್ಲ. ವಾಚಕರು ಈ ಭವಿಷ್ಯವನ್ನು ಮನನಪೂರ್ವಕವಾಗಿ ಮತ್ತು ಜನ್ಮರಾಶಿಗನುಸಾರವಾಗಿ ಜನ್ಮಲಗ್ನಕ್ಕನುಲಕ್ಷಿಸಿಯೂ ಓದಿಕೊಂಡು ಅದರಂತೆ ನಡೆದದ್ದಾದರೆ ಅಶುಭ ಫಲಗಳ ಬಗ್ಗೆ ಬಹಳಷ್ಟು ಜಾಗ್ರತೆಯಿಂದ ಇರಬಹುದಾಗಿದೆ. ಅದೇ ರೀತಿ ಶುಭಫಲ ಪ್ರಾಪ್ತವಾಗುವಾಗ ಹೆಚ್ಚು ಉತ್ಸಾಹದಿಂದ ಪ್ರಯತ್ನಮಾಡಲು ಅವಕಾಶ ದೊರೆಯುವದು ಎಂಬುದು ಸುನಿಶ್ಚಿತವಾಗಿದೆ.

ಪುರುಷರಂತೆ ಸ್ತ್ರೀಯರಿಗೂ ಸಾಧಾರಣವಾಗಿ ಅದೇ ರೀತಿ ಫಲಗಳು ದೊರೆಯುವವು. ಆದರೂ ದೈಹಿಕ ಭೇದದ ತಾರತಮ್ಯವನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾದುದು ಅವಶ್ಯವೆಂದು ಪ್ರತ್ಯೇಕ ಹೇಳಬೇಕಿಲ್ಲ.

## ಮೇಷ

ಒಟ್ಟಾರೆ ಈ ರಾಶಿಯುವರಿಗೆ ಮೊದಲಿನ ಎರಡೂವರೆ ತಿಂಗಳು ಸ್ವಲ್ಪ ಕಷ್ಟದ್ದು ಮತ್ತು ಕೆಲ ವಿಷಯುಗಳಲ್ಲಿ ಹೆಚ್ಚಿನ ತೊಂದರೆಯದಾಗಿದ್ದರೂ ಉಳಿದ ಒಂಭತ್ತುವರೆ ತಿಂಗಳು ಶುಭ ಮತ್ತು ಬಲಿಷ್ಠ ಯೋಗವುಳ್ಳದ್ದಿರುವದರಿಂದ ಕೊನೆಗೆ ವರ್ಷವು ಉತ್ಕರ್ಷದ್ದೇ ಎನಿಸುವದು.

ಈ ವರ್ಷ ಈ ರಾಶಿಯುವರಿಗೆ ಅನೇಕ ವಿಷಯುಗಳಲ್ಲಿ ಪ್ರಗತಿಕಾರಕವಿರುವದು. ತಕ್ಕಂತೆ ಆರೋಗ್ಯವೂ ಅನುಕೂಲವುಳಿಯುವದು. ಆದರೂ ಜನೆವರಿ ೧೩ರವರೆಗೆ ಅಪಚನ, ಅಜೀರ್ಣ, ಕಣ್ಣು ನೋವು ಗಂಟಲನೋವು, ಮೂತ್ರವಿಷಯುಕ ವಿಕಾರ ಇವುಗಳಲ್ಲಿ ಯಾವದಾದರೊಂದರಿಂದ ಸ್ವಲ್ಪ ತೊಂದರೆಯೆನಿಸುವ ಸಂಭವ. ಈ ತಾರೀಖಿನಿಂದ ಮುಂದೆ ಮಾತ್ರ ಅನೇಕರ ಆರೋಗ್ಯ ಚೆನ್ನಾಗಿಯೇ ಉಳಿಯುವದು. ಮತ್ತು ಮಾರ್ಚ ೨೪ ರಿಂದ ಮನೋತ್ಸಾಹ ಮತ್ತು ಆತ್ಮವಿಶ್ವಾಸ ಒಂದೇ ಸವನೆ ಹೆಚ್ಚಹತ್ತುವದರಿಂದ ಬಿಕ್ಕಟ್ಟಿನ ಕೆಲಸ ಕೂಡ ಸಹಜವಾಗಿ ಯಶಸ್ವಿಯಾಗುವವು. ಮತ್ತು ಅನೇಕ ವಿಷಯುಗಳಲ್ಲಿ ಫೆಬ್ರುವರಿ ೧೩ ರಿಂದ ಆರೋಗ್ಯದಂತೆ ಮಾನಸಿಕ ಸುಖವೂ ಚೆನ್ನಾಗಿ ದೊರೆಯುವದು. ಒಟ್ಟಾರೆ ದೇಹಸೌಖ್ಯ ಹದಿನಾಲ್ಕಾಣೆ ಸಿಕ್ಕುವದು.

ಆದರಂತೆ ಸ್ತ್ರೀಸುಖ ಉತ್ತಮ ದೊರೆಯುವದು ಮತ್ತು ಉಭಯತರ ವಿಚಾರಗಳು ಒಳ್ಳೇ ಸಮ್ಮಿಲನ ಹೊಂದಿ ಪರಸ್ಪರರಲ್ಲಿ ಆದರ ಮತ್ತು ಪ್ರೇಮ ದಿನದಿನಕ್ಕೆ ಅಭಿವೃದ್ಧಿಹೊಂದಹತ್ತುವವು. ಆದರೆ ಡಿಸೆಂಬರ ೧ರ ವರೆಗೆ ಮತ್ತು ಎಪ್ರಿಲ ೩ರಿಂದ ೨೬ ಮತ್ತು ಅಗಸ್ಟ ೨೬ ರಿಂದ ಸಪ್ಟಂಬರ ೨೧ ರ ಅವಧಿಯುಲ್ಲಿ ಹೆಂಡತಿಯು ಆರೋಗ್ಯ ಸರಿಯುಳಿಯುದ್ದರಿಂದ ಇಲ್ಲವೆ ಉಭಯತರಲ್ಲಿ ಒಬ್ಬರು ಗ್ರಾಮಾಂತರ ಹೋಗುವದರಿಂದ ಸಹವಾಸದಲ್ಲಿ ವ್ಯತ್ಯಯುವುಂಟಾಗುವುದು. ಆದರೆ ವಿವಾಹವಾಗದೆ ಈ ವರ್ಷಮಾಡಿಕೊಳ್ಳುವದಿದ್ದರೆ ಜನೆವರಿ ೧೩ ರೊಳಗೆ ಕೂಡಿಬರುವ ಮತ್ತು ಆಗುವ ಯೋಗ ಕಡಿಮೆಯು. ಆದರೆ ಅನಂತರ ಅಲ್ಪಾಯಾಸದಿಂದ ಮತ್ತು ಖಾತ್ರಿಯಿಂದ ಅದು ಆಗುವದು. ವಧು ಇಲ್ಲವೆ ವರ ರೂಪದಿಂದ ಸ್ವಂತಕ್ಕಿಂತ ಸ್ವಲ್ಪ ನೀರಸವಿದ್ದರೂ ಗುಣದಿಂದ ಸ್ವಲ್ಪ ಹೆಚ್ಚೇ ಇರುವ ಸಂಭವವಿದೆ. ಮತ್ತು ಪರಸ್ಪರರಲ್ಲಿಯ ಪ್ರೇಮ ಬೇಗನೆ ಜೀವಾಳದ್ದಾಗುವದು. ಮಾವನ ಮನೆಯುವರ ಸ್ಥಿತಿ ಅಷ್ಟೊಂದು ಶ್ರೀಮಂತಿಕೆಯುದಲ್ಲದಿದ್ದರೂ ಒಳ್ಳೆ ಮನೆತನದ್ದೆನಿಸುವದು.

ಆದರಂತೆ ಈ ವರ್ಷ ನಿಮ್ಮ ಮಕ್ಕಳ ಮದುವೆ ಮಾಡುವದಿದ್ದರೆ ಹುಡುಗನ ಮದುವೆಯು ಬಾಶಿಂಗಬಲ ಜನೆವರಿ ೧೩ರೊಳಗೆ ಮತ್ತು ಮಗಳದು ಮಾತ್ರ ಅನಂತರ ಬಲಿಷ್ಠವಿದೆ. ಸೊಸೆ ಮತ್ತುಅಳಿಯು ಅತ್ಯಂತ ಜಾಣರು ಮತ್ತು ರೂಪದಿಂದ ಮಧ್ಯಮ ಆದರೆ ಗುಣಶ್ರೇಷ್ಠರೆನಿಸುವರು. ಆದರೆ ವಿವಾಹವಾಗುವ ಸಮಯುದಲ್ಲಿ ಅನಪೇಕ್ಷಿತ ಅಡಚಣೆಗಳಿಂದ ಮುಹೂರ್ತವನ್ನುಹಿಂದೆ ಮುಂದೆ ಮಾಡಬೇಕಾಗುವದು. ಮಕ್ಕಳ ಆರೋಗ್ಯಕ್ಕೆ ಈ ವರ್ಷ ಉತ್ಕರ್ಷದ್ದೆನಿಸುವದು. ವಿಶೇಷತಃ ಮಕರಸಂಕ್ರಾಂತಿಯಿಂದ ಹಲವರದು ವಿಶೇಷ ಸ್ಪೃಹಣೀಯುವೆನಿಸುವದು. ಅವರು ಭಕ್ತಿಭಾವದಿಂದ ನಿಮಗೆ ಸುಖವನ್ನು ಕೊಡುವರು. ಆದರೆ ಎಪ್ರಿಲ ೧೧ರ ನಂತರ ಮತ್ತು ವಿಶೇಷತಃ ಅಗಷ್ಟ ೧೬ ರಿಂದ ಸಪ್ಟಂಬರ ೧೬ ರ ಅವಧಿಯುಲ್ಲಿ ಒಬ್ಬನ ಆರೋಗ್ಯ ಬಹಳ ಕಷ್ಟದ್ದೆನಿಸುವ ಅಂಜಿಕೆ ಇದೆ. ಇಲ್ಲವೆ ಅವರಲ್ಲಿ ಒಬ್ಬರು ಬಹಳ ದೂರ ಹೋಗುವದರಿಂದ ವಿರಹವು ಮನಸ್ಸಿಗೆ ಬಾಧಿಸಹತ್ತುವದು.

ಧಂದೆ ಕೂಲಿಯ ದೃಷ್ಟಿಯಿಂದ ಈ ವರ್ಷ ಬಹಳ ಅನುಕೂಲವಿದ್ದು ಜನೇವರಿ ೧೩ರ ನಂತರ ಬಹಳ ಭಾಗ್ಯದಾಯಕವೆನಿಸುವದು. ಏಕೆಂದರೆ ಅಂದಿನಿಂದ ಭಾಗ್ಯೇಶ ಗುರು ಮತ್ತು ಕರ್ಮ ಹಾಗು ಲಾಭಾಧಿಪತಿ ಶನಿ ಇಬ್ಬರೂ ಭಾಗ್ಯಸ್ಥಾನದಲ್ಲಿ ಅಂದರೆ ನವಮದಲ್ಲಿರುವರು. ಸಹಸಾ ಕೂಡಿಬರದಂಥ ಈ ಅಪೂರ್ವಯೋಗವು ಈ ವರ್ಷ ಸುದೈವದಿಂದ ಕೂಡಿ ಬಂದಿದೆ. ಇದು ವೈಭವ ಶಿಖರಕ್ಕೇರಿಸುವ ಘಟನೆಗಳದ್ಯೋತಕವಾಗಿರು

ವದು ಮತ್ತು ಯಾರ ಕುಂಡಲಿಯಲ್ಲಿ ಈ ಗ್ರಹಗಳು ಏಕತ್ರ ಪ್ರಥಮ, ತೃತೀಯ ಪಂಚಮ, ನವಮ ಇಲ್ಲವೆ ಏಕಾದಶ ಸ್ಥಾನಗಳಲ್ಲಿರುವವೋ ಮತ್ತು ಈ ಎರಡು ಗ್ರಹಗಳಲ್ಲಿ ಒಂದರ ಮಹಾರ್ದಶಾ ನಡೆಯುತ್ತಿದ್ದರೆ ಭಾಗ್ಯಕ್ಕೆ ಕಳಸ ಕಟ್ಟುವದು. ಸ್ವತಂತ್ರ ಧಂದೆಯವರಿಗೆ ಆದನ್ನು ಬೆಳೆಸುವ ಅವಕಾಶ ದೊರೆಯುವದು. ಅದರಂತೆ ನೋಕರರಿಗೆ ಅಪೇಕ್ಷೆಗಿಂತ ಹೆಚ್ಚಿನ ಅಧಿಕಾರ ಗ್ರೇಡು ಸಿಕ್ಕುವ ಸಂಭವವಿದೆ, ಖಾಸಗಿ ನೋಕರಿ ಇರಲಿ ಸರಕಾರಿ ನೋಕರಿ ಇರಲಿ ಈ ಅವಕಾಶ ಸಿಕ್ಕುವದು. ನೋಕರಿಯಲ್ಲಿ ಬದಲಿ ಆದರೆ ಒಳ್ಳೇ ಸುಖ ಸೌಕರ್ಯದ ಸ್ಥಳಕ್ಕೆ ಆಗುವದು. ಮತ್ತು ಅಲ್ಲಿ ಸಂಕ್ರಮಣದ ನಂತರ ಒಳ್ಳೇ ಹಿತಕರ ಯೋಗ ಒದಗಹತ್ತುವದು. ಜನೆವರಿ ೧೩ ರ ವರೆಗೆ ವರಿಷ್ಠರು ನಿಮ್ಮ ಬಗ್ಗೆ ಸ್ವಲ್ಪ ಕಿರಿಕಿರಿ ಮಾಡುವ ಸಂಭವವಿದೆ. ಆದರೆ ಮುಂದೆ ಮಾತ್ರ ಅವರು ಸದಾ ಪ್ರಸನ್ನರಿರುವರು. ವಿಶೇಷವಾಗಿ ನವಂಬರ ೨೪ ರ ವರೆಗೆ ಮತ್ತು ಅನಂತರ ಫೆಬ್ರುವರಿ ೧೪ ರಿಂದ ಮೇ ೩, ಜೂನ ೧೩ ರಿಂದ ಜುಲೈ ೨೪ ಮತ್ತು ಸಪ್ಟಂಬರ ೧೦ ರ ನಂತರ ದ್ರವ್ಯಲಾಭಕ್ಕೆ ಬಹಳ ಅನುಕೂಲವಿದೆ.

ಜನೆವರಿ ೧೩ ಕ್ಕಿಂತ ಮೊದಲು ಪ್ರಿಯ ಆಪ್ತರಲ್ಲಿ ಕೆಲವರ ಬಹಳ ಉತ್ಕರ್ಷವಾಗುವ ಇಲ್ಲವೆ ಕೆಲವು ಮಂಗಳಕಾರ್ಯ ಘಟಿಸುವ ಯೋಗವಿದೆ. ಕದಾಚಿತ್ ನಿಮ್ಮ ಆಸ್ತಿಯಲ್ಲಿ ಹೊಸ ಸಂಗ್ರಹವಾಗಿ ಅದು ಬೆಳೆಯುವದು. ಏನೇ ಆದರೂ ಈ ವರ್ಷ ಸಾಲವಾಗದೆ ಮೊದಲು ಇದ್ದ ಸಾಲ ಎಪ್ರಿಲ ೧೧ರ ನಂತರ ಅಲ್ಪ ಸ್ವಲ್ಪ ಮುಟ್ಟುವದು. ಅನೇಕರು ಹೊಸ ಸಂಗ್ರಹವನ್ನು ಜೂನ ೧೨ ರ ನಂತರ ಮಾಡುವ ಸಂಭವವೂ ಇದೆ. ದೂರದ ಪ್ರವಾಸ, ಯಾತ್ರೆಗಿಂತ ಲಗ್ನ ಸಮಾರಂಭ, ಸಭೆ ಅಧಿವೇಶನ ಇಲ್ಲವೆ ಪ್ರೇಕ್ಷಣೀಯ ಸ್ಥಳಗಳ ದರ್ಶನ ಇವುಗಳ ನಿಮಿತ್ತವಾಗಿಯೇ ಆಗುವ ಯೋಗವಿದೆ. ಕೀರ್ತಿದಾಯಕ ಘಟನೆಯೊಂದು ಸಂಭವಿಸುವದು.

ದಾವೆ, ಫಿರ್ಯಾದಿ ಇಲ್ಲವೆ ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ಎಪ್ರಿಲ ೧೧ ರ ವರೆಗೆ ಶತ್ರುನಾಶ ಮತ್ತು ವಿಜಯವಾಗುವ ಯೋಗ ಬಹಳ ಪ್ರಬಲವಿದೆ. ಆದರೆ ಮುಂದೆ ಮಾತ್ರ ಅವು ಅಷ್ಟೊಂದು ಪ್ರಬಲವಿರುವದಿಲ್ಲ. ಆದರೂ ಆ ಕೆಲಸ ಮಾಡಿ ಮುಗಿಸುವ ದಕ್ಷತೆ ವಹಿಸಬೇಕು.

ಈ ರಾಶಿಯ ಸ್ತ್ರೀಯರು ಹಡೆಯುವಳರಿದ್ದರೆ ಅವರು ಜನೆವರಿ ೧೩ ರಿಂದ ಎಪ್ರಿಲ ೧೧ ರ ಮಧ್ಯದಲ್ಲಿ ಹಡೆದರೆ ಅತ್ಯಂತ ಸುಲಭವಾಗಿ ಹಡೆದು ಪುತ್ರ ಹುಟ್ಟಿದ ಸಂತೋಷ ಹೊಂದುವರು. ಮುಂದೆಯೂ ಗಂಡು ಹುಟ್ಟಿದರೂ ಪ್ರಸೂತಿ ಕಷ್ಟದ್ದೆನಿಸುವದು. ಆದರೆ ಜನೆವರಿ ೧೩ ಕ್ಕಿಂತ ಮೊದಲು ಹಡೆದವರು ಹೆಣ್ಣುಹಡೆದರೂಸುಲಭಪ್ರಸೂತರಾಗುವರು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆಯು ಜನೆವರಿಯ ನಂತರ ಆದರೆ ಅವರು ಖಾತ್ರಿಯಿಂದ ತೇರ್ಗಡೆಹೊಂದುವರು. ಅದರಲ್ಲಿಯೂ ಜನೆವರಿ ೧೩ರಿಂದ ಎಪ್ರಿಲ ೧೧ರ ಒಳಗೆ ಆದರೆ ಅನೇಕರು ವರ್ಗವನ್ನು ಪಡೆಯುವರೆಂಬ ವಿಶ್ವಾಸವಿದೆ.

## ವೃಷಭ

ಈ ರಾಶಿಯವರಿಗೆ ಈ ವರ್ಷ ದ್ರವ್ಯಲಾಭಕ್ಕೆ ಉತ್ತಮವಾಗಿದ್ದರೂ ಉಳಿದ ಬಹುತರ ಎಲ್ಲ ವಿಷಯಗಳಲ್ಲಿ ಕಷ್ಟಸಾಧ್ಯವೆಂದೇ ಅನುಭವಕ್ಕೆ ಬರುವದು.

ಈ ರಾಶಿಯ ಜನರು ಈ ವರ್ಷ ತಮ್ಮ ಆರೋಗ್ಯವನ್ನು ಕಳೆದ ವರ್ಷಕ್ಕಿಂತ ಹೆಚ್ಚು ಚೆನ್ನಾಗಿ ರಕ್ಷಿಸಿಕೊಳ್ಳಬೇಕು. ಏಕೆಂದರೆ ಇಡಿ ವರ್ಷ ಅಷ್ಟಮ ಶನಿ ಇರುವನು ಮತ್ತು ಅವನಿಗೆ ಸಹಾಯಕನೆಂದು ಜನೇವರಿಯಲ್ಲಿ ಗುರುವೂ ಅಂಥವನೇ ಬರುವನು. ಅಂತೆಯೇ ಈ ಎರಡೂ ಗ್ರಹಗಳ ಶಮನಾರ್ಥವಾಗಿ ಜಪ ದಾನಗಳನ್ನು ಮಾಡಬೇಕು. ಜನೇವರಿ ೫ ರಿಂದ ಫೆಬ್ರುಅರಿ ೧೪ ಮತ್ತು ಸಪ್ಟಂಬರ ೧೦ ರ ನಂತರದ ಅವಧಿಯಲ್ಲಿ ಹೆಚ್ಚು ಜಪ್ಪಿಸಬೇಕು. ಆದರೆ ರಾಶಿಸ್ವಾಮಿಯಾದ ಶುಕ್ರನು ಈ ವರ್ಷಾರಂಭದಲ್ಲಿ ಚತುರ್ಥ ಅರ್ಥಾತ್ ಆಯುರ್ವರ್ಧಕ ಸ್ಥಾನದಲ್ಲಿರುವದರಿಂದ ಆಯುಷ್ಯಕ್ಕೆ ಮಾತ್ರ ಸ್ವಲ್ಪೂ ಧಕ್ಕೆಯಿಲ್ಲ. ಉಳಿದ ವಿಷಯಗಳಲ್ಲಿ ದೇಹಸುಖ ಸಾಮಾನ್ಯವೇ. ಆದರೂ ಅದರಲ್ಲಿಯೂ ಡಿಸೆಂಬರ ೧ ರ ವರೆಗೆ ಮತ್ತು ಅನಂತರ ಡಿಸೆಂಬರ ೨೬ ರಿಂದ ಜಾನೇವರಿ ೨೧, ಫೆಬ್ರುಅರಿ ೧೫ ರಿಂದ ಎಪ್ರಿಲ ೨೭, ಮೇ ೨೧ ರಿಂದ ಜೂನ ೧೫ ಮತ್ತು ಅಗಷ್ಟ ೩ ರಿಂದ ೨೬ ಈ ಅವಧಿಯಲ್ಲಿ ಬಹಳ ಮತ್ತು ಉತ್ತಮ ಆರೋಗ್ಯ ಸುಖ ಸಿಕ್ಕುವದು.

ಸ್ತ್ರೀ ಸುಖಕ್ಕೆ ಪ್ರೇಮ ಮತ್ತು ಆದರದ ದೃಷ್ಟಿಯಿಂದ ಈ ವರ್ಷ ಅನಾನುಕೂಲವಿದ್ದರೂ ಅವಳ ಆರೋಗ್ಯ ನಿಮ್ಮಂತೆಯೆ ಅಷ್ಟೊಂದು ಹಿತಕರವಿಲ್ಲ. ರಕ್ತಸ್ರಾವ, ಹುರುಕು, ಕುರು, ಹೊಟ್ಟೆ ಮತ್ತು ಕಾಲು ನೋವು ಇವುಗಳಲ್ಲಿ ಯಾವದಾದರೊಂದು ವಿಕಾರದಿಂದ ಕಷ್ಟವುಂಟಾಗುವದು. ವಿಶೇಷತಃ ನವಂಬರ ೨೪ರ ವರೆಗೆ ಮತ್ತು ಜಾನೇವರಿ ೫ ರಿಂದ ಪೆಬ್ರುವರಿ ೧೪, ಮತ್ತು

ಅನಂತರ ಮಾರ್ಚ ೨೪ರಿಂದ ಮೇ ೩ರ ಅವ
ಯಲ್ಲಿ ಆರೋಗ್ಯ ಚೆನ್ನಾಗಿ ಉಳಿಯು
ದಿಲ್ಲ. ಒಟ್ಟಾರೆ ಪ್ರಾಪಂಚಿಕ ಸುಖ ದಗದ
ಯದು. ತೊಂದರೆ, ಮನೋಭಂಗ, ಬಹ
ವೆಚ್ಚ, ಕುಟುಂಬದಲ್ಲಿಯ ಉಳಿದ ಜನರೊಡ
ಆಗುವ ಕಲಹ ಮತ್ತು ಅಪ್ರಿಯ ಜನ
ಸಹವಾಸ ಮಾಡುವ ಪ್ರಸಂಗ ಹೀಗೆ ಹ
ವಾರು ಕಾರಣಗಳಿಂದ ಅದು ಚೆನ್ನಾಗಿ ದೊ
ಯುವದಿಲ್ಲ. ಎಪ್ರಿಲ ೧೧ರ ನಂತರ ಮುಂದೆ
ತೊಂದರೆ ಮತ್ತಷ್ಟು ಹೆಚ್ಚು. ಆದರೆ ಇನ
ಯಾರ ವಿವಾಹವಾಗಿಲ್ಲವೊ ಮತ್ತು ಈ ವ
ಆಗುವದಿದೆಯೊ ಅದು ಜನೇವರಿ ೧೩
ನಂತರ ಆಗುವದು ದುಸ್ತರವೇ. ಮತ
ಅದಕ್ಕೂ ಮೊದಲು ಆ ಮೇಲೂ ಕೂ
ಅದಕ್ಕೆ ಅನೇಕ ಅಡಚಣೆಗಳು ಬರುವ
ಮತ್ತು ಅವುಗಳ ನಿವಾರಣೆಗಾಗಿ ಶ್ರ
ಮತ್ತು ದ್ರವ್ಯವನ್ನು ಬಹಳಷ್ಟು ವೆಚ್ಚ ಮಾ
ಬೇಕಾಗುವದು ಆದರೆ ವಧೂ ಮತ್ತು ವ
ಅನುರೂಪ ದೊರೆಯುವರು.

ಅದರಂತೆಯೇ ನಿಮ್ಮ ಮಕ್ಕಳ ಮದು
ಮಾಡುವದಿದ್ದರೆ ಅದಕ್ಕೂ ಮಕರಸಂಕ್ರಾಂ
ಪೂರ್ವದಲ್ಲಿ ಇದ್ದಷ್ಟು ಸುಲಭ ಯೋ
ಮುಂದೆ ಇರುವದಿಲ್ಲ. ಆದರೆ ಒಂದು ವೇ
ದೊರೆತರೆ ಎಪ್ರಿಲ ೯ ರಿಂದ ಮೇ ೧೭ ಮತ
ಮೇ ೩೦ ರಿಂದ ಜೂನ ೨೧ ಈ ಅವಧಿಯ
ವಿವಾಹವಾಗುವದು. ಸೊಸೆ ಇಲ್ಲವೆ ಅಳಿಯ
ಸ್ವತಃ ನಿಮಗೆ ಮನಸ್ಸಿಗೆ ಬಂದರೂ ಮನೆಯ
ಲ್ಲಿಯ ಇತರರಿಗೆ ಅಷ್ಟೊಂದು ಒಪ್ಪಿಗೆಯೆ
ಸುವದಿಲ್ಲ. ಮಕ್ಕಳಿಂದ ಈ ವರ್ಷ ದೊ
ಯುವ ಸುಖ, ಅವರ ಮನಸ್ಸಿದ್ದರೂ ನಿಮ
ಯೋಗದಿಂದ ಚೆನ್ನಾಗಿ ದೊರೆಯುವದಿಲ್ಲ.
ಬಗೆಯ ಅನುಭವ ಬರುವದು. ಗಂಡು ಮಗ
ವಿಗಿಂತ ಹೆಣ್ಣು ಮಕ್ಕಳ ಉತ್ಕರ್ಷ ಹೆಚ್ಚು
ಉದ್ಯೋಗ ಧಂದೆಮಾಡುವವರಿಗೆ ನೋಕ
ರಿಗೆ ಮಾತ್ರ ಈ ವರ್ಷ ಅಷ್ಟಮ ಗುರು ಬಂ
ನಂತರ ಬಹಳ ಉತ್ತಮವಿರುವದು. ಏಕೆ
ದರೆ ಗುರು ಇವನೇ ಅಷ್ಟಮೇಶ ಮತ
ಲಾಭೇಶನಾದ್ದರಿಂದ ಉದ್ಯೋಗದಲ್ಲಿ ಇಲ್ಲ
ನೋಕರಿಯಲ್ಲಿ ದೊರೆಯುವ ದುಡ್ಡು ನಿಶ್ಚಿ
ವಿದ್ದಷ್ಟು ದೊರೆತೇ ತೀರುವದು. ಆದ
ಲಾಟರಿ ಸಟ್ಟಾ, ವಾರಸಾ, ಕಾಣಿಕೆ ಮೊ
ಲಾದ ರೀತಿಯಿಂದ ಗುಪ್ತವಾಗಿ ಇಲ್ಲ
ಅಕಸ್ಮಾತ್ತಾಗಿ ದ್ರವ್ಯಲಾಭವೂ ಆಗುವದ
ಇದರಿಂದ ಅನೇಕರ ಪರಿಸ್ಥಿತಿ ಬಹಳ ಸು
ರಿಸುವದು. ಇದರಲ್ಲಿ ಎಳ್ಳಷ್ಟೂ ಸಂಶಯವಿ
ಸಪ್ತಮ ಗುರು ಇರುವ ವರೆಗೆ ಧಂದೆಯ
ಬಹಳ ಲಾಭವಾಗುವದು. ಮತ್ತು ನೋಕ
ರಿಗೆ ಮೇಲಿನ ಗ್ರೇಡು ದೊರೆಯುವದು. ಆ
ಯದಾತರು ಇಲ್ಲವೆ ವರಿಷ್ಠರ ಮರ್ಜಿಯಾ
ವದು. ಆದರೆ ಜನೆವರಿ ೫ ರಿಂದ ಫೆಬ್ರುವ
೧೪ ರ ಅವಧಿಯಲ್ಲಿ ಅವರಲ್ಲಿ ಒಬ್ಬರು ದಿ
ಗತ ಆಗುವ ಸಂಭವವಿದೆ. ಸ್ವತಃ ನಿ

ಬದಲಿಯಾದರೆ ಕೆಲಸದ ದೃಷ್ಟಿಯಿಂದ ಉತ್ತಮವಾಗಿದ್ದರೂ ಪ್ರಾಪಂಚಿಕ ಗೈರಸೋಯಿಯು ಸ್ಥಳಕ್ಕೆ ಆಗುವದು. ಮಿತ್ರಸುಖ ಸದಾ ಅನುಕೂಲ. ಯಾರೊಡನೆ ಧಂದೆಯಲ್ಲಿ ಇಲ್ಲವೆ ನೌಕರಿಯಲ್ಲಿ ವಿಶೇಷ ಸಂಬಂಧ ಬರುವದೋ ಅವರಾದರೂ ನಿಮ್ಮ ಬಗ್ಗೆ ಸದಭಿಪ್ರಾಯವನ್ನೇ ತಾಳುವರು. ಆದರೆ ಯಾರೊಡನೆ ಹೆಚ್ಚು ಸಂಬಂಧ ಬರುವದಿಲ್ಲವೊ ಅವರು ಮಾತ್ರ ನಿರರ್ಥಕವಾಗಿ ಕಲುಷಿತರಾಗುವರು. ಮತ್ತು ವಿಪರೀತ ಬುದ್ಧಿಯುವರಾಗುವರು. ಎಷ್ಟೇ ಲಾಭವಾದರೂ ಎಪ್ರಿಲ ೧೧ ರಿಂದ ಬರುವ ಚತುರ್ಥ ರಾಹು ಸ್ವಲ್ಪೂ ಸಂಗ್ರಹವಾಗದಷ್ಟು ವೆಚ್ಚವನ್ನು ಮಾಡಿಸುವನು. ಕರ್ತವ್ಯವೆಂದು ಇಲ್ಲವೆ ನಿರುಪಾಯರಾಗಿ ಆಪ್ತರ ಇಲ್ಲವೆ ನೆರೆಯುವರ ಅಡಚಣೆಗಳನ್ನು ನೀವು ನೋಡಬೇಕಾಗುವದು. ಸಮೀಪದ ಇಲ್ಲವೆ ದೂರದ ಪ್ರವಾಸವನ್ನು ಕೈಕೊಳ್ಳುವಿರಿ. ಆದರೆ ಆ ಪ್ರವಾಸವು ಸಕಾಲದಲ್ಲಿ ಇಲ್ಲವೆ ಅಂದಾಜು ಮಾಡಿದಷ್ಟು ವೆಚ್ಚದಲ್ಲಿ ಎಂದೂ ಮುಗಿಯುವದಿಲ್ಲ. ಜನೆವರಿ ೧೩ ರ ವರೆಗೆ ವಿಚಿತ್ರ ಮತ್ತು ಹುರಹುರಿ ಎನಿಸುವ ಸ್ವಪ್ನಗಳು ಬಹಳಷ್ಟು ಬೀಳುವವು. ಧಾರ್ಮಿಕ ಮತ್ತು ಮಂಗಳ ಕಾರ್ಯಗಳು ಅನಪೇಕ್ಷಿತ ಅಡಚಣಿ ಬಂದು ಮನಸ್ಸಿನಂತೆ ಆಗುವದಿಲ್ಲ. ತಾಯಿ ತಂದೆಗಳಿಗೆ ಕೂಡ ಚತುರ್ಥ ರಾಹು ವಿಯೋಗಜನ್ಯ ಇಲ್ಲವೆ ಪುನರ್ಜನ್ಮವತ್ ಕ್ಲೇಶವನ್ನುಂಟು ಮಾಡುವನು. ದಾವೆ ಫಿರ್ಯಾದಿ ಇಲ್ಲವೆ ಖಾಸಗಿ ಸ್ಪರ್ಧೆಯ ಕಾರ್ಯಗಳಲ್ಲಿ ಸುಮಾರಾಗಿ ಅರ್ಧದಷ್ಟು ನಿಮಗೆ, ಉಳಿದ ಅರ್ಧದಷ್ಟು ಶತ್ರುಗಳಿಗೆ ಯಶಸ್ಸು ದೊರೆಯುವದು. ಯಾರ ಮೇಲೆ ನೀವು ಮೊದಲು ಉಪಕಾರ ಮಾಡಿರುವಿರೊ ಅವರಲ್ಲಿಯೇ ಕೆಲವರು ಪ್ರತಿಪಕ್ಷಿಗಳಿಗೆ ಫಿತೂರ ಆದುದು ಕಂಡುಬರುವದು.

ಈ ವರ್ಷ ಹಡೆಯುವ ಸ್ತ್ರೀಯರಿದ್ದರೆ ಯಾರು ಎಪ್ರಿಲ ೧೧ರ ನಂತರ ಹಡೆಯುವರೊ ಅವರು ಸುಲಭವಾಗಿ ಪ್ರಸೂತರಾಗುವರು. ಆದರೆ ಯಾವಾಗ ಹಡೆದರೂ ಬಹುಶಃ ಕನ್ಯಾರತ್ನವನ್ನು ಹಡೆಯುವ ಯೋಗ ಹೆಚ್ಚಾಗಿದ್ದು ಕೂಸು ಅಶಕ್ತ ಉಳಿಯುವದು.

ಈ ರಾಶಿಯ ವಿದ್ಯಾರ್ಥಿಗಳಿಗೆ ಪರೀಕ್ಷೆ ಯಾವಾಗ ಆದರೂ ಅದು ಕಠಿಣವೆನಿಸುವದು. ಆದರೆ ಯಾರ ಪರೀಕ್ಷೆ ಪ್ರಮುಗುರು ಇದ್ದಾಗ ಇಲ್ಲವೆ ಜನೆವರಿ ೧೯ ರಿಂದ ಫೆಬ್ರುವರಿ ೫, ಫೆಬ್ರುವರಿ ೨೪ ರಿಂದ ಮಾರ್ಚ ೭ ಎಪ್ರಿಲ ೯ ರಿಂದ ೨೮ ಮತ್ತು ಮೇ ೩೦ ರಿಂದ ಅಗಷ್ಟ ೨೩ ಈ ಅವಧಿಯಲ್ಲಿ ಆದರೆ ಅವರು ಬಹುಶಃ ಯಶಸ್ವಿಯಾಗುವರು.

ಆದರೆ ಸೊಸೆ ಇಲ್ಲವೆ ಅಳಿಯ ರೂಪದಿಂದ ಸ್ವಲ್ಪ ಕಾಡು ಇರುವ ಸಂಭವವಿದೆ. ಗುಣದಿಂದ ಮಾತ್ರ ಎಲ್ಲರ ಮನಸ್ಸಿಗೂ ಬರುವರು. ಮಕ್ಕಳ ಉತ್ಕರ್ಷಕ್ಕೂ ಈ ವರ್ಷ ಅನುಕೂಲವದೆ. ಅದರಲ್ಲಿಯೂ ಎಪ್ರಿಲ ೧೧ರ ನಂತರ ವಿಶೇಷ ಉತ್ತಮ ಯೋಗವಿದೆ. ಅನೇಕ ದಿನಗಳ ಅಪೇಕ್ಷೆಯಂತೆಯೇ ಅನೇಕರ ಉತ್ಕರ್ಷ ನಿಶ್ಚಯವಾಗಿ ಆಗುವದು. ಮತ್ತು ಅವರಿಂದ ನಿಮಗಾದರೂ ಸಮಾಧಾನಕರವಾದ ಸೌಖ್ಯ ಸಿಕ್ಕುವದು.

ಧಂದೆ ಮಾಡುವವರಿಗೆ ಮತ್ತು ಕೂಲಿಕಾರರಿಗೆ ಈ ವರ್ಷ ಬಹಳ ಉತ್ಕೃಷ್ಟವಿದೆ. ಧಂದೆಯವರಿಗೆ ಯಾವಾಗಲೂ ಪ್ರಗತಿಯದೆ ಇದೆ. ಆದರೆ ನೌಕರರಿಗೆ ಮಕರಸಂಕ್ರಮಣದಿಂದ ಹೆಚ್ಚು ತ್ವರಿತವಾಗಿ ಪ್ರಗತಿಯಾಗಹತ್ತುವದು. ಧಂದೆಯವರ ಪತ್ತು ಬಲಿಷ್ಠವಾಗಿ ಉಳಿಯುವದು ಅದರಂತೆ ನೌಕರರ ಪ್ರತಿಷ್ಠೆಯೂ ವೇಗವಾಗಿ ಬೆಳೆಯುವದು. ಮೇಲಿನ ಗ್ರೇಡು ಸಿಕ್ಕುವ ಅವಕಾಶವಿದ್ದರೆ ಜೂನ ೧೩ ರಿಂದ ಜುಲೈ ೨೪ ಇಲ್ಲವೆ ಕದಾಚಿತ್ ಮಾರ್ಚ ೨೪ರಿಂದ ಮೇ ೩ ರ ಅವಧಿಯಲ್ಲಿ ನಿಶ್ಚಯವಾಗಿ ದೊರೆಯುವದು. ಬದಲಿಯಾಗುವ ಖಾತೆಯಲ್ಲಿದ್ದರೆ ಅಂಥ ಬದಲಿ ಎಪ್ರಿಲ ೧೧ರ ನಂತರ ತಿಂಗಳೆರಡು ತಿಂಗಳಲ್ಲಿ ನಿಶ್ಚಯವಾಗಿ ಮತ್ತು ಯೋಗ್ಯ ಸ್ಥಳಕ್ಕೆ ಆಗುವದು. ಮೇಲೆ ಹೇಳಿದ ತಾರೀಕಿನಿಂದ ಸುಲಭಕ್ಕಿಂತ ಕಠಿಣವಾದ ಕೆಲಸಗಳನ್ನು ಮಾಡುವದರಲ್ಲಿಯೇ ಹೆಚ್ಚು ಹುಮ್ಮಸು ಹುರುಪು ಉಂಟಾಗುವದು. ಮತ್ತು ದೇವರ ದಯೆಯಿಂದ ಅದರಲ್ಲಿ ಒಳ್ಳೆಯ ಯಶಸ್ಸು ಸಿಕ್ಕುವದು. ಧಂದೆಯವರು ಕೆಲಕಡೆಗೆ ಉಪಶಾಖೆಗಳನ್ನು ತೆಗೆಯುವರು. ವಿಶೇಷವಾಗಿ ನವಂಬರ ೨೪ ರ ವರೆಗೆ ಮತ್ತು ಅನಂತರ ಫೆಬ್ರುಅರಿ ೧೪ ರಿಂದ ಮೇ ೩, ಮತ್ತು ಜೂನ ೧೨ ರಿಂದ ಜುಲೈ ೨೪ ರೊಳಗಿನ ಕಾಲವು ವಿಶೇಷ ಲಾಭದ್ದೆನಿಸುವದು. ಮೊದಲಿನ ಸಾಲವಿದ್ದರೆ ಅದು ಎಪ್ರಿಲ ೧೧ರ ನಂತರ ಸುಮಾರಾಗಿ ಎಲ್ಲ ಮುಟ್ಟುವದು. ಹಾಗೆ ಸಾಲವಿಲ್ಲದಿದ್ದರೆ ಸಂಗ್ರಹಮಾಡುವಿರಿ. ಫೆಬ್ರುವರಿ ೧೪ ರಿಂದ ಕೆಲ ಮಿತ್ರರು ಬಹಳ ಸುಖವನ್ನು ಕೊಡುವರು ಮತ್ತು ಆಪ್ತರು ಇಲ್ಲವೆ ನೆರೆಯವರಲ್ಲಿ ಏನಾದರು ದ್ವೇಷ ಭಾವನೆಯಿದ್ದರೆ ಅದಾದರೂ ಎಪ್ರಿಲ ೧೧ ರ ನಂತರ ಇಲ್ಲದಂತಾಗಿ ಮತ್ತೆ ಮತ್ಯೈಕ್ಯವಾಗುವದು. ಆದರೆ ಮೇಲೆ ಹೇಳಿದ ಕಾಲದ ನಂತರ ಬಂಧುಗಳಿಗೆ ಮತ್ತು ಅದಕ್ಕು ಮೊದಲು ತಾಯಿ ತಂದೆಗಳಿಗೆ ಅಲ್ಪ ಸ್ವಲ್ಪ ಕ್ಲೇಶವಾಗುವ ಅಂಜಿಕೆ ಇದೆ. ದೂರ ಪ್ರವಾಸದ ಯೋಗ ಕಡಮೆಯಿದ್ದರೂ ಸಮೀಪದ ಪ್ರವಾಸ ಮೇಲಿಂದ ಮೇಲೆ ಒದಗಿಬಂದು ಅದರಲ್ಲಿಯ ಹೇತು ಸಾಧ್ಯವಾಗುವದು. ಸಮಾಜಹಿತದ ಒಂದೆರಡು ಕಾರ್ಯಗಳನ್ನು ಮಾಡುವಿರಿ. ಮುಂದೆ ಬಿದ್ದು ಈ ಕಾರ್ಯಮಾಡುವಿರಿ. ವಾಹನ ಸುಖ ಮಾತ್ರ ಸಾಧಾರಣವೇ.

# ಮಿಥುನ

ಒಟ್ಟಾರೆ ಈ ರಾಶಿಯವರಿಗೆ ಈ ವರ್ಷ ಕಿರಕುಳ ಕೆಲ ತೊಂದರೆಗಳನ್ನು ಬಿಟ್ಟರೆ ಉಳಿದ ಎಲ್ಲ ವಿಷಯಗಳಲ್ಲಿ ಒಳ್ಳೆ ಸುಖ ದೊರೆತು ಉತ್ಕರ್ಷವಾಗುವದು ಇದು ನಿಶ್ಚಿತ.

ಈ ರಾಶಿಯವರ ಆರೋಗ್ಯ ಎಪ್ರಿಲ ೧೧ ರ ನಂತರ ಒಳ್ಳೆ ಚೆನ್ನಾಗಿ ಉಳಿಯುವದು. ಆದರೆ ಅದಕ್ಕು ಮೊದಲು ಕೆಲವರಿಗೆ ತ್ವಚರೋಗ ಕೆಲವರಿಗೆ ಮೇಲಿಂದಮೇಲೆ ಬಾಯಿ ಬರುವದು, ಕೆಲವರಿಗೆ ಪೈಶಾಚಿಕ ಉಪದ್ರವದ ಹಾಗೆ ಭಾಸವಾಗುವದರಿಂದ ಅಲ್ಪ ಸ್ವಲ್ಪ ತೊಂದರೆಯಾಗುವ ಸಂಭವವಿದೆ. ಆಚಾರ ವಿಚಾರಗಳನ್ನು ಮೇಲಿಂದಮೇಲೆ ಬದಲಿಸುವ ಚಟವೂ ಬೀಳುವ ಸಂಭವವಿದೆ. ಉಳಿದ ವಿಷಯಗಳಲ್ಲಿ ದೇಹ ಸುಖ;ಫೆಬ್ರುವರಿಯಿಂದ ಬಹಳ ಉತ್ತಮ ದೊರೆಯುವದು. ಅದರಂತೆಯೇ ಪ್ರಾಪಂಚಿಕ ಸುಖ ಎಪ್ರಿಲ ೧೧ ರಿಂದ ಹೆಚ್ಚು ಅನುಕೂಲ. ಮನೆಯಲ್ಲಿ ಬಹುಶಃ ಅನೇಕ ವಿಷಯಗಳಲ್ಲಿ ಒಮ್ಮತವಾಗುವದರಿಂದ ಮುಖ್ಯವಾಗಿ ಮಾನಸಿಕ ಸಮಾಧಾನ ಬಹಳ ಉತ್ತಮ ದೊರೆಯುವದು. ಹೆಂಡತಿಯ ಆರೋಗ್ಯ ಜನೇವರಿ ೩ರ ವರೆಗೆ ಅಷ್ಟೊಂದು ಚೆನ್ನಾಗಿ ದೊರೆಯುವದಿಲ್ಲ. ವಿಷಬಾಧೆಯ ಇಲ್ಲವೆ ಗರ್ಭಾಶಯದ ಅಥವಾ ಟೊಂಕನೋವಿನ ತಕರಾರು ಉಳಿಯುವದು. ಆದರೆ ಮೇಲಿನ ಸಮಯದಿಂದ ಅವಳ ಆರೋಗ್ಯ ಬಹಳ ಚೆನ್ನಾಗಿ ಉಳಿಯುವದು ಮತ್ತು ಜನೆವರಿ ೫ರಿಂದ ಫೆಬ್ರುವರಿ ೧೪ ಸಪ್ಟಂಬರ ೧೦ ರಿಂದ ಮುಂದಿನ ಕಾಲವನ್ನು ಬಿಟ್ಟು ಉಳಿದ ಕಾಲದಲ್ಲಿ ಅವಳ ಸಹವಾಸ ದೊರೆತು ಉಭಯತರದು ಚೆನ್ನಾಗಿ ಕೂಡಿ ನಡೆಯುವದು. ಯಾರ ಮದುವೆ ಆಗಿಲ್ಲವೋ ಮತ್ತು ಈ ವರ್ಷ ಮಾಡಿಕೊಳ್ಳುವ ಇಚ್ಛೆ ಇದೆಯೋ ಅವರಿಗೆ ಮಕರ ಸಂಕ್ರಮಣದ ನಂತರ ಒಳ್ಳೆ ಬಾಶಿಂಗಬಲವಿದ್ದು ಅದು ಚೆನ್ನಾಗಿ ಕೂಡಿ ಬರುವದು. ಆದರೆ ಕೂಡಿ ಬಂದಬಳಿಕವೂ ಲಗ್ನವಾಗಬೇಕಾದರೆ ಇಷ್ಟವಾದರೂ ಅನೇಕ ಅಡಚಣೆಗಳು ಬರುವ ಸಂಭವವಿದೆ. ವಧೂ ಮತ್ತು ವರ ಒಬ್ಬರಿಗೊಬ್ಬರು ಪೂರ್ಣ ಅನುರೂಪ ಇರುವರು. ಮತ್ತು ಮಾವನ ಮನೆಯ ಸ್ಥಿತಿಗತಿ ನಿಮಗಿಂತಲೂ ಸ್ವಲ್ಪ ಹೆಚ್ಚು ಚೆನ್ನಾಗಿ ಇರುವದು.

ನಿಮ್ಮ ಮಕ್ಕಳ ಮದುವೆ ಮಾಡುವದಿದ್ದರೆ ಅದು ಈ ವರ್ಷ ಕೂಡಿ ಬಂದು ಎಲ್ಲವೂ ವ್ಯವಸ್ಥಿತವಾಗಿ ಸಾಂಗವಾಗುವದು. ಈ ವರ್ಷ ಅದಕ್ಕೆ ಬಲವತ್ತರವಾದ ಯೋಗವಿದೆ.

ದಾವೆ, ಫಿರ್ಯಾದಿ ಇಲ್ಲವೇ ಖಾಸಗಿಸ್ಪರ್ಧೆಯ ಕಾರ್ಯಗಳಲ್ಲಿ ಈ ವರ್ಷ ಸತತವಾಗಿ ಓಡಾಡ ಬೇಕಾಗುವದು. ನಿಮ್ಮೊಡನೆ ಬಹಳಷ್ಟು ವಂಚಕರೀತಿಯಿಂದ ನಡೆದರೆಂಬ ಸಂಶಯದ ಮೇಲೆ ವಕೀಲರು ಇಲ್ಲವೆ ಮಧ್ಯಸ್ಥರನ್ನು ಬದಲು ಮಾಡಬೇಕಾಗುವದು. ಸಾಕ್ಷಿದಾರರು ಒಡೆಯುವ ಅಂಜಿಕೆಯೂ ಇದೆ. ಆದರೂ ನವಂಬರ ೨೪ ರಿಂದ ಜನೇವರಿ ೫, ಮಾರ್ಚ ೨೪ ರಿಂದ ಮೇ ೩, ಜೂನ ೧೩ ರಿಂದ ಜುಲೈ ೨೪ ಈ ಅವಧಿಯಲ್ಲಿ ತೀರ್ಪು ಕೊಡಲ್ಪಟ್ಟರೆ ಅದು ನಿಮಗೆ ಅನುಕೂಲವಾಗಿಯೇ ಪರಿ-ಣಮಿಸುವದು.

ಈ ರಾಶಿಯ ಸ್ತ್ರೀಯರು ಈ ವರ್ಷ ಹಡೆಯುವವರಿದ್ದರೆ ಅವರಿಗೆ ಜನೇವರಿ ೨೧ ರಿಂದ ಫೆಬ್ರುಅರಿ ೧೫, ಮೇ ೩೧ ರಿಂದ ಜೂನ ೧೫ ಮತ್ತು ಅಗಷ್ಟ ೨೬ ರಿಂದ ಸಪ್ಟಂಬರ ೨೧ ಈ ಅವಧಿಯಲ್ಲಿ ಬಿಟ್ಟು ಉಳಿದ ಕಾಲದಲ್ಲಿ ಅತ್ಯಂತ ಸುಲಭಪ್ರಸೂತಿಯ ಯೋಗವಿದೆ. ಹುಟ್ಟುವ ಮಕ್ಕಳು ಒಳ್ಳೆ ಸಶಕ್ತ ಇರುವರು. ಮತ್ತು ಜನೇವರಿ ೧೩ ರ ವರೆಗೆ ಗಂಡುಮಗು ಹುಟ್ಟುವ ಮತ್ತು ಅನಂತರ ಹಡೆದರೆ ಹೆಣ್ಣು ಹುಟ್ಟುವ ಸಂಭವ ಹೆಚ್ಚಿಗೆ ಇದೆ.

ಈ ರಾಶಿಯ ವಿದ್ಯಾರ್ಥಿಗಳು ಈ ವರ್ಷ ಸಹಸಾ ನಾಪಾಸಾಗುವದಿಲ್ಲ. ತದ್ವಿರುದ್ಧ ಅಪೇಕ್ಷಿಸಿದ್ದಕ್ಕಿಂತ ಹೆಚ್ಚು ಗುಣಗಳನ್ನು ಪಡೆಯುವರು. ಆದರಲ್ಲಿಯೂ ಯಾರ ಪರೀಕ್ಷೆ ಡಿಸೆಂಬರ ೧ ರಿಂದ ೨೬, ಜನೇವರಿ ೨೧ ರಿಂದ ಫೆಬ್ರುಅರಿ ೧೫, ಮಾರ್ಚ ೫ ರಿಂದ ಎಪ್ರಿಲ ೩, ಎಪ್ರಿಲ ೨೭ ರಿಂದ ಮೇ ೨೧, ಜೂನ ೧೫ ರಿಂದ ಜುಲೈ ೧೦, ಅಗಸ್ಟ ೩ ರಿಂದ ೨೬ ಮತ್ತು ಸಪ್ಟಂಬರ ೨೧ರಿಂದ ಅಕ್ಟೋಬರ ೧೫ರ ಅವಧಿಯಲ್ಲಿ ಆದರೆ ಅವರಿಗೆ ಬಹುಶಃ ಉಚ್ಚ ವರ್ಗವೂ ಸಿಕ್ಕುವದು.

## ಕರ್ಕ

ಒಟ್ಟಾರೆ ಈ ರಾಶಿಯವರಿಗೆ ಧಂದೆ ಕೂಲಿ ಮಾಡುವದಕ್ಕೆಎಷ್ಟುಸುಖಕರವಾಗಿರುವದೋ ಅಷ್ಟು ಆರೋಗ್ಯ ಪ್ರಪಂಚ ಮುಂತಾದ ವಿಷಯಗಳಲ್ಲಿ ಸುಖಕರವಾಗಿರುವದಿಲ್ಲ ಎಂದು ತಿಳಿದುಕೊಂಡು ನಡೆಯಬೇಕು.

ಈ ರಾಶಿಯವರು ಆರೋಗ್ಯವನ್ನು ಮಾರ್ಚ ೨೪ ರಿಂದ ಮೇ ೩ ರ ವರೆಗೆ ಮತ್ತು ಸಪ್ಟಂಬರ ೧೦ ರ ನಂತರದ ಅವಧಿಯಲ್ಲಿ ಸ್ವಲ್ಪ ಜಪ್ಪಿಸಿಕೊಳ್ಳಬೇಕು. ಏಕೆಂದರೆ ಆ ಕಾಲದಲ್ಲಿ ಉಷ್ಣದಿಂದ ಇಲ್ಲವೆ ಯಾವದೊಂದು ಸಣ್ಣ ಅಪಘಾತದಿಂದ ಬಹಳಷ್ಟು ಅಲ್ಲದಿದ್ದರೂ ಸ್ವಲ್ಪಾದರೂ ಕ್ಲೇಶವಾಗುವ ಸಂಭವವಿದೆ ಉಳಿದ ಕಾಲದಲ್ಲಿ ಆರೋಗ್ಯ ಒಳ್ಳೇ ಸುಖಕ
ವಾಗಿರುವದು ಆದರೆ ಎಪ್ರಿಲ ೧೧ ರ ನಂತ
ದುಃಸ್ವಪ್ನ ಬೀಳುವದರಿಂದ ಇಲ್ಲವೆ ಜೀ
ಬೇಸರಿಯುವಂತೆ ಜಾಗ್ರತಾವಸ್ಥೆಯಲ್ಲಿಯ
ಕೆಲವೊಂದು ವಿಕಾರವಾಗುವದರಿಂದ ಮನಸಿ
ನಲ್ಲಿ ಯಾವಾಗಲೂ ಒಂದು ಬಗೆಯಹುರಹು
ಇದ್ದದ್ದೇ. ಯಾವ ರೀತಿಯಲ್ಲಿ ಆರೋ
ನಿರೋಗಿ ಉಳಿಯುವದೋ ಆ ಪ್ರಮಾಣದಿಂ
ಆವಶ್ಯಕ ವಿಷಯಗಳಲ್ಲಿ ದೇಹಸುಖ ಮಾತ
ಅನುಕೂಲವಿಲ್ಲ. ಜನೇವರಿ ೧೩ ರಿಂದ ಗೃ
ಕಲಹ ಪ್ರಾರಂಭವಾಗುವದು ಮತ್ತು ಎಪ್ರಿ
೧೧ ರಿಂದ ಅದು ಬಹಳಷ್ಟು ಹೆಚ್ಚುವದ
ಮತ್ತು ಅದರಿಂದ ಸಂಸಾರದಲ್ಲಿ ಸ್ಥೈರ್ಯವು
ಯದೆ ಆಗಾಗ ಅದು ಬೇಸರ ಮಾತ್ರ
ಬರುವದು. ಕನಸು ಮನಸಿನಲ್ಲಿರದೆ ವಿ
ರೀತ ವೆಚ್ಚ ಮಾಡಬೇಕಾಗಿ ಬರುವದು
ಸಂಗ್ರಹಿಸಿಟ್ಟ ಹಣಕ್ಕೆ ಗೆದ್ದಲಿ ಹತ್ತಿದಂತಾಗ
ವದು ಆದರಲ್ಲಿಯೂ ಅಪ್ರಿಯ ಜನರ ಸಹ
ವಾಸ ಮಾಡಬೇಕಾದ ಪ್ರಸಂಗ ಬರುವದರಿಂ
ಮನಸ್ಸು ಬಹಳ ಅಸಂತುಷ್ಟ ಮತ್ತು ನರಗು
ದಿದ್ದಾಗುವದು.

ಸ್ತ್ರೀಸುಖಕ್ಕೂ ಈ ವರ್ಷ ಅಷ್ಟೊಂದು ಹಿ
ಕರವಿಲ್ಲ. ಉಭಯತರ ಧ್ಯೇಯ ಒಂದೇ ಆಗಿ
ದ್ದರೂ ಅದನ್ನು ಸಾಧ್ಯಮಾಡಿಕೊಳ್ಳುವ
ಮಾರ್ಗ ಮಾತ್ರ ತೀರ ಭಿನ್ನವಾಗಿರುವದ
ಇದರಿಂದ ಕ್ಷುಲ್ಲಕ ಮಾತಿಗಾಗಿಯೂ ವಿತಂಡ
ವಾದ ಪ್ರಾರಂಭವಾಗುವದು. ಆದರಲ್ಲಿಯೂ
ಫೆಬ್ರುವರಿಯಿಂದ ವಾತ ಇಲ್ಲವೆ ಆಮ್ಲಪಿತ್ತದ
ವಿಕಾರವಾಗಿ ಆರೋಗ್ಯ ಸರಿಯುಳಿಯುವ
ದಿಲ್ಲ. ಆದರೆ ಉಭಯತರ ಸಹವಾಸದಲ್ಲಿ
ಮಾತ್ರ ಸಹಸಾ ವ್ಯತ್ಯಯ ಬರುವದಿಲ್ಲ.
ಆದರೆ ಯಾರ ಮದುವೆ ಇನ್ನೂ ಆಗಿಲ್ಲವೊ
ಮತ್ತು ಈ ವರ್ಷ ಮಾಡಿಕೊಳ್ಳುವದಿದೆಯೊ
ಅಂಥವರಿಗೆ ಜನವರಿ ೧೩ ಕ್ಕಿಂತ ಮೊದಲ
ಹೆಚ್ಚು ಬಾಸಿಂಗಬಲವಿದೆ. ಆದರೆ ಮುಂದ
ಅಷ್ಟೊಂದು ಬಲಿಷ್ಠ ಯೋಗವಿರುವದಿಲ್ಲ.
ಯದಾ ಕದಾಚಿತ್ ಲಗ್ನ ಕೂಡಿಬಂದರೂ
ಪ್ರತ್ಯಕ್ಷವಾಗಿ ಸಮಾರಂಭ ಜರುಗಬೇಕಾದರ
ಒಂದು ಬಗೆಯ ಹೊಡೆದಾಟವೇ ಆದಂತಾಗು
ವದು. ಮದುವೆಯಾಧವರ ವಧೂ ಇಲ್ಲವ
ವರ ಮಾತ್ರ ರೂಪದಿಂದ ಎಷ್ಟು ಉತ್ತಮ
ವಿರುವರೋ ಅಷ್ಟೊಂದು ಗುಣದಿಂದ ಮತ್ತು
ಬುದ್ಧಿಯಿಂದ ಚೆನ್ನಾಗಿ ಇರುವದಿಲ್ಲ.

ಮಕ್ಕಳ ಮದುವೆ ಮಾಡುವದಿದ್ದರೆ ಅದ
ಮಾತ್ರ ಚೆನ್ನಾಗಿ ಸಾಧಿಸುವದು. ಜನೆವರಿ
೧೩ ರ ವರೆಗೆ ಸ್ವಲ್ಪ ಕಷ್ಟದಿಂದ ಆದರ
ಮುಂದೆ ಮಾತ್ರ ಅನಾಯಾಸವಾಗಿ ಒದಗಿ
ಬರುವದು. ಮತ್ತು ಗೊತ್ತುಮಾಡಿದ
ಮುಹೂರ್ತದಲ್ಲಿ ಸಾಂಗವಾಗುವದು. ಸೊಸ
ಇಲ್ಲವೆ ಅಳಿಯ ಎಲ್ಲರ ಮನಸ್ಸಿಗೂ ಬರುವನು

ರೂಪಗುಣಗಳಿಂದ ಅವರು ಕೂಡಿದವರಿರುವರು. ಮಕ್ಕಳ ಉನ್ನತಿಗೂ ಈ ವರ್ಷ ಬಹಳ ಅನುಕೂಲವಾಗಿದ್ದು ನವಂಬರ ೨೪ ರಿಂದ ಜನೆವರಿ ೫, ಫೆಬ್ರುಅರಿ ೧೪ ರಿಂದ ಮಾರ್ಚ ೨೪, ಜೂನ ೧೨ ರಿಂಧ ಸಪ್ಟಂಬರ ೧೦ ಈ ಅವಧಿಯು ಬಹಳ ಉನ್ನತಕಾರಕವಾಗಿದೆ. ಹೀಗೆ ಮಕ್ಕಳ ಉನ್ನತಿಯಾದರೂ ನಿಮಗೆ ಮಾತ್ರ ಅವರಿಂದ ಸುಖ ದೊರೆಯುವಂತೆ ಅವರು ವರ್ತಿಸುವ ಸಂಭವವಿರುವದಿಲ್ಲ.

ಧಂದೆ ಮತ್ತು ಕೂಲಿ ಮಾಡುವವರಿಗೆ ಈ ವರ್ಷ ಕೆಟ್ಟ ಇರುವದಿಲ್ಲ. ಧಂದೆ ಮಾಡುವವರಿಗೆ ಸರಕಾರಿ ಕರ, ನಿಯಂತ್ರಣ ಮೊದಲಾದ ವಿಷಯಗಳಲ್ಲಿ ಅಲ್ಪಸ್ವಲ್ಪ ತೊಂದರೆಯಾದರೂ ಧಂದೆಯು ವ್ಯಾಪ ಹೆಚ್ಚು ಬೆಳೆದು ದ್ರವ್ಯ ಲಾಭ ಅಂದಾಜಿನಷ್ಟು ಖಾತ್ರಿಯಿಂದ ಆಗುವದು. ಹಳೆಯ ಜನರಂತೆ ಹೊಸಬರ ಪತ್ತು ಮತ್ತು ಪ್ರತಿಷ್ಠೆಯೂ ಹೆಚ್ಚ ಹತುವದು. ನೋಕರರಿಗೆ ಕೂಡ ಮಕರಸಂಕ್ರಮಣದಿಂದ ಒಳ್ಳೆ ಉತ್ಕರ್ಷಕಾಲ ಬಂದು ವರಿಷ್ಠರ ಮರ್ಜಿ ಸದಾ ಪ್ರಸನ್ನ ಉಳಿಯುವದು. ಕೆಲಸ ಸ್ವಲ್ಪ ಹೆಚ್ಚಿಗೆ ಬಿದ್ದರೂ ಅದರಿಂದ ಹೆಚ್ಚಿನ ತೊಂದರೆಯಿಲ್ಲ. ಫೆಬ್ರುವರಿ ೧೪ ರಿಂದ ಮಾರ್ಚ ೨೪, ಇಲ್ಲವೆ ಜೂನ ೧೨ ರಿಂದ ಜುಲೈ ೨೪ರ ಕಾಲದಲ್ಲಿ ಅನೇಕರಿಗೆ ಮೇಲಿನ ಗ್ರೇಡು ಸಿಕ್ಕುವ ಸಂಭವವೂ ಇದೆ. ಬದಲಿಯಾದರೆ ಮಾತ್ರ ಬಹಳ ಅನನುಕೂಲ ಸ್ಥಳಕ್ಕೆ ಆಗುವದು ಮತ್ತು ಅದರಿಂದ ಪ್ರಪಂಚದ ಹದ ಸ್ವಲ್ಪ ತಪ್ಪುವದು. ಡಿಸೆಂಬರ ೧ರಿಂದ ಜನೇವರಿ ೨೧ ಫೆಬ್ರುವರಿ ೧೫ ರಿಂದ ಎಪ್ರಿಲ ೨೭, ಮೇ ೨೧ ರಿಂದ ಜೂನ ೧೫ ಮತ್ತು ಅಗಸ್ಟ ೩ರಿಂದ ಅಕ್ಟೋಬರ ೧೫ ಈ ಕಾಲವು ಲಾಭದ ದೃಷ್ಟಿಯಿಂದ ಬಹಳ ಅನುಕೂಲದ್ದಾಗಿ ಪರಿಣಮಿಸುವದು. ಆದರೆ ಹಣ ಎಷ್ಟೇ ದೊರೆತರೂ ಸಂಗ್ರಹ ಮಾತ್ರ ಸ್ವಲ್ಪೂ ಆಗುವದಿಲ್ಲ. ಅರ್ಥಾತ್ ವೆಚ್ಚವೂ ಅದರಂತೆ ಬೆಳೆಯುವದು ಎಂದು ತಿಳಿಯಬೇಕು. ಸಂಕ್ರಮಣದ ವರೆಗೆ ಮಿತ್ರ ಸುಖ ಚೆನ್ನಾಗಿ ದೊರೆಯುವುದು. ಆದರೆ ಅನಂತರ ಸ್ವತಃ ನೀವು ಇಲ್ಲವೆ ಅವರು ಸ್ಥಳಾಂತರವಾಗುವದರಿಂದ ಅನಪೇಕ್ಷಿತವಾಗಿ ಸುಖಕ್ಕೆ ವ್ಯತ್ಯಯ ಬರುವದು. ಅದರಂತೆ ಸಂಕ್ರಮಣಕ್ಕಿಂತ ಮೊದಲು ಯಾವದೊಂದು ದೈವೀಕೃತ್ಯ ಸಂಭವಿಸುವದು ಇಲ್ಲವೆ ಯಾತ್ರೆ ಘಟಿಸುವದು. ವಾಹನ ಸುಖ ಅಲ್ಪಸ್ವಲ್ಪ ತೊಂದರೆಯದೆ. ಅದಕ್ಕಾಗಿ ನಿರರ್ಥಕ ವೆಚ್ಚ ಮಾತ್ರ ಹೆಚ್ಚು. ವಾದವಿವಾದ ಇಲ್ಲವೆ ಸ್ಪರ್ಧೆಯ ಕೆಲಸಗಳಲ್ಲಿ ಈ ವರ್ಷ ಯೋಗ ಒಳ್ಳೆ ಚಮತ್ಕಾರವಾಗಿದೆ ಅಂದರೆ ಯಾವ ಕೆಲಸದಲ್ಲಿ ನಿಶ್ಚಿತವಾಗಿ ಯಶಸ್ಸು ಸಿಕ್ಕುವದೆಂದು ಎನಿಸುವದೋ ಅದು ತೀರ ವಿರುದ್ಧವಾಗುವದು. ಆದರೆ ಹಾಗೆ ಎನಿಸದಿದ್ದುದು ಯಶಸ್ವಿಯಾಗುವದು. ಆದರೂ ಸಂಕ್ರಮಣದ ನಂತರ ಮಾತ್ರ ತಕ್ಕಡಿ ತಿರುವುಮುರುವಾಗಿ ಪ್ರತಿಪಕ್ಷಿಗಳದೇ ಹೆಚ್ಚು ಭಾರದ್ದಾಗಿ ಪರಿಣಮಿಸಿದ್ದು ಅನುಭವಕ್ಕೆ ಬರುವದು.

ಈ ರಾಶಿಯ ಸ್ತ್ರೀಯರು ಸಂಕ್ರಮಣಕ್ಕಿಂತ ಮೊದಲು ಹಡೆದರೆ ಕನ್ಯಾ ಹುಟ್ಟುವ ಯೋಗ ವಿಶೇಷವಿದೆ. ಆದರೂ ಅತ್ಯಂತ ಸುಲಭವಾಗಿ ಅವರು ಹಡೆಯುವರು ಮತ್ತು ಅನಂತರ ಹಡೆದವರಿಗೆ ಸ್ವಲ್ಪಕಷ್ಟವಾಗುವದು. ಆದರೂ ಗಂಡುಮಗುವನ್ನು ಹೆತ್ತ ಆನಂದದಲ್ಲಿ ಅವರು ಅನುಭವಿಸಿದ ಕಷ್ಟವನ್ನೆಲ್ಲ ಮರೆಯುವರು.

ಯಾವ ವಿದ್ಯಾರ್ಥಿಗಳ ಪರೀಕ್ಷೆ ಸಂಕ್ರಮಣಕ್ಕಿಂತ ಮೊದಲು ಇರುವದೊ ಅವರಿಗೆ ಯಶಸ್ಸು ನಿಶ್ಚಿತ. ಅರ್ಥಾತ್ ಅನಂತರ ಪರೀಕ್ಷೆಯಾದವರಿಗೆ ಅದು ಕಷ್ಟಸಾಧ್ಯವೆಂದು ತಿಳಿಯತಕ್ಕದ್ದು.

## ಸಿಂಹ

ಒಟ್ಟಿಗೆ ಈ ರಾಶಿಯವರಿಗೆ ವರ್ಷದ ಮೊದಲಿನ ಮೂರು ನಾಲ್ಕು ತಿಂಗಳ ಸ್ವಲ್ಪ ನಿರುತ್ಸಾಹವೆನಿಸಿದರೂ ಮುಂದೆ ಅದೊಳ್ಳೆ ಉತ್ಸಾಹಕಾರಕವಾಗಿ ಪರಿಣಮಿಸುವದು.

ಈ ರಾಶಿಯವರ ಆರೋಗ್ಯ ಇಡೀ ವರ್ಷ ಅಲ್ಪ ಸ್ವಲ್ಪ ತಕರಾರಿಯದೇ ಎನಿಸುವದು. ಅದರಲ್ಲಿಯೂ ಮಕರಸಂಕ್ರಮಣದ ವರೆಗೆ ಅದು ಹೆಚ್ಚುಜೋರಾಗುವದು. ಎಪ್ರಿಲ ೧೧ರ ವರೆಗೆ ಅದಕ್ಕೂಕಡಿಮೆ ಅನಂತರ ನಡನಡುವೆ ಮತ್ತೆಸ್ವಲ್ಪಕಡಮೆಯಾಗುವದು. ಹೀಗೆ ಸ್ಥಿತಿ ಹೆಚ್ಚು ಕಡಮೆಯಾಗುವದು. ಕಿಡ್ನಿ, ಮಧುಮೇಹ, ಮೂಲವ್ಯಾಧಿ ಮೊದಲಾದ ವಿಕಾರಗಳಿಂದ ಹೆಚ್ಚು ಜಪ್ಪಿಸಿಕೊಳ್ಳಬೇಕು. ಆದರೂ ಗಂಡಾಂತರದ ಅಂಜಿಕೆಯೇನೂ ಇಲ್ಲ. ಉಳಿದ ವಿಷಯಗಳಲ್ಲಿ ದೇಹ ಸುಖ ಸಂಕ್ರಮಣದ ವರೆಗೆ ಬಹಳ ದಗದಗಿಯದೇ ಎನಿಸಿದರೂ ಮುಂದೆ ಮಾತ್ರ ಮನಸ್ಸಿನಂತೆ ದೊರೆಯುವದು. ಎಪ್ರಿಲ ೧೧ರ ವರೆಗೆ ಗೃಹಕಲಹ ಬಹಳಷ್ಟು ಹೆಚ್ಚುವದು. ಆದರೆ ಅನಂತರ ಮಾತ್ರ ಯಾವದೊಂದು ಇಷ್ಟಾಪತ್ತಿಯಿಂದ ಅದು ಪೂರ್ಣ ಇಲ್ಲದಂತಾಗುವದು. ಇಡೀ ವರ್ಷ ಬೌದ್ಧಿಕ ಕೆಲಸಗಳಲ್ಲಿ ಕೊನೆಯಲ್ಲಿ ಯಶಸ್ಸು ಸಿಕ್ಕುವ ಯೋಗವಿದ್ದರೂ ಮೊದಲು ಬುದ್ಧಿಭ್ರಂಶವಾಗುವಷ್ಟು ನೆಂದುವಿನ ಮೇಲೆ ಜೋರು ಬೀಳುವದು. ಅದರಿಂದ ದೈನಂದಿನ ಮಾತುಗಳಲ್ಲಿಯೂ ಅವಶ್ಯಕ ವಿಸ್ಮರಣೆಯಾಗಿ ಕೆಲ ಸಲ ನಗೆ ಹತ್ತಿದರೆ ಕೆಲ ಸಲ ಕಣ್ಣೀರನ್ನು ಸುರಿಸುವ ಪ್ರಸಂಗಬರುವದು.

ಹೆಂಡತಿಯ ಆರೋಗ್ಯ ಚೆನ್ನಾಗಿ ಉಳಿದರೂ ಎಪ್ರಿಲ ೧೧ ರಿಂದ ಪಿತ್ತಪ್ರಕೋಪದಿಂದ ತಲೆನೋವು, ಅರೆತಲೆನೋವು, ಚಕ್ರಬರುವದು. ಮೊದಲಾದ ತೊಂದರೆಯಾಗುವದು. ಅಲ್ಲದೆ ಈ ಅವಧಿಯಿಂದ ಉಭಯತರಲ್ಲಿ ಸಣ್ಣದೊಡ ಮಾತುಗಳಲ್ಲಿ ಮತಭೇದವಾಗಿ ಅದರ ಪರಿಣಾಮವಾಗಿ ಅಲ್ಪ ಸ್ವಲ್ಪ ಮನಸ್ತಾಪವೂ ಆಗುವದು. ಆದರೆ ಪರಸ್ಪರರಲ್ಲಿ ನಿಷ್ಠೆ ಮಾತ್ರ ಚೆನ್ನಾಗಿಉಳಿಯುವದು. ಆದರೆ ಇನ್ನೂನಿಮ ಮದುವೆಯಾಗಿರದಿದ್ದರೆ ಮತ್ತು ಈ ವರ್ಷ ಮಾಡಿಕೊಳ್ಳುವದಿದ್ದರೆ ಮಕರಸಂಕ್ರಮಣದ ನಂತರ ಮತ್ತು ವಿಶೇಷತಃ ಫೆಬ್ರುವರಿ ೧೪ರಿಂದ ಮಾರ್ಚ ೨೪ ಮತ್ತು ಜೂನ ೧೨ ರಿಂದ ಜುಲೈ ೨೪ ಈ ಅವಧಿಯಲ್ಲಿ ನಿಶ್ಚಿತವಾಗಿ ಆಗುವದು. ವಧು ಇಲ್ಲವೆ ವರ ರೂಪದಿಂದ ಸರ್ವಸಾಧಾರಣವೆ, ಆದರೆ ಗುಣದಿಂದ ಎಲ್ಲರಿಗೂ ಪ್ರಿಯ ಮತ್ತು ಮನಸ್ಸಿಗೆ ಬರುವಂತೆ ಇರುವರು. ಮತ್ತು ನಿಮ್ಮದೂ ಅವರದೂ ಕೂಡಿ ನಡೆಯುವದು. ಮಾವನ ಮನೆಯವರ ಸ್ಥಿತಿ ಮಾತ್ರ ಸಂತೋಷ ಹೊಂದುವಷ್ಟು ಬಲಿಷ್ಠವಿರುವದಿಲ್ಲ.

ಮಕ್ಕಳ ಮದುವೆ ಈ ವರ್ಷ ಮಾಡುವದಿದ್ದರೆ ಸಂಕ್ರಮಣದ ನಂತರ ತ್ವರಿತವಾಗಿ ಮತ್ತು ಅನಾಯಾಸವಾಗಿ ಆಗುವದು. ಆದರೆ ಅನಂತರ ಮಾತ್ರ ಬಹಳ ದಿನಗಳ ನಂತರ ಒದಗಿಬರುವದು. ಅದರಂತೆಯೇ ಸಮಾರಂಭಗಳಲ್ಲಿ ಒಂದಿಲ್ಲೊಂದುತಕರಾರಿನಪ್ರಸಂಗಗಳು ಬಂದು ಮನಸ್ಸು ಅಲ್ಪ ಸ್ವಲ್ಪ ವಿರಸಗೊಳ್ಳುವದು. ಸೊಸೆ ಇಲ್ಲವೆ ಅಳಿಯ ರೂಪದಿಂದ ಒಳ್ಳೆಯವರಿದ್ದರೂ ಸದ್ಗುಣವೂ ಕೆಲ ಮಟ್ಟಿಗೆ ಹೆಚ್ಚುವದು. ಆದರೆ ವಿಚಿತ್ರ ಸ್ವಭಾವದವರಿರುವರು. ಮಕ್ಕಳ ಉನ್ನತಿಗೆ ಮಾತ್ರ ಈ ವರ್ಷ ಬಹಳ ಅನುಕೂಲವಿದೆ ಮತ್ತು ಸಂಕ್ರಮಣದ ನಂತರವೆ ಹಾಗಾಗುವ ಚಿಹ್ನಗಳು ಕಾಣಹತ್ತುವವು. ಆದರೆ ನಿಮ್ಮೊಡನೆ ಅವರ ವರ್ತನೆ ಅಷ್ಟು ಚನ್ನಾಗಿರುವದಿಲ್ಲ.

ಧಂದೆ ಮತ್ತು ಕೂಲಿಕಾರರಿಗೆ ಈ ವರ್ಷ ಎಪ್ರಿಲ ೧೧ ರಿಂದ ಬಹಳ ಉತ್ಕರ್ಷದ್ದೆನಿಸುವದು. ಧಂದೆಯವರಿಗಂತೂ ಸಂಕ್ರಮಣ ನಂತರ ಪ್ರಗತಿಪರವೆನಿಸುವದು. ನೋಕರರಿಗೆ ಮಾತ್ರ ಜನೇವರಿ ೧೩ ರಿಂದ ಎಪ್ರಿಲ ೧೧ ರ ಅವಧಿಯಲ್ಲಿ ವರಿಷ್ಠರು ಬಹಳ ತೊಂದರೆ ಕೊಡುವರು ಮತ್ತು ಅವಮಾನಗೊಳಿಸುವರು. ಅನಂತರ ನೀವು ಇಲ್ಲವೆ ಅವರು ಬದಲಿಯಾಗಿ ಹೋಗುವದರಿಂದ ಅದು ಒಮ್ಮೆಲೆ ಇಲ್ಲದಂತಾಗಿ ಅಲ್ಲಿಂದ ಮುಂದೆ ಒಳ್ಳೆ ಸುಖ ಮತ್ತು ಉತ್ಸಾಹದ ಗಾಳಿ ಬೀಸಹತ್ತುವದು. ಬದಲಿಯಾದರೆ ಒಳ್ಳೆ ಸುಖ ಸೌಕರ್ಯಗಳ

ನೂತನ ದೀಪಾವಳಿಯು ಸರ್ವರಿಗೂ ಸುಖಪ್ರದವಾಗಲಿ!

# ಎಸ್. ವಿ. ಎಮ್. ಎಸ್.

ಸುಖ ಪ್ರವಾಸಕ್ಕೆ

ನವ್ರ ಸೇವೆಗೆ

ನಿಯಮಿತ ವೇಳೆಗೆ

ಸಕಲ ವಿಧದ ಪ್ರಯಾಣ ಸೌಕರ್ಯಗಳಿಗೆ

## ಬಳ್ಳಾರಿ ಜಿಲ್ಲೆಯ ಏಕಮೇವ ಶ್ರೇಷ್ಠ ಸಾರಿಗೆ ಸಂಸ್ಥೆ



# S. V. M. S.

## ನಮ್ಮ ಸರ್ವೀಸ್‌ಗಳು

### ಹೊಸಪೇಟೆಯಿಂದ

ಹರಿಹರ
ಹಂಪಿ
ಕಂಪ್ಲಿ
ಕುರುಗೋಡು
ಮೂಗಳ
ಮೈಲಾರ

ತಾಂಬ್ರಹಳ್ಳಿ
ಶಿವಮೊಗ್ಗ
ಹರಪನಹಳ್ಳಿ
(ಹಡಗಲಿ ಮೇಲೆ)
ದಾವಣಗೇರಿ
(ಹಡಗಲಿ ಮೇಲೆ)
ದಾವಣಗೇರಿ
(ಅರಿಸಿಕೆರೆ & ಉಚ್ಚಂಗೆ ದುರ್ಗದ ಮೇಲೆ)
ದಾವಣಗೇರಿ
(ಕೊಟ್ಟೂರು & ಕೂಡ್ಲಿಗೆ ಮೇಲೆ)

# ಶ್ರೀ ವೆಂಕಟೇಶ್ವರ ಮೋಟಾರ್ ಸರ್ವೀಸ್

## ಹೊಸಪೇಟೆ

ಫೋನ್ ನಂ. ೩೫

ಪ್ರೊ.: ವಿ. ಕೃಷ್ಣಾಚಾರ್ಯ

ಸ್ಥಾನಕ್ಕೆ ಆಗುವದು. ಜುಲೈ ೨೪ ರಿಂದ ಸಪ್ಟೆಂಬರ ೧೦ರ ಅವಧಿಯಲ್ಲಿ ಅನೇಕರಿಗೆ ಮೇಲಿನ ಗ್ರೇಡು ಕೂಡ ಸಿಕ್ಕುವದು. ಪಾಲುಗಾರಿಕೆಗಿಂತ ಸ್ವತಂತ್ರ ವ್ಯಾಪಾರ ಧಂದೆ ಇದ್ದವರಿಗೆ ಈ ವರ್ಷ ಬಹಳ ಲಾಭ, ಉತ್ಕರ್ಷ ಮತ್ತು ಪ್ರತಿಷ್ಠೆಯುದೆನಿಸುವದು. ವಿಶೇಷವಾಗಿ ಡಿಶೆಂಬರ ೩೦ ರಿಂದ ಜನೆವರಿ ೧೯ ಫೆಬ್ರುವರಿ ೫ ರಿಂದ ೨೪, ಎಪ್ರಿಲ ೨೮ರಿಂದ ಮೇ ೧೭, ಜೂನ ೧ ರಿಂದ ೨೧ ಮತ್ತು ಅಗಸ್ಟ ೨೩ ರಿಂದ ಅಕ್ಟೋಬರ ೧೬ ಈ ಅವಧಿಯಲ್ಲಿ ದ್ರವ್ಯ ಲಾಭ ಹೆಚ್ಚು. ಚಮತ್ಕಾರಕ ರೀತಿಯಿಂದ ವೆಚ್ಚ ಹೆಚ್ಚಾಗುವದು. ಆದರೆ ಎಪ್ರಿಲ ೧೧ ರ ನಂತರ ಆವಶ್ಯಕ ಸಂಗ್ರಹವೂ ಹೆಚ್ಚುವದು. ವಾಹನ ಸುಖ ಬಹಳ ಅನುಕೂಲ. ಮಿತ್ರರು ಮಾತ್ರ ಪ್ರೇಮದ ಬದಲು ದ್ವೇಷದರ್ಶಿತ ಕಾರ್ಯಗಳನ್ನು ಮಾಡುವರು. ಅದರಂತೆ ಆಪ್ತರೂ ತಿರಸ್ಕಾರಭಾವದಿಂದ ನೋಡುವರು. ಅನೇಕರು ಅತಿ ದೂರದ ಕದಾಚಿತ್ ಪರದೇಶದ ಪ್ರವಾಸವನ್ನು ಮಾಡುವ ಸಂಭವವಿದೆ. ಅದರಲ್ಲಿಯ ಉದ್ದೇಶವೂ ಸಫಲವಾಗುವದು. ಪರಹಿತದ ಕೃತ್ಯಗಳು ಮಾತ್ರ ಸಹಸಾ ಸಂಭವಿಸುವುದಿಲ್ಲ. ಪ್ರತಿಪಕ್ಷಿಗಳು ಬಹಳಷ್ಟು ಕಂಟಕಗಳನ್ನು ತರುವರು.

ದಾವೆ, ಫಿರ್ಯಾದೆ ಮತ್ತು ಖಾಸಗಿ ಸ್ಪರ್ಧೆಯ ಕೆಲಸಗಳು ಲೌಕಿಕ ದೃಷ್ಟಿಯಿಂದ ಒಳ್ಳೆ ಚೆನ್ನಾಗಿ ಯಶಸ್ವಿಯಾದರೂ ಪ್ರತ್ಯಕ್ಷ ಉಡಿಯಲ್ಲಿ ಬೀಳುವದು ಲಾಭದ ದೃಷ್ಟಿಯಿಂದ ಬಹಳ ಕಡಿಮೆ. ಆದರೆ ಫೆಬ್ರುವರಿ ೧೪ ರಿಂದ ಮಾರ್ಚ ೨೪ ಮತ್ತು ಸಪ್ಟೆಂಬರ ೧೦ ರ ನಂತರ ಯಾವನೊಬ್ಬ ಶತ್ರು ಪೂರ್ಣ ನಾಮಶೇಷನಾಗುವನು.

ಈ ರಾಶಿಯ ಸ್ತ್ರೀಯರು ಸಂಕ್ರಮಣದ ನಂತರ ಹಡೆದರೆ ಸುಲಭವಾಗಿ ಹಡೆಯುವರು ಮತ್ತು ಗಂಡು ಹಡೆದ ಸಂತೋಷವೂ ಎನಿಸುವದು ಮತ್ತು ಅದಕ್ಕು ಮೊದಲು ಹಡೆದರೆ ಮಾತ್ರ ಸ್ವಲ್ಪ ಕಷ್ಟವೆನಿಸುವದು ಮತ್ತು ಹೆಣ್ಣು ಹುಟ್ಟುವದರಿಂದ ಮೋರೆ ಕಹಿಮಾಡಬೇಕಾಗುವದು. ಆದರೆ ಗಂಡು ಹುಟ್ಟಲಿ ಹೆಣ್ಣು ಹುಟ್ಟಲಿ ಅದು ಸಶಕ್ತ ಇರುವದು. ಯಾರ ಪರೀಕ್ಷೆ ಸಂಕ್ರಮಣದ ನಂತರ ಆಗುವದೊ ಆ ವಿದ್ಯಾರ್ಥಿಗಳು ನಿಶ್ಚಯವಾಗಿ ಪಾಸಾಗುವರು. ಮತ್ತು ಎಪ್ರಿಲ ೧೧ ರ ನಂತರ ಯಾರ ಪರೀಕ್ಷೆಯಾಗುವದೊ ಅವರು ವರ್ಗವನ್ನೂ ಪಡೆಯುವರು.

## ಕನ್ಯಾ

ಒಟ್ಟಾರೆ ಈ ರಾಶಿಯವರ ಆರೋಗ್ಯ ಮತ್ತು ಶತ್ರುಗಳನಾಶ ಮತ್ತು ಕೇವಲ ದ್ರವ್ಯ ಲಾಭ ಇವಿಷ್ಟನ್ನು ಹೊರತುಪಡಿಸಿ ಉಳಿದೆಲ್ಲ ವಿಷಯಗಳಲ್ಲಿ ಅಲ್ಪ ಸ್ವಲ್ಪ ದಗದಗಿಯದೇ ಆಗಿರುವದೆಂದು ತಿಳಿದುಕೊಳ್ಳಬೇಕು.

ಈ ರಾಶಿಯ ಜನರ ಆರೋಗ್ಯ ಜನೆವರಿ ೧೩ ರಿಂದ ಎಪ್ರಿಲ ೧೧ ರ ಅವಧಿಯಲ್ಲಿ. ಯಾವದೊಂದು ವಿಕಾರದಿಂದ ಇಲ್ಲವೆ ಅಪಘಾತದಿಂದ ಕೆಡುವ ಅಂಜಿಕೆ. ಆದರಂತೆಯೆ ತಾಯಿತಂದೆಗಳ ವಿಶೇಷತಃ ತಾಯಿಯ ಆರೋಗ್ಯ ಆ ಕಾಲದಲ್ಲಿ ಪುನರ್ಜನ್ಮವತ್ ಕ್ಲೇಶದ್ದೆನಿಸುವದು. ಎಪ್ರಿಲ ೧೧ ರ ನಂತರ ಮಾತ್ರ ಸ್ವತಃಕ್ಕೆ ನೆಗಡಿ ಕೆಮ್ಮಿನ ವಿಕಾರ ಕೂಡ ಆಗುವ ಅಂಜಿಕೆಯಿಲ್ಲ. ಅವಾಂತರ ಆವಶ್ಯಕ ವಿಷಯಗಳಲ್ಲಿ ದೊರೆಯುತಕ್ಕ ದೇಹಸುಖ ಕೆಲವೊಮ್ಮೆ ಅಂದಾಜಿಗಿಂತ ಹೆಚ್ಚು ಉತ್ತಮ. ಆದರೆ ಕೆಲ ಸಲ ಕಲ್ಪನೆಗಿಂತಲೂ ಹೆಚ್ಚು ತೊಂದರೆಯುದೆನಿಸುವದು. ಕಾರಣ ಮಕರಸಂಕ್ರಮಣದಿಂದ ಶನಿ ಮತ್ತು ಗುರು ಇಬ್ಬರು ಚತುರ್ಥ ಸ್ಥಾನದಲ್ಲಿ ಬರುವದರಿಂದ ಮಾನಸಿಕ ಸ್ವಾಸ್ಥ್ಯ ಚೆನ್ನಾಗಿ ಉಳಿಯುವದಿಲ್ಲ. ಅನೇಕರಿಗೆ ನಿಜವಾದ ಕಾರಣಕ್ಕಾಗಿ ಇಲ್ಲವೆ ಅಸತ್ಯ ಕಾರಣಕ್ಕಾಗಿ ಅಥವ ಕಾಲ್ಪನಿಕ ಭೀತಿಗಾಗಿ ಆರೋಗ್ಯ ಕೆಡುವದು. ವಾಸ್ತವಿಕವಾಗಿ ಈರಾಶಿಯವರಿಗೆ ಚತುರ್ಥ ಶನಿಯು ಹಾನಿಕಾರಕನಾಗದೆ ಮನೆಮಾರು ಹೊಲಪಟ್ಟಿ ಮುಂತಾದ ಹೊಸ ಸಂಗ್ರಹ ಮಾಡುವಿರಿ. ಆದರೆ ಅದಕ್ಕಾಗಿಯೆ ಅನೇಕರೊಡನೆ ದ್ವೇಷ ಉಂಟಾಗುವದು. ಇಲ್ಲವೆ ಮಾಡಿದ ವ್ಯವಹಾರ ಸರಳ ಇಲ್ಲವೆ ಸತ್ಯತೆಯನ್ನು ಆಧರಿಸಿ ಮಾಡಲ್ಪಟ್ಟಿರುವದಿಲ್ಲೆಂಬ ಲೋಕಾಪವಾದವೂ ಬರುವದು. ಅದಕ್ಕಾಗಿಯೇ ಮಾನಸಿಕ ಸ್ಥಿತಿ ಕೆಡುತ್ತ ಹೋಗುವದು, ಅದರಂತೆಯೆ ಆಪ್ತಸುಖಕ್ಕೂ ಈ ಗ್ರಹ ವ್ಯತ್ಯಯವನ್ನುಂಟುಮಾಡುವದು.

ಸ್ತ್ರೀ ಸುಖ ಮತ್ತು ಅವಳ ಆರೋಗ್ಯಕ್ಕೆ ಈ ವರ್ಷ ಬಹಳ ಅನುಕೂಲವಾಗಿದ್ದು ಎಪ್ರಿಲದಿಂದಂತೂ ಅದು ಬಹಳ ಉತ್ತಮವೆನಿಸುವದು. ವರ್ಷಾರಂಭದಿಂದ ಮೊದಲನೆ ಎರಡು ಮೂರು ತಿಂಗಳು ಉಭಯತರಲ್ಲಿ ಯಾರೊಬ್ಬರು ಗ್ರಾಮಾಂತರ ಹೋಗುವದರಿಂದ ಕದಾಚಿತ್ ಸಹವಾಸ ಸುಖಕ್ಕೂ ವ್ಯತ್ಯಯ ಬರಬಹುದು. ಆದರೆ ಅನಂತರ ಮಾತ್ರ ಅದು ನಿರಂತರ ಸಿಕ್ಕುತ್ತ ಹೋಗುವದು ಮತ್ತು ಉಭಯತರಲ್ಲಿ ಎಪ್ರಿಲ ವರೆಗೆ ಒಮ್ಮೊಮ್ಮೆ ಮತಭೇದವಾಗುವ ಶಕ್ಯತೆಯಿದ್ದರೂ ಹಾಗೇನು ಆಗದೆ ಒಳ್ಳೆ ಮತೈಕ್ಯವುಂಟಾಗುವದು. ಒಂದು ವೇಳೆ ನಿಮ್ಮ ಮದುವೆ ಇನ್ನೂ ಆಗಿರದಿದ್ದರೆ ಮತ್ತು ಈ ವರ್ಷ ಮಾಡಿಕೊಳ್ಳುವದಿದ್ದರೆ ಈ ವರ್ಷವಿಡಿ ಅದಕ್ಕೆ ಎಲ್ಲ ರೀತಿಯಿಂದ ಅನುಕೂಲವಿದೆ ಅದರಲ್ಲಿಯೂ ಮಕರ ಸಂಕ್ರಮಣದ ವರೆಗೆ ಬಾಸಿಂಗ ಬಲ ಬಹಳ ಹೆಚ್ಚಿಗಿದೆ. ಅನಂತರ ಲಗ್ನ ಕೂಡಿ ಬರಲಿಕ್ಕೆ ಸ್ವಲ್ಪ ತೊಂದರೆಯಾಗುವದು. ಮೊದಲು ನಕಾರವೆಂದು ಹೇಳಿದ ಸ್ಥಳದಲ್ಲಿಯೇ ಮತ್ತೆ ಲಗ್ನ ಸಂಭವಿಸುವ ಯೋಗವಿದೆ. ವಧೂ ಇಲ್ಲವೆ ವರ ರೂಪಗುಣ ಸಂಪನ್ನ ಇರುವರು. ಆದರೆ ಅತ್ತೆ ಮಾತ್ರ ಜೀವಂತ ಇರಲಿಕ್ಕಿಲ್ಲ.

ನಿಮ್ಮ ಮಕ್ಕಳ ಮದುವೆ ಮಾಡುವದಿದ್ದರೆ ಅವರಿಗಾದರೂ ಸಂಕ್ರಮಣದ ವರೆಗೆ ಬಾಶಿಂಗ ಬಲವೆಷ್ಟು ಚೆನ್ನಾಗಿ ಇರುವದೊ ಅಷ್ಟು ಮುಂದೆ ಇರುವದಿಲ್ಲ. ಗೊತ್ತು ಪಡಿಸಿದ ಲಗ್ನವೂ ಮುರುಗಡೆಯಾದ ಪ್ರತ್ಯಕ್ಷ ಅನುಭವವು ಅನೇಕರಿಗೆ ಬರುವದು. ಅಳಿಯ ಇಲ್ಲವೆ ಸೊಸೆ ಸ್ವತಃ ನಿಮ್ಮ ಮನಸ್ಸಿಗೆ ಬರಲಿಕ್ಕಿಲ್ಲ. ಮಕ್ಕಳ ಉನ್ನತಿಗೆ ಈ ವರ್ಷ ಅಷ್ಟೊಂದು ಪರಿಪೋಷಕವಿರುವದಿಲ್ಲ. ತದ್ವಿರುದ್ಧ ಒಬ್ಬರ ಪುಚ್ಛ ಪ್ರಗತಿಮಾತ್ರ ಆಗುವ ಅಂಜಿಕೆ ಇದೆ. ಜನೇವರಿ ೫ ರಿಂದ ಫೆಬ್ರುವರಿ ೧೪ ರ ವರೆಗೆ ಮತ್ತು ಸಪ್ಟೆಂಬರ ೧೦ ರ ನಂತರದ ಕಾಲವು ಅವರಲ್ಲಿ ಕೆಲವರಿಗೆ ಬಹಳ ಅನುಕೂಲ. ನಿಮ್ಮ ಪ್ರೇಮ ಅವರ ಮೇಲೆ ಹೆಚ್ಚು ಉಳಿದರೆ ಅವರದು ಮಾತ್ರ ನಿಮ್ಮಮೇಲೆ ಸ್ವಲ್ಪೂ ಇರುವದಿಲ್ಲ.

ಧಂದೆ ಕೂಲಿಯವರಿಗೆ ಈ ವರ್ಷ ಲಾಭದ ದೃಷ್ಟಿಯಿಂದ ಉತ್ತಮವೆನಿಸಿದರೂ ಕೆಲಸದ ದೃಷ್ಟಿಯಿಂದ ಅತ್ಯಂತ ದಗದಗಿಯದೆನಿಸುವದು. ಆವಶ್ಯಕ ಕೆಲಸಗಳನ್ನು ಬದಿಗೆ ಸರಿಸಿ ಬೇರೆ ಯಾವದೇ ಕೆಲಸ ಮೊದಲು ಮಾಡಬೇಕಾಗಿ ಬರುವದು. ಧಂದೆಯವರ ಮೇಲೆ ಆಶ್ರಯದಾತರ ವಿಶ್ವಾಸ ಮೊದಲಿನಷ್ಟು ಉಳಿಯುವದಿಲ್ಲ. ಅನೇಕರಿಗೆ ಮೊದಲಿನ ಧಂದೆಯನ್ನು ಇಲ್ಲವೆ ಸ್ಥಳವನ್ನು ಬದಲಿಸಬೇಕಾಗಿ ಬರುವದು. ಕೈಕೆಳಗಿನ ಜನರು ಸರಳತನದ ಬಗ್ಗೆ ಜನತೆಯಲ್ಲಿ ತಪ್ಪು ತಿಳಿವಳಿಕೆಯುಂಟು ಮಾಡುವರು. ವಿಶ್ವಾಸವನ್ನು ಕಾಯ್ದುಕೊಂಡವರಲ್ಲಿ ಬಹು ಜನರು ವಿಯೋಗ ಹೊಂದುವರು ಇಲ್ಲವೆ ಅವರ ವಿರಹವಾಗುವದು. ನೋಕರರಿಗೆ ಮೇಲಿನವರಿಂದ ಮೇಲಿಂದಮೇಲೆ ಕಟುವಾಕ್ಯಗಳು ಕೇಳಬರುವವು, ಅವರ ಭರ್ತ್ಸನೆಯನ್ನು ಸಹಿಸಬೇಕಾಗುವದು. ಯಾವದೇ ಸ್ಥಳಕ್ಕೆ ಬದಲಿ ಆಗುವದರಿಂದ ಬಹಳ ಕಷ್ಟವನ್ನನುಭವಿಸಬೇಕಾಗುವದು. ಅನನುಕೂಲತೆಯೂ ಎನಿಸುವದು. ಸಂಬಳದಲ್ಲಿ ಕಡಿತದ ಅಂಜಿಕೆಯಿಲ್ಲ. ಆದರೆ ವೆಚ್ಚ ಮಾತ್ರ ನಿರರ್ಥಕ ಹೆಚ್ಚುವದು. ಯಾರ ಕಚೇರಿಯಲ್ಲಿ ಸ್ತ್ರೀ ನೋಕರರಿರುತ್ತಾರೊ ಅವರು ಅವರೊಡನೆ ಸಹಜವಾಗಿಯಾದರೂ ವಿನೋದದ ಮಾತುಗಳನ್ನಾಡಬಾರದು ಏಕೆಂದರೆ ನಿರರ್ಥಕವಾಗಿ ಲೋಕಾಪವಾದಕ್ಕೆ ಗುರಿಯಾಗಬೇಕಾಗುವದು. ಬಡತಿಯ ಸಲು

ನಾಗಿಯೂ ವಿನಂತಿ ಇಲ್ಲವೆ ವಶೀಲಿ ಹಚ್ಚುವ ಪ್ರಯತ್ನದಲ್ಲಿ ಎಂದೂ ಬೀಳಬೇಡಿ. ಯದೃಚೆಯಿಂದ ಸಂಭವಿಸಿದರೆ ಸಂಭವಿಸಲಿ ಎಂದು ತಿಳಿದು ಸ್ವಸ್ಥಕುಳ್ಳಿರಿ. ಈ ಎಲ್ಲ ಮಾತುಗಳಿಗೆ ಮಕರಸಂಕ್ರಮಣದ ನಂತರ ಆಸ್ಥೆಯಿಂದ ಹೆಚ್ಚು ಜಪ್ಪಿಸಬೇಕು. ಡಿಸೆಂಬರ ೩೦ ರ ವರೆಗೆ ಮತ್ತು ಜನೆವರಿ ೧೯ ರಿಂದ ಫೆಬ್ರುವರಿ ೫, ಎಪ್ರಿಲ ೯ ರಿಂದ ೨೮, ಅಗಸ್ಟ ೩ ರಿಂದ ೨೩, ಮತ್ತು ಅಕ್ಟೋಬರ ೧೬ ರ ನಂತರ ಅವಧಿಯು ಬಹಳ ಉತ್ತಮವಾಗಿ ಹೋಗುವದು. ದೂರ ಪ್ರವಾಸಯೋಗ ಕಡಿಮೆ. ಹಾಗೆ ದೂರ ಪ್ರವಾಸ ಕೈಕೊಳ್ಳದಿರುವದು ಇಷ್ಟವೇ. ಅತ್ಯಂತ ನಿರ್ಜನ ಅತಿ ಎತ್ತರ ಇಲ್ಲವೆ ಅತಿ ಕಡಮೆ ಎತ್ತರದ ಸ್ಥಳಗಳನ್ನು ತ್ಯಾಗ ಮಾಡಬೇಕು. ಏಕೆಂದರೆ ಅಪಘಾತದ ಅಂಜಿಕೆ ಇದೆ. ಆಪ್ತರಲ್ಲಿ ಕೂಡುವದಿಲ್ಲ. ಆದರೆ ಮಿತ್ರ ಸುಖ ಉತ್ತಮ ಮತ್ತು ಸಂಕ್ರಮಣದಿಂದ ಯಾವದೊಂದು ಮಹತ್ವದ ಕೆಲಸದಲ್ಲಿ ಬಹಳ ಸಹಾಯವಾಗುವದು. ನವಂಬರ ೨೪ರ ವರೆಗೆ ಇಲ್ಲವೆ ಫೆಬ್ರುವರಿ ೧೪ ರಿಂದ ಮಾರ್ಚ ೨೪, ಜೂನ ೧೨ ರಿಂದ ಜುಲೈ ೨೪ ರ ಅವಧಿಯಲ್ಲಿ ಅಲ್ಪ ಸ್ವಲ್ಪ ಗುಪ್ತ ಇಲ್ಲವೆ ಅಕಸ್ಮಾತ್ ಧನ ಲಾಭವಾಗುವ ಸಂಭವವಿದೆ. ವಾಹನ ಸುಖ ಚೆನ್ನಾಗಿರುವದು. ಆದರೂ ಮನೆಯಲ್ಲಿ ನೋಕರಚಾಕರರ ಅಂಜಿಕೆ ಬಹಳ.

ದಾವೆ ಫಿರ್ಯಾದಿ ಇಲ್ಲವೆ ಖಾಸಗಿ ಸ್ಪರ್ಧೆಗಳಲ್ಲಿ ಮಾತ್ರ ಈ ವರ್ಷ ಒಳ್ಳೆ ಯಶಸ್ಸು. ಎಪ್ರಿಲ ೧೧ ರ ನಂತರವಂತೂ ಶತ್ರುಗಳು ಇಲ್ಲವೆ ಪ್ರತಿಸ್ಪರ್ಧಿಗಳು ಒಳ್ಳೆ ಫಜೀತಿಹೊಂದಿ ನೀವು ಪ್ರಚಂಡ ವಿಜಯವನ್ನು ಸಂಪಾದಿಸುವಿರಿ. ಅವರಲ್ಲಿ ಕೆಲವರು ಪಶ್ಚಾತ್ತಾಪಹೊಂದಿ ನಿಮ್ಮ ಪಕ್ಷವನ್ನು ಕೂಡಿಕೊಳ್ಳುವರು.

ಈ ರಾಶಿಯ ಸ್ತ್ರೀಯರು ಈ ಸಲ ಹಡೆಯುವವರಿದ್ದರೆ ನವಂಬರ ೨೪ ರ ಒಳಗೆ ಇಲ್ಲವೆ ಫೆಬ್ರುವರಿ ೧೪ ರಿಂದ ಮಾರ್ಚ ೨೪ ಮತ್ತು ಸಪ್ಟಂಬರ ೧೦ ರ ನಂತರದ ಅವಧಿಯಲ್ಲಿ ಹಡೆದರೆ ಗಂಡು ಹುಟ್ಟುವ ಯೋಗವಿದ್ದರೂ ಪ್ರಸೂತಿ ಕಷ್ಟವೂ ಬಹಳಷ್ಟು ಎನಿಸುವದು. ಉಳಿದ ವೇಳೆಯಲ್ಲಿ ಹಡೆದರೆ ಸುಲಭ ಪ್ರಸೂತಿಯಾಗುವದು. ಸಂಕ್ರಾತಿ ಪೂರ್ವದಲ್ಲಿ ಹಡೆದರೆ ಗಂಡು ಮತ್ತು ಅನಂತರ ಕನ್ಯಾ ಹುಟ್ಟಿದ ಅನುಭವ ಬಹಳ ಕಡೆಬರುವದು.

ಯಾವ ವಿದ್ಯಾರ್ಥಿಗಳ ಪರೀಕ್ಷೆ ಜನೆವರಿ ೧೩ಕ್ಕಿಂತ ಮೊದಲು ಇಲ್ಲವೆ ಜನೆವರಿ ೧೯ರಿಂದ ಫೆಬ್ರುವರಿ ೫, ಫೆಬ್ರುವರಿ ೨೪ ರಿಂದ ಮಾರ್ಚ ೭, ಎಪ್ರಿಲ ೯ ರಿಂದ ೨೮, ಮೇ ೧೭ ರಿಂದ ೩೦, ಜೂನ ೨೧ ರಿಂದ ಜುಲೈ ೯, ಅಗಸ್ಟ ೩ ರಿಂದ ೨೩ ಮತ್ತು ಸಪ್ಟಂಬರ ೯ ರಿಂದ ೨೬ರಲ್ಲಿ ಪರೀಕ್ಷೆ ಕಟ್ಟಿದರೆ ನಿಶ್ಚಯವಾಗಿ ಉತ್ತೀರ್ಣರಾಗುವರು.

## ತುಲಾ

ಈ ರಾಶಿಯವರಿಗೆ ಕೆಲ ಕಿರಕಳ ವಿಷಯಗಳನ್ನು ಬಿಟ್ಟರೆ ಈ ವರ್ಷ ತುಂಬ ಲಾಭ ಮತ್ತು ಸಂಸ್ಮರಣೀಯ ಯಶಸ್ಸು ಕೊಡುವಂತಹದಾಗಿದೆಂಬುದು ನಿಮ್ಮ ಲಕ್ಷ್ಯಕ್ಕೆ ಬಾರದಿರದು.

ಈ ವರ್ಷ ಈ ರಾಶಿಯವರ ಆರೋಗ್ಯ ಶಾರೀರಕ ದೃಷ್ಟಿಯಿಂದ ಜುಲೈ ೨೪ ರಿಂದ ಸಪ್ಟಂಬರ ೧೦ರ ವರೆಗೆ ಸ್ವಲ್ಪ ಕೆಡುವ ಸಂಭವವಿದೆ, ಅರ್ಥಾತ್ ಉಳಿದ ದಿನಗಳಲ್ಲಿ ಅದು ಒಳ್ಳೆ ಅನುಕೂಲ ಉಳಿಯುವದು. ಆದರೆ ಎಪ್ರಿಲ ೧೧ರಿಂದ ಮಾನಸಿಕ ಸ್ವಾಸ್ಥ್ಯ ಕಡಮೆಯಾಗುವಂಥ ಅಂಜಿಕೆ ಇದೆ. ಉಳಿದ ವಿಷಯಗಳಲ್ಲಿ ದೇಹ ಸೌಖ್ಯ ಕೆಲವೊಮ್ಮೆ ಅತಿ ಉತ್ತಮ. ಮತ್ತೆ ಕೆಲಸದಲ್ಲಿ ಬಹಳ ತ್ರಾಸಾಗುವದು. ಮನೆಯ ಜನರು ಸ್ವಾರ್ಥಕ್ಕಾಗಿ ಏನು ಬೇಕಾದ್ದನ್ನೂ ಮಾಡಲು ಹೇಸಲಾರರು. ಆದರೆ

ಅದು ಸಾಧಿಸಿದನಂತರ ಯಾವನೋ ಅಪರಿಚಿತರಂತೆ ವರ್ತಿಸುವರು. ಆದರೆ ಕೌಟುಂಬಿಕ ಉತ್ಕರ್ಷದ ಒಂದೆರಡು ಸಂಗತಿಗಳು ಫೆಬ್ರುಆರಿ ೧೪ರಿಂದ ಮಾರ್ಚ ೨೪ ಮತ್ತು ಜೂನ ೧೨ರಿಂದ ಜುಲೈ ೨೪ ಈ ಅವಧಿಯಲ್ಲಿ ನಿಶ್ಚಯವಾಗಿ ಸಾಧಿಸಿದ್ದು ಪ್ರತ್ಯಯಕ್ಕೆ ಬರುವದು.

ಸ್ತ್ರೀ ಸೌಖ್ಯಕ್ಕೂ ಈ ವರ್ಷ ಅನುಕೂಲ. ಅವಳ ಆರೋಗ್ಯ ಕೇವಲ ಜನೇವರಿ ೫ ರಿಂದ ಫೆಬ್ರುಅರಿ ೧೪ ಮತ್ತು ಸಪ್ಟಂಬರ ೧೦ರ ನಂತರ ತಲೆನೋವು, ಒಸಡಿ ಬೇನೆ ಇಲ್ಲವೆ ಕಣ್ಣು ಬೇನೆಯಿಂದ ಸ್ವಲ್ಪ ಕಿರಿಕಿರಿಯುದೆನಿಸುವದು ಅಷ್ಟೇ. ಈ ವರ್ಷ ಅವಳ ಧೈರ್ಯ ಮತ್ತು ಮನೋತ್ಸಾಹ ಅತ್ಯಂತ ಸ್ಪೃಹಣೀಯವಾಗಿ ಉಳಿಯುವದು. ಅತ್ಯಂತ ಮಹತ್ವದ ಪ್ರಸಂಗದಲ್ಲಿ ಇದು ಎಲ್ಲರ ನಿದರ್ಶನಕ್ಕೆ ಬರುವದು. ಆದರೆ ಅವಳ ಸ್ವಭಾವ ಮೊದಲಿಗಿಂತ ಸ್ವಲ್ಪ ಹೆಚ್ಚುಕಡಿಮೆ ಕೋಪದ್ದಾಗುವದು. ಪ್ರಾರಂಭದ ಮೊದಲನೇ ತಿಂಗಳು ಕದಾಚಿತ್ ಗ್ರಾಮಾಂತರದಿಂದ ಸಹವಾಸಕ್ಕೆ ವ್ಯತ್ಯಯ ಬರಬಹುದು. ಮತ್ತು ಎಪ್ರಿಲ್ ೩ ರಿಂದ ೨೬ ರ ಅವಧಿಯಲ್ಲಿ ಪರಸ್ಪರರಲ್ಲಿ ಆಗುವ ತಪ್ಪು ತಿಳಿವಳಿಕೆಯಿಂದ ಸಿಟ್ಟು, ಮಾತು ಬಿಡುವಿಕೆ, ಪ್ರೇಮವಿರಸ ಮೊದಲಾದ ಪ್ರಸಂಗಗಳು ಬರುವವು. ಉಳಿದ ವೇಳೆಯಲ್ಲಿ ಪರಸ್ಪರರಲ್ಲಿಯ ಪ್ರೇಮ ಮತ್ತು ಎಲ್ಲ ಮಾತಿನಲ್ಲಿ ಏಕವಾಕ್ಯತೆ, ದೃಷ್ಟಿ ತಾಕುವಷ್ಟು ಚೆನ್ನಾಗಿ ಉಳಿಯುವವು. ಆದರೆ ನಿಮ್ಮ ಮದುವೆ ಇನ್ನೂ ಆಗಿರದಿದರೆ ಮತ್ತು ಈ ವರ್ಷ ಮಾಡಿಕೊಳ್ಳುವ ಇಚ್ಛೆಯಿದ್ದರೆ ಅದು ಯಾವಾಗ ಬೇಕಾದಾಗ ಕೂಡಿಬರುವಷ್ಟು ಒಳ್ಳೆ ಬಾಸಿಂಗಬಲವಿದೆ. ಆದರೂ ಜನೇವರಿ ೧೩ ರ ವರೆಗೆ ಸ್ವಲ್ಪ ಪ್ರಯಾಸವೆನಿಸಬಹುದು. ಆದರೆ ಮುಂದೆ ಮಾತ್ರ ಅಲ್ಪಾಯಾಸದಿಂದ ಮದುವೆ ಕೂಡಿಬರುವದು. ವಧು ಮತ್ತು ವರ ನೋಡಲಿಕ್ಕೆ ಅಷ್ಟೊಂದು ಚೆನ್ನಾಗಿ ಇರದಿದ್ದರೂ ಅವರು ಮತ್ತು ಅವರ ಮನೆಯವರು ಸ್ವಭಾವದಿಂದ ಬಹಳಷ್ಟು ಒಳ್ಳೇಯವರು ಮತ್ತು ಏಕವಚನಿ ಇರುವರು.

ಅದರಂತೆ ನಿಮ್ಮ ಮಕ್ಕಳಲ್ಲಿ ಯಾರದಾದರೂ ವಿವಾಹ ಈ ವರ್ಷ ಮಾಡುವದಿದ್ದರೆ ಅದಕ್ಕಾಗಿಯೂ ಜನೆವರಿ ೧೩ರ ನಂತರ ಒಳ್ಳೇ ಬಾಶಿಂಗಬಲವಿದೆ. ಆದರೆ ಮನಸ್ಸಿನಲ್ಲಿ ಮಾಡಿದ ವರನಿಗಾಗಿ ಹೊರಗೆ ಹೋಗಿ ಪ್ರಯತ್ನ ಮಾಡಬೇಕಾಗುವದು. ಆದರೆ ಎರಡನೇ ಸ್ಥಳವನ್ನೆ ಗೊತ್ತುಮಾಡಿಕೊಂಡು ಮರಳಿದ ಅನುಭವ ಬರುವದು. ಸೊಸೆ ಇಲ್ಲವೆ ಅಳಿಯ ಕೆಲ ಮಟ್ಟಿಗೆ ಕಪ್ಪು ಇದ್ದರೂ ಒಳ್ಳೆ ಆಕರ್ಷಕವಾಗಿ ಇರುವರು. ಸ್ವಭಾವದಿಂದ ಸ್ವಲ್ಪ ಸ್ವಾರ್ಥಿಯಾಗಿದ್ದರೂ ಎಲ್ಲರಿಗೂ ಪ್ರಿಯವಾಗುವಂತೆ ವರ್ತಿಸುವರು. ಅದರಂತೆ ಕೆಲ ಮಕ್ಕಳಾದರೂ ಲೌಕಿಕ ಬೆಳೆಯುವಂಥ ಒಂದಾದರೂ ಕಾರ್ಯವನ್ನು ಮಾಡಿಯೇತೀರುವರು. ಆದರೆ ನಿಮ್ಮೊಡನೆ ಅವರು ಸ್ವಲ್ಪ ದೂರವಿದ್ದರೂ ತಾಯಿಯೊಡನೆ ಅತ್ಯಂತ ಭಕ್ತಿಭಾವದಿಂದ ವರ್ತಿಸುವರು. ಅದರಂತೆ ಮಕ್ಕಳ ವಯಸ್ಸು ಮತ್ತು ದೇಹಭೇದಾನುರೂಪವಾಗಿ ಉತ್ಕರ್ಷವಾಗುವ ಯೋಗವಿದೆ. ವಿಶೇಷವಾಗಿ ಡಿಸೆಂಬರ ೧ ರಿಂದ ೨೬, ಜನೆವರಿ ೨೧ ರಿಂದ ಫೆಬ್ರುಅರಿ ೧೫, ಮಾರ್ಚ ೯ ರಿಂದ ಎಪ್ರಿಲ ೩, ಜೂನ ೧೫ ರಿಂದ ಜುಲೈ ೧೦ ಮತ್ತು ಆಗಷ್ಟ ೩ ರಿಂದ ೨೬ ಈ ಮಧ್ಯದ ಅವಧಿಯಲ್ಲಿ ಮಕ್ಕಳ ಉತ್ಕರ್ಷವಾಗುವ ಯೋಗವಿದೆ. ಅವರಲ್ಲಿ ಒಬ್ಬರಾದರೂ ಭವಿಷ್ಯದಲ್ಲಿ ಮಹಾಭಾಗ್ಯವಂತನಾಗುವಂತೆ ಮುನ್ನಡೆಯುತ್ತಾನೆ. ಹೀಗೆಯೂ ಯೋಗವಿದೆ. ಆದರೆ ಎಪ್ರಿಲ ೧೧ ರ ನಂತರ ಒಬ್ಬನ ಆರೋಗ್ಯ ಸರಿ ಉಳಿಯುವದಿಲ್ಲ.

ಧಂದೆ, ಕೂಲಿಯವರಿಗೆ ಈ ವರ್ಷ ಬಹಳ ಅನುಕೂಲವಿರುವದು. ಸಂಕ್ರಮಣದ ವರೆಗೆ ಧಂದೆ ಮಾಡುವವರ ಪತ್ತು ಮತ್ತು ಪ್ರತಿಷ್ಠೆ ಮೇಲಿಂದ ಮೇಲೆ ಬೆಳೆಯುಹತ್ತಿ ಕಲ್ಪನೆಯಲ್ಲಿಲ್ಲದೆ ಇದ್ದ ದೊಡ್ಡ ದೊಡ್ಡವರ ಭೆಟ್ಟಿ ಸಹವಾಸ ಆಶ್ರಯದ ಯೋಗ ಅಕಸ್ಮಾತ್ತಾಗಿ ಲಭಿಸುವದು. ಮತ್ತು ಅನಂತರ ಭಾಗ್ಯ ಮತ್ತು ಲಾಭ ಜೋರಿನಿಂದ ಬೆಳೆಯುಹತ್ತುವದು. ಎಪ್ರಿಲ್ ೧೧ ರ ನಂತರ ಅನೇಕರಿಗೆ ಬಹಳಷ್ಟು ಹಣ ಸಿಕ್ಕುವದು. ಯಾವನ ಗ್ರಹವು ಮೂಲತಃ ಉತ್ಕರ್ಷದರ್ಶಕವಾಗಿರುವದೋ ಅವನ ಜನನಕಾಲದ ಪರಿಸ್ಥಿತಿ ಬಡತನದ್ದಿದ್ದರೆ ಅಂಥ ಕೆಲ ದೀನದರಿದ್ರ ಸುದಾಮರೂ ಮೇಲೆ ಹೇಳಿದ ದಿನದ ನಂತರ ಯಕ್ಷಿಣಿಯ ಜಾದೂ ಮಾಡಿದಂತೆ ಅಲ್ಪಾವಧಿಯಲ್ಲಿಯೇ ಕುಬೇರರಾಗುವರು. ಜನರಿಗೆ ಸಂಶಯಬರುವಂತೆ ಮಾಡಿದ ಸಾಹಸದಲ್ಲೂ ಕೂಡ ಅಕಸ್ಮಾತ್ತಾಗಿ ಯಶಸ್ವಿಯಾಗುವರು. ಅದರಂತೆ ನೋಕರರ ದಿನಗಳು ಅಷ್ಟು ಆರಾಮದಲ್ಲಿ ಮತ್ತು ದಿನಬಿನಕ್ಕೂ ಕಿಸೆ ತುಂಬುವಂತೆ ಬರುವವು. ವರಿಷ್ಠರ ಮರ್ಜಿ ಅಂದಾಜಿಗಿಂತ ಹೆಚ್ಚಿಗೆ ಲಭಿಸುವದು. ಅನೇಕರಿಗೆ ಜನೆವರಿ ೧೩ ರಿಂದ ಎಪ್ರಿಲ ೧೧ರ ವರೆಗಿನ ಅವಧಿಯಲ್ಲಿ ಮೇಲಿನ ಗ್ರೇಡು ದೊರೆಯುವದು. ಬದಲಿಯಾದರೆ ಪ್ರಾಪಂಚಿಕ ದೃಷ್ಟಿಯಿಂದ ಅನನುಕೂಲತೆಯಿದ್ದ ಸ್ಥಳಕ್ಕೆ ಆಗುವದು. ಮೇ ೩೦ ರಿಂದ ಸಪ್ಟಂಬರ ೯ ರೊಳಗಿನ ಕಾಲ ಅಂದಾಜಿಗಿಂತ ಹೆಚ್ಚು ಲಾಭದ್ದೆನಿಸುವದು. ಆದರೆ ಆಗಷ್ಟ ೩ ರಿಂದ ೨೬ರ ವರೆಗಿನ ಅವಧಿಯಲ್ಲಿ ಅನೇಕರಿಗೆ ಗುಪ್ತ ಇಲ್ಲವೆ ಅಕಸ್ಮಾತ್ ಲಾಭದೊಡ್ಡ ಪ್ರಮಾಣದಲ್ಲಿ ದೊರೆಯುವದು. ಸಮಾಜದಲ್ಲಿ ವರ್ಚಸ್ಸು ಹೆಚ್ಚುವದು. ನೀವಾದರೂ ಪರಹಿತದ ಕೆಲಸ ಮಾಡುವಿರಿ. ಆದರೆ ಮಂಗಲ ಕಾರ್ಯಗಳಲ್ಲಿ ಪ್ರಮಾಣ ಮೀರಿ ವೆಚ್ಚವಾಗುವದು. ಆದರೂ ಸ್ಥಾವರ ಜಂಗಮ ಹೊಸ ಸಂಗ್ರಹ ಖಾತ್ರಿಯಿಂದ ಆಗುವದು. ಕೈಕೆಳಗಿನ ಜನರು ಮತ್ತು ಮಾತುಲವರ್ಗದಲ್ಲಿ ಕೆಲ ಜನರು ಒಳ್ಳೇ ತ್ವೇಷದಿಂದ ವರ್ತಿಸುವರು. ಆದರೆ ಒಟ್ಟಾರೆ ಇತರ ಆಪ್ತರಿಂದ ಬಹಳ ಸುಖ ಲಭಿಸುವದು. ಮಕ್ಕಳಂತೆ ಬಂಧುಮಿತ್ರರ ಉತ್ಕರ್ಷವೂ ಅಲ್ಪ ಸ್ವಲ್ಪ ಆಗುವದು. ಮತ್ತು ನಿಮ್ಮೊಡನೆ ಅವರು ಬಹಳ ಸರಳವಾಗಿ ವರ್ತಿಸುವರು. ದೂರದ ಪ್ರವಾಸ ಅನೇಕ ಸಲ ಲಭಿಸುವದು. ಮತ್ತು ಅದರ ಉದ್ದೇಶ ಸಾಧಿಸುವದು. ಲೇಖನ ಕೆಲ್ಸಗಳಿಗಿಂತ ಪ್ರತ್ಯಕ್ಷ ಭೆಟ್ಟಿ ಹೆಚ್ಚು ಅನುಕೂಲವಾಗುವದು. ಒಂದಾದರೂ ಯಾತ್ರೆ ಘಟಿಸುವದು ಇಲ್ಲವೆ ಮನೆಯಲ್ಲಿಯೇ ಆರಾಧ್ಯ ದೇವತೆಯ ಉತ್ಸವವನ್ನು ಚೆನ್ನಾಗಿ ಮಾಡುವಿರಿ.

ದಾವೆ ಫಿರ್ಯಾದಿ ಮತ್ತು ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ಎಪ್ರಿಲ್ ೧೧ ರ ವರೆಗೆ ಸ್ವತಃ ನಿಮಗೆ ಪ್ರಚಂಡ ವಿಜಯ ದೊರೆಯುವದು. ಆದರೆ ಅನಂತರ ಶಕ್ಕಡಿ ತಿರುವಿ ಮುರುವಿ ಆಗಿ ಶತ್ರುಗಳಿಗೆ ಜಯವಾಗುವದು.

ಈ ರಾಶಿಯ ಸ್ತ್ರೀಯರು ಹಡೆಯುವವರಿದ್ದರೆ ಎಪ್ರಿಲ ೧೧ ರೊಳಗೆ ಸುಲಭವಾಗಿ ಪ್ರಸೂತರಾಗುವರು. ಜನೆವರಿ ೧೩ ರಿಂದ ಎಪ್ರಿಲ್ ೧೧ ರೊಳಗೆ ಹಡೆದವರಿಗೆ ಗಂಡುಮಗುವೇ ಹುಟ್ಟುವದು. ಎಪ್ರಿಲ್ ೧೧ ಕ್ಕಿಂತ ಮೊದಲು ಪರೀಕ್ಷೆ ಕಟ್ಟಿದವರು ಪಾಸಾಗುವರು. ಕೆಲ ಜನರಿಗೆ ವರ್ಗವೂ ದೊರೆಯುವದು.

## ವೃಶ್ಚಿಕ

ಒಟ್ಟಿಗೆ ಈ ರಾಶಿಯವರಿಗೆ ಈ ವರ್ಷ ಕಷ್ಟಕ್ಕಿಂತ ಸುಖವೇ ಹೆಚ್ಚಿಗೆ ಎನಿಸುವದು.

ಈ ರಾಶಿಯ ಜನರ ಆರೋಗ್ಯ ಈ ವರ್ಷ ಅನೇಕ ದಿನ ಉತ್ತಮ ಉಳಿಯುವ ಯೋಗವಿದೆ. ಆದರೆ ಪ್ರಥಮತಃ ನವಂಬರ ೨೪ ರ ವರೆಗೆ ಮತ್ತು ಮುಂದೆ ಸಪ್ಟಂಬರ ೧೦ ರ ನಂತರ ಏಕೋ ಏನೊ ಸ್ವಲ್ಪ ಕೆಡುವ ಸಂಭವವಿದೆ. ಗ್ಯಾಸಿನ ಉಪದ್ರವವಿದ್ದವರಿಗೆ ಆ ವಿಕಾರದಿಂದ ಮತ್ತು ಸಾಯಕಲ್‌ಸ್ವಾರ, ಮೋಟರ ಇಲ್ಲವೆ ರೇಲ್ವೆ ಡ್ರಾಯವರ ಅಥವಾ ವೈಮಾನಿಕ ಮೊದಲಾದವರಿಗೆ ಅಪಘಾತ ಸಂಭವಿಸಿ ಆರೋಗ್ಯ ಕೆಡುವ ಅಂಜಿಕೆ ಹೆಚ್ಚಿಗೆ ಇದೆ. ಈ ವರ್ಷ ಸಂಕ್ರಮಣದ ವರೆಗೆ ಪ್ರಥಮ ಮತ್ತು ನಂತರ ದ್ವಿತೀಯ ಗೋಚರ ಗುರು ಇರುವದರಿಂದ ಎಲ್ಲ ವಿಷಯಗಳಲ್ಲಿ ಮಾನಸಿಕ ಸಮಾಧಾನ ಮತ್ತು ದೇಹಸೌಖ್ಯ

ಉತ್ತಮವೆ ಉಳಿಯುವದು. ಕ್ವಚಿತ್ತಾಗಿ ಉತ್ಪನ್ನವಾಗುವ ಸಂಕಟ ಮತ್ತು ಶಾರೀರಕ ಕ್ಲೇಶವು ವ್ಯಾವಹಾರಿಕ ಪ್ರಯತ್ನ ಇಲ್ಲವೆ ಔಷಧೋಪಚಾರಕ್ಕಿಂತ ಜಪಜಾಪ್ಯಾದಿಗಳಿಂದಲೆ ಹೆಚ್ಚು ಉಪಶಮನ ಹೊಂದಿದ್ದು ಪ್ರತ್ಯಯಕ್ಕೆ ಬರುವದು.

ಪತ್ನಿಯು ಆರೋಗ್ಯವೂ ಅನುಕೂಲ ಉಳಿಯುವದು. ಆದರೆ ಜನೆವರಿ ೫ ರಿಂದ ಫೆಬ್ರುವರಿ ೧೪ ರ ಅವಧಿಯಲ್ಲಿ ಸ್ವಲ್ಪ ಕಿರಿ ಕಿರಿಯೆನಿಸುವದು. ಎಲ್ಲ ವಿಷಯುಗಳಿಂದ ಪ್ರಾಪಂಚಿಕ ಸುಖ ಎಪ್ರಿಲ ೧೧ ರ ವರೆಗೆ ಬಹಳ ಉತ್ತಮ ದೊರೆಯುವದು. ಮನೆಯಲ್ಲಿ ಎಲ್ಲರಲ್ಲಿ ಐಕಮತ್ಯವುಳಿದು ಎಲ್ಲರೂ ಪರಸ್ಪರ ಸೌಖ್ಯಕ್ಕಾಗಿ ಪ್ರಯತ್ನಿಸುವರು. ಆದರೆ ಮೇಲೆ ಹೇಳಿದ ತಾರೀಕಿನಿಂದ ಮಾತ್ರ ಮನೆಯಲ್ಲಿ ಕಲಿಪ್ರವೇಶವಾದಂತಾಗುವದು. ಮನೆಯಲ್ಲಿ ಮುದುಕರು ಯಾರಾದರೂ ಇದ್ದರೆ ಅವರಲ್ಲಿ ಅದು ಹೆಚ್ಚಿಗೆ ಪ್ರವೇಶವಾದಂತಾಗುವದು—ತಾಯಿ ಇಲ್ಲವೆ ಅಜ್ಜಿಯಂಥ ಹಿರಿಯರಿಗೆ ಅಜೀರ್ಣದಿಂದ ಇಲ್ಲವೆ ಅತಿ ಕಡಕ ಉಪವಾಸ ವ್ರತ ಮಾಡುವದರಿಂದ ಬಹಳ ಕಾಯಿಲೆಯಾಗುವ ಸಂಭವವಿದೆ. ಇಷ್ಟೊಂದನ್ನು ಬಿಟ್ಟರೆ ಉಳಿದ ಎಲ್ಲ ವಿಷಯುಗಳಲ್ಲಿ ಅನುಕೂಲ ಮತ್ತು ಮನೆತನಕ್ಕೆ ಒಗ್ಗುವಂಥ ವಾತಾವರಣವೇ ಉಳಿಯುವದು ಆದರೆ ಇನ್ನೂ ನಿಮ್ಮ ವಿವಾಹವಾಗುವದಿದ್ದರೆ ಸಂಕ್ರಾಂತಿಯು ವರೆಗೆ ಒಳ್ಳೆ ಬಾಸಿಂಗಬಲವಿದೆ. ಆದರೆ ಬಹಳ ದೂರಿನ ಮತ್ತು ತೀರ ಅಪರಿಚಿತ ಸ್ಥಳ ದೊರೆಯುವದು. ವಧು ಇಲ್ಲವೆ ವರ ರೂಪ ಮತ್ತು ಗುಣದಿಂದ ಒಳ್ಳೆಯುವರಿರುವರು. ಆದರೆ ವರನ ಮೇಲೆ ವಧುವಿನ ವರ್ಚಸ್ಸು ಹೆಚ್ಚಿಗೆ ಕೂಡುವಂಥ ಕೆಲವೊಂದು ಆಕರ್ಷಕ ಗುಣಗಳು ಅವಳಲ್ಲಿ ಹೆಚ್ಚಿಗೆ ಇರುವವು.

ನಿಮ್ಮ ಮಕ್ಕಳ ಮದುವೆಯಾಗುವದಿದ್ದರೆ ಅದು ನಿಶ್ಚಿತವಾಗಿ ಈ ವರ್ಷ ಆಗುವ ಯೋಗವಿದೆ. ಶರೀರಸಂಬಂಧ ಒಳ್ಳೆಮನೆತನಸ್ಥರೊಡನೆ ಕೂಡಿ ಬರುವದು. ಆದರೆ ಸಂಕ್ರಮಣಕ್ಕಿಂತ ಮೊದಲು ಆದರೆ ಪ್ರತಿಪಕ್ಷಿಗಳ ಮೇಲೆ ನಿಮ್ಮ ಆಕರ್ಷಣ ಆದಕ್ಕೂ ಅನಂತರ ಆದರೆ ನಿಮ್ಮ ಮೇಲೆ ಅವರ ಆಕರ್ಷಣ ಹೆಚ್ಚಿಗೆ ಆಗುವದು. ಸೊಸೆ ಇಲ್ಲವೆ ಅಳಿಯ ಅಪೇಕ್ಷೆಗಿಂತ ಹೆಚ್ಚು ರೂಪಗುಣಸಂಪನ್ನ ಇರುವರು. ಆದರೆ ಯಾರ ವಿವಾಹ ಸಮಾರಂಭವು ಎಪ್ರಿಲ ೧೧ ರೊಳಗೆ ಆಗುವದೊ ಅವರಿಗೆ ಅಪರಿಹಾರ್ಯ ಕಾರ್ಯಕ್ಕಾಗಿ ಗೊತ್ತುಪಡಿಸಿದ ಮುಹೂರ್ತವನ್ನು ರದ್ದುಪಡಿಸಿ ಹಿಂದೆ ಮುಂದೆ ಮುಹೂರ್ತ ಗೊತ್ತುಪಡಿಸಬೇಕಾಗಬಹುದು. ಮಕ್ಕಳೆಲ್ಲ ಒಳ್ಳೇ ಸುಖ ಕೊಡುವರು. ಆದರೆ ಯಾವ ಮಕ್ಕಳ ಉತ್ಕರ್ಷ ಹೆಚ್ಚಿಗೆ ಆಗುವದೊ ಅವರು ಬಹಳ ದೂರ ಸ್ಥಳಾಂತರ ಹೋಗುವದರಿಂದ ಮನಸ್ಸು ಬಹಳ ವ್ಯಾಕುಲವಾಗುವದು. ಗಂಡುಮಗುವಿಗಿಂತ ಹೆಣ್ಣುಮಗುವಿನ ಉತ್ಕರ್ಷವೇ ಹೆಚ್ಚು ಆಗುವದು. ಇದೇ ಈ ವರ್ಷದ ವೈಶಿಷ್ಟ್ಯ.

ನೋಕರಿ ಮತ್ತು ಧಂದೆಯ ದೃಷ್ಟಿಯಿಂದ ನೋಡಿದರೆ ಈ ವರ್ಷ ಮೊದಮೊದಲು ಬಹಳ ದಗದಗಿಯುದೆನಿಸಿದರೂ ಪ್ರತಿಯೊಂದರಲ್ಲಿ ಕೊನೆಗೆ ಮನಸ್ಸಿನಂತೆ ಯಶಸ್ಸು ದೊರೆಯುವದು. ಸಂಕ್ರಮಣದ ವರೆಗೆ ಉದ್ಯೋಗಕ್ಕಾಗಿ ಹಣವನ್ನು ವೆಚ್ಚ ಮಾಡಬೇಕಾಗುವದು. ಆದರೆ ಅನಂತರ ಎಪ್ರಿಲ ೧೧ರ ವರೆಗಿನ ಎರಡು ತಿಂಗಳಲ್ಲಿ ಅದರ ಫಲವಾಗಿ ಬಹಳ ದ್ರವ್ಯ ಲಾಭವಾಗುವದು. ಎಪ್ರಿಲ ೧೧ ರ ನಂತರವೂ ಲಾಭದಲ್ಲಿ ಏನೂ ವ್ಯತ್ಯಯ ಬರಲಾರದು. ಆದರೆ ಕೈಕೆಳಗಿನ ನೋಕರ ಚಾಕರರು ಸಂಪಿನಂತಹ ಕೆಲವು ತೊಂದರೆ ಕೊಡುವರು. ನೋಕರರಿಗೆ ಕೂಡ ಕೈಕೆಳಗಿನವರು ಇದೇ ಬಗೆಯ ತೊಂದರೆ ಕೊಡುವರು. ಆದರೆ ವರಿಷ್ಠರ ಮರ್ಜಿ ಮಾತ್ರ ಸದಾ ಸುಪ್ರಸನ್ನ ಇರುವದು. ಅನೇಕರಿಗೆ ಜೂನ ೧೯ ರಿಂದ ಜುಲೈ ೨೪ ರ ಅವಧಿಯಲ್ಲಿ ಮೇಲಿನ ಗ್ರೇಡೂ ದೊರೆಯುವದು. ನಿದಾನ ನಿಮ್ಮ ಮಹತ್ವ ಬೆಳೆಯುವಂಥ ಕೆಲ ಸಂಗತಿಗಳು ಸಂಭವಿಸುವವು ಇದು ನಿಶ್ಚಿತ. ಬದಲಿಯಾದರೆ ಸುಖ ಸೌಕರ್ಯದ ದೃಷ್ಟಿಯಿಂದ ಉತ್ತಮವಿದ್ದ ಸ್ಥಳಕ್ಕೆ ಆಗುವದು. ಆದರೆ ಎಪ್ರಿಲ ೧೧ ರಿಂದ ಅಲ್ಲಿ ಒಂದಿಲ್ಲೊಂದು ರೀತಿ ತೊಂದರೆಯಾಗುವದರಿಂದ ಮನಸ್ಸು ಅಸ್ವಸ್ಥವಾಗುವದು. ವಿಶೇಷವಾಗಿ ಧಂದೆ ಅಥವಾ ನೋಕರಿಗಾಗಿ ಯಾವ ದೇಶದಲ್ಲೇ ಇರಲಿ ಅವರಿಗೆ ಈ ವರ್ಷ ಹೆಚ್ಚು ಉತ್ಕರ್ಷಕಾರಕವಿದೆ. ಡಿಸೆಂಬರ ೩೦ರ ವರೆಗೆ ಮತ್ತು ಅನಂತರ ಜನೆವರಿ ೧೯ ರಿಂದ ಫೆಬ್ರುವರಿ ೫, ಮೇ ೧೭ ರಿಂದ ಅಗಸ್ಟ ೨೩ ರ ವರೆಗೆ ಮತ್ತು ಅನಂತರ ಸಪ್ಟೆಂಬರ ೯ ರಿಂದ ೨೬ ರ ವರೆಗೆ ಲಾಭಕ್ಕೆ ವಿಶೇಷ ಅನುಕೂಲ. ವೆಚ್ಚ ಪ್ರಮಾಣ ಮೀರಿ ಆದರೂ ಸ್ಥಾವರ ಜಂಗಮ ಸಂಗ್ರಹವೂ ಕೆಲಮಟ್ಟಿಗೆ ಆಗುವದು. ಆಪ್ತರಿಗಿಂತ ಮಿತ್ರರು ಹೆಚ್ಚು ಪ್ರೇಮದಿಂದ ವರ್ತಿಸುವರು. ಮನೋರಂಜನ ಇಲ್ಲವೆ ಕಾರ್ಯ ಮಾಡುವ ಯೋಗ ಮೇಲಿಂದ ಮೇಲೆ ಬರುವದು. ಸಂಕ್ರಮಣಕ್ಕಿಂತ ಮೊದಲು ಒಂದು ಯಾತ್ರೆ ಘಟಿಸುವದು ಇಲ್ಲವೆ ಮನೆಯಲ್ಲಿ ಅಥವಾ ಇದ್ದ ಊರಲ್ಲಿಯೇ ಯಾವದೊಂದು ದೊಡ್ಡ ದೈವಿಕ ಕೃತ್ಯವನ್ನು ನೀವು ಮಾಡುವಿರಿ. ವಾಹನ ಸುಖ ತುಂಬ ದೊರೆಯುವದು. ಆದರೆ ಎಪ್ರಿಲ ೧೧ರ ನಂತರ ಅದರ ದುರಸ್ತಿಯ ವೆಚ್ಚವೂ ಸದಾ ಹೆಚ್ಚುವದು. ಸಂಕ್ರಮಣದ ನಂತರ ಶುಭ ಮತ್ತು ಭಾವೀ ಸೂಚಕ ಸ್ವಪ್ನ ಹೆಚ್ಚಿಗೆ ಬೀಳುವವು.

ದಾವೆ ಫಿರ್ಯಾದಿ ಮತ್ತು ಇತರ ಸ್ಪರ್ಧೆಯ ಕೆಲಸಗಳಲ್ಲಿ ಪ್ರತಿಪಕ್ಷಿಗಳಿಂದ ವಿಲಕ್ಷಣ ತೊಂದರೆಯಾಗುವ ಯೋಗವಿದ್ದರೂ ಅದರಲ್ಲಿ ಅನೇಕರಿಗೆ ಬಹಳ ತ್ರಾಹಿತ್ರಾಹಿಯಾಗುವದು.

ಯಾರು ಎಪ್ರಿಲ ೧೧ ರೊಳಗಾಗಿ ಹಡೆಯುವರೊ ಅಂಥ ಸ್ತ್ರೀಯರಿಗೆ ಸ್ವಲ್ಪ ಕಷ್ಟವಾಗುವದು ಅಲ್ಲದೆ; ಕನ್ಯಾ ಹುಟ್ಟಿದ ವಿಷಾದವೂ ಕೆಲಮಟ್ಟಿಗೆ ಎನಿಸುವದು. ಅನಂತರ ಹಡೆದವರು ಸುಲಭವಾಗಿ ಹಡೆದು ಮಗನನ್ನು ಹಡೆದ ಭಾಗ್ಯವನ್ನೂ ಹೊಂದುವರು.

ಯಾವ ವಿದ್ಯಾರ್ಥಿಯ ಪರೀಕ್ಷೆ ಸಂಕ್ರಮಣಕ್ಕಿಂತ ಮೊಧಲು ಆಗುವದೊ ಅವರು ವರ್ಗವನ್ನು ಪಡೆಯುವರು, ಅನಂತರ ಪರೀಕ್ಷೆ ಕಟ್ಟುವವರು ನಿಧಾನ ಉತ್ತೀರ್ಣರಂತೂ ಆಗಿಯೇ ತೀರುವರು. ಇದು ನಿಶ್ಚಿತ.

# ಧನು

ಒಟ್ಟಿಗೆ ಈ ರಾಶಿಯುವರಿಗೆ ಸಾಡೇಸಾತಿ ಇರುವದರಿಂದ ಬಹುತರ ವಿಷಯುಗಳಲ್ಲಿ ಮೊದಲು ಬಹಳ ಕಷ್ಟ, ಮನೋಭಂಗ, ವಿಲಂಬವಾದರೂ ಕೊನೆಗೆ ಬಹುತರ ವಿಷಯುಗಳಲ್ಲಿ ಎಪ್ರಿಲ ೧೧ ರ ನಂತರ ಕನಿಷ್ಠ ಹತ್ತು-ಹನ್ನೆರಡಾಣೆಯಾದರೂ ಯುಶಸ್ಸು ದೊರೆಯುವದೆಂಬುದು ನಿಶ್ಚಿತ.

ಈ ರಾಶಿಯು ಜನರು ಸಂಕ್ರಮಣದ ವರೆಗೆ ಆರೋಗ್ಯವನ್ನು ಜಪ್ಪಿಸಿಕೊಂಡರೆ ಸಾಕು. ಏಕೆಂದರೆ ಅನಂತರ ಬರುವ ಪ್ರಥಮ ಗುರು ಈ ರಾಶಿಯು ಸ್ವಾಮಿಯಾಗಿರುವದರಿಂದ ಆಹಾರ-ವಿಹಾರಗಳಲ್ಲಿ ಅಷ್ಟೊಂದು ನಿಯಮನ ಮಾಡದಿದ್ದರೂ ಆರೋಗ್ಯ ಕೆಡುವ ಅಂಜಿಕೆ ಸ್ವಲ್ಪೂ ಇಲ್ಲ. ಆದರೆ ತತ್ಪೂರ್ವದಲ್ಲಿ ಮುತ್ತು ವಿಶೇಷವಾಗಿ ಜನೆವರಿ ೫ ರಿಂದ ೧೪ ರ ವರೆಗೆ ಶಸ್ತ್ರಗಳಿಂದ ಶರೀರದ ಯಾವದೊಂದು ಭಾಗಕ್ಕೆ ಗಾಯುವಾಗುವ ಅಂಜಿಕೆ ಇದೆ. ಎಪ್ರಿಲ ೧೧ರ ನಂತರ ಆರೋಗ್ಯ ಬಹಳ ಉತ್ತಮ ಉಳಿಯುವದು. ಈ ರಾಶಿಯುವರಿಗೆ ಈಗ ಸಾಡೇಸಾತಿ ಇದ್ದರೂ ಶನಿ ಪ್ರಥಮ ಸ್ಥಾನದಲ್ಲಿರುವನು ಮತ್ತು ಇದು ಅವನ ಮಿತ್ರರಾಶಿಯಾದ್ದರಿಂದ ಕೆಲವು ಸಲ ತೊಂದರೆಯಾಗಿ ಯಾವದೊಂದು ಕೆಲಸದಲ್ಲಿ ವಿಲಂಬವಾದರೂ ಕೊನೆಯುಲ್ಲಿ ಜಯು ಮತ್ತು ಯುಶಸ್ಸು ಸಿಕ್ಕೇ ತೀರುವದು. ಇರಲಿ, ಉಳಿದ ವಿಷಯುಗಳಲ್ಲಿ ದೇಹಸುಖ ಕೂಡ ಸಂಕ್ರಮಣದಿಂದ ಎಪ್ರಿಲ ೧೧ ರ ವರೆಗೆ ಸಾಮಾನ್ಯವೆ. ಆದರೆ ಅನಂತರ ಬಹಳ ಉತ್ತಮ ಯುಶಸ್ಸು ದೊರೆಯುವದು. ಮನೆಯುಲ್ಲಿ ಸ್ವಲ್ಪ ಹೆಚ್ಚು ವೆಚ್ಚವನ್ನು ಮಾಡಿದರೂ ಎಲ್ಲರೂ ಬಹುಶಃ ನಿಮ್ಮ ಹೇಳಿಕೆಯುಂತೇ ನಡೆಯುವರು.

ಹೆಂಡತಿಯು ಆರೋಗ್ಯ ಡಿಸೆಂಬರ ೩೦ ರ ವರೆಗೆ ಇರಬೇಕಾದಷ್ಟು ಚೆನ್ನಾಗಿ ಇರುವುದಿಲ್ಲ ಅದರಂತೆ ಮೇ ೧೭ ರಿಂದ ೩೦ ರ ವರೆಗೂ ಯಾವ ಅನುಕೂಲವಿಲ್ಲ. ಆದರೆ ಉಳಿದ ಕಾಲದಲ್ಲಿ ಅವರ ಆರೋಗ್ಯ ಅನುಕೂಲ ಉಳಿದು ಉಭಯುತರಲ್ಲಿ ಸದಾ ಮತ್ಯೈಕ್ಯವುಳಿಯುವದು. ನೀವಿನ್ನೂ ವಿವಾಹಿತರಾಗಿರದಿದ್ದರೆ ಮತ್ತು ಈ ವರ್ಷ ಆಗಬಯುಸಿದ್ದರೆ ಸಂಕ್ರಮಣದ ವರೆಗೆ ಬಾಶಿಂಗಬಲ ಸ್ವಲ್ಪೂ ಇಲ್ಲವೆಂದು ತಿಳಿದು ಪ್ರಯುತ್ನ ಮಾಡದೆ ಸ್ವಸ್ಥ ಕೂಡ್ರಬೇಕು. ಆದರೆ ಅನಂತರ ಆ ಯೋಗ ಉತ್ತಮವಿದೆಯೆಂದು ತಿಳಿದು ಕೂಡಿಬರುವದೆಂದು ಆ ಪ್ರಯುತ್ನದಲ್ಲಿ ತೊಡಗಬೇಕು. ಅಂದರೆ ಅಲ್ಪಾಯಾಸದಿಂದ ಒದಗಿ ಬರುವದು. ಎಪ್ರಿಲ್ ೧೧ ರ ವರೆಗೆ ದುಷ್ಟ ಆಪ್ತರು ಹೇಗಾದರೂ ಮಾಡಿ ಮದುವೆ ಮುರಿದುಬಿಡಬೇಕೆಂಬ ಪ್ರಯುತ್ನವನ್ನು ಮಾಡುವರು. ಆದರೆ ಬೀಗರು ಬಹಳ ಗಟ್ಟಿಗರಾಗಿ ವರ್ತಿಸುವದರಿಂದ ವಿರೋಧಿಗಳಿಗೆ ಯುಶಸ್ಸು ಸಿಕ್ಕದೆ ಗೊತ್ತುಪಡಿಸಿದ ಮುಹೂರ್ತಕ್ಕೆ ವಿವಾಹವಾಗಿಯೇ ತೀರುವದು. ವಧೂ ಇಲ್ಲವೆ ವರ ರೂಪ ಮತು ಬುದ್ಧಿಯಿಂದ ಸಾಮಾನ್ಯವಿದ್ದರೂ ಸುದೈವಿಗಳಿದ್ದು ವರ್ಷ ಮುಗಿಯುವದರೊಳಗಾಗಿಯೇ ಇದು ಪ್ರತ್ಯಯುಕ್ಕೆ ಬರುವದು.

ನಿಮ್ಮ ಮಕ್ಕಳ ಮದುವೆ ಮಾಡುವದಿದ್ದರೆ ಅದಕ್ಕೂ ಮೇಲಿನಂತೆ ಸಂಕ್ರಮಣದ ನಂತರ ಬಾಸಿಂಗ ಬಲವಿದೆ. ಎಪ್ರಿಲ್ ೧೧ ರ ವರೆಗೆ ಲಗ್ನ ಕೂಡಲು ಸ್ವಲ್ಪ ಕಷ್ಟವೆನಿಸಿದರೂ ಸೊಸೆ ಇಲ್ಲವೆ ಅಳಿಯು ರೂಪ, ಗುಣ, ಶಿಕ್ಷಣ ಮೊದಲಾದ ಎಲ್ಲ ವಿಷಯುಗಳಲ್ಲಿ ಬಹಳ ಉತ್ತಮವಾಗಿರುವರು. ಬೀಗರೂ ನಿಮಕಿಂತ ಹೆಚ್ಚು ಮನೆತನಸ್ಥರೇ ಇರುವರು. ಮಕ್ಕಳಲ್ಲಿ ಬಹುತರ ಜನರಿಗೆ ಈ ವರ್ಷ ಅನುಕೂಲವಿದೆ. ಸಂಕ್ರಮಣದಿಂದ ಮುಂದೆ ಅದು ವಿಶೇಷ ಪ್ರಭಾವದಿಂದ ಆಗುವದು. ಮತ್ತು ಎಪ್ರಿಲ್ ೧೧ ರಿಂದ ಮುಂದೆ ಅವರಲ್ಲಿ ಒಬ್ಬನು ದಿಗಂತ ಕೀರ್ತಿವಂತನಾಗುವನು. ಅವರಲ್ಲಿ ಮತ್ತು ನಿಮ್ಮಲ್ಲಿ ಅಲ್ಪ ಸ್ವಲ್ಪ ಮತಭೇದವಾಗುವದನ್ನು ಬಿಟ್ಟರೆ ಒಟ್ಟಾರೆ ಎಲ್ಲವೂ ಅನುಕೂಲವಾಗಿ ಪರಿಣಮಿಸುವದು.

ಧಂದೆಗಾರರಿಗೆ ಮತ್ತು ನೋಕರರಿಗೆ ಈ ವರ್ಷ ಎಪ್ರಿಲ್ ೧೧ ರ ವರೆಗೆ ಅಷ್ಟೊಂದು ಅನುಕೂಲವಿಲ್ಲ. ದ್ವಾದಶ ಗುರು ಇರುವ ವರೆಗೆ ಅಂದರೆ ಸಂಕ್ರಮಣದ ವರೆಗೆ ಬಹಳ ಕಿಟಿಕಿಟಿಯಾಗುವದು. ಅದನ್ನು ನಿವಾರಿಸಿಕೊಳ್ಳಬೇಕಾದರೆ ಸಾಕುಬೇಕಾಗಿ ಹೋಗುವದು. ಧಂದೆಯುವರಿಗಂತು ಕೈಯುಲ್ಲಿದ್ದ ಹಣವನ್ನೆಲ್ಲ ವೆಚ್ಚ ಮಾಡಬೇಕಾಗುವದು. ಅನೇಕರ ಪತ್ತು ಕೂಡ ಕಡಿಮೆಯಾಗುವದು. ಅನೇಕರಿಗೆ ಸಾಲ ಕೂಡ ಮಾಡಬೇಕಾಗುವದು. ನೋಕರರಿಗೆ ಕೂಡ ಸಂಕ್ರಮಣದ ವರೆಗೆ ಬಹಳಷ್ಟು ತೊಂದರೆಯಾಗುವದು. ಎಲ್ಲಿ ಎದ್ದು ಓಡಿಹೋಗಲೆಂದು ಎನಿಸುವದು. ಆದರೆ ಎಪ್ರಿಲ ೧೧ ರ ನಂತರ ನಾಲ್ಕಾರು ದಿನಗಳಲ್ಲಿಯೇ ಎಲ್ಲವೂ ತಿರುವುಮುರುವು ಆಗಿ ಮುಂದಿನ ಕಾಲವೆಲ್ಲ ಅತ್ಯಂತ ಸುಖಸೌಕರ್ಯಗಳಲ್ಲಿ ಹೋಗುವದು. ಒಳ್ಳೆ ಉತ್ಕರ್ಷವಾಗಿ ಲಾಭವೂ ಆಗುವದು. ಮೇಲಿನ ಗ್ರೇಡು ಸಿಕ್ಕದಿದ್ದರೂ ವರಿಷ್ಠರ ಮರ್ಜಿ ಚೆನ್ನಾಗಿ ಉಳಿದು ಮಾಡತಕ್ಕ ಕೆಲಸವೂ ಒಗ್ಗುವಂತಹದೆನಿಸುವದು. ಮತ್ತು ಅನೇಕರಿಗೆ ಗುಪ್ತ ಇಲ್ಲವೆ ಆಕಸ್ಮಿಕ ದ್ರವ್ಯಲಾಭ ದೊಡ್ಡ ಪ್ರಮಾಣದಲ್ಲಿ ಆಗುವ ಯೋಗವೂ ಇದೆ. ಕೈಯುಲ್ಲಿದ್ದ ಅಧಿಕಾರವನ್ನು ಸಂಕ್ರಮಣದ ನಂತರ ಬಹಳ ಲೋಕಪ್ರಿಯುವಾಗುವಂತೆ ನಡೆಸುವ ಯೋಗವಿದೆ. ಆದರಿಂದ ಎಪ್ರಿಲ ೧೧ರ ನಂತರ ಅನೇಕರು ಜನರಿಂದ ಇಲ್ಲವೆ ರಾಜರಿಂದ ಮರ್ಯಾದೆ ಹೊಂದುವ ಸಂಭವ ಇದೆ. ಸಂಕ್ರಮಣದಿಂದ ಮುಂದೆ ಕೀರ್ತಿಕಾರಕ ಕೆಲಸಗಳನ್ನು ಮಾಡು

ವಿರಿ ಮತ್ತು ವರ್ತನೆಯಲ್ಲಿ ಧರ್ಮಾಭಿಮಾನ ಮೇಲಿಂದ ಮೇಲೆ ಕಂಡುಬರುವದು. ಬದಲಿಯಾದರೆ ಮಾತ್ರ ಅಧಿಕಾರ ಮತ್ತು ಕೆಲಸದ ದೃಷ್ಟಿಯಿಂದ ಯೋಗ್ಯ ಆದರೆ ಪ್ರಾಪಂಚಿಕ ದೃಷ್ಟಿಯಿಂದ ಗೈರಸೋಯಿಯ ಸ್ಥಳಕ್ಕೆ ಆಗುವದು. ಲಾಭಕ್ಕೆ ವಿಶೇಷವಾಗಿ ಫೆಬ್ರುವರಿ ೧೨ ರಿಂದ ಮಾರ್ಚ ೧೩ ಎಪ್ರಿಲ ೧೩ ರಿಂದ ಜುಲೈ ೧೬ ಆಗಷ್ಟ ೧೬ ರಿಂದ ಸಪ್ಟಂಬರ ೧೬ ಮತ್ತು ಆಕ್ಟೋಬರ ೧೬ ರ ನಂತರದ ಕಾಲವು ಬಹಳ ಅನುಕೂಲವಾಗಿ ಪರಿಣಮಿಸುವದು. ಎಪ್ರಿಲ ೧೩ ರಿಂದ ಮೇ ೧೩ ರ ಅವಧಿಯಲ್ಲಿ ಯಾವದೊಂದು ಯಾತ್ರೆಯನ್ನು ಮಾಡುವಿರಿ ಇಲ್ಲವೆ ಪ್ರೇಕ್ಷಣೀಯ ದೂರ ಸ್ಥಳದ ದರ್ಶನವೂ ಆಗುವದು. ಈ ಸಲ ಪುರುಷವರ್ಗಕ್ಕಿಂತ ಸ್ತ್ರೀ ವರ್ಗದಲ್ಲಿ ಹೆಚ್ಚು ಸಹಾನುಭೂತಿ ಇರುವದು. ಪ್ರವಾಸವೆಲ್ಲ ಸುಖದ್ದು ಮತ್ತು ಉದ್ದೇಶವನ್ನು ಸಾಧ್ಯಮಾಡುವಂತಹದಾಗುವದು. ಆದರೆ ಲೇಖನ ಕೆಲಸ ಅಷ್ಟೊಂದು ಅನುಕೂಲವಿಲ್ಲ. ಪ್ರತ್ಯಕ್ಷ ಭೆಟ್ಟಿಯೂ ಒಮ್ಮೆಲೇ ಅನುಕೂಲವಾಗದೆ ಎರಡು ಮೂರು ಸಲ ಪ್ರಯತ್ನಮಾಡಿದ ನಂತರ ಸಂಭವಿಸುವದು ಮತ್ತು ಸಾಧಾರಣ ಅನುಕೂಲವಾಗಿ ಪರಿಣಮಿಸುವದು. ವಿಶೇಷವಾಗಿ ಸಂಗ್ರಹವಾಗುವ ಯೋಗವೂ ಇಲ್ಲವೆ ಇಲ್ಲ. ಆದರೆ ಎಪ್ರಿಲ೧೧ರ ನಂತರ ಹಿಂದಿನ ಕೊಡತಕ್ಕೊಳ್ಳುವದನ್ನು ಬಹಳಷ್ಟು ತೀರಿಸುವಿರಿ ಮತ್ತು ಆರಂಭಿಸಿದ ಕೆಲಸವನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವಿರಿ.

ದಾವೆ ಫಿರ್ಯಾದಿ ಮತ್ತು ಖಾಸಗಿ ಸ್ಪರ್ಧೆಯ ಕಾರ್ಯದಲ್ಲಿ ಸಂಕ್ರಮಣದ ವರೆಗೆ ಪ್ರತಿಪಕ್ಷಿಗಳ ಜೋರು ಹೆಚ್ಚಿ ನೀವು ಹಿಂದಕ್ಕೆ ಸರಿಯಬೇಕಾಗುವದು ಆದರೆ ಅನಂತರ ಮಾತ್ರ ಅದು ಕ್ರಮಶಃ ಸುಧಾರಿಸಿ ಎಪ್ರಿಲ ೧೧ ರ ನಂತರ ನೀವೇ ಹೆಚ್ಚು ಯಶಸ್ವಿಯಾಗಹತ್ತುವಿರಿ. ಮತ್ತು ಜುಲೈ ೨೪ ರಿಂದ ಸಪ್ಟಂಬರ ೧೦ ರ ವರೆಗೆ ಪ್ರತಿಸ್ಪರ್ಧಿಗಳಲ್ಲಿ ಅನೇಕರ ಪಜೀತಿಯಾಗುವದು.

ಈ ರಾಶಿಯ ಸ್ತ್ರೀಯರು ಸಂಕ್ರಮಣದೊಳಗಾಗಿ ಹಡೆದರೆ ಅವರಿಗೆ ಬಹುಶಃ ಕನ್ಯಾ ಹುಟ್ಟಿ ಪ್ರಸೂತಿ ಕಷ್ಟವನ್ನು ಹೆಚ್ಚಿಗೆ ಅನುಭವಿಸಬೇಕಾಗುವದು. ಅನಂತರ ಎಪ್ರಿಲ ೧೧ರ ವರೆಗೆ ಪ್ರಸೂತಿ ಸುಲಭವಾದರೂ ಹುಟ್ಟುವ ಮಗು ಬಹಳ ಅಶಕ್ತವಾಗುವದು. ಆದರೆ ಅನಂತರ ಹಡೆದರೆ ಪ್ರಸೂತಿ ಸುಲಭವಾಗುವದಲ್ಲದೆ ಗಂಡುಮಗು ಹುಟ್ಟಿದ ಆನಂದವೂ ಅವರಿಗೆ ಆಗುವದು.

ಯಾರ ಪರೀಕ್ಷೆ ಸಂಕ್ರಮಣಕ್ಕಿಂತ ಮೊದಲು ಆಗುವದೋ ಅವರಿಗೆ ಯಶಸ್ಸಿನ ಬಗ್ಗೆ ಅಷ್ಟೊಂದು ಖಾತ್ರಿಯಿಲ್ಲ. ಆದರೆ ಅನಂತರ ಪರೀಕ್ಷೆ ಕಟ್ಟುವವರಿಗೆ ಮಾತ್ರ ಯಶಸ್ಸು ನಿಶ್ಚಿತ. ಮತ್ತು ವಿಶೇಷವಾಗಿ ಜನೆವರಿ ೧೩ ರಿಂದ ಮಾರ್ಚ ೨೪ ಜೂನ ೧೨ ರಿಂದ ಜುಲೈ ೨೪, ಮತ್ತು ಸಪ್ಟಂಬರ ೧೨ ರಿಂದ ಮುಂದೆ ಯಾರ ಪರೀಕ್ಷೆಯಾಗುವದೋ ಅವರು ಉಚ್ಚ ವರ್ಗದಲ್ಲಿಯೂ ಪಾಸಾಗುವ ಯೋಗವಿದೆ.

## ಮಕರ

ಒಟ್ಟಾರೆ ಈ ರಾಶಿಯವರಿಗೆ ಈ ವರ್ಷ ಬಹಳ ದಗದಗಿಯದು ಮತ್ತು ಕಷ್ಟದ್ದು ಎನಿಸಿದರೂ ಕೊನೆಯಲ್ಲಿ ರೂಪಾಯಿಯಲ್ಲಿ ಎಂಟಾಣೆಯಷ್ಟಾದರೂ ಯಶಸ್ಸು ದೊರೆಯುವುದು.

ಈ ರಾಶಿಯವರಿಗೆ ಕಳೆದ ಒಂದೂವರೆ ವರ್ಷಗಳಿಂದ ಸಾಡೇಸಾತಿ ಇದೆ. ಮತ್ತು ಇಡೀ ವರ್ಷ ಶನಿ ದ್ವಾದಶದವನಾಗಿಯೇ ಉಳಿಯುವನು. ಅಂದರೆ ಸಾಡೇಸಾತಿಯ ಮೂರು ಭಾಗಗಳಲ್ಲಿ ಮೊದಲನೆಯ ಭಾಗ ಇಡೀ ವರ್ಷ ಇರುವನು. ಆದರೆ ಈ ರಾಶಿಯ ಸ್ವಾಮಿ ಶನಿಯೇ ಆಗಿರುವದರಿಂದ ಸಾಡೇಸಾತಿಯು ಅತಿ ಕಷ್ಟದ್ದು ಮತ್ತು ಹಾನಿಯದಾಗಿ ಪರಿಣಮಿಸುವದಿಲ್ಲ. ಹೀಗಿದ್ದರೂ ಮೊದಲಿನ ಎರಡುವರೆ ವರುಷ ಶನಿ ಮಹಾರಾಜ ಕೊಡಬೇಕಾದಷ್ಟು ಕಷ್ಟವನ್ನು ಕೊಟ್ಟೇ ತೀರುವನು. ಆ ಕಷ್ಟವೆಂದರೆ ನಿರರ್ಥಕ ಬಹಳ ವೆಚ್ಚ ಬರುವದು, ಅನಿವಾರ್ಯ ಶತ್ರುಗಳಾಗುವರು, ಮನೆಯಲ್ಲಿಯ ಬಹುತರ ಎಲ್ಲ ಜನರು ಬೇಡಾದ ಉಪದ್ವ್ಯಾಪ ನಡೆಸುವರು ಮತ್ತು ವೆಚ್ಚ ಮಾಡುವರು. ಪ್ರತಿಷ್ಠೆಗಾಗಿ ಕ್ಷುಲ್ಲಕ ಮಾತಿಗಾಗಿಯೂ ವಿಪರೀತ ತೊಂದರೆ ಮತ್ತು ವೆಚ್ಚವನ್ನು ಅನುಭವಿಸಬೇಕಾಗಿ ಬರುವದು. ಇಂಥ ಕಷ್ಟಗಳು ಅನೇಕ ಸಲ ಬರುವವು. ಈ ವರ್ಷ ಆರೋಗ್ಯದ ಬಗ್ಗೆಯೂ ಸದಾ ತಕರಾರು ಇದ್ದುದೇ ಮತ್ತು ಶನಿಗೆ ಅನುಕೂಲನೆಂದೋ ಏನೊ ಮಕರಸಂಕ್ರಮಣದ ನಂತರ ಬರುವ ದ್ವಾದಶ ಗುರುವಿನಿಂದಾಗಿ ಕಷ್ಟ ಹೆಚ್ಚುವದು. ಮತ್ತು ಅದರಲ್ಲಿಯೆ ಜನೆವರಿ ೫ರಿಂದ ಫೆಬ್ರುವರಿ ೧೪ರ ವರೆಗೆ ಮಂಗಳನೂ ದ್ವಾದಶದವನಾಗುವನು. ಪರಿಣಾಮವಾಗಿ ಏನಾಗುವದೋ ಹೇಳಲಿಕ್ಕೆ ಬರುವದಿಲ್ಲ. ಈ ಅವಧಿಯಲ್ಲಿ ಬೇನೆಗಿಂತ ಅಪಘಾತದ ಅಂಜಿಕೆಯೇ ಹೆಚ್ಚು. ಆದರೆ ಈ ಸಮಯಕ್ಕೆ ಅಷ್ಟಮ ಅರ್ಥಾತ್ ಮೃತ್ಯು ಸ್ವಾಮಿಯಾದ ರವಿ ಕೂಡ ತ್ರಿಕೂಟದಲ್ಲಿ ಇರುವದರಿಂದ ಆಯುಷ್ಯಕ್ಕೆ ಮಾತ್ರ ಏನೂ ಗಂಡಾಂತರವಿಲ್ಲ. ಕ್ಲೇಶ ಪರಿಹಾರಾರ್ಥ ಶನಿ, ಗುರು ಮತ್ತು ಮಂಗಳ ಗ್ರಹಗಳ ಜಪ ಮಾಡಿ ದಾನಮಾಡುವದು ಇಷ್ಟವಾಗಿದೆ.

ಸ್ತ್ರೀಸುಖ ಮಾತ್ರ ಜನೆವರಿ ೫ ರಿಂದ ಫೆಬ್ರುವರಿ ೧೪ನ್ನು ಬಿಟ್ಟು ಉಳಿದ ವೇಳೆಯಲ್ಲಿ ಬಹಳ ಉತ್ತಮವಿದೆ. ಜನೆವರಿ ೫ ರ ವರೆಗಂತೂ ಅದು ಬಹಳ ಸರಸವಾಗಿ ದೊರೆಯುವದು. ವಿವಾಹವಾಗುವದಿದ್ದರೆ ಈ ಅವಧಿಯಲ್ಲಿ ಸಹಜವಾಗಿ ಆಗುವದು ಅನಂತರ ಮಾತ್ರ ವಿವಾಹವಾಗುವದು ಕಠಿಣವೇ. ಆದರೆ ಒಂದು ವೇಳೆ ಆದರೆ ಬಹಳ ಪ್ರಯತ್ನದಿಂದ ಸಾಧ್ಯವಾಗುವದು. ವಧೂವರರು ಪರಸ್ಪರ ಒಪ್ಪುವರು. ಆದರೆ ಉಳಿದವರ ಮನಸ್ಸಿಗೆ ಮಾತ್ರ ಅವರು ಬರುವದಿಲ್ಲ. ಉಳಿದ ಬಹುತರ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಎಪ್ರಿಲ ೧೧ ರ ವರೆಗೆ ಸಾಧಾರಣ ಅನುಕೂಲ. ಅನಂತರ ಮಾತ್ರ ಗೃಹಕಲಹ, ಅತಿ ವೆಚ್ಚದಿಂದ ಮೇಲಿಂದಮೇಲೆ ಹಣದ ಕೊರತೆ ಎನಿಸಹತ್ತುವದು. ಸಹಜವಾಗಿ ಸರಳ ಮಾತಾಡಿದರೂ ಅದನ್ನು ಕೇಳಿದವರು ವಿಪರ್ಯಾಸ ಮತ್ತು ತಪ್ಪು ತಿಳಿವಳಿಕೆ ಮಾಡಿಕೊಳ್ಳುವರು. ಯಾರದಾದರೂ ದೃಷ್ಟಿ ತಗಲುವ ಸಂಭವವೂ ಇದೆ. ಅನೇಕರಿಗೆ ಪೈಶಾಚಿಕ ಬಾಧೆಯೂ ಆಗುವದು ಆವಶ್ಯಕ ವಸ್ತು ಕಳವಾಗಿ ಹೋಗುವ, ಇಲ್ಲವೆ ಕಳೆದು ಹೋಗುವ ಅಂಜಿಕೆಯೂ ಇದೆ. ಈ ಬಗೆಯ ತೊಂದರೆ ಅನುಭವಕ್ಕೆ ಬರುವದು.

ನಿಮ್ಮ ಮಕ್ಕಳ ವಿವಾಹ ಮಾಡುವದಿದ್ದರೆ ಸಂಕ್ರಮಣದ ವರೆಗೆ ಒಳ್ಳೆ ಬಾಸಿಂಗ ಬಲವಿದೆ ಆದರೆ ಹೀಗೆ ತಿಳಿದುಕೊಂಡು ಕೇವಲ ಲಗ್ನ ಗೊತ್ತುಮಾಡಿ ಸ್ವಸ್ಥ ಕೂಡಬಾರದು. ಸಮಾರಂಭ ಮಾಡಿಬಿಡಬೇಕು ಮುಂದೆ ಹಾಕಿದ್ದಾದರೆ ಏನಾದರೂ ಅಡಚಣೆ ಬರುವದು, ನಿಶ್ಚಿತ ಅನಾಹೂತ ಅಡಚಣೆ ಬರುವ ಸಂಭವವೂ ಇದೆ. ಸೊಸೆ ಇಲ್ಲವೆ ಅಳಿಯ ರೂಪದಂತೆ ಗುಣಸಂಪನ್ನ ಇರಲಿಕ್ಕಿಲ್ಲ. ಲಗ್ನ ಸಮಾರಂಭವನ್ನು ನಿಮ್ಮ ಮನಸ್ಸನ್ನು ಬಿಗಿಹಿಡಿದುಕೊಂಡೇ ಹೇಗಾದರೂ ಮುಗಿಸಿಬಿಡಬೇಕು. ಅರ್ಥಾತ್ ಮನಸ್ಸು ಅಷ್ಟೊಂದು ಸುಪ್ರಸನ್ನ ಉಳಿಯುವದಿಲ್ಲ. ಮಕ್ಕಳ ಉನ್ನತಿಗೂ ಈ ವರ್ಷ ಸಂಕ್ರಮಣದ ವರೆಗೆ ಅನುಕೂಲವಿದ್ದಷ್ಟು ಮುಂದೆ ಇರುವದಿಲ್ಲ ಮತ್ತು ಅವರ ಆಚಾರವಿಚಾರ ನಿಮಗೆ ಅಷ್ಟೊಂದು ಒಪ್ಪಿಗೆಯಾಗುವದಿಲ್ಲ.

ಉದ್ಯೋಗ-ಧಂದೆಯವರಿಗೆ ಇಲ್ಲವೆ ನೋಕರರಿಗೆ ಮಾತ್ರ ಈ ವರ್ಷ ಅಷ್ಟೊಂದು ಕೆಟ್ಟಿರುವದಿಲ್ಲ. ಸಂಕ್ರಮಣದವರೆಗಂತೂ ಚೆನ್ನಾಗಿ ದ್ರವ್ಯ ಲಾಭವಾಗುವದು. ಅನಂತರವೂ ಅದು ನಿಲ್ಲದೆ ಹಾಗೆಯೆ ಲಾಭವಾಗುತ್ತಲೆ ಹೋಗುವದು. ಆದರೆ ಅದರ ಪ್ರಮಾಣ ಮಾತ್ರ ಮೊದಲಿಗಿಂತ ಕಡಿಮೆಯಾಗುವದು. ಇಲ್ಲದಿದ್ದ ವೆಚ್ಚವಾದರೂ ಹೆಚ್ಚುವದು ಧಂದೆಯವರಿಗಿಂತ ನೋಕರ ವರ್ಗದವರಿಗೆ ಕಡವೆ ಕಷ್ಟವೆನಿಸುವದು ಸಂಕ್ರಮಣಕ್ಕಿಂತ ಮೊ

ಲಂತೂ ಅನೇಕರ ಕೈ ಒಳ್ಳೆ ಮೇಲಾಗುವದು ಅದು ಕ್ರಮಾಂಕವನ್ನು ಗಳಿಸಬಹುದು ಗ್ರೇಡ ಸಿಕ್ಕಬಹುದು. ಆದರೆ ಸಂಕ್ರಮಣದ ನಂತರ ಮಾತ್ರ ಕೈಯೊಳಗಿದ್ದ ಅಧಿಕಾರದ ಸದುಪಯೋಗಮಾಡಲಿಲ್ಲೆಂಬ ಕೂಗು ಎಲ್ಲ ಕಡೆಯಿಂದಲೂ ಕೇಳಬರುತ್ತದೆ ಇದರಿಂದ ವರಿಷ್ಠರು ಬಹಳ ಅಸಂತುಷ್ಟರಾಗುವರು. ಅನೇಕರಿಗೆ ಜವಾಬ ಕೊಡುವವರೆಗೆ ಸರತಿ ಬರುವದು. ಬದಲಿಯಾದರೆ ಪ್ರಾಪಂಚಿಕ ದೃಷ್ಟಿಯಿಂದ ಅನುಕೂಲ. ಆದರೆ ಕೆಲ್ಸದ ದೃಷ್ಟಿಯಿಂದ ಮಾತ್ರ ಅತ್ಯಂತ ದಗದಗಿಯ ಸ್ಥಳಕ್ಕೆ ಆಗುವದು. ಸ್ಥಾವರ ಜಂಗಮ ಸಂಗ್ರಹವಾಗುವದಂತೂ ದೂರೇ ಉಳಿಯಿತು. ಕೆಲ ಮುಟ್ಟಿಗೆ ಸಾಲವಾಗಬಹುದು. ಹಳೆಯ ಸಂಗ್ರಹವಿದ್ದರೆ ಅದನ್ನು ಕರಗಿಸಬೇಕಾಗುವದು ಧಾರ್ಮಿಕ ವೃತ್ತಿ ಮಾತ್ರ ಹೆಚ್ಚುವದು ಆದರೆ ಯಾತ್ರೆಯ ಯೋಗ ಕಡಿಮೆ. ವಿಶೇಷ ದೂರ ಸ್ಥಳಗಳ ಪ್ರವಾಸವೂ ಆಗುವದಿಲ್ಲ ಒಂದೇ ಸ್ಥಳಕ್ಕೆ ಮೇಲಿಂದ ಮೇಲೆ ಹೋಗಬೇಕಾದ ಪ್ರಸಂಗ ಬರುವದು ಮನೆಯವರಿಗಿಂತ ಹೊರಗಿನ ಆಪ್ತರು ಹೆಚ್ಚು ಚೆನ್ನಾಗಿ ನಡೆದುಕೊಳ್ಳುವರು ಸಂಕ್ರಮಣದ ನಂತರ ಮಿತ್ರರೂ ಕುಂಯಿಕುಂಯಿ ಮಾಡುವರು.

ದಾವೆ ಫಿರ್ಯಾದಿ ಮತ್ತು ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿಯೂ ಈ ವರ್ಷ ಬಹಳ ತೊಂದರೆಯದು, ನಿರರ್ಥಕ ವೆಚ್ಚದ್ದು ಇರುವದು. ಸಂಕ್ರಮಣದ ನಂತರ ಮಾತ್ರ ಅಪಯಶಸ್ಸು ಇಲ್ಲವೆ ಬಹಳ ಹಿಮ್ಮೆಡುವ ಪ್ರಸಂಗ ಬರುವದು.

ಯಾವ ಸ್ತ್ರೀಯರು ಈ ವರ್ಷ ಹಡೆಯುವವರಿರುವರೊ ಅವರಿಗೆ ಸಂಕ್ರಮಣಕ್ಕಿಂತ ಮೊದಲು ಯಾವದೇ ಬಗೆಯ ಕಷ್ಟವಿಲ್ಲದೆ ಹಡೆಯುವರು. ಪುತ್ರರತ್ನವನ್ನು ಹಡೆದ ಆನಂದವೂ ಅವರಿಗಾಗುವದು. ಅನಂತರ ಹಡೆದರೆ ಗಂಡು ಹುಟ್ಟಿದರೂ ಪ್ರಸೂತಿ ಕಷ್ಟ ಸ್ವಲ್ಪಾದರೂ ಬಾಧಿಸುವದು.

ಯಾರ ಪರೀಕ್ಷೆ ನವಂಬರ ೨ ರಿಂದ ಡಿಸೆಂಬರ ೧೨ ಡಿಸೆಂಬರ ೨೬ ರಿಂದ ಜನೆವರಿ ೨೧, ಫೆಬ್ರುವರಿ ೧೫ ರಿಂದ ಎಪ್ರಿಲ ೨೭, ಮೇ ೨೧ ರಿಂದ ಜೂನ ೧೫ ಮತ್ತು ಸಪ್ಟಂಬರ ೨೧ ರಿಂದ ಮುಂದಿನ ಕಾಲದಲ್ಲಿ ಆಗುವದೊ ಅವರು ಉತ್ತೀರ್ಣರಾಗಿಯೇ ತೀರುವರು. ಆದರೆ ಡಿಸೆಂಬರ ೨೬ ರಿಂದ ಜನೆವರಿ ೨೧ ರ ವರೆಗೆ ಪರೀಕ್ಷೆ ಕಟ್ಟುವವರು ಬಹುಶಃ ವರ್ಗವನ್ನು ಸಂಪಾದಿಸುವರು.

# ಕುಂಭ

ಈ ರಾಶಿಯವರಿಗೆ ಈ ವರ್ಷ ಪ್ರಾಪಂಚಿಕ ದೃಷ್ಟಿಯಿಂದ ಸರ್ವಸಾಮಾನ್ಯ ಸುಖದ್ದಾಗಿದ್ದರೂ ಧಂದೆಮಾಡುವವರಿಗೆ ಕೂಲಿಕಾರರಿಗೆ ಅತ್ಯಂತ ಉತ್ಕರ್ಷದ್ದಾಗಿ ಪರಿಣಮಿಸುವದೆಂಬುದು ನಿಶ್ಚಿತ.

ಈ ರಾಶಿಯ ಜನರ ಆರೋಗ್ಯ ಈ ವರ್ಷ ಎಪ್ರಿಲ ೧೧ ರ ವರೆಗೆ ಅಷ್ಟಮ ರಾಹುವಿನಿಂದ ಶ್ವಾಸ ಅನ್ನ ವಾತಪೀಡೆ ಇಲ್ಲವೆ ಪಿಶಾಚಪೀಡೆ ಮೊದಲಾದ್ದರಿಂದ ಮತ್ತು ಅನಂತರ ಸಪ್ತಮ ರಾಹುಬರುವದರಿಂದ ಪಿತ್ತವಿಕಾರದಿಂದ ಹೀಗೆ ಇಡೀವರ್ಷ ಕಿರಿಕಿರಿಯದಾಗಿದ್ದರೂ ಹಿಂಡಿ ಹಿಪ್ಪೆ ಮಾಡುವಂಥ ಯಾವ ಕ್ಲೇಶದ ಅಂಜಿಕೆಯೂ ಇಲ್ಲ. ಉಳಿದ ವಿಷಯಗಳಲ್ಲಿ ದೇಹ ಸುಖ ಬಹಳ ಉತ್ತಮವಿದೆ. ಸರ್ವಸಾಧಾರಣವಾಗಿ ಏನೇನು ಇಚ್ಛಿಸುವಿರೋ ಅದು ಅಲ್ಪ ಸ್ವಲ್ಪವಾದರೂ ಸಿಕ್ಕದೆ ಇರಲಾರದು. ಇಲ್ಲವೆ ಅದು ಕೊನೆಗೆ ಮುಟ್ಟದಿರಲಾರದು. ಏಕೆಂದರೆ ರಾಶಿಸ್ವಾಮಿಯಾದ ಶನಿ ಈ ವರ್ಷ ಇಡೀ ಏಕಾದಶ ಅಂದರೆ ಲಾಭಸ್ಥಾನದಲ್ಲಿರುವದರಿಂದ ಮತ್ತು ಮಕರ ಸಂಕ್ರಮಣದಿಂದ ಗುರುವೂ ಅದೇ ಸ್ಥಾನಕ್ಕೆ ಬರುವದರಿಂದ ಮತ್ತು ಅವನೇ ಲಾಭೇಶನಾಗಿರುವದರಿಂದ ಸಾಕಷ್ಟು ಸುಖ ಸಿಗುವದಿಷ್ಟೇ ಅಲ್ಲ ಮರ್ಯಾದೆ ಮೀರಿ ಸುಖವೂ ಸಿಕ್ಕುವದು.

ಹೆಂಡತಿಯ ಆರೋಗ್ಯ ಎಪ್ರಿಲ ೧೧ ರಿಂದ ಬರುವ ಸಪ್ತಮ ರಾಹುವಿನಿಂದ ಸ್ವಲ್ಪ ಕಷ್ಟಕಾರಕವೆನಿಸುವದು. ಆದರೆ ಈ ಅಂದರೆ ಭಾರ್ಯಾಸ್ಥಾನದಮೇಲೆ ಗುರುವಿನ ಪೂರ್ತಿ ದೃಷ್ಟಿ ಇರುವದರಿಂದ ಕಿರುಕಳ ಸ್ವರೂಪದ್ದೆನಿಸುವದು. ಉಭಯತರಲ್ಲಿ ನಿಷ್ಠೆ ಮತ್ತು ಪ್ರೇಮ ಉತ್ತಮವೇ ಉಳಿಯುವದು. ಆದರೆ ಮೇಲಿನ ಸಮಯದಿಂದ ಮಾತಿನ ಅರ್ಥದ ವಿಪರ್ಯಾಸವಾಗಿ ಅನೇಕ ಸಲ ತಪ್ಪು ತಿಳಿವಳಿಕೆಯಿಂದ ವಾಗ್ಯುದ್ಧವಾಗುವದು. ಜನೇವರಿ ೧೪ ರಿಂದ ಫೆಬ್ರುಆರಿ ೧೨ ಮಾರ್ಚ ೧೪ರಿಂದ ಎಪ್ರಿಲ ೧೩ ಮತ್ತು ಜುಲೈ ೧೬ ರಿಂದ ಅಗಷ್ಟ ೧೬ ಈ ಅವಧಿಯಲ್ಲಿ ಮಾತ್ರ ಅವಳ ಗ್ರಾಮಾಂತರದಿಂದ ಸಹವಾಸದಲ್ಲಿ ವೈತ್ಯಯ ಬರುವದು. ನೀವು ಅವಿವಾಹಿತರಾಗಿದ್ದರೆ ಮತ್ತು ಈ ವರ್ಷ ಲಗ್ನಮಾಡಿಕೊಳ್ಳುವ ಇಚ್ಛೆಯಿದ್ದರೆ ಸಂಕ್ರಮಣದ ನಂತರ ಅದು ನಿಶ್ಚಯವಾಗಿ ಆಗುವದು. ಅಷ್ಟು ಬಾಸಿಂಗಬಲವಿದೆ. ವಧೂ ಇಲ್ಲವೆ ವರ ರೂಪದಿಂದ ಸರ್ವ ಸಾಧಾರಣವಿದ್ದರೂ ಗುಣದಿಂದ ಸರ್ವತ್ರಮಾನ್ಯವಾಗುವಂಥವರು ಮತ್ತು ದೈವದಿಂದಲೂ ಮುಂದೆ ಒಳ್ಳೇ ವೈಭವಕ್ಕೆ ಬರುವಂತಹರಿರುವರು. ಹೀಗೆ ಅನೇಕರ ಅನುಭವಕ್ಕೆ ಬರುವದು.

ನಿಮ್ಮ ಮಕ್ಕಳ ಮದುವೆ ಮಾಡುವದಿದ್ದರೆ ಗಂಡು ಮಕ್ಕಳಿಗೆ ಸಂಕ್ರಮಣಕ್ಕಿಂತ ಮೊದಲು ಮತ್ತು ಹೆಣ್ಣು ಹುಡಿಗೆಯರಿಗೆ ಅನಂತರ ಒಳ್ಳೇ ಬಾಶಿಂಗ ಬಲವಿದೆ. ಅರ್ಥಾತ್ ಈ ವರ್ಷ ಅದು ಆಗಿಯೇ ತೀರುವದೆಂಬ ಖಾತ್ರಿಯಿದೆ. ಅಷ್ಟು ಅನಾಯಾಸವಾಗಿ ಲಗ್ನ ಕೂಡಿಬರುವದು. ಮತ್ತು ನಿಶ್ಚಿತ ಮುಹೂರ್ತಕ್ಕೆ ಲಗ್ನವಾಗಿ ತೀರುವದು. ಆದರೆ ಎಪ್ರಿಲ ೧೧ ಕ್ಕಿಂತ ಮೊದಲು ಲಗ್ನವಾದರೆ ಉಭಯ ಪಕ್ಷಗಳಲ್ಲಿ ಸ್ವಲ್ಪ ತಕರಾರು ಮತ್ತು ಬಾಯಿಗೆ ಬಾಯಿ ಹತ್ತುವ ಸಂಭವವಿದೆ. ಸೊಸೆ ಇಲ್ಲವೆ ಅಳಿಯ ಬುದ್ಧಿಮತ್ತೆ ಮೊದಲಾದ ವಿಷಯಗಳಲ್ಲಿ ಬಹಳ ಉತ್ತಮ. ಆದರೆ ಸ್ವಭಾವದಿಂದ ಆಗ್ರಹದ್ದು, ಎರಡನೆಯವರ ಪರಿವೆ ಇಲ್ಲದವನು. ಮಕ್ಕಳಲ್ಲಿ ಅನೇಕರ ಉತ್ಕರ್ಷ ಸಂಕ್ರಮಣದ ನಂತರ ಆಗುವದು ಮತ್ತು ಅದರಲ್ಲಿಯೂ ಒಬ್ಬ ಮಗನ ಮತ್ತು ಒಬ್ಬ ಮಗಳ ಉತ್ಕರ್ಷ ವಿಶೇಷವಾಗುವದು. ಅವರು ಮತ್ತು ನಿಮ್ಮಲ್ಲಿ ಮನಸ್ಸಿನಿಂದ ಆಗದಿದ್ದರೂ ಹೊರಗಿನಿಂದಲಾದರೂ ಲೌಕಿಕ ದೃಷ್ಟಿಯಿಂದ ಬಹಳ ಉತ್ತಮ ಕೂಡಿ ನಡೆಯುವದು.

ಧಂದೆ, ಕೂಲಿಯವರಿಗೆ ಈ ವರ್ಷ ಅಪೂರ್ವ ಉತ್ಕರ್ಷದ್ದಾಗುವದು. ಸಂಕ್ರಮಣದನಂತರ ಅದರ ಪೂರ್ಣ ಸತ್ಯತೆ ಕಂಡುಬರುವದು. ಧಂದೆಯವರ ಜೋರು ಬಹಳಾಗಿ ಸಂಕ್ರಮಣದ ನಂತರ ಮದೋನ್ಮತ್ತವಾಗುವಷ್ಟು ದ್ರವ್ಯಲಾಭ ಹೆಚ್ಚಿಗೆ ಆಗುವದು. ಆಯುಷ್ಯದಲ್ಲಿ ಹಿಂದೆಂದೂ ಇಂಥ ಯೋಗ ಬಂದಿಲ್ಲ. ಮುಂದೆಯೂ ಬರುವಂತಿಲ್ಲ. ಇಷ್ಟು ಮಹತ್ವದರ್ಶಕಯೋಗವಿದೆ ಈ ವರ್ಷ. ನೋಕರರಿಗೂ ವಿಪುಲಲಾಭವಾಗಿ ಅನೇಕರಿಗೆ ಮೇಲಿನ ಗ್ರೇಡು ಅನಾಯಾಸದಿಂದ ಸಿಕ್ಕುವದು. ಬದಲಿಯಾದರೆ ಎಲ್ಲ ದೃಷ್ಟಿಯಿಂದ ಬಹಳ ಸೋಯಿಸ್ಕರ ಮತ್ತು ಮಹತ್ವ ಹೆಚ್ಚುವಂಥ ಸ್ಥಳಕ್ಕೆ ಆಗುವದು. ಕೈಕೆಳಗಿನವರಂತೆ ವರಿಷ್ಠರೂ ನಿಮ್ಮ ಮುಷ್ಟಿಯಲ್ಲಿಯೇ ಇರುವರು. ಇಂಥ ವಿಷಯಗಳಲ್ಲಿ ನವಂಬರ ೨೪ರಿಂದ ಡಿಸೆಂಬರ ೫, ಮಾರ್ಚ ೨೪ ರಿಂದ ಮೇ ೩, ಮತ್ತು ಜೂನ ೧೨ ರಿಂದ ಜುಲೈ ೨೪ ಈ ಕಾಲ ಬಹಳ ಸಂಸ್ಮರಣೀಯವೆನಿಸುವದು ಪ್ರಿಯ ಜನರ ಭೆಟ್ಟಿ ಸಹವಾಸ ಸದಾಕಾಲ ಲಭಿಸುವದು. ಅನೇಕರ ಬೇಡಿಕೆಗಳನ್ನು ಪೂರೈಸುವದಕ್ಕಾಗಿ ಮನಃಪೂರ್ವಕ ಭಾರ ಹೊರಬೇಕಾಗುವದು. ಮತ್ತು ಕೀರ್ತಿಯ ಕಾರ್ಯ ಮಾಡುವಿರಿ. ಯಾತ್ರೆಯ ಯೋಗ ಕ್ವಚಿತ್ತಾಗಿಯೇ. ಆದರೆ ಸಂಕ್ರಮಣದ ನಂತರ ಮನೆಯಲ್ಲಿಯ ಇಲ್ಲವೆ ಗ್ರಾಮದ ದೇವತಾರ್ಚನೆಯ ಕೆಲ ನೈಮಿತ್ತಿಕ ಧಾರ್ಮಿಕ ಕೃತ್ಯಗಳನ್ನು ಮಾಡುವಿರಿ. ನೋಕರಿಗಾಗಿ ಇಲ್ಲವೆ ಧಂದೆಗಾಗಿ ದೂರದ ಪ್ರವಾಸ ಒಂದೆರಡು ಸಲ ನಿಶ್ಚಿತವಾಗಿ ಸಂಭವಿಸುವದು. ಅದು ಸುಖಕರವೆನಿಸಿ ಉದ್ದೇಶವೂ ಸಾಧಿಸುವದು. ಸಂಕ್ರಮಣದ ನಂತರ ಮಿತ್ರಸುಖ ಬಹಳ ಉತ್ತಮ ಮತ್ತು ಅಂದಿನಿಂದ ಅವರ ಉತ್ಕರ್ಷವೂ

ವೇಗದಿಂದ ಆಗುವ ಸಂಭವ ಬಹಳಿದೆ. ಎಪ್ರಿಲ ೧೧ ರ ವರೆಗೆ ಸ್ವಲ್ಪ ಭಯಾನಕ ಆದರೆ ಅನಂತರ ಅತ್ಯಂತ ಶುಭಸೂಚಕ ಸ್ವಪ್ನಬೀಳುವದು ಮತ್ತು ಅವುಗಳ ಅನುಭವ ಅನೇಕರಿಗೆ ತತ್ಕಾಲದಲ್ಲಿ ಬರುವದು. ಸಣ್ಣ ದೊಡ್ಡ ವೆಚ್ಚ ವ್ಯವಸ್ಥಿತವಾಗಿ ಆಗಿ ಬಹಳ ಸಂಗ್ರಹ ಮಾಡುವಿರಿ, ಬಂಗಾರ ಕೊಳ್ಳುವಿರಿ ಇಲ್ಲವೆ ರೋಖ ಹಣ ಕೂಡಿಡುವಿರಿ ಅಥವಾ ಸ್ಥಾವರ ಜಂಗಮ ಆಸ್ತಿಯನ್ನಾದರೂ ಹೆಚ್ಚಿಸುವಿರಿ. ಈ ಬಗೆಯ ಯೋಗವಿದೆ. ಅತ್ಯಂತ ಸಮೀಪದ ಆಪ್ತರು ಸ್ವಲ್ಪ ಅನನುಕೂಲರಾಗಿ ವರ್ತಿಸುವರು. ಆದರೆ ದೂರದಿಂದ ಅತ್ಯಂತ ಪ್ರೇಮದಿಂದ ವರ್ತಿಸುವರು. ವಾಹನ ಸುಖ ಬೇರೆ ಬೇರೆ ಬಗೆಯದು ಮತ್ತು ಉತ್ತಮ ದೊರೆಯುವದು. ಸಭಾಸ್ಥಾನದಲ್ಲಿ ಬಹುಮಾನ ಆಗುವದು. ಮತ್ತು ಒಟ್ಟಿಗೆ ಸಾಮಾಜಿಕ ಮತ ಉತ್ತಮ ಉಳಿಯುವದು. ಅನೇಕರು ಮಾಡಿದ ಕಾರ್ಯಕ್ಕಾಗಿ ಪಾರಿತೋಷಕಗಳನ್ನು ಪಡೆಯುವರು. ಇಲ್ಲವೆ ಬಿರುದುಗಳನ್ನಾದರೂ ಪಡೆಯುವರು.

ದಾವೆ ಫಿರ್ಯಾದಿ ಖಾಸಗಿ ಸ್ಪರ್ಧೆಗಳಲ್ಲಿ ಹದಿನಾಲ್ಕು ಹದಿನೈದಾಣೆಯ ಯಶಸ್ಸು ದೊರೆಯುವದು. ಸಂಕ್ರಮಣದ ವರೆಗೆ ಶತ್ರುಗಳು ನೋರೆ ಮೇಲೆತ್ತಲು ಬಹಳ ಸಾಹಸಪಡುವರು. ಆದರೆ ಅನಂತರ ಅದೂ ಪೂರ್ಣವಾಗಿ ನಿಂತುಹೋಗುವದು. ಆಪ್ತರಲ್ಲಿಯ ಒಬ್ಬ ಸ್ತ್ರೀ ಮಾತ್ರ ನಿಮ್ಮನ್ನು ಅತ್ಯಂತ ದ್ವೇಷಿಸುವಳು ಇಲ್ಲವೆ ನಿಮ್ಮ ನಿಂದೆಮಾಡುವಳು.

ಸಂಕ್ರಮಣಕ್ಕಿಂತ ಮೊದಲು ಹಡೆಯುವ ಸ್ತ್ರೀಯರು ಬಹುಶಃ ಹೆಣ್ಣು ಹಡೆಯುವರು. ಮತ್ತು ಅನಂತರ ಹಡೆವವರು ಗಂಡುಮಗನನ್ನು ಹಡೆಯುವರು. ಆದರೆ ಜನೆವರಿ ೫ರಿಂದ ಫೆಬ್ರುವರಿ ೧೪ ರ ವರೆಗಿನ ಕಾಲದಲ್ಲಿ ಮಾತ್ರ ಸ್ವಲ್ಪ ಪ್ರಸೂತಿ ಕಷ್ಟವೆನಿಸುವದು. ಅರ್ಥಾತ್ ಉಳಿದ ಯಾವದೇ ಸಮಯದಲ್ಲಿ ಅತ್ಯಂತ ಸುಲಭ ಪ್ರಸವವಾಗುವದು.

ಯಾವ ವಿದ್ಯಾರ್ಥಿಗಳ ಪರೀಕ್ಷೆ ಸಂಕ್ರಮಣಕ್ಕಿಂತ ಮೊದಲು ಆಗುವದೊ ಅವರು ಪಾಸಾಗುವಷ್ಟು ಗುಣಗಳನ್ನು ಪಡೆಯುವದು ಕೂಡ ಕಠಿಣ ಹೋಗುವದು. ಅನಂತರ ಎಪ್ರಿಲ ೧೧ ರ ವರೆಗೆ ಯಾರ ಪರೀಕ್ಷೆಯಾಗುವದೋ ಅವರು ಪಾಸಾಗುವಷ್ಟು ಗುಣ ನಿಶ್ಚಯವಾಗಿ ದೊರಕಿಸುವರು. ಮತ್ತು ಅನಂತರ ಯಾರ ಪರೀಕ್ಷೆಯಾಗುವದೋ ಅವರು ಬಹುಶಃ ವರ್ಗ ಪಡೆದ ಆನಂದವನ್ನು ಉಪಭೋಗಿಸುವ ಯೋಗವಿದೆ.

ಅನೇಕರು ನಿಮಗೆ ದೊಡ್ಡತನವನ್ನು ಕೊಟ್ಟು ನಡೆದುಕೊಳ್ಳುವರು.

ನಿಮ್ಮ ಮಕ್ಕಳ ಮದುವೆಯನ್ನು ಮಾಡುವದಿದ್ದರೆ ಅದಕ್ಕೂ ಸಂಕ್ರಮಣದ ವರೆಗೆ ಪ್ರಬಲ ಯೋಗವಿದೆ. ಅನಂತರ ಮಾತ್ರ ಅದು ಸ್ವಲ್ಪ ಕಷ್ಟಸಾಧ್ಯವಾಗುವ ಬಾಶಿಂಗಬಲವಿದೆ. ಆದರೆ ಎಪ್ರಿಲ ೧೧ರ ವರೆಗೆ ಆಗುವ ಕಾರ್ಯ ಕಲ್ಪನೆಗಿಂತ ಹೆಚ್ಚು ಸುಸೂತ್ರ ಆಗುವವು. ಆದರೆ ಅನಂತರ ಆದರೆ ಅನಾಹುತ ಅಡಚಣೆಗಳು ಬಂದು ಮನೋಭಂಗವಾಗಿ ಹೆಚ್ಚು ವೆಚ್ಚ ಸಹಿಸಬೇಕಾಗುವದು. ಒಟ್ಟಾರೆ ಈ ವರ್ಷ ಮಕ್ಕಳ ಉನ್ನತಿಗೆ ಅನುಕೂಲವಾಗಿದ್ದರೂ ಸಂಕ್ರಮಣದ ವರೆಗೆ ಗಂಡುಹುಡುಗರ ಅನಂತರ ಹೆಣ್ಣುಹುಡಿಗೆಯರ ಉತ್ಕರ್ಷ ಹೆಚ್ಚಿಗೆ ಆಗುವದು. ಈ ಅನುಭವ ನಿಮಗೆ ಕಂಡುಬರುವದು. ಅವರಲ್ಲಿ ಮತ್ತು ನಿಮ್ಮಲ್ಲಿ ಒಳ್ಳೇ ಕೂಡಿ ಬರುವದು ಆದರೆ ದೂರ ಸ್ಥಲಾಂತರದಿಂದ ಮನಸ್ಸಿನಲ್ಲಿ ಬಹಳ ಅಸ್ವಸ್ಥತೆಯೆನಿಸುವದು. ವಿರಹವ್ಯಥೆಯು ಬಾಧಿಸಹತ್ತುವದು. ಸೊಸೆ ಇಲ್ಲವೆ ಅಳಿಯ ರೂಪಗುಣಗಳಿಂದ ಇತರರಿಗೆ ಎಷ್ಟು ಮಾನ್ಯರಾಗುವರೊ ಅಷ್ಟುಸ್ವತಃ ನಿಮಗೆ ಆಗುವದಿಲ್ಲ ಇಂತಹ ಯೋಗವಿದೆ. ನಿಮ್ಮ ವರ್ಚಸ್ಸು ಅವರ ಮೇಲೆ ಹೆಚ್ಚಿಗೆ ಉಳಿಯುವದಿಲ್ಲ. ಅವರಾದರೂ ನಿಮಗೆ ಹೆಚ್ಚು ಮರ್ಯಾದೆ ಕೊಡುವದಿಲ್ಲ. ಈ ಬಗೆಯ ಯೋಗವೂ ಇದೆ.

ಈ ವರ್ಷವಿಡೀ ದಶಮ ಶನಿ, ಸಂಕ್ರಾಂತಿಯ ವರೆಗೆ ನವಮ ಅಂದರೆ ಭಾಗ್ಯಸ್ಥಾನದ ಮತ್ತು ಅನಂತರ ಧನು ಈ ಸ್ವರಾಶಿಯಲ್ಲಿಯ ಲಾಭೇಶ ಶನಿಯೊಡನೆ ಯುತಿಹೊಂದುವ ದಶಮಗುರು ಮತ್ತು ಎಪ್ರಿಲ೧೧ರಿಂದ ಬರುವ ಷಷ್ಠ ರಾಹು ಹೀಗೆ ಅಪೂರ್ವ ಪ್ರಬಲ ಗ್ರಹಮಾನದಿಂದ ಧಂದೆ ಕೂಲಿಯವರಿಗೆ ಅತಿಶಯ ಉತ್ಕರ್ಷದ್ದು ಇದೆ. ನಿಮ್ಮ ಕರ್ತೃತ್ವದ ವರ್ಚಸ್ಸು ಹೆಚ್ಚಿಗೆ ಬೀಳುವದು. ಮತ್ತು ವಿಪುಲ ಲಾಭವಾಗುವದು. ಇದರಲ್ಲಿ ಸ್ವಲ್ಪೂ ಸಂಶಯವಿಲ್ಲ. ಅದರಲ್ಲಿಯೂ ಸಂಕ್ರಾಂತಿಗಿಂತ ಮೊದಲು ಧಂದೆಯವರಿಗೆ ಅನಂತರ ಎಪ್ರಿಲ ೧೧ ಕ್ಕೂ ಮೊದಲು ಅರೆ ಸರಕಾರಿ ಶಾಖೆಯಲ್ಲಿ ನೋಕರಿ ಮಾಡುವವರಿಗೆ ಮತ್ತು ಅನಂತರ ಪೂರ್ಣ ಸರಕಾರಿ ನೋಕರಿ ಮಾಡುವವರಿಗೆ ಅತ್ಯಂತ ಉತ್ಕರ್ಷದ್ದಾಗಿ ಪರಿಣಮಿಸುವದು. ದುರ್ಘಟ ಕೆಲಸಗಳು ಸ್ವಲ್ಪ ಶ್ರಮದಿಂದ ಮತ್ತು ಪ್ರಯತ್ನದಿಂದ ಪಾರಾಗುವವು. ಧಂದೆಯವರು ಅನೇಕ ಕಡೆ ಉಪಶಾಖೆಗಳನ್ನು ತೆಗೆಯುವ ಯೋಗವಿದೆ. ನೋಕರರಿಗೆ ಮೇಲಿನ ಗ್ರೇಡು ಎಪ್ರಿಲ ೧೧ ರನಂತರ ನಿಶ್ಚಯವಾಗಿ ಸಿಕ್ಕುವದು. ಅನೇಕರಿಗೆ ಅನಪೇಕ್ಷಿತವಾಗಿಯೂ ದ್ರವ್ಯಲಾಭವಾಗುವ ಯೋಗವಿದೆ. ವರಿಷ್ಠರ ಮರ್ಜಿ ಸಂಕ್ರಮಣದನಂತರ ಬಹಳ ಹೆಚ್ಚುವದು. ಬದಲಿ ಬೇಕಾ

## ಮೀನ

ಈ ರಾಶಿಯವರಿಗೆ ಈ ವರ್ಷ ಕಿರಕಳ ತೊಂದರೆಗಳನ್ನು ಬಿಟ್ಟರೆ ಉಳಿದೆಲ್ಲ ವಿಷಯಗಳಲ್ಲಿ ಒಳ್ಳೆ ಉತ್ಕರ್ಷದ್ದಾಗಿ ಪರಿಣಮಿಸುವದು. ಇದು ನಿಶ್ಚಿತವೆಂದು ತಿಳಿಯಿರಿ.

ಈ ರಾಶಿಯ ಜನರ ಆರೋಗ್ಯ ಈ ವರ್ಷ ಎಪ್ರಿಲ ೧೧ ರ ವರೆಗೆ ಅಲ್ಪ ಸ್ವಲ್ಪ ಕಿರಿಕಿರಿಯದೆನಿಸಿದರೂ ಅನಂತರ ಷಷ್ಠ ರಾಹುವಿನಿಂದ ಆದೊಳ್ಳೆ ನಿರೋಗಿ ಉಳಿಯುವದು. ವಿಶೇಷವಾಗಿ ನವಂಬರ ೨೪ರ ವರೆಗೆ ಮತ್ತು ಮಾರ್ಚ ೨೪ ರಿಂದ ಎಪ್ರಿಲ ೧೧ ರ ವರೆಗೆ ಪಿತ್ತ ವಿಕಾರವಿದ್ದವರು ಹೆಚ್ಚು ಜಪ್ಪಿಸಬೇಕು. ಉಳಿದ ವಿಷಯಗಳಲ್ಲಿ ಈ ವರ್ಷ ನವಂಬರ ೨೪ ರಿಂದ ಬಹಳ ಸಮಾಧಾನದ್ದೆನಿಸುವದು.

ಹೆಂಡತಿಯ ಆರೋಗ್ಯ ಕೂಡ ನಿಮ್ಮಂತೆಯೇ ಎಪ್ರಿಲ ೧೧ರಿಂದ ಒಳ್ಳೆ ನಿರೋಗಿ ಉಳಿಯುವದು. ಅವರೆಗೆ ಮತ್ತು ವಿಶೇಷತ: ನವಂಬರ ೨೪ರಿಂದ ಜನೆವರಿ ೫ರ ವರೆಗೆ ಅದು ಅಲ್ಪ ಸ್ವಲ್ಪ ಕೆಡುವ ಸಂಭವವಿದೆ. ಯಾರಿಗೆ ಸಂಧಿವಾತ, ಮಧುಮೇಹ ಇರುವವೊ ಅವರು ಈ ಸಮಯದಲ್ಲಿ ಹೆಚ್ಚು ಜಪ್ಪಿಸಬೇಕು. ಈ ವರ್ಷ ನಿಮ್ಮದು ಅವಳದು ಒಳ್ಳೆ ಚೆನ್ನಾಗಿ ಕೂಡುವದು. ಆದರೆ ನಿಮ್ಮ ಮನಸ್ಸಿನಲ್ಲಿಯೇ ಅವಳ ಬಗ್ಗೆ ಯಾವಾಗಾದರೊಮ್ಮೆ ಅನುದಾರ ವೃತ್ತಿಯ ವಿಚಾರ ಬರುವವು. ಗುಪ್ತರೀತಿಯಿಂದ ಇಂಥ ವಿಚಾರ ತಲೆಯಲ್ಲಿ ಸೋಕುವವು. ಮಾರ್ಚ ೯ ರಿಂದ ಎಪ್ರಿಲ ೩ ಮತ್ತು ಅಗಷ್ಟ ೩ ರಿಂದ ೨೬ ಈ ಕಾಲದಲ್ಲಿ ಉಭಯತರಲ್ಲಿ ಯಾರಾದರೊಬ್ಬರು ಗ್ರಾಮಾಂತರ ಹೋಗುವದರಿಂದ ಸಹವಾಸ ಸುಖ ದೊರೆಯದಂತಾಗುವದು. ಒಂದು ವೇಳೆ ನಿಮ್ಮ ಲಗ್ನವಿನ್ನೂ ಆಗಿರದಿದ್ದರೆ ಮತ್ತು ಈ ವರ್ಷ ಮಾಡಿಕೊಳ್ಳುವ ಇಚ್ಛೆಯಿದ್ದರೆ ಇಡಿ ವರ್ಷ ಅದಕ್ಕೆ ಒಳ್ಳೆ ಬಾಸಿಂಗಬಲವಿದೆ. ಅದರಲ್ಲಿಯೂ ಸಂಕ್ರಮಣದ ವರೆಗೆ ವಿಶೇಷ ಬಲಿಷ್ಠ ಯೋಗವಿರುವದರಿಂದ ಆವರೆಗೆ ಅನಾಯಾಸವಾಗಿ ಕೂಡುವದು. ಆದರೆ ಎಪ್ರಿಲ ;೧೧ ಕ್ಕಿಂತ ಮೊದಲು ಆಗುವ ಕಾರ್ಯಗಳಲ್ಲಿ ಸ್ವಲ್ಪ ಕಿಟಕಿಟಯುಂಟಾಗುವ ಸಂಭವವೂ ಇದೆ. ವಧೂ ಇಲ್ಲವೆ ವರ ಮಾತ್ರ ಒಳ್ಳೆ ಮನಸ್ಸಿಗೆ ಬರುವಂಥವರು, ಬುದ್ಧಿವಂತರು, ಸಾಹಸಿಗಳು ಮತ್ತು ಕಲಾವಂತರು ಮತ್ತು ಪ್ರಭಾವಶೀಲರು ಇರುವರು. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕಸುಖಕ್ಕೆ ಈ ವರ್ಷ ಜನೆವರಿ ೫ ರಿಂದ ಫೆಬ್ರುಅರಿ ೧೪ ಈ ಕಾಲವನ್ನು ಬಿಟ್ಟರೆ ಉಳಿದ ಸಮಯದಲ್ಲಿ ಅನುಕೂಲವಾಗಿರುವದು. ಪ್ರಿಯ ಆಪ್ತರ ಸಹವಾಸ ಮೇಲಿಂದ ಮೇಲೆ ಸಂಭವಿಸುವದು. ಅನೇಕರಿಗೆ ತಾವು ಸಂಪಾದಿಸಿದ್ದರಲ್ಲಿಯೇ ಕೊಂಡ ವಾಹನಗಳ ಸುಖ ಚೆನ್ನಾಗಿ ದೊರೆಯುವದು.

ಹಾಗ ಆದರೂ ಅತ್ಯಂತ ಸುಖ ಸೌಕರ್ಯಗಳ ಸ್ಥಳಕ್ಕೆ ಆಗುವದು. ನವಂಬರ ೨೪ ರಿಂದ ಜನೇವರಿ ೫, ಫೆಬ್ರುಅರಿ ೧೪ ರಿಂದ ಮಾರ್ಚ ೨೪ ಮತ್ತು ಮೇ ೩ ರಿಂದ ಸಪ್ಟಂಬರ ೧೦ ಈ ಅವಧಿಯಲ್ಲಿ ವಿಶೇಷ ದ್ರವ್ಯ ಲಾಭವಾಗುವದು ಇಲ್ಲವೆ ಅಪೇಕ್ಷಿತ ವಿಷಯಗಳಲ್ಲಿ ಯಶಸ್ಸು ದೊರೆಯುವದು. ಮಿತ್ರಸುಖ ಸಂಕ್ರಮಣ ನಂತರ ನಿಮ್ಮ ಇಲ್ಲವೆ ಅವರ ಯಾವದೊಂದು ತಪ್ಪಿನಿಂದ ಅಲ್ಪ ಸ್ವಲ್ಪ ಕೆಡುವ ಸಂಭವವಿದೆ. ಅವರಲ್ಲಿ ಕೆಲವರ ಉನ್ನತಿ ಸಂಕ್ರಮಣಕ್ಕಿಂತ ಮೊದಲು ಬಹಳ ಹೆಚ್ಚಿಗೆ ಆಗುವದು. ಕೊಡ ಕೊಳ್ಳುವ ನಿಮ್ಮ ವ್ಯವಹಾರವಿದ್ದರೆ ಅವೆಲ್ಲ ಬಹುತರವಾಗಿ ನಿವಾರಣೆಹೊಂದುವವು. ಅನೇಕರು ಬಗೆ ಬಗೆಯಿಂದ ಸಂಗ್ರಹವನ್ನು ಹೆಚ್ಚಿಸಿಕೊಳ್ಳುವದು ಸಂಕ್ರಮಣಕ್ಕಿಂತ ಮೊದಲು ಯಾವದಾದರೊಂದು ಯಾತ್ರೆ ಸಂಭವಿಸುವದು. ಇಲ್ಲವಾದರೆ ಒಂದಾದರೂ ನೈಮಿತ್ತಿಕ ದೇವಕಾರ್ಯ ನಡೆಯುವದು. ದೂರದ ಪ್ರವಾಸ ಎರಡು ಮೂರು ಸಲ ಸಂಭವಿಸುವದು ಮತ್ತು ಅದರಲ್ಲಿಯು ಹೇತು ವ್ಯವಸ್ಥಿತವಾಗಿ ಸಾಧಿಸುವದು ಅದರಂತೆ ಭೆಟ್ಟಿಯ ಕೆಲಸ ಮತ್ತು ಎಂಥದೆ ಲೇಖನ ಕೆಲಸಗಳೂ ಮನಸ್ಸಿನಂತೆ ಸಾಧಿಸುವುವು. ಸಂಕ್ರಮಣದ ನಂತರ ದೊಡ್ಡವರ ಭೆಟ್ಟಿಯು ಯೋಗ ಮೇಲಿಂದ ಮೇಲೆ ಲಭಿಸಿ ಅದರಲ್ಲಿಯು ಮನೋದಯ ಚೆನ್ನಾಗಿ ಸಾಧಿಸುವುದು ಒಟ್ಟಾರೆ ಔದ್ಯೋಗಿಕ ವಿಸ್ತಾರ ಮತ್ತು ಆರ್ಥಿಕ ಲಾಭಕ್ಕೆ ಈ ವರ್ಷ ಹಿಂದಿನ ಅನೇಕ ವರ್ಷಗಳಿಗಿಂತ ಬಹಳ ಉತ್ತಮ ಮತ್ತು ಕೆಲ ವರ್ಷಗಳಲ್ಲಿ ಸಂಸ್ಮರಣೀಯವೆನಿಸುವುವು. ಇದು ನಿಶ್ಚಯವೆಂದು ತಿಳಿಯಿರಿ.

ದಾವೆ ಫಿರ್ಯಾದಿ ಮತ್ತು ಖಾಸಗಿ ಸ್ಪರ್ಧೆಗಳ ಕೆಲಸಗಳಲ್ಲಿ ಎಪ್ರಿಲ ೧೧ ರ ವರೆಗೆ ಶತ್ರುಗಳ ಜೋರು ಬಹಳ ಹೆಚ್ಚು. ಕೆಲ ಕೆಲಸಗಳಲ್ಲಿ ಅವರ ವಿಜಯಗಳಾಗುವ ಸಂಭವವು ಇದೆ. ಆದರೆ ಅನಂತರ ಮಾತ್ರ ನಿಮಗೆ ಸಂಪೂರ್ಣ ಯಶಸ್ಸು ದೊರೆತು ಅನಿವಾರ್ಯ ಸಂಕಟಗಳು ಕೂಡ ಸಮೂಲವಿಚ್ಛೇದವಾಗುವವು ಇದರಲ್ಲಿ ಸಂದೇಹವಿಲ್ಲ.

ಈ ರಾಶಿಯ ಸ್ತ್ರೀಯರು ಈ ಸಲ ಹಡೆಯುವದಿದ್ದರೆ ಸಂಕ್ರಾಂತಿ ಪೂರ್ವದಲ್ಲಿ ಅತ್ಯಂತ ಸುಲಭ ಹಡೆಯುವರು ಆದರೆ ಬಹುತರ ಸ್ತ್ರೀಯರಿಗೆ ಹೆಣ್ಣು ಹುಟ್ಟುವದರಿಂದ ಮನಸ್ಸು ರಂಜಿತವುಳಿಯುವದು ಆದರೆ ಸಂಕ್ರಾಂತಿ ನಂತರ ಹಡೆದರೆ ಅವರಲ್ಲಿ ಅನೇಕರು ಗಂಡು ಹಡೆಯುವದರಿಂದ ಆ ಆನಂದದಲ್ಲಿ ಪ್ರಸೂತಿ ಕಷ್ಟವನ್ನು ಮರೆತು ಬಿಡುವರು.

ಯಾವ ವಿದ್ಯಾರ್ಥಿಗಳ ಪರೀಕ್ಷೆ ಸಂಕ್ರಮಣಕ್ಕಿಂತ ಮೊದಲು ಆಗುವದೋ ಅವರು ವರ್ಗವನ್ನು ದೊರಕಿಸುವರು. ಆದರೆ ಅನಂತರ ಯಾರ ಪರೀಕ್ಷೆ ಆಗುವದೊ ಅವರು ಕೆಳಗಿನ ವರ್ಗದಲ್ಲಿಯಾದರೂ ಪಾಸಾಗುವಷ್ಟು ಸುದೈವಿಗಳಾಗಿರುವರು.

**ಸರ್ವೇ ಜನಾಃ ಸುಖಿನೋ ಭವಂತು**

## — ಮೌನ —

ಮೌನವು ನಾಲ್ಕು ಬಗೆಯದಾಗಿರುವದು : ಮಾತಿನ ಮೌನ, ದೃಷ್ಟಿ ಮೌನ, ಶ್ರವಣ ಮೌನ ಹಾಗೂ ಮನದ ಮೌನ ಎಂದು. ಇವುಗಳಲ್ಲೂ ಕೊನೆಯದು ಶುದ್ಧವಾದ ಮೌನವಾಗಿದ್ದು ಅತ್ಯಂತ ಮಹತ್ವದ್ದಾಗಿರುವದು. ಮೌನದ ಮೇಲೆ ದಕ್ಷಿಣಾಮೂರ್ತಿಗಳು ತುಂಬ ಉತ್ಕೃಷ್ಟವಾಗಿ ಭಾಷ್ಯ ಮಾಡಿರುವರು. ನಿತ್ಯ ನುಡಿ, ಒಂದು ನುಡಿ, ಹೃದಯ ಹೃದಯಗಳ ಮಾತೇ ಮೌನ ಎಂದವರು ಒಡನುಡಿದಿದ್ದಾರೆ.

ಮೌನವು ವಿದ್ಯುತ್ಪ್ರವಾಹದಂತೆ ಸಮವಾದ ಪ್ರವಾಹವಾಗಿರುವದು. ಮಾತು ಈ ಪ್ರವಾಹವನ್ನು ದೀಪ ಮೊದಲಾದ ಉದ್ದೇಶಿಗಳಿಗೆ ತಡೆಗಟ್ಟಿದಂತಿರುವದು. ಜ್ಞಾನಿಯಾದವನು ಎಷ್ಟೇ ಮಾತನಾಡಲಿ ಅವನೇ ನಿಜವಾದ ಮೌನಿ. ಅವನೆಷ್ಟೇ ಕೆಲಸ ಮಾಡಲಿ ಅವನೇ ಶಾಂತನು. ಅವನದು ಅಶರೀರ ವಾಣಿ. ಅವನ ನಡಿಗೆ ಭೂಮಿಯ ಮೇಲಲ್ಲ. ಆಕಾಶವನ್ನು ಆಕಾಶದಿಂದ ಅಳೆದಂತೆ.

— ಶ್ರೀರಮಣ ಮಹರ್ಷಿ.

# ಸತ್ಯಶೋಧಕ

ಸಾಹಿತಿ ಶಂಕರ ತನ್ನ ಕಾದಂಬರಿಗಳು ಮಾಡಿದ ಪರಿಣಾಮವನ್ನು ಪ್ರತ್ಯಕ್ಷವಾಗಿ ಕಂಡುಕೊಂಡನು. ತನ್ನ ಮಗನ ಅಂಗಡಿ ಸಹ ಅದರ ಪರಿಣಾಮವಾಗಿಯೇ ಲೂಟಿಯಾಗಿದ್ದಿತು. ಆದರೆ ಇದೆಲ್ಲ ಅವನು ಕಂಡುದು ಕನಸಿನಲ್ಲಿ. ಅದೇ ಅವನಿಗೆ ಹೊಸ ಪಾಠ ಕಲಿಸಿತು. ಅದೇನೆಂಬುದನ್ನೇ ಈ ಕತೆ ನಿಮಗೆ ತೋರಿಸುತ್ತದೆ. . . . . . . .

ಕತೆಗಾರ್ತಿ : ಶ್ರೀಮತಿ ಎಸ್. ಕೆ ಜಯಲಕ್ಷ್ಮಿ, ಕರಗಡ

ಜನರ ಅಸಾಧ್ಯ ನೂಕು ನುಗ್ಗಲನ್ನು ಕಂಡು ಶಂಕರನಿಗೆ ಅಚ್ಚರಿಯಾಯ್ತು. ಏಕಿಷ್ಟು ಗಲಾಟೆ? ಏಕಿಷ್ಟು ಅವಸರ? — ಎಂದು ಅತ್ತಿತ್ತ ನೋಡಿದ. ರಸ್ತೆಯಲ್ಲಿ ಹೋಗುವಾಗಲೂ ತನ್ನ ಕಲ್ಪನಾ ಪ್ರಪಂಚದಲ್ಲೇ ತಲ್ಲೀನನಾಗಿ ವಾಸ್ತವತೆಯನ್ನು ಮರೆವ ಸ್ವಭಾವ ಅವನದು. ಹಿಂದಿನಿಂದ ಜನರ ಒತ್ತಡ ಬಂದಂತೆ ಮೆಲ್ಲಮೆಲ್ಲನೆ– ನಿರುದ್ದೇಶವಾಗಿಯೇ– ಹೆಜ್ಜೆ ಹಾಕುತ್ತ ನಡೆದ.

ದಾರಿಯಂಚಿನಲ್ಲಿ ಜನರ ಗುಂಪು ಸೇರಿತ್ತು. ಯಾರೋ ಜಗಳವಾಡಿ ಕೂಗಾಡುತ್ತಿದ್ದರು. ಶಂಕರ ಗುಂಪಿನಲ್ಲಿ ಜಾಗ ಮಾಡಿಕೊಂಡು ಇಣಕಿ ನೋಡಿದ. ಇಪ್ಪತ್ತು – ಇಪ್ಪತ್ತೆರಡರ ಯುವಕನನ್ನು ಇನ್ನೊಬ್ಬಾತ ಸಿಕ್ಕಿದಂತೆ ಚಚ್ಚುತ್ತಿದ್ದ. ಅವನ ತಪ್ಪೇನೆಂದು ಕೇಳಿದಾಗ ಗುಂಪಿನವನೊಬ್ಬ ಉತ್ತರಿಸಿದ.

"ನೋಡ್ರಿ, ಆ ಹುಡುಗ ಪರದೇಶಿ ಅಂತಾ ಕನಿಕರದಿಂದ ಮನೇಲಿ ಜಾಗ ಕೊಟ್ಟು, ಓದುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದ ರಂಗಪ್ಪ. ಈತ ಆ ರಂಗಪ್ಪನ ಮಗಳಿಗೆ ಮದುವೆಯಾಗ್ತೇನೆ ಅಂತಾ ನಂಬಿಸಿ ಕೈಕೊಟ್ಟು ತಲೆ ತಪ್ಪಿಸಿಕೊಳ್ಳೋದೆ? ಆ ಹುಡುಗಿ ಆತ್ಮಹತ್ಯೆ ಮಾಡಿಕೊಂಡಳು. ರಂಗಪ್ಪ ಇವನು ಸಿಕ್ಕಿದರೆ ತಕ್ಕ ಶಿಕ್ಷೆ ಕೊಡ್ಬೇಕು ಅಂತಾ ಕಾಯ್ತಾ ಇದ್ದ. ಈ ದಿನ ಸಿಕ್ಕಿದ್ದಾನೆ."

ಶಂಕರ ಮುಂದೆ ನುಗ್ಗಿ ಸಮಾಧಾನ ಹೇಳಿ ಆ ಯುವಕನನ್ನು ಬಿಡಿಸಿದ. ಯುವಕ ಶಂಕರನನ್ನೇ ದಿಟ್ಟಿಸುತ್ತಾ ಅವನೊಡನೆ ನಡೆದ.

"ನೀವು.... ನೀವು ಸಾಹಿತಿ ಶಂಕರರಲ್ಲವೇ? ನನ್ನ ಸರ್ವನಾಶಕ್ಕೂ ಕಾರಣರಾದವರು ನೀವಲ್ಲವೇ?"

ಎಂದು ಆಕ್ಷೇಪಿಸಿದಾಗ, ಶಂಕರ ಮೆಟ್ಟಿ ಬಿದ್ದ.

"ಇದೇನಯ್ಯಾ? ಏಟು ತಿಂದು ಪ್ರಾಣಬಿಡುತ್ತಿದ್ದವನನ್ನು ಬಿಡಿಸಿದೆ. ಇದೇನಾ ನಿನ್ನ ಉಪಕಾರಸ್ಮರಣೆ?"

ಅವನು ಸಂತಾಪದಿಂದ ಹೇಳಿದ —

"ಹಾಗೆ ಏಟು ತಿನ್ನುವಂತಾಗಲು ಕಾರಣ ಗೊತ್ತೇನು? ನಿಮ್ಮ ಸಾಹಿತ್ಯವೇ. ನೀವೇ ನನ್ನ ಆರಾಧ್ಯಸಾಹಿತಿ. 'ನಿಮ್ಮ ಪ್ರೇಮವೇ ದೈವ' ಕಾದಂಬರಿಯನ್ನೋದಿದೆ. ನನ್ನ ಹೆಸರೂ ಷಣ್ಮುಖ, ನಿಮ್ಮ ಕಾದಂಬರಿಯ ನಾಯಕನ ಹೆಸರೇನೇ! ನಿಮ್ಮ ಕಾದಂಬರಿಯ ನಾಯಿಕೆಯಂತೆಯೇ ರೂಪದಲ್ಲಿ ಹೆಸರಿನಲ್ಲಿ ಸದೃಶಳಾದ ಸುಂದರಿನ ಪ್ರೇಮದೇವತೆ ಎಂದು ಭಾವಿಸಿದೆ. ಕಾಸಿನ ಸಂಪಾದನೆಯಿಲ್ಲ, ಸಲಹುವ ಪೋಷಕರಿಲ್ಲ–ತಲೆ ಮರೆಸಿಕೊಳ್ಳದೆ ಇನ್ನೇನು ಮಾಡಲಿ? ಷಣ್ಮುಗನ ಬಾಳಿನಂತೆ ಸುಖಾಂತವಾಗಲು ಹೇಗೆ ಸಾಧ್ಯ? ಸುಂದರಿ ಕಣ್ಮರೆಯಾದರೂ ಅವಳ ಉರಿನೆನಪು ನನ್ನನ್ನು ಹೇಗೆ ದಹಿಸುತ್ತಿದೆ ಗೊತ್ತೇ? ನನ್ನಬಾಳು ಹಾಳಾಗಲು ನೀವೇ ಕಾರಣ!"

ಶಂಕರ ಏನೋ ಹೇಳಬೇಕೆಂದು ಬಾಯ್ತೆರೆದ. ಅಷ್ಟರೊಳಗೆ ಪಕ್ಕದ ಗಲ್ಲಿಯೊಳಗೆ ನುಗ್ಗಿ ಷಣ್ಮುಗ ಕಣ್ಮರೆಯಾದ.

[ ಶಂಕರ ಯೋಚಿಸಿದ. ಮೂರು ದಶಕಗಳ ಹಿಂದೆ ಬರೆದ ಕಾದಂಬರಿ ಅದು. ಆಗ ಶಂಕರ ಅನನುಭವಿ, ಆದರೂ ಸತ್ಯಶೋಧಕ ಸತ್ಯವೆಂದು ಭಾಸವಾದುದನ್ನು ನಿರ್ಭಯವಾಗಿ ಪ್ರತಿಪಾದಿಸುತ್ತಿದ್ದ. ಶಂಕರ ಆಗ ಬಹು ಕಷ್ಟದಲ್ಲಿದ್ದ. ಕಾಫಿಪ್ಲಾಂಟರ್ ನರಸಯ್ಯ ಅವನಿಗೆ ವಾಸಿಸಲು ಕೃಪೆಯಿಂದ ಒಂದು ಕೋಣೆಯನ್ನು ಕೊಟ್ಟಿದ್ದರು. ಅವರ ಮಗಳು ಶಾರದೆಯ ಬಗ್ಗೆ ಅನೇಕ ಕನಸುಗಳನ್ನು ಕಟ್ಟಿದ್ದ. ಆಕಲ್ಪನೆಯ ಕನಸೇ 'ಪ್ರೇಮವೇ ದೈವ' ಕಾದಂಬರಿಯ ರೂಪವನ್ನು ತಾಳಿತ್ತು.

ಆದರೆ ಇಂದು ಅದೇ ಭಾವನೆ ಇದೆಯೇನು? ಇಂದು ಶಂಕರನಿಗೆ ಇಪ್ಪತ್ತೈದು ವರ್ಷದ ಮಗನಿದ್ದಾನೆ. ಆ ಮಗ ಹೀಗೆಯೇ 'ಪ್ರೇಮವೇ ದೈವ' ಎಂಬ ಹುಚ್ಚನ್ನು ತಲೆಗೆ ಹತ್ತಿಸಿಕೊಂಡು ಕುಲಗೋತ್ರವಿಲ್ಲದ ಹುಡುಗಿಯನ್ನು ಲಗ್ನವಾಗುವೆನೆಂದಾಗ, ಶಂಕರ ಎಂತಹ ಉಗ್ರ ಶಿಕ್ಷೆ ವಿಧಿಸಿದ್ದ! ಪಿತೃತ್ವದ ಅಧಿಕಾರ ಚಲಾಯಿಸಿ, ತಾನು ಗೊತ್ತುಮಾಡಿದ ಮನೆತನಸ್ಥ ಹುಡುಗಿಯೊಡನೆ ಅವನ ಲಗ್ನ ಮಾಡಿದ್ದ.

ತನ್ನ ಪಕ್ವ ಅನುಭವದ ಫಲವೆಂದು 'ನೂಲಿನಂತೆ ಸೀರೆ' ಎಂಬ ಕಾದಂಬರಿಯನ್ನು ಬರೆದು ತನ್ನ ಕಾರ್ಯವನ್ನು ಸಮರ್ಥಿಸಿಕೊಂಡಿದ್ದ.

ಷಣ್ಮುಖ ತನ್ನನ್ನೇಕೆ ಆಕ್ಷೇಪಿಸಬೇಕು? ತನ್ನ ಈಚಿನ ಕಾದಂಬರಿಯನ್ನೋದಿ ಬುದ್ಧಿ ಕಲಿಯಬಾರದಿತ್ತೇ? ]

ಹೀಗೆ ಯೋಚನೆಯಲ್ಲೇ ತನ್ಮಯನಾಗಿ ಮುಂದೆ ಸಾಗುತ್ತಿದ್ದಾಗ ಎದುರಿನಿಂದ ಭಿಕ್ಷುಕಿಯೊಬ್ಬಳು ಬಂದು ಡಿಕ್ಕಿ ಹೊಡೆದೇಬಿಟ್ಟಳು. ಶಂಕರ ಸಾವರಿಸಿಕೊಳ್ಳುವುದರೊಳಗೇ ಬಿರುಗಣ್ಣಿಂದ ಅವನನ್ನು ನೋಡುತ್ತ ಆಣಿಕಲ್ಲಿನ ಮಳೆಯಂತೆ ಪಟಪಟ ಮಾತನಾಡಿದಳು—

"ನೀವು ಸಾಹಿತಿ ಶಂಕರರಲ್ಲವೇ? ನಿಮ್ಮಿಂದ ನನ್ನಬಾಳೇ ಹಾಳಾಗಿ ಹೋಯ್ತು! ನನ್ನ ಸರ್ವನಾಶ ಮಾಡಿಬಿಟ್ರಿ?"

ಶಂಕರ ಚಕಿತನಾಗಿ ಆಕೆಯನ್ನು ದಿಟ್ಟಿಸಿ ನೋಡಿದ. ಸ್ವಲ್ಪ ಗುರುತು ಹತ್ತಿತು.

"ಓ, ನೀ ಶಾರದ ಅಲ್ವೇ? ಇದೇನು ಈ ದುರವಸ್ಥೆ?"

"ಶಾರದ ಅಲ್ಲ—ಶಾಂತಾ. ನಿಮ್ಮ 'ಕಾರಾಗೃಹ' ಕಾದಂಬರಿಯ ನಾಯಿಕೆ. ಚಿಗುರನ್ನು ಚಿವುಟಿಹಾಕುವ ಕಿಡುಗೇಡಿಯಂತೆ, ಮಕ್ಕಳ ಎಳೆ ಮನಸ್ಸನ್ನು ಮುರುಟಿಹಾಕುವ ತಂದೆ-ತಾಯಿಯರು, ಬೆಳೆವಗಿಡ, ಕಾಯಿ ಗಿಡದ ನೆರಳನ್ನು ತೊರೆದರೇ ಶ್ರೇಯ. ಆದ್ದರಿಂದ ತಂದೆ ತಾಯಿಯರ ಶಿಸ್ತಿನ ಪಂಜರದಿಂದ ಹೊರಬಂದು ಹೃದಯದ ಕರೆಗೆ 'ಓ' ಗೊಡುವಂತೆ 'ಕಾರಾಗೃಹ'ದಲ್ಲಿ ನೀವು ಒತ್ತಾಯ ಮಾಡಲಿಲ್ಲವೆ? ನಾನೂ 'ಕಾರಾಗೃಹ' ದಿಂದ ತಪ್ಪಿಸಿಕೊಂಡೆ. ರೆಕ್ಕೆಮುರಿದು ಬಿದ್ದೆ... ಈಗ ಹೀಗೆ ಬೀದಿಭಿಕಾರಿಯಾದೆ."

ಶಂಕರ ಅವಳಿಗೆ ಸಮಾಧಾನಹೇಳಲು ಬಾಯ್ತೆರೆದ. ಜನಸಂದಣಿ ವಿಪರೀತ ಹೆಚ್ಚಿ, ಆ ನೂಕು ನುಗ್ಗಲಿನಲ್ಲಿ ಅವಳು ಮರೆಯಾದಳು.


[ ಹೌದು. ' ಕಾರಾಗೃಹ ' ತನ್ನ ಎರಡನೆಯ ಕಾದಂಬರಿ. ಅದು ಸಹ ಅಪಕ್ವ ಅನುಭವದ ಫಲ, ಶಾರದೆ ತನ್ನೊಡನೆ ಒಂದು ಮಾತನ್ನೂ ಆಡದೆ, ತನಗೆ ಯಾವ ಉತ್ತೇಜನವನ್ನೂ ಕೊಡದೆ ಲಜ್ಜೆಯ ತೆರೆಯ ಹಿಂದೆ ಅಡಗಿದಾಗ, ತಂದೆ ತಾಯಿಯರು ಅವಳ ನಡೆ ನುಡಿಯ ಮೇಲೆ ಕಟ್ಟುನಿಟ್ಟಾಗಿ ಶಿಸ್ತಿನಿಂದಿರುವುದನ್ನು ಕಂಡು ಕೆರಳಿ ಬರೆದ ಕಾದಂಬರಿ ಅದು. ಯುವ ಮನೋಧರ್ಮದ ವಿಜೃಂಭಣೆಗೆ, ಹಿರಿಯರ ಅಡ್ಡಿ-ಆತಂಕಗಳ ನಿವಾರಣೆಗೆ ಊದಿದ ಕದನಕಹಳೆಯದು.

ಆದರೆ ಈಗ ಶಂಕರನಿಗೆ ಮದುವೆಗಿರುವ ಮೂವರು ಹೆಣ್ಮಕ್ಕಳಿದ್ದಾರೆ. ಮಕ್ಕಳ ' ಹಿತಚಿಂತನೆ ' ಯಿಂದ, ರೆಕ್ಕೆಬಲಿಯುವ ಮುನ್ನ ಹಕ್ಕಿ ಹಾರಿಹೋದರೆ ಅಪಾಯವೆಂಬ ಮುಂದಾಲೋಚನೆಯಿಂದ ತಂದೆ ತಾಯಿಯರು ಶಿಸ್ತಿನಿಂದಿರಬೇಕೆಂಬ ಅರಿವು ಬಂದಿದೆ. ಏರು ಯೌವನ ಏರು ಪ್ರವಾಹದಂತೆ. ಅನಾಹುತವಾಗದಿರಬೇಕಾದರೆ ಪೋಷಕರ ಹತೋಟಿ ಸೇತುವೆಯಂತೆ ಅಗತ್ಯ— ಎಂಬ ಸತ್ಯವನ್ನು ಪ್ರತಿಪಾದಿಸಲು 'ಜಲಸೇತು' ಎಂಬ ಕಾದಂಬರಿಯನ್ನು ಇತ್ತೀಚೆಗೆ ಬರೆದಿದ್ದ.

' ಕಾರಾಗೃಹ ' ಓದಿ ಕಾಲುಜಾರಿದಳಂತೆ ! ' ಜಲಸೇತು ' ವನ್ನು ಓದಿ ಏಕೆ ಬುದ್ಧಿ ಕಲಿಯಬಾರದಾಗಿತ್ತು ? ]

ಆಂಬ್ಯುಲೆನ್ಸ್‌ನ ಡಣ ಡಣ ಸದ್ದು ಅವನ ಯೋಚನಾತಂತುವನ್ನು ತುಂಡರಿಸಿತು. ಎದುರಿಗೆ ಇದ್ದ ದೊಡ್ಡ ಆಸ್ಪತ್ರೆಯ ಬಳಿಗೆ ಆಂಬ್ಯುಲೆನ್ಸ್ ಹೋಯಿತು. ಶಂಕರ ಕುತೂಹಲದಿಂದ ತಾನೂ ಹೋದ. ಡ್ರೈವರ್ ಸುದ್ದಿ ತಿಳಿಸಿದ–ಗಾಯಗೊಂಡು ರಕ್ತದ ಮಡುವಿನಲ್ಲಿ ಬಿದ್ದಿದ್ದವನ ಹೆಸರು ಓಂಕಾರ ಎಂದು. ಪ್ರಾಣಾಪಾಯವೇನಿಲ್ಲ; ಆದರೆ ಕೈಕಾಲು ಊನವಾಗಬಹುದು. ಹಳ್ಳಿಯವರು ಹೊಡೆದು ರಸ್ತೆಯ ಬಳಿ ಎಸೆದಿದ್ದರು—ಎಂದು.

' ಓಂಕಾರ ! ಪರಿಚಿತ ಹೆಸರಿನಂತಿದೆಯಲ್ಲಾ ' ಎಂದು ಶಂಕರ ಅಂದುಕೊಂಡ. ತಕ್ಷಣವೇ ನೆನಪಾಯಿತು. ಓ, ಇಷ್ಟು ಬೇಗ ಮರೆಯಲು ಸಾಧ್ಯವೇ ಆಪ್ತ ಗೆಳೆಯ ಓಂಕಾರನನ್ನು? ಏಕದೇಹನ್ಯಾಯದಿಂದ, ತನ್ನೆಲ್ಲ ಉತ್ತಮಾಂಶವೂ ಅದೃಷ್ಟವೂ ಕೇಂದ್ರೀಕರಿಸಿದಂತೆ ಇದ್ದವನಲ್ಲವೇ ಓಂಕಾರ ? ಡಾಕ್ಟರರನ್ನು ಕೇಳಿ, ಓಂಕಾರನನ್ನು ಕಂಡು ಮಾತನಾಡಲು ಅಪ್ಪಣೆ ಪಡೆದ.



ಶಂಕರ

ಓಂಕಾರನಿಗೆ ತುಂಬ ಹೊಡೆತ ಬಿದ್ದಿತ್ತು. ಅವನ ಹಣೆಗೆ, ಕೈಕಾಲುಗಳಿಗೆ ಬ್ಯಾಂಡೇಜ್ ಬಿಗಿದಿದ್ದರು. ಆಯಾಸದಿಂದ ಕಣ್ಮುಚ್ಚಿ ಮಲಗಿದ್ದ. ಶಂಕರ ಮೃದುವಾಗಿ ಓಂಕಾರನ ಹೆಸರನ್ನು ಕೂಗಿದ.

ಓಂಕಾರ ಕಣ್ಣ ಬಿಟ್ಟ. ಶಕ್ತಿ ಹೀನವಾಗಿದ್ದ ಅವನ ಕಣ್ಣುಗಳು ಅಚ್ಚರಿಯಿಂದ ಅರಳಿದವು, ನಂತರ ಅವನ ನೋಟ ಹರಿತವಾಯಿತು.

" ಶಂಕರಾ, ಆಪ್ತಸ್ನೇಹಿತ ಎಂದು ಭಾವಿಸಿದ್ದಕ್ಕೆ ನನ್ನಈ ಅವಸ್ಥೆಗೆ ತಂದಿಟ್ಟೆ. ಮೃತ್ಯುವಿನ ಬಾಯಿಗೆ ನನ್ನನ್ನು ದಬ್ಬಿದೆ'' ಎಂದ.ಉಕ್ಕುವ ಕೋಪದಿಂದ.

ಶಂಕರನಿಗೆ ದಿಗ್ಭ್ರಮೆಯಾಯಿತು.

" ನಾನೇ ? ನಾನೇನು ಮಾಡಿದೆ ? ''— ಎಂದು ತೊದಲಿದ.

"ನೀನಲ್ಲವೇ ನನ್ನನ್ನು ನಿನ್ನ 'ಅನುರಾಗದರಗಿಳಿ'ಯ ನಾಯಕನನ್ನಾಗಿ ಮಾಡಿದವನು ? ಹೆಜ್ಜೆ ಹೆಜ್ಜೆಗೂ ನನಗೆ ಗೆಲುವಿನ ಮಾಲೆಯನ್ನು ತೊಡಿಸಿದೆ. ಬೆಲ್ಲದಂತಹ ನನ್ನ ವ್ಯಕ್ತಿತ್ವ ಎಲ್ಲರನ್ನೂ ಆಕರ್ಷಿಸಿತು. ನನ್ನ ಸಂಕಲ್ಪಕ್ಕೆ ಚ್ಯುತಿಯೇ ಇಲ್ಲವೆಂದು ಉಬ್ಬಿಸಿದೆ. ಕಂದರ್ಪನಂತೆ ಎಲ್ಲ ಹೆಣ್ಣುಗಳನ್ನು ನಾನು ಗೆಲ್ಲಬಲ್ಲನೆಂಬ ಆತ್ಮವಿಶ್ವಾಸವನ್ನು ಉಕ್ಕೇರಿಸಿದೆ. ಹೆಣ್ಣಿನ ಹಾವಭಾವಗಳಿಂದ ಅವಳ ನಲಿವು ಒಲವನ್ನು ತಿಳಿಯಬಹುದೆಂದು ನೀನು ಬಣ್ಣಿಸುದುದನ್ನು ನಂಬಿ ಮೋಸ ಹೋದೆ. ಹಳ್ಳಿಯ ಪಟೇಲರ ಮಗಳ ಸಲಿಗೆ ಮಾತು, ನಗುವ ಕಣ್ಣು ಕಂಡು ಅವಳು ನನಗೆ ಮಾರು ಹೋಗಿರುವಳೆಂದು ಭಾವಿಸಿದ್ದೆ ! ಆ ನಾಗಿಣಿ ನನ್ನ ಮೇಲೆ ತನ್ನ ಕಡೆಯವರನ್ನು 'ಛೂ ಬಿಟ್ಟು' ಹೀಗೆ ಹಣ್ಣುಗಾಯಿ ನೀರುಗಾಯಿ ಮಾಡಿಸಿದ್ದಾಳೆ. ನಿನ್ನ ಸುಳ್ಳು ಬಣ್ಣನೆ ನನಗೆ ಈ ವಿಪತ್ತನ್ನು ತಂದಿತು. ನಿನಗೂ ಹೀಗೆಯೇ ಹೊಡೆದರೆ ಆಗ ಬುದ್ಧಿ ಬರುತ್ತೆ." ಎಂದು ಹೊಡೆವವನಂತೆ ಉದ್ರೇಕದಿಂದ ಮೇಲೇಳಹೋದ.

ಶಂಕರನನ್ನು ಜವಾನ ಹೊರಗಡೆಗೆ ಕಳುಹಿದ. ಶಂಕರ ಹೆಚ್ಚಾಗಿ ಚಿಂತಿಸುತ್ತ ನಡೆದ.

[ ತನ್ನ ವ್ಯಕ್ತಿತ್ವದ ಮತ್ತೊಂದು ಮುಖದಂತಿದ್ದ ಓಂಕಾರನಿಗೆ ಈ ಗತಿಯೇ ? ತಾನು ಕಂಡ ಯೌವನಸಹಜ ಸುಂದರ ಕನಸುಗಳ ರಸಗಟ್ಟಿ—' ಅನುರಾಗದರಗಿಳಿ ', ಅತಿ ಚೆಲ್ವ, ಶ್ರೀಮಂತ, ಚೆಲ್ವೆಯರ ಮನಸೆಳೆವ ಗಾರುಡಿಗ ವ್ಯಕ್ತಿ,— ಓಂಕಾರ,— ಆ ಕಾದಂಬರಿಯ ನಾಯಕ. ಹಳ್ಳಿಯ ವಿವಾಹಿತ ಮುಗುದೆಗೂ ಓಂಕಾರನಿಗೂ ಪ್ರೇಮ ಬೆಳೆವ ಸುಮಧುರ ಸನ್ನಿವೇಶ ಕಲ್ಪಿತವಾಗಿತ್ತು ಅವನ ಕಾದಂಬರಿಯಲ್ಲಿ. ಆದರೆ ಓಂಕಾರ ಈಗ ತನ್ನನ್ನೇ ಆಕ್ಷೇಪಿಸುತ್ತಿದ್ದಾನೆ ! ಕುರೂಪಿ, ರೋಗಿಷ್ಟ ಗಂಡನೊಡನೆ ಏಗಲಾರದೆ ಕುಮುದಾ ಓಂಕಾರನ ಪ್ರಣಯಕ್ಕಾಗಿ ಯಾಚಿಸುವಂತೆ ತಾನು ಚಿತ್ರಿಸಿದ್ದರೆ, ಓಂಕಾರನನ್ನು ಸಾಯಬಡಿಸಿರುವಳಂತಲ್ಲಾ !

ಶಾರದೆಗೆ ಕುರೂಪಿಯಾದ ಕರಿಯ ಗಂಡನೊಡನೆ ವಿವಾಹವಾದ ನಂತರ ನಿರಾಶೆಯಿಂದ, ಛಲದಿಂದ ಬರೆದ ಕಾದಂಬರಿ ಅದು.: ಬಾಹ್ಯ ಸೌಂದರ್ಯವೆ ಸರ್ವಸ್ವವೆಂದು ಭಾವಿಸಿದಾಗ ಬರೆದ ಕಾದಂಬರಿ ಅದು.

ಆದರೆ ಶಂಕರನ ಪತ್ನಿಯೂ ತುಂಬ ಚೆಲುವೆಯೇ. ಶಂಕರನ ರೂಪ ಅಷ್ಟರಲ್ಲೇ ಇತ್ತು. ಆಂತರಿಕ ಸೌಂದರ್ಯದ ಮಹತ್ತನ್ನು ಗ್ರಹಿಸಿದ ನಂತರ ' ಬೆಳ್ಳಿಗೆರೆ ' ಎಂಬ ಕಾದಂಬರಿ ಬರೆದು ಸಾಧ್ವಿಯರ ಪತಿಪ್ರೇಮ, ತ್ಯಾಗಧರ್ಮವನ್ನು ವರ್ಣಿಸಿದ್ದ. ' ಅನುರಾಗದರಗಿಳಿ ' ಓದಿದನಂತರ ' ಬೆಳ್ಳಿಗೆರೆ ' ಓದಿ ಬುದ್ಧಿ ಕಲಿಯಬೇಡವೆಂದಿದ್ದವರಾರು ]?

ಶಂಕರತಲೆಯೆತ್ತಿದ. ಪೋಲೀಸಿನವರು ಕೈಗೆ ಬೇಡಿ ತೊಡಿಸಿ ಒಬ್ಬನನ್ನು ಎಳೆದುತರುತ್ತಿದ್ದರು. ಶಂಕರನಿಗೆ ಅವನನ್ನು ಎಲ್ಲೋ ಕಂಡ ನೆನಪು. " ಯಾರು ಈತ " ಏನು ಅಪರಾಧ ಮಾಡಿದ್ದಾನೆ?"

ಪೋಲೀಸರು ಉತ್ತರಿಸುವ ಮೊದಲೇ ಅವನೇ ಹೇಳಿದ.

" ನಾನು ವಿನೋದ. ದರೋಡೆಯ ಆಪಾದನೆಯ ಮೇಲೆ ಎಳೆದೊಯ್ಯುತ್ತಿದ್ದಾರೆ. ಓ, ನೀವು ಸಾಹಿತಿ ಶಂಕರರಲ್ಲವೇ ?"

ಅವನ ಧ್ವನಿಯ ವ್ಯಗ್ರತೆ ಗುರುತಿಸಿ, ಶಂಕರನಿಗೆ ಮತ್ತೇನು ಆಕ್ಷೇಪವೊ ಎಂದು ಕಳವಳವಾಯ್ತು.

"ಹೌದಪ್ಪಾ ನಾನೇ ದುರ್ದೈವಿ ಸಾಹಿತಿ" ಎಂದು ತಲೆಯಾಡಿಸಿದ.

" ನಿಮ್ಮ 'ಕನಸಿನ ಕನ್ನಡಿ'ಯ ಸಮತಾವಾದದ ತತ್ವಾನ ಮೈಯೂಡಿಸಿಕೊಂಡ ವಿನೋದ ನಾನು. ಪ್ರೀತಿಯ ತಾಯಿ ಸಖತ್ ಕಾಯಿಲೆಯಾಗಿ ಮಲಗಿದಾಳೆ—ತಂಗಿ ತಮ್ಮಂದಿರು ಉಪವಾಸ ಸಾಯುತ್ತಿದ್ದಾರೆ. ಕೈಯಲ್ಲಿ ಕಾಸಿಲ್ಲ, ನಾ ಏನ ಮಾಡಬೇಕು ? ಜಗತ್ತೆಲ್ಲಾ ದೇವರದು. ಆಸ್ತಿಪಾಸ್ತಿಯ ಭಾವನೆ ಕೃತಕವಾದುದು. ಎಲ್ಲ ಆಸ್ತಿಯೂ ದೇಶದ್ದು. ಅನುಭವಿಸಲು ಎಲ್ಲ ದೇಶೀಯರಿಗೂ ಹಕ್ಕುಂಟು. ಅವರವರ ಅಗತ್ಯ ಬಿದ್ದಂತೆ ಆವಶ್ಯಕವಾದುದನ್ನು ತೆಗೆದುಕೊಳ್ಳಬೇಕು. ಅದೇ ನಿಜವಾದ ಸಮಾಜವಿಕಾಸ ಅಲ್ಲವೇನು ? ನಾನೂ ಔಷಧದ ಅಂಗಡಿಗ ಹೋದೆ. ಔಷಧಿ ತೆಗೆದುಕೊಂಡೆ. ಹಣ್ಣು, ಬ್ರೆಡ್ಡು ಕೊಳ್ಳಲು ಹಣ ತೆಗೆದುಕೊಂಡೆ. ಅಷ್ಟಕ್ಕೆ 'ಕಳ್ಳ, ಕಳ್ಳ' ಅಂತಾ ಗಲಭೆ ಮಾಡಿ, ನನ್ನನ್ನು ಪೋಲೀಸರಿಗಿತ್ತಿದಾರೆ ! ಎಲ್ಲದೇರಿ ನೀವು ಚಿತ್ರಿಸಿರುವ ಆದರ್ಶ ಸಮಾಜ ? ಆದರ್ಶ ವ್ಯಾಪಾರ ? "

ಪೋಲೀಸರಿಗೆ ತಾನು ಜಾಮೀನಾಗುವೆನೆಂದು ಹೇಳಿ ವಿನೋದನನ್ನು ಅವನು ಬಿಡಿಸಬೇಕೆಂದು ಯೋಚಿಸುತ್ತಿರುವಾಗಲೇ, ಪೋಲೀಸಿನವನು ಹೇಳಿದ—

" ನಿಮ್ಮ ಮಗನ ಮೆಡಿಕಲ್ ಷಾಪನ್ನೇ ಲೂಟಿ ಹೊಡೆದಿದ್ದಾರೆ. ಇದ್ದ ಹಣವನ್ನೆಲ್ಲಾ ದೋಚಿದಾರೆ. ಇವನ ಕಡೆಯವರೆಲ್ಲಾ ಪರಾರಿಯಾದರು. ಇವನೊಬ್ಬ ಮಾತ್ರ ಸಿಕ್ಕಿದ. "

" ಓ, ಹಾಗೇನು ? ನೀವೇ ಹೇಳಿ ಶಂಕರ್ ? ನನ್ನದೇನೂ ಅಪರಾಧವಲ್ಲ ಅಲ್ವೇ ? ಜೇನು ಕೂಡಿಟ್ಟ ತುಪ್ಪವನ್ನು ನಾವು ತೆಗೆದುಕೊಳ್ಳುವುದು ಜಾಣ್ಮೆ. ಮಾನವೀಯ ವ್ಯಕ್ತಿ ಗಳಿಸಿದ್ದನ್ನು ಅಗತ್ಯವಿರುವವರು ತೆಗೆದುಕೊಳ್ಳುವುದು ಜಾಣ್ಮೆಯಲ್ಲವೇನು ? ನಿಮ್ಮ ಮಗನ ಅಂಗಡಿಯಾದುದು ಲೇಸಾಯಿತು. ನಿಮ್ಮ 'ಕನಸಿನ ಕನ್ನಡಿ'ಯ ಚಿತ್ರಣವನ್ನು ನಿಜ ಮಾಡಿ ! "

ವಿನೋದನ ಹರ್ಷೋದ್ವೇಗದ ಮಾತು ಕಿವಿಗೇ ಬೀಳದಹಾಗಾಗಿತ್ತು ಶಂಕರ್‌ಗೆ. ಆನಂದನ ಅಂಗಡಿ ಲೂಟಿಯಾಯಿತೇ ? ಇನ್ನೂ ಒಂದೇ ವರ್ಷವಾಗಿದೆ ಅಂಗಡಿ ತೆಗೆದು. ಇನ್ನು ಅವನ ಸಂಸಾರ ನಿರ್ವಹಣೆ ಹೇಗೆ ? ಮಕ್ಕಳ ಗತಿ ಏನು ?

ವಿನೋದನಿಗೆ ವಿವೇಕ ಬೋಧಿಸಬೇಕೆಂಬುದರೊಳಗೇ ಅವನನ್ನು ಮುಂದಕ್ಕೆ ಎಳೆದೊಯ್ದಿದ್ದರು.

[ ಅಂಗಡಿಯನ್ನು ಲೂಟಿ ಮಾಡಿದ್ದಲ್ಲದೆ, ತಾನು ಮಾಡಿದ್ದು ಸರಿ ಎಂದು ಸಮರ್ಥಿಸುವನಲ್ಲಾ—'ಕನಸಿನ ಕನ್ನಡಿ'ಯನ್ನು ಹೆಸರಿಸಿ ! ಆ ಕಾದಂಬರಿ ಬರೆದಾಗ ಶಂಕರ ನಿರ್ಗತಿಕನಾಗಿದ್ದ. ಧ್ಯೇಯವಾದವೊಂದೇ ಅವನಿಗಿದ್ದ ಆಸ್ತಿ ! ಸುಖಲೋಲುಪ್ತ ಶ್ರೀಮಂತರ ಆಸ್ತಿಪಾಸ್ತಿ ಕಂಡು ಅವನ ರಕ್ತ ಕುದಿಯುತ್ತಿತ್ತು. ಬಡವ-ಬಲ್ಲಿದರೆಂಬ ಅಸಮತೆಯನ್ನು ತನ್ನ ಬರಹದಿಂದ ತೊಡೆದು, ಆಸ್ತಿರಹಿತ ವರ್ಗರಹಿತ ಸುಖೀ ಸಮಾಜವನ್ನು ಕಟ್ಟುವ ಭವ್ಯ ಕನಸನ್ನು ಕಂಡು ಕೆಚ್ಚಿನಿಂದ ಬರೆದ ಕಾದಂಬರಿ ಅದು. ಆ ಹೊಸ ಜಗತ್ತನ್ನು ಸ್ಥಾಪಿಸುವ ಕ್ರಾಂತಿನಾಯಕ, ವಿನೋದ.

ಆದರೆ ಜೀವನದ ಕಹಿ ಅನುಭವಗಳು ಅವನಿಗೆ ಬೇರೊಂದು ಕಟು ಸತ್ಯವನ್ನು ತಿಳಿಸಿವೆ. ಆಸ್ತಿ ಪಾಸ್ತಿಯ ಭಾವನೆ ವ್ಯಾಮೋಹದಂತೆ ಸೃಷ್ಟಿನಿಯಮದಲ್ಲಿರುವ ಮೂಲ ಭಾವನೆ. ಪಶು ಪಕ್ಷಿಗಳಲ್ಲೂ ಈ ಭಾವನೆ ಬೇರೂರಿದೆ. 'ಆಸ್ತಿಯೆಲ್ಲಾ ದೇಶದ್ದು. ದೇಶವೆಲ್ಲಾ ಜನರದ್ದು' ಎಂಬ ಕ್ರಾಂತಿಕಾರಕ ಸಮಾಜವಾದದ ವಾಸ್ತವಿಕ ಪ್ರಯೋಗವಾಗಿರುವ (ಕ್ರಾಂತಿಕಾರರ 'ದೂರದ ಬೆಟ್ಟ'ವಾಗಿರುವ) ಏಕೈಕ ರಾಷ್ಟ್ರದಲ್ಲಿ ಸಹ ಆಸ್ತಿಯ ಭಾವನೆ ಹಿಂಬದಿಯ ಬಾಗಿಲಿನಿಂದ ಪ್ರವೇಶಿಸಿದೆ !

ಇನ್ನೂ ಬೇರು ಬಿಡದಿರುವ ಸಸಿಯಾದರೆ ಎಲ್ಲಿಂದರಲ್ಲಿಗೆ ಕಿತ್ತು ನೆಡಬಹುದು. ಸಂಸಾರದ ಜವಾಬ್ದಾರಿಯಿಲ್ಲದ ಕೆಚ್ಚೆದೆಯ ತರುಣರು ಆಸ್ತಿರಹಿತ ಸಮಾಜದ ಕನಸು ಕಾಣಬಹುದು. ಆದರೆ ತನ್ನಂತಹ ತುಂಬಿದ ಸಂಸಾರಿಯ ಗತಿ ? ಕಾಲೇಜಿನಲ್ಲಿ ಓದುತ್ತಿರುವ ಇಬ್ಬರು ಗಂಡು ಮಕ್ಕಳು, ಮದುವೆಗಿರುವ ಹೆಣ್ಮಕ್ಕಳು... ಕನಸಿನಲೋಕಕ್ಕೂ ಕಠಿಣ ವಾಸ್ತವತೆಗೂ ಇರುವ ಅಂತರವನ್ನು ಚಿತ್ರಿಸುವ ಅವನ 'ನಕ್ಷತ್ರ ಲೋಕ' ಓದಿದರೆ 'ಕನಸಿನ ಕನ್ನಡಿ'ಯ ಶೂನ್ಯತೆ ತಿಳಿವುದು.]



ಆದರೂ ಅನ್ಯಾಯವಾಗಿ ಅಂಗಡಿಯನ್ನು ಲೂಟಿ ಮಾಡಿದರಲ್ಲಾ...

ಗಡಿಯಾರದ ಗಂಟೆ ಸದ್ದು ಕೇಳಿ ಶಂಕರ ಕಣ್ತೆರೆದ. ಏಳು ಗಂಟೆ ಹೊಡೆಯಿತು. ರವಿಕಿರಣಗಳು ಕೋಣೆಯನ್ನೆಲ್ಲಾ ಬೆಳಗಿತ್ತು.

" ಅಪ್ಪಾ, ರೇಡಿಯೋ, ಹಾಕಲೇನು, ನಿಮಗೆ ನಿದ್ರಾಭಂಗವಾದೀತು ಅಂತಾ ಸುಮ್ಮನಿದ್ದೆ." ಎನ್ನುತ್ತ ಆನಂದ ಒಳಗಡೆಗೆ ಬಂದ.

" ನಿನ್ನ ಷಾಪು ? ಸರಿಯಾಗಿದೆಯೊ ಇಲ್ಲವೊ ? " ಎಂದ ಕಳವಳದಿಂದ.

" ಶೇಷ ಆರು ಗಂಟೆಗೆ ಹೋಗಿ ಬಾಗಿಲತೆಗೆದಿದಾನಪ್ಪ.

ಸದ್ಯ, ಲೂಟಿಯ ಅನಾಹುತ ಕನಸಿನಲ್ಲೇ ಮುಕ್ತಾಯವಾಯಿತಲ್ಲಾ—ಎಂದು ಸಮಾಧಾನದಿಂದ ನಿಡುಸುಯ್ದ—ಶಂಕರ.

ಅವನ ಕನಸು ಅವನಿಗೊಂದು ಹೊಸ ಪಾಠವನ್ನು ಕಲಿಸಿತ್ತು. ಆತ್ಮವಿಮರ್ಶೆಯ ಪಾಠವದು.

" ನಿಜ. ನಾನೇನೋ ಸತ್ಯಶೋಧಕ. ಸಾಹಿತಿಗಿರಬೇಕಾದ ಮೊದಲ ಅರ್ಹತೆ ಸತ್ಯಶೋಧನೆಗಾಗಿ ಹಂಬಲಿಕೆ. ಆದರೆ ತನ್ನ ಸತ್ಯಶೋಧನೆಯ, ಫಲಗಳೇಕೆ ಹೀಗೆ ಕಹಿ ? ಅವುಗಳಿಂದೇಕೆ ಇಷ್ಟು ಅನಾಹುತಗಳು ? "

ಅವನ ಮನ ಉತ್ತರಿಸಿತು :

"ತಪ್ಪು ನಿನ್ನದೇ, ಹಾಲ್ಗಡಲನ್ನು ಕಡೆದಾಗ ಹಾಲಾಹಲ ಮೊದಲು ಹುಟ್ಟಿತಲ್ಲವೇ? ವಿಚಾರಮಂಥನದ ಮೊದಲೂ ಕಹಿ ಫಲಗಳೇ ದೊರೆತಾವು. ಅನುಭವದಿಂದ ನಿನ್ನ ಹೃದಯ ಹಣ್ಣಾದಾಗ ಮಾತ್ರ ಸತ್ಯವನ್ನು ಸಮದೃಷ್ಟಿಯಿಂದ ನೋಡಿ ಅರ್ಥ ಮಾಡಿಕೊಳ್ಳಬಲ್ಲೆ."

ಹಾಗಾದರೆ ಇದಕ್ಕೆ ಪರಿಹಾರವೇನು?

"ಸಾಹಿತಿ ತನ್ನ ಅನುಭವ ಪಕ್ವವಾದ ಮೇಲೆ ಮಾತ್ರ ಬರೆಯಬೇಕೆಂದು ಕಡ್ಡಾಯ ಮಾಡಬೇಕು."

ಅನುಭವ ಪಕ್ವವಾಗಿದೆಯೆಂದು ಹೇಗೆ ತಿಳಿಯುವುದು? ವಾನಪ್ರಸ್ಥಾಶ್ರಮಕ್ಕೆ ದೀಕ್ಷೆ ತೆಗೆದುಕೊಂಡಾಗಲೇ?

"ಛೇ, ಛೇ, ವರ್ಣಾಶ್ರಮಧರ್ಮ ಎಂದೋ ಲುಪ್ತವಾಗಿದೆ. ನಲವತ್ತು ವರ್ಷವಾದನಂತರ ಮಾತ್ರ ಸಾಹಿತ್ಯನಿರ್ಮಾಣ ಮಾಡಬೇಕೆಂದು ಶಾಸನಮಾಡಬೇಕು?"

ಶಂಕರ ತನ್ನ ಈ ನಿರ್ಧಾರವನ್ನು ಯುಕ್ತಯುಕ್ತಿಗಳಿಂದ ಸಮರ್ಥಿಸಿ ಎಲ್ಲ ಪತ್ರಿಕೆಗಳಿಗೂ ದೀರ್ಘ ಲೇಖಗಳನ್ನು ಬರೆದ.

ಟಪಾಲಿನಲ್ಲಿ ಬಂದ ಕಿರಿಯ ಸಾಹಿತಿಯ ಪತ್ರ ಕಂಡು ಅವನ ಹುಮ್ಮಸ್ಸಿನ ಬೆಲೂನಿಗೆ ಸೂಜಿ ಚುಚ್ಚಿದಂತಾಯ್ತು.

"ಸತ್ಯಶೋಧಕನೆಂಬ ನಿಮ್ಮ ಹೆಮ್ಮೆಯನ್ನು ಬದಿಗೊತ್ತಿ. ಸತ್ಯವನ್ನು ಅರಿತವನು ಸತ್ತಂತೆ ಇರಬೇಕು ಎಂಬ ಸರ್ವಜ್ಞನ ತತ್ವವನ್ನು ಮರೆಯುದಿರಿ. ನಿಮ್ಮ ಸೋತ ಮನೋಭಾವನೆಗೆ, ನಿಮ್ಮ ಮನಸ್ಸಿಗೆ ಮುಪ್ಪುಡಿಸಿದೆ ಎಂಬುದಕ್ಕೆ ನಿಮ್ಮ ಇತ್ತೀಚಿನ ಕಾದಂಬರಿಗಳೇ ನಿದರ್ಶನ. ಗಳಿಸಿದ ಕೀರ್ತಿ ಅಳಿಯಬಾರದೆಂಬ ಆಶೆಯಿದ್ದಲ್ಲಿ ಸಾಹಿತ್ಯ ನಿರ್ಮಾಣವನ್ನು ಇನ್ನು ನಿಲ್ಲಿಸಿ, ಮನಕ್ಕೆ ಮುಪ್ಪುಡಿಸಿರುವಾಗ, ಕಲ್ಪನಾಕನ್ಯೆಯ ಪ್ರಣಯವೇ ವಿಷ–ಎಂದು ಕಹಿ ಕಾರಿದ್ದ ಆ ಎಳೆಯ ಸಾಹಿತಿ.

ಆನಂದ ಬಂದು ಶಂಕರ ಪತ್ರಿಕೆಗಳಿಗೆ ಬರೆದ ಲೇಖಗಳೆಲ್ಲಾ ಕಸದ ಬುಟ್ಟಿ ಸೇರಿರುವದನ್ನು ಕಂಡು ಚಕಿತನಾದ.

ಶಂಕರ ಗಂಭೀರವಾಗಿ ವಿಚಾರಮಾಡುತ್ತಾ,

"ನಾನಿನ್ನು ಸಾಹಿತ್ಯಸನ್ಯಾಸ ತೆಗೆದುಕೊಳ್ತೇನೆ. ಪೂರ್ಣಸತ್ಯ ಸತ್ಯಾಸತ್ಯಗಳಿಗೆ ಅತೀತ. ಸತ್ಯವನ್ನು ಅಂಶರೂಪದಲ್ಲಿ ಮಾತ್ರ ನೋಡಿ ಗ್ರಹಿಸಬಹುದು. ಸತ್ಯಾಂಶಗಳೂ ಒಮ್ಮೊಮ್ಮೆ ದೃಷ್ಟಿದೋಷವೆನ್ನಿಸುತ್ತೆ. ದೃಷ್ಟಿದೋಷದ ಮೂಲಕ ಅಸತ್ಯವೂ ಸತ್ಯದ ಮುಖವಾಡ ಧರಿಸುತ್ತೆ. ಪಕ್ವ ಅನುಭವದ ಫಲವಾದರೆ ಉಪದೇಶ—ಆದ್ದರಿಂದ ಅನಾಕರ್ಷಕ. ಅಪಕ್ವ ಅನುಭವದ ಫಲವಾದರೆ ಉದ್ರಿಕ್ತ ಆಕರ್ಷಣೆ—ಆದರೆ ಅನರ್ಥಕಾರಕ. ನನ್ನ ಎಲ್ಲ ಬಗೆಯ ಅನುಭವಗಳ ಫಲವನ್ನೂ ಜನತೆಗೆ ಅರ್ಪಿಸಿದ್ದೇನೆ. ಯಾರಿಗೆ ಯಾವುದು ಹಿತವೋ, ಯಾವುದು ಗ್ರಾಹ್ಯವೋ ಅವರವರು ಅವುಗಳನ್ನು ಆಯ್ದುಕೊಳ್ಳಲಿ."

—ಎಂದಾಗ ಶಂಕರರ ಕಣ್ಣುಗಳು ತೇವವಾದವು.

# ಕುರೂಪ ಮೀಮಾಂಸೆ



ಶ್ರೀ. ಬಿ. ಎಚ್. ಶ್ರೀಧರ. ಎಂ. ಎ.

ಕುರೂಪವೆಂಬುದು ಸೌಂದರ್ಯಧರ್ಮದ ಗೌಣಾಂಗವೆಂದು ಆಗಸ್ಟಿನ್ ಅಭಿಪ್ರಾಯಪಟ್ಟಿದ್ದಾನೆ. ಕುರೂಪವೊಂದು ದೋಷ, ಸುರೂಪವೊಂದು ಗುಣವೆಂದು ಸಾಮಾನ್ಯವಾದ ಗ್ರಹಿಕೆಯಿರುವದು. ಆದರೆ ಇದು ಆಯಾ ವಸ್ತುಗಳ ಸಂಯೋಜನೆಯನ್ನು ಅವಲಂಬಿಸಿರುತ್ತದೆ. ಸಾಮಗ್ರಿಗಳ ಸುಸಂಯೋಜನೆಯು ಸೌಂದರ್ಯವಾದರೆ ಅವುಗಳ ಅಪಸಂಯೋಜನೆಯು ಕುರೂಪವೆನಿಸುವದು. ಇದನ್ನೇ ಲೇಖಕರು ಇಲ್ಲಿ ಸೋದಾಹರಣವಾಗಿ ನಿರೂಪಿಸಿರುವರು. . . .

ಸೌಂದರ್ಯಮೀಮಾಂಸೆಯ ಕಲ್ಪನೆ ಇತ್ತೀಚೆಗೆ ರಸಿಕರಿಗೆ ಸುಪರಿಚಿತವಾಗುತ್ತ ಬರುತ್ತದೆ; ಹಾಗೆ ಸುಪರಿಚಿತವಾಗಿದೆ ತಮಗೆ ಎಂದು ಭಾವಿಸುವವರ ಸಂಖ್ಯೆ ಅಪರಿಮಿತ. ದೇವರೆಂದರೆ ಹಿಂದುಸ್ತಾನದಲ್ಲಿ ಹಳ್ಳಿಗನೂ ಅರ್ಥಮಾಡಿಕೊಳ್ಳುವದಿಲ್ಲವೆ? ಹಾಗೇ 'ಇಂಥ' ದೊಂದು ಸುಂದರ ಎಂದರೂ ತನಗರ್ಥವಾಗಬಲ್ಲುದೆಂಬುದು ಗೃಹೀತವೆಂದು ಯಾರಾದರೂ ಭಾವಿಸಿಬಿಡುತ್ತಾರೆ !

ಶೀಲಾಶ್ಲೀಲಗಳ ಚರ್ಚೆಯಾದರೂ ಮೇಲೆ ಹೇಳಿದ ಹಾಗೆ ಅನೇಕ ಸಲ ನಡೆದಿದೆ. ದೇಶ ಕಾಲ-ಕಾರ್ಯವ್ಯಪೇಕ್ಷೆ-ಯಿಂದ ಅವುಗಳ ವ್ಯಾಖ್ಯೆಯಾದರೂ ಹೀಗೇ ಮುಂಬರಿಯಬಹುದು. ಆದರೆ ಕುರೂಪ (Ugliness) ಅಥವಾ ವಿರಸ ಎಂಬುದರ ಬಗ್ಗೆ ಬಹಳ ವಿಚಾರ ಹೊರಬಿದ್ದಂತೆ ಕಂಡಿಲ್ಲ.

ಪ್ಲುಟಾರ್ಚ (Plutarch) ನ ಪ್ರಕಾರ ಕುರೂಪವೆಂಬುದು ವಿಚಾರಗ್ರಾಹ್ಯವಾದ ಆಕೃತಿಯನ್ನು ಹೊಂದಬಲ್ಲುದಾಗಿದ್ದೂ ಹಾಗೆ ಅದನ್ನು ಹೊಂದದೆ ಉಳಿದಿರುವಂಥದು; ಅಥವಾ ವಿಚಾರಗ್ರಾಹ್ಯವಾದ ರೂಪವನ್ನು ಹೊಂದಲಾರದಂಥದು, ಆಂಥ ರೂಪದ ಪರಿಮಿತಿಗೆ ಒಳಪಡಲೊಲ್ಲೆನೆಂಬಂಥದು.

ಕುರೂಪವೆಂಬುದು ಸೌಂದರ್ಯಧರ್ಮದ ಒಂದು ಗೌಣಾಂಗ ಎಂಬುದು ಅಗಸ್ಟಿನ್ (Augustine)ನ ಮತ. ಕುರೂಪವು ಸೌಂದರ್ಯದ ಜೊತೆಗೆ ಒಂದು ನ್ಯೂನತೆಯಾಗಿ, ಕಲಂಕವಾಗಿ ತೋರುವಂಥದು; ಪರಂಪರಾಗತ ಅಭಿಪ್ರಾಯದಂತೆ ಒಂದರಿಂದ ಇನ್ನೊಂದನ್ನು ಪ್ರತ್ಯೇಕಿಸಿ ತೋರಿಸುವ ಒಂದು ವಿರುದ್ಧ ಧರ್ಮ; ಸುಂದರವಾದುದರಿಂದ ಅದು ಇನ್ನೊಂದನ್ನು ಪ್ರತ್ಯೇಕಿಸಿ ತೋರಿಸುವಲ್ಲಿ ಸುಂದರ ವಸ್ತುವಿನ ಸಮನ್ವಿತತೆಯನ್ನು, ಸಮಪಾರ್ಶ್ವತೆಯನ್ನು, ಸಮಶ್ರುತಿಯನ್ನು, ಸಾಮರಸ್ಯವನ್ನು ಎದ್ದು ಕಾಣುವಂತೆ ಮಾಡುವಂಥದು.

### ಸ್ಕೊಪೆನಹಾವರನ ಮತ

ಸಂಕಲ್ಪಶಕ್ತಿ ಅಥವಾ ಇಚ್ಛಾಶಕ್ತಿಯು ತಾನು ವಿಷಯರೂಪದಲ್ಲಿ (ಪರತಃ ಪ್ರಾಮಾಣ್ಯದಿಂದ ಗ್ರಾಹ್ಯವಾಗುವ ಬಾಹ್ಯವಸ್ತುರೂಪದಲ್ಲಿ) ಪ್ರಕಟವಾಗುವಾಗ ಅರೆಪೂರಕವಾದರೆ, ನ್ಯೂನಾಂಗವಾದರೆ ಕುರೂಪವೆನಿಸುವುದು ಎನ್ನುತ್ತಾನೆ ಸ್ಕೊಪೆನ್‌ಹಾವರ (Schopenhauer). ಕುರೂಪವೆಂಬುದು ಸಂಕಲ್ಪಶಕ್ತಿಯ ಒಂದು ಪಾಕ್ಷಿಕ ಆವಿರ್ಭಾವ, ದೋಷಯುಕ್ತವಾದ ಅಭಿವ್ಯಕ್ತಿ. ಅದರಿಂದ ಅದು ಸಾಪೇಕ್ಷ ಧರ್ಮವುಳ್ಳದ್ದೆಂದು ಹೇಳಬಹುದು

ಐನಸ್ಟೀನನ (Einstein)ನ ಪ್ರಕಾರ ವಿಶ್ವವು ಒಂದು (Amorphous continuum) ಅರೂಪವುಳ್ಳ ಅಥವಾ ರೂಪಾತೀತವಾದ (ಆಕೃತ್ಯತೀತವಾದ) ಸತತಧಾರೆ. ಅದಕ್ಕೆ ನಿರ್ದಿಷ್ಟವಾದ ವಾಸ್ತುಸ್ವರೂಪವಿಲ್ಲ; ಅದು ನಿತ್ಯವೂ ಬದಲಾಗುತ್ತ ಹೋಗುವ ಹಾಗೂ ವಿಕಾರಹೊಂದುತ್ತ ಹೋಗುವ ಸ್ವಭಾವವುಳ್ಳದ್ದು. ವಿಶ್ವದ ರೂಪವು ವಿಶ್ವರೂಪವಾಗಿದೆ! ದ್ರವ್ಯ ಹಾಗೂ ಚಲನೆಗಳಿದ್ದಲ್ಲೆಲ್ಲಾ ವಿಶ್ವದ ಸತತ ಪ್ರವಾಹಗತಿಗೆ ಭಂಗವುಂಟಾಗುತ್ತದೆ. ಅದು ಯಾವುದರ ಸತತವಾದ ಮುಂದೋಟ? ಕಾಲ—ದೇಶಾತ್ಮಕವಾದ ಪದಾರ್ಥವಿಶೇಷದ ಮುಂಬರಿತ, ಧಾರಾವಾಹಿತ್ವ, ಪರಿಣಾಮಶೀಲ ಪ್ರವಾಹ — ಎಂಬುದು ಐನ್ಸ್ಟೀನನ ಉತ್ತರ. ವಿಶ್ವವೊಂದು ಸಾಂತ (Finite) ಪದಾರ್ಥ. ಅದರಲ್ಲಿ ನೇರ ಗೆರೆಗಳಿಲ್ಲ. ಅದು ಮಹಾ ವರ್ತುಲಗಳಿಂದ ತುಂಬಿದೆ. ದೇಶ ಅಥವಾ ಸ್ಥಳಾವಕಾಶವು ಸಾಂತವಾದರೂ ಸೀಮಾತೀತ; ಅದಕ್ಕೆ ಗಡಿ ಇಲ್ಲ. ಗಣಿತಜ್ಞರ ಪ್ರಕಾರ ಅದು ನಾಲ್ಕು ತರಹದ ಪರಿಮಾಣಗಳುಳ್ಳ ಗೋಲ ಪದಾರ್ಥದ ಮೇಲ್ಮಟ್ಟದಂತಿದೆ. ಆದರೆ ಎಲ್ಲ ಚಲನಾವಸ್ಥೆಯಲ್ಲಿರುವ ವಸ್ತುಪುಂಜಗಳಿಗೂ ನಿಸರ್ಗ ನಿಯಮಗಳು ಒಂದೇ ತೆರನಾಗಿ ಅನ್ವಯಿಸುತ್ತವೆ; ವಿಶ್ವದಲ್ಲಿಯ ವಸ್ತುಪುಂಜಗಳ ಚಲನವೆಲ್ಲಾ ಸಾಪೇಕ್ಷ. ಚಲನವೆಂದರೆ ಒಂದು ವಸ್ತುವು ಇನ್ನೊಂದಕ್ಕೆ ಸಾಪೇಕ್ಷವಾಗಿ ಸ್ಥಾನಾಂತರ ಹೊಂದುವುದು. ಗತಿ ಬದಲಾವಣೆಯನ್ನು ನಿರೋಧಿಸುವುದೇ ದ್ರವ್ಯದ ಮೂಲಭೂತವಾದ ಗುಣ. ದ್ರವ್ಯಗಳೆಲ್ಲಾ ಪರಮಾಣುಜನ್ಯ; ಪರಮಾಣುಗಳು ಇಲೆಕ್ಟ್ರಾನ್, ನ್ಯೂಟ್ರಾನ್ ಮತ್ತು ಪ್ರೋಟಾನುಗಳಿಂದ ರಚಿತವಾದಂಥವು. ಮನುಷ್ಯನ ನೋಡುವ, ಅಭ್ಯಸಿಸುವ, ಶೋಧಿಸುವ ಕ್ರಿಯೆಯಿಂದ ಶೋಧ್ಯವಾದ ವಸ್ತುವಿನ ಸ್ವರೂಪ ಬದಲಾಗುತ್ತದೆ. ಇಂದ್ರಿಯ ಪ್ರಜ್ಞೆಯನ್ನು ದಾಟಿದರೆ ಅವನಿಗೆ ವಿಶ್ವದ ಅಸ್ಥಿಪಂಜರವಾದ ಗಣಿತಬದ್ಧ ಯೋಜನೆಯಷ್ಟೇ ಉಳಿಯುತ್ತದೆ. ಹೀಗಿದ್ದರೂ ಐನ್‌ಸ್ಟೀನ್ ನಿಸರ್ಗಕ್ಕೆ ವಿಶ್ವವ್ಯಾಪಕವಾದ ಸಾಮರಸ್ಯ, ಸಮನ್ವಯ ಇದೆ ಎಂದು ನಂಬುತ್ತಾನೆ.

### ದೃಷ್ಟಿಯಂತೆ ಸೃಷ್ಟಿ

ಮೇಲೆ ಹೇಳಿದ ವಿಶ್ವರೂಪದ ವಿಶ್ವವು ಒಟ್ಟಿನಲ್ಲಿ ಸುಂದರವಾದುದೋ (ಅಸುಂದರ ಅಥವ) ಕುರೂಪಸಂಪನ್ನವೋ ? ಒಬ್ಬ ಮಾನವ ವ್ಯಕ್ತಿಯಾದರೂ ಅಪ್ರತಿಹತನಿಯಮವಾದ ವಿಶ್ವಸಹಜ ಬದಲಾವಣೆಗೆ ಒಳಪಟ್ಟವನು; ಅವನ ಅಂತರಂಗ— ಬಹಿರಂಗಗಳೆಲ್ಲಾ ಪರಿವರ್ತನಶೀಲವುಳ್ಳವು. ಆದುದರಿಂದ ಅವನದೃಷ್ಟಿಯು ಹೇಗೆ ಹೇಗೆ ಬದಲಾಗುತ್ತ ಹೋಗುವುದೋ ಹಾಗೇ ಅವನಿಗೆ ಕಾಣುವ ಸೃಷ್ಟಿಯು ಸ್ವರೂಪವೂ ಬದಲಾಗುತ್ತ ಹೋಗಬೇಕಾಯ್ತು.

ಹಿಂದೆ ಹೇಳಿದ ಲಕ್ಷಣಗಳಿಂದ ಕುರೂಪವೊಂದು ದೋಷ, ಸುರೂಪವೊಂದು ಗುಣ—ಎಂಬ ಸಾರಾಂಶವನ್ನು ನಾವು ಅರಿತುಕೊಳ್ಳಬಹುದು. ಕಾವ್ಯಾದಿ ಕಲೆಗಳಲ್ಲೂ ಲೋಕದಲ್ಲೂ ಯಾವುದಾದರೊಂದು ಪದ, ಅರ್ಥ, ಪದಾರ್ಥ ಗುಣವೆನಿಸುವುದು ಅಥವಾ ದೋಷವೆನಿಸುವುದು ರಸಸಂದರ್ಭಕ್ಕೆ ಸಾಪೇಕ್ಷವಾಗಿ. ರಸ ಅಥವಾ ಸೌಂದರ್ಯವಾದರೂ ಮನುಷ್ಯಸಂಸ್ಕಾರದ ಗ್ರೇಡಿಗೆ, ಡಿಗ್ರಿಗೆ, ಬಗೆಗೆ ಒಳಪಟ್ಟದ್ದು. ಮನುಷ್ಯನ ಮನಸ್ಸು ಉದ್ಬೋಧ್ಯ, ರಸಸಾಮಗ್ರಿಗಳು ಉದ್ಬೋಧಕ. ಉದಾಹರಣೆಗಾಗಿ ಮನುಷ್ಯಸಂಸ್ಕೃತಿಯಲ್ಲಿ ಹತ್ತು ಮೆಟ್ಟಗಳಿವೆ ಎಂದು ಭಾವಿಸಿದರೆ ಸೌಂದರ್ಯದ ಮಾನದಂಡವೂ ಹತ್ತು ಮೆಟ್ಟ ಅಥವಾ

ಬಗೆಗಳುಳ್ಳದ್ದೆನ್ನಬೇಕಾಗುತ್ತದೆ. ಒಂದು
ಬಗೆಯ ಅಭಿರುಚಿಯು ಸಾಧಾರಣವಾಗಿರುವ
ಒಂದು ಜನವರ್ಗಕ್ಕೆ ರಸ್ಯಮಾನವಾದುದು,
ಇನ್ನೊಂದು ಬಗೆಯ ಅಭಿರುಚಿಯು
ಮತ್ತೊಂದು ಜನವರ್ಗಕ್ಕೆ ಅದೇ ಪ್ರಮಾಣ
ದಲ್ಲಿ ರಸ್ಯಮಾನವೆನ್ನಿಸಲಾರದು.

ಸೌಂದರ್ಯದ ಲಕ್ಷಣವನ್ನು ಅನೇಕರು ಅನೇಕ
ವಿಧವಾಗಿ ಹೇಳಿದ್ದಾರೆ. ಆದರೆ ಮಾನಸಶಾಸ್ತ್ರದ
ಪ್ರಕಾರ ಕೊಟ್ಟ ಒಂದು ಲಕ್ಷಣ ಇಲ್ಲಿ ಗಮನಾ
ರ್ಹವಾಗಿದೆ: ಒಂದು ವಿಧದ ಸಂವೇದನೆಗಳು
ನಮ್ಮಲ್ಲಿ ಅನಾಸಕ್ತ ಆನಂದವನ್ನು ಮೂಡಿಸ
ಬಲ್ಲವು. ಚೋದಕಸಾಮಗ್ರಿಗೂ ಅದರಿಂದ
ಚೋದಿತವಾದ ಅರ್ಥಪ್ರತೀತಿಗೂ ವ್ಯತ್ಯಾಸ
ವನ್ನು ಮಾಡುವದರಲ್ಲೇ ಸೌಂದರ್ಯಕಲ್ಪ
ನೆಯ ಬೀಜವಿದೆ. ನಿಸರ್ಗದೃಶ್ಯ ಅಥವಾ ಕಲಾ
ಕೃತಿಗಳು ಸಂವೇದನಾಚೋದಕಗಳು. ಅಂಥ
ಸಂವೇದನೆಗಳು ಚೋದಿಸುವ, ಪ್ರೇರಿಸುವ,
ಉದ್ಬೋಧಿಸುವ ಹೃದಯಸ್ಥಿತಿಯೇ ರಸ
ಅಥವಾ ಸೌಂದರ್ಯ. ಅಂಥ ರಸಪ್ರಜ್ಞೆಯು
"ಅನಾಸಕ್ತ ಆನಂದಕ್ಕೆ" ಕಾರಣ. ಆ ಬಗೆಯ
ಆನಂದವು ಸ್ಥಾಯಿಯಾದ ಭಾವನೆಯ ಸ್ವರೂ
ಪವುಳ್ಳದ್ದು.

ಸುಂದರ ಭಾವವನ್ನು ಮನದಲ್ಲಿ ಮೂಡಿಸ
ಬಲ್ಲ ಸಾಮಗ್ರಿವಿಶೇಷವನ್ನು ಸುಂದರ ಎನ್ನು
ವುದು ರೂಢಿ. ಮನಸ್ಸು ಪ್ರೇರ್ಯ; ನೈಸರ್ಗಿಕ
ಅಥವಾ ಕಲಾತ್ಮಕ ಸುಂದರ ದೃಶ್ಯವು ಪ್ರೇರಕ.
ಪ್ರೇರ್ಯವಾದ ಮನಸ್ಸಿನ ಸಂಸ್ಕಾರದ ಹದವು
ಪ್ರೇರಕಸಾಮಗ್ರಿಯ ಶಕ್ತಿಗೆ ನಿಯಾಮಕ;
ಹಾಗೇ ಪ್ರೇರಕ ಸಾಮಗ್ರಿಯ ಮನೋಹಾರಿ
ತ್ವವು ಬಂಧತಃ ಹೆಚ್ಚು ಕಡಿಮೆಯಾಗಿರು
ವುದು, ರಸಿಕ ಮನದ ಉದ್ಬೋಧ್ಯತೆಗೆ
ನಿಯಾಮಕ. ಬಂಧ, ರಚನೆ, ಅವಯವ
ಯೋಜನೆ ಅನ್ಯೂನವಾಗಿರುವುದು ಸುಂದರ;
ನ್ಯೂನವಾಗಿರುವುದು ಕುರೂಪ. ಈ ಅನ್ಯೂ
ನತೆ, ನ್ಯೂನತೆಗಳನ್ನು ನಿರ್ಧರಿಸಲು ಉದ್ದಿಷ್ಟ
ಪರಿಣಾಮವೇ ಮಾನದಂಡ. ಅಕ್ಷರ-ಪದ-
ವರ್ಣ-ಧ್ವನಿ-ಕಾಲ-ದೇಶಗಳ ಪ್ರಮಾಣಬದ್ಧ
ವಿನ್ಯಾಸವು ಸೌಂದರ್ಯಪ್ರೇರಕವಾಗಬಲ್ಲುದು.
ಒಂದೊಂದು ಪ್ರಮಾಣವು (Ratio, propor-
tion) ಒಂದೊಂದು ರಸಿಕ ವರ್ಗಕ್ಕೆ ರಸೋ
ದ್ಬೋಧವಾಗಲು ಸಾಕಾಗುತ್ತದೆ. ಆದುದರಿಂದ
ಒಂದು ವರ್ಗಕ್ಕೆ ಸುಂದರವೆನಿಸಿದ್ದು
ಇನ್ನೊಂದಕ್ಕೆ ಕುರೂಪವೆನ್ನಿಸಬಹುದಾಗಿದೆ!

ಆದರೆ ಹುಚ್ಚು ಹಿಡಿದ ಮನುಷ್ಯರನ್ನು
ಜಗತ್ತಿನ ತದಿತರ ಬಹುಸಂಖ್ಯರು ಹುಚ್ಚು
ಹಿಡಿದವರೆಂಬ ಏಕಮತಕ್ಕೆ ಬರಲು ಹೇಗೆ
ಸಾಧ್ಯವೋ ಹಾಗೇ ಅನಾಸಕ್ತ ಆನಂದವನ್ನು
ಉಂಟು ಮಾಡಬಲ್ಲ ವಸ್ತು-ವ್ಯಕ್ತಿ-ಕಲ್ಪನೆ
ಯೊಂದು ಬಹುಸಂಖ್ಯರ ಮನ್ನಣೆಗೆ ಪಾತ್ರ
ವಾಗಿ ಸುಂದರವೆನಿಸಬಹುದು ಎಂಬುದು
ವ್ಯವಹಾರ್ಯ; ಹಾಗೇ ಅಂಥ "ಅನಾಸಕ್ತ"
ಆನಂದವನ್ನು ಮೂಡಿಸಲಾರದ ಪ್ರಜ್ಞೆಯನ್ನು
ಉದ್ಬೋಧಿಸುವ ಸಂವೇದನೆಗಳನ್ನು ಪ್ರೇರಿ
ಸುವ ವಸ್ತು ಅಥವಾ ಪದಾರ್ಥವು ಬಹು
ಸಂಖ್ಯರಿಂದ ಕುರೂಪವೆಂದು ಕರೆಯಿಸಿ
ಕೊಂಡೀತು. ಅನ್ಯಾಸಕ್ತಿಯಿಂದ ರಹಿತವಾಗಿ
ತದೇಕಾಸಕ್ತಿಯಲ್ಲಿ ಮನಸ್ಸನ್ನು ಹಿಡಿದಿಡ
ಲಾರದ ನೈಸರ್ಗಿಕ ಅಥವಾ ಕಲಾತ್ಮಕ ಪದಾ
ರ್ಥವು ಕುರೂಪವೆಂದು ಹೇಳಬಹುದಲ್ಲವೆ?
ಧೀಮಂತರಿಗೆ ಉದ್ವೇಗವನ್ನು ಉಂಟು
ಮಾಡುವ ಅಂಶವು ದುಷ್ಟ, ವಿರಸಾವಹ
ಎಂದು ದಂಡಿಯು ಹೇಳಿದ್ದು ಉಕ ಅರ್ಥ
ದಲ್ಲಿ. ಧೀಮಂತರು ರಸಿಕತೆಯ ನಾಯ…ಕರು,
ನೇತೃಗಳು; ಅವರು ವಿದಗ್ಧರು, ಸೌಂದರ್ಯ
ದರ್ಶನದಲ್ಲಿ ಪಳಗಿದವರು. ಬಹುಸಂಖ್ಯರು
ಅಭಿರುಚಿಯಲ್ಲಿ ಅವರ ಅನುಯಾಯಿಗಳು.

## ಸೌಂದರ್ಯದರ್ಶನ

ಕಾಮಪ್ರಚೋದಕ ಪದಾರ್ಥವು ಅನಾಸಕ್ತ
(Disinterested) ಆನಂದಕ್ಕೆ ಕಾರಣವಾಗ
ಲಾರದು. ಆದುದರಿಂದ ಅದು ವಸ್ತುತಃ
ಕುರೂಪವೇ ಸರಿ. ಅದು ಉದ್ಬೋಧಿಸುವ
ಪ್ರಜ್ಞೆಯು ರಸಪ್ರಜ್ಞೆಯಲ್ಲ. ವಿತ್ತವಂತಿಕೆ
ಯನ್ನು ವಿದ್ಯಾವಂತಿಕೆ ಎಂದು ಕರೆಯುವುದು
ತಪ್ಪಾಗುವ ಹಾಗೆ ಅರ್ಥ-ಕಾಮವಾಸನೆ
ಗಳನ್ನು ಪ್ರೇರಿಸುವ ಪ್ರತ್ಯಕ್ಷಾಪ್ರತ್ಯಕ್ಷ,
ಜ್ಞಾತಾಜ್ಞಾತ ಗುರಿಯುಳ್ಳ ವ್ಯಕ್ತಿ, ವಸ್ತು
ಅಥವಾ ಕಲ್ಪನೆ ಸುಂದರವೆನಿಸದು; ಅದು
ಅಸುಂದರ. ಸೌಂದರ್ಯದರ್ಶನವಷ್ಟರಿಂದ ತೃಪ್ತ
ವಾಗುವ ಮನಸ್ಸು ಸುಂದರ; ಸೌಂದರ್ಯದರ್ಶನ
ಮಾತ್ರವನ್ನುಂಟು ಮಾಡಿ ವಿರಮಿಸಬಲ್ಲ ಪದಾ
ರ್ಥವು ಸುಂದರ. ಇವುಗಳಿಂದ ಭಿನ್ನವಾದುದು
ಅಸುಂದರ. ತನ್ನ ಒಡೆಯತನಕ್ಕಿನ್ನೊಂದನ್ನು
ಒಳಪಡಿಸಿಕೊಳ್ಳಬೇಕೆಂಬ ಹಂಬಲು ಹೇಗೆ
ಶುದ್ಧಪ್ರೇಮವೆನಿಸಲಾರದೋ ಹಾಗೇ ಅಂಥ
ಹಂಬಲನ್ನು ಪೂರ್ವಗ್ರಹವನ್ನಾಗಿ ಇಟ್ಟು
ಕೊಂಡ ಮನಸ್ಸೂ ಇಟ್ಟುಕೊಳ್ಳದ ಮನಸ್ಸಿ
ನಲ್ಲಿ ಅಂಥ ಹಂಬಲವನ್ನು ಉದ್ಬೋಧಿಸುವ
ವಸ್ತುವೂ ಕುರೂಪಯುಕ್ತ. ರಸಿಕರ ಹಾಗೂ
ರಸ್ಯಮಾನ ವಸ್ತುಗಳ ಆವರಣವನ್ನು ಮಾನಸ
ಶಾಸ್ತ್ರೀಯವಾಗಿ ಶೋಧಿಸಿದಾಗ ಇಬ್ಬಣಗಳ
ಲ್ಲಿಯೂ ಕುರೂಪಭಾವವಿದೆಯೋ ಕೇವಲ
ಒಂದರಲ್ಲೇ ಇದೆಯೋ ಎಂಬುದು ಸ್ಪಷ್ಟವಾಗು
ತ್ತದೆ. ಸಂದೇಹಾಸ್ಪದವಾದ ಸಂದರ್ಭಗಳಲ್ಲಿ
ಅದೊಂದೇ ನಿರ್ಣಯೋಪಾಯ.

ರಸದ ಅಥವಾ ಸೌಂದರ್ಯದ ಅಸ್ವಾದ
ಸೀಮೆಯ ಹೊರಗಿನ ಆಸಕ್ತಿಗಳೆಲ್ಲಾ ವಿರಸಾ-
-ಸ್ವಾದಕಾರಕಗಳು. ಅಂಥಆಸಕ್ತಿಗಳು ಪೂರ್ವ
ಗ್ರಹಗಳಾಗಿದ್ದಲ್ಲಿ ರಸಿಕನು ನಿಂದ್ಯ; ಅವು
ಉತ್ತರಗ್ರಹಗಳಾಗಿ ಮೂಡಿದಲ್ಲಿ ರಸ್ಯಮಾನ
ವೆಂದಿಟ್ಟುಕೊಂಡ ವಸ್ತುವು ನಿಂದ್ಯ. ಪೂರ್ವ
ಗ್ರಹಗಳಲ್ಲಿ ವ್ಯಕ್ತಿದ್ವೇಷ, ವಿಚಾರದ್ವೇಷ,
ಅನ್ಯೋದ್ದೇಶ, ಅಪಕಲ್ಪನೆಗಳು ಪ್ರಮುಖ
ವಾಗಿವೆ. ಕನ್ನಡಿಯನ್ನು ಧೂಳು ಮುಚ್ಚಿ
ದಂತೆ ಅವು ಮನಸ್ಸನ್ನು ಮುಸುಕಿಕುರುಡಾಗಿ
ಸುತ್ತವೆ. ಉತ್ತರಗ್ರಹಗಳಲ್ಲಿ ಕಾಮ, ಕ್ರೋ
ಲೋಭ, ಮೋಹ, ಮದ, ಮಾತ್ಸರ್ಯಗಳ
ಗಣ್ಯ. ಅವನ್ನು ಅಸಾತ್ವಿಕವಾದ ಕೊನೆಯ
ಪರಿಣಾಮಗಳನ್ನಾಗಿ ಉದ್ಬೋಧಿಸುವಂ
ಹೂಡಿದ ಸಾಮಗ್ರೀಯೋಜನೆಯೆಲ್ಲಾ
ಕುರೂಪ, ಅಪರೂಪ, ವಿರೂಪ, ವಿರಸ!

ಮೇಲಿನ ಸೂತ್ರದಂತೆ ಹಲವು ವ್ಯಕ್ತಿಗ
ಹಾಗೂ ಕಲಾಕೃತಿಗಳ ಪ್ರಭಾವಕತೆಯನು
ಪರಾಮರ್ಶಿಸಿದರೆ ನಿಜವಾದ ಸುಂದರ ಪದಾ
ರ್ಥಗಳು ಬಹಳ ಕಡಿಮೆ ಎಂಬುದು ಕಂಡ
ಬರದಿರದು. ನೈಸರ್ಗಿಕ ಕೃತಿಗಳೆನಿಸಿ
ಮನುಷ್ಯೇತರ ರೂಪ ಮತ್ತು ಅದರ ಕಲಾನು
ವಾದದಲ್ಲೇ ಶುದ್ಧವಾದ ಸೌಂದರ್ಯೋದ್ಬೋ
ಕತೆ ಇದೆ ಎನ್ನಬಹುದಲ್ಲವೆ? ಈ ದೃಷ್ಟಿಯಿಂ
ದಲೇ ಐನ್‌ಸ್ಟೀನ್ ಚಿತ್ರಿಸಿದ ವಿಶ್ವರೂಪದ
ವಿಶ್ವವು ಸುಂದರ ಎನ್ನಬೇಕು!

"ವಿಶ್ವತಃ ಚಕುರುತ ವಿಶ್ವತೋ ಮುಖೋ
ವಿಶ್ವತೋ ಬಾಹುರುತ ವಿಶ್ವತಃಪಾತ್!"

ಎಂಬ ವಿರಾಟ್‌ದರ್ಶನವನ್ನು ಪಡೆದ ಋಷಿ
ಕಂಡ ವಿಶ್ವದರ್ಶನವು (ವಿಶ್ವಾತ್ಮದರ್ಶನವು)
ಐನ್‌ಸ್ಟೀನ್‌ದರ್ಶನಕ್ಕೆ ದೂರವೆನಿಸದು. ಈ
ಮಟ್ಟದಿಂದ ನೋಡಿದರೆ ವಿಶ್ವದಲ್ಲಿ ಕುರೂಪ
ವೆಂಬುದೇ ಇಲ್ಲ! ಆದರೆ ವಿಶ್ವದ ಒಡಲೊಳಗಿ
ರುವ(Systems) ಪದಾರ್ಥಸ್ತೋಮ ಅಥವಾ
ಪುಂಜಗಳು ಇಲ್ಲವೆ (Bodies) ನಿಕಾಯಗಳ
ವರ್ಗತಃ ಹಾಗೂ ವ್ಯಕ್ತಿಶಃ ಸಾಪೇಕ್ಷ ಸಂಬಂಧ
ವುಳ್ಳವುಗಳಾದುದರಿಂದ ಸೌಂದರ್ಯ ಮತ್ತು
ರೂಪಗಳೆಂಬ ಭಾವ ಅಥವಾ ಮೌಲ್ಯಗಳ
ಪರಸ್ಪರ ಸಾಪೇಕ್ಷ.

## ಆರು ಅರ್ಥಗಳು

ಕುರೂಪವನ್ನು ಅರೂಪ ಅಥವಾ ಅಸುಂ-
ದರ ಎಂದಿಟ್ಟುಕೊಂಡರೆ, ಅದಕ್ಕೆ ಆರು ಅರ್ಥ
ಗಳನ್ನು ಮಾಡಬಹುದು: (೧) ಕುರೂಪವು
ಸುರೂಪಕ್ಕೆ ಸದೃಶ; (೨) ಸುಂದರವಾದುದರ
ಅಭಾವವು ಅಸುಂದರ; (೩) ಕುರೂಪವು
ಸುರೂಪೇತರ; (೪) ಅಲ್ಪ ಸುಂದರ ಎನಿಸಿದ್ದು
ಅಸುಂದರ; (೫) ಅಪ್ರಶಸ್ತ ಸೌಂದರ್ಯ
ವುಳ್ಳದ್ದು ಅಸುಂದರ; (೬) ಸೌಂದರ್ಯ
ಧರ್ಮಕ್ಕೆ ವಿರುದ್ಧವಾದುದು ಕುರೂಪ
ಧರ್ಮ. ಇದರಿಂದ ಸೌಂದರ್ಯದ ಲಕ್ಷಣವು
ಕುರೂಪಕ್ಕಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಸ್ವಾಭಾವಿಕವಾಗಿ ಅಥವಾ ವೈಯುಕ್ತಿಕವಾಗಿ
ಇಂದ್ರಿಯಪ್ರಜ್ಞೆ ಅಥವಾ ಕಲ್ಪನಾಶಕ್ತಿಗೆ
ಗೋಚರವಾಗುವಂತೆ (ಮತ್ತು ಅದೇ ಮಾಧ್ಯ
ಮದಲ್ಲಿ ಸಾಮಾನ್ಯ ಅಥವಾ ಸೂಕ್ಷ್ಮ ರೀತಿ
ಯಿಂದ ಪ್ರಕಟವಾಗುವ ಶಕ್ತಿಯ ನಿಯಮ
ಗಳಿಗೊಳಪಟ್ಟು) ಪ್ರಕಟವಾಗುವ ಅಥವಾ
ಅಭಿವ್ಯಕ್ತವಾಗುವ ಶಕ್ತಿಯು ಯಾವುದಕ್ಕಿ
ದೆಯೋ ಅದು ಸುಂದರ ಎಂಬದೊಂದು
ಪ್ರಸಿದ್ಧವಾದ ಸೌಂದರ್ಯ ಲಕ್ಷಣ. ಈ ಮಾ

ಂದ ರಸಧ್ವನಿಗೆ ಸೌಂದರ್ಯವೆಂಬ ಾತ್ಪರ್ಯವು ಹೊರಡುತ್ತದೆ. ಇಲ್ಲಿ ರಸವು ಸಾರ, ತ್ಮ, ಸತ್ಯ. ಅದರ ಶರೀರವು ಸುಪ್ರಸಿದ್ಧ ಾಗಿ ಕಾವ್ಯ ಅಥವಾ ಸಾಹಿತ್ಯ. ಕವಿಯು ರಸ ೂಪದ ಮನಃಪ್ರಜ್ಞೆಯನ್ನು ಸರಿಯಾಗಿ, ಯುಕ್ತವಾಗಿ, ಉಚಿತವಾಗಿ, ಸಮನ್ವಿತವಾಗಿ ್ರಕಟಿಸುವ ಅಥವಾ ಧ್ವನಿಸುವ ಶಕ್ತಿ ೌಂದರ್ಯವೆಂದಾಗುತ್ತದೆ; ಅದರಿಂದ ಭಿನ್ನ ಾದ-ಅರ್ಥಾತ್ ಉಚಿತವಾಗಿ ಸಮಂಜಸ ಾಗಿ ಪ್ರಕಟಿಸಲಾರದ ಮಾರ್ಗವು ಕುರೂಪ. ಾಮಗ್ರಿಗಳ ಸುಸಂಯೋಜನೆಯು ಸೌಂದರ್ಯ ಾದರೆ ಅವುಗಳ ಅಪಸಂಯೋಜನೆಯು ಕುರೂಪ. ಈ ಸಂಯೋಜನಾ ಕ್ರಿಯೆಯನ್ನು ಶಕ್ತಿ, ಮಾರ್ಗ, ರೀತಿ, ಶೈಲಿ, ರೂಪ, ಆಕೃತಿ, ಧ್ವನಿ ಮುಂತಾದ ಪದಗಳಿಂದ ವರ್ಣಿಸಲಾಗು ತ್ತದೆ. ರಚನೆ, ವಿನ್ಯಾಸ, ಬಂಧ, ಅಂಗಸಮ ನ್ವಯ ಎಂಬ ಪದಗಳಾದರೂ ಸಾರತಃ ಸಂಯೋಜನಾರ್ಥಕಗಳೇ. ಕ್ರಿಯಾರ್ಥಕ, ಗುಣಾರ್ಥಕ ಮತ್ತು ಭಾವನಾಮಾರ್ಥಕ ಪದರೂಪಗಳ ಪ್ರತ್ಯೇಕತೆಯ ದೆಸೆಯಿಂದ ಸೌಂದರ್ಯವೆಂಬುದನ್ನು (ಹಾಗೇ ಕುರೂಪ ವೆಂಬುದನ್ನೂ) ಒಮ್ಮೆ ಕ್ರಿಯೆ ಅಥವಾ ಕಾರ್ಯ ವೆಂದು, ಇನ್ನೊಮ್ಮೆ ಧರ್ಮ ಅಥವಾ ಗುಣ ವೆಂದು, ಮತ್ತೊಮ್ಮೆ ಭಾವ ಅಥವಾ ಮೌಲ್ಯ ವೆಂದು ವ್ಯವಹರಿಸಲಾಗುತ್ತದೆ. ಅದು ಇಂದ್ರಿಯ ಪ್ರಜ್ಞೆಗೆ ಗೋಚರ ಎಂದೊಮ್ಮೆ ಹೇಳಿದರೆ, ಕಲ್ಪನಾಶಕ್ತಿಗೆ ಹಾಗೂ ಅತೀಂ ದ್ರಿಯ ಪ್ರಜ್ಞೆಗೆ ಗೋಚರವೆಂದು ಇನ್ನೊಮ್ಮೆ ಹೇಳಲಾಗುತ್ತದೆ. ಈ ಮಾತನ್ನು ಸುಂದರೇತರವಾದ ಅಸುಂದರಕ್ಕೂ ಅನ್ವ ಯಿಸಬೇಕಾಗುತ್ತದೆ. ಆದರೆ ವಿಶ್ವದಂತಹ ವಿಭು ಪದಾರ್ಥದ ಅಖಂಡ ಸೌಂದರ್ಯಕ್ಕೆ ಮಾತ್ರ ತದ್ಭಿನ್ನವಾದ ಕುರೂಪ ಕಲ್ಪನೆ ಅನ್ವ ಯಿಸದು. ಬೇಕಾದರೆ ಯಾರಾದರೂ ಅದನ್ನು ಅಖಂಡ ಕುರೂಪವೆಂದು ಹೇಳ ಬಹುದು! ಕಾಲ-ದೇಶಗಳ ಕಟ್ಟಿನಲ್ಲಿ (ಅಥವಾ ಅದು ಸುಂದರ-ಅಸುಂದರ ಎಂಬ ವಿವೇಕಕ್ಕೆ ಮೀರಿದ್ದು ಎಂದೂ ಹೇಳಬಹುದು) ನಿತ್ಯವೂ ಸ್ಥಿತ್ಯಂತರ ಹೊಂದುತ್ತಿರುವ ಯಾವ ಪದಾರ್ಥವೂ ಎಲ್ಲ ದೇಶ-ಕಾಲಗಳಲ್ಲಿ ನಿತ್ಯ ವಾಗಿ ಸುಂದರ ಅಥವಾ ಅಸುಂದರ ಎಂದೆನಿ ಸದು. ಜೊತೆಗೆ, ಯಾವ ಒಂದು ಪದಾರ್ಥವೂ ಸಂಪೂರ್ಣ ಸುಂದರ ಇಲ್ಲವೆ ಸಂಪೂರ್ಣ ಅಸುಂ ದರ ಎಂದು ಹೇಳಲು ಈ ಪರಿವರ್ತನಶೀಲವೂ ಸಾಪೇಕ್ಷತಾಬದ್ಧವೂ ಆದ ಪದಾರ್ಥ-ಪದಾರ್ಥ ಸ್ತೋಮಗಳ ರಾಶಿಯಲ್ಲಿ ಸಾಧ್ಯವಾಗದು.

## ಸುಖ-ದುಃಖ—ರಸ-ವಿರಸ

ಪಾಶ್ಚಾತ್ಯ ಸೌಂದರ್ಯಶಾಸ್ತ್ರದ ಇತಿಹಾಸ ವನ್ನೂ ವಿಮರ್ಶೆಯನ್ನೂ ಬರೆದ ಬರ್ನಾರ್ಡ್ ಬೊಸಾಂಕೆಯು ತನ್ನ ಪುಸ್ತಕದ ಕೊನೆಯಲ್ಲಿ "ಸುಖ (ಆನಂದ)—ದುಃಖಗಳ ಸಾಮಾನ್ಯ ಸಿದ್ಧಾಂತವು ರಸ-ವಿರಸಗಳನ್ನು ವಿವೇಚಿಸುವ ಸೌಂದರ್ಯಸಿದ್ಧಾಂತಕ್ಕೆ ಹೇಗೆ ಸಂಬಂಧಿಸು ತ್ತದೆ? ಪ್ರಕಟನೀಯ ಪದಾರ್ಥಕ್ಕೂ ಪ್ರಕಟನ ಕಾರ್ಯಕ್ಕೂನಡುವೆ ಯಾವ ಮಾನಸಿಕ ಸಂಬಂಧ ವಿದೆ? ಅಥವಾ ರಸ—ವಿರಸಗಳ ಸ್ವಭಾವಕ್ಕೂ ಅವುಗಳ ಸುಖ ದು:ಖದಾಯಕತೆಗೂ ನಡುವೆ ಇರುವ ಮಾನಸಿಕ ಸಂಬಂಧವು ಯಾವ ಬಗೆ ಯದು ?" ಎಂಬ ಪ್ರಶ್ನೆಯನ್ನಿಟ್ಟಿದ್ದಾನೆ.

ಲೌಕಿಕವಿರಲಿ, ಕುಲೋದ್ಬುದ್ಧವಿರಲಿ— ಸುಖ ದು:ಖಗಳೆಂಬಿವು ಭಾವನೆಯ ಜಾತಿಗೆ ಸೇರುತ್ತವೆ. ಎಲ್ಲ ಭಾವನೆಗೂ ( Conative Back-ground ) ಇಚ್ಛಾತ್ಮಕವಾದ ಹಿನ್ನೆಲೆ ಯಿರುತ್ತದೆಂದು ಸ್ಟೌಟನ ಹೇಳಿಕೆ; ಮತ್ತು ಒಂದು ಭಾವನೆಯನ್ನು ಇಂಥದೇ ಎಂದು ಗುರುತಿಸಲು ಬೌದ್ಧಿಕ ಪ್ರಜ್ಞೆಯ ಸಹಾಯ ಅವಶ್ಯಕ. ಇಂದ್ರಿಯಾನುಭವದ ಕೆಳಮಟ್ಟದಿಂದ ಮನಸ್ಸಿನ ಭಾವಿಕ ಹಾಗೂ ಕಲ್ಪಕ ಚಟುವಟಿಕೆಗಳ ವರೆಗೂ ನಿರ್ದಿಷ್ಟ ಜಾತಿಗಳಿಗೆ ಸೇರಿದ ಭಾವನೆಗಳು ಕಂಡುಬರು ತ್ತವೆ. ಉದ್ಬುದ್ಧವಾದ ಭಾವನೆಗೆ ಎದುರಿಗೆ ಸಿಕ್ಕ ವಸ್ತುವನ್ನು ಗ್ರಹಿಸುವ, ಆಕ್ರಮಿಸುವ, ಅಂಟಿಕೊಳ್ಳುವ, ಹರಿಹಾಯುವ ಒಂದು ಲಕ್ಷಣವಿದೆ ಎಂದು ಹೇಳಲಾಗುತ್ತದೆ. ಅದು ಪರಿಸ್ಥಿತಿಗೆ ಅನುಗುಣವಾಗಿ ಶಕ್ತ್ಯನುಸಾರ ವಿಶೇಷ ರೂಪವನ್ನು ತಾಳಬಲ್ಲದು. ಆದರೆ ಸೌಂದರ್ಯ ದರ್ಶನದಿಂದ ಉದ್ಬುದ್ಧವಾದ ಭಾವ ನೆಗೆ ಪರಾಕ್ರಮಣದ ಗುಣವಿಲ್ಲ; ಅದರ ಕರ್ತೃತ್ವಕ್ಕೆ ಅದೇ ಕರ್ಮ. 'ಸ್ವಾಕಾರವದ- ಭಿನ್ನತ್ವೇನ ಅಯಮಾಸ್ವಾದ್ಯತೇ ರಸಃ' ಎಂಬುದನ್ನಿಲ್ಲಿ ನೆನೆದುಕೊಳ್ಳಬಹುದು. ಈ ಆಸ್ವಾದ ಅಥವಾ ರಸ್ಯಮಾನ ಮನಃ ಸ್ಥಿತಿಯು ನ್ಯೂನಾಂಗವಾಗಿದ್ದರೆ "ಅನಾಸಕ್ತ ಆನಂದ"ದಲ್ಲದು ವಿರಾಮಹೊಂದದು. ತನಗೆ ತಾನೇ ಕೊನೆಯ ಗುರಿಯೆನ್ನಿಸದ ಮನ ಸ್ಥಿತಿಯು ಸರಸವಲ್ಲ, ವಿರಸ— ರಸಭಿನ್ನ ರಸಾವಸ್ಥೆಯು ಕೇವಲ ಸ್ವನಿಷ್ಠ, ಸ್ವಲೀನ; ಅಂಥ ಸ್ವಲೀನ ರಸಾವಸ್ಥೆಗೆ ಅನ್ಯಕಾರಣಗ ಳಿಂದ ಉದ್ಬುದ್ಧವಾಗದ ಆನಂದ ಪರಿಣಾಮ ವಿರುವುದು ಅನುಭವ ಸಹಜ. ಸಾಮಗ್ರಿಗಳ ಸಂಯೋಜನೆ ರಸ ಆನಂದ ಎಂಬ ಪ್ರೇರಣಾ ಪ್ರಕ್ರಿಯೆಯ ಸೂತ್ರವನ್ನೆದುರಿಟ್ಟುಕೊಂಡರೆ, ಸಾಮಗ್ರಿಗಳ ನ್ಯೂನಸಂಯೋಜನೆ ವಿರಸ, ದುಃಖ, ಅಸಮಾಧಾನ, ಅಲ್ಪಾನಂದ ಎಂಬ ಸೂತ್ರದ ರಚನೆ ಸುಲಭವಾಗುತ್ತದೆ. ನ್ಯೂನತೆ, ದೋಷ ಅಥವಾ ಅನೌಚಿತ್ಯವುಳ್ಳ ಪ್ರೇರಕವ್ಯಕ್ತಿ ಅಥವಾ ವಸ್ತು ಇಲ್ಲವೆ ಕೃತಿ ಅಸುಂದರ; ಅದು ಸುಂದರ ಅಥವಾ ರಸ್ಯ ಮಾನ ಮನಃಸ್ಥಿತಿಯನ್ನು ಮನುಷ್ಯನಲ್ಲಿ ಪೂರ್ಣವಾಗಿ ಉಂಟುಮಾಡಲಾರದು, ಮಾಡಿ ಸಲಾರದು ಎಂದೀಗ ಹೇಳಬಹುದಲ್ಲವೆ?

ಮಾನವ ವ್ಯವಹಾರದ ಕಲಾತ್ಮಕ ಚಿತ್ರಣ ದಲ್ಲಿ ಸುಪ್ರಸಿದ್ಧ ಸಾಮಾಜಿಕ, ನೈತಿಕ ಮೌಲ್ಯ ಗಳನ್ನು ಸಾಕಷ್ಟು ಸಾಂದರ್ಭಿಕ ಸಮರ್ಥನೆ ಯಿಲ್ಲದೆ ಕಡೆಗಣಿಸಲಾಗಿದೆ ಎಂದೊಮ್ಮೆ ರಸಿಕ ನಿಗೆನಿಸಿದರೆ ಅದೊಂದು ದುಃಶ್ಚಿತ್ರಣವೆನ್ನಬೇ- ಕಾಗುತ್ತದೆ; ಅದು ವಿರಸಾವಹ. ಇದೇ ಅಶ್ಲೀಲ—ಅನಶ್ಲೀಲಗಳ ಪ್ರಶ್ನೆಯ ಬುಡ. ಕಲೆಯ ಭಾಷೆಯಲ್ಲಿ ಕುರೂಪ-ಸುರೂಪಗಳ ಪ್ರಶ್ನೆಯೇ ಪ್ರಧಾನ. ಆದರೆ ಕಲೆಗೆ ಹಿನ್ನೆಲೆ ಯಾಗಿ ನಿಲ್ಲುವ ಜೀವನ ನೀತಿವಿಜ್ಞಾನದ ಭಾಷೆ ಯಲ್ಲಿ ವಿರಸಕ್ಕೆ ಕಾರಣವಾಗುವುದು ಅಶ್ಲೀಲ ಎಂದು. ವ್ಯಕ್ತಿಯ ವರ್ತನಾಂಶಗಳ ಅಪ- ಸಂಯೋಜನೆಯು ಅಶ್ಲೀಲಪ್ರತೀತಿಗೆ ಕಾರಣ. ವ್ಯಕ್ತಿತ್ವದ ಅಥವಾ ಸಾತ್ಯದಸೌಂದರ್ಯಕ್ಕೆ(ಅದರ ರಚನೆಯ ಸಾಮಗ್ರಿಗಳಲ್ಲಿ ಪ್ರಧಾನವಾದ) ಚಾರಿತ್ರವು ಆಧಾರ. ಚಾರಿತ್ರದ ಗ್ರೇಡುಗಳು ಅತ್ಯಂತ ನೀಚ ಎನ್ನಿಸುವ ಮಟ್ಟದಿಂದ ಅತ್ಯುಚ್ಚ ಎನ್ನಿಸುವ ವರೆಗೆ ಬಹು ಸಂಖ್ಯ ವಾಗಿವೆ— ಅತಿ ಕುರೂಪದಿಂದ ಅತಿ ಸುರೂ ಪದ ವರೆಗೆ ಗ್ರೇಡುಗಳಿರುವ ಹಾಗೆ. ಆದು ದರಿಂದ ಜೀವನದಲ್ಲಿ ಹೇಗೋ ಹಾಗೇ ಕಾವ್ಯ ದಲ್ಲೂ (Personality) ವ್ಯಕ್ತಿತ್ವದ ಸಮಗ್ರ ಪ್ರಭಾವಿಕತೆಯಲ್ಲದೆ ಕೇವಲ ಭೌತಿಕ ಶರೀ ರದ ಸೌಂದರ್ಯವು ನಿಜವಾದ ಸೌಂದರ್ಯವಲ್ಲ ಎಂಬುದು ಅನುಭವ ವಿಶ್ಲೇಷಣೆಗೆ ಗಮ್ಯ.

ಬೆಳಕು ಹೇಗೆ ಉಲ್ಲಾಸಕರವೋ ಹಾಗೇ (ಸಾಮಾನ್ಯ ಸಂದರ್ಭಗಳಲ್ಲಿ) ಕಗ್ಗತ್ತಲು ಅನುಲ್ಲಾಸಕರ. ಇದೇ ಮೇರೆಗೆ ನಿಜವಾದ ಕುರೂಪಾತಿಶಯವುಳ್ಳ ವ್ಯಕ್ತಿ, ವಸ್ತು, ಕಲ್ಪನೆಗಳಾದರೂ ಅನುಲ್ಲಾಸ ಪ್ರೇರಕಗಳಾಗುವುದು ಅನುಭವಸಿದ್ಧ. ಕಾರ್ಯ, ಕ್ರಿಯೆ, ಚಲನ, ಸ್ಪಂದನ, ಪ್ರಕ್ರಿಯೆ ಮುಂತಾ ದವುಗಳ ಬಗ್ಗೆ ಹೇಳುವ ಅಂಶಗಳ ಶುದ್ಧವೂ ಸೂಕ್ಷ್ಮವೂ ಆದ ರೂಪವೆಂದರೆ ಪ್ರೇರ್ಯ— ಪ್ರೇರಕಭಾವ. ಅಭಿಧಾನ-ಲಕ್ಷಣ-ಧ್ವನನಗಳೆ ಲ್ಲವೂ ಪ್ರೇರಣೆಯಲ್ಲಿ ಅಡಕವಾಗಬಲ್ಲವು; ಕಾರ್ಯ-ಕಾರಣಭಾವವೂ ಅದರಲ್ಲಿ ಸ್ಥಳ ಪಡೆಯಬಹುದು— ಸಂವೇದನೆಯ ಧಾರಾ ವಾಹಿತ್ವದ ಉದಾಹರಣೆಯಿದ್ದಲ್ಲಿ, ಇದರ ವಿಶೇಷ ವಿವರಣೆಯಿಲ್ಲಿ ಅಪ್ರಸ್ತುತ.

ಸೌಂದರ್ಯವನ್ನು ಕಲಾಸತ್ಯ ಎನ್ನುವು ದುಂಟು; ಆಗ ಅಸೌಂದರ್ಯವು ಕಲಾಂತರ್ಗತ ಅಸತ್ಯವೆನ್ನಿಸೀತು. ಆದರೆ ಅಸೌಂದರ್ಯವು ಳ್ಳದ್ದು ಅಕಲೆ ಅಥವಾ ವಿಕಲೆ; ಕಲೆಯಲ್ಲಿ ಅಸತ್ಯವಿಲ್ಲ, ಅಶ್ಲೀಲವಿಲ್ಲ, ಅರಸ-ವಿರಸ ಇಲ್ಲ. ಕಲೆ ಎನ್ನಿಸಿಕೊಳ್ಳುವಲ್ಲಿ ನೂರಕ್ಕೆ ೩೦ ಗುಣ ಗಳನ್ನೂ ಪಡೆಯಲಾರದ ಕೃತಿಯು ಕಲಾ ಕೃತಿಯೇ ಅಲ್ಲ. ಸತ್ಯ-ಶೀಲ-ರಸ-ಅನಾಸಕ್ತ ಆನಂದಗಳು ಧಾರಾರೂಪದ ಪ್ರೇರಣಾ ಪ್ರಕ್ರಿಯೆ. ವಸ್ತುಸತ್ಯದ ಪ್ರತಿಮೆಯನ್ನು ಸತ್ಯವೆಂದು ಭಾವಿಸುವುದು ಕಲಾಪ್ರಪಂಚದ ಸಾಮಾನ್ಯನೀತಿ ಎಂಬುದು ಸುವಿದಿತ.

# ಲಿಪಿಯಿಲ್ಲದೇ ಸಾಹಿತ್ಯ ನಿರ್ಮಿಸಿದ ಗಿರಿನಿವಾಸಿ ಮುಂಡರು

ಮಧ್ಯಪ್ರದೇಶದ ಛೋಟಾನಾಗಪುರ ಗಿರಿನಿವಾಸಿಗಳಾದ ಮುಂಡರು ತಮ್ಮ ಭಾಷೆಗೆ ಲಿಪಿಯಿಲ್ಲದಿದ್ದರೂ ಸಾಹಿತ್ಯನಿರ್ಮಾಣದಲ್ಲಿ ಮುಂದರಿದಿದ್ದಾರೆ. ಅವರ ಜನಪದ ಸಾಹಿತ್ಯ ಕಥೆ, ಗಾದೆ, ಒಗಟುಗಳು ವಿಚಾರಪ್ರಚೋದಕವಾಗಿರುವಂತೆ ಒಳ್ಳೇನೀತಿದಾಯಕವಾಗಿಯೂ ಇರುವವು. ಲೇಖಕರು ಈ ಸಾಹಿತ್ಯದ ಪರಿಚಯವನ್ನಿಲ್ಲಿ ಕೊಟ್ಟಿರುವರು.

ಲೇಖಕರು : **ಶ್ರೀ ಗೋರೂರು ರಾಮಸ್ವಾಮಿ ಅಯ್ಯಂಗಾರ, ಗೋರೂರು.**

ಭಾರತದ ನಾನಾ ಭಾಗದ ಗುಡ್ಡುಗಾಡಿನ ಮತ್ತು ಗಿರಿನಿವಾಸಿಗಳ ಪರಿಚಯ ಮಾಡಿಕೊಳ್ಳುವ ನಿಯೋಗವೊಂದನ್ನು ಅನುಸರಿಸುವ ಸುಯೋಗ ಈ ಲೇಖಕನಿಗೆ ಒದಗಿತ್ತು. ಅದರ ಫಲವೇ ಈ ಲೇಖನ.

ಉತ್ತರ ಭಾರತದ ಛೋಟಾನಾಗಪುರದ ಗುಡ್ಡಗಾಡಿನ ನಿವಾಸಿಗಳ ಪೈಕಿ ಮುಂಡರೆಂಬ ಒಂದು ಪಂಗಡವಿದೆ. ಇವರ ಸಂಖ್ಯೆ ಕೆಲವು ಸಾವಿರ ಮಾತ್ರ. ಇವರ ಭಾಷೆಗೆ ಲಿಪಿ ಇಲ್ಲ. ಆ ಭಾಷೆ ಹಿಂದೀ ಭಾಷೆಯ ಒಂದು ಅಪಭ್ರಂಶ. ಈಗ ಕೆಲವು ವರುಷಗಳ ಕೆಳಗೆ ಅವರಿಗೆ ಕ್ರಿಸ್ತಪಾದ್ರಿಗಳ ಸಂಪರ್ಕವುಂಟಾಗಿ ಕೆಲವರು ಓದುವುದನ್ನೂ ಬರೆಯುವುದನ್ನೂ ಹಿಂದಿ ಲಿಪಿಯನ್ನೂ ಕಲಿತಿದ್ದಾರೆ. ಮುಂಡಗಳು ಗುಡ್ಡಗಾಡಿನವರ ಪೈಕಿ ಸ್ವಲ್ಪ ನಾಗರಿಕರು.

ಇವರ ಹಳ್ಳಿಗಳು ಬೆಟ್ಟಗಳ ತಪ್ಪಲುಗಳಲ್ಲಿವೆ. ಪ್ರತಿ ಹಳ್ಳಿಗೂ ಎರಡು ಸಾರ್ವಜನಿಕ ಕಟ್ಟಡ ಅಥವಾ ನಿದ್ರಾಶಾಲೆಗಳಿವೆ; ಒಂದು ಹಳ್ಳಿಯ ಬ್ರಹ್ಮಚಾರಿಗಳಿಗೆ ( ಮದುವೆಯಾಗದವರಿಗೆ) ಮತ್ತೊಂದು ಹಳ್ಳಿಯ ಮದುವೆಯಾಗದ ಹುಡುಗಿಯರಿಗೆ. ಈ ನಿದ್ರಾಶಾಲೆಗಳಿಗೆ ಗಿಟಯೋರಾ ಎಂದು ಹೆಸರು. ಇವು ಮುಂಡಗಳಿಗೆ ಹಗಲು ಹೊತ್ತಿನಲ್ಲಿ ಆರಾಮ ಮತ್ತೂ ವಿಶ್ರಾಂತಿಗೃಹಗಳೂ ಹೌದು.

## ಲೋಕ ವ್ಯವಹಾರ ಜ್ಞಾನ

ಮುಂಡಗಳಿಗೆ ಅಕ್ಷರಜ್ಞಾನವಿಲ್ಲದಿದ್ದರೂ ಅವರಿಗೆ ಲೋಕವ್ಯವಹಾರಜ್ಞಾನವೂ ಸಂಸ್ಕೃತಿಯೂ ಕಡಿಮೆ ಇಲ್ಲ. ಈ ಸಂಸ್ಕೃತಿ ಅವರಿಗೆ, ಇತರ ಗಿರಿಜನರಿಗೆ ದೊರೆತಿರುವಂತೆ ಜನಪದ ಸಾಹಿತ್ಯ, ಜನಪದಕಥೆಗಳಿಂದ ದೊರೆಯುತ್ತದೆ. ಮುಂಡಜನಾಂಗ, ಕಥೆ ಒಗಟು ಸಾಹಿತ್ಯ ಲಾವಣಿ ಇವುಗಳ ಒಂದು ಕೋಶಾಗಾರವೆಂದೇ ಹೇಳಬಹುದು. ಲಿಪಿ ಇಲ್ಲದಿದ್ದರೂ ಮುಂಡಭಾಷೆಯ ಸಾಹಿತ್ಯ-ವೃದ್ಧರಾದವರಿಗೆ ಮಾತ್ರವೇ ಅಲ್ಲ—ಯುವಕರಿಗೂ ಚೆನ್ನಾಗಿ ಪರಿಚಯವಾಗಿದೆ. ಯುವಕರು ರಾತ್ರಿಯಿಂದ ಬೆಳಗಿನವರೆಗೆ ಒಂದೇ ಸಮನಾಗಿ ಕಥೆ ಹಾಡು ಲಾವಣಿಗಳನ್ನು ಹಾಡುತ್ತಿರುತ್ತಾರೆ. ಆ ಭಾಷೆ ನಮ್ಮಂತಹ "ಆಧುನಿಕ ನಾಗರಿಕರಿಗೆ" ಅರ್ಥವಾಗದಿದ್ದರೂ ಅದರ ಸ್ವರಮೇಳ ಧ್ವನಿಸಂಯೋಜನೆ ಇವು ಕೇಳುವುದಕ್ಕೆ ತುಂಬ ಹಿತವಾಗಿರುತ್ತದೆ. ಮುಂಡಜನಕ್ಕೆ ಜ್ಞಾನಸಂಪಾದನೆಯ ಮಾರ್ಗವೆಲ್ಲ ಈ ಜನಪದ ಸಾಹಿತ್ಯವೇ. ಇದರ ಪ್ರಚಾರ ಪ್ರತಿದಿನವೂ ನಡೆಯುತ್ತಿರುತ್ತದೆ. ಹಗಲು ಹೊತ್ತಿನಲ್ಲಿ ಮುಂಡರು ಗುಡ್ಡಗಾಡುಗಳಲ್ಲಿ ಕೆರೆಕೊಳಗಳಲ್ಲಿ ಬೇಟೆಯಾಡುತ್ತಿರುತ್ತಾರೆ. ಮೀನುಗಳನ್ನು ಹಿಡಿಯುವುದರಲ್ಲಿಯೂ ಹಕ್ಕಿಗಳನ್ನು ಹೊಡೆಯುವುದರಲ್ಲಿಯೂ ಇವರು ನಿಸ್ಸೀಮರು. ಗುಡ್ಡಗಳ ಇಳಿಜಾರು ಪ್ರದೇಶಗಳಲ್ಲಿ ಇವರು ಅಲ್ಪ ಸ್ವಲ್ಪ ವ್ಯವಸಾಯವನ್ನೂ ಮಾಡುತ್ತಾರೆ. ಇವರು ಪ್ರತಿದಿನವೂ ಸಂಜೆ ತಮ್ಮ ಆರಾಮಗೃಹದ ( ಗಿಟಯೋರಾ ) ಮುಂದೆ, ಬಯಲು ಬೆಂಕಿಯನ್ನು ಹಾಕಿಕೊಂಡು, ಜನಪದಸಾಹಿತ್ಯ ಒಗಟು ಕಥೆ ಗಾದೆ ಇವುಗಳನ್ನೆಲ್ಲ ಹೇಳುತಿರುತ್ತಾರೆ. ಇವು ಮದುವೆಯಾಗದ ಪುರುಷರ ಮತ್ತು ಸ್ತ್ರೀಯರ ಗಿಟಯೋರಗಳಲ್ಲಿ ಬೇರೆ ಬೇರೆ ನಡೆಯುತ್ತವೆ. ಸಂಧ್ಯಾಕಾಲವಾದ ನಂತರ ಬ್ರಹ್ಮಚಾರಿಗಳ ಗಿಟಯೋರಕ್ಕೆ ಸ್ತ್ರೀಯರೂ ಅವಿವಾಹಿತ ಸ್ತ್ರೀಯರ ಗಿಟಯೋರಕ್ಕೆ ಪುರುಷರೂ ಪ್ರವೇಶಿಸುವುದಿಲ್ಲ. ಮುಂಡಗಳು, ಬರಿದಾದ ಸೋರೆ ಬುರುಡೆಗಳಿಗೆ ಮೃಗದ ನೆಣದ ಬಿಗಿಯಾದ ಹುರಿಯನ್ನು ಕಟ್ಟಿಕೊಂಡು, ಅದರ ಶ್ರುತಿಗೆ ಅನುಸಾರವಾಗಿ ಹಾಡುತ್ತಾರೆ. ಇವರದು ಎತ್ತಿದ ಧ್ವನಿ. ಹೋ ಎಂದರೆ ಒಂದು ಮೈಲು ಕೇಳಿಸುತ್ತದೆ. ಕೆಮ್ಮಿದರೆ ನಾಲ್ಕು ಕಹಳೆಗಳ ಶಬ್ದವಾಗುತ್ತದೆ. ಒಬ್ಬ ಮುಂಡ ಬೆಳಿಗ್ಗೆ ಎದ್ದು ಓ ಎಂದರೆ ಪೂರ್ತಿ ಹಳ್ಳಿಯೇ ಎಚ್ಚರಗೊಳ್ಳುತ್ತದೆ.

## ಜನಪದ ಕತೆಗಳು

ಮುಂಡಗಳಲ್ಲಿ ಪ್ರಚಾರದಲ್ಲಿರುವ ಸಾಮಾನ್ಯ ಜನಪದ ಕಥೆಗಳಿಗೆ ಕಾಜಿ ಕಹಾನಿ ಎಂದು ಹೆಸರು. ಇವು ಗದ್ಯ ಕಥೆಗಳು. ಈ ಸಾಮಾನ್ಯ ಕಥೆಗಳಿಗಿಂತ ಹೆಚ್ಚು ರಸವತ್ತಾದ ಕಾವ್ಯಮಯವಾದ ಭಾವಪೂರ್ಣವಾದ ಕಥೆಗಳು ಕವಿತೆಗಳಲ್ಲಿವೆ. ಕಾಜಿ ಕಹಾನಿಯ ಉದಾಹರಣೆಗಾಗಿ ಹುಲಿ ಮತ್ತು ಕಳ್ಳ ( ಕುಲ ಅರ್ ಕುಂಬುರು ಅ ) ಈ ಕಥೆಯ ಉದಾಹರಣೆಯನ್ನು ಹೇಳಬಹುದು. ಕಥೆ ಹೀಗಿದೆ :

"ರಾಜನ ಕುದುರೆಯ ಲಾಯದಿಂದ ಕುದುರೆಯನ್ನು ಕದಿಯಬೇಕೆಂದು ಒಬ್ಬ ಕಳ್ಳ ನಿತ್ಯ ಲಾಯದ ಸುತ್ತ ರಾತ್ರಿಯ ವೇಳೆ ಹೊಂಚು ಹಾಕುತ್ತಿದ್ದ. ಪ್ರಾರಂಭದಲ್ಲಿ ಅನೇಕ ರಾತ್ರಿಗಳ ವರೆಗೆ ಅವನಿಗೆ ಅವಕಾಶವೇ ಸಿಕ್ಕಲಿಲ್ಲ. ಆದರೆ ಒಂದು ಅಮಾವಾಸ್ಯೆಯ ರಾತ್ರಿ ಲಾಯದ ಬಾಗಿಲಿನಲ್ಲಿ ಕಾವಲುಗಾರರು ಇಲ್ಲದಿದ್ದ ಸಮಯವನ್ನು ನೋಡಿ ಕಳ್ಳ ಲಾಯದ ಒಳಹೊಕ್ಕ. ಅದೇ ಸಮಯದಲ್ಲಿ ಬೇಟೆಯನ್ನು ಹುಡುಕುತ್ತಾ ಅಲ್ಲಿಗೆ ಬಂದಿದ್ದ ಒಂದು ಹುಲಿ, ಲಾಯದ ಸುತ್ತ ಹೊಂಚು ಹಾಕುತ್ತಾ ತಿರುಗುತ್ತಿದ್ದ ಕಳ್ಳನನ್ನು ಮೊದಲೇ ನೋಡಿತ್ತು. ಹುಲಿ ಕಾಡು ಪ್ರಾಣಿಯಾದರೂ ಕಳ್ಳರು ಕುದುರೆಗಳನ್ನು ಕದಿಯಲು ಲಾಯಕ್ಕೆ ಪ್ರವೇಶಿಸುವರೆಂಬುದು ಅದಕ್ಕೆ ಗೊತ್ತು. "ಹಸಿದಿರುವ ನನಗೆ ಬಹಳ ದಿವಸಕ್ಕೆ ಇಂದು ಮನುಷ್ಯ ಆಹಾರ ಹೊಟ್ಟೆತುಂಬ ಸಿಕ್ಕುತ್ತೆ" ಎಂದು ಸಂತೋಷದಿಂದ ಹುಲಿ ಲಾಯವನ್ನು ಪ್ರವೇಶಿಸಿ ಕುದುರೆಗಳ ಮಗ್ಗಲಲ್ಲಿ ಸದ್ದು ಮಾಡದೆ, ತಾನೂ ಒಂದು ಕುದುರೆಯಂತೆ ಅಡಗಿ ಕುಳಿತಿತು. ಲಾಯವನ್ನು ಪ್ರವೇಶಿಸಿದ ಕಳ್ಳನು ಯಾವುದು ಒಳ್ಳೆಯ ಬಲವಾದ ಕುದುರೆ ಎಂದು ನೋಡಲು ಪ್ರತಿ ಕುದುರೆಯ ಬೆನ್ನನ್ನೂ ಕತ್ತಲೆಯಲ್ಲಿ ಸವರಿ ನೋಡುತ್ತಾ ನಡೆದನು. ಕೊನೆಯಲ್ಲಿ ಅವನು ಹುಲಿಯ ಬೆನ್ನನ್ನೂ ಸವರಿದನು. ವಿಶಾಲವಾದ ಬೆನ್ನಿನ ಆ ಪ್ರಾಣಿಯನ್ನು ಸವರಿ ಇದೇ ಸರಿಯಾದ ಕುದುರೆಯೆಂದು ಅದರ ಬಾಯಿಗೆ ಕಡಿವಾಣವನ್ನೂ ಲಗಾಮನ್ನೂ ಹಾಕಿ, ತಾನು ಕತ್ತಲೆಯಲ್ಲಿಯೇ ಅದರ ಬೆನ್ನಿನ ಮೇಲೆ ಕುಳಿತನು.

## ಕಳ್ಳನ ಹುಲಿ ಸವಾರಿ

ಹುಲಿಗೆ ಮೊದಲಗಾಬರಿಯಲ್ಲಿ ಏನೂ ಗೊತ್ತಾಗಲಿಲ್ಲ. ಏನು ಮಾಡಬೇಕೆಂದು ಅದು ಯೋಚಿಸುತ್ತಿರುವಷ್ಟರಲ್ಲಿ ಕಳ್ಳ ಅದರ

ಬೆನ್ನಿನ ಮೇಲೆ ಕುಳಿತಿದ್ದನು. ನನ್ನ ಬೆನ್ನಿನ ಮೇಲೆ ಈ ಮನುಷ್ಯ ಹೀಗೆ ಕುಳಿತಿರಬೇಕಾದರೆ ಇವನು ನನಗಿಂತ ಹೆಚ್ಚು ಮಹಿಮಾವಂತನೂ ಶಕ್ತನೂ ಆಗಿರಬೇಕೆಂದು ಹುಲಿ ಯೋಚಿಸಿತು. ಅದಕ್ಕೆ ಎಂದೂ ಇಲ್ಲದ ಭಯವುಂಟಾಗಿ ಅದು ಒಂದೇ ಉಸುರಿಗೆ ತನ್ನ ಶಕ್ತಿಯನ್ನೆಲ್ಲ ಬಿಟ್ಟು ಓಡತೊಡಗಿತು. ಬೆನ್ನಿನ ಕಳ್ಳನೊಂದಿಗೆ ಅದು ಕಾಡು ಮೇಡು ಬೆಟ್ಟ ಗುಡ್ಡಗಳನ್ನೆಲ್ಲ ದಾಟುತ್ತಾ ರಾತ್ರಿ ರಾತ್ರಿಯೂ ಓಡತೊಡಗಿತು. ತಾನು ಕುಳಿತಿದ್ದ ಕುದುರೆ ಹೀಗೆ ಹುಚ್ಚು ಹತ್ತಿದಂತೆ ಓಡುತ್ತಿದ್ದುದನ್ನು ಕಂಡು ಕಳ್ಳನಿಗೂ ಭಯವಾಯಿತು. ಅದರ ವೇಗದಿಂದ ಅವನಿಗೆ ಉಸಿರಾಡುವುದೇ ಕಷ್ಟವಾಯಿತು. ಅವನು ಆಗಿಂದಾಗ್ಗೆ ಕುದುರೆಯ ಬೆನ್ನನ್ನು ಸವರುತ್ತಾ "ಅಶ್ವರಾಜ ಮೆತ್ತಗೆ ಮೆತ್ತಗೆ, ಸ್ವಲ್ಪ ನಿಲ್ಲು ಕುದುರೆಗಳ ದೊರೆಯೇ" ಎಂದು ಏದುಸಿರು ಬಿಡುತ್ತಾ ಹೇಳುತ್ತಿದ್ದನು. ಅದನ್ನು ಕೇಳಿ ಹುಲಿಗೆ ಇನ್ನೂ ಭಯವಾಗಿ ಅದು ಮೊದಲಿಗಿಂತಲೂ ವೇಗವಾಗಿ ಓಡತೊಡಗುತ್ತಿತ್ತು. ಕೊನೆಗೆ ರಾತ್ರಿ ಕಳೆದು ಬೆಳಗಿನ ಜಾವವಾಯಿತು. ಆಗ ನಸುಬೆಳಕಿನಲ್ಲಿ ಕಳ್ಳ ನೋಡುತ್ತಾನೆ! ಅಬ್ಬ ತಾನು ಸವಾರಿ ಮಾಡುತ್ತಿರುವುದು ಹದಿನಾರು ಹೆಜ್ಜೆ ಹುಲಿ. ಕಳ್ಳನಿಗೆ ಮೈ ಬೆವರಿತು, ಬಾಯಿ ಒಣಗಿತು. ಕೈಕಾಲು ನಡುಗಿದವು. ಆದರೆ ಭಯದಿಂದ ಅವನು ಕಂಗೆಡಲಿಲ್ಲ. ಕಳ್ಳರು ಯಾವ ಪರಿಸ್ಥಿತಿಯನ್ನೂ ಎದುರಿಸಲು ಸಿದ್ಧರಾಗಿರುತ್ತಾರೆ. ಹುಲಿ ಒಂದು ಮರದ ಕೆಳಗಡೆ ಓಡುತ್ತಿದ್ದಾಗ, ಕಳ್ಳ ಹುಲಿಯ ಬೆನ್ನಿನಿಂದ, ಬಾಗಿದ ಕೊಂಬೆಗೆ ಚೆಂಗನೆ ಜೋತುಬಿದ್ದು ಅಳಿಲಿನಂತೆ ಮರವೇರಿದನು. ತನ್ನ ಬೆನ್ನಿನ ಮೇಲಿದ್ದ ಭಾರ ಹೀಗೆ ಇದ್ದಕ್ಕಿದ್ದಂತೆ ಹಗುರವಾದುದನ್ನು ಕಂಡು ಹುಲಿಗೂ ನೆಮ್ಮದಿಯಾಯಿತು. ಹುಲಿ ಸಂತೋಷದಿಂದ 'ಸದ್ಯ ಬದುಕಿದೆ' ಎಂದುಕೊಂಡು ತನ್ನ ಕಾಡಿಗೆ ಗಾಳಿಯ ವೇಗದಲ್ಲಿ ಓಡಿಹೋಯಿತು. ಹುಲಿ ಹೊರಟು ಹೋದುದನ್ನು ಕಂಡು ಕಳ್ಳ ಮರದಿಂದ ಕೆಳಗೆ ಇಳಿದನು. ಆದರೆ ರಾತ್ರಿಯ ಶ್ರಮದಿಂದ ಒಂದು ಹೆಜ್ಜೆಯನ್ನೂ ಮುಂದಿಡಲಾರದೆ ಮರದ ಕೆಳಗೆ ಮಲಗಿಕೊಂಡು ಗೊರಕೆ ಹೊಡೆಯತೊಡಗಿದನು.

ಆಗ ಒಂದು ತೋಳ ಆಹಾರವನ್ನು ಹುಡುಕುತ್ತಾ ಆ ದಾರಿಯಲ್ಲಿ ಬಂದಿತು. ಮಲಗಿದ್ದ ಕಳ್ಳನನ್ನು ನೋಡಿ ತೋಳ ಅದೊಂದು ಹೆಣವೆಂದು ಭಾವಿಸಿತು. ಆ ಹೆಣವನ್ನು ತನ್ನ ಗುಹೆಗೆ ತೆಗೆದುಕೊಂಡು ಹೋಗಿ ನಿಧಾನವಾಗಿ ತಿನ್ನಬೇಕೆಂಬುದು ಅದರ ಹಂಚಿಕೆ. ಆದರೆ ಧಾಂಡಿಗನಾಗಿದ್ದ ಕಳ್ಳನನ್ನು ಸಾಗಿಸಲು ತೋಳಕ್ಕೆ ಒಂದಕ್ಕೇ ಆಗುತ್ತಿರಲಿಲ್ಲ. ಸಹಾಯಕ್ಕೆ ಮತ್ತಾವುದಾದರೂ ಪ್ರಾಣಿಗಳು ಸಿಕ್ಕಬಹುದೇ ಎಂದು ಹುಡುಕುತ್ತಾ ಅದು ಕಾಡಿನಲ್ಲಿ ಹೊರಟಿತು. ಸ್ವಲ್ಪ ದೂರದಲ್ಲಿ ಅದೇ ಹುಲಿ ಆಯಾಸ ಪರಿಹಾರ ಮಾಡಿಕೊಳ್ಳುತ್ತಾ ಕುಳಿತಿತ್ತು. ತೋಳ ಹುಲಿಯನ್ನು ಕಂಡು "ಮಿತ್ರ, ನಿನಗೆ ಒಳ್ಳೆಯ ಆಹಾರ ಕಂಡುಕೊಂಡು ಬಂದಿದ್ದೇನೆ ಬಾ" ಎಂದಿತು. ರಾತ್ರಿಯ ಅನುಭವದಿಂದ ಹುಲಿಗೆ ಎಲ್ಲದರಲ್ಲಿಯೂ ನಂಬಿಕೆ ತಪ್ಪಿ ಹೋಗಿತ್ತು. ಅದು ತೋಳನಿಗೆ "ನನ್ನನ್ನು ತಳ್ಳಲು ನೀನು ಮಾಡಿರುವ ತಂತ್ರವೋ ಇದು" ಎಂದಿತು. ತೋಳ ವಿನಯದಿಂದ "ಹುಲಿ ಮಹಾರಾಜ ನಿನ್ನನ್ನು ಹಳ್ಳಕ್ಕೆ ತಳ್ಳಿದರೆ ನನ್ನನ್ನು ಜೀವಸಹಿತ ಬಿಟ್ಟೀಯಾ?" ಎಂದು ಹೇಳಿ ಕಳ್ಳನ ಲಕ್ಷಣಗಳನ್ನು ವಿವರಿಸಿ ಅಂತಹ ಒಬ್ಬ ಮನುಷ್ಯ ಸತ್ತು ಬಿದ್ದಿದ್ದಾನೆ ಎಂದಿತು. ಹುಲಿಯು ವಿವರಗಳನ್ನೆಲ್ಲ ಕೇಳಿ "ಯಾರು ಬಲ್ಲರು? ರಾತ್ರಿ, ಸಾಯುವ ವರೆಗೆ ನನ್ನನ್ನು ಓಡಿಸಿದವನು ಅವನೇ ಇರಬಹುದು" ಎಂದಿತು. ತೋಳವು ಮತ್ತೆ "ಛೆ ಛೆ ಅವನೆಲ್ಲಿ ಇದೆಲ್ಲಿ? ಇದು ಜೀವವಿಲ್ಲದ ಹೆಣ" ಎಂದಿತು. ಹುಲಿಗೆ ರಾತ್ರಿಯ ಅನುಭವದಿಂದ ಆತ್ಮವಿಶ್ವಾಸ ಹಾರಿಹೋಗಿತ್ತು ಅದು "ನನಗೆ ಇನ್ನೂ ಭಯ ತಪ್ಪಿಲ್ಲ. ನಾನೂ ನೀನೂ ಇಬ್ಬರೂ ಹಗ್ಗದಿಂದ ಒಬ್ಬರನ್ನೊಬ್ಬರು ಕಟ್ಟಿಕೊಳ್ಳೋಣ. ನಾವು ನಿರೀಕ್ಷಿಸಿದಂತೆ ಅದು ಹೆಣವಾದರಂತೂ ಸರಿ. ಇಲ್ಲದಿದ್ದರೆ ನೀನು ನನ್ನನ್ನು ಸಿಕ್ಕಿಸಿಬಿಟ್ಟು ಓಡಬಾರದಷ್ಟೆ" ಎಂದಿತು. ತೋಳ ಆ ನಿಯಮಕ್ಕೆ ಒಪ್ಪಿತು. ಹಗ್ಗದ ಒಂದೊಂದು ಕೊನೆಯನ್ನು ಇಬ್ಬರೂ ಕಟ್ಟಿಕೊಂಡು ತೋಳವೂ ಹುಲಿಯೂ ಕಳ್ಳ ಮಲಗಿದ್ದ ಮರದ ಬಳಿಗೆ ಬಂದವು. ಹುಲಿ ದೂರದಿಂದಲೇ ಕಳ್ಳನನ್ನು ನೋಡಿತು. ಅದಕ್ಕೆ ಕೈಕಾಲು ನಡುಗಲು ಪ್ರಾರಂಭವಾಯಿತು. ಅದು ಹಿಂದಕ್ಕೆ ಜಗ್ಗಿಸುತ್ತಾ "ಹಗ್ಗವನ್ನು ಬಿಚ್ಚು" ಎಂದು ತೋಳಕ್ಕೆ ಆಜ್ಞಾಪಿಸಿತು. ತೋಳ ಹುಲಿಗೆ ಧೈರ್ಯ ಹೇಳತೊಡಗಿತು. ಆ ಗದ್ದಲದಲ್ಲಿ ಕಳ್ಳನಿಗೆ ಎಚ್ಚರವಾಯಿತು. ಹುಲಿ ತೋಳ ಎರಡನ್ನೂ ನೋಡಿ ಅವನ ಜಂಘಾಬಲವೇ ತಪ್ಪಿಹೋಯಿತು. ಆದರೂ ಅವನು ಧೈರ್ಯವನ್ನು ನಟಿಸುತ್ತಾ ನಡುಗುವ ಧ್ವನಿಯಲ್ಲಿ ಹುಲಿಯನ್ನು ದುರದುರನೆ ನೋಡಿ 'ಏನು ಮತ್ತೆ ಬಂದೆಯ? ತಡಿ' ಎಂದನು. ಅದನ್ನು ಕೇಳಿ ಹುಲಿ ಒಂದೇ ಉಸುರಿಗೆ ತೋಳನನ್ನು ಕಲ್ಲು ನೆಲದ ಮೇಲೆ ದರದರನೆ ಎಳೆದುಕೊಂಡು ಮರೆಯಾಯಿತು. ಹುಲಿ ತನ್ನನ್ನು ಹಾಗೇ ಎಳೆದುಕೊಂಡು ಓಡಿದುದರಿಂದ ತೋಳ ಸ್ವಲ್ಪ ದೂರದಲ್ಲಿ ಸತ್ತು ಬಿತ್ತು. ಕಳ್ಳನಿಗೂ ಬುದ್ಧಿ ಬಂತು. ಅವನೂ ಅಂದಿನಿಂದ ಕದಿಯುವುದನ್ನು ಬಿಟ್ಟು ಮನೆ ಸೇರಿದನು."

## ದುರಂಗ್ ಕಹಾನಿ

ಮುಂಡಗಳಲ್ಲಿ ಪ್ರಚಾರದಲ್ಲಿರುವ ಮತ್ತೊಂದು ಬಗೆಯ ಕಥಾ ಸಾಹಿತ್ಯಕ್ಕೆ ದುರಂಗ್ ಕಹಾನಿ ಎಂದು ಹೆಸರು. ಈ ಕಥೆಗಳಲ್ಲಿ ಮಧ್ಯೆ ಮಧ್ಯೆ ಕವನಗಳೂ ಇರುತ್ತವೆ. ಸ್ತ್ರೀಯರ ಗಿಟಿಯೋರದಲ್ಲಿ ಒಬ್ಬ ಹೆಣ್ಣುಮಗಳು ಕಥೆಯ ಗದ್ಯ ಭಾಗವನ್ನು ಹೇಳುತ್ತಾಳೆ. ಅನಂತರ ಉಳಿದ ಎಲ್ಲ ಸ್ತ್ರೀಯರೂ ಒಟ್ಟಾಗಿ ಮೇಳದಲ್ಲಿ ಕವನ ಭಾಗವನ್ನು ಹಾಡುತ್ತಾರೆ. ಈ ಪ್ರಕಾರದ ಉದಾಹರಣೆಗೆ ಒಂದು ಕಥೆ ಹೀಗಿದೆ.

"ಒಂದಾನೊಂದು ಕಾಲದಲ್ಲಿ ಒಂದು ಊರಿನಲ್ಲಿ ಏಳು ಜನ ಅಣ್ಣಂದಿರೂ ಅವರಿಗೆ ಒಬ್ಬ ಚಿಕ್ಕ ತಂಗಿಯೂ ಇದ್ದರು. ಆರು ಜನ ಹಿರಿಯ ಅಣ್ಣಂದಿರಿಗೆ ಮದುವೆಯಾಗಿತ್ತು. ಕೊನೆಯವನಿಗೆ ಮದುವೆಯಾಗಿರಲಿಲ್ಲ. ಕೊನೆಯ ತಂಗಿಗೂ ಮದುವೆಯಾಗಿರಲಿಲ್ಲ. ಆರು ಜನ ಹಿರಿಯ ಅಣ್ಣಂದಿರೂ ತಮ್ಮ ಸಂಸಾರಗಳೊಂದಿಗೆ ತಮ್ಮ ತಮ್ಮ ಗುಡಿಸಲುಗಳಲ್ಲಿ ಸುಖವಾಗಿದ್ದರು. ಮದುವೆಯಾಗದ ಕೊನೆಯ ತಮ್ಮನೂ ತಂಗಿಯೂ ಒಂದು ಗುಡಿಸಲಿನಲ್ಲಿದ್ದರು. ಒಂದು ದಿನ ಆ ಆರು ಅತ್ತಿಗೆಯರು ಮತ್ತು ಮದುವೆಯಾಗದಿದ್ದ ಅವರ ನಾದಿನಿಯೂ ಆಹಾರಕ್ಕೆ ಗಡ್ಡೆ ಗೆಣಸುಗಳನ್ನು ಅರಸಲು ಕಾಡಿಗೆ ಹೋದರು. ಅಲ್ಲಿ ಅವರಿಗೆ ಒಂದು ಹಾವಿನ ಮೊಟ್ಟೆ ಸಿಕ್ಕಿತು. ಆ ಅತ್ತಿಗೆಯರು, ನಾದಿನಿಗೆ "ಅಮ್ಮಾ ಈ ಮೊಟ್ಟೆ ನಿನಗಿರಲಿ. ಮನೆಯಲ್ಲಿ ಇದನ್ನು ಬೇಯಿಸಿ ನೀನೂ ನಿನ್ನ ಅಣ್ಣನೂ ತಿನ್ನಿ" ಎಂದು ಹೇಳಿದರು. ಯಾವ ಕಪಟವನ್ನೂ ಅರಿಯದ ಆ ಹೆಣ್ಣು ಆ ಮೊಟ್ಟೆಯನ್ನು ಮನೆಗೆ ತಂದು ಅಣ್ಣನಿಗೆ ಕೊಟ್ಟಳು. ಅಣ್ಣ ಅದನ್ನು ಬೇಯಿಸಿ ತಿಂದನು. ಸಂಧ್ಯಾಕಾಲವಾದ ನಂತರ ಹುಡುಗಿ ಪದ್ಧತಿಯಂತೆ ಸಾರ್ವಜನಿಕ ಗಿಟಿಯೋರ ಕಟ್ಟಡಕ್ಕೆ ಹೋಗಿ ಅಲ್ಲಿ ಮಲಗಿಕೊಂಡಳು. ಇತ್ತ ಗುಡಿಸಲಿನಲ್ಲಿ ರಾತ್ರಿ ಒಂದು ಹೊತ್ತಿನಲ್ಲಿ ಅವಳ ಅಣ್ಣ ಒಂದು ಹಾವು ಆಗಿ ಬದಲಾವಣೆ ಹೊಂದಿದನು. ಬೆಳಗಿನ ಜಾವ ಆ ಮನುಷ್ಯ ನಾಗ ಹೀಗೆ ಗಟ್ಟಿಯಾಗಿ ಕೂಗಿತು.

ಕೊ ಕೊ ರೇ ಚೊ
ಬಾ ಂ ಡು ನಾ ಮ್ಯೆ
ಬುರು-ಬಿಂಗೆ ಜಾನೆ ಚಿ
ಸಾಂಗ್ ಸುರಿ ಜಾನಾ

ಇದರ ಅನುವಾದವನ್ನು ಹೀಗೆ ಮಾಡಬಹುದು.

ಕೋಳಿ ಕೂಗೋ ಮುಂಚೆ ನಾರಿರೇಳೋ ಮುಂಚೆ
ನೀರಾಜಿ ಕೇಳೆ ನನತಂಗೀ ನಾನಾದೆ
ಬೆಟ್ಟದ್ಹೆಬ್ಬಾವು ಹೆಣ್ಣಾವು.

ಆ ಧ್ವನಿಯನ್ನು ಕೇಳಿ ನಿದ್ರಾಗೃಹದಲ್ಲಿದ್ದ ವಯಸ್ಸಾದ ಮಹಿಳೆಯೊಬ್ಬಳು ಆ ಹುಡುಗಿಗೆ "ಕೇಳು ನಿನ್ನ ಗುಡಿಸಲಿನಲ್ಲಿ ಒಂದು ಹುಂಜ ಕೂಗುತ್ತಿದೆ" ಎಂದಳು. ಹುಡುಗಿಯು "ನಮ್ಮಣ್ಣ ನೆರೆಮನೆಯವರ ಹುಂಜ

ವನ್ನು ಹಿಡಿದುಕೊಂಡಿರಬಹುದು" ಎಂದಳು. ಹುಡುಗಿ ತನ್ನ ಗುಡಿಸಲಿಗೆ ಬಂದು ಬಾಗಿಲನ್ನು ತೆರೆದು ನೋಡಿದಾಗ ಗುಡಿಸಲಿನೊಳಗೆ ಒಂದು ದೊಡ್ಡ ಹಾವು ಮಲಗಿತ್ತು. ಆಕೆಯ ಅಣ್ಣ ಕಣ್ಣಿಗೆ ಬೀಳಲಿಲ್ಲ. ಅವಳು ಹೆದರಿ ನಡುಗುತ್ತಾ ನಿಂತುದನ್ನು ಹಾವು ಕಂಡು, ಆಕೆಯ ಹೆಸರು ಹಿಡಿದು ಕರೆದು "ತಂಗಿ ಹೆದರಬೇಡ. ನಾನು ನಿನ್ನ ಅಣ್ಣನೇಯ. ನೀನು ಕೊಟ್ಟ ಆ ಮೊಟ್ಟೆಯೇ ಈ ಅನರ್ಥಗಳಿಗೆಲ್ಲ ಕಾರಣ, ಗುಡಿಸಲಿನ ಅರ್ಧವನ್ನು ನೀನು ಗುಡಿಸಿ ಇಟ್ಟುಕೊ. ಉಳಿದ ಅರ್ಧದಲ್ಲಿ ನಾನು ಇರುತ್ತೇನೆ" ಎಂದಿತು. ತಂಗಿ ಹಾಗೆಯೇ ಮಾಡಿದಳು. ಅನಂತರ ಆಕೆಯ ನಾಗಭ್ರಾತೃವು "ಎಲ್ಲಿ ಒಂದು ಕುಕ್ಕೆ ಅನ್ನ ಮಾಡು" ಎಂದಿತು. ತಂಗಿ ಹಾಗೆಯೇ ಮಾಡಿದಳು. ಕುಕ್ಕೆಯಲ್ಲಿ ಅನ್ನ ಸಿದ್ಧವಾದುದನ್ನು ನೋಡಿ ಹಾವು "ಈಗ ಹೋಗಿ ಹಳ್ಳಿಯಲ್ಲಿ ನಿನಗೆ ಸಿಕ್ಕುವ ಚಾಕುಗಳನ್ನೆಲ್ಲ ತೆಗೆದುಕೊಂಡು ಬಾ" ಎಂದಿತು. ಹುಡುಗಿ ಚಾಕುಗಳನ್ನು ತೆಗೆದುಕೊಂಡು ಬಂದನಂತರ, ಹಾವು ಆ ಚಾಕುಗಳನ್ನು ಅನ್ನದ ಕುಕ್ಕೆಯೊಳಗೆ ಸ್ವಲ್ಪವೂ ಜಾಗ ಬಿಡದಂತೆ ಹರಡಿ ಅವುಗಳ ಮೇಲೆ ಅನ್ನವನ್ನು ಹರಹಿತು. ಅನಂತರ ನಾಗನು "ಈ ಕುಕ್ಕೆಯನ್ನು ತಲೆಯ ಮೇಲೆ ಹೊತ್ತುಕೊಂಡು ನನ್ನ ಹಿಂದೆ ಬಾ" ಎಂದು ಹೇಳಿ ತಾನು ಮುಂದೆ ನಡೆಯಿತು. ಕೊನೆಗೆ ನಾಗ ಆ ಮೊಟ್ಟೆ ಸಿಕ್ಕಿದ್ದ ಸ್ಥಳದಲ್ಲಿ ಹೋಗಿ ನಿಂತಿತು. ಅಲ್ಲಿ ಹೋದನಂತರ ನಾಗ ತಂಗಿಗೆ 'ನೀನು ಆ ಮರವನ್ನು ಏರಿ ಮರೆಯಾಗಿರು' ಎಂದು ಹೇಳಿ, ತಾನೂ ಮರದ ಬುಡದಲ್ಲಿ ಅಡಗಿ ಹೀಗೆ ಗಟ್ಟಿಯಾಗಿ ಹಾಡಿತು.

ಹೇಸೆತ್ ಜುರು ಜುರು
ಕರ್ಕೇಟ ಲಿಡಿ ಲಿಡಿ
ನೀಡೋ ನೀಡೋ
ಬುರು ಬಿಂಗ್ ಕೆಂಗ್ ಓರಾ
ಶಿ ನಾಂಗ್ ಸುರಿ ಕೆಂಗ್ ರೋಸಮ್

ಇದನ್ನು ಹೀಗೆ ಅನುವಾದಿಸಬಹುದು :

ಆಲಜಾಲದ ಮರ ಗಗನಕ್ಕಬ್ಬಿದನು ಕೋಟಿ
ಆಕಾಶ್ಕೆ ಚಿಗರೊಡೆದ ಕರ್ಕೇಟ। ಕರ್ಕೇಟ
ಗಂಡು ನಾಗನ ಮನೆಯಿದುವೊ। ಇಲ್ಲದಿರೆ
ಹೆಣ್ಣು ನಾಗಿನಿಯ ಮನೆಯಿದುವೊ

ಈ ಹಾಡನ್ನು ಕೇಳಿ ಕಾಡಿನಲ್ಲಿದ್ದ ಬುರು ಬಿಂಗ್ ಅಂದರೆ ಗಂಡು ನಾಗನೂ ಸಾಂಗ್ ಸುರಿ ಎಂದರೆ ಹೆಣ್ಣು ನಾಗ (ಅವನ ಪತ್ನಿಯೂ) ತಮ್ಮ ಬಿಲದಿಂದ ಹೊರಕ್ಕೆ ಬಂದರು. ಮನುಷ್ಯನಾಗ ಅವರನ್ನು ಅನ್ನದ ಕುಕ್ಕೆಯ ಮುಂದಕ್ಕೆ ಕರೆತಂದು ಅವರಿಗೆ ಆ ಕುಕ್ಕೆಯನ್ನು ಅರ್ಪಿಸಿತು. ನಾಗನೂ ನಾಗಿಣಿಯೂ ಆನಂದದಿಂದ ಅನ್ನ ತಿಂದರು. ಅದರೊಳಗೆ ಅಡಗಿದ್ದ ಚಾಕುಗಳಿಂದ ಅವರ ನಾಲಿಗೆಗಳು ಇಬ್ಭಾಗವಾದವು, ಆಗ ಆ ಬೆಟ್ಟದ ನಾಗನು ಈ ಮನುಷ್ಯನಾಗನಿಗೆ "ನಿನ್ನ ನಾಲಿಗೆಯನ್ನು ಒಂದು ಬಿದಿರಿನ ಮೇಲೆ ಉಜ್ಜು. ಅನಂತರ ನಿನ್ನನ್ನು ನಮ್ಮಗುಂಪಿಗೆ ಸೇರಿಸಿಕೊಳ್ಳುತ್ತೇವೆ" ಎಂದಿತು. ಅದರಂತೆ ಮನುಷ್ಯನಾಗ ತನ್ನ ನಾಲಿಗೆಯನ್ನು ಬಿದಿರಿನ ಮೇಲೆ ಉಜ್ಜಿತು. ಆಗ ಅದರ ನಾಲಿಗೆ ಸೀಳಿತು. ಅದೂ ಪೂರ್ಣವಾಗಿ ಬೆಟ್ಟದ ಹಾವೇ ಆಗಿ ತನ್ನ ಮನಸ್ಸಿಗೆ ತೋರಿದಷ್ಟು ಬೃಹತ್ ಆಕಾರವಾಗಿ ಬೆಳೆಯಿತು.

ಅನಂತರ ಆ ಹಾವು ಬೆಟ್ಟದಲ್ಲಿ ಹರಿಯುತ್ತಿದ್ದ ಒಂದು ದೊಡ್ಡ ಝರಿಗೆ ಅಡ್ಡಲಾಗಿ ಮಲಗಿತು. ಅದರಿಂದ ನೀರನ್ನು ಅದು ಅಣೆಕಟ್ಟಿನಂತೆ ತಡೆದು ಅಲ್ಲಿ ಒಂದು ಮಡುವಾಯಿತು. ಆಗ ಕಿರಿಯ ತಂಗಿ, ಅಣ್ಣ ಮನುಷ್ಯನಾಗನ ಸೂಚನೆಯಂತೆ ಮಡುವಿನಲ್ಲಿ ಮೀನುಗಳನ್ನು ಹಿಡಿಯಲು ಆ ತನ್ನ ಆರು ಅತ್ತಿಗೆಯರನ್ನೂ ಕರೆತಂದಳು. ಅವಳು ಮಾತ್ರ ನೀರಿಗೆ ಇಳಿಯದೆ ದಡದಲ್ಲಿಯೇ



ಗಿಟಿಯೋರಾದ ಒಂದು ದೃಶ್ಯ

ಂತಿದ್ದಳು. ಬೆಳ್ಳಿಯ ಗೆರೆಗಳಂತೆ ಹಾರಾಡು ತ್ತಿದ್ದ ಮೀನುಗಳನ್ನು ಕಂಡು ಆರು ಜನ ಅತ್ತಿಗೆಯರೂ ಅವುಗಳನ್ನು ಹಿಡಿಯುವ ಆತುರದಲ್ಲಿ ತೊಡಗಿದ್ದರು. ಆಗ ನೀರನ್ನು ತಡೆದಿದ್ದ ಮನುಷ್ಯನಾಗ ಇದ್ದಕ್ಕಿದ್ದಂತೆ ಬೇರೆ ಕಡೆಗೆ ಹರಿದು ಹೋಯಿತು. ಕೂಡಲೇ ಪ್ರವಾಹ ಜೋರಾಗಿ ನೀರು ಬೆಟ್ಟದ ಕೆಳಕ್ಕೆ ಉರುಳಿತು. ಆರು ಜನ ದುಷ್ಟ ಅತ್ತಿಗೆಯರೂ ಪ್ರವಾಹದಲ್ಲಿ ತೇಲಿಹೋಗಿ ನಾಶವಾದರು. ಮನುಷ್ಯನಾಗ ನಾಗನಾಗಿ ನದಿಯಲ್ಲಿಯೇ ಉಳಿಯಿತು. ಆದರೆ ಆ ಅನಾಥ ತಂಗಿ ಮಾತ್ರ ದುಗುಡದಿಂದ ಭಾರವಾದ ಹೃದಯದಿಂದ ಮನೆ ಸೇರಿದಳು.

**ಒಗಟುಗಳು**

ಮೂರನೆ ಬಗೆಯ ಕಹಾನಿಗಳು ಕಥೆಗಳಲ್ಲ ಇವು ಒಗಟುಗಳು. ಇವು ಮುಂಡ ಯುವಕರ ಬುದ್ಧಿಶಕ್ತಿ ಮತ್ತು ಜ್ಞಾಪಕ ಶಕ್ತಿ-ಗಳನ್ನು ಪ್ರಚೋದನೆಗೊಳಿಸುವುವಾಗಿವೆ. ತಮ್ಮ ಗಿಟಿಯೋರ ಅಥವಾ ನಿದ್ರಾಗೃಹದಲ್ಲಿ ಸಂಧ್ಯಾಕಾಲದ ನಂತರ ಯುವಕರು ಸೇರಿದಾಗ ಈ ಒಗಟುಗಳನ್ನು ಬಿಡಿಸುವ ಬುದ್ಧಿವಂತಿಕೆಯಲ್ಲಿ ಅವರಿಗೆ ತುಂಬ ಉಲ್ಲಾಸವಾಗುತ್ತದೆ. ಇಂತಹ ಒಗಟುಗಳು ಮುಂಡ ಜನರಲ್ಲಿ ಅನೇಕ ಲಕ್ಷ ಇವೆ. ಉದಾಹರಣೆಗಾಗಿ ನಾಲ್ಕಾರನ್ನು ಮುಂದೆ ಕೊಟ್ಟಿದೆ:

೧. ಒಂದು ಕುರ್ಚಿಯ ಮೇಲೆ ಐವರು ಸಹೋದರರು ಕುಳಿತಿದ್ದಾರೆ. ಕುರ್ಚಿಯನ್ನು ಎಲ್ಲರೂ ಮುಟ್ಟಿದರೂ ಒಬ್ಬ-ರನ್ನೊಬ್ಬರು ಮುಟ್ಟುವುದಿಲ್ಲ.
ಉತ್ತರ: ಎರಡು ಕಿವಿಗಳು (ಲೂಟರ್) ಎರಡು ಕಣ್ಣುಗಳು (ಮೆಡ್) ಮತ್ತೂ ಮೂಗು (ಮು) ಇವೆಲ್ಲ ಕುಳಿತಿರುವ ಕುರ್ಚಿಯೇ, ತಲೆ.

೨. ಒಬ್ಬ ದಾರಿ ನಡೆಯುವಾಗ ಮೌನವಾಗಿರುತ್ತಾನೆ. ಕಾಡಿಗೆಹೋದ ಕೂಡಲೇ ಶಬ್ದ ಮಾಡುತ್ತಾನೆ.
ಉತ್ತರ: (ಕೊಂಡೆ) ಕೊಡಲಿ ಕಾಡಿನಲ್ಲಿ ಮರ ಕತ್ತರಿಸುವಾಗ ಶಬ್ದ ಮಾಡುತ್ತದೆ.

೩. ಎಲೆಗಳು ಸಣ್ಣ. ಹಣ್ಣು ಕಾಲಂಗೆಯ ಗೆಜ್ಜೆಯಂತೆ.
ಉತ್ತರ: ಹುರುಳಿ. ಕಡಲೆ ಗಿಡಗಳು.

೪. ಒಬ್ಬನಿಗೆ ಬೆನ್ನಿನ ಮೇಲೆ ಹಲ್ಲುಗಳಿವೆ
ಉತ್ತರ: (ಪಾಟ) ತಾಳೆಗರಿಯ ಚಾಪೆ.

೫. ಬಿಳಿಯ ಬಯಲಿನಲ್ಲಿ (ಕರ್ಬ್ಬಾನಿ) ಕಪ್ಪಗಿರುವ ಭತ್ತ ಬೆಳೆಯುತ್ತೆ.
ಉತ್ತರ: (ಪುಂಡಿ ಕಾಗಜ್) ಬಿಳಿಯ ಕಾಗದ ಅದರ ಮೇಲೆ ಬರೆಯುವುದು ಕಪ್ಪು ಶಾಯಿಯಲ್ಲಿ.

**ನಾಟಕ ರೂಪದ ಆಟಗಳು**

ಮುಂಡಗಳಲ್ಲಿ ಸ್ವಾರಸ್ಯವಾದ ಅನೇಕ ಆಟಗಳು ಪ್ರಚಾರದಲ್ಲಿವೆ. ಈ ಆಟಗಳಲ್ಲಿ ವಿನೋದ ಬೋಧನೆಗಳು ಅಡಗಿವೆ. ಅವರು ಆ ಆಟಗಳನ್ನು ನಾಟಕಗಳಂತೆಯೇ ಅಭಿನಯಿಸುತ್ತಾರೆ. ಇವುಗಳ ಪೈಕಿ ಒಂದು ಆಟಕ್ಕೆ ಕಾಂತಾರ ಕಾಂತಾರು ಅಥವಾ ಹಲಸಿನ ಹಣ್ಣಿನ ಆಟ ಎಂದು ಹೆಸರು. ಬಾಲಕನೊಬ್ಬ ಹಲಸಿನ ಮರ, ಉಳಿದ ಬಾಲಕರೇ ಹಣ್ಣುಗಳು. ಹಣ್ಣುಗಳನ್ನು ಕದಿಯುವ ಕಳ್ಳ ಒಬ್ಬ, ಕಾವಲುಗಾರ ನಾಯಿ ಒಬ್ಬ, ಮರದ ಯಜಮಾನ ಒಬ್ಬ. ಎಲ್ಲ ಮಲಗಿರುವಾಗ ಕಳ್ಳ ಬಂದು ಹಣ್ಣು ಕದಿಯುತ್ತಾನೆ. ಅದನ್ನು ಕುಯ್ಯಲು ಯಜಮಾನನಿಂದಲೇ ಚಾಕುವನ್ನು ಸಾಲ ಕೇಳಿ ತೆಗೆದುಕೊಂಡು ಹೋಗುತ್ತಾನೆ. ಯಜಮಾನ ಚಾಕು ಯಾಕೆ ಎಂದು ಕೇಳಿದ್ದಕ್ಕೆ ಆಡು ಕೊಯ್ಯಲು ಎನ್ನುತ್ತಾನೆ. ಆದರೆ ಚಾಕು ಹಿಂದಕ್ಕೆ ಬಂದಾಗ ಯಜಮಾನನಿಗೆ ಅದರಲ್ಲಿ ಹಲಸಿನ ಹಣ್ಣಿನ ವಾಸನೆ ಗೊತ್ತಾಗುತ್ತೆ. ಮರುದಿನ ಯಜಮಾನ ಕಾವಲನ್ನು ಜಾಸ್ತಿ ಮಾಡುತ್ತಾನೆ. ಕಳ್ಳ ಯಾವುದೋ ಗಳಿಗೆಯಲ್ಲಿ ಒಂದು ಮರವನ್ನೇ ಕತ್ತರಿಸಿಬಿಡುತ್ತಾನೆ.

ಮರಕ್ಕೆ ಹಿಡಿದ ಈ ಭೂತವನ್ನು ತಪ್ಪಿಸಲು ಯಜಮಾನ ಒಬ್ಬ ಸಾಧುವಿನ ಬಳಿ ಹೋಗುತ್ತಾನೆ. ಕಳ್ಳನೇ ಸಾಧುವೇಷ ಧರಿಸಿ ಚೇಷ್ಟೆಯ ಧ್ವನಿಯಲ್ಲಿ ಯಜಮಾನನಿಗೆ "ಎಲ್ಲಿ ಕಾಣಿಕೆಯಾಗಿ ಒಂದು ಬಿಳಿಯ ಕೋಳಿ, ಒಂದು ಕಪ್ಪು ಆಡು, ಒಂದು ಎಮ್ಮೆ, ಅನ್ನ ಮತ್ತು ಇತರ ಭೂತತೃಪ್ತಿಯ ಸಾಮಗ್ರಿಗಳನ್ನು ಕೊಂಡು ಬಾ" ಎಂದು ಹೇಳುತ್ತಾನೆ. ಮಂಕನಾದ ಯಜಮಾನ ಹಾಗೆಯೇ ಮಾಡುತ್ತಾನೆ. ಪೂಜೆಯ ನಾಟಕವೂ ಆಗುತ್ತದೆ. ಬಿದ್ದ ಮರ ಏಳುತ್ತದೆ. ಈ ಆಟದಲ್ಲಿ ಉದ್ದಕ್ಕೂ ಹಾಸ್ಯ ತುಂಬಿತುಳುಕುತ್ತಿರುತ್ತದೆ. ಹಣ್ಣು ಆಗಿರುವ ಹುಡುಗರೆಲ್ಲ ಎದ್ದು ಕುಣಿಯುತ್ತಾರೆ.

ಮುಂಡಗಳು ಆಡುವ ಮತ್ತೊಂದು ನಾಟಕೀಯವಾದ ಆಟಕ್ಕೆ ಡಿ.ಡಿ.ಇನ್. ಎಂದರೆ ರಣಹದ್ದುಗಳ ಆಟವೆಂದು ಹೆಸರು. ಇನ್ನೊಂದು ಆಟ ನರಿ ಮತ್ತು ಕೋಳಿ ಆಟ. ಒಂದು ಗಂಡು ಅಥವ ಹೆಣ್ಣು ಕೋಳಿಯಾಗುತ್ತದೆ. ಉಳಿದವರು ಕೋಳಿಮರಿಗಳಾಗುತ್ತಾರೆ. ಒಬ್ಬ ಹುಡುಗ ಕೋಳಿಗಳ ಕಾವಲುಗಾರನಾಗುತ್ತಾನೆ. ಮತ್ತೊಬ್ಬ ನರಿಯಾಗುತ್ತಾನೆ. ನರಿ ಕೋಳಿಗಳನ್ನು ಕದಿಯಲು ಅನೇಕ ಉಪಾಯಗಳನ್ನು ಮಾಡುತ್ತದೆ. ಆದರೆ ಕಾವಲುಗಾರನ ಜಾಗರೂಕತೆಯ ಮುಂದೆ ಅದರ ಬೇಳೆ ಬೇಯುವುದಿಲ್ಲ. ಈ ಆಟದಲ್ಲಿ ಹುಡುಗರ ಬುದ್ಧಿವಂತಿಕೆಗೆ ತುಂಬ ಅವಕಾಶವಿದೆ.

ಹೀಗೆ ಮುಂಡಗಳು ಗಿರಿಜನರಾದರೂ ಅವರಿಗೆ ಲಿಪಿ ಇಲ್ಲದಿದ್ದರೂ ಅವರಲ್ಲಿ ವಿದ್ಯಾವಂತರಿಲ್ಲದಿದ್ದರೂ ತಮ್ಮ ಜನಪದ ಸಾಹಿತ್ಯ ಒಗಟು ಗಾದೆ ಆಟಗಳಿಂದಲೇ ಅವರು ನೀತಿಗಳನ್ನು ಕಲಿಯುತ್ತಾರೆ.

# ಧರ್ಮಮಾರ್ಗದಲ್ಲಿ ಕಲೆ

ಕಲೆ ಮತ್ತು ಧರ್ಮ ಇವೆರಡೂ ಅನ್ಯೋನ್ಯ ಸಂಬಂಧವುಳ್ಳವುಗಳಾಗಿವೆ. ಕಲಾವಿದನ ಮನಸ್ಸಿನಲ್ಲಿ ಯಾವದೇ ಕಲಾಕೃತಿಯ ಆವಿರ್ಭಾವವಾಗಬೇಕಾದರೂ ಅವನಿಗೆ ಅದ್ಭುತವೊಂದರ ಅರಿವಾಗಬೇಕು. ಧರ್ಮವು ಈ ಅರಿವನ್ನುಕಲಾವಿದನಿಗೆ ತಂದು ಕೊಡುವಲ್ಲಿ ಯಾವ ಮಹತ್ವದ ಪಾತ್ರ ವಹಿಸುವುದೆಂಬುದನ್ನು ಲೇಖಕರು ಇಲ್ಲಿ ನಿರೂಪಿಸಿದ್ದಾರೆ. . . . . . . . .

ಲೇಖಕರು : ಪ್ರೊ. ಎಸ್. ಎಲ್. ಭೈರಪ್ಪ, ಎಂ. ಎ.
ಕಾಡಸಿದ್ಧೇಶ್ವರ ಕಾಲೇಜ, ಹುಬ್ಬಳ್ಳಿ.

ಮನುಷ್ಯಜೀವನದಲ್ಲಿ ಕಲೆ, ಧರ್ಮ, ಈ ಎರಡು ಅನುಭವಗಳ ಸ್ಥಾನ ಮತ್ತು ಪರಸ್ಪರ ಸಂಬಂಧಗಳನ್ನು ನಾವು ಅರಿಯಬೇಕಾದರೆ, ಈ ಎರಡು ಅನುಭವಗಳ ಉಗಮ ಯಾವುದು ಎಂಬುದನ್ನು ವಿಚಾರಿಸಬೇಕು. ಕೇವಲ ಬಾಹ್ಯ ಆಚರಣೆಯು ಹೇಗೆ ನಿಜವಾದ ಧರ್ಮವಲ್ಲವೋ, ಹಾಗೆಯೇ ಕೇವಲ ಬಾಹ್ಯರೂಪವು ನಿಜವಾದ ಕಲೆಯಲ್ಲ. ಧರ್ಮದ ತಿರುಳಿರುವುದು ಶುದ್ಧವಾದ ಅನುಭವದಲ್ಲಿ; ಕಲೆಯ ಜೀವಾಳವೂ ಅನುಭವದಲ್ಲಿಯೇ ಅಡಗಿದೆ.

ಧರ್ಮ ಎಂಬ ಶಬ್ದವನ್ನು ಉಪಯೋಗಿಸುವ ಮೊದಲು ಅದರ ನಿರ್ದಿಷ್ಟ ಅರ್ಥವನ್ನು ಗುರುತಿನಲ್ಲಿಟ್ಟುಕೊಳ್ಳಬೇಕು. ನೀತಿ ಎನ್ನುವ ಅರ್ಥದಲ್ಲಿ ಧರ್ಮ ಎಂಬ ಪದವನ್ನು ನಾವು ಬಳಸುತ್ತೇವೆ; ಹರಿಯುವದು ನೀರಿನ ಧರ್ಮ ಎನ್ನುವಾಗ ಪ್ರಕೃತಿ-ಸಹಜ-ಸ್ವಭಾವ ಎಂಬ ಅರ್ಥವನ್ನು ಈ ಪದಕ್ಕೆ ಹಚ್ಚುತ್ತೇವೆ; ಗಾಯಕನು ಸರಿಯಾದ ಮನೋ 'ಧರ್ಮ'ವನ್ನು ಗಳಿಸಿಕೊಳ್ಳಬೇಕು ಎನ್ನುವಾಗ ಸಂಸ್ಕಾರ ಎನ್ನುವ ಅರ್ಥವನ್ನು ಧ್ವನಿಸುತ್ತೇವೆ; ಗುಣ ಎಂಬ ಅರ್ಥವನ್ನೂ ಈ ಪದವು ಕೊಡುತ್ತದೆ; ಕೊನೆಯದಾಗಿ ಆಂಗ್ಲಭಾಷೆಯಲ್ಲಿ ನಾವು ಹೇಳುವ religion ಎಂಬ ಅರ್ಥವೂ ಈ ಪದಕ್ಕಿದೆ.

Religion ಎಂಬ ಕೊನೆಯ ಅರ್ಥದಲ್ಲಿ ನೋಡಿದಾಗ ಧರ್ಮದ ಅನುಭವ ಮತ್ತು ಅರಿವು ಮನುಷ್ಯನಲ್ಲಿ ಉಂಟಾಗುವುದಕ್ಕೂ, ಕಲೆಯ ಅರಿವು ಮೂಡುವದಕ್ಕೂ ಮೂಲ ಸ್ಫೂರ್ತಿ ಒಂದೇ ಆಗಿರುತ್ತದೆ. ಯಾವುದಾದರೂ ಅದ್ಭುತದ ಅರಿವು ಆದಾಗ ತನ್ನ ಮನೋಭಾವಕ್ಕೆ ತಕ್ಕಂತೆ ಅನುಭವಿಯು ಅದಕ್ಕೆ ಅರ್ಥವನ್ನು ಹಚ್ಚುತ್ತಾನೆ. ಅದ್ಭುತ ಜಲಪಾತದ ದೃಶ್ಯವನ್ನು, ಕೊನೆಯಿಲ್ಲದೆ ಹರಡಿರುವ ಜಲರಾಶಿಯನ್ನು, ಅನಂತವಾಗಿ ಚಲ್ಲಿರುವ ಅಗಣಿತ ನಕ್ಷತ್ರರಾಶಿಯನ್ನು ನೋಡಿದಾಗ, ಪ್ರಚಂಡ ಸಿಡಿಲು ಭೂಕಂಪ ಸಂಭವಿಸಿದಾಗ, ನಮ್ಮನ್ನು ಮೀರಿದ ಯಾವುದೋ ಅದ್ಭುತ ಶಕ್ತಿಯು ಈ ಎಲ್ಲ ಘಟನೆಗಳ ಹಿನ್ನೆಲೆಯಲ್ಲಿ ನಿಂತು ನಡೆಸುತ್ತಿದೆ ಎನ್ನುವ ಭಾವವು ನಮ್ಮಲ್ಲಿ ಮೂಡುತ್ತದೆ. ಈ ಅದ್ಭುತ ಶಕ್ತಿಯ ಎದುರು 'ನಮ್ಮ' ಶಕ್ತಿಯು ತೀರ ಗೌಣವಾಗಿ ಕಾಣುತ್ತದೆ. ಧರ್ಮದ ಅನುಭವಕ್ಕೆ ಅದೇ ಮೊದಲ ಮೆಟ್ಟಿಲಾಗುತ್ತದೆ.

ಕಲಾವಿದನ ಮನಸ್ಸಿನಲ್ಲಿ ಒಂದು ಕಲಾಕೃತಿಯು ಆವಿರ್ಭಾವವಾಗಬೇಕಾದರೂ ಅತನಿಗೆ ಯಾವುದಾದರೂ ಒಂದು ಅದ್ಭುತದ ಅರಿವಾಗಬೇಕು. 'ಅದ್ಭುತ' ಎನ್ನುವದು ಕೇವಲ ಬಾಹ್ಯಪ್ರಮಾಣದ ದೃಷ್ಟಿಯಿಂದ ಮಾತ್ರ ಆಗಬೇಕೆಂದಿಲ್ಲ; ಗುಣದ ದೃಷ್ಟಿಯಿಂದ ಮಹತ್ತದ್ದಾದರೂ ಅದು ಅದ್ಭುತವೇ. ತನ್ನ ಸಹಜೀವಿಯನ್ನು ಕಳೆದುಕೊಂಡ ಹಕ್ಕಿಯು ಪಡುತ್ತಿದ್ದ ಶೋಕ, ಪ್ರೇಮಗಳು ಗುಣದ ದೃಷ್ಟಿಯಿಂದ ಮಹತ್ವವಾದುವು, ಅದ್ಭುತವಾದುವು. ಈ ಮಹತ್ವದ ಅರಿವಿನಿಂದಲೇ ವಾಲ್ಮೀಕಿ ಕವಿಗೆ ರಾಮಾಯಣದ ರಚನೆಯ ಸ್ಫೂರ್ತಿಬಂದುದು. ಹೀಗೆಯೆ ತನ್ನ ಸಾಮಾನ್ಯ ಜೀವನದಲ್ಲಿ ದಿನವೂ ಆಗದ ಅನುಭವವು ಹೊಸದಾಗಿ ತನಗೆ ಆದಾಗಲೇ ಕಲಾವಿದನಿಗೆ ಸ್ಫೂರ್ತಿ ಬರುವದು. ತಾನು ಚಿತ್ರಿಸುವ ಸೂರ್ಯಾಸ್ತದಲ್ಲಿ, ಸ್ವರಗಳಲ್ಲಿ ಹಿಡಿಯುವ ಗಾನದಲ್ಲಿ, ವರ್ಣಿಸುವ ಮನುಷ್ಯ ಸ್ವಭಾವದಲ್ಲಿ ತನ್ನ ಸಾಧಾರಣಶಕ್ತಿಗೆ ಎಟುಕದ ಯಾವುದೋ ಬೇರೊಂದು ಮಹತ್ವದ ಶಕ್ತಿ ಇದೆ ಎಂಬ ಅರಿವಿನಿಂದಲೇ ಕಲಾವಿದನು ಪ್ರೇರಿತನಾಗುತ್ತಾನೆ; ಮತ್ತು ಆ ಶಕ್ತಿಯನ್ನು ತನ್ನ ಕಲೆಯ ಮಾಧ್ಯಮದಲ್ಲಿ (medium) ಹಿಡಿದು ಮತ್ತೊಬ್ಬರ ಅನುಭವದಲ್ಲಿಯೂ ತರುವಂತೆ ಮಾಡಲು ಅವನು ಪ್ರಯತ್ನಿಸುತ್ತಾನೆ.

## ಪರಸ್ಪರ ಸಂಬಂಧ

ಧರ್ಮ ಎಂಬ ಶಬ್ದಕ್ಕೆ ನೀತಿ ಎನ್ನುವ ಅರ್ಥವನ್ನು ಕೊಟ್ಟಾಗಲೂ ಕಲೆ ಮತ್ತು ಧರ್ಮಗಳಿಗೆ ಇರುವ ಪರಸ್ಪರ ಸಂಬಂಧವನ್ನು ನಾವು ಗುರುತಿಸಬಹುದು.

ಮಾನವನಲ್ಲಿ ಸ್ವಾಭಾವಿಕವಾದ ಮೂರು ಶಕ್ತಿಗಳಿವೆ : ಆಲೋಚನಾಶಕ್ತಿ, ಭಾವಾನುಭವದ ಶಕ್ತಿ ಮತ್ತು ಯಾವುದಕ್ಕಾದರೂ ಪ್ರಯತ್ನ ಪ್ರವೃತ್ತಿ, (Thinking, feeling and willing). ಆದರ್ಶದ ದೃಷ್ಟಿಯಿಂದ, ಆಲೋಚನೆಯ ಗುರಿ ನಿಜವನ್ನು ತಿಳಿಯುವದು; ಭಾವಾನುಭವದ ಗುರಿ ಸೌಂದರ್ಯವನ್ನು ಸೃಷ್ಟಿಸುವದು ಮತ್ತು ಅನುಭವಿಸುವದು; ಮತ್ತು ಪ್ರಯತ್ನಪ್ರವೃತ್ತಿಯ ಗುರಿ ನೀತಿವಂತನಾಗಿ ಬಾಳುವದು, ಈ ಮೂರೂ ಮೂರು ಶಕ್ತಿಗಳ ಆದರ್ಶಗಳಾಗಿವೆ. ಈ ಆದರ್ಶಗಳನ್ನು ಸಾಧಿಸುವದೇ ಈ ಮೂರು ಶಕ್ತಿಗಳ ನಿಜವಾದ ಉಪಯೋಗ. ಮಾನವನ ಮಹಾ ಆದರ್ಶಗಳಾದ ಸತ್ಯ, ಸೌಂದರ್ಯ ಮತ್ತು ನೀತಿಗಳಲ್ಲಿ ಒಂದರಿಂದ ಮತ್ತೊಂದನ್ನು ನಾವು ಗುರುತಿಸಬಹುದು. ಆದರೆ ಹಾಗೆ ಗುರುತಿಸಬಹುದಾದುದು ಒಂದು ಮಟ್ಟದವರೆಗೆ ಮಾತ್ರ. ಸತ್ಯ (truth) ವನ್ನು ನಾವೇಕೆ ತಿಳಿಯಬೇಕು ? ಸೌಂದರ್ಯವನ್ನು ಸೃಷ್ಟಿಸುವದಾದರೂ ಏಕೆ ? ಅದನ್ನು ಅನುಭವಿಸಬೇಕೆಂಬ ಅಗತ್ಯವಾದರೂ ಏನು ? ನೀತಿವಂತರಾಗಿ ಬಾಳುವದರ ಗುರಿ ಏನು ? ಎಂಬ ಮೂಲಭೂತ ಪ್ರಶ್ನೆಗಳನ್ನು ಎತ್ತಿದಾಗ ಸತ್ಯವನ್ನು ತೋರಿಸುವ ತರ್ಕವಾಗಲಿ, ಸೌಂದರ್ಯದ ರೂಪರೇಷೆಗಳನ್ನು ಹೇಳುವ ಸೌಂದರ್ಯ ಮೀಮಾಂಸೆಯಾಗಲೀ ನೀತಿಯ ಸ್ವರೂಪದ ಜಿಜ್ಞಾಸೆಮಾಡುವ ನೀತಿಶಾಸ್ತ್ರವಾಗಲಿ ನಮಗೆ ಕೊನೆಯ ಉತ್ತರವನ್ನು ಕೊಡಲಾರವು. ನಿಜ, ಸೌಂದರ್ಯ ಮತ್ತು ನೀತಿ, ಈ ಮೂರು ಆದರ್ಶಗಳನ್ನೂ ಒಳಗೊಂಡು ಇವೆಲ್ಲವುಗಳಿಗಿಂತಲೂ ಅತೀತವಾದ ಒಂದು ವಸ್ತು, ಒಂದು ಶಕ್ತಿ ಇರಬೇಕು; ಅದು ಪರಾತ್ಪರ (Ultimate) ವಾಗಿರಬೇಕು; ಈ ಎಲ್ಲ ಆದರ್ಶಗಳಿಗೂ ಮೀರಿದುದು ಆ ಪರಾತ್ಪರ ವಸ್ತು; ಆ ಪರಾತ್ಪರ ವಸ್ತುವಿನ ಸಾಕ್ಷಾತ್ಕಾರ ಮತ್ತು ಅನುಭವವನ್ನು ನಮಗೆ ಮಾಡಿಕೊಡಲು ಈ ಆದರ್ಶಗಳು ನೆರವಾಗುತ್ತವೆ; ಒಂದು ನಿರ್ದಿಷ್ಟ ಮಟ್ಟದಿಂದ ಮುಂದೆ ಈ ಆದರ್ಶಗಳೆ ಪರಾತ್ಪರ ವಸ್ತುವಿನಲ್ಲಿ ಲೀನವಾಗುತ್ತವೆ. ಪರಾತ್ಪರ ವಸ್ತುವಾದ ಬ್ರಹ್ಮವನ್ನು ಉಪನಿಷದಿನಲ್ಲಿ ಸತ್, ಚಿತ್ ಮತ್ತು ಆನಂದ ಎಂಬ ಗುಣಗಳಿಂದ ನಿರ್ದೇಶಿಸಿದರು. ಬ್ರಹ್ಮ

ಂಬುದು ಪರಾತ್ಪರ ವಸ್ತು; ಅದು ಸಕಲ ಸುಣಗಳಿಗೂ ಅತೀತವಾದುದು; ಆದರೂ ಅದು ಸತ್ಯಸ್ವರೂಪವಾದುದು [ ಇಲ್ಲಿ ಸತ್ಯ ಎಂದರೆ ನಿಜ ಮತ್ತು ಇರವು ( Truth and xistence ) ಎಂಬ ಎರಡು ಅರ್ಥದಲ್ಲಿಯೂ ಗ್ರಹಿಸಬೇಕು ]; ಬ್ರಹ್ಮವು ಚಿನ್ಮಯವಾ ದುದು: ಎಂದರೆ ಸಕಲ ಆಲೋಚನೆಯ ಶಕ್ತಿ ಮತ್ತು ಆದರ್ಶಗಳನ್ನೂ ಒಳಗೊಂಡುದು; ಮತ್ತು ಆನಂದಮಯವಾದುದು: ಸಕಲ ಸೌಂದರ್ಯದ ಭಾವಗಳನ್ನೂ ಒಳಗೊಂಡು ಈ ಭಾವಗಳನ್ನೂ ಮೀರಿರುವದು.

## ನೀತಿಯೇ ಸತ್ಯ; ನೀತಿಯೇ ಸೌಂದರ್ಯ

ಸ್ಥೂಲವಾದ ಒಂದು ಅರ್ಥದಲ್ಲಿ ಹೇಳುವ ದಾದರೆ ಕೀಟ್ಸ ಕವಿಯು ನುಡಿದಂತೆ 'ಸತ್ಯವೇ ಸೌಂದರ್ಯ ಮತ್ತು ಸೌಂದರ್ಯವೇ ಸತ್ಯ'. ಕೀಟ್ಸನ ಮಾತಿನ ಜೊತೆಗೆ ನಾವು ಇನ್ನೂ ಒಂದು ಮಾತನ್ನು ಸೇರಿಸಬಹುದು: 'ನೀತಿಯೇ ಸತ್ಯ, ನೀತಿಯೇ ಸೌಂದರ್ಯ.' ವಿಶೇಷವಾದ ಒಂದು ಅರ್ಥದಲ್ಲಿ ಹೇಳುವ ದಾದರೆ ಮಾತ್ರ ಸತ್ಯಕ್ಕೆ ಹೇಗೆ ನೀತಿ ಅನೀತಿ ಗಳ ಪ್ರಶ್ನೆಯಿಲ್ಲವೊ ಹಾಗೆ ಕಲೆಗೂ ನೀತಿ ಅನೀತಿಗಳ ಜಂಜಡವಿಲ್ಲ. ಅದು ನೀತಿಯ ಎಲ್ಲ ಕಟ್ಟನಿಂದ ಮೇಲೆ ಹೋಗುವಂತಹದು. ನೀತಿಯ ಎಲ್ಲೆ ಕಟ್ಟನ್ನು ಮೀರಿದುದು ಎಂದರೆ ನೀತಿಗೆ ವಿರುದ್ಧವಾದುದೆಂದು ನಾವು ಭಾವಿಸ ಬಾರದು. ಕಲೆ ಮತ್ತು ನೀತಿಯ ಪರಸ್ಪರ ಸಂಬಂಧವನ್ನು ವಿವೇಚಿಸುವಾಗ ಒಂದು ಅಂಶವನ್ನು ಗಮನದಲ್ಲಿಡಬೇಕು. ನೀತಿಯ ಕೆಲವು ಮೂಲಭೂತ ಕಲ್ಪನೆಗಳು ದೇಶ ಕಾಲಗಳ ಪ್ರಭಾವಕ್ಕೆ ಸಿಕ್ಕದೆ ಬದಲಾವಣೆ ಯನ್ನೇ ಹೊಂದದೆ ಇರುತ್ತವೆ. ಅದರ ರೂಪ ಮಾತ್ರ ಕಾಲಕಾಲಕ್ಕೆ, ಒಂದು ಜನಾಂಗದಿಂದ ಮತ್ತೊಂದು ಜನಾಂಗಕ್ಕೆ, ಬದಲಾವಣೆ ಹೊಂದುತ್ತಿರುತ್ತದೆ. ಬದಲಾವಣೆ ಹೊಂದು ತ್ತಿರುತ್ತಿರುವ ಗೀತೆಯ ಸ್ವರೂಪ ಕಲ್ಪ ನೆಗೂ ಕಲೆಗೂ ಆಗಾಗ್ಗೆ ಘರ್ಷಣೆ ನಡೆ ಯುತ್ತಲೇ ಇದೆ. ಕಲಾವಿದರು ಕಲೆಯ, ನೀತಿವಾದಿಗಳು ನೀತಿಯ, ಔನ್ನತ್ಯದ ಪರ ವಹಿಸಿ ವಾದಿಸಿದ್ದಾರೆ. ಆದರೆ ನಾವು ಇಷ್ಟು ಮಾತನ್ನು ಮಾತ್ರ ಖಂಡಿತವಾಗಿ ಹೇಳ ಬಹುದು: ಕಲೆ ಮತ್ತು ನೀತಿಗಳ ನಡುವೆ ಮೂಲತಃ ವಿರುದ್ಧತೆಯಿಲ್ಲ. ಶುದ್ಧ ಕಲಾ-ಕೃತಿಗೆ ನೀತಿ ಅನೀತಿಯ ಪ್ರಶ್ನೆಯು ಬರುವ ದಿಲ್ಲ. ಆದರೆ ಈ ವಾದದ ನೆರಳಿನಲ್ಲಿ ಕಲೆಯ ಸ್ಪರ್ಶವೇ ಇಲ್ಲದ ಕೃತಿಕಾರರು ಮಾತ್ರ ರಕ್ಷಣೆ ಪಡೆಯಲು ಪ್ರಯತ್ನಿಸಬಾರದು.

ಕಲೆ ಮತ್ತು ನೀತಿಗಳು ಹೇಗೆ ಪರಸ್ಪರ ವಿರುದ್ಧವಿಲ್ಲವೋ ಹಾಗೆಯೇ ನೀತಿ ಮತ್ತು ಧರ್ಮಗಳು ವಿರುದ್ಧವಿಲ್ಲ. ಕಲೆಯು ನೀತಿ-ಅನೀತಿಗಳ ಸೀಮೆಯನ್ನು ಮೀರಿ ನಿಂತಿರು ವಂತೆ, ಧರ್ಮವೂ ಈ ಎಲ್ಲೆಕಟ್ಟಗೆ ಅತೀತ ವಾಗಿದೆ. ಆಚಾರ್ಯ ಶಂಕರರಿಗೆ ಸಂಬಂಧಿಸಿ ದಂತೆ ಒಂದು ಕತೆಯನ್ನು ಹೇಳುತ್ತಾರೆ. ತಮ್ಮ ಶಿಷ್ಯರೊಡನೆ ದೇಶಪರ್ಯಟನ ಮಾಡು ತ್ತಿದ್ದಾಗ ಅವರು ಒಂದು ಮಧ್ಯಾಹ್ನ ಮದ್ಯದ ಅಂಗಡಿಯೊಂದರ ಸಮೀಪಕ್ಕೆ ಬಂದರು. ಅಗ ಅವರು ಭಿಕ್ಷೆ ಬೇಡುವ ಸಮಯ. ಅವರು ನೇರವಾಗಿ ಮದ್ಯದ ಅಂಗಡಿಯವನ ಮುಂದೆ ಹೋಗಿ ಬೊಗಸೆಯನ್ನು ನೀಡಿ "ಭವಾನ್ ಭಿಕ್ಷಾಂ ದದಾತು" ಎಂದರು. ಇಲ್ಲಿ ಸಾಧುಗಳಿಗೆ ಏನನ್ನು ನೀಡುವದು ಎಂದು ಮದ್ಯಮಾರುವವನು ಅನುಮಾನಪಟ್ಟ. "ನಿನ್ನ ಕೈಲಿರುವದನ್ನೇ ನೀಡು" ಎಂದು ಆಚಾರ್ಯರು ಆ ಮದ್ಯವನ್ನೇ ನೀಡಿಸಿಕೊಂಡು ಸ್ವೀಕರಿಸಿದ ರಂತೆ. ಇದನ್ನು ಕಂಡ ಶಿಷ್ಯವರ್ಗ ಗುರುಗಳನ್ನು



ಧ್ಯಾನಿ ಬುದ್ಧ

ಅನುಕರಿಸಿ ತಾವೂ ಮದ್ಯಕ್ಕೆ ಕೈಯೊಡ್ಡ ಹೋದಾಗ ಆಚಾರ್ಯರು ಅವರನ್ನು ಬೇಡ ವೆಂದು ತಡೆದರಂತೆ. ಗೊಣಗುಟ್ಟುವ ಶಿಷ್ಯರಿಗೆ ಉತ್ತರರೂಪವಾಗಿ ಮರುದಿನ ಮಧ್ಯಾಹ್ನ ಆಚಾರ್ಯರು ಅದೇ ಶಿಷ್ಯರೊಡನೆ ಒಬ್ಬ ಕಮ್ಮಾರನ ಕುಲುಮೆಯ ಹತ್ತಿರ ಬಂದು, "ಭಿಕ್ಷಾಂದೇಹಿ" ಎಂದು ಕೇಳಿ ಕುದಿಯುವ ಕಬ್ಬಿಣದ ರಸವನ್ನೇ ಸಂತೋಷದಿಂದ ಪಾನ ಮಾಡಿದರಂತೆ. ಶಿಷ್ಯರಿಗೆ ಮಾತ್ರ ಹಾಗೆ ಮಾಡುವದು ಸಾಧ್ಯವಾಗಲಿಲ್ಲ.

## ನೀತಿ-ಅನೀತಿಯ ಪ್ರಶ್ನೆ

ಧರ್ಮವನ್ನು ಜೀವಂತ ಅನುಭವಿಸುತ್ತಿರು ವವನನ್ನು ವ್ಯಾವಹಾರಿಕ ನೀತಿಯ ಪ್ರಶ್ನೆ ಯಿಂದ ಕಟ್ಟಿಹಾಕಲಾಗುವದಿಲ್ಲ. ಹಿಂದೂ ಶಾಸ್ತ್ರದಲ್ಲಿ ಹೇಳುವಂತೆ, ನೀತಿಯ ಪ್ರಶ್ನೆ ಯನ್ನು ಎಲ್ಲಿ ಶಾಸ್ತ್ರಾಧಾರದಿಂದ ಬಗೆಹರಿಸ ಲಾಗುವದಿಲ್ಲವೋ, ಅಲ್ಲಿ ಮಹಾನುಭಾವರ ಜೀವನದ ಉದಾಹರಣೆಯಿಂದ ಆ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಬೇಕು. ಧರ್ಮದ ಅನುಭಾವಿಯು ಸಾಧಾರಣ ಜನರಂತೆ ನೀತಿ ಅನೀತಿಯ ಯೋಚನೆಯನ್ನು ಮುಂದಿಟ್ಟು ಕೊಂಡು ನಡೆಯಬೇಕಾಗಿಲ್ಲ; ಅವನು ನಡೆದ ಮಾರ್ಗವೇ ನೀತಿಯ ಮಾರ್ಗವಾಗಿರುತ್ತದೆ. ಸಾಧಾರಣ ಜನರ ನೀತಿಯ ಕಲ್ಪನೆಗೂ ಮಹಾನುಭಾವಿಯು ನಡೆಯುವ ದಾರಿಗೂ ಎಷ್ಟೋ ವೇಳೆ ವ್ಯತ್ಯಾಸ ಕಂಡು ಪರಸ್ಪರ ತಿಕ್ಕಾಟವೂ ಉಂಟಾಗಬಹುದು.

ಧರ್ಮಾನುಭವಿಯು ನಡೆದ ದಾರಿಯೇ ನೀತಿಯ ಉದಾಹರಣೆಯಾಗಿ ಹೇಗೆ ನಿಲ್ಲು ತ್ತದೆಯೋ ಹಾಗೆಯೇ ಮಹಾನುಭಾವಿಯು ಆಡಿದ ಮಾತು ಮತ್ತು ಮಾಡುವ ಕೃತಿಗಳು ಸೌಂದರ್ಯವನ್ನು ಸೂಸುತ್ತಿರುತ್ತವೆ. ವೇದ ಉಪನಿಷದುಗಳ ಶ್ಲೋಕಗಳು, ಶರಣರ ವಚನಗಳು, ದಾಸರ ಪದಗಳು, ಬೈಬಲ್ಲಿನ ವಾಕ್ಯಗಳು, ಗಾಂಧೀಜಿಯವರ ಬರೆಹ ಇವೆ ಲ್ಲವೂ ಧರ್ಮಾನುಭವಿಯು ತನ್ನ ಅನುಭವದ ಆಳದಿಂದ ನೇರವಾಗಿ ಆಡಿದ ಮಾತುಗಳೇ ವಿನಾ ಸೌಂದರ್ಯಸೃಷ್ಟಿಯನ್ನೇ ಗುರಿ ಯಲ್ಲಿಟ್ಟುಕೊಂಡು ಕುಳಿತು ಬರೆದ ಕೃತಿ ಗಳಲ್ಲ. ಈ ಎಲ್ಲ ಮಹಾಗ್ರಂಥಗಳ ಮೂಲ ಸ್ಫೂರ್ತಿಯಿರುವದು ಧರ್ಮದ ಅನುಭವದಲ್ಲಿ. ಆದರೆ ಅವು ಅನುಪಮ ಸೌಂದರ್ಯವನ್ನು ಸೂಸುವ ಕೃತಿಗಳೂ ಆಗಿವೆ. ಧರ್ಮದಲ್ಲಿ ಸೌಂದರ್ಯದ ಸೊಬಗಿದೆ; ಆದರೆ ಅದು ಸೌಂದರ್ಯದ ಸೀಮೆಯನ್ನು ಮೀರಿದ ಅನು ಭವವಾಗಿದೆ.

ಭಾರತೀಯ ಕಲಾ ಪರಂಪರೆಯು ಕಲಾ ವಿದನನ್ನು ಋಷಿ ಎಂದು ಪರಿಗಣಿಸಿದೆ. ಶುದ್ಧ ಕಲಾವಿದನು ತನ್ನ ಕಲೆಯನ್ನೇ ಆರಾಧಿಸು ತ್ತಾನೆ. ಕಲೆಯನ್ನು ಪೂಜಿಸುವದೇ ಅತನ ಧರ್ಮ. ಸಂಗೀತಗಾರನಿಗೆ ನಾದವೇ ಬ್ರಹ್ಮ; ಶಿಲ್ಪಿಗೆ ರೂಪ- ಆಕಾರವೇ ಬ್ರಹ್ಮ; ಕವಿಗೆ ಶಬ್ದ ಮತ್ತು ಧ್ವನಿಯೇ ಬ್ರಹ್ಮವಾಗುತ್ತದೆ. ಜೀವನದ ಅಂತಿಮ ಗುರಿಯಾದ ಮುಕ್ತಿ ಯನ್ನು ಪಡೆಯಲು ಜ್ಞಾನ, ಕರ್ಮ, ಭಕ್ತಿ ಗಳು ಹೇಗೆ ವಿವಿಧ ಮಾರ್ಗಗಳೋ ಹಾಗೆಯೇ ಕಲೆಯೂ ಒಂದು ಮಾರ್ಗ.

## ಕಲೆ ಇಂದ್ರಿಯ ರೂಪಕವಾದುದು

ಇಲ್ಲಿ ಇನ್ನೊಂದು ಪ್ರಶ್ನೆ: ಕಲೆಯು ಇಂದ್ರಿಯ ರೂಪಕವಾದುದು. ಸತ್ಯವು ಅಂತಿಮ ಮಟ್ಟದಲ್ಲಿ ಇಂದ್ರಿಯಾತೀತವಾ

ದುದು. ನಾಮರೂಪ ಆಕಾರಗಳ ಮೂಲಕ ಅಭಿವ್ಯಕ್ತವಾಗುವ ಕಲೆಯು ನಾಮರೂಪ ಆಕಾರಗಳಿಗೆ ಅತೀತನಾದ ಸತ್ಯದ ಅನುಭವವನ್ನು ಹೇಗೆ ಮಾಡಿಕೊಟ್ಟೀತು ? ದ್ವಂದ್ವಾರ್ಥಕ್ಕೆ ಎಡೆಗೊಡದೆ ಸಮಸ್ಯೆಯನ್ನು ನಾವು ಸರಿಯಾಗಿ ಗ್ರಹಿಸಬೇಕು. ಕಲೆಯ ಜೀವನಾದ ಭಾವ ಬೇರೆ; ಅದನ್ನು ಅಭಿವ್ಯಕ್ತಗೊಳಿಸಲು ಪ್ರೇರಕವಾಗುವ, ಸಹಾಯಕವಾಗುವ ಸಾಧನಗಳೇ ಬೇರೆ. ಸ-ರಿ-ಗ-ಮ ಮೊದಲಾದ ಸಪ್ತಸ್ವರಗಳು ಶಬ್ದ ಅಥವಾ ನಾದದ ವಿವಿಧ ಮಟ್ಟದ ಗುರುತುಗಳು ಮಾತ್ರ. ಈ ಸ್ವರಗಳೇ ಸಂಗೀತದ ಜೀವವಲ್ಲ. ನಾದದಿಂದಲೇ ಸಂಗೀತವಾದರೂ ನಮ್ಮಲ್ಲಿ ಭಾವಾನುಭವವನ್ನು ವ್ಯುತ್ಪತ್ತಿ ಮಾಡಲು ಈ ನಾದ ಸ್ವರಗಳು ಪ್ರೇರಕವಾಗುತ್ತವೆ. ಸ್ವರವು ಇಂದ್ರಿಯರೂಪಕವಾದುದು. ಆದರೆ ಭಾವವು ಇಂದ್ರಿಯಾನುಭವವನ್ನು ಮೀರಿದುದು; ಅದು ಅವ್ಯಕ್ತವಾದುದು; ಅವರ್ಣನೀಯವಾದುದು. ಹೀಗೆಯೇ ಉಳಿದ ಎಲ್ಲ ವಿಧವಾದ ಕಲೆಯ ಪ್ರಕಾರಗಳೂ. ಶಿಲ್ಪ, ಚಿತ್ರ, ನೃತ್ಯ ಮೊದಲಾದ ಯಾವುದೇ ರೀತಿಯ ಕಲಾಕೃತಿಯನ್ನು ನಾವು ನೋಡಿದಾಗ ನಮಲ್ಲಿ ಅವರ್ಣನೀಯವಾದ ಅನುಭವವನ್ನು ಉಂಟುಮಾಡುವದೇ ಈ ಕೃತಿಗಳ ಕಾರ್ಯ. ಕಾರಣವನ್ನು ಪರಿಣಾಮದೊಡನೆ ಏಕೀಕರಿಸಬಾರದು. ಕೆಲವು ಪಾಶ್ಚಾತ್ಯ ಕಲಾವಿಮರ್ಶಕರು ಮಾತ್ರ ಈ ಅಭಿಪ್ರಾಯವನ್ನು ಒಪ್ಪುವದಿಲ್ಲ. ಅವರ ದೃಷ್ಟಿಯಲ್ಲಿ ಕಲಾನುಭವವೂ ಇಂದ್ರಿಯಾತ್ಮಕ ಅನುಭವವೇ. ಆದರೆ ಭಾರತೀಯ ದೃಷ್ಟಿಯೇ ಬೇರೆ.

ಇಂದ್ರಿಯಾತ್ಮಕವಾದ ಸಾಧನಗಳಿಗೂ ಇಂದ್ರಿಯವನ್ನು ಮೀರಿದ ಕಲಾನುಭವಕ್ಕೂ ಇರುವ ಸಂಬಂಧವಾದರೂ ಏನು ? ಅತೀತವಾದುದು ಅತೀತವಲ್ಲದುದರಿಂದ ಪ್ರಚೋದನೆಯನ್ನಾದರೂ ಹೇಗೆ ಪಡೆದೀತು ? ಕಲಾಮೀಮಾಂಸೆಯ ಮಧ್ಯದಲ್ಲಿ ಹುಟ್ಟಿರುವದಾದರೂ ಈ ಪ್ರಶ್ನೆ, ಮೂಲತಃ ತತ್ವಶಾಸ್ತ್ರಕ್ಕೆ ಸಂಬಂಧಿಸಿದುದು. ಅತೀತಕ್ಕೂ ಅತೀತವಲ್ಲದುದಕ್ಕೂ ಪರಸ್ಪರ ವಿರುದ್ಧತೆಯಿಲ್ಲ. ಅಮಿತವಾದುದು ಮಿತವಾದುದನ್ನೆಲ್ಲ ಹೊರಪಡಿಸಿ ನಿಂತಿಲ್ಲ. ಮಿತವಾದುದನ್ನೆಲ್ಲ ಒಳಗೊಂಡು ಅವೆಲ್ಲಕ್ಕಿಂತಲೂ ಇನ್ನೂ ಹೆಚ್ಚಾಗಿ, ಅವೆಲ್ಲವನ್ನೂ ಮೀರಿ ನಿಂತಿರುವದೇ ಅಮಿತವಾದುದು. ಹಾಗೆಯೇ ಇಂದ್ರಿಯಾತ್ಮಕ ಸಾಧನಗಳಿಂದ ಪ್ರೇರಣೆಗೊಂಡರೂ ಇಂದ್ರಿಯಾನುಭವದಲ್ಲಿಯೇ ಪ್ರಾರಂಭವಾದರೂ ನಿಜವಾದ ಕಲಾನುಭವವು ಅಷ್ಟರಲ್ಲಿಯೇ ಸೀಮಿತವಾಗುವದಿಲ್ಲ; ಅದನ್ನು ಮೀರಿ ಅತೀಂದ್ರಿಯವಾದ, ಅವ್ಯಕ್ತವಾದ ಅವರ್ಣನೀಯವಾದ ಅನುಭವವನ್ನು ನಮಗೆ ಕೊಡುತ್ತದೆ.

## ಸಗುಣ ನಿರ್ಗುಣ ಭೇದ

ಅತೀತದ ಮಾತನ್ನು ಆಡುವಾಗ ಹಿಂದೂ ಧರ್ಮದಲ್ಲಿ, ನಡೆದುಕೊಂಡು ಬಂದ ಭಗವಂತನ ಸಗುಣ - ನಿರ್ಗುಣ ಭೇದವನ್ನು ಮತ್ತು ಈ ಭೇದದಿಂದ ಕಲೆಯ ಮೇಲೆ ಆಗಿರುವ ಪರಿಣಾಮವನ್ನು ನಾವು ಗಮನಿಸಬೇಕು. ಪರಾತ್ಪರ ವಸ್ತುವು ಕೇವಲ ಅತೀತವಾಗಿಯೇ ಇದ್ದು, ನಾಮ-ರೂಪ-ಆಕಾರಾತ್ಮಕವಾದ ನಮ್ಮ ಕಲ್ಪನೆಗೆ ಎಟುಕದೆ ನಿರಾಕಾರವಾಗಿಯೇ ಇದ್ದರೆ, ಕಲಾಕೃತಿಯ ಸಾಧನಗಳಾದ ಬಣ್ಣ, ಶಬ್ದ ಮೊದಲಾದುವುಗಳಿಂದ ಅದನ್ನು ಹಿಡಿಯುವದು ಸಾಧ್ಯವಿಲ್ಲ. ಮೂರ್ತಿಪೂಜೆಗೆ ಅವಕಾಶವಿದ್ದಲ್ಲಿ ಮಾತ್ರ ನಾವು ಪೂಜಿಸುವ ಮೂರ್ತಿಯನ್ನು ಸುಂದರವಾಗಿ ಚಿತ್ರಿಸುತ್ತೇವೆ; ಆ ಸುಂದರ ಕೃತಿಯು ಪರಾತ್ಪರ ಶಕ್ತಿಯ ಆವಿಷ್ಕಾರವೆನ್ನುತ್ತೇವೆ. ಮೂರ್ತಿಪೂಜೆಯೇ ಇಲ್ಲದಿದ್ದಲ್ಲಿ ಮೂರ್ತಿಯ ಚಿತ್ರವೂ ಇಲ್ಲ, ಚಿತ್ರಕಾರನೂ ಇಲ್ಲ; ಸೌಂದರ್ಯದ ಸೃಷ್ಟಿಯೂ ಇಲ್ಲ. ಆದುದರಿಂದ ಸಗುಣ ಕಲ್ಪನೆಯು ಹೆಚ್ಚು ಪ್ರಚಲಿತವಿದ್ದಾಗ ಮಾತ್ರವೇ ಧರ್ಮವು ಹೆಚ್ಚು ಕಲಾಪ್ರಚೋದಕವಾಗಿದೆ. ಮೂರ್ತಿಪೂಜೆಗೆ ಅವಕಾಶವೇ ಇಲ್ಲದಿರುವ ಇಸ್ಲಾಂ ಧರ್ಮವು ವಿಗ್ರಹಗಳ ಸೃಷ್ಟಿಗೆ ಪ್ರೇರಕವಾಗಿಲ್ಲ. ಆದರೆ ಮಾನವನಲ್ಲಿರುವ ಕಲಾಪ್ರವೃತ್ತಿಯನ್ನು ಅದು ಬಿಡಲು ಯಾರಿಗೂ ಸಾಧ್ಯವಿಲ್ಲ; ಮೂರ್ತಿಪೂಜೆಯು ನಿಷೇಧಿಸಲ್ಪಟ್ಟರೂ ಇಸ್ಲಾಂ ಜನರ ಕಲಾಪ್ರವೃತ್ತಿಯು ಮಸೀದಿಯನ್ನು ಕಟ್ಟುವ ವಾಸ್ತುಶಿಲ್ಪದಲ್ಲಿ ಪ್ರಕಟವಾಯಿತು. ಆರಂಭದೆಶೆಯಲ್ಲಿ ಬೌದ್ಧಧರ್ಮವೂ ಮೂರ್ತಿಪೂಜೆಯನ್ನು ವಿರೋಧಿಸಿತು. ಆಗ ಆ ಧರ್ಮವು ವಿಗ್ರಹರೂಪಕವಾದ ಯಾವ ಕಲಾಕೃತಿಯನ್ನು ಸೃಷ್ಟಿಸುವದಕ್ಕೂ ಪ್ರೇರಕವಾಗಲಿಲ್ಲ. ಕಾಲಕ್ರಮೇಣ ಹಿಂದೂಧರ್ಮದ ಪ್ರಭಾವವು ಬೌದ್ಧಧರ್ಮದ ಮೇಲೆ ಬಿದ್ದಿತು. ಬೌದ್ಧರು ಬುದ್ಧನ ವಿಗ್ರಹವನ್ನೇ ಪೂಜಿಸಲು ಪ್ರಾರಂಭಿಸಿದರು; ಬೌದ್ಧಧರ್ಮವು ತನ್ನದೇ ಆದ ವಿಶಿಷ್ಟರೀತಿಯ ಕಲಾಕೃತಿಗಳ ಸೃಷ್ಟಿಯಾಗಲು ಪ್ರೇರಕವಾಯಿತು.

ಮೇಲಿನ ಉದಾಹರಣೆಗಳಿಂದ ಒಂದು ಅಂಶವು ನಿರ್ವಿವಾದವಾಗಿ ವ್ಯಕ್ತವಾಗುತ್ತದೆ: ಕಲೆ ಮತ್ತು ಧರ್ಮಗಳಿಗೆ ಪರಸ್ಪರ ಬೇರ್ಪಡಿಸಲಾಗದ ಜೀವಂತ ಸಂಬಂಧವಿದೆ. ಎಷ್ಟೋ ಸಲ ಧರ್ಮವು ತನ್ನ ವಿಚಾರ, ಆದರ್ಶ, ತತ್ವಗಳನ್ನು ಜನರ ಮನಸ್ಸಿಗೆ ಹಿಡಿಯುವ ರೀತಿಯಲ್ಲಿ ಬೋಧಿಸಲು ಕಲೆಯನ್ನು ಬಳಸಿಕೊಂಡಿದೆ. ಇಟಲಿಯ ದೊಡ್ಡ ಚಿತ್ರಕಾರರು ಕ್ರೈಸ್ತಧರ್ಮದ ಕತೆಗಳನ್ನು ಬಣ್ಣದಲ್ಲಿ ಚಿತ್ರಿಸಿ, ಆ ಧರ್ಮವನ್ನು ಹೆಚ್ಚು ಜನಾದರಣೀಯವಾಗಿ, ಜನತೆಯ ಕಲ್ಪನೆಯಲ್ಲಿ ಹೆಚ್ಚು ಆಳವಾಗಿ ಬೇರೂರುವಂತೆ ಮಾಡಿದರು. ಭಾರತದಲ್ಲಿಯಂತೂ ಕಲೆ ಮತ್ತು ಧರ್ಮಗಳಿಗೆ ಬೇರ್ಪಡಿಸಲಾಗದ ಸಂಬಂಧವಿದೆ. ದೇವರ ಪ್ರಾರ್ಥನೆ, ಆರಾಧನೆಗಳ ಶ್ಲೋಕಗಳಾದ ವೇದವನ್ನು ಪಠಿಸುವದರಿಂದ ಹಿಡಿದು ದೇವಾಲಯವನ್ನು ಕಟ್ಟುವ ವರೆಗೂ ಧರ್ಮವು ಸ್ಫೂರ್ತಿಯನ್ನು ಕೊಡುವ ಜೀವಂತ ಶಕ್ತಿಯಾಗಿದೆ. ಧರ್ಮದ ಚೈತನ್ಯಪೂರ್ಣ ಸ್ಫೂರ್ತಿಯಿಲ್ಲದಿದ್ದರೆ ಭಾರತದ ಸುಂದರ ದೇವಾಲಯಗಳು, ಮಹತ್ತರ ಸಾಹಿತ್ಯಕೃತಿಗಳಾದ ರಾಮಾಯಣ ಭಾರತಗಳು, ತ್ಯಾಗರಾಜರ ಸಂಗೀತ ಮೊದಲಾದ ಯಾವ ಕಲೆಯೂ ಈ ಮಟ್ಟದಲ್ಲಿ ವಿಕಾಸ ಹೊಂದುತ್ತಿರಲಿಲ್ಲವೇನೊ! ಹಿಂದೂ, ಜೈನ, ಬೌದ್ಧ ಧರ್ಮಗಳು ಉಚ್ಛ್ರಾಯಸ್ಥಿತಿಯಲ್ಲಿದ್ದಾಗ ಭಾರತದಲ್ಲಿ ಒಂದೊಂದು ವಿಧವಾದ ಕಲೆಯ ಶೈಲಿಯು ಬೆಳೆದು ಪುಷ್ಟಿಹೊಂದಿದ ಅಂಶವನ್ನು ನಾವು ಗಮನಿಸಬೇಕು. ಭಾರತದ ಯಾತ್ರಾ ಸ್ಥಳಗಳೆಲ್ಲವೂ ಚೆಲುವಿನ ಪ್ರಕೃತಿಯ ಮಡಿಲಿನಲ್ಲಿಯೇ ಸ್ಥಾಪಿತವಾಗಿರುವ ಅಂಶವೂ ಗಮನಾರ್ಹವಾದುದು.

## ಭಾರತೀಯ ಕಲೆಯ ದೃಷ್ಟಿ

ಭಾರತೀಯ ಕಲೆಯ ಮುಖ್ಯದೃಷ್ಟಿಯು, ಭಾವರೂಪಕವಾದ (abstract) ಚಿರಸತ್ಯವೊಂದಕ್ಕೆ ವಸ್ತುರೂಪ ( concrete )ವನ್ನು ಕೊಡುವದು. ಇಡೀ ವಿಶ್ವದಲ್ಲಿ ಚಿರಂತನವಾಗಿ ನಡೆಯುತ್ತಿರುವ ಲಯ(rythm)ವನ್ನು

ೂಡಿಸುವದೇ ಚಿದಂಬರದ ನಟರಾಜನ ಗ್ರಹ. ಅನಂತ ಶಾಂತಿಯನ್ನು ನಮಗೆ ರ್ಶನ ಮಾಡಿಸಲು 'ಧ್ಯಾನಿ ಬುದ್ಧ'ನ ್ರತಿಮೆ ನಿರ್ಮಾಣವಾಯಿತು. ರಾಮಾಯಣ ಾರತದ ಪಾತ್ರಗಳು ಒಂದು ಗುಣ ಶಕ್ತಿಗಳ ೂಪಗಳು ಮಾತ್ರ. (ಷೇಕ್ಸ್‌ಪಿಯರನ ುನ್ನತ ರುದ್ರನಾಟಕಗಳಲ್ಲಿ ಬರುವ ಪಾತ್ರ ಳು ಸಹ.)

ಧರ್ಮವು ತನ್ನ ತತ್ತ್ವಗಳನ್ನು ಅಭಿವ್ಯಕ್ತ ೊಳಿಸಲು ಕಲೆಯನ್ನು ಬಳಸಿಕೊಂಡರೂ ಲೆಯು ಮಾತ್ರ ಧರ್ಮದ ನೆರಳಿನಲ್ಲಿ ಎಂದೂ ಲ್ಲಬೇಕಾಗಿಲ್ಲ ಎಂದು (Clive Bell) ್ಲೈವ್ ಬೆಲ್ ಎಂಬ ಕಲಾವಿಮರ್ಶಕರು ಭಿಪ್ರಾಯಪಡುತ್ತಾರೆ. ಸತ್ಯವನ್ನು ಅದು ಇರುವಂತೆಯೇ ಹಿಡಿದು ಚಿತ್ರಿಸುವದೇ ಕಲೆ. ಯಾವ ವಸ್ತುವನ್ನಾಗಲಿ ನಾವು ನೋಡುವಾಗ ಆ ವಸ್ತುವಿನ ಬಗೆಗೆ ಜಂಜಡ, ಆಲೋಚನೆ, ್ವೇಷ ಅಥವಾ ಪ್ರೀತಿ, ಮೆಚ್ಚುಗೆ ಅಥವಾ ತಿರಸ್ಕಾರ, ಆಸೆ ಅಥವಾ ವಿರಕ್ತಿ ಮೊದಲಾದ ಅನೇಕ ಭಾವನೆ ಮತ್ತು ಅಭಿಪ್ರಾಯಗಳು ನಮ್ಮ ಮನಸ್ಸಿನಲ್ಲಿ ಮೂಡುತ್ತವೆ. ಆ ವಸ್ತು ವಿನ ಸ್ವರೂಪವನ್ನು ನಮ್ಮ ಮನಸ್ಸಿನ ಈ ಭಾವನೆಗಳ ಬೆಳಕಿನಲ್ಲಿ ನಾವು ನಿರ್ಧರಿಸು ತ್ತೇವೆ. ಆದರೆ ಈ ಭಾವನೆಗಳ ಬಣ್ಣದಿಂದ ಮುಕ್ತವಾದ ವಾಸ್ತವ ವಸ್ತುವಿನ ಸ್ಥಿತಿಯಾ ದರೂ ಯಾವುದು? ಅಂತಹ ಸ್ಥಿತಿಯಲ್ಲಿ ವಸ್ತುವನ್ನು—ಜಗತ್ತನ್ನು—ನಮಗೆ ದರ್ಶನ ಮಾಡಿಸುವದೇ ಕಲೆ. ಕಲಾವಿದನು ಗ್ರಹಿಸಿ ಚಿತ್ರಿಸಬೇಕಾದುದು ಅವಿನಾಶಿಯಾದ ಈ ವಸ್ತುಸ್ಥಿತಿಯನ್ನು; ದಿನವೂ ಬದಲಾವಣೆ ಹೊಂದುವ ಅದರ ವಿವಿಧ ಸ್ವರೂಪಗಳನ್ನಲ್ಲ. ಧರ್ಮದ ಗುರಿಯೂ ಇದೇ ಆಗಿದೆ. ಆದು ದರಿಂದ ನಿಜವಾದ ಕಲಾವಿದನು ಮಾತಿನಲ್ಲಿ ತಾನು ಯಾವ ಧರ್ಮವನ್ನೂ ನಂಬುವದಿಲ್ಲ ನೆಂದು ಹೇಳಿದರೂ ವಾಸ್ತವವಾಗಿ ಅವನದು ಧರ್ಮದ ದೃಷ್ಟಿ ಮತ್ತು ಅನುಭವವನ್ನು ಹೊಂದಿರುವ ವ್ಯಕ್ತಿತ್ವವೇ. ಕಲೆ ಮತ್ತು ಧರ್ಮ ಎರಡೂ ಒಂದೇ ಗುರಿಯನ್ನು ಸಾಧಿ ಸಲು ಸಮಾನವಾದ ಮಟ್ಟದಲ್ಲಿ ಸಾಗುವ ಎರಡು ಮಾರ್ಗಗಳಾಗಿರುವದರಿಂದ ಒಂದು ಮತ್ತೊಂದರ ಅಧೀನವೆನ್ನುವದರಲ್ಲಿ ಅರ್ಥ ವಿಲ್ಲ—ಎಂಬುದು ಕ್ಲೈವ್ ಬೆಲ್ ಅವರ ಮತ.

### ಕಲಾ ಅಭಿವ್ಯಕ್ತಿಗೆ ಧಾರ್ಮಿಕ ವಸ್ತುಗಳು

ಅತ್ಯಂತ ಉನ್ನತ ಮಟ್ಟದ ಕಲಾವಿದರು ತಮ್ಮ ಕ್ರತುಶಕ್ತಿಯ ಅಭಿವ್ಯಕ್ತಿಗೆ ಮಹತ್ತರ ವಾದ ಧಾರ್ಮಿಕ ವಸ್ತುಗಳನ್ನೇ ತೆಗೆದುಕೊ- ಳ್ಳುವದರಲ್ಲಿ ಅಗತ್ಯವಾದ ಒಂದು ಔಚಿತ್ಯ ವಿದೆ. ಉನ್ನತಮಟ್ಟದ ಕಲಾವಿದನು ಗಹನ ವಾದುದನ್ನೇ ಯೋಚಿಸುತ್ತಾನೆ; ಗಹನ ವಾದುದನ್ನೇ ಹುಡುಕುತ್ತಾನೆ; ಗಹನವಾದು ದನ್ನೇ ಪ್ರಕಟಗೊಳಿಸಲು ಅವನ ಸೃಷ್ಟಿ ಶಕ್ತಿಯು ನುಗ್ಗಿ ಬರುತ್ತದೆ. ಅವನ ಆಳ, ಎತ್ತರ ಮತ್ತು ವಿಸ್ತಾರಗಳಿಗೆ ಪ್ರಾಪಂಚಿಕ ವಾದ ಸಾಧಾರಣ ಸಂಗತಿಗಳು ಏನೇನೂ ಸಾಲದಾಗುತ್ತವೆ. ತನ್ನ ಶಕ್ತಿಗೆ ಸಮವಾಗುವ ವಸ್ತುವು ಅವನಿಗೆ ಧಾರ್ಮಿಕ ಸಂಗತಿಗಳಲ್ಲಿ ದೊರಕುತ್ತದೆ. ಅಂತಹ ಕಲಾವಿದನು ಸಾಧಾ ರಣ ಸಂಗತಿಯೊಂದನ್ನು ಆರಿಸಿಕೊಂಡರೂ ಅವನು ಅದಕ್ಕೆ ಕೊಡುವ ಗಹನತೆಯ ಮೂಲಕ ಅದು ಧಾರ್ಮಿಕ ವಸ್ತುವಿನ ಮಟ್ಟ ಕ್ಕೇರುತ್ತದೆ. ಕವಿ ನೋಡುವದು ಒಂದು ಸಾಧಾರಣ ಹೂವು. ಆದರೆ, "ಏ ಹೂವೇ,



ನಟರಾಜ

ನಿನ್ನನ್ನು ನಶನು ಪೂರ್ಣವಾಗಿ ಅರಿಯಬಲ್ಲವ ನಾದರೆ ಇಡೀ ವಿಶ್ವವನ್ನೇ ಅರಿಯ ಬಲ್ಲೆ" ಎನ್ನುವ ಅವನ ದೃಷ್ಟಿಯು ಆಗಲೇ ಸಾಧಾ ರಣತ್ವದ ಲೌಕಿಕ ಮಟ್ಟವನ್ನು ಮೀರಿ ಧರ್ಮದ ಸೀಮೆಯನ್ನು ತಲುಪಿದೆ. ಈ ದೃಷ್ಟಿಯಿಂದ ಅಧುನಿಕರು ಮಾಡುವ ಲೌಕಿಕ ಕಲೆ ಮತ್ತು ಧಾರ್ಮಿಕ ಕಲೆ ಎಂಬ ಪ್ರಭೇದವು ಒಂದು ಮಟ್ಟದ ವರೆಗೆ ಸರಿ ಎನ್ನುವಂತೆ ಕಂಡರೂ ಉತ್ತುಂಗ ಅವಸ್ಥೆಯಲ್ಲಿ ಅದು ತ್ವರಿತವಾದ ಭೇದವೆನಿಸುತ್ತದೆ. ಕಲೆಯ ವಸ್ತು, ಸಾಧಾ ರಣದ್ದಾಗಿರಬಹುದು. ಆ ಸಾಧಾರಣದಲ್ಲಿಯ ಗಹನವನ್ನು ಕಂಡಕ್ಷಣ ಸೃಷ್ಟಿಯ ವಿಸ್ಮ- ಯದ ಅರಿವು, ಅನುಭವವು ನಮಗೆ ಆಗಿರು ತ್ತದೆ; ಆಗಲೇ ನಾವು ಧರ್ಮದ ಗಡಿಯನ್ನು ಮುಟ್ಟಿರುತ್ತೇವೆ. ಹೀಗೆ ಕೆಲವು ದೃಷ್ಟಿಯಿಂದ ನಾವು ಕಲೆ ಮತ್ತು ಧರ್ಮಗಳಲ್ಲಿ ವ್ಯತ್ಯಾಸ ವನ್ನು ಗುರುತಿಸಿದರೂ ಉಚ್ಚವಾದ ಗನ್ನು ದೃಷ್ಟಿಯಿಂದ ಇವೆರಡರ ನಡುವೆ ಹೆಚ್ಚು ಭೇದವನ್ನು ಎಣಿಸುವದು ಸಾಧ್ಯವಿಲ್ಲ; ಎರಡೂ ಪರಸ್ಪರ ಪೂರಕವಾಗಿವೆ.

ಕಲೆಯ ಲಕ್ಷಣವನ್ನು ಹೇಳುತ್ತಾ ಟಾಲ್- ಸ್ಟಾಯ್ ಅವರು ಹೀಗೆ ಬರೆಯುತ್ತಾರೆ: ಸಕಲ ಜನದಲ್ಲಿಯೂ ಇರುವ ಭೇದಭಾವ ವನ್ನು ಕ್ಷಣಕಾಲವಾದರೂ ಮರೆಯುವಂತೆ ಮಾಡಿ ಎಲ್ಲರಲ್ಲಿಯೂ ಏಕಭಾವದ ಅನುಭವ ವನ್ನು ಮೂಡಿಸುವದು ನಿಜವಾದ ಕಲೆ. ಉತ್ತಮವಾದ ಸಂಗೀತಕಚೇರಿಯಲ್ಲಿ ಕುಳಿತು ನಿಜವಾಗಿಯೂ ಕಲಾನುಭವವನ್ನು ಹೊಂದು ತ್ತಿರುವ ಇಬ್ಬರು ಶತ್ರುಗಳು ಪರಸ್ಪರ ಪಕ್ಕ ದಲ್ಲಿಯೇ ಕುಳಿತಿದ್ದರೂ ತಮ್ಮ ವೈರವನ್ನು ಆ ಕ್ಷಣದ ಮಟ್ಟಿಗಾದರೂ ಮರೆತು ಸಂಗೀತದ ಏಕಭಾವದಲ್ಲಿ ತಲ್ಲೀನರಾಗಿರುತ್ತಾರೆ. ಪರಸ್ಪರ ಪರಿಚಯವೇ ಇಲ್ಲದವರು ಸಹ ಗಾಯನ ಕಚೇರಿಗಳಲ್ಲಿ ಉತ್ತಮವಾದ ಆಲಾಪನೆ ಯಾದಾಗ ಒಬ್ಬರ ಮುಂದೊಬ್ಬರು ಕೈ-ನೀಡಿ 'ಶಾಭಾಸ್, ವಾಹವಾ' ಎನ್ನುವದನ್ನು ನಾವು ಅನೇಕ ಸಲ ಕಾಣುತ್ತೇವೆ; ನಾವೂ ಹಾಗೆ ಮಾಡಿದ್ದೇವೆ. ಧರ್ಮದ ಗುರಿ ಮತ್ತು ತತ್ತ್ವ ವಾದರೂ ಇದೇ ಆಗಿದೆ. ಸಕಲ ಜನರೂ ಮೂಲತಃ ಒಂದೇ ಎಂಬ ಭಾವವನ್ನು ಹುಟ್ಟಿ ಸುವದೇ ಧರ್ಮ.

### ಪಾಪ-ಪುಣ್ಯ

ಜಗತ್ತಿನ 'ಪಾಪ' (sin) ಎಂಬ ಬಗೆಗೆ ಸಹ ಕಲೆ ಮತ್ತು ಧರ್ಮ, ಎರಡೂ ಹೆಚ್ಚು ಕಡಿಮೆ ಒಂದೇ ಕೋನದಲ್ಲಿ ನಿಲ್ಲುತ್ತವೆ; ಆದರೆ ಇವು ಗಳೆರಡರ ದೃಷ್ಟಿಯಲ್ಲಿ ಪರಸ್ಪರ ವ್ಯತ್ಯಾಸವೂ ಇದೆ. ನಿತ್ಯಜೀವನದಲ್ಲಿ ಪಾಪ-ಪುಣ್ಯ, ಒಳಿತು ಕೆಡುಕಿನ ಕಲ್ಪನೆಯು ನಮ್ಮ ಆಚಾರ ವಿಚಾರಗಳನ್ನೆಲ್ಲ ತುಂಬಿರುತ್ತದೆ. ನಮ್ಮ ಮಧ್ಯದಲ್ಲಿಯೇ ಒಬ್ಬ ಮ್ಯಾಕ್‌ಬೆತ್ ಇದ್ದರೆ ಅವನ ಬಗ್ಗೆ ನಾವು ಸಹಾನುಭೂತಿಯಿಂದ ವಿಚಾರ ಮಾಡುವದಿಲ್ಲ. ನಿತ್ಯ ಜೀವನದ ಪಾಪಿ, ಕೊಲೆಗಡುಕ, ಅತ್ಯಾಚಾರಿಯು ತನ್ನ ಪಾಪದ ಮಟ್ಟದಲ್ಲಿಯೇ ಉಳಿ ಯುತ್ತಾನೆ. ಅಂತಹವನ ಜೀವನವು ಕಲಾ ವಿದನ ಕೈಯ ವಸ್ತುವಾದಾಗ ಅವನ ಪಾಪ ದೋಷಗಳನ್ನು ಮೀರಿದ ಒಂದು ಸ್ಥಿತಿಗೆ ಕಲಾವಿದನು ಒಯ್ಯುತ್ತಾನೆ. ಮ್ಯಾಕ್‌ಬೆತ್‌ನ ವಿಷಯವಾಗಿ ನಾವು ವಿಚಾರ ಮಾಡುವದು ಮಾತ್ರವಲ್ಲ; ಸಹಾನುಭೂತಿಯನ್ನು ತೋರಿ ಸುತ್ತೇವೆ; ಅವನಿಗಾಗಿ ಅವನ ಶೀರ ಹತ್ತಿರದ

ಬಂಧುಗಳಂತೆ ಮರಗುತ್ತೇವೆ. ನಿತ್ಯಜೀವನದಲ್ಲಿ ಕ್ರೂರವಾಗಿ ಕಾಣುವ ವಸ್ತುವು ತನ್ನ ಪಾಶವೀ ಕ್ರೌರ್ಯದ (brutal cruelty) ಮಟ್ಟದಿಂದ ಮೇಲೇರಿ ನಮ್ಮ ಕಲ್ಪನೆಯಲ್ಲಿ ನಿಲ್ಲಲು ಯೋಗ್ಯವಾಗುತ್ತದೆ. ಹೀಗೆ 'ಕೆಟ್ಟ'ದರಲ್ಲಿಯೂ ಸಹಾನುಭೂತಿಯ ದೃಷ್ಟಿಯನ್ನು ಮೂಡಿಸುವದು ಕಲೆಯ ಗುಣ. ಏಕೆಂದರೆ ಕಲೆಯು ಯಾವುದೇ ವ್ಯಕ್ತಿಯ ಜೀವನವನ್ನು ಸಮಗ್ರರೀತಿಯಲ್ಲಿ ನೋಡುತ್ತದೆ. ಕೇವಲ ಹೊರನೋಟದಿಂದ ತೃಪ್ತವಾಗದೆ ವ್ಯಕ್ತಿಯ ಅಂತರಂಗವನ್ನೆಲ್ಲ ಸ್ನೇಹದಿಂದ ಹುಡುಕುತ್ತದೆ. ಪಾಪದ ಬಗೆಗೆ ಧರ್ಮದ ದೃಷ್ಟಿಯು ಕೊಂಚ ಭಿನ್ನವಾಗುತ್ತದೆ. ಸರ್ವಶಕ್ತ, ಸರ್ವಜ್ಞನಾದ ಭಗವಂತನ ಅನಂತ ವ್ಯಾಪಕತೆಯಲ್ಲಿ ಪಾಪ ಅಥವಾ ಕೆಡಕು ಎಂಬುದು ಇರುವದಾದರೂ ಹೇಗೆ? ಪಾಪದ ಪ್ರಶ್ನೆಯನ್ನು ಯಾವ ಆಸ್ತಿಕ ಧರ್ಮವೂ ಅಷ್ಟೊಂದು ಜಯಪ್ರದವಾಗಿ ಬಿಡಿಸಿಲ್ಲ. ಇಳೆಯ ಜನಗಳ ಪರೀಕ್ಷಾರ್ಥವಾಗಿ ಭಗವಂತನೇ ಪಾಪವನ್ನು ಸೃಷ್ಟಿಸಿದ್ದಾನೆ, ಎಂದರೆ ಕೆಡುವ ಅವಕಾಶವನ್ನು ಜನರಿಗೆ ಕೊಡುವದೇನು? ಆ ಅವಕಾಶದಲ್ಲಿ ಅವರು ಕೆಟ್ಟರೆ ಅವರಿಗೆ ಶಿಕ್ಷಿಸುವದೇನು? ಇದೆಂತಹ ವಿಚಿತ್ರ ಲೀಲೆ ಭಗವಂತನದು? ಎಂಬ ಪ್ರಶ್ನೆ ಹುಟ್ಟುತ್ತದೆ. ಪಾಪವೂ ಭಗವಂತನೊಂದಿಗೆ ಆದಿಯಿಂದಲೂ ಸ್ವತಂತ್ರವಾಗಿ ಉದಯಿಸಿ ನಿಂತಿದೆ ಎಂದರೆ ಅಷ್ಟರಮಟ್ಟಿಗೆ ಭಗವಂತನು ಸರ್ವವ್ಯಾಪಿಯಲ್ಲ. ಸ್ವತಂತ್ರವಾಗಿ ಹುಟ್ಟಿ ನಿಂತಿರುವ ಪಾಪವನ್ನು ನಾಶಮಾಡುವ ಶಕ್ತಿಯು ಸರ್ವಶಕ್ತನಿಗೆ ಇರಬಾರದೆ? ಎಂಬ ಪ್ರಶ್ನೆ ಎದ್ದುನಿಲ್ಲುತ್ತದೆ. ಈ ಪ್ರಶ್ನೆಗಳಿಗೆ ಸರ್ವಸಮಂಜಸವಾದ ತರ್ಕಬದ್ಧ ಉತ್ತರವನ್ನು ಕೊಡುವದು ಕಷ್ಟದ ಕೆಲಸ. ಆಸ್ತಿಕರು ಕೊನೆಯದಾಗಿ ಹೇಳುವ ಉತ್ತರವೆಂದರೆ: ಯಾವುದನ್ನು ನಾವು ಪಾಪವೆನ್ನುತ್ತೇವೆಯೋ ಅದು ದೇವರ ಮಟ್ಟದ ದೃಷ್ಟಿಯಿಂದ ನೋಡಿದಾಗ ಖಂಡಿತ ಪಾಪವಲ್ಲ. ನಮ್ಮ ಮಿತದೃಷ್ಟಿಗೆ, ಪ್ರಯೋಜನ ದೃಷ್ಟಿಗೆ, ಲೋಭದ ದೃಷ್ಟಿಗೆ ಮಾತ್ರ ಕೆಲವು ವಸ್ತುಗಳು ಪಾಪಮಯವಾದುದೆಂದು ಕಂಡರೂ ಧರ್ಮಾನುಭವಿಯಾದ ಜ್ಞಾನಿಯ ಸಮಗ್ರದೃಷ್ಟಿಯಲ್ಲಿ 'ಪಾಪ'ವೆಂಬುದೇ ಇಲ್ಲ. ಕಲೆ ಮತ್ತು ಧರ್ಮಗಳು ಹೀಗೆ ಭಿನ್ನಾಭಿಪ್ರಾಯವನ್ನು ತಳೆಯುತ್ತವೆ. ಪಾಪದ ಅಸ್ತಿತ್ವವನ್ನು ಕಲೆಯು ಒಪ್ಪುತ್ತದೆ; ಆದರೆ ಅದನ್ನು ಸಹ್ಯವನ್ನಾಗಿ ಮಾಡುತ್ತದೆ. ಆದರೆ ಧರ್ಮವ[...] ಪಾಪದ ಅಸ್ತಿತ್ವವನ್ನೇ ತಿರಸ್ಕರಿಸುತ್ತದೆ.

ಧರ್ಮದ ಅಭಾವ ರೂಪಕವಾದುದು ಪಾ[...]ವಾದರೆ, ಸೌಂದರ್ಯದ ಅಭಾವ ರೂಪಕ[...]ವಾದುದು ಕುರೂಪ (Ugliness); ನೀತಿಯ[...] ವಿರುದ್ಧವಾದುದು ಅನೀತಿ; ನಿಜವಲ್ಲದುದು ಸಟೆ. ಧರ್ಮ, ಸೌಂದರ್ಯ, ನೀತಿ, ನಿಜ, ಇ[...] ಎಲ್ಲವೂ ಒಂದೇ ತತ್ತ್ವದ ವಿವಿಧ ಸ್ವರೂಪಗಳು ಎಂಬುದು ಕೆಲವು ಜಿಜ್ಞಾಸುಗಳ ಮತ. ಸರ್ವವ್ಯಾಪಕವಾದ ವಿಶ್ವನಿಯಮವು, ತೀ[...] ಸಣ್ಣ ಪ್ರಮಾಣದಲ್ಲಿರಲೊಲ್ಲದೇಕೆ, ನಮ್ಮ ಪ್ರತಿಯೊಂದು ನಡೆನುಡಿಗಳಲ್ಲಿಯೂ ನಾವು ಸೃಷ್ಟಿಸುವ ಕೃತಿಗಳಲ್ಲಿಯೂ ಇರುತ್ತದೆ. ಈ ನಿಯಮವನ್ನು ಕೊಂಚ ಉಲ್ಲಂಘಿಸಿದರೂ ಸರಿ, ಒಂದೊಂದು ದೃಷ್ಟಿಯಿಂದ ನೋಡಿದಾಗ ಅದು ಕುರೂಪ, ಸಟೆ, ಪಾಪ ಮೊದಲಾದ ಒಂದೊಂದು ರೂಪದಲ್ಲಿ ಕಾಣುತ್ತದೆ. ಈ ವಿಶ್ವನಿಯಮವನ್ನು ತತ್ತ್ವಶಾಸ್ತ್ರಜ್ಞರು ಪರಾತ್ಪರ[...] ನಿಯಮವೆನ್ನುತ್ತಾರೆ; ಆಸ್ತಿಕರು ಭಗವನ್ನಿಯಮ, ದೈವೀಲೀಲಾ ವಿಲಾಸ ಮೊದಲಾದ ಶಬ್ದಗಳಲ್ಲಿ ನಿರ್ದೇಶಿಸುತ್ತಾರೆ.

# ಮರಾಠಿ ಪತ್ರಿಕಾ ಪ್ರಪಂಚ

ಒಂದು ಶತಮಾನದ ಹಿಂದೆ ಪ್ರಾರಂಭವಾದ ಮರಾಠಿ ಪತ್ರಿಕೋದ್ಯಮ ಟಿಳಕರ ಕಾಲದಲ್ಲಿ ಧ್ಯೇಯವಾದ ಸ್ವರೂಪದಲ್ಲಿದ್ದಿತು. ಆದರೆ ಇಂದು ಅದು ವ್ಯಾವಹಾರಿಕ ರೂಪವನ್ನು ತಳೆದಿದೆ. ಆದರೂ ಮರಾಠಿ ಪತ್ರಿಕಾಪ್ರಪಂಚ ವಿಷಯ ವೈವಿಧ್ಯ ವನ್ನು ಕಾಪಾಡಿಕೊಂಡು ಬಂದಿರುವದು. . . . . .

ಲೇಖಕರು :
**ಶ್ರೀ. ಬಾ. ಕೃ. ಗಲಗಲಿ,**
ಸಹಸಂಪಾದಕ– " ಕಿರ್ಲೋಸ್ಕರ " ಪುಣೆ

ಮರಾಠಿ ಪತ್ರಿಕಾ ಪ್ರಪಂಚವು ಒಂದು ಶತ ಾನದ ಹಿಂದೆ ಪ್ರಾರಂಭವಾಯಿತು. ಕ್ರಿಶ್ಚನ್ ಶನರಿಗಳು ಪ್ರಾರಂಭಿಸಿದ " ಜ್ಞಾನೋ- ಯ"ವು ಮರಾಠಿಯಲ್ಲಿಯ ಪ್ರಥಮಪತ್ರಿಕೆ. ದರೆ ಪರಕೀಯಆಡಳಿತ ಹಾಗೂ ಪರಕೀಯ ರ್ಮಗಳ ಪ್ರಭಾವಕ್ಕೊಳಗಾಗದೆ ಸ್ವತ್ವ ನ್ನು ಜನತೆಗೆ ಬೋಧಿಸುವದಕ್ಕಾಗಿ ಶ್ರೀ ಚಿಪ ಣಕರರು ತಮ್ಮ 'ನಿಬಂಧಮಾಲೆ' ಯನ್ನು ್ರರಂಭಿಸಿದರು. ಇದರಂತೆ ' ಲೋಕಹಿತ ಾದಿ'ಯ 'ಶತಪತ್ರ'ವೂ ಉದ್ಬೋಧಕವಾಗಿ ತು. ಇದೇ ಪರಂಪರೆಯಲ್ಲಿ ಮುಂದೆ ಕೇಸರಿ' ಮತ್ತು 'ಸುಧಾಕರ'ಗಳು ಜನ್ಮ ಳಿದವು. ಲೋಕಮಾನ್ಯ ಟಿಳಕರು ತಮ್ಮ ೇಸರಿ'ಯಲ್ಲಿ ಬ್ರಿಟಿಶ್ ಆಡಳಿತದ ವಿರುದ್ಧ ಡೆಸಿದ ಗರ್ಜನೆಯು ಇಂದಿಗೂ ಸ್ಫೂರ್ತಿಪ್ರದ ಾಗಿದೆ. ಲೋಕಮಾನ್ಯ ಟಿಳಕರು ರಾಜಕೀಯ ೇತ್ರದಲ್ಲಿ ಸಾಧಿಸಿದಂಥ ಕಾರ್ಯವನ್ನೇ ಶ್ರೀ ಗರಕರರು ತಮ್ಮ ' ಸುಧಾರಕ ' ಪತ್ರಿಕೆಯ ೂಲಕ ಸಾಮಾಜಿಕಕ್ಷೇತ್ರದಲ್ಲಿ ಸಾಧಿಸಿದರು. ಂದು ಮಹಾರಾಷ್ಟ್ರದಲ್ಲಿ ರಾಜಕೀಯ, ಶೈಕ್ಷ- ಕ ಹಾಗು ವಾಙ್ಮಯೀನ ಕ್ಷೇತ್ರದಲ್ಲಿ ಪುರುಷ ಷ್ಟೇ ಸ್ತ್ರೀಯರೂ ಕಾರ್ಯಪ್ರವೃತ್ತರಾಗಿರು ದರ ಶ್ರೇಯಸ್ಸಿನಲ್ಲಿ ಬಹುಭಾಗವು ಶ್ರೀ ಗರಕರರಿಗೆ ಸಲ್ಲಬೇಕು. ಶ್ರೀ ಶಿವರಾಮ ಂತ ಪರಾಂಜಪೆಯವರ 'ಕಾಳ' ಪತ್ರಿಕೆಯೂ ೀ ಕೃಷ್ಣಾಜಿ ಪ್ರಭಾಕರ ಖಾಡಿಲಕರರ ವಾಕಾಳ' ಪತ್ರಿಕೆಯೂ ರಾಜಕೀಯ ರಂಗ ಲ್ಲಿ ಸಂಸ್ಮರಣೀಯ ಕಾರ್ಯವನ್ನೆಸಗಿರುತ್ತವೆ. ಕಾಳದಲ್ಲಿಯ ಆಯ್ದ ನಿಬಂಧಗಳು.' ತಮ್ಮ ಕ್ರೋಕ್ತಿಪೂರ್ಣಶೈಲಿ ಹಾಗೂ ಇತರ ಸಾಹಿ- ಕ ಗುಣಗಳಿಂದಾಗಿ ಇಂದಿಗೂ ವಾಚನೀಯ ನಿಸಿವೆ. ಶ್ರೀ ಅಚ್ಯುತ ಬಳವಂತ ಕೋಲ್ಹಟ ರರ 'ಸಂದೇಶ'ವು ಚುರುಕು ಮುಟ್ಟಿಸುವ ನೋಡಿ ಟೀಕೆಗಳಿಂದ ಜನಪ್ರಿಯವಾಗಿ ತು. 'ಸಂದೇಶ'ದ ಈ ಪರಂಪರೆಯನ್ನು ಚಾರ್ಯ ಅತ್ರೆಯವರ 'ಮರಾಠಾ' ಪತ್ರಿಕೆಯು ಗ ನಡೆಸಿಕೊಂಡು ಬಂದಿದೆಂದು ಹೇಳ ಹುದು.

## ಧ್ಯೇಯವಾದಿ ಯುಗ

ಮರಾಠಿ ಪತ್ರಿಕೆಗಳ ಈ ಕಾಲಕ್ಕೆ ' ಧ್ಯೇಯವಾದಿ ಯುಗ 'ವೆಂದು ಹೇಳಬಹುದು. ಉಪಯುಕ್ತ ಪತ್ರಿಕೆಗಳ ಸಂಪಾದಕರೆಲ್ಲ ಸ್ವತಃ ಉಜ್ವಲ ಧ್ಯೇಯವಾದಿಗಳಾಗಿದ್ದ—ಲೋಕನಾಯಕರಾಗಿದ್ದು ತಮ್ಮ ಪ್ರಭಾವಿ ಲೇಖನಗಳಿಂದ ಜನರಿಗೆ ಸ್ಫೂರ್ತಿಕೊಡುತ್ತಿದ್ದರು. ಧಂದೆಯೆಂದಾಗಲಿ, ಉದ್ಯೋಗವೆಂದಾಗಲಿ, ಇವರು ತಮ್ಮ ಪತ್ರಿಕೆಗಳನ್ನು ನಡೆಸುತ್ತಿದ್ದಿಲ್ಲ; ಆದರೆ ಲೋಕಸೇವೆಯ ವ್ರತವೆಂದು ಧ್ಯೇಯವೆಂದು ಅವನ್ನು ನಡೆಸುತ್ತಿದ್ದರು. ಇಂದಿನ ವ್ಯಾಖ್ಯೆಯಂತೆ ಇವು ವೃತ್ತಪತ್ರಿಕೆಗಳಾಗದೆ ವಿಚಾರ ಪತ್ರಿಕೆಗಳಾಗಿದ್ದವು. ಮಹಾರಾಷ್ಟ್ರದಲ್ಲಿ ಧ್ಯೇಯವಾದಿ ದೃಷ್ಟಿಯಿಂದ ರಾಜಕೀಯ, ಸಾಮಾಜಿಕ ವಿಚಾರಗಳನ್ನು ಈ ಪತ್ರಿಕೆಗಳು ರೂಪಿಸಿದವು.

ಇದೇ ಕಾಲದಲ್ಲಿ 'ವಿವಿಧಜ್ಞಾನವಿಸ್ತಾರ,' ಮತ್ತು 'ಮನೋರಂಜನ' ಮಾಸಿಕಗಳೂ ಜ್ಞಾನಪ್ರದವಾದ ಲಲಿತಸಾಹಿತ್ಯದ ಹೊಳೆಯನ್ನೇ ಹರಿಸಿದವು. 'ಮನೋರಂಜನೆ' ಮಾಸಿಕವಂತೂ ಮಹಾರಾಷ್ಟ್ರದಲ್ಲಿ ಲಲಿತ ವಾಙ್ಮಯ ಲೇಖಕರ ಪೀಳಿಗೆಯನ್ನೇ ನಿರ್ಮಿಸಿತು. ಸಾಹಿತ್ಯಗುಣಸಂಪನ್ನವಾದ ಲಲಿತ ಲೇಖನಗಳಿಂದ ಮಹಾರಾಷ್ಟ್ರದಲ್ಲಿ ಇಷ್ಟೊಂದು ಜನಪ್ರಿಯವಾದ ಮಾಸಿಕವು ಮನೋರಂಜನದ ನಂತರ ಇನ್ನೊಂದಾಗಲಿಲ್ಲ. 'ನಾಟ್ಯಕಥಾರ್ಣವ' ಹಾಗೂ 'ಕಾವ್ಯರತ್ನಾವಳಿ' ಈ ಎರಡು ಹಳೆಯ ಮಾಸಿಕಗಳು ನಾಟ್ಯ—ಕಾವ್ಯ ವಾಙ್ಮಯ ಪ್ರಕಾರಗಳನ್ನು ಸಮೃದ್ಧವಾಗಿಸಿದವು. ಶ್ರೀ ಹರಿಭಾವು ಆಪಟೆ ಇವರ ' ಕರಮಣೂಕ 'ವು ಮರಾಠಿ ಕಾದಂಬರಿ ಸಾಹಿತ್ಯ ಗಂಗೆಯೆ ಆಯಿತು. ಸಾಹಿತ್ಯದಲ್ಲಿಯ ತಮ್ಮ ವೈಶಿಷ್ಟ್ಯವನ್ನು ತೋರಿಸಬೇಕು, ಆತ್ಮಾವಿಷ್ಕಾರವನ್ನು ಸಂಪೂರ್ಣ ನಡೆಸಬೇಕು ಎಂಬ ಧ್ಯೇಯದಿಂದಲೇ ' ಕರಮಣೂಕ 'ದ ಲೇಖಕರು ಬರೆಯುತ್ತಿದ್ದರು; ಬರೆದು ದುಡ್ಡು ಗಳಿಸಬೇಕೆಂಬ ವಿಚಾರ ಇವರಿಗಿದ್ದಿಲ್ಲ.

## ೧೯೨೦ ರ ನಂತರ

೧೯೨೦ರ ನಂತರ ಮರಾಠಿ ಪತ್ರಿಕಾ ಪ್ರಪಂಚದಲ್ಲಿ ಕ್ರಮೇಣ ಬದಲಾವಣೆ ಕಂಡು ಬರಹತ್ತಿತು. ೧೯೪೭ರ ನಂತರ ಅದರ ಸ್ವರೂಪವೇ ಬದಲಿಸಿತು. ಅಂತರಿಕ-ಬಾಹ್ಯ ಹೀಗೆ ಇಬ್ಬಗೆಯಾದ ಬದಲಾವಣೆ ಕಂಡು ಬಂದಿತು. ಕೇವಲ ಧ್ಯೇಯವಾದದ, ಲೋಕಸೇವೆಯ ಅಥವಾ ಸಾಹಿತ್ಯ ಬಂಧನದ ದೃಷ್ಟಿ ಅಷ್ಟೊಂದು ತೀಕ್ಷ್ಣವಾಗಿ ಉಳಿಯಲಿಲ್ಲ. ಧ್ಯೇಯಕ್ಕೆ ವ್ಯವಹಾರವು ಬಂದು ಗಂಟುಬಿದ್ದಮುಂದಂತೂ ಕೆಲವು ಪತ್ರಿಕೆಗಳು ಕೇವಲ ವ್ಯವಹಾರವನ್ನು ಉಳಿಸಿಕೊಂಡವು. ಧ್ಯೇಯವಾದವನ್ನೇ ಇಟ್ಟುಕೊಂಡ ಪತ್ರಿಕೆಗಳು ನಿಂತು ಹೋಗಹತ್ತಿದವು. ವ್ಯಾವಹಾರಿಕ ದೃಷ್ಟಿಯೇ ಅಧಿಕ ಪ್ರಭಾವಿಯಾಗಿದ್ದರಿಂದ ಜನತೆಗೆ ನೀಡಬೇಕಾದದ್ದಕ್ಕಿಂತ ಅವರಿಗೆ ಬೇಕಾದದ್ದನ್ನೇಕೊಡುವ ಪ್ರವೃತ್ತಿ ಹೆಚ್ಚಹತ್ತಿತು.

ಮರಾಠಿ ಪತ್ರಿಕೆಗಳಲ್ಲಿ ೧೯೨೦ ರ ನಂತರ ವೈವಿಧ್ಯ, ವೈಚಿತ್ರ್ಯ, ಸೌಂದರ್ಯಗಳು ಪ್ರಕಾಶಕ್ಕೆ ಬಂದಂತೆ ಜಾಹೀರಾತುಗಳೂ ಬಂದವು. ಪಾಶ್ಚಾತ್ಯರ ಅನುಕರಣವೂ ಹೆಚ್ಚಿತು. ಜೊತೆಗೆ ವಾಚಕವರ್ಗವೂ ಬೆಳೆಯುತ್ತ ಹೋಯಿತು. ಇಂದು ಮಹಾರಾಷ್ಟ್ರದ ಯಾವದೇ ನಗರದಲ್ಲಿಯ ಪಾನಪಟ್ಟಿಯ ಅಂಗಡಿಕಾರ, ಗಿರಣಿಯ ಕೂಲಿಕಾರ, ಸ್ಟೇಶನ್ನಿನಲ್ಲಿಯ ಹಮಾಲ ಕೂಡ ಪತ್ರಿಕೆಯನ್ನು ಕೊಂಡುಕೊಂಡು ಓದಬಲ್ಲವನಾಗಿದ್ದಾನೆ.

## ಮರಾಠಿ ದೈನಿಕಗಳು

ಮರಾಠಿ ದೈನಿಕಗಳಲ್ಲಿ ಅಮೂಲಾಗ್ರ ಬದಲಾವಣೆ ಸಾಧಿಸುವ ಕಾರ್ಯವನ್ನು ಪುಣೆಯ 'ಸಕಾಳ' ದೈನಿಕವು ಪ್ರಥಮತಃ ಪ್ರಾರಂಭಿಸಿತು. ಅಲ್ಲದೆ ವ್ಯಾವಹಾರಿಕ ದೃಷ್ಟಿಯಿಂದ ಅಪೂರ್ವ ಯಶಸ್ಸನ್ನೂ ಸಂಪಾದಿಸಿತು. ಈ ಪತ್ರಿಕೆಯ ಸಂಸ್ಥಾಪಕರಾದ ಡಾ. ಪರುಳೇಕರರು ಅಮೇರಿಕೆಯಲ್ಲಿ ಪತ್ರಿಕಾ ವ್ಯವಸಾಯದ ವಿಶೇಷ ತರಬೇತಿ ಪಡೆದುಕೊಂಡು ಬಂದು ಮರಾಠಿ ಪತ್ರಿಕಾಪ್ರಪಂಚದಲ್ಲಿ ಅಮೇರಿಕನ್

ಪತ್ರಿಕೋದ್ಯಮದ ಪ್ರಯೋಗವನ್ನು ಪ್ರಾರಂಭಿಸಿದರು. ಇದಕ್ಕೆ ಮೊದಲು ಮರಾಠಿ ಪತ್ರಿಕೆಗಳಲ್ಲಿ ಕೇವಲ ರಾಜಕೀಯ ವ್ಯಕ್ತಿಗಳು ಬರುತ್ತಿದ್ದವು ಮತ್ತು ಅವುಗಳ ಬಗ್ಗೆ ಅಗ್ರಲೇಖ ಹಾಗೂ ಸ್ಫುಟಗಳನ್ನು ಬರೆಯುತ್ತಿದ್ದರು. ಆದರೆ 'ಸಕಾಳ'ವು 'ವಾರ್ತೆ'ಗೆ ಇಟ್ಟುಕೊಂಡಿದ್ದ ವ್ಯಾಖ್ಯೆಯು ಎಷ್ಟೊಂದು ಸರ್ವಂಕಷವಾಗಿತ್ತೆಂದರೆ ಪೇಟೆಯಲ್ಲಿ ಯಾವ ತರಕಾರಿ ಹೇಗೆ ಮಾರಲ್ಪಟ್ಟಿತು, ಲಗ್ನದ ಹಂಗಾಮಿನಲ್ಲಿ ಒಂದೇ ದಿನದಲ್ಲಿ ಎಷ್ಟು ವಿವಾಹಗಳಾದವು, ಏಕಾದಶಿಯಂದು ಕೀರ್ತನಕ್ಕೆ ಜನರೆಷ್ಟು ನೆರೆದಿದ್ದರು ಮುಂತಾದವೆಲ್ಲ 'ಸಕಾಳ'ಕ್ಕೆ 'ವಾರ್ತೆ'ಗಳೇ ಆಗಿದ್ದವು. ರಾಜಕೀಯ ಘಟನೆಗಳಷ್ಟೇ ಈ 'ವಾರ್ತೆ' ಗಳಿಗೆ ಮಹತ್ವ ಹಾಗೂ ಸ್ಥಾನ ಪತ್ರಿಕೆಯಲ್ಲಿ ದೊರೆಯಹತ್ತಿತು. ಕೆಲವೇ ತಿಂಗಳುಗಳ ಹಿಂದೆ ಈ ಪತ್ರಿಕೆಯಲ್ಲಿ 'ಬಾರ್ಶಿಯಲ್ಲಿ ತಗಣಿಗಳ—ಪಿಡುಗು' ಎಂಬ ಸುದ್ದಿ ಪ್ರಾಮುಖ್ಯವಾಗಿ ಬಂದಿತ್ತು. ಸುದ್ದಿಗಳನ್ನು ನೀಡುವಾಗ ಕೂಡ ಲೋಕಶಿಕ್ಷಣದ ಹಾಗೂ ಬುದ್ಧಿವಾದಿ ವಿಚಾರಸರಣಿಯ ಧ್ಯೇಯವನ್ನು ಸಂಪಾದಕರು ಇಟ್ಟುಕೊಳ್ಳಬೇಕು. ಈ ದೃಷ್ಟಿಯಿಂದ ನೋಡಿದರೆ, 'ಸಕಾಳ'ದಂಥ ಪತ್ರಿಕೆಗಳಲ್ಲಿಯ ಸುದ್ದಿಗಳು ತೀರ ಸಾಧಾರಣ ಹಾಗೂ ಕೆಲವೊಮ್ಮೆ ಹಾಸ್ಯಾಸ್ಪದವೆನಿಸಬಹುದಾದ ಸಂಭವವಿದೆ. ಆದರೂ ಸಾಮಾನ್ಯ ವಾಚಕರಿಗೆ ಇಂಥ ಸುದ್ದಿಗಳು ಸೇರುತ್ತವೆ. ಮತ್ತು ಇವನ್ನು ಹೆಚ್ಚೆಚ್ಚು ಪ್ರಯತ್ನಪೂರ್ವಕ ನೀಡುವ ಉಪಕ್ರಮವನ್ನು ಈ ಪತ್ರಿಕೆಗಳು ನಡೆಸಿರುತ್ತವೆ.

ಈ ವಿವಿಧ ವಾರ್ತೆಗಳಲ್ಲದೆ ವಿದೇಶಗಳಲ್ಲಿಯ ಸ್ವಂತ ಸುದ್ದಿಗಾರರ ಸುದ್ದಿ ಪತ್ರಗಳು ಪೇಟೆಗಳಲ್ಲಿಯ ಚಟುವಟಿಕೆಗಳು, ರಂಗಭೂಮಿ, ಚಿತ್ರಪಟ, ಶಾಲೆ ಕಾಲೇಜುಗಳ ವಲಯದಲ್ಲಿಯ ವಿವಿಧ ವಾರ್ತೆಗಳ ದೈನಿಕ ಪತ್ರಿಕೆಗಳಲ್ಲಿ ಪ್ರಸಿದ್ಧವಾಗುತ್ತಿರುತ್ತವೆ.

'ಸಕಾಳ'ದಂತೆ ಇನ್ನೊಂದು ಉಲ್ಲೇಖನೀಯ ದೈನಿಕವೆಂದರೆ ಮುಂಬಯಿಯ "ಲೋಕಸತ್ತಾ". ಈ ಪತ್ರಿಕೆಯಲ್ಲಿಯ ಸುದ್ದಿಗಳೂ ಅದರಂತೆ ಅಗ್ರಲೇಖಗಳೂ ಹೆಚ್ಚು ಗಂಭೀರವಿದ್ದು ಇತರ ವಿಷಯಗಳೂ ಮಾಹಿತಿಪೂರ್ಣ ಇರುತ್ತವೆ.

ಮರಾಠಾ, ನವಶಕ್ತಿ, ಲೋಕಮಿತ್ರ, ತರುಣ ಭಾರತ ಇವು ಮರಾಠಿಯಲ್ಲಿಯ ಇತರ ಪ್ರಮುಖ ದೈನಿಕಗಳಾಗಿವೆ.

ಒಟ್ಟಾರೆ, ಮರಾಠಿ ದೈನಿಕ ಪತ್ರಿಕೆಗಳನ್ನು ನೋಡಿದರೆ ಅಧಿಕಾರಾರೂಢ ಸರಕಾರದ ಪಕ್ಷವನ್ನು ಟೀಕಿಸುವ ಪತ್ರಿಕೆಗಳೇ ಜನಪ್ರಿಯವಾಗಿದ್ದು ಹೆಚ್ಚು ಚನ್ನಾಗಿ ನಡೆಸಿಕೊಂಡು ಬಂದವಾಗಿರುತ್ತವೆ. ಸರಕಾರವನ್ನು ಟೀಕಿಸುವ ಪತ್ರಿಕೆಗಳನ್ನು ಚನ್ನಾಗಿ ಶೋಧಿಸಿ ನೋಡುವದು ಪ್ರಜಾಪ್ರಭುತ್ವ ದೃಷ್ಟಿಯಿಂದ ಪಥ್ಯಕರವೇ ಎನ್ನಬಹುದು.

## ಸಾಪ್ತಾಹಿಕಗಳು

ಮರಾಠಿಯಲ್ಲಿಯ ಪ್ರಥಮ ಆಧುನಿಕ ಸಾಪ್ತಾಹಿಕವೆಂದರೆ, ಶ್ರೀ ನೋ. ಗ. ರಾಂಗಣೇಕರ ಹಾಗೂ ಶ್ರೀ ಅನಂತ ಕಾಣೇಕರ ಇವರು ನಡೆಸಿದ 'ವಸುಂಧರಾ' ಇದಾಗಿದೆ. ದುರ್ದೈವದಿಂದ ಈ ಸಾಪ್ತಾಹಿಕವು ಅಲ್ಪಾಯುಷಿಯಾಯಿತು. ಆದರೆ ರಾಜಕಾರಣ ವಾಙ್ಮಯ ವಿನೋದ, ವ್ಯಕ್ತಿಪರಿಚಯ, ಕಲಾ, ವಿಮರ್ಶೆ ಮುಂತಾದ ವಿವಿಧ ಸಾಹಿತ್ಯಪ್ರಕಾರಗಳನ್ನು ವಿಶಿಷ್ಟ ದೃಷ್ಟಿಕೋನದಿಂದ ಮಂಡಿಸುವ ಪಾಠವನ್ನು 'ವಸುಂಧರೆ'ಯೇ ಇತರ ಸಾಪ್ತಾಹಿಕಗಳಿಗೆ ಕಲಿಸಿತು. ಇಂದು 'ಮೌಜ' ಪತ್ರಿಕೆಯು 'ವಸುಂಧರೆ'ಯ ಕಾರ್ಯವನ್ನು ತುಸು ಗಂಭೀರಸ್ವರೂಪದಿಂದ ಆದರೆ ಚನ್ನಾಗಿ ನಡೆಸಿದೆ. ಇನ್ನೊಂದು ಉಲ್ಲೇಖನೀಯ ಸಾಪ್ತಾಹಿಕವೆಂದರೆ ಸಾನೆ ಗುರೂಜಿಯವರು ಪ್ರಾರಂಭಿಸಿದ 'ಸಾಧನಾ'ಇದಾಗಿದೆ. ಸಮಾಜವಾದಿ ದೃಷ್ಟಿಕೋನದ ಸಾಹಿತ್ಯವು ಈ ಸಾಪ್ತಾಹಿಕದಲ್ಲಿ ವಿಶೇಷವಾಗಿ ಪ್ರಸಿದ್ಧವಾಗುತ್ತಿರುತ್ತದೆ.

ಮಾಸಪತ್ರಿಕೆಗಳ ರಂಗದಲ್ಲಿ ಕಿರ್ಲೋಸ್ಕರ ಪತ್ರಿಕೆಯು ಕ್ರಾಂತಿಯನ್ನು ಸಾಧಿಸಿದೆ.ಅಮೇರಿಕೆಯಲ್ಲಿ ಜನರಲ್ ಪರ್ಪಜ ಮ್ಯಾಗಾಝಿನ್ ಎಂದು ಇರುವ ನಿಯತಕಾಲಿಕೆಗೆ ಮರಾಠಿಯಲ್ಲಿ ಕಿರ್ಲೋಸ್ಕರ ಮಾಸಿಕವು ಉದಾಹರಣೆಯಾಗಿ ನಿಂತಿದೆ. ವ್ಯಕ್ತಿಪರಿಚಯ, ಪ್ರವಾಸವರ್ಣನೆ, ಮೃಗಯಾವಿಹಾರ, ಕಥೆ, ಸಾಮಾಜಿಕ ಚರ್ಚೆ, ರಾಜಕಾರಣ. ಶಿಕ್ಷಣ ಮುಂತಾದ ರಂಗಗಳಲ್ಲಿಯ ಪ್ರಮುಖ ಪ್ರಶ್ನೆಗಳ ಮೇಲೆ ತಜ್ಞರ ಸಂದರ್ಶನ, ಪರಿಸಂವಾದ ಮುಂತಾದ ಸಾಹಿತ್ಯವನ್ನು ಬುದ್ಧಿವಾದಿ ದೃಷ್ಟಿಕೋನದಿಂದ ಕಿರ್ಲೋಸ್ಕರವು ವಾಚಕರಿಗೆ ಒದಗಿಸುತ್ತಿದೆ. ಲೇಖಗಳಲ್ಲಿ ಚಿತ್ರ, ಫೋಟೊ ಮುಂತಾದವುಗಳನ್ನು ಕೊಡುವ ರೂಢಿಯನ್ನೂ ಈ ಮಾಸಿಕವು ಪ್ರಾರಂಭಿಸಿತು. ಅಲ್ಲದೆ (ಮಾಸಿಕ) ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖಗಳ ಸಾಹಿತಿಗಳಿಗೆ ಗೌರವ ಧನವನ್ನು ಕೊಡುವದಾಗಿ ಪ್ರಕಟವಾಗಿ ಈ ಪತ್ರಿಕೆಯು ಸಾರಿ ಹೇಳಿತು. ಇಂದು ಇತರ ಮಾಸಿಕಗಳೂ ತಮ್ಮ ಶಕ್ತ್ಯಾನುಸಾರ ಲೇಖಕರಿಗೆ ಪ್ರತಿಫಲವನ್ನು ಸಲ್ಲಿಸುತ್ತವೆ.

ಇನ್ನೊಂದು ಉಲ್ಲೇಖನೀಯ ಮಾಸಿಕವೆಂದರೆ 'ಸತ್ಯಕಥಾ'. ಮನೋವಿಶ್ಲೇಷಣ, ಸಂಜ್ಞಾಪ್ರವಾಹ, ಸೂಕ್ಷ್ಮ ಆಶಯ ಮುಂತಾದವುಗಳಿಂದ ರಂಜಿತವಾದ ನವಕಥೆಗಳನ್ನೂ ನವಕಾವ್ಯಗಳನ್ನೂ ತತ್ಸಂಬಂಧೀ ವಿವೇಚನಾತ್ಮಕ ಲೇಖನಗಳನ್ನೂ ಈ ಮಾಸಿಕವು ಪ್ರಸಿದ್ಧ ಮಾಡಿದಷ್ಟು ಬೇರೆ ಯಾವ ಮರಾಠಿ ಮಾಸಿಕವೂ ಪ್ರಕಟಿಸಿಲ್ಲ. ಆದ್ದರಿಂದ ಮರಾಠಿಯಲ್ಲಿ ಹೊಸಬರ ಜಂಗುಳಿಯು 'ಸತ್ಯಕಥೆ'ಯ ಆಶ್ರಯದಲ್ಲಿ ಸೇರಿದಂತೆ ತೋರುತ್ತದೆ.

ವಸಂತ, ವಸುಧಾ, ದೀಪಾವಳಿ, ಮನ
ಹರ, ವಾಙ್ಮಯಶೋಭಾ, ಪ್ರತಿಷ್ಠಾನ
ಇಂದು ಮಹಾರಾಷ್ಟ್ರದಲ್ಲಿ ಪ್ರಮುಖ ಮಾ
ಗಳಾಗಿ ಮೆರೆಯುತ್ತಿವೆ.

ಅಮೇರಿಕೆಯ 'ರೀಡರ್ಸ್ ಡೈಜೆಸ
ಮಾದರಿಯ ಕೆಲವು ಮಾಸಿಕಗಳು ಇತ್ತೀ
ಮರಾಠಿಯಲ್ಲಿ ಪ್ರಸಿದ್ಧವಾಗಹತ್ತಿವೆ. ನಾಸಿ
'ಅಮೃತ' ಮಾಸಿಕವು ಈ ಉಪಕ್ರಮ ಪ್ರಾ
ಭಿಸಿತು. ಕನ್ನಡದ 'ಕಸ್ತೂರಿ'ಯೊಂದಿಗೆ
ಮಾಸಿಕವನ್ನು ಹೋಲಿಸಬಹುದಾಗಿದೆ.

ಕೇವಲ ಮಹಿಳೆಯರಿಗಾಗಿ ಪ್ರಸಿದ್ಧ ವ
ತ್ತಿರುವ ಮಾಸಿಕಗಳಲ್ಲಿ 'ಸ್ತ್ರೀ' ಮಾಸಿ
ಪ್ರಮುಖವಾಗಿದೆ. ಇತ್ತೀಚೆಗೆ 'ಅನುರಾ
ಮತ್ತು 'ಲಲನಾ' ಎಂಬ ಮಾಸಿಕಗ
ಪ್ರಕಟವಾಗಲಾರಂಭಿಸಿವೆ.


## ನಿಯತಕಾಲಿಕೆಗಳ ಕಾರ್ಯ

ಮರಾಠಿಯಲ್ಲಿ ಜಿಲ್ಲಾಪತ್ರಿಕೆಗಳ
ಹಿಡಿದು ಒಟ್ಟು ಪತ್ರಿಕೆಗಳ ಸಂಖ್ಯೆ ಇ
ರಕ್ಕೂ ಮಿಕ್ಕಿದೆ. ಮಹಾರಾಷ್ಟ್ರದಲ್ಲಿ ಪು
ರೂಪದಿಂದ ಪ್ರಸಿದ್ಧವಾಗುವ ಸಾಹಿತ್ಯಕ್
ಹೆಚ್ಚು ಸಾಹಿತ್ಯವು ನಿಯತಕಾಲಿಕೆಗಳ ರ
ದಲ್ಲಿ ಪ್ರಸಿದ್ಧವಾಗುತ್ತಿದ್ದು ಇದರಲ್ಲಿ ವೈ
ವೈಚಿತ್ರ್ಯಗಳು ವಿಶೇಷವಾಗಿರುತ್ತವೆ.

ಲೇಖಕನು ಲೇಖ ಬರೆಯುತ್ತಾನೆ; ಸ
ದಕನು ಅದನ್ನು ಪ್ರಸಿದ್ಧಿಸುತ್ತಾನೆ. ಹಾ
ವಾಚಕರ ವರ್ಗವು ಅದನ್ನು ಓದುತ್ತಿರುತ್ತ
ಉದ್ದಿಮೆ ಎಂಬ ದೃಷ್ಟಿಯಿಂದ ಮ
ಪತ್ರಿಕಾ ಪ್ರಪಂಚವು ಚನ್ನಾಗಿ ನಡೆದ
ಕಾಣುತ್ತದೆ. ಆದರೆ ಮರಾಠಿ ನಿಯತಕಾ
ಗಳ ಪ್ರಾರಂಭಕಾಲದಲ್ಲಿ ಸಂಪಾದಕ
ಕಂಡುಬರುತ್ತಿದ್ದ ಧ್ಯೇಯವಾದ, ಅಂತಃ
ಣದ ತಳಮಳ—ಕಳವಳಗಳು ಇಂ
ಸಂಪಾದಕರಲ್ಲಿ ಅಂಶತಃ ಉಳಿದಿವೆ
ಹೇಳಬಹುದು. ಹಾಗೆ ನೋಡಿ
ಸ್ವಾತಂತ್ರ್ಯಸಂಪಾದನೆಗೆ ಬೇಕಾಗುವ
ತೀವ್ರಸ್ವರೂಪದ ಧ್ಯೇಯವಾದ ಮತ್ತು
ಕಳೆಯು, ಸಂಪಾದಿಸಿದ ಸ್ವಾತಂತ್ರ್ಯದ ರ
ಕ್ಷಣೆ ಹಾಗೂ ಸಂವರ್ಧನೆಗಾಗಿ ಬೇಕಾಗುತ್ತ
ಸ್ವತಂತ್ರಭಾರತದ ಸತ್ಪಾತ್ರಪ್ರಜೆಯೆಂ
ಪ್ರತಿಯೊಬ್ಬ ನಾಗರಿಕನೂ ಸಿದ್ಧನಾಗಲ
ಬೇಕು; ಆತನ ಅಂತಃಕರಣಪ್ರವೃತ್ತಿ, ಜೀ
ನದ ಬಗೆಗಿನ ದೃಷ್ಟಿಕೋನ ಬದಲಾಗಬೇ
ಈ ಕಾರ್ಯವನ್ನು ನಿಯತಕಾಲಿಕೆಗಳು ಸಾ
ಬೇಕು. ಇದಕ್ಕಾಗಿ ಮತ್ತೆ ಟಿಳಕ-ಅ
ಕರರು ಜನ್ಮತಾಳಬೇಕು.

ಇಲ್ಲದಿದ್ದರೆ, ಸಿನೇಮಾ ಥಿಯೇಟರುಗ
ಹೊಟೆಲುಗಳು ವ್ಯವಸ್ಥಿತರೀತಿಯಿಂದ
ಯುತ್ತಿರುವಂತೆ ಪತ್ರಿಕೆಗಳೂ ನಡೆಯು
ಹೋಗಬಹುದು, ಅಷ್ಟೆ!

# ಪ್ರಾಚೀನ ಕರ್ನಾಟಕದಲ್ಲಿಯ ಕೆಲವು ವಿದ್ಯಾಕೇಂದ್ರಗಳು



ಲೇಖಕರು:
ಶ್ರೀನಿವಾಸ ರಿತ್ತಿ, ಉದಕಮಂಡಲ

ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಶಿಕ್ಷಣವು ಅತ್ಯಂತ ಅವಶ್ಯಕವಾದ ಅಂಗವೆಂಬು ನ್ನು ಎಲ್ಲರೂ ತಿಳಿದಿರುವರು. ಅದಕ್ಕಾಗಿಯೇ ಶಿಕ್ಷಣದಲ್ಲೂ ಉನ್ನತಿ ಸಾಧಿಸಲು ದು ಹಲವಾರು ರೀತಿಯಿಂದ ಯತ್ನಿಸಲಾಗುತ್ತಿದೆ. ಅಂತೆಯೇ ಪ್ರಾಚೀನ ರ್ನಾಟಕದಲ್ಲಿ ಶಿಕ್ಷಣ ಪದ್ಧತಿ ಹೇಗಿತ್ತು. ವಿದ್ಯಾಕೇಂದ್ರಗಳ ಸ್ಥಿತಿಗತಿ ಹೇಗಿತ್ತು ದು ಮುಂತಾದ ವಿಷಯಗಳನ್ನು ಇಲ್ಲಿ ಲೇಖಕರು ಕೊಟ್ಟಿರುವರು. . . .

ಂದು ರಾಷ್ಟ್ರದ ಸಂಸ್ಕೃತಿ, ಒಂದು ನಾಡಿನ ಗರಿಕತೆ, ಅಲ್ಲಿನ ಶಿಕ್ಷಣ ಪದ್ಧತಿಯನ್ನವ ಬಿಸಿದೆ ಎಂಬ ನುಡಿ ಕೇವಲ ಅರ್ಥವಾದ . ದೇಶದ ಸಂಸ್ಕೃತಿಯು ಉಚ್ಚಮಟ್ಟವನ್ನು ಯುದ್ಧಕೊಂಡು ಹೋಗುವ ನಾಳಿನ ನಾಗ ನನ್ನು ನಿರ್ಮಿಸುವ ಕಾರ್ಯದಲ್ಲಿ ಆ ದೇಶ ಯ ಶಿಕ್ಷಣ ಪದ್ಧತಿಯ ಪಾತ್ರ ಬಹು ಖ್ಯವಾದುದು.

ಪ್ರಾಚೀನ ಭಾರತದಲ್ಲಿ ಶಿಕ್ಷಣದ ಉದ್ದೇಶ ಕು ವ್ಯಾಪಕವಾಗಿದ್ದಿತು. ಅಂದಿನ ವಿದ್ಯೆ ಕ ಜೀವನದಲ್ಲಿ ಸುಖವನ್ನೊದಗಿಸಿಕೊಡು ಲ್ಲದೆ ತದನಂತರದ ಸುಖಕ್ಕೂ ಮಾರ್ಗ ನ್ನು ಕಲ್ಪಿಸಿಕೊಡುವಂಥದಾಗಿತ್ತು—ಅಂದರೆ ದಿನ ವಿದ್ಯೆಯ ಅಂತಿಮ ಧ್ಯೇಯ ಮೋಕ್ಷ ಧನೆ — 'ವಿದ್ಯಯಾಽಮೃತಮಶ್ನುತೇ' ಗೆಂದ ಮಾತ್ರಕ್ಕೆ ಜೀವನಕ್ಕೆ ಅಗತ್ಯವಾದ ಕಿಕ, ವ್ಯಾವಹಾರಿಕ ಶಿಕ್ಷಣಕ್ಕೆ ಮಹತ್ವ ದ್ದಿರಲಿಲ್ಲ ಎಂದಲ್ಲ; ವಿದ್ಯಾರ್ಥಿಗಳ ಅಭಿ ಚಿಗೆ ತಕ್ಕಂತೆ ಶಾಸ್ತ್ರ, ಸಾಹಿತ್ಯ, ಕಲೆ ಮೊದ ದವುಗಳನ್ನು ಕಲಿಸುವ ಏರ್ಪಾಡೂ ಕಷ್ಟಿದ್ದಿತು. ಇಷ್ಟೇ, ಶಿಕ್ಷಣವೆಂದರೆ ಕೇವಲ ದರನಿರ್ವಹಣೆಗಾಗಿ ಎಂಬ, ಈಗ ಬಹು ಟ್ಟಿಗೆ ಪ್ರಚಲಿತವಿರುವ ಭಾವನೆ ಆಗ ಇರ ವಿದ್ಯಾರ್ಥಿಗೆ, ಅವನ ವ್ಯಕ್ತಿತ್ವವನ್ನು ರ್ಣವಾಗಿ ವಿಕಾಸಗೊಳಿಸಿ ತುಂಬು ಜೀವನ ವನ್ನು ನಡೆಯಿಸಲು ಅಗತ್ಯವಾದುದನ್ನೆಲ್ಲ ಪೂರೈಸುವದು ಅಂದಿನ ಶಿಕ್ಷಣದ ಉದ್ದೇಶ, ಶಿಕ್ಷಕನ ಹೊಣೆ, ಆಗಿದ್ದಿತು. ಪುಸ್ತಕ ವಿದ್ಯೆಯನ್ನು ಕಲಿಸುವದರ ಜೊತೆಗೆ ವಿದ್ಯಾರ್ಥಿಯ ನೀತಿನಡೆವಳಿಗಳನ್ನು ತಿದ್ದಿ ಅವನಲ್ಲಿ ಒಳ್ಳೆಯ ಗುಣಗಳು ಒಳಗೊಳ್ಳುವಂತೆ ಮಾಡುವದು ಗುರುವಿನ ಕರ್ತವ್ಯವಾಗಿದ್ದಿತು. ಎಂತಲೇ ಭಾರತೀಯ ಪರಂಪರೆಯಲ್ಲಿ ಗುರು ದೈವತಕ್ಕೆ ಸಮಾನ; ಬಾಲಕನಿಗೆ ವಿದ್ಯೆಯ ಮೂಲಕ 'ಪುನರ್ಜನ್ಮ' ವನ್ನು ಕೊಟ್ಟು 'ದ್ವಿಜ' ನನ್ನಾಗಿ ಮಾಡುವ 'ತಂದೆ'.

## ಗುರು ಶಿಷ್ಯ ನಿಕಟ ಸಂಬಂಧದ ಅವಶ್ಯಕತೆಗಳು

ಇಂತಹ ಗುರುತರವಾದ ಹೊಣೆಯನ್ನು ನಿರ್ವಹಿಸುವದಕ್ಕಾಗಿ ಗುರು-ಶಿಷ್ಯರ ಸಂಬಂಧ ನಿಕಟವಾಗಿರುವದು, ವಿದ್ಯಾರ್ಥಿ ಸದೈವ ಗುರುವಿನ ಕಣ್ಣಳತೆಯಲ್ಲಿರುವದು ಅತ್ಯವಶ್ಯವಾಯಿತು. ಅದ್ದರಿಂದ ಗುರುಕುಲ, ಅಶ್ರಮಗಳು ಅಸ್ತಿತ್ವದಲ್ಲಿ ಬಂದವು. ಗುರುವಿನೊಂದಿಗೆ ವಾಸಿಸುವದೂ ಶಿಕ್ಷಣದ ಒಂದು ಮುಖ್ಯ ಅಂಶವಾಗಿದ್ದಿತು. ಗುರುವಿನ ಸೇವೆಮಾಡುವದರಿಂದ ಬಾಲಕನಿಗೆ ವಿನಯಭಾವ, ಶ್ರಮ ಜೀವನದ ಹಿರಿಮೆ ಇವುಗಳ ಪಾಠಗಳು ತಾವೇ ತಾವಾಗಿ ದೊರೆಯುತ್ತಿದ್ದವು. ಗುರುವಿನ ಪರಿಶುದ್ಧ ಆಚಾರ-ವಿಚಾರ, ರೀತಿನೀತಿಗಳು ತನ್ನ ಜೀವನವನ್ನು ತಿದ್ದಿಕೊಳ್ಳಲು ಸಹಾಯಕವಾಗುತ್ತಿದ್ದವು.

ನಾಗರಿಕತೆ ಬೆಳೆಯುತ್ತ ಬಂದ ಹಾಗೆ ವೇದೋಪನಿಷತ್ತುಗಳ ಕಾಲದ ಆಶ್ರಮ, ಗುರುಕುಲಗಳಿಗೆ ನಿಯಮಿತವಾದ ಶಿಕ್ಷಣ, ಗ್ರಾಮ, ನಗರಗಳಿಗೂ ಪ್ರಸಾರವಾಯಿತು. ಊರು—ಊರುಗಳಲ್ಲಿ ಅಗ್ರಹಾರ ಘಟಿಕಾ ಸ್ಥಾನ, ಬ್ರಹ್ಮಪುರಿ, ಮಠ ಮೊದಲಾದ ವಿದ್ಯಾ ಕೇಂದ್ರಗಳು ಸ್ಥಾಪಿತವಾದವು. ಆದರೆ ವಿದ್ಯಾರ್ಥಿಯ ಬುದ್ಧಿಯ ವಿಕಾಸಕ್ಕೆ ಅಗತ್ಯವಾದ ಗುರು-ಶಿಷ್ಯರ ನಿಕಟ ಸಂಬಂಧದ ಮಹತ್ವದ ಅರಿವು ಅಳಿಯಲಿಲ್ಲ. ಆದ್ದರಿಂದಲೇ ಪುರಾತನ ಕಾಲದಿಂದ ಹಿಡಿದು ಇತ್ತೀಚಿನ ವರೆಗೆ ಕರ್ನಾಟಕದಲ್ಲಿ ಮತ್ತು ಭಾರತದ ಇನ್ನಿತರ ಭಾಗಗಳಲ್ಲಿ ಅಸ್ತಿತ್ವದಲ್ಲಿದ್ದ ವಿದ್ಯಾಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ವಸತಿ ಹಾಗೂ ಅನ್ನ-ವಸ್ತ್ರಗಳ ಏರ್ಪಾಡು ಇದ್ದೇ ಇರುತ್ತಿದ್ದಿತು. ನಾಲಂದಾ, ತಕ್ಷಶಿಲಾ, ವಲಭೀ ಮುಂತಾದ ವಿಶ್ವವಿಖ್ಯಾತ ವಿಶ್ವವಿದ್ಯಾಲಯಗಳು, ತದನಂತರದ ಕಾಲದಲ್ಲಿ ಕರ್ನಾಟಕದ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಕಡಲೆವಾಡ, ತಾಳಗುಂದ, ಲಕ್ಕುಂಡಿ, ಕುಪ್ಪಟೂರು, ಬಳ್ಳಿಗಾವಿ, ಹೊನವಾಡ, ನಾಗಾಯಿ, ಸಾಲೋಟಗಿ ಮೊದಲಾದ ಊರುಗಳಲ್ಲಿಯ ಪ್ರಸಿದ್ಧ ವಿದ್ಯಾ ಕೇಂದ್ರಗಳು ವಸತಿ ವಿದ್ಯಾಲಯಗಳೇ (Residential Institutions) ಆಗಿದ್ದವು.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಗಮನಿಸಬಹುದು. ಅದೆಂದರೆ ಭಾರತೀಯ ಜನಜೀವನದ ಮೇಲೆ ಧರ್ಮದ ಪ್ರಭಾವ. ರಾಜಕೀಯದಲ್ಲಿಯೇ ಆಗಲಿ, ಸಾಮಾಜಿಕ ಸಾಂಸ್ಕೃತಿಕ ಕ್ಷೇತ್ರದಲ್ಲಿಯೇ ಆಗಲಿ ಧರ್ಮದ ಪ್ರಭಾವ ಇಲ್ಲದಿಲ್ಲ. ಸಾಹಿತ್ಯ ಸಂಗೀತ ನಾಟ್ಯಾದಿ ಕಲೆಗಳು ಬೆಳೆದು ಬಂದುದು ಧರ್ಮದ ಆವರಣದಲ್ಲಿಯೇ ದೇವಾಲಯಗಳಲ್ಲಿ ದೇವತೋಪಾಸನೆಯ, ರೂಪದಲ್ಲಿ. ವರ್ಣಚಿತ್ರಕಲೆ, ಸ್ಥಾಪತ್ಯಶಾಸ್ತ್ರ ಇವೂ ವಿಕಾಸಹೊಂದಿ ಊರ್ಜಿತ ಸ್ಥಿತಿಯನ್ನೈದಿದುದು ದೇವಾಲಯಾದಿಗಳ ನಿರ್ಮಾಣದಲ್ಲಿಯೇ. ಶಿಕ್ಷಣ ಕ್ಷೇತ್ರವೂ ಇದಕ್ಕೆ ಹೊರತಾಗಿರಲಿಲ್ಲ. ಇಷ್ಟೇ ಅಲ್ಲ, ಧರ್ಮದ ಪ್ರಭಾವ ಇಲ್ಲಿ ಹೆಚ್ಚು ಸ್ಫುಟವಾಗಿ ಕಾಣುತ್ತದೆ. ವಿದ್ಯಾ ಕೇಂದ್ರಗಳು ತಲೆಯೆತ್ತಿದುದು ದೇವಾಲಯಗಳಲ್ಲಿ. ವಿದ್ಯಾಭ್ಯಾಸಕ್ಕೆ ಮೀಸಲಾದ ಅಗ್ರಹಾರ, ಬ್ರಹ್ಮಪುರಿಗಳಲ್ಲಿ. ವಿದ್ಯಾವಿತರಣದ ಜೊತೆಗೆ ಜಪ, ತಪ, ಹೋಮ ಹವನಾದಿ ಧಾರ್ಮಿಕ ಕಾರ್ಯಗಳೂ ನಡೆಯುತ್ತಿದ್ದವು.

## ನಾಲ್ಕು ವಿಧದ ವಿದ್ಯಾಕೇಂದ್ರಗಳು

ಪ್ರಾಚಿನ ಕರ್ನಾಟಕದಲ್ಲಿಯ ವಿದ್ಯಾಕೇಂದ್ರಗಳು ಸಾಮಾನ್ಯವಾಗಿ ನಾಲ್ಕು ವಿಧವಾದವುಗಳು. ಅವು ಘಟಿಕಾಸ್ಥಾನ, ಬ್ರಹ್ಮಪುರಿ, ಅಗ್ರಹಾರ ಮತ್ತು ದೇವಾಲಯುಗಳು ಹಾಗೂ ಮಠಗಳು. ಇವುಗಳ ಸ್ವರೂಪ ಇಂಥದೇ ಎಂದು ಖಚಿತವಾಗಿ ಹೇಳುವದು ದುಸ್ತರವಾದರೂ ಶಾಸನಗಳಲ್ಲಿ ಬರುವ ಉಲ್ಲೇಖದಿಂದ ಇವುಗಳ ಬಗ್ಗೆ ಅಲ್ಪ-ಸ್ವಲ್ಪ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಅಗ್ರಹಾರ, ಬ್ರಹ್ಮಪುರಿಗಳಿಗೆ ಹೋಲಿಸಿ ನೋಡಿದಾಗ ಘಟಿಕಾಸ್ಥಾನಗಳ ಸಂಖ್ಯೆ ಬಹಳ ಕಡಿಮೆಯೆಂದು ಹೇಳಬೇಕಾಗುತ್ತದೆ. ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದ ಘಟಿಕಾಸ್ಥಾನಗಳಲ್ಲಿ ಹೆಂಜೇರು, ನಾಗಾಯಿ, ಬೊಮ್ಮಕೂರು, ಕಡಲೆವಾಡ, ಹೂವಿನಬಾಗೆ ಮೊದಲಾದವುಗಳನ್ನು ಹೆಸರಿಸಬಹುದು.

ಘಟಿಕಾಸ್ಥಾನಗಳಿಗಿಂತ ಅಧಿಕ ಸಂಖ್ಯೆಯಲ್ಲಿ ಕಂಡುಬರುವವುಗಳು ಬ್ರಹ್ಮಪುರಿಗಳು. ಹೆಸರೇ ಸೂಚಿಸುವಂತೆ ಇವು ಬ್ರಾಹ್ಮಣರ ವಸತಿಗಳು. ಅಂದಿನ ಕಾಲದಲ್ಲಿ ನಗರಗಳಲ್ಲಿ ಬ್ರಾಹ್ಮಣರಿಗಾಗಿ ಅವರು ತಮ್ಮ ಧಾರ್ಮಿಕ ಹಾಗೂ ಶೈಕ್ಷಣಿಕ ಕರ್ಮಗಳನ್ನು ನಿರ್ವಹಿಸುವದಕ್ಕಾಗಿ ಪ್ರತ್ಯೇಕ ವಸತಿಗಳನ್ನು ಕಲ್ಪಿಸಿ ಕೊಡಲಾಗುತ್ತಿದ್ದಿತು; ಮತ್ತು ಅವರ ಹಾಗೂ ಅವರ ಬಳಿಯಲ್ಲಿ ವಿದ್ಯಾಭ್ಯಾಸಕ್ಕೆಂದು ಇದ್ದ ವಿದ್ಯಾರ್ಥಿಗಳ ಉಪಜೀವನ, ಬಟ್ಟೆ-ಬರೆ ಮೊದಲಾದವುಗಳಿಗಾಗಿ ಭೂಮಿ, ಹಣ ಮುಂತಾದವುಗಳ ದತ್ತಿಗಳನ್ನು ಕೊಡಲಾಗುತ್ತಿದ್ದಿತು. ಅನೇಕ ಸಲ ಒಂದೇ ಊರಿನಲ್ಲಿ ಇಂಥ ನಾಲ್ಕಾರು ಬ್ರಹ್ಮಪುರಿಗಳಿದ್ದುದೂ ಶಾಸನಗಳಿಂದ ತಿಳಿದು ಬರುತ್ತದೆ. ಹುನಗುಂದ ತಾಲೂಕಿನಲ್ಲಿಯ ಅರಸೀಬೀಡಿ ೧೨ನೆಯ ಶತಮಾನದಲ್ಲಿ 'ವಿಕ್ರಮಪುರ' ಎಂಬ ಹೆಸರಿನ ಪ್ರಮುಖ ಬ್ರಹ್ಮಪುರಿಯಾಗಿದ್ದಿತು.

## ಅಗ್ರಹಾರಗಳು

ಬ್ರಹ್ಮಪುರಿಗಳಿಗಿಂತಲೂ ಹೆಚ್ಚು ಪ್ರಚಲಿತವಿದ್ದವುಗಳು ಅಗ್ರಹಾರಗಳು. ಈ ವಿದ್ಯಾಕೇಂದ್ರಗಳು ನಾಡಿನ ತುಂಬೆಲ್ಲ ಇದ್ದವು ಎಂಬದು ಶಾಸನಗಳನ್ನವಲೋಕಿಸಿದಾಗ ಗೊತ್ತಾಗುವದು. ಬ್ರಹ್ಮಪುರಿಗಳಂತೆ ಇವು ಬ್ರಾಹ್ಮಣರ ವಸತಿಗಳೇ. ಆದರೆ ನಿರ್ಮಾಣ, ಆಡಳಿತ ಮುಂತಾದವುಗಳಲ್ಲಿ ಅವುಗಳಿಂದ ಭಿನ್ನವಾದವುಗಳು. ಬ ಹ್ಮಪುರಿ ಊರಿನ ಒಂದು ಭಾಗವಾದರೆ ಅಗ್ರಹಾರ ಒಂದು ಸ್ವತಂತ್ರ ಊರೇ. ಅರಸನಾಗಲಿ, ಅವನ ಮನೆತನದ ಇನ್ನಾರೇ ಆಗಲಿ ಅಥವಾ ಇತರ ಯಾವದೇ ಅಧಿಕಾರಿಯಾಗಲಿ ಕೆಲವು ವಿದ್ವಾಂಸರಾದ ಬ್ರಾಹ್ಮಣರನ್ನು ಆರಿಸಿ ಅವರಿಗೆ ಗ್ರಾಮಗಳನ್ನು ಉಂಬಳಿಯಾಗಿ ಹಾಕಿ ಕೊಟ್ಟು ಅಗ್ರಹಾರಗಳನ್ನು ನಿರ್ಮಿಸುತ್ತಿದ್ದರು. ಅವುಗಳ ಆದಾಯದಲ್ಲಿ ಇಂತಿಷ್ಟನ್ನು ಇಂಥಿಂಥ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ನಿರ್ಧರಿಸುತ್ತಿದ್ದರು. ಅಗ್ರಹಾರಗಳ ಆಡಳಿತವನ್ನು ರಾಜ್ಯಶಾಸ್ತ್ರದಲ್ಲಿಯೂ ಇತರ ವಿದ್ಯೆಗಳಲ್ಲಿಯೂ ಪಾರಂಗತರಾದ ಮಹಾಜನರು ನೋಡಿಕೊಳ್ಳುತ್ತಿದ್ದರು. ಇಂಥ ಅನೇಕ ಅಗ್ರಹಾರಗಳಲ್ಲಿ ಬಳ್ಳಿಗಾವಿ, ಲಕ್ಕುಂಡಿ, ತಾಳಗುಂದ, ಕೋಟಿಉಮ್ಮಚಿಗೆ ಮುಂತಾದವುಗಳು ವಿಶೇಷವಾಗಿ ಖ್ಯಾತಿವೆತ್ತವುಗಳು.

ದೇವಾಲಯ ಹಾಗೂ ಮಠಗಳು ಸಹ ಶಿಕ್ಷಣಕ್ಷೇತ್ರದಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸಿದ್ದವು. ಇವು ಈಗಿನಂತೆ ಕೇವಲ ಪೂಜಾಸ್ಥಾನಗಳಾಗಿರದೆ ಸಾಮಾಜಿಕ ಜೀವನದ ಎಲ್ಲ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ಮಹಾಜನರು ಒಂದೆಡೆ ಸೇರಿ ನ್ಯಾಯನಿರ್ಣಯಾದಿಗಳನ್ನು ನಿರ್ವಹಿಸುತ್ತಿದ್ದುದು ಇಲ್ಲಿಯೇ. ಪುರಾಣಪಠಣ, ಶಾಸ್ತ್ರಾರ್ಥವಿಚಾರ ಮೊದಲಾದವುಗಳು ನಡೆಯುತ್ತಿದ್ದುದೂ ಇಲ್ಲಿಯೇ. ಜೊತೆಗೆ ಇವು ವಿದ್ಯಾಲಯಗಳೂ ಆಗಿದ್ದವು. ಮಠಗಳು ದೇವಾಲಯಗಳಿಗೆ ಹೊಂದಿಯೋ ಅವುಗಳ ಭಾಗವಾಗಿಯೋ ಇರುತ್ತಿದ್ದವು. ದೇವಾಲಯಗಳ ಆಚಾರ್ಯರೇ ಮಠಗಳ ಅಧಿಪತಿಗಳಾಗಿರುತ್ತಿದ್ದರು. ದೇವತೆಯ ಪೂಜೆಪುನಸ್ಕಾರ, ಅತಿಥಿ-ಅಭ್ಯಾಗತರ ಯೋಗಕ್ಷೇಮ, ವಿದ್ಯಾರ್ಥಿಗಳ ಶಿಕ್ಷಣ ಮುಂತಾದವುಗಳನ್ನು ನೋಡಿಕೊಳ್ಳುವದು ಇವರ ಕರ್ತವ್ಯವಾಗಿದ್ದಿತು. ಇವುಗಳ ವೆಚ್ಚಕ್ಕೋಸ್ಕರ ಭೂಮಿಗಳು, ವರ್ಷವರ್ಷವೂ ಸಂದಾಯವಾಗುವಂಥ ತೆರಿಗೆಗಳು ದತ್ತಿಯಾಗಿ ಬಿಡಲ್ಪಡುತ್ತಿದ್ದವು. ಇಂದಿನ ಮಾನದಿಂದ ಹೇಳಬೇಕೆಂದರೆ ದೇವಾಲಯ-ಮಠಗಳನ್ನು ಶಾಲೆಗಳಿಗೂ ಬ್ರಹ್ಮಪುರಿಗಳನ್ನು ಕಾಲೇಜುಗಳಿಗೂ ಅಗ್ರಹಾರಗಳನ್ನು ವಿಶ್ವವಿದ್ಯಾಲಯಗಳಿಗೂ ಸ್ಥೂಲವಾಗಿ ಹೋಲಿಸಬಹುದು.

## ಅಕ್ಷರಾಭ್ಯಾಸ

ಬಾಲಕನ ಶಿಕ್ಷಣವು ಪ್ರಾರಂಭವಾಗುವದು ಅಕ್ಷರಾಭ್ಯಾಸದಿಂದಷ್ಟೆ? ಈ ಪ್ರಾಥಮಿಕ ಶಿಕ್ಷಣದ ವಿಷಯವಾಗಿ ಸಾಕಷ್ಟು ವಿವರಗಳು ದೊರೆಯದಿದ್ದರೂ ಶಾಸನಗಳ ಅಭ್ಯಾಸದಿಂದ ಒಂದೆರಡು ಸಂಗತಿಗಳನ್ನು ಅರಿತುಕೊಳ್ಳಬಹುದು. ಸಾಧಾರಣವಾಗಿ ಅಕ್ಷರಾಭ್ಯಾಸವು ದೇವಾಲಯ-ಮಠಗಳಲ್ಲಿ ಮಾಡಿಸಲ್ಪಡುತ್ತಿದ್ದಿತು.[1] ಸಾಮಾನ್ಯವಾಗಿ ಇದು 'ಬಾಲಶಿಕ್ಷೆ' 'ಅಕ್ಷರ ಶಿಕ್ಷೆ' ಎಂದು ಮುಂತಾಗಿ ಕರೆಯಲ್ಪಡುತ್ತಿದ್ದಿತು. ಇದನ್ನು ಕಲಿಸುವ ವರ್ಗಕ್ಕೆ 'ಅಕ್ಷರಖಂಡಿಕೆ' ಎಂಬ ಹೆಸರು. ಇನ...
ಗಮನಾರ್ಹವಿಷಯವೆಂದರೆ ಪ್ರಾಥ...
ಶಿಕ್ಷಣವು ಕನ್ನಡದಲ್ಲಿಯೂ ಉಚ್ಚ ಶಿ...
ಸಂಸ್ಕೃತದಲ್ಲಿಯೂ ನಡೆಯುತ್ತಿದ್ದಿ...
ತೋರುತ್ತದೆ. ಯಾಕಂದರೆ ಅನೇಕ ...
ಗಳಲ್ಲಿ ಅಕ್ಷರಾಭ್ಯಾಸದ ಉಲ್ಲೇಖವಿರ...
'ಕರ್ನಾಟ ಬಾಲ ಶಿಕ್ಷೆ', 'ಕನ್ನಡಕ್ಷರ...
ಎಂದು ಹೇಳಿದ್ದುದು ಕಂಡು ಬರುತ್ತದ...
ವೆಡೆಗಳಲ್ಲಿ ಕನ್ನಡದೊಂದಿಗೆ ಬೇರೆ ...
ಗಳನ್ನೂ ಕಲಿಸುತ್ತಿದ್ದರು. ಮಾಲಿಂಗೆ...
ಲ್ಲಿಯ ಒಂದು ಶಾಸನದಲ್ಲಿ 'ನಾಗರ-ಕ...
ತಿಗುಳ- ಆರ್ಯ ವನೋದಿಸುವ ...
ಶಿಕ್ಷೆಯ ......'[2] ಎಂದು ಮುಂತಾಗಿ ...
ಲಾಗಿದೆ.

ಉಚ್ಚ ಶಿಕ್ಷಣವು ಸಾಮಾನ್ಯವಾಗಿ ...
ಗಳು, ವೇದಾಂಗಗಳು, ತರ್ಕ, ವ್ಯಾ...
ಮೀಮಾಂಸಾ ಮೊದಲಾದ ಶಾಸ್ತ್ರಗಳ...
ಗೊಂಡಿರುತ್ತಿದ್ದಿತು. ಇವುಗಳ, ಜ...
ಕಾವ್ಯ, ನಾಟಕ ಇತ್ಯಾದಿ ವಿಷಯಗಳೂ ...
ಲ್ಪಡುತ್ತಿದ್ದವು. ಕೆಲವು ಕೇಂದ್ರಗಳಲ್ಲಿ ...
ಛಂದಸ್ಸು, ಜ್ಯೋತಿಷಶಾಸ್ತ್ರಗಳ ಅಧ್ಯ...
ಏರ್ಪಾಡೂ ಇದ್ದಿತು. ಇನ್ನು ಕೆಲವು ಕೆ...
ಗಳು ಯಾವದೊಂದು ವಿಶಿಷ್ಟವಾದ ...
ಯದ ಅಭ್ಯಾಸಕ್ಕೆ ಮಾತ್ರ ಮೀಸಲಾ...
ತ್ತಿದ್ದವು[3].

ಈ ಶಿಕ್ಷಣಪದ್ಧತಿಯ ಇನ್ನೊಂದು ವೈ...
ವೆಂದರೆ ಅದು ನಿಶ್ಶುಲ್ಕವಾದುದು. ...
ದೊಂದು ವಿದ್ಯೆಯನ್ನು ಕಲಿಯುವದ...
ಯಾವದೇ ಫೀಯನ್ನು ಕೊಡಬೇಕಾಗ...
ಲಿಲ್ಲ. ವಿದ್ಯಾಲಯಗಳನ್ನು, ವಿದ್ಯಾರ್ಥಿಗಳ...
ಶಿಕ್ಷಕರನ್ನು ಪೋಷಿಸುವದು ಇಹ...
ಸುಖದ ಸಾಧನವೆಂದು ಗಣಿಸಲ್ಪಡುತ್ತಿದ್ದಿ...
ಶಾಸನಗಳಲ್ಲಿ ವಿದ್ಯಾದಾನ ಹೀಗೆ ಬಣ್ಣಿ...
ಟ್ಟಿದೆ :

> ಯತ್ಪುಣ್ಯಂ ತೀರ್ಥಯಾತ್ರಾಯಾಂ ಯತ್...
> ಯಜ್ವಿನಾಂ ...
> ತತ್ಪುಣ್ಯಂ ಕೋಟಿಗುಣಿತಂ ವಿದ್ಯಾದಾನಾ...
> ಭೇನ...

ಹೀಗಾಗಿ ವಿದ್ಯಾಲಯಗಳನ್ನು ನಿರ್ಮಿಸಿ, ...
ಗಳ ನಿರ್ವಹಣೆಗಾಗಿ ಶಾಶ್ವತವಾದ ದತ್ತಿಗ...
ಬಿಡಲು ಜನ ತಾವೇತಾವಾಗಿ ಮುಂದೆ ಬ...
ದ್ದರು. ಅಲ್ಲದೆ ಶಿಕ್ಷಣ ಕೇವಲ ಸರಕಾ...
ಹೊಣೆಯಾಗಿರಲಿಲ್ಲ. ಆಳರಸರು, ಅರಸಿಯ...

---

1. ಈಗಲೂ ಸಹ ಗ್ರಾಮಾಂತರಗಳಲ್ಲಿ ಪ್ರಾಥಮಿಕ ಶಾಲೆಗಳು ಗುಡಿಗಳಲ್ಲಿಯೇ ನಡೆಸಲ್ಪಡುತ್ತಿದ್ದುದನ್ನು ಗಮನಿಸಬಹುದು.

2. Epigraphica Carnatica Vol...
Tn. 27.

3, ಉದಾಹರಣೆಗಾಗಿ ಲಕ್ಕುಂಡಿಯ ...
ಕೇಂದ್ರವು ಪೂರ್ವಮೀಮಾಂಸಾ ಶಾ...
ಪ್ರಾಭಾಕರ ಮಾರ್ಗವನ್ನು ಅಭ್ಯಾಸಿಸುವ...
ಗಿಯೇ ನಿರ್ಮಿತವಾಗಿತ್ತು. (Epigraph...
Indica Vol. XV, p. 355, ...
66–67)

ಸ್ವಯಂಪ್ರೇರಣೆಯಿಂದ ಸಹಾಯ ಮಾಡು ತ್ತಿದ್ದರೇನೋ ಸರಿಯೋ—ಅದರಂತೆ ಅಧಿಕಾರಿಗಳು, ವ್ಯಾಪಾರಿಗಳು ಇನ್ನಿತರರು ಸಹ ವಿದ್ಯಾರ್ಥಿ-ಉಪಾಧ್ಯಾಯರುಗಳ ಅನ್ನ-ವಸ್ತ್ರಗಳಿಗಾಗಿ, ಔಷಧೋಪಚಾರಗಳಿಗಾಗಿ ಉಂಬಳಿಗಳನ್ನು ಹಾಕಿಕೊಟ್ಟು ವಿದ್ಯಾಭ್ಯಾಸ ಅವ್ಯಾಹತವಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದರು.

## ವಿದ್ಯಾರ್ಥಿನಿಯರಿಗೂ ಪ್ರವೇಶ

ಇಂಥ ವಿದ್ಯಾಕೇಂದ್ರಗಳಲ್ಲಿ ವಿದ್ಯಾರ್ಥಿನಿಯರಿಗೂ ಪ್ರವೇಶವಿದ್ದಿತೆ? ಈ ಪ್ರಶ್ನೆಗೆ ಖಚಿತವಾಗಿ ಉತ್ತರ ಹೇಳುವದು ದುಸ್ತರವೇ. ಆದರೆ ಈ ಸಂಬಂಧದಲ್ಲಿ ತಾಳಗುಂದದಲ್ಲಿಯ ಒಂದು ಶಾಸನ ಸ್ವಲ್ಪ ಬೆಳಕು ಬೀರುತ್ತದೆ. ಅಲ್ಲಿನ ಶಿಕ್ಷಣಸಂಸ್ಥೆಯಲ್ಲಿದ್ದ ವಿದ್ಯಾರ್ಥಿಗಳು, ಉಪಾಧ್ಯಾಯರು ಮೊದಲಾದವರ ಉಪಜೀವನಕ್ಕಾಗಿ ಮಾಡಲಾದ ದಾನಗಳನ್ನು ವಿವರಿಸುತ್ತ ಆ ಶಾಸನವು ಈ ರೀತಿ ಹೇಳುತ್ತದೆ. '. . . ಛಾತ್ರ ೫೦ ಕ್ಕಂ ಸೀರೆಗೆ ಪ್ರತ್ಯೇಕಂ ಪ. ೨ ಲೆಕ್ಕದೆ ಗ ೧೦. . .' ಎಂದು.[4] ಇದರಿಂದ ೫೦ 'ಛಾತ್ರ' ರ ಸೀರೆಗಳ ವೆಚ್ಚಕ್ಕೆಂದು ಒಬ್ಬೊಬ್ಬರಿಗೆ ೨ ಪಣಗಳಂತೆ ಒಟ್ಟು ೧೦ ಗದ್ಯಾಣಗಳನ್ನು ಕೊಡಲಾಯಿತು[5] ಎಂದು ಸ್ಪಷ್ಟವಾಗುತ್ತದೆ. ಮತ್ತು ಈ ವಿದ್ಯಾಕೇಂದ್ರದಲ್ಲಿ ಸ್ತ್ರೀಯರಿಗೂ ಪ್ರವೇಶವಿದ್ದಿತೆಂದೆನಿಸುತ್ತದೆ. ಅಥವಾ ಅವರಿಗಾಗಿ ಪ್ರತ್ಯೇಕ ವಿದ್ಯಾಲಯವಿದ್ದರೂ ಇದ್ದಿರಬಹುದು.

ಇನ್ನು ಉದಾಹರಣೆಗಳೆಂದು, ಶಾಸನಗಳ ಆಧಾರದಿಂದ, ಕೆಲವು ಪ್ರಮುಖ ವಿದ್ಯಾಕೇಂದ್ರಗಳ ಚಿತ್ರಣಗಳನ್ನಿಲ್ಲಿ ಕೊಡಲಾಗಿದೆ.

## ಸಾಲೋಟಗಿ

ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನಲ್ಲಿ ಸಾಲೋಟಗಿ ಎಂಬ ಚಿಕ್ಕ ಗ್ರಾಮವಿದೆ. ಈಗ ಚಿಕ್ಕದಾಗಿದ್ದರೂ ಇದು ಪ್ರಾಚೀನ ಕಾಲದಲ್ಲಿ ಪ್ರಮುಖ ವಿದ್ಯಾಕೇಂದ್ರವಾಗಿದ್ದಿತು. ಈ ಹಳ್ಳಿಯ ಮೊದಲಿನ ಹೆಸರು ಪಾವಿಟ್ಟಿಗೆ. ಪೌಠಗೆಯೆಂದೂ ಒಂದೆರಡು ಶಾಸನಗಳಲ್ಲಿ ಕರೆಯಲ್ಪಟ್ಟಿದುಂಟು. ಇಲ್ಲಿಯ ಪ್ರಸಿದ್ಧವಾದ ಶಾಲೆಯಿಂದಾಗಿ ಶಾಲಾಪಾವಿಟ್ಟಿಗೆ ಎಂದು ಇದಕ್ಕೆ ಹೆಸರು ಬಂದಿತು. ಇದೇ ಮುಂದೆ ಸಾಲೋಟಗಿ ಆಗಿರಲು ಸಾಕು.

ಪೂರ್ವಕಾಲದಲ್ಲಿ ಈ ಗ್ರಾಮವಿದ್ದುದು ತರ್ದವಾಡಿ ವಿಷಯವೆಂಬ ಪ್ರಾಂತದ ಕರ್ಣಪುರಿ ವಿಷಯವೆಂಬ ಜಿಲ್ಲೆಯಲ್ಲಿ. ತರ್ದವಾಡಿ ಇಂದಿನ ತದ್ದೇವಾಡಿ ಮತ್ತು ಕರ್ಣಪುರಿ ಇಂದಿನ ಕಣ್ಣೂರು. ಇವೆರಡೂ ಈಗ ವಿಜಾಪುರ ಜಿಲ್ಲೆಯಲ್ಲಿವೆ. ಕಣ್ಣೂರು, ಕನ್ನವುರಿಯೆಂದೂ ಕನ್ನಡ ಶಾಸನಗಳಲ್ಲಿ ಕರೆಯಲ್ಪಟ್ಟಿದೆ.

'ಧರ್ಮ, ವಿದ್ಯೆಗಳ ಸ್ಥಾನ'ವಾದ ಪಾವಿಟ್ಟಿಗೆಯಲ್ಲಿ ಕ್ರಿ. ಶ. ೯೪೫ ರಲ್ಲಿ ಗಜಾಂಕುಶ ನಾರಾಯಣನೆಂಬವನು ಇಲ್ಲಿಯ ತ್ರೈಪುರುಷ ದೇವಾಲಯದಲ್ಲಿ 'ಶಾಲೆ' ಯೊಂದನ್ನು ಸ್ಥಾಪಿಸಿದನು. ಇವನು ಮಹಿಷ ವಿಷಯದಲ್ಲಿಯ ಕಂಚಿನ ಮುದುವೊಳಲಿನವನು, ಶಾಸನಕರ್ತೃಗಳ ಮಾತಿನಲ್ಲಿಯೇ ಹೇಳಬೇಕಾದರೆ[6] ಬ್ರಹ್ಮ-ವಿಷ್ಣು-ಮಹೇಶ್ವರರು ಮೇರು ಪರ್ವತವನ್ನು ಬಿಟ್ಟು ಈ ಶಾಲೆಯಲ್ಲಿಯೇ ವಾಸವಾಗಿದ್ದರು. ನಾನಾದೇಶಗಳಿಂದ ಇಲ್ಲಿಗೆ ವಿದ್ಯಾರ್ಥಿಗಳು ಬರುತ್ತಿದ್ದರು (ಅತ್ರ ವಿದ್ಯಾರ್ಥಿನಃ ಸಂತಿ ನಾನಾಜನಪದೋದ್ಭವಾಃ) ಪಾವಿಟ್ಟಿಗೆಯ[6] ಗ್ರಾಮಪತಿ ಚಕ್ರಾಯುಧನೆಂಬವನು ಈ 'ಶಾಲಾ ವಿದ್ಯಾರ್ಥಿ ಸಂಘ'ಕ್ಕೆ ೫೦೦ ನಿವರ್ತನ(ಇದೊಂದು ಅಳತೆ) ಭೂಮಿಯನ್ನೂ ೨೭ ಮನೆಗಳನ್ನೂ ೪ ನಿವರ್ತನಗಳ ಹೂದೋಟವನ್ನೂ ದೀಪಗಳಿಗಾಗಿ ೧೨ ನಿವರ್ತನ ಭೂಮಿಯನ್ನೂ ದಾನವಾಗಿ ಕೊಟ್ಟನು. ಇದಲ್ಲದೆ, ಊರಿನ ಬ್ರಾಹ್ಮಣರು ತಮ್ಮ ಮನೆಯಲ್ಲಿ ವಿವಾಹ ಸಮಾರಂಭ ನಡೆದಾಗ ೫ ಪುಷ್ಪ (ಇದೊಂದು ಬಗೆಯ ನಾಣ್ಯ) ಗಳನ್ನೂ ಉಪನಯನವೇರ್ಪಟ್ಟಾಗ ಅದರರ್ಧ (ಅಂದರೆ ೨॥) ಪುಷ್ಪಗಳನ್ನೂ ಚೌಲಕರ್ಮದ ಸಮಯದಲ್ಲಿ ಇದರರ್ಧ (ಅಂದರೆ ೧।) ಪುಷ್ಪವನ್ನೂ ಈ ಶಾಲೆಗೆ ಕೊಡಬೇಕಾಗಿಯೂ ಭೋಜನ ಸಮಾರಂಭವೇರ್ಪಟ್ಟಾಗ ವಿದ್ಯಾರ್ಥಿ ಉಪಾಧ್ಯಾಯರಿಗೂ ಔತಣವಿರಬೇಕೆಂದೂ ವಿಧಿಸಿದನು. ಮತ್ತೆ ಉಪಾಧ್ಯಾಯರಿಗೆ ಒಂದೊಂದು ಮನೆಯನ್ನೂ ಐವತ್ತೈವತ್ತು ನಿವರ್ತನ ಭೂಮಿಯನ್ನೂ ದಾನವಾಗಿ ಕೊಟ್ಟನು.

ಈ ಶಾಲೆ ಮುಂದೆ ಬಹುಕಾಲದ ವರೆಗೆ ತನ್ನ ಖ್ಯಾತಿಯನ್ನುಳಿಸಿಕೊಂಡಿತ್ತು. ಸ್ವಲ್ಪ ಕಾಲಾನಂತರ ಜೀರ್ಣವಾಗುತ್ತಿದ್ದ ಈ ಭವನವನ್ನು ಶಿಲಾಹಾರ ಮನೆತನದ ಕಂಚಿಗನೆಂಬವನು ಜೀರ್ಣೋದ್ಧಾರ ಮಾಡಿಸಿದನು. ೧೦ ನೆಯ ಶತಮಾನದಲ್ಲಿ ನಿರ್ಮಿತವಾದ ಈ ಶಾಲೆಗೆ ೧೧-೧೨ ನೆಯ ಶತಮಾನಗಳಲ್ಲಿಯೂ ಎಷ್ಟೋ ಭೂಮಿ, ಧನ ಮುಂತಾದವುಗಳು ಕಾಣಿಕೆಯಾಗಿ ಕೊಡಲ್ಪಟ್ಟುದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ.

## ನಾಗಾಯಿ

ನಾಗಾಯಿ ಇಂದು ಕಲಬುರ್ಗಿ ಜಿಲ್ಲೆಯಲ್ಲಿಯ ಒಂದು ಚಿಕ್ಕ ಹಳ್ಳಿ. ಆದರೆ ಈ ಹಳ್ಳಿ ಕ್ರಿ. ಶ. ೧೧ನೆಯ ಶತಮಾನದಲ್ಲಿ ವೈಭವದಿಂದ ಮೆರೆದ ಪಟ್ಟಣವಾಗಿದ್ದಿತು. ಈಗ ಈ ಸ್ಥಳದಲ್ಲಿರುವ ಗುಡಿಗುಂಡಾರಗಳ ಅವಶೇಷಗಳು, ಶಿಲಾಲಿಪಿ ಮುಂತಾದವುಗಳು ಈ ವೈಭವದ ಕುರುಹುಗಳಾಗಿ ನಿಂತಿವೆ.

ಈ ಗ್ರಾಮದ ಮೂಲ ಹೆಸರು ನಾಗಾವಿ. ಈಗ ಅದು ನಾಗಾಯಿಯಾಗಿದೆ, ನಾಗನಬಾವಿ ನಾಗಾವಿಯಾಗಿರಬೇಕು. ಈ ಹೆಸರು ಹೇಗೆ ಬಂದಿತೆಂದು ಖಚಿತವಾಗಿ ಹೇಳಲುಬಾರದಿದ್ದರೂ ಇದು ಮತ್ತು ಇದರ ಸುತ್ತಲೂ ಸಿಗುವ ಅನೇಕ ನಾಗಕಲ್ಲುಗಳು ಈ ಊರಿಗೂ ನಾಗಪೂಜೆಗೂ ಇದ್ದ ನಿಕಟ ಸಂಬಂಧವನ್ನು ಸೂಚಿಸುತ್ತವೆ. ಶ್ರೀ ರಾಮಚಂದ್ರನು ಸೀತಾದೇವಿಯನ್ನು ಹುಡುಕುತ್ತ ಲಂಕಾಭಿಮುಖವಾಗಿ ಹೊರಟಾಗ ಹಾದಿಯಲ್ಲಿ ಇಲ್ಲಿ ತಂಗಿದ್ದನೆಂದು ಈ ಗ್ರಾಮದ ಸಂಬಂಧದಲ್ಲಿ ಐತಿಹ್ಯವೊಂದಿದೆ. ಹೀಗೆಯೇ ಇನ್ನೂ ಒಂದೆರಡು ದಂತಕತೆಗಳೂ ಪ್ರಚಲಿತವಿವೆ.[7]

ನಾಗಾವಿ, 'ಅಜಿಳು ಮೂನೂರು' ಎಂಬ ಪ್ರಾಂತದಲ್ಲಿಯ ಒಂದು ನಗರವಾಗಿದ್ದು ಕಲ್ಯಾಣದ ಚಾಲುಕ್ಯ ವಂಶದ ೧ ನೆಯ ಸೋಮೇಶ್ವರನ ದಂಡನಾಯಕ ಮಧುವಪರಸ ಎಂಬವನ ಆಡಳಿತಕ್ಕೆ ಸೇರಿದ್ದಿತು. ಇಲ್ಲಿಯ 'ನಾನೂರ್ವರು ಮಹಾಜನರು' ವಿಖ್ಯಾತ ವಿದ್ವಾಂಸರಾಗಿದ್ದರು. ಇದು ಪ್ರಸಿದ್ಧ ವಿದ್ಯಾಕೇಂದ್ರವಾಗಲಿಕ್ಕೆ ಈ ದಂಡನಾಯಕನೇ ಕಾರಣ. ಇವನು ಇಲ್ಲಿ ಕ್ರಿ. ಶ. ೧೦೫೮ ರಲ್ಲಿ ತ್ರೈಪುರುಷ, ಮಧುಸೂದನ ಮತ್ತು ರಾಮೇಶ್ವರ ಎಂಬ ದೇವಾಲಯಗಳನ್ನೂ ಒಂದು ಘಟಿಕಾಸ್ಥಾನವನ್ನೂ ನಿರ್ಮಿಸಿ, ಅರಸನಿಂದ ಮತ್ತು ಅಯ್ಯಣಯ್ಯನೆಂಬ ಇನ್ನೊಬ್ಬ ಅಧಿಕಾರಿಯಿಂದ ಕೆಲವೊಂದು ಭೂಮಿಯನ್ನು ಪಡೆದು ಅದನ್ನು ಈ ಘಟಿಕಾಸ್ಥಾನಕ್ಕೆ ಉಂಬಳಿಯಾಗಿ ಹಾಕಿಕೊಟ್ಟನು. ಈ ವಿದ್ಯಾಲಯದಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ೨೫೨. ಅವರಲ್ಲಿ ವೇದಾಭ್ಯಾಸಮಾಡುತ್ತಿದ್ದವರು ೨೦೦ ಮತ್ತು ಶಾಸ್ತ್ರಾಭ್ಯಾಸವನ್ನು ಮಾಡುತ್ತಿದ್ದವರು ೫೨. ಅಧ್ಯಾಪಕರ ಸಂಖ್ಯೆ ೯. ಆದರೆ 'ಸರಸ್ವತೀ ಭಾಂಡಾರಿಗ'ರ (ಅಂದರೆ 'ಲೈಬ್ರೇರಿಯನ್'ರ) ಸಂಖ್ಯೆ ೬ ! ಮಧುವಪರಸನು ಹಾಕಿಕೊಟ್ಟ ಉಂಬಳಿಯ ಹೊಲಗಳ ಆದಾಯದಿಂದ ಇವರೆಲ್ಲರ ಅನ್ನವಸ್ತ್ರಗಳ ತ್ರೈಪುರುಷ ದೇವರ ದೇವಾಲಯದ ಜೀರ್ಣೋದ್ಧಾರ, ಸುಣ್ಣಬಣ್ಣಗಳ (ಸುಧಾಕರ್ಮ) ಏರ್ಪಾಡು ಆಗಬೇಕೆಂದು ವಿಧಿಸಲಾಗಿದ್ದಿತು. ಈ ಸಾಮಾನ್ಯ ಉಂಬಳಿಯಲ್ಲದೆ ಭಾಟ್ಟ, ಪ್ರಾಭಾಕರ, ವ್ಯಾಸ ಇವುಗಳಲ್ಲಿ ವ್ಯಾಖ್ಯಾನಗಳನ್ನು ಕೊಡುತ್ತಿದ್ದ ಅಧ್ಯಾಪಕರಿಗೆ

4. Ep. Carn. vol. VII SK. 185.
5. ಗದ್ಯಾಣ ಒಂದು ಚಿನ್ನದ ನಾಣ್ಯ. ೧ ಗದ್ಯಾಣ =೧೦ ಪಣಗಳು.

6. ಈ ಮುಂದಿನ ವಿವರಗಳನ್ನೊಳಗೊಂಡ ಶಾಸನಗಳು. Ep. Ind. Vol. IV pp. 57 ff. ಇಲ್ಲಿ ಪ್ರಕಟವಾಗಿವೆ.

7. Journal of Hyderabad Archaeological Society, 19-9-20,

ಒಬ್ಬ 'ಸರಸ್ವತೀ ಭಾಂಡಾರಿಗ'ನಿಗೆ ಪ್ರತ್ಯೇಕವಾಗಿ ಕೆಲ ಭೂಮಿಗಳನ್ನು ದತ್ತಿಯಾಗಿ ಕೊಡಲಾಗಿತ್ತು.

ಇಲ್ಲಿಯ ಇನ್ನೊಂದು ವಿದ್ಯಾಲಯ ಮಧುಸೂದನ ದೇವಾಲಯದಲ್ಲಿದ್ದಿತು. ಇದನ್ನು ಕಟ್ಟಿಸಿದವನೂ ಮಧುವಪರಸನೇ. ಚಿನ್ನದ ಕಲಶವುಳ್ಳ ಈ ದೇವಾಲಯದಲ್ಲಿ 'ನಾಟ್ಯಶಾಲೆ'ಯೂ ಇದ್ದಿತು. ಇದಕ್ಕೆ ಹೊಂದಿದ ಮಠದಲ್ಲಿ ನಾಲ್ಕೂ ವೇದಗಳು ಅವುಗಳ ಅನೇಕ ಶಾಖೆಗಳು, ವೇದಾಂಗಗಳು ಇವುಗಳನ್ನು ಕಲಿಸುವ ವ್ಯವಸ್ಥೆಯಿದ್ದಿತು. ಮಧುವಪರಸನು ಕ್ರಿ. ಶ. ೧೦೬೨ ರಲ್ಲಿಯೂ ಅವನ ಮಗ ಕಾಳಿಯರಸನು ಕ್ರಿ.ಶ. ೧೦೮೧ರಲ್ಲಿಯೂ ಈ ದೇವಾಲಯಕ್ಕೆ, ವಿದ್ಯಾಲಯಕ್ಕೆ ದಾನಗಳನ್ನು ಮಾಡಿದರು. ಇಲ್ಲಿ ಇನ್ನು ಒಂದು ಶಿಕ್ಷಣ ಕೇಂದ್ರವಿದ್ದಿತು. ರಾಮೇಶ್ವರ ದೇವಾಲಯದಲ್ಲಿ. ಅದರಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ೪೦೦ ! ಅವರಲ್ಲಿ ನೂರು ಜನರು ಕವಿಸೂನುವಿನ ( ಶುಕ್ರನ ) ಗ್ರಂಥಗಳನ್ನೂ ನೂರು ಜನರು ವ್ಯಾಸರ ಕೃತಿಗಳನ್ನೂ ಇನ್ನೂ ನೂರು ಜನರು ಮನುಸ್ಮೃತಿಯನ್ನೂ ಅಭ್ಯಸಿಸುತ್ತಿದ್ದರು[8].

## ಕೋಟೆಉಮ್ಮಚಿಗಿ

೧೧ ನೆಯ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿದ್ದ ಇನ್ನೊಂದು ಪ್ರಮುಖ ಅಗ್ರಹಾರವೆಂದರೆ ಗದಗ ತಾಲೂಕಿನಲ್ಲಿಯ ಕೋಟ-ಉಮ್ಮಚಿಗಿ. ಅಗ ಅದು 'ನರೆಯಂಗಲ್ಲು ಹನ್ನೆರಡು' ಎಂಬ ಜಿಲ್ಲೆಯಲ್ಲಿದ್ದಿತು. ಚಾಲುಕ್ಯ ಅರ್ಮಡಿ ವಿಕ್ರಮಾದಿತ್ಯನ ಅಧೀನನೂ ಬೆಳ್ವಲ, ಪುಲಿಗೆರೆ ಪ್ರಾಂತಗಳ ಅಧಿಕಾರಿಯೂ ಆದ ಕೇಶಮಯ್ಯದಂಡನಾಯಕನೆಂಬವನು, ಅರಸನ ಒಪ್ಪಿಗೆಯಿಂದ ಈ ಊರನ್ನು 'ಸರ್ವನಮಸ್ಯ'ದ ಅಗ್ರಹಾರವನ್ನಾಗಿ ಮಾರ್ಪಡಿಸಿ ರೋಣದ ಶ್ರೀಧರಭಟ್ಟರೆಂಬವರಿಗೆ ಅರ್ಪಿಸಿದನು. ಭಟ್ಟರು ಅದನ್ನು ಉಮ್ಮಚಿಗೆಯ 'ನಾಲ್ನೂರ್ವರು' ಮಹಾಜನರಿಗೆ ಒಪ್ಪಿಸಿಕೊಟ್ಟರು. ಅಲ್ಲಿಯ ಭೂಮಿ ದೇವಾಲಯಕ್ಕೂ ವಿದ್ಯಾಕೇಂದ್ರಕ್ಕೂ ಅಧ್ಯಾಪಕರಿಗೂ ಮತ್ತಿತರ ಜನರಿಗೂ 'ವೃತ್ತಿ'ಗಳಾಗಿ ಹಂಚಲ್ಪಟ್ಟವು.

ಇಲ್ಲಿಯ ಶಿಕ್ಷಣ ವ್ಯವಸ್ಥೆ ಎರಡು ತೆರನಾಗಿದ್ದಿತೆಂದು ತೋರುತ್ತದೆ. ಒಂದು, ಬೇರೆ ಬೇರೆ ಶಾಸ್ತ್ರಗಳಲ್ಲಿ ಹೆಚ್ಚಿನ ಅಭ್ಯಾಸವನ್ನು ಮಾಡಿಸುವದು, ಇನ್ನೊಂದು ಸಾಹಿತ್ಯ, ವ್ಯಾಕರಣ, ಅಲಂಕಾರಾದಿ ವಿಷಯಗಳಲ್ಲಿ ಸಾಮಾನ್ಯ ಜ್ಞಾನವನ್ನೊದಗಿಸಿಕೊಡುವದು. ಇವುಗಳಲ್ಲಿ ಮೊದಲಿನದಕ್ಕೆ ಹೆಚ್ಚು ಮಹತ್ವವನ್ನು ಕೊಡಲಾಗುತ್ತಿದ್ದಿತೆಂದು ಕಂಡುಬರುತ್ತದೆ. ಶಾಸ್ತ್ರಗಳನ್ನು 'ವ್ಯಾಖ್ಯಾನಿಸುವ' ಭಟ್ಟರಿಗೆ, ಹೆಚ್ಚು ವೃತ್ತಿಗಳನ್ನು ಕೊಡಲಾಗಿದ್ದಿತು. ಜ್ಯೋತಿಷ, ಸಾಹಿತ್ಯ, ವ್ಯಾಕರಣ, ಗಣಿತ, ಅಲಂಕಾರ ಇವುಗಳನ್ನು ಕಲಿಸುವ 'ಶಬ್ದಸಂಸ್ಕಾರ' ವುಳ್ಳ 'ಅಕ್ಕರಿಗ'ನಿಗೆ ಕೊಟ್ಟ ವೃತ್ತಿ ಕಡಿಮೆ. ಅಲ್ಲದೆ ಅವನು ತನ್ನ ವಿದ್ಯಾರ್ಥಿಗಳಿಗೆ ದಿನವೂ ಊಟ ಹಾಕಿ ವರುಷಕ್ಕೊಮ್ಮೆ ಬಟ್ಟೆಗಳನ್ನು ಕೊಟ್ಟು ಓದಿಸಬೇಕೆಂದು ವಿಧಿಸಲಾಗಿದ್ದಿತು.[9]

## ತಾಳಗುಂದ

ಶಿಕಾರಪುರ ತಾಲೂಕಿನಲ್ಲಿರುವ ತಾಳಗುಂದ ಎಂಬ ಊರು ಇತಿಹಾಸಪ್ರಸಿದ್ಧವಾದ ಅಗ್ರಹಾರ. ಕದಂಬವಂಶದ ಅರಸರ ಮೂಲಸ್ಥಾನವಾದ ಇದು ಶಾಸನಗಳಲ್ಲಿ ಸ್ಥಾಣಕುಂದೂರು, ತಾಣಗುಂದೂರು, ಸ್ಥಾಣಗೂಢ ಎಂದು ಕರೆಯಲ್ಪಟ್ಟದೆ. ಕ್ರಿ. ಶ. ೧೨೦೦ ನೆಯ ಶಾಸನವೊಂದು ಇದು ಅಗ್ರಹಾರವಾದ ಬಗೆಯನ್ನು ಈ ರೀತಿ ನಿರೂಪಿಸುತ್ತದೆ: ಬನವಾಸಿ ದೇಶದ ಅಧಿಕಾರಿ ಮುಕ್ಕಣ್ಣ ಕದಂಬನೆಂಬವನೊಬ್ಬ ಈ ಊರಲ್ಲಿ ನೆಲಸುವದಕ್ಕೋಸ್ಕರ ಬ್ರಾಹ್ಮಣರಿಗಾಗಿ 'ದಕ್ಷಿಣಾಪಥ'ದಲ್ಲೆಲ್ಲ ಹುಡುಕಿದನಂತೆ. ಆದರೆ ಯಾರೂ ದೊರೆಯದಿರಲು 'ಅಹಿಚ್ಛತ್ರ ಅಗ್ರಹಾರ'ಕ್ಕೆ ಹೋಗಿ ಅಲ್ಲಿಂದ ಯಜ್ಞಯಾಗಾದಿಗಳಲ್ಲಿ ಪರಿಣತರಾದ ೩೨ ಜನ ಬ್ರಾಹ್ಮಣರನ್ನು ಕರೆತಂದು ನೆಲಸುವಂತೆ ಮಾಡಿ ಅಗ್ರಹಾರವನ್ನೂ ಸ್ಥಾಪಿಸಿದನಂತೆ. ಆದರೆ ೧೦೨೮ ನೆಯ ಇಸವಿಯ ಶಾಸನದಲ್ಲಿಯೇ ಇದು ಅಗ್ರಹಾರವೆಂದು ಕರೆಯಲ್ಪಟ್ಟದೆ. ೧೨೦೦ ರಲ್ಲಿ ಮುಕ್ಕಣ್ಣ ಕದಂಬನು ಇದನ್ನು ಪುನರುಜ್ಜೀವಿತಗೊಳಿಸಿರಬೇಕು.

ಈ ಅಗ್ರಹಾರದಲ್ಲಿ ೬ ವಿಷಯಗಳನ್ನು ಕಲಿಸಲು ೬ 'ಖಂಡಿಕೆ'ಗಳು ಅಂದರೆ ವರ್ಗಗಳು ಇದ್ದವು. ಅವು ಋಗ್ವೇದ ಖಂಡಿಕೆ, ಯಜುರ್ವೇದದಲ್ಲಿ ಎರಡು ಖಂಡಿಕೆಗಳು— ಒಂದು ಪದ ಖಂಡಿಕೆ, ಇನ್ನೊಂದು ಕಲ್ಪ ಖಂಡಿಕೆ ನಾಲ್ಕನೆಯದು ಸಾಮವೇದ ಖಂಡಿಕೆ, ಮೂರನೆಯುದು ಶಬ್ದರೂಪಾವತಾರನ್ಯಾಸ: ಖಂಡಿಕೆ ಮತ್ತು ಕೊನೆಯದು ಪ್ರಾಭಾಕರ ಖಂಡಿಕೆ. ಪ್ರತಿಯೊಂದು ವರ್ಗದಲ್ಲಿ ಎಂಟೆಂಟು ವಿದ್ಯಾರ್ಥಿಗಳಿದ್ದರು. ಈ ವಿದ್ಯಾರ್ಥಿಗಳ ಊಟದ ವ್ಯವಸ್ಥೆಗಾಗಿ ಭೋಜನಶಾಲೆಯೊಂದಿದ್ದಿತು. ಅಲ್ಲಿ ಅಡುಗೆ ಮಾಡಲು ಮೂರು ಜನ ಸ್ತ್ರೀಯರು ನಿಯಮಿತವಾಗಿದ್ದರು. ಮೊದಲೇ ಉಲ್ಲೇಖಿಸಲಾದಂತೆ ಈ ಅಗ್ರಹಾರದ ಇನ್ನೊಂದು ವೈಶಿಷ್ಟ್ಯವೆಂದರೆ ಇಲ್ಲಿ ವಿದ್ಯಾರ್ಥಿನಿಯರೂ ಇದ್ದರು. ಈ ವಿದ್ಯಾಲಯ ನಿರಾತಂಕವಾಗಿ ನಡೆಯುವದಕ್ಕೆ ಮಹಾಪ್ರಧಾನ ಕೇಶಿ-ದಂಡನಾಯಕನೆಂಬವನು ಎಷ್ಟೋ ಭೂಮಿಗಳನ್ನೂ ಹಣವನ್ನೂ ದಾನವಾಗಿ ಕೊಟ್ಟನು. ಮೇಲೆ ವಿವರಿಸಲಾದ ಆರು ಖಂಡಿಕೆಗಳಿಗೆ ಒಂದೊಂದಕ್ಕೆ ಅರ್ಧ ಮತ್ತ[10]ರಿನಂತೆ ೩ ಮತ್ತರು ಭೂಮಿಯನ್ನೂ ವೇದಾಂತದ ಗುರುಗಳಿಗೂ ಕನ್ನಡವನ್ನು ಕಲಿಸುವ ಉಪಾಧ್ಯಾಯರಿಗೂ ಭೂಮಿ ಹಣಗಳನ್ನು ಕಾಣಿಕೆಯಾಗಿ ಕೊಟ್ಟನು. ಭೋಜನಶಾಲೆಯ ಅಡುಗೆಯವರಿಗೆ, ಅವರ ಉಪಜೀವನಕ್ಕಾಗಿ, ಸೀರೆಗಳ ವೆಚ್ಚಕ್ಕಾಗಿ ಹಣದ ಏರ್ಪಾಡು ಮಾಡಿದನು. ಇದೇ ರೀತಿ ಅಲ್ಲಿಯ ವಿದ್ಯಾರ್ಥಿನಿಯರ ಸೀರೆಗಳಿಗಾಗಿಯೂ ಪ್ರತಿ ಶನಿವಾರ ಅವರ ಅಭ್ಯಂಗ ಸ್ನಾನಕ್ಕಾಗಿಯೂ ಕೆಲ ಹಣವನ್ನು ದತ್ತಿಯಾಗಿ ಕೊಟ್ಟನು.

ಹೀಗೆ ಶತಮಾನಗಳ ವರೆಗೆ ಖ್ಯಾತಿವೆತ್ತ ಸ್ಥಾಣಗುಂದೂರು ಅಗ್ರಹಾರ ಕರ್ನಾಟಕದ ವಿದ್ಯಾ ಕೇಂದ್ರಗಳಲ್ಲಿ ಮಾದರಿಯದಾಗಿತ್ತು ಎಂದು ಹೇಳಬಹುದು.[11]

ಕರ್ನಾಟಕದ ಮೂಲೆ ಮೂಲೆಗಳಲ್ಲಿ ಸ್ಥಾಪಿತವಾಗಿ, ಅಳರಸರಿಂದ, ಅಧಿಕಾರಿಗಳಿಂದ ಇತರ ವಿದ್ಯಾಪಕ್ಷಪಾತಿಗಳಾದ ನಾಗರಿಕರಿಂದ ಪೋಷಿತವಾಗಿ, ವಿದ್ವಾಂಸರಾದ 'ಮಹಾಜನ'ರ ನಿಃಸ್ವಾರ್ಥ ಸೇವೆಯ ಮೂಲಕ ವಿದ್ಯಾಪ್ರಸಾರದಲ್ಲಿ ನಿರತವಾಗಿ ಕರ್ನಾಟಕದ ತನ್ಮೂಲಕ ಭಾರತದ ಸಂಸ್ಕೃತಿಯ ಬೆಳವಣಿಗೆಗೆ ಕಾರಣವಾದ ಅನೇಕ ವಿದ್ಯಾಕೇಂದ್ರಗಳಲ್ಲಿ ಇವು ಕೆಲವು ಮಾತ್ರ. ಇಂದು ಇವೆಲ್ಲವೂ ಹಳ್ಳಿಗಳಾಗಿದ್ದರೂ ಧರ್ಮದ, ವಿದ್ಯೆಯ ನೆಲೆಗಳಾಗಿ ವೈಭವದಿಂದ ಮೆರೆದ ಕಾಲವೊಂದಿದ್ದಿತು ಎಂದು ತೋರಿಸಲು ಅಲ್ಲಲ್ಲಿ ದೊರೆತ ಅವಶೇಷಗಳು, ಶಾಸನಗಳೇ ಸಾಕ್ಷಿ.

---

8. ಈ ಎಲ್ಲ ವಿವರಗಳನ್ನು Hyderabad Archaelogical Series No. 9 ಗ್ರಂಥದಲ್ಲಿ ಪ್ರಕಟವಾದ, ನಾಗಾಯಿಯಲ್ಲಿ ದೊರೆತ ಶಾಸನಗಳಿಂದ ಆಯ್ದುಕೊಳ್ಳಲಾಗಿದೆ. ಕೊನೆಯ ಶಿಕ್ಷಣ ಕೇಂದ್ರದ ವಿಷಯವನ್ನೊಳಗೊಂಡ ಶಾಸನ ಒಡೆದು, ಅಳಿಸಿ ಹೋಗಿದ್ದರಿಂದ, ಅದರ ಬಗ್ಗೆ ಹೆಚ್ಚಿನ ವಿವರಗಳು ದೊರೆಯುವದಿಲ್ಲ.

9. ಈ ವಿಷಯವನ್ನೊಳಗೊಂಡ ಶಾಸನ Ep. Ind. vol xx pp. 66 ff ಇಲ್ಲಿ ಪ್ರಕಟವಾಗಿದೆ.

10. ಮತ್ತರು ಎಂದರೆ ಆಗಿನ ಕಾಲದಲ್ಲಿ ಪ್ರಚಲಿತವಿದ್ದ ಭೂಮಿಯ ಅಳತೆ.

11. ಈ ಊರಿನಲ್ಲಿಯ ಶಾಸನಗಳು Ep.Carn. Vol. VII ಇದರಲ್ಲಿ ಪ್ರಕಾಶಿತವಾಗಿವೆ.

# ಕನ್ನಡ ಸಾಹಿತ್ಯದ ಮೇಲೆ ಸಂಸ್ಕೃತದ ಪ್ರಭಾವ

ಲೇಖಕರು :
**ಪಂ. ಕೇಶವಶರ್ಮಾ ಗಲಗಲಿ, ಧಾರವಾಡ**

ಕನ್ನಡವು ದ್ರಾವಿಡ ಭಾಷಾವರ್ಗಕ್ಕೆ ಸೇರಿದ್ದರೂ ಸಂಸ್ಕೃತದ ವಿಪುಲಪದಗಳು ಅದರಲ್ಲಿ ಸೇರಿರುವವು. ಅಲ್ಲದೇ ಕನ್ನಡ ಕಾವ್ಯಗಳಲ್ಲಿ ಸಂಸ್ಕೃತದ ಕಾವ್ಯಗಳ ಛಾಯೆ ಬಿದ್ದಿರುವುದನ್ನು ಕಾಣುತ್ತೇವೆ. 'ಮುತ್ತುಂ ಮೆಳಸುಂ ಕೋದಂತೆ' ಎಂದು ಹೇಳಿದ ಕವಿಗಳೇ ಸಂಸ್ಕೃತದ ಪ್ರಭಾವದಿಂದ ಪಾರಾಗಿಲ್ಲ. ಆದರೂ ಕನ್ನಡ ಸಾಹಿತ್ಯ ತನ್ನತನ ಕಾಯ್ದುಕೊಂಡಿದೆ. ಇದನ್ನು ಸೋದಾಹರಣವಾಗಿ ಲೇಖಕರಿಲ್ಲಿ ನಿರೂಪಿಸಿರುವರು.

ಕನ್ನಡವು ದ್ರವಿಡ ವರ್ಗದ ಭಾಷೆ. ಅದು ಮರಾಠಿ, ಬಂಗಾಲಿ, ಗುಜರಾತಿಯಂತೆ ಸಂಸ್ಕೃತಜನ್ಯವಾದ ಪ್ರಾಕೃತದಿಂದ ಹುಟ್ಟಿದ ಭಾಷೆಯಲ್ಲ. ಆದರೂ ಕನ್ನಡವು ಹೃಷ್ಟಿಯನ್ನೂ ಪುಷ್ಟಿಯನ್ನೂ ಪಡೆದು ದೇಶಭಾಷೆಗಳಲ್ಲಿ ತನ್ನ ಔನ್ನತ್ಯವನ್ನು ಕಾಯ್ದುಕೊಂಡು ಬಂದದ್ದು ಸಂಸ್ಕೃತದ:ಬೆಂಬಲದಿಂದ, ಆಶ್ರಯದಿಂದಲೇ. ಸಂಸ್ಕೃತವು ಕನ್ನಡಕ್ಕೆ, ಕೆಲವರು ತಿಳಿದಂತೆ ಅತ್ತೆಯಲ್ಲ. ಕನ್ನಡವು ಸಂಸ್ಕೃತವನ್ನು ಪುಜ್ಯ ಮಾತಾಮಹಿಯ ಸ್ಥಾನದಲ್ಲಿರಿಸಿಕೊಂಡು, ಹಿರಿಯರ ಹಿತೋಪದೇಶವನ್ನು ಕಾಪಾಡಿಕೊಂಡು, ತನ್ನ ಆರೋಗ್ಯವನ್ನೂ ಸೌಂದರ್ಯವನ್ನೂ ಆಯುಸ್ಸನ್ನೂ ಬೆಳೆಯಿಸಿಕೊಂಡು ಬಂದಿರುವದು. ಸಂಸ್ಕೃತ ವಾಙ್ಮಯವು ಮಹಾಸಾಗರದಂತಿರುವದು. ಅದರಲ್ಲಿ ಎಷ್ಟೋ ರತ್ನಗಳನ್ನೂ ಮುತ್ತುಗಳನ್ನೂ ನೀವು ಆಯ್ದುಕೊಂಡರೂ 'ಅದ್ಯಾಪಿ ರತ್ನಾಕರ ಏವ ಸಿಂಧುಃ' ಎಂಬಂತಿರುವದು.

ನೃಪತುಂಗನ ಕವಿರಾಜ ಮಾರ್ಗದಿಂದ ೧೯ನೇ ಶತಮಾನದ ಅಂತ್ಯಭಾಗದಲ್ಲಿ ಹುಟ್ಟಿದ ಮುದ್ದಣನ ರಾಮಾಶ್ವಮೇಧ, ಆರ್. ನರಸಿಂಹಾಚಾರ್ಯರ ನೀತಿಮಂಜರಿ ಹಳೆಗನ್ನಡ ಕಾವ್ಯಗಳನ್ನು ತಕ್ಕೊಂಡರೂ ಸಂಸ್ಕೃತದ ಪ್ರಭಾವವು ಅಚ್ಚಳಿಯದೆ ಕಂಡುಬರುವದು. ಸಂಸ್ಕೃತದ ಅಲಂಕಾರ ರಸ ಭಾವಪುಷ್ಟಿ ರೀತಿ ಗುಣಗಳು, ವ್ಯಾಕರಣ ಮೊದಲಾದವುಗಳೆಲ್ಲವೂ ಸಂಸ್ಕೃತ ಸಾಹಿತ್ಯದ ಅವಲಂಬನದಿಂದಲೇ ಹುಟ್ಟಿಕೊಂಡಿರುವವು.

### ಇಂಗ್ಲೀಷದ ಪ್ರಭಾವ

೨೦ನೇ ಶತಮಾನದ ಪೂರ್ವಾರ್ಧದಲ್ಲುಂಟಾದ ಗ್ರಂಥಗಳ ಮೇಲೆ ಇಂಗ್ಲೀಷ ಸಾಹಿತ್ಯದ ಪ್ರಭಾವವು ಬಿದ್ದಿರುವದು. ಶ್ರೀಕಂಠಯ್ಯ ಮೊದಲಾದ ಉಭಯ ಭಾಷಾ ಪ್ರವೀಣರು, ಇಂಗ್ಲೀಷ ಸಾಹಿತ್ಯದ ಸೌಂದರ್ಯವನ್ನೂ ಕನ್ನಡದಲ್ಲಿ ತರಲು ಹೋರಾಡಿದರು. ಆದರೂ ಅವರು ಸಂಸ್ಕೃತದ ಪ್ರಭಾವದಿಂದ ಮುಕ್ತರಾಗಿಲ್ಲ. ಮುಕ್ತರಾಗುವದು ಇಷ್ಟವೂ ಅಲ್ಲ. ನಮ್ಮ ಪರಂಪರಾಗತ ಸಂಸ್ಕೃತಿ ಎಲ್ಲವೂ ಸಂಸ್ಕೃತ ಸಾಹಿತ್ಯದಲ್ಲಿ ಅಡಕವಾಗಿರುವದು. ಅದನ್ನು ಪೂರ್ಣ ಅಲ್ಲಗಳೆದರೆ ಅದು ನಮ್ಮ ಭಾರತೀಯರಿಗೆ ಪಚನವಾಗಲಾರದು. ಯಾವ ಭಾಷೆಯಿಂದ ನಮಗೆ ಇಷ್ಟ ಸಾಹಿತ್ಯ ಬಂದರೂ ಅದನ್ನು ನಾವು ಸಂಸ್ಕೃತದ ಆಲವಾಲದಲ್ಲಿಯೇ ನೀರು ಹನಿಸಿ ಬೆಳಿಸಬೇಕು. ಅಂದರೇ ಅದು ನಮಗೆ ಹೃದ್ಯವಾಗುವದು, ರುಚಿಸುವದು.

ಕನ್ನಡದಲ್ಲಿ ಕೆಲವು ವಿಶಿಷ್ಟ ಕನ್ನಡಾಭಿಮಾನಿಗಳಾಗಿ ಹೋದರು. ಅವರೂ ಕೂಡ ಸಂಸ್ಕೃತದ ಪ್ರಭಾವದಿಂದ ಮುಕ್ತರಾಗಿರುವದಿಲ್ಲ. ರಂಗನಾಥನು 'ಅನುಭವಾಮೃತದಲ್ಲಿ' ಹೇಳುತ್ತಾನೆ.

> ಸುಲಿದ ಬಾಳೆಯ ಹಣ್ಣಿನಂದದಿ ।
> ಕಳಿದ ಸಿಗುರಿನ ಕಬ್ಬಿನಂದದಿ ।
> ಅಳಿದಲುಷ್ಣದ ಹಾಲಿನಂದದಿ ಸುಲಭವಾಗಿರುವ।
> ಲಲಿತವಹ ಕನ್ನಡದ ನುಡಿಯಲಿ ।
> ತಿಳಿದು ತನ್ನಲಿ ತನ್ನ ಮೋಕ್ಷವ
> ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು ?

ಅಹುದು, ನಿಜ. ಸಾಮಾನ್ಯರಿಗೆ ಪಚನ ಶಕ್ತಿ ಇಲ್ಲದವರಿಗೆ ಕಲ್ಲುಸಕ್ಕರೆ ಹಾಕಿ ಮರಳಿಸಿ ಹಾಲು ಕೊಡಬೇಕಾಗುವದು. ಬಾಲಕರಿಗೆ ಬಾಳೇ ಹಣ್ಣನ್ನು ಸುಲಿದೇ ಕೊಡಬೇಕಾಗುವದು. ಕಬ್ಬನ್ನು ಆನೆಯಂತೆ ಯಾರೂ ಹಾಗೇ ತಿನ್ನುವದಿಲ್ಲ. ಸುಲಿದೇ ತಿನ್ನುವರು ನಿಜ. ರಂಗನಾಥನಂಥವರು ಸಂಸ್ಕೃತ ತತ್ವಗಳನ್ನು ಕನ್ನಡದಲ್ಲಿ ಪಚನವಾಗುವಂತೆ ಸೌಲಭ್ಯವನ್ನು ಮಾಧುರ್ಯವನ್ನು ತಂದರೇನೋ ನಿಜ. ಆದರೂ ಆ ಸಂಸ್ಕೃತದ ಲಾಲಿತ್ಯ ಮಾಧುರ್ಯಗಳು ಮೂಲದಲ್ಲಿಯಂತೆ ಅನುವಾದದಲ್ಲಿ ಇಳಿಯಲಾರವು. ತಮ್ಮ ಯಥಾನುಶಕ್ತಿ ಅವರು ಕನ್ನಡಕ್ಕೆ ಸೇವೆಯನ್ನು ಸಲ್ಲಿಸಿದರು. ಆದರೆ ಅವರು ಸಂಸ್ಕೃತದಲ್ಲಿನ್ನೇನು ಅನ್ನುವ ಕಾರಣವಿರಲಿಲ್ಲ.

### ಕನ್ನಡದ ಅಭಿಮಾನಿ ಕವಿಗಳು

ರಂಗನಾಥನಿಗಿಂತ ಕೊಂಚ ಮುಂದೆ ಹೋಗಿರುವ ಕೆಲ ಕನ್ನಡ ಕವಿಗಳು ಇರುವರು. ಅದು ದುರಭಿಮಾನವೆನ್ನದಿದ್ದರೂ ಅಭಿಮಾನದ ಅತಿರೇಕವೆನ್ನಬಹುದು. ನಾಗವರ್ಮ, ನಯಸೇನ, ಆಂಡಯ್ಯ ಅವರಲ್ಲಿ ಮುಖ್ಯರು. ಕನ್ನಡದಲ್ಲಿ ಸಕ್ಕದವನ್ನಿಕ್ಕುವವನು ಕವಿಯೇ ಎಂದು ಒಬ್ಬನು ಅಂದರೆ 'ಮುತ್ತುಂ ಮೆಣಸುಂ ಕೋದಂತಿರೆ' ಎಂದು ಇನ್ನೊಬ್ಬನು ಮೂದಲಿಸುವನೊಬ್ಬನು — 'ಘೃತಮುಮಂ ತೈಲಮುಮಂ ಬೆರಸಲ್ಕೆ' ಎಂದು ಸಂಸ್ಕೃತ ಕನ್ನಡ ಶಬ್ದಗಳ ಬಳಕೆಯನ್ನು ವಿರೋಧಿಸಿದರು. ಇಲ್ಲೊಂದು ಉದಾಹರಣೆಯನ್ನು ನೋಡಬಹುದು. ಓರ್ವ ಯುವತಿ ಕಾಜಿನ ಮಣಿಗಳನ್ನೂ ಮುತ್ತುಗಳನ್ನೂ ಒಂದೇ ದಾರದಲ್ಲಿ ಪೋಣಿಸುತ್ತಿದ್ದಳಂತೆ. ರಸಿಕ ಕೇಳಿದ ಇದೇನು ?, ಯುವತಿ ಉತ್ತರ ಕೊಟ್ಟಳು. 'ಅಶೇಷವಿತ್-ಪಾಣಿನಿ-ರೇಕಸೂತ್ರೇ ಶ್ವಾನಂಯುವಾನಂ ಮಘವಾನಮಾಹ ( ಶ್ವಯುವ ಮಘೋನಾಮತದ್ಧಿತೇ ಸೂತ್ರ: ) ಅಂದರೆ ಸರ್ವಜ್ಞನಾದ ಪಾಣಿನಿಯೇ ಒಂದೇ ಸೂತ್ರದಲ್ಲಿ ಕುಕ್ಕುರ, ತರುಣ, ಇಂದ್ರರನ್ನು ಸೇರಿಸಿದ್ದಾನಲ್ಲ' ಎಂದು ಉತ್ತರ ಕೊಟ್ಟಳಂತೆ.

ಔಚಿತ್ಯಕ್ಕನುಸಾರವಾಗಿ ರಸಕ್ಕೆ ಭಂಗ ಬರದಂತೆ ಸಂಸ್ಕೃತ ಕನ್ನಡ ಪದಗಳನ್ನು ಒತ್ತಟ್ಟಿಗೆ ಸೇರಿಸುವದೇನು ದೋಷವಲ್ಲ. ಈ ಕಾರ್ಯವನ್ನು ಲಕ್ಷ್ಮೀಶಾದಿ ಕವಿಗಳು ಯಶಸ್ವಿಯಾಗಿ ಮಾಡಿ ತೋರಿಸಿರುವರು.

> ''ಅವಗಂ ಸರಸ ಕರುಣಾಮೃತದ ಕಲೆಗಳಿಂ ।
> ತೀವಿದೆಳನಗೆಯ ...... ದೇವ ಪುರನಿಲಯ

ಲಕ್ಷ್ಮೀರಮಣನಾಸ್ಯಚಂದ್ರಾನಂದನಮಂ
ನಮಗೀಯಲಿ ।

ಕನ್ನಡದಲ್ಲಿ ಬಹುಮಟ್ಟಿಗೆ ಸಂಸ್ಕೃತದ ಮಾಧುರ್ಯವನ್ನು ಸಾಧಿಸಿದವನು ಲಕ್ಷ್ಮೀಶನು. ಅದ್ದರಿಂದಲೇ ಅವನ ಕಾವ್ಯ ಅಷ್ಟೊಂದು ಲೋಕಪ್ರಿಯವಾಗಿದೆ.

ಆಂಡಯ್ಯನು ಸಂಸ್ಕೃತ ಶಬ್ದಗಳನ್ನು ಮುಟ್ಟಲಾಗದೆಂದು ಪ್ರತಿಜ್ಞೆ ಮಾಡಿದ್ದೇನೋ ಸರಿ, ಆದರೆ ಅವನು ರಚಿಸಿದ್ದೇನು ? ತದ್ಭವ ಬ್ರಹ್ಮಾಂಡ. ಅವನು ಸಂಸ್ಕೃತವನ್ನು ಮುಟ್ಟದಿದ್ದರೂ ತಜ್ಜನ್ಯವಾದ ತದ್ಭವಗಳನ್ನು ವಿಪುಲವಾಗಿ ಬಳಸಿಕೊಂಡಿರುವವನು. ಇನ್ನು ಅತಿಯಾದ ಸಂಸ್ಕೃತ ಶಬ್ದಗಳ ಗುಂಫನವು ರುದ್ರಭಟ್ಟಾದಿಗಳಂತೆ ಉಂಟಾದಾಗ ಈ ವಾದವು ಹುಟ್ಟಿರಬಹುದು. ಆದರೆ "ಅತಿ ಸರ್ವತ್ರ ವರ್ಜಯೇತ್" ಎಂಬ ನ್ಯಾಯವೇ ಉಚಿತವಾದದ್ದು. ಈ ತೂಕವನ್ನು ಕೆಲವು ಮಾನ್ಯ ಕವಿಗಳು ಕಾಯ್ದುಕೊಂಡು ಬಂದಿರುವರು. ಕನ್ನಡವು ಪ್ರಾಕೃತವೆಂದು ತಿರಸ್ಕರಿಸಬಾರದು. ಸಂಸ್ಕೃತವು ತತ್ಸವಿತ್ಯವರೇಣ್ಯರದೆಂದು ಜರೆಯಲೂ ಬಾರದು. ಸಮನ್ವಯವನ್ನು ಸಾಧಿಸಿಕೊಂಡು ಹೋಗುವದೇ ಜಾಣ್ಮೆ.

## ನಯಸೇನ

ಇದು ನಯಸೇನನ ಪದ್ಯನೋಡಿರಿ (೧೧೧೨)

ಪೆಣ್ಣಿಂಗಂ ಪೊನ್ನಿಂಗಂ
ಮಣ್ಣಿಂಗಂ ಕಾಂಕ್ಷೆಯಿಂದ ಮೆಚಿಗದೆ ಲೋಕಂ।
ಬಣ್ಣಿಸೆ ಸಂಚಲನಾಗದೆ
ತಿಣ್ಣಂ ನಡೆವವನೆ ತಾಂ ತಪೋಧನನಕ್ಕುಂ ॥

ಎಂಬದು "ವೇಧಾ ದ್ವೇಧಾ ಭ್ರಮಂ ಚಕ್ರೇ ಕಾಂತಾಸು ಕನಕೇಷು ಚ. ತಾಸು ತೇಷ್ವಪ್ಯನಾಸಕ್ತೋ ಸಾಕ್ಷಾದ್ಭರ್ಗೋ ನರಾಕೃತಿಃ" ಈ ಸಂಸ್ಕೃತ ಪದ್ಯದ ಭಾವಾನುವಾದವಿದೆ. ಲೋಕ-ಸಂಚಲ-ತಪೋಧನ, ಇವು ಸಂಸ್ಕೃತ ಶಬ್ದಗಳಲ್ಲವೆ? ಅಲ್ಲದೇ ನಯಸೇನ ಎಂಬ ಹೆಸರೇ ಸಂಸ್ಕೃತವಿರುವದು. ಕನ್ನಡದ ಅಭಿಮಾನದ ಅತಿರಿಕ್ತತೆಯಿಂದ ದೀಪಾವಳಿಯನ್ನು ಸೊಡರ್ಸಾಲಪಬ್ಬವೆಂದು ಭಾಷಾಂತರಿಸುವ ಕಾರಣವಿಲ್ಲ.

ಇವು ರಟ್ಟಮತದ ಪದ್ಯಗಳು (೧೩೦೦). [ರಟ್ಟಮತವನ್ನು ಇತ್ತಲಾಗಿ ಮದ್ರಾಸ ಓರಿಯೆಂಟಲ್ ಲಾಯಬ್ರರಿಯವರು ಪ್ರಕಟಿಸಿರುವರು. ಇದು ಸಂಸ್ಕೃತದಲ್ಲಿರುವ ವರ್ಷಪ್ರಬೋಧದಂತಿರುವದು].

ಜಲಜಸಖಬಿಂಬಮುತ್ತು
ಜ್ವಲಮಪ್ಪೊಡೆ ವಾಯು ಪವನನೊಳ್
ಬೀಸುವೊಡಂ ।
ಜಲದಂಗಳ ರುಚಿಗಳ್ ನಿ
ರ್ಮಳಮಪ್ಪೊಡಮಧಿಕವೃಷ್ಟಿಯಕ್ಕುಂ ಬಟ್ಟಾ॥

ಈ ಪದ್ಯದ ಮೇಲೆ ಇನ್ನೂ ಇತರ ಪದ್ಯಗಳ ಮೇಲೆ ವರಾಹಮಿಹಿರಾಚಾರ್ಯರ ಬೃಹತ್ಸಂಹಿತೆಯ ಪ್ರಭಾವವು ಸಂಪೂರ್ಣವಾಗಿ ಬಿದ್ದಿರುವದು ವ್ಯಕ್ತವಾಗುವದು.

ಇನ್ನು ಕನ್ನಡ ಕವಿಗಳ ಬಿರುದುಗಳನ್ನು ನೋಡಿರಿ—ಕವಿಚರಿತದಲ್ಲಿ ಕವಿಗಳ ನೂರಾರು ಬಿರುದುಗಳು ಉದ್ಧರಿಸಲ್ಪಟ್ಟಿವೆ. ಆ ಎಲ್ಲ ಬಿರುದುಗಳೂ ಸಂಸ್ಕೃತ ಭೂಯಿಷ್ಠವಾಗಿವೆ. ಕವಿತಾರ್ಕಿಕಸಿಂಹ, ಅಖಿಲಕವಿವೇಶ್ಯಾಭುಜಂಗ, ಕವಿಶರಭ, ಭೇರುಂಡ, ಕರ್ನಾಟಕವಿಚೂತವನಚೈತ್ರ, ಕವಿಚಕ್ರವರ್ತಿ, ಧಾತ್ರೀನಿಳಿಂಪ, ಕವಿಕಂಠಾಭರಣ, ವಾಣೀಮುಕುರ, ಸುಗುಣ ರತ್ನ ಕರಂಡ, ಸುಜನಮುಖಮಣಿಮುಕುರ ಇತ್ಯಾದಿ.

ಆದಿಕವಿ ಪಂಪನು ಮಗಳಿಗೆ ಉಪದೇಶ ಮಾಡುತ್ತಾನೆ— "ಬಗೆದುಂ ನಿನ್ನನ್ನವಾಯೋನ್ನತಿಯನಿವಳತಿ ಸ್ನೇಹ ಸಂಬಂಧಮಂ ನೀಂ। ಬಗೆದುಂ ಸಂದೆಮ್ಮ ನಣ್ಪಂ ಬಗೆದುಮಱಿಯದೇನಾನುಮೆಂದಾಗಳುಂನಿ। ಲ್ಲಗೆ ನೀಂ ಕಲ್ಪಿಪ್ಪುದೆನ್ಮಂ ನೆನೆದೆರ್ದೆಗಿಡದಂತಾಗೆ ಪಾಲಿಪ್ಪುದಿಂತೀ। ಮೃಗಶಾಬೇಕ್ಷಾಕ್ಷಿಯಂ ಮನ್ನಿಪುದಿನಿತನಾಂ ಬೇಡಿದೆಂ ವಜ್ರಜಂಘಾ ॥"

ಇದು ಶಾಕುಂತಲದ ಅನುವಾದ— ಅಸ್ಮಾನ್ ಸಾಧುವಿಚಿಂತ್ಯ, ಸಂಯಮಧನಾನುಚ್ಚೈಃ ಕುಲಂ ಚಾತ್ಮನಃ। ತ್ವಯ್ಯಸ್ಯಾಃ ಕಥಮಪ್ಯಬಾಂಧವಕೃತಾಂ ಪ್ರೇಮಪ್ರವೃತ್ತಿಂ ಚ ತಾಂ। ಸಾಮಾನ್ಯಪ್ರತಿಪತ್ತಿ ಪೂರ್ವಕಮಿಯಂ ದಾರೇಷು ದೃಶ್ಯಾ ತ್ವಯಾ—

## ಛಂದೋಗ್ರಂಥಗಳು

ಕನ್ನಡ ಛಂದೋಗ್ರಂಥಗಳನ್ನು ತೆಗೆದುಕೊಳ್ಳೋಣ. ಅವುಗಳಲ್ಲಿ ಸುಪ್ರಸಿದ್ಧವಾದದ್ದು. ನಾಗವರ್ಮನ ಛಂದೋಂಬುಧಿ, ನಂದೀ ಛಂದಸ್ಸು ಉಂಟು. ಪಿಂಗಲನಿಂದಾಗಲಿ, ನಾರಾಯಣಭಟ್ಟನ ಛಂದಸ್ಸಿನಿಂದಾಗಲಿ ಅಕ್ಷರ ಮಾತ್ರಾವೃತ್ತಗಳು ಲಕ್ಷಣ ಸಹಿತ ಅನೂದಿತವಾಗಿವೆ. ಇಷ್ಟೇ ಅಲ್ಲ. ಕಾಲಿದಾಸನ ಹೆಸರಿನಿಂದ ಒಂದು ಲಘುಛಂದಸ್ಸು ಸಂಸ್ಕೃತದಲ್ಲುಂಟು. ಅದರಲ್ಲಿ ತನ್ನ ಪ್ರಿಯಳ ಮುಂದೆ ಹೇಳಿದನೆಂದು ಅವಳನ್ನು ರಮ್ಯವಾದ ಸಂಬೋಧನಗಳಿಂದ ಸಂಬೋಧಿಸಿದಂತೆ ನಾಗವರ್ಮನು "ಚಾರ್ವಂಭೋರುಹಪತ್ರನೇತ್ರೆ ಪೆಸರಿಂ ಶಾರ್ದೂಲವಿಕ್ರೀಡಿತಂ." ಸಂಬೋಧನ ಪ್ರಭಾವವು ಕೂಡ ನಾಗವರ್ಮನ ಮೇಲೆ ಬಿದ್ದಿರುವದು.

ಸಂಸ್ಕೃತದಲ್ಲಿಲ್ಲದ ಬ್ರಹ್ಮಗಣ ವಿಷ್ಣುಗಣ ರುದ್ರಗಣಗಳ ದ್ರಾವಿಡ ಛಂದಸ್ಸಿನ ವೈಶಿಷ್ಟ್ಯವನ್ನು ಮಾತ್ರ ನಾಗವರ್ಮನು ಹೇಳಿರುವನು. ಇವುಗಳ ಗುಟ್ಟು ಮಾತ್ರ ಇನ್ನೂ ವಿದ್ವಾಂಸರಿಂದ ಚೆನ್ನಾಗಿ ವಿವರೀಕೃತವಾಗಿಲ್ಲ. ಪ್ರೊ. ಕುಂದಣಗಾರರು ಇದರ ವಿವರಣೆಗಾಗಿ ಪ್ರಯತ್ನಿಸಿರುವರು. ಸೇಡಿಯಾಪು ಕೃಷ್ಣಭಟ್ಟರೂ ಈ ಬಗ್ಗೆ ಒಂದು ನಿಬಂಧವನ್ನು ಹಿಂದಕ್ಕೆ ಸಾಹಿತ್ಯ ಪರಿಷತ್ ಪತ್ರದಲ್ಲಿ ಬರೆದಿದ್ದರು ಆದರೆ ಈ ಛಂದಸ್ಸಿನ ಗುಟ್ಟಿನ ವಿವರಣೆಗೆ ಇನ್ನೂ ಬೆಳಕು ಬೇಕು.*

ದ್ರಾವಿಡ ಛಂದಸ್ಸಿನಲ್ಲಿ ಒಂದು ವೈಶಿಷ್ಟ್ಯವಿರುವದೇನೋ ನಿಜ. ಆದರೆ ಅಭಿಮಾನಾತಿರೇಕದಿಂದ ಶಂಕರಾಚಾರ್ಯರ ಚರ್ಪಟಪಂಜರಿಯೊಳಗಿನ ಪಜ್ಝಟಿಕಾ ವೃತ್ತದಲ್ಲಿ, ದ್ರಾವಿಡ ಛಂದಸ್ಸಿನ ಅನುಕರಣವಿದೆಯೆಂದು ಹೇಳುವರು. ಇದು ಎಷ್ಟರ ಮಟ್ಟಿಗೆ ನಿಜವೋ ನಾವು ಕಾಣಲಾರೆವು. ಸಂಸ್ಕೃತದಲ್ಲಿಯೂ ಮಾತ್ರಾವೃತ್ತಗಳಿರುವವು.

"ನಾರೀಸ್ತನಭರನಾಭೀದೇಶಂ।
ದೃಷ್ಟ್ವಾ ಮಾಗಾ ಮೋಹಾವೇಶಂ ॥
ಏತನ್ಮಾಂಸವಸಾದಿವಿಕಾರಂ।
ಮನಸಿ ವಿಚಿಂತಯ ವಾರಂ ವಾರಂ ॥

ಇಲ್ಲಿ ನಾಲ್ಕು ಮಾತ್ರೆಯ ನಾಲ್ಕು ಗಣಗಳಿರುವದು ನಿಜ. ಮುಂದಾನಿಲ ಲಲಿತ ಉತ್ಸಾಹ, ಈ ೫-೪-೩ ಗಣಗಳಿಂದಾದ ರಗಳೆಗಳಲ್ಲಿ ಇದನ್ನು ಸೇರಿಸಬಹುದೇ? ಸಂಸ್ಕೃತಜ್ಞರಂತೂ ಇದಕ್ಕೆ ಪಜ್ಝಟಿಕಾ ವೃತ್ತವೆಂದು ಕರೆದಿರುವರು.

## ಕನ್ನಡದಲ್ಲಿ ಸಂಸ್ಕೃತದ ಅಕ್ಷರ ಛಂದಸ್ಸು

ಸಂಸ್ಕೃತದ ಅನೇಕ ರಮ್ಯವಾದ ಅಕ್ಷರ ಛಂದಸ್ಸುಗಳು ಕನ್ನಡದಲ್ಲಿ ವಿಶೇಷವಾಗಿ ಬಳಕೆಯಲ್ಲಿ ಬಂದಿಲ್ಲ. ಪ್ರಾಚೀನ ಕವಿಗಳು ಶಾರ್ದೂಲವಿಕ್ರೀಡಿತ 'ಸ್ರಗ್ಧರಾ' ಮಹಾಸ್ರಗ್ಧರಾ ಮೊದಲಾದ ೬ ವೃತ್ತಗಳನ್ನು ಮಾತ್ರ ಬಳಕೆಯಲ್ಲಿ ತಂದಿರುವರು. ಕನ್ನಡ ಭಾಷೆ ವಿಶೇಷವಾಗಿ ಮಾತ್ರಾವೃತ್ತಗಳಿಗೆ ಹೊಂದುವದು. ಆದರೂ ಇಂದಿನ ಕವಿಗಳು ಸಂಸ್ಕೃತ ಛಂದಸ್ಸಿನಲ್ಲಿ ಹುದುಗಿಕೊಂಡಿರುವ ರಮ್ಯಛಂದಸ್ಸನ್ನು ಹೊರಗೆ ತರಲು ಪ್ರಯತ್ನಿಸಬೇಕು. ರಮ್ಯತೆಗಾಗಿ ನವಛಂದಸ್ಸನ್ನು ಬಳಕೆಯಲ್ಲಿ ತರಬಹುದು. ಶ್ರೀ ಬೇಂದ್ರೆಯವರ 'ಮೇಘದೂತ'ದಲ್ಲಿ ನವಛಂದಸ್ಸು ಮೂಡಿ ಬಂದಿರುವದು. ಇದರಲ್ಲಿ ರಮ್ಯತೆ ಇರುವದು. ವಿದ್ಯಾರ್ಥಿಗಳಿಗೆ ಇದನ್ನು ನಾನು ಕಲಿಸಿ ನೋಡಿರುವೆನು. ನಿಷ್ಕಕಂಠದ ೭-೮ ವಿದ್ಯಾರ್ಥಿಗಳು ಕೂಡಿ ಸಾಮೂಹಿಕ ಗೀತವನ್ನು ಅನ್ನಹತ್ತಿದರೆ ರಸಿಕ ಶ್ರೋತೃಗಳಿಗೆ ಯಕ್ಷನ ವಿರಹವೇದನೆಯ ಅನುಭವವೇ ಬರುವದು.

ಕೆರೂರು ವಾಸುದೇವಾಚಾರ್ಯರು ಕಾಲಿದಾಸನ ಅಜವಿಲಾಪವನ್ನು ಅದೇ ವಿಯೋಗಿನೀ ವೃತ್ತದಲ್ಲಿ ಅನುವಾದಿಸಿದ್ದರು. ಅದು ರಮ್ಯವೂ ಆಗಿತ್ತು.

---

* ಡಾ. ಡಿ. ಎಸ್. ಕರ್ಕಿಯವರ "ಛಂದೋವಿಕಾಸ" ದಲ್ಲಿ ಈ ವಿಷಯದ ವಿವರ ಚರ್ಚೆ ಇದೆ. —ಸಂ.

' ಇದು ಕಾಂತೆಯ ಕೊಂದವಾಳೆಯೆ ।
ನೈದೆಯಲ್ಲಿರ್ದೊಡಮೇಕೆ ಕೊಲ್ಲದು ?
ಮೃದುಲಾಂಗಿಯ ಘಾತಿಸಲ್ ಯಮಂ ।
ಮೃದುವೇ ಶಸ್ತ್ರಮನಿಂದು ತೊಟ್ಟನೆ.

ಕಾವ್ಯಾನಂದ ನರಸಿಂಹಾಚಾರ್ಯರು ಅಶ್ವಘಾಟಿಯ ವೃತ್ತವನ್ನು ಕೂಡ ಕನ್ನಡದಲ್ಲಿ ಅವತರಿಸಿದ್ದರು. ಪ್ರಾಸಬದ್ಧನಾದ ಈ ವೃತ್ತವನ್ನು ಕನ್ನಡದಲ್ಲಿ ತರುವುದು ಕಷ್ಟಸಾಧ್ಯ.

ವರಾಹಮಿಹಿರಾಚಾರ್ಯರ ಬೃಹಜ್ಜಾತಕದಲ್ಲಿ ಕೆಲವು ರಮ್ಯಅಜ್ಞಾತ ವೃತ್ತಗಳಿರುವವು. ಬೃಹಜ್ಜಾತಕವು ಶಾಸ್ತ್ರೀಯಗ್ರಂಥವಾದರೂ ಕಾಲಿದಾಸನಂತೆ ಮಿಹಿರರ ವಾಣಿ ಚಿತ್ತರಂಜಕವಾಗಿದೆ.

" ತ್ರಿದಶತ್ರಿಕೋಣ ಚತುರಸ್ರಮಾನ್
ಅವಲೋಕಯಂತಿ ಚರಣಾಭಿವೃದ್ಧಿತಃ "

ಕನ್ನಡ ಕವಿಗಳು ಅವರ ಅಜ್ಞಾತವೃತ್ತಗಳನ್ನು ಹೊರಡೆಗೆಯಲಿ. ವೈವಿಧ್ಯ, ವೈಚಿತ್ರ್ಯಗಳು ಭಾಷೆಗೆ ಸೌಂದರ್ಯವನ್ನು ಕೊಡುವವು.

ನೃಪತುಂಗನ ' ಕವಿರಾಜಮಾರ್ಗ ' ನಾಗವರ್ಮನ ' ಕಾವ್ಯಾವಲೋಕನ ' ಅಲಂಕಾರ ಗ್ರಂಥಗಳಿಗೆ ದಂಡಿಯ ಕಾವ್ಯಾದರ್ಶ ಮೊದಲಾದ ಗ್ರಂಥಗಳೇ ಆಧಾರವಾಗಿರುವವು. ಸಂಸ್ಕೃತ ಅಲಂಕಾರ ಗ್ರಂಥಗಳೆಲ್ಲವೂ ಕನ್ನಡಕ್ಕೆ ಬರಬೇಕು. ಮುರಾರಿಯವರು ಈ ವಿಷಯದಲ್ಲಿ ಮುಂದಡಿಯಿಟ್ಟಿರುವರು. ವಾಟವೇ ಮೊದಲಾದವರು ಅಲಂಕಾರ ಗ್ರಂಥಗಳನ್ನು ಬರೆದಿರುವರು. ಅಭಿನವ ಕಾವ್ಯಪ್ರಕಾಶವು ಅವರಲ್ಲಿ ಹುಟ್ಟಿಕೊಂಡಿರುವದು. ಅವರು ಸ್ವತಂತ್ರ ವಿಚಾರವನ್ನು ಮಾಡುತ್ತಲಿದ್ದಾರೆ. ನಮ್ಮಲ್ಲಿಯೂ ಕಾವ್ಯಪ್ರಕಾಶ ಅನುವಾದಿಸಲ್ಪಟ್ಟಿದೆ. ರಸಗಂಗಾಧರವೂ ಕನ್ನಡಕ್ಕೆ ಬರಬೇಕು. ರಾಜಾಶ್ರಯವು ನಿಜವಾಗಿ ಇಂತಹ ಗ್ರಂಥಗಳಿಗೆ ಸಿಕ್ಕಬೇಕು. ಬರೆ ಕಥೆ, ಕಾದಂಬರಿಗಳಿಗೆ ಹಳ್ಳಿಯ ಹಾಡುಗಳಿಗೇ ಪ್ರಾಶಸ್ತ್ಯ ಕೊಡುವಲ್ಲಿ ವಿಶೇಷ ಔಚಿತ್ಯವಿಲ್ಲ.

ನಾಗವರ್ಮನ ಕಾವ್ಯಾವಲೋಕನವನ್ನು ದಿವಂಗತ ಬಸವನಾಳರು ಸಂಪಾದಿಸಿ ಮುದ್ರಿಸಿರುವರು.

ಇಂದಿನ ಕವಿಗಳಲ್ಲಿ ಹಲವರು ಪ್ರಾಚೀನರ ವ್ಯಾಕರಣ ಅಲಂಕಾರ ಗ್ರಂಥಗಳನ್ನು ಓದಿಕೊಳ್ಳದೆ ಸಂಸ್ಕೃತಸೌಂದರ್ಯವನ್ನು ಅರಗಿಸಿಕೊಳ್ಳದೆ ಕಾವ್ಯಕಲಾವಿಲಾಸಕ್ಕಾಗಿ ಹಾತೊರೆಯುತ್ತಿರುವರು. ಪ್ರಾಚೀನರು ಗಳಿಸಿಟ್ಟ ವಿಪುಲಸಂಪತ್ತಿನ ಉಪಯೋಗ ಅವರಿಗಾಗದಿದ್ದರೆ ಅವರು ನಿಜವಾಗಿ ಭಾಗ್ಯಶಾಲಿಗಳಾಗಲಾರರು. ಅವರಲ್ಲಿ ಪ್ರತಿಭೆ ಇರಬಹುದು. ಸಂಸ್ಕಾರವಿಹೀನವಾದ ಬುದ್ಧಿಯ ಮಿಂಚು ಬರಸಿಡಿಲನಂತಿರುವದು. ನೃಪತುಂಗನ ಶೈಲಿಯನ್ನು ನೋಡಿರಿ

ಬಹಿರುದ್ಯಾನಾಂತರದೊಳ್
ಸಹಸೋದಿತ ಮತ್ತಕೋಕಿಲೋದಿತೋ
ಚ್ಚೈರ್ಧ್ವಾನಂ ।
ಮುಹುರಾಕರ್ಣಿಸೆ ಪಡೆದ
ತ್ರಹರ್ನಿಶಂ ಪೆರ್ಚನಂತರಂಗಕ್ಕೆನ್ನಾ—

ಅವನ ಶುದ್ಧೀಕರಣ ಕೂಡ ಸಂಸ್ಕೃತ ಪದಭೂಯಿಷ್ಠವಾಗಿರುವದು.

## ವ್ಯಾಕರಣ ದೃಷ್ಟಿಯಿಂದ ಭಾಗ್ಯಶಾಲಿಯಾದ ಕನ್ನಡ

ಇನ್ನು ವ್ಯಾಕರಣ ದೃಷ್ಟಿಯಿಂದ ಕನ್ನಡವು ಇತರ ದೇಶ್ಯಭಾಷೆಗಳಿಗಿಂತ ಭಾಗ್ಯಶಾಲಿಯಾಗಿದೆ. ಸಂಸ್ಕೃತದ ಅನೇಕ ವ್ಯಾಕರಣ ಗ್ರಂಥಗಳ ವಿಶಾಲತೆ ಕನ್ನಡದಲ್ಲಿ ಇಲ್ಲದಿದ್ದಂತೆ ಭಟ್ಟಾಕಲಂಕನಂತಹ ಸಾಹಸಿ ವ್ಯಾಕರಣಕಾರರು ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ಪಾಣಿನಿಯಂತೆ ಸೂತ್ರರೂಪವಾಗಿ ಬರೆಯುವ ಶೌರ್ಯವನ್ನು ತೋರಿಸಿರುವರು. ಕೇಶಿರಾಜನ ಶಬ್ದಮಣಿದರ್ಪಣವು ಮಾರ್ಮಿಕವಾಗಿ ಕನ್ನಡದಲ್ಲಿ ಕಂದರೂಪದಲ್ಲಿ ಹೆಣೆಯಲ್ಪಟ್ಟಿರುವದು. ಇದೊಂದನ್ನು ಅಧ್ಯಯನ ಮಾಡಿದರೆ ಸಾಕು. ಹಳೆಗನ್ನಡ ಕಾವ್ಯ ಜ್ಞಾನಕ್ಕೆ. ಭಟ್ಟಾಕಲಂಕನು ವ್ಯಾಕರಣ ಶಾಸ್ತ್ರ ವಿವೇಚನೆಯನ್ನು ವ್ಯಾಖ್ಯಾನದಲ್ಲಿ ಮಾಡಿರುವನು. ಬೆಳೆಯುತ್ತಿರುವ ಕನ್ನಡಕ್ಕೊಂದು ಹೊಸ ವಿಸ್ತೃತವ್ಯಾಕರಣಗ್ರಂಥವು ಇನ್ನೂ ಬರಬೇಕಾಗಿದೆ. ವಿದ್ಯಾರ್ಥಿಗಳಿಗಾಗಿ ಪಂ. ಪೂಜಾರರು, ಮುಳಬಾಗಿಲರು, ಸಾಹಿತ್ಯಪರಿಷತ್ತಿನವರು, ನುಡಿಗನ್ನಡಿ, ನುಡಿಗಟ್ಟು, ಕೈಪಿಡಿಗಳನ್ನು ರಚಿಸಿದ್ದರೂ ಅವುಗಳ ಅಧ್ಯಯನವು ಇಂದು ಹೊಸ ಪದ್ಧತಿಯ ಭ್ರಮೆಯಲ್ಲಿ ಕಣ್ಮರೆಯಾಗಿದೆ. ಸಾಹಿತ್ಯ ಪರಿಷತ್ತಿನವರು ಹೊಸ-ಹಳೆ ಎರಡೂ ದೃಷ್ಟಿಯನ್ನಿಟ್ಟುಕೊಂಡು ಒಂದು ವಿಸ್ತೃತ ವ್ಯಾಕರಣವನ್ನು ರಚಿಸಲಿ. ಇದರಿಂದ ಪಾಣಿನ್ಯಮರ ಜೈನೇಂದ್ರಾದಿಗಳು ತುಷ್ಟರಾಗುವರಲ್ಲದೆ ನಾಗವರ್ಮ ಭಟ್ಟಾಕಲಂಕ ಕೇಶಿರಾಜರೂ ಇಂದ್ರನ ನಂದನವನದಲ್ಲಿ ಕುಳಿತು ಇವರನ್ನು ಆಶೀರ್ವದಿಸುವರು.

## ಕನ್ನಡಕ್ಕೆ ಔನ್ನತ್ಯ ಗಳಿಸಿಕೊಟ್ಟ ರನ್ನ

ರನ್ನನು ಓಜೋಗುಣದಿಂದ ಕನ್ನಡಕ್ಕೆ ಔನ್ನತ್ಯವನ್ನು ಸಾಧಿಸಿದ ಕವಿ. ಅವನು ವೀರರಸಕ್ಕೆ ಕಲ್ಪನಾಶಕ್ತಿಗೆ ಪ್ರಾಯಶಃ ಭಟ್ಟನಾರಾಯಣನ ವೇಣೀಸಂಹಾರಕ್ಕೆ ಋಣಿಯಾಗಿರುವನು.

"ಅದ್ಯೈಕಂ ದಿವಸಂ ಮಮಾಸಿ ನ ಗುರುರ್ನಾಹಂ ವಿಧೇಯಸ್ತವ"

" ಅನುಂ ಒಂದು ದಿವಸಂ ವಿಧೇಯನಲ್ಲ. ನೀನುಂ ಗುರುವಲ್ಲ." ಇವು ಭಟ್ಟನಾರಾಯಣನ ಉಕ್ತಿಗಳೇ. ಆದರೆ ರನ್ನನು ನಮ[ಗೆ] ಮಾಡಿದ ಉಪಕಾರ ವೆಗ್ಗಳವಾಗಿದೆ. ಕನ್ನಡ[ವು] ಕರುಣ ಶೃಂಗಾರಗಳಿಗಿಂತ ವೀರರಸಕ್ಕುಚಿ[ತ] ಭಾಷೆಯಾಗಿದೆ. ಹಲವು ಕಡೆಗೆ ರನ್ನನ ಕಾ[ವ್ಯ]ದಲ್ಲಿ ವೇಣೀಸಂಹಾರಕ್ಕಿಂತ ಕೊಂಚ ಹೆಚ್ಚಾ[ಗಿ] ವೀರರಸವು ಓತಪ್ರೋತವಾಗಿ ಹರಿಯುತ್ತದೆ. ಭೀಮನ ನುಡಿಗಳನ್ನು ನೀವು ನೋಡ[]ಬಹುದು. ' ಇದು ಲಾಕ್ಷಾಗೇಹದಾಹಕ್ಕಿದು...' ಇತ್ಯಾದಿ.

ದುರ್ಯೋಧನನು ಸರೋವರದಲ್ಲಿ ಅಡಗಿಕೊಂಡಿರುವಾಗ ಭೀಮನು ಹಂಗಿಸಿದ ನುಡಿಗಳಿವು.

" ಹರಿ ಸಂಧಾನಕ್ಕೆ ವಂದಂದವಘಡಿಸಿದ
ಹಂಕಾರವೆಲ್ಲಿತ್ತೊ ಕೃಷ್ಣಾಂಬರಕೇಶಾಕೃಷ್ಟಿ
ಯಂ ಮಾಡಿಸಿದ ಮದಮೆಲ್ಲಿತ್ತೊ ಕೌಂತೇ
ಯರಂ ಮುಚ್ಚರದಿಂ ಕಾಂತಾರದೊಳ್ ತಿರ್ರ
ತಿರುಪಿದ ಸೊರ್ಕೀಗಳೇನಾದುದೆಂದಾ
ಕುರುವಂಶಾಧೀಶನಂ ಮೂದಲಿಸಿದನದಟಂ
ಭೀಮನುದ್ದಾಮಭೀಮಂ "—

ವೀರರಸೋಚಿತ ನುಡಿಗಳಿವು. ವೇಣೀಸಂಹಾರದಲ್ಲಿ ಭೀಮನು ಧೃತರಾಷ್ಟ್ರನನ್ನು ನಮಸ್ಕರಿಸುವಾಗ ಅವನ ಉದ್ಧಾಮತನವೇ ವ್ಯಕ್ತವಾಗಿರುವದು. " . . . . . ಭಂಕ್ತಾ ಸುಯೋಧನಸ್ಯೋರ್ವೋರ್ಭೀಮೋಯಂ ಶಿರಸಾಂಚತಿ "

## ಹರಿಹರನ " ಗಿರಿಜಾ ಕಲ್ಯಾಣ "

ಗಿರಿಜಾಕಲ್ಯಾಣವನ್ನು ಬರೆದ ಹರಿಹರನ ಕಾವ್ಯವನ್ನು ನೋಡೋಣ. ವಟುವೇಷಧಾರಿ ಶಿವನು, ಶಿವನ ವಿಡಂಬನೆಗೈದ ಪದ್ಯಗಳು ಕುಮಾರಸಂಭವದ ಪದ್ಯಗಳ ಭಾವವನ್ನು ಪ್ರಾಯಶಃ ಅನುಕರಿಸಿರುವವು. "ವಿಲೋಕ್ಯ ವೃದ್ಧೋಕ್ಷ ಮಧಿಷ್ಠಿತಂ ತ್ವಯಾ ಮಹಾಜನಃ ಸ್ಮೇರಮುಖೋ ಭವಿಷ್ಯತಿ". ( ತ್ರಿಲೋಕ ಸುಂದರಿಯಾದ ನಿನ್ನನ್ನು ಶಿವನೊಡನೆ ಮುದಿ ಎತ್ತಿನ ಮೇಲೆ ಕೂಡಿಸಿ ಮೆರವಣಿಗೆ ತೆಗೆದಾಗ ಮಹಾಜನರು ನಗುತ್ತಾರೆ. )

ಇದು ಷಡಕ್ಷರಿಯ ಕವಿತಾವಿನ್ಯಾಸ, ದೇವಿಯ ಸ್ತುತಿಪರ ಪದ್ಯಗಳು—

ನಮದಮರವಧೂಟೀ ಕುಂತಲಸ್ರಸ್ತಮಾಲಾ
ಸಮುದಿತ ಮಕರಂದೋತ್ಸಿಕ್ತ ಪಾದಾಂಬು
ಜಾತೇ
ಕನಕಕಮಳಜಸ್ತ್ರೀಗೇಯಮಾನಾಂಕಮಾಲಾ-
ಸಮುದಯೆ ದಯೆಯಿಂದಂ ದೇವಿರಕ್ಷಿಪು
ದೆಮ್ಮಂ ॥ ೧ ॥

ವ್ಯಾನಮ್ರ ಶ್ರೀ ಮುಖ ಸುರವಧೂ ವಕ್ತ್ರಪದ್ಮ
ಪ್ರಭಾಂಭಃ ।
ಸ್ನಾನೋನ್ಮೀಲತ್ಪದಕಮಲೆ ಕಲ್ಯಾಣಿ ಕಲ್ಯಾಣ
ಶೈಲಾ ।

ನೂನಾಸ್ಥಾಸಾಶ್ರಿತ ಸಿತಗಳಾಂಕಸ್ಥಳಾ ರೂಢೆ
ಗೌರೀ ।
ನೀನೆನ್ನಂ ರಕ್ಷಿಪುದು ಸತತಂ ಸತ್ಯವಾಣೀ
ಮೃಡಾನೀ । ॥ ೨ ॥

ಸಾರಸಾರಸಮಾನಲೋಚನ ಕಾಂತಕಾಂತಿ
ಯುತಾನನೇ ।
ಭೂರಿ ಭೂರಿಪುಸಂಘ ಸಂಹೃತಿಶಕ್ತಿ ಶಕ್ತಿಸಮ
ನ್ವಿತೇ ।
ಮಾರಮಾರಣ ದಕ್ಷದಕ್ಷಮದಾಪಹಾಂಕ ವಿರಾ
ಜಿತೇ ।
ಧೀರ ಧೀರತಿಪಾಲ ಪಾಲನಶೀಲೆ ಪಾಲಿಪು
ದಂಬಿಕೇ ॥ ೩ ॥

ಈ ಪದ್ಯಗಳಲ್ಲಿ ೪ ನೇ ಚರಣದಲ್ಲಿ ಕೊಂಚ ಪರಿವರ್ತಿತವಾದರೆ ಸಾಕು. ಇಡೀ ಪದ್ಯಗಳು ಸಂಸ್ಕೃತವಾಗುವವು. ಇದರಿಂದ ಷಡಕ್ಷರಿಯ ಕಾವ್ಯವು ಸಂಸ್ಕೃತ ಪ್ರಭಾವದಿಂದಲೇ ರಂಜಿತವಾಗಿರುವದು ಕಂಡು ಬರುವದು. ಇಂದಿನ ಕವಿಗಳಿಗೆ ಹೇಗೆ ಆಂಗ್ಲಸಾಹಿತ್ಯವೋ ಹಾಗೆ ಸಂಸ್ಕೃತ ಸಾಹಿತ್ಯವು ಪ್ರಾಚೀನ ಕವಿಗಳಿಗೆ ಪೋಷಕವಾಗಿತ್ತು.

## ನೀತಿಶತಕಗಳು

ಸಂಸ್ಕೃತದಲ್ಲಿ ಭಲ್ಲಟಶತಕ, ಭರ್ತೃಹರಿ ನೀತಿ ಶತಕ ಮೊದಲಾದ ಉಪದೇಶಪರ ಶತಕಕಾವ್ಯಗಳು ಇರುವವು. ಅವುಗಳ ಪರಿಣಾಮವು ತ್ರಿಲೋಕಶತಕ, ರತ್ನಾಕರಶತಕ, ಸೋಮೇಶ್ವರಶತಕಗಳ ಮೇಲೆ ಆದದ್ದು ಕಂಡು ಬರುವದು.

ಪಾಲ್ಕುರಿಕೆಸೋಮನ ಸುಂದರಪದ್ಯವಿದು-
“ಅವಿನೀತಂ- ಮಗನೇ? ಅಶೌಚಿ ಗುಣಿಯೇ ದೈವಾಕೆ ತಾಂ ಪತ್ನಿಯೇ? । ಸವಿಗೆಟ್ಟನ್ನವ ದೂಟವೇ ಕುಜನರೊಳ್ ಕೂಡಿರ್ಪವಂ ಮಾನ್ಯನೇ? । ಬವರಕ್ಕಾಗದ ಬಂಟನೇ ಎಡರಿಗಂ ತಾನಾಗದಂ ನಂಟನೇ? । ಶಿವನಂ ಬಿಟ್ಟವ ಶಿಷ್ಯನೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥

ಪ್ರೀಣಾತಿ ಯಃ ಸುಚರಿತ್ರೈಃ ಪಿತರಂ ಸ ಪುತ್ರೋ
ಯದ್ಭರ್ತುರೇವ ಹಿತಮಿಚ್ಛತಿ ತತ್ಕಲತ್ರಂ ।
ತನ್ಮಿತ್ರಮಾಪದಿ ಸುಖೇ ಚ ಸಮಕ್ರಿಯಂ
ಯತ್ ।
ಏತತ್ತ್ರಯಂ ಜಗತಿ ಪುಣ್ಯಕೃತೋ ಲಭಂತೇ ॥

ಸೋಮೇಶ್ವರನು ಈ ಮಾತುಗಳನ್ನು ನಿಷೇಧಾರ್ಥದಲ್ಲಿ ಬಳಸಿಕೊಂಡಿರುವನು.

ಇದು ರತ್ನಾಕರನ ಪದ್ಯ—

ಪುಣ್ಯಂ ಗೆಯ್ಯದೆ ಪೂರ್ವದೊಳ್ ಬಱಿದೆ
ತಾನೀಗಳ್ ಮನಂ ನೋಯೆ ಲಾ ।
ವಣ್ಯಕ್ಕಾಭರಣಕ್ಕೆ ಭೋಗಕೆನಸುಂ ರಾಗಕ್ಕೆ
ಚಾಗಕ್ಕೆ ಕಾ ।
ರುಣ್ಯಕ್ಕಗ್ಗದ ಲಕ್ಷ್ಮಿಗಂ ಬಯಸಿ ಬಾಯಂ
ಬಿಟ್ಟು ಕಾಂಕ್ಷಾಮಹಾ ।
ರಣ್ಯಂಬೊಕ್ಕಕಟೇಕೆ ಚಿಂತಿಸುವರೋ ರತ್ನಾ
ಕರಾಧೀಶ್ವರಾ ॥

ಇಂತಹ ನೈತಿಕ ಪದ್ಯಗಳನ್ನು ಇಂದಿನ ವಿದ್ಯಾರ್ಥಿಗಳು ಪಾಠಮಾಡಬೇಕು—

“ಶಾಸ್ತ್ರಂ ಬಂದೊಡೆ ಶಾಂತಿ ಸೈರಣೆ ನಿಗರ್ವಂ
ನೀತಿ ಮೆಲ್ಲಾತು ಮು ।
ಕ್ತಿ ಸ್ತ್ರೀಚಿಂತೆ ನಿಜಾತ್ಮಚಿಂತೆ ನಿಲವೇಟ್ಕಂತಲ್ಲದಾ
ಶಾಸ್ತ್ರದಿಂ ।
ದುಃಸ್ತ್ರೀಚಿಂತನೆ ದುರ್ಮುಖಂ ಕಲಹಮುದ್ಗ-
ರ್ವಂ ಮನಂಗೊಂಡೊಡಾ ।
ಶಾಸ್ತ್ರಂ ಶಸ್ತ್ರಮೆ ಶಾಸ್ತ್ರಿ ಶಸ್ತ್ರಿಕನಲಾ ರತ್ನಾಕರಾ-
ಧೀಶ್ವರಾ ॥

ಶುಕ್ರನೀತಿ, ಚಾಣಕ್ಯನೀತಿ, ಧೌಮ್ಯನೀತಿ, ಮುಂತಾದ ಸಂಸ್ಕೃತ ನೀತಿಗ್ರಂಥಗಳ ಪರಿಣಾಮವು ಕನ್ನಡ ಕಾವ್ಯಕರ್ತರ ಮೇಲಾಗಿರುವದು.

## ಶಾಸ್ತ್ರ ವಿಷಯಕ ಗ್ರಂಥಗಳು

ಕನ್ನಡದಲ್ಲಿ ಜ್ಯೋತಿಷ್ಯ ವೈದ್ಯಕ ಗ್ರಂಥಗಳಿರುವವು. ಕೋಶಗ್ರಂಥಗಳಿರುವವು. ಇವುಗಳಲ್ಲೆಲ್ಲಾ ಸಂಸ್ಕೃತ ಗ್ರಂಥಗಳ ಪಡಿನೆಳಲು ಮೂಡಿರುವದು ಕಂಡು ಬರುವದು.

ಜಾತಕ ತಿಲಕ :— ಇದನ್ನು ಶ್ರೀಧರಾಚಾರ್ಯನು ೧೧ನೇ ಶತಕದಲ್ಲಿ ಬರೆದಿರುವರು.

ಅಸಮಾಲಯದೊಳ್ ನಿಲೆ ಸೂ। ರ್ಯಸುರೇಜ್ಯರ್ ಬಳಯುತರ್ ನರಂ ಪುಟ್ಟುಗುಮಾ। ಅಸಿತೇಂದುಗಳತಿಬಳರಾ । ಗಿ ಸಮದೊಳಿರೆ ರಮಣಿ ಪುಟ್ಟಗುಂ ಬುಧಮಿತ್ರಾ। “ವಿಷಮಸ್ಥಿತೇರ್ಕಪುತ್ರೇ ಸುತಸ್ಯ ಜನ್ಮ” ಎಂದು ವರಾಹಮಿಹಿರರ ಮಗ ಪೃಥುಯಶನು ಹೇಳುವನು.

ಲಗ್ನಾರ್ಕ ಗುರ್ವಿಂದುಭಿಃ ಪುಂಜನ್ಮ ಪ್ರವದೇತ್
ಸಮಾಂಶಕಗತೈ ಯುಗ್ಮೇಷು ತೈರ್ಯೋಷಿತಃ।

ಎಂದು ವರಾಹಮಿಹಿರರು ಹೇಳುತ್ತಾರೆ.

ದೀರ್ಘಾಯು —ತ್ರಿದಶಾಧೀಶ್ವರ ಮಂತ್ರಿ ಶೀತಕರರೆಂಬೀಯಿರ್ವರುಂ ಕರ್ಕಿಗೇ। ಹದೊಳಿರ್ದಂದು, ಶಶಾಂಕಸೂನು ಸಿತರೆಂಬೀಯಿರ್ವರುಂ ಕೇಂದ್ರಗೇ। ಹದೊಳಿರ್ದಂದು ರಿಪುತ್ರಿಲಾಭ ಗೃಹದೊಳ್ ಮಿಕ್ಕನ್ಯರಿರ್ದಂದು ಪು। ಟ್ಟಿದ ಮರ್ತ್ಯಂಗೆ ಚಿರಾಯು ಸಂಭವಿಸುಗುಂ ಸಂಯಕ್ತ್ವರತ್ನಾಕರಾ.

ಬಂಧ್ವಾಸ್ಪದೋದಯ ವಿಲಗ್ನಗತೌ ಕುಲೀರೇ।
ಗೀರ್ವಾಣನಾಥಸಚಿವಃ ಸಕಲಶ್ಚಚಂದ್ರಃ।
ಜೂಕೇ ರವೀಂದು ತನಯೌ ಅಪರೇ ಚ
ಲಾಭೇ।
ದುಶ್ಚಿಕ್ಯ ಶತ್ರುಭವನೇ ತ್ವಮಿತಂ ತದಾಯುಃ

ಲಗ್ನ ದಶಮ ಚತುರ್ಥ ಕೇಂದ್ರದಲ್ಲಿ ಕರ್ಕಹಲ್ಲಿ ಗುರು ಚಂದ್ರರಿರಬೇಕು. ತುಲೆಯಲ್ಲಿ ಬುಧ ಶನಿಗಳು ಇತರರು ೩-೬-೧೧ ರಲ್ಲಿದ್ದರೆ ಅಮಿತಾಯುವೆನಿಸುವನು. ಸಾರಾವಲಿ ಬೃಹತ್ಪಾರಾಶರ ನೋಡಿರಿ.

ರಾಶೌ ಕರ್ಕಟ ಹೋರಾಯಾಂ ಗುರುಶುಕ್ರೌ
ಸಮನ್ವಿತೌ ।
ಗುರುಶ್ಚಂದ್ರಯುತೋವಾಪಿ ನಿಧನೇ ನ ಚ
ಕಶ್ಚನ।
ನ ಚ ಕೇಂದ್ರಗತಾಃ ಪಾಪಾಃ ನ ತ್ರಿಕೋಣೇ ಚ
ಜಾಯತೇ ।
ತಸ್ಯಾಯುರಮರಪ್ರಖ್ಯಂ ನಿಶ್ಚಯೇನ ತು
ಕೀರ್ತ್ಯತೇ ॥

ಜಾತಕ ತಿಲಕದೊಳಗಿನ ಪದ್ಯಗಳೆಲ್ಲ ಸಾರಾವಲ್ಯಾದಿ ಗ್ರಂಥಗಳ ಅನುವಾದಗಳಾಗಿರುವವು. ‘ಮಾವು ಬರೆ ನವಣೆ ಬೆಳೆಗುಂ ಬೇವಿನೊಳೆಳ್ಳಕ್ಕುಮೆಸೆವ ಹುಣಸೆಗಳೊದವಿಂ ಭಾವಿಸೆ ನೆಲ್ಲುಂ ಬೆಳೆದಪುದು’, ರಟ್ಟಮತ ಸಂಹಿತಾ ಗ್ರಂಥಗಳನ್ನು ಅನುಸರಿಸಿದೆ.

ಕೋಶ ಗ್ರಂಥಗಳಲ್ಲಿ ಅಮರುಕವು ಸಂಸ್ಕೃತದ ಅಮರಕೋಶದ ಭಾಷಾಂತರವು. ಇದನ್ನು ದೇವರಾಜನು ೧೫ನೇ ಶತಕದಲ್ಲಿ ಬರೆದಿರುವನು. ಅಶ್ವಶಾಸ್ತ್ರವು ಶಾಲಿಹೋತ್ರನ ಕನ್ನಡ ಭಾಷಾಂತರ. ಯಾವ ಶಾಸ್ತ್ರವನ್ನೇ ಪ್ರಾಚೀನರು ಬರೆದಿರಲಿ. ಸಂಸ್ಕೃತವನ್ನು ಬಿಟ್ಟು ಹೆಜ್ಜೆ ಇಟ್ಟಿಲ್ಲವೆಂಬುದು ಸ್ಪಷ್ಟವಿರುವದು.

## ಕುಮಾರವ್ಯಾಸ-ಲಕ್ಷ್ಮೀಶ

ಕುಮಾರವ್ಯಾಸ — ಲಕ್ಷ್ಮೀಶರಂತಹ ಲೋಕಪ್ರಿಯ ಕವಿಗಳು ಎನಿತೊಂದು ಸಂಸ್ಕೃತ ಶೈಲಿಗೆ ರಸಾಲಂಕಾರಗಳಿಗೆ ಅಂಟಿಕೊಂಡಿರುವರು. ಇದು ಎಲ್ಲರಿಗೂ ತಿಳಿದ ವಿಷಯ. ಕುಮಾರವ್ಯಾಸನ ದ್ರೌಪದಿಯ ವರ್ಣನೆಯಿದು.

“ಪರಿಮಳದ ಪರಮಾಣುಗಳ ಸಂ। ವರಿಸಿ ಮುಕ್ತಾಫಲದ ಕೆಂದಾ। ವರೆಯ ಮಱಿದುಂಬಿಗಳ ವರ್ಣಾಂತರವನಳವಡಿಸಿ । ಸರಸವೀಣಾ ಧ್ವನಿಯ ಹಂಸೆಯ। ಗರುವಗತಿಗಳನಾಯ್ದು ಮನ್ಮಥ। ವರವಿರಿಂಚಿಯೆ ಸೃಜಿಸಿದನು ಪಾಂಚಾಲನಂದನೆಯಾ”

ಇದನ್ನು ಈ ಮುಂದಿನ “ಅಸ್ಯಾಃ ಸರ್ಗವಿಧೌ ಪ್ರಜಾಪತಿರಭೂತ್ ಚಂದ್ರೋ ನು ಕಾಂತಿಪ್ರದಃ ಶೃಂಗಾರೈಕರಸಃ ಸ್ವಯಂ ನು ಮದನೋ ಮಾಸೋ ನು ಪುಷ್ಪಾಕರಃ। ವೇದಾಭ್ಯಾಸ ಜಡಃ ಸ್ವಯಂ ನು ವಿಷಯವ್ಯಾವೃತ್ತಕೌತೂಹಲೋ ನಿರ್ಮಾತುಂ ಪ್ರಭವೇನ್ಮನೋಹರಮಿದಂ ರೂಪಂ ಪುರಾಣೋ ಮುನಿಃ” ಈ ಕಾಳಿದಾಸನ ಪದ್ಯದೊಡನೆ ತುಲನೆ ಮಾಡಿ ನೋಡಬೇಕು.

ಕನ್ನಡ ಪ್ರಖ್ಯಾತ ಕವಿಗಳ ಕಾವ್ಯದಲ್ಲಿ ಯಂತೂ ಸಂಸ್ಕೃತ ಕಾವ್ಯಪ್ರಭಾವವು ಅಚ್ಚಳಿಯದೆ ತೋರಿಬರುವದು.

ಪಾಣಿನಿಯ ಪಾತಾಳವಿಜಯದ ಈ ಪದ್ಯವನ್ನು ನೋಡಿರಿ. "ನಿರೀಕ್ಷ್ಯವಿದ್ಯುನ್ನಯನೈಃ ಪಯೋದೋ। ಮುಖಂ ನಿಶಾಯಾಮಭಿಸಾರಿಕಾಯಾಃ। ಧಾರಾನಿಪಾತೈಃ ಸಹ ಕಿಂನು ವಾಂತಃ ಚಂದ್ರೋಯಮಿತ್ಯಾರ್ತತರಂ ರರಾಸೇ. ಇದರ ಅನುವಾದವನ್ನು ಕನ್ನಡದ ಆದಿಕವಿಯೇ ತನ್ನ ಕಾವ್ಯದಲ್ಲಿ ಸೇರಿಸಿದ್ದಾನೆ. ಇದನ್ನು ನೋಡಿದರೆ ರಾಜಶೇಖರನು ನುಡಿದಂತೆ,

ನಾಸ್ತ್ಯಚೋರಃ ಕವಿಜನಃ ನಾಸ್ತ್ಯಚೋರೋ ವಣಿಗ್ಜನಃ
ವಿನಾ ನಂದತಿ ಯೋ ವಾಚ್ಯಂ ಯೋ ಜಾನಾತಿ ನಿಗೂಹಿತಂ ।

ಎಂಬ ಪದ್ಯವು ನೆನಪಾಗುವದು. ಚೋರನಲ್ಲದ ಕವಿಯಿಲ್ಲ. ಚೌರ್ಯವಿಲ್ಲದ ವಾಣಿಜ್ಯವಿಲ್ಲ. ವಾಚ್ಯವನ್ನು ಮುಚ್ಚಬಲ್ಲವನೇ ಜಾಣನು. ನವಕಾವ್ಯವೆಂದರೆ ಹಳೆಯದಕ್ಕೆ ಹೊಸದೊಂದು ಬಣ್ಣಕೊಟ್ಟು ಹೇಳುವದು. ರಸವಿಲ್ಲದೇ ಕೇವಲ ಬಣ್ಣ ಕೊಟ್ಟರೆ ಅದು ಕೇವಲ ಕರ್ಣಿಕಾರ ಕುಸುಮವಾಗುವದು.

## ಆಧುನಿಕ ಕವಿಗಳು

ಆಧುನಿಕ ಕವಿಗಳಲ್ಲಿ ಇಂಗ್ಲೀಷ ಸಾಹಿತ್ಯದ ಪ್ರಭಾವ ತೋರಿದರೂ ಸಂಸ್ಕೃತಪ್ರಭಾವದಿಂದ ಅವರೂ ದೂರವಾಗಿಲ್ಲ. ಶ್ರೀ ಬೇಂದ್ರೆಯವರ ರಮ್ಯವಾದ ಲೋಕಪ್ರಿಯವಾದ "ಕೊಳಲನೂದಿದ ಕೃಷ್ಣ, ಕೊಳಲನೂದಿದ," ಎಂಬ ಗೀತದಲ್ಲಿ ಭಾಗವತದ ಗೋಪಿಗೀತ, ವೇಣುಗೀತಗಳ ಛಾಯೆಯಿರುವದು. ಆದರೆ ಇವರು ಅರ್ಧ ಶಿಕ್ಷಿತ ಕನ್ನಡಿಗರಿಗೂ ಕೂಡ ಪಚನವಾಗುವ ಶೈಲಿಯಲ್ಲಿ, ಧಾಟಿಯಲ್ಲಿ ಹೇಳಿದ್ದಾರೆ. ಅನೇಕ ಕಡೆಗೆ ಅವರ ಸ್ವತಂತ್ರ ಪ್ರತಿಭೆಯ ಮಿಂಚು ಹೊಳೆಯುತ್ತಿರುವದು. ಪುಟ್ಟಪ್ಪನವರ ಗೀತಗಳು ಸಹ ವಿಪುಲರಮ್ಯ ಸಂಸ್ಕೃತ ಪದಗಳಿಂದ ಸೌಂದರ್ಯ ಸೂಸಿ ಚಿಮ್ಮುತ್ತಿರುವವು. ಅವರು ತಮ್ಮ ಸ್ಫುಟ ಕವಿತೆಗಳಿಂದ ಕನ್ನಡಸಾಹಿತ್ಯಕ್ಕೊಂದು ಉಪಕಾರವಮಾಡಿದ್ದಾರೆ. ಅವರ ಶಬ್ದಗಳು (ಸ್ಫುಟ ಕವಿತೆಯೊಳಗಿನ) ಭವಭೂತಿಯಂತೆ ಸ್ಫೂರ್ತಿಯನ್ನು ಕೊಡುತ್ತಿವೆ. ನಮ್ಮ ಕನ್ನಡನಾಡಿನಲ್ಲಿ ಇನ್ನು ಬೇಗ ರವೀಂದ್ರರಂತಹ ವಿಶ್ವಕವಿಗಳೂ ಹುಟ್ಟಬಹುದು.

ಕನ್ನಡ ಕವಿ ನೇಮಿಚಂದ್ರನು ಹೇಳುತ್ತಾನೆ 'ಬೆಲೆಯಿಂದಕ್ಕುಮೆ ಕೃತಿ ಗಾವಿಲ, ಭುವನದ ಭಾಗ್ಯದಿಂದಮಕ್ಕುಂ ನೋಳ್ಪಂ। ಬೆಲೆಗೊಟ್ಟು ತಾರಮಧುಪಂ ಮಲಯಾನಿಲನಂ ಮನೋಜನಂ ಕೌಮುದಿಯಂ।

ಧನದಿಂದ ಮಹಾಕವಿಗಳು ಹುಟ್ಟಲಾರರು. ಭುವನದ ಭಾಗ್ಯೋದಯದ ಕಾಲ ಬಂದಾಗ ಮಹಾಕವಿಗಳು ಹುಟ್ಟುವರು. ಬೆಲೆಗೊಟ್ಟರೆ ವಸಂತ, ಮಲಯಾನಿಲ, ಕಾಮ, ಬೆಳದಿಂಗಳು ಇವುಗಳನ್ನು ತರುವದು ಸಾಧ್ಯವೇ? ಎಂದು ವಿಶ್ವಕವಿಗಳು ಧನದಿಂದಾಗಲಿ, ರಾಜಾಶ್ರಯದಿಂದಲಾಗಲಿ ಹುಟ್ಟುವದಿಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾನೆ. ನೇಮಿಚಂದ್ರನ ಲೀಲಾವತಿ ನೇಮಿನಾಥ ಪುರಾಣಗಳನ್ನು ನೋಡಿರಿ. ಪಂಪರನ್ನಾದಿಜೈನಕವಿಗಳಂತೆ ಈತನೂ ಸಂಸ್ಕೃತಪ್ರಭಾವಕ್ಕೆ ಒಳಗಾಗಿರುವನು.

## ಗದ್ಯ ಕಾವ್ಯಗಳು

ಗದ್ಯ ಕಾವ್ಯಗಳಲ್ಲಿಯೂ ಅದೇ ಪ್ರಭಾವ ಬಿದ್ದಿರುವದು. ದುರ್ಗಸಿಂಹನ ಪಂಚತಂತ್ರ ವಿಷ್ಣುಶರ್ಮನ ಪಂಚತಂತ್ರವನ್ನು ಅನುಸರಿಸಿ ಬರೆಯಲ್ಪಟ್ಟಿರುವದು. ವಸುನಾಗಭಟ್ಟನ ಕೈವಾಡವೂ ಇರಬಹುದು. ತಿರುಮಲಾರ್ಯನು ಅಪ್ರತಿಮವೀರಚರಿತದಲ್ಲಿ ಬಾಣಭಟ್ಟನ ಗದ್ಯಶೈಲಿಯನ್ನು ಅನುಕರಿಸಲು ತಿಣುಕಿರುವನು. ಮುದ್ದಣನ ರಾಮಾಶ್ವಮೇಧವು "ನೀರಿಳಿಯದ ಗಂಟಲೊಳ್" ಕಡುಬಂ ತುರುಕಿದಂತಾಯ್ತು ಎಂದು ಹೆಂಡತಿ ಎಚ್ಚರವನ್ನು ಕೊಟ್ಟರೂ ಅದರ ಶೈಲಿ, ವಾತ್ಸ್ಯಾಯನ ಮುನಿಯ ಕಥಾನುವಾದದ ಸೊಗಸು ಇವುಗಳಲ್ಲಿ ಅವನೂ ಸಂಸ್ಕೃತಕ್ಕೆ ಋಣಿಯಾಗಿರುವನು. ಆದರೆ ಅವನು ಕೂಡಿಸಿದ ಕನ್ನಡದ ಚೌಕಟ್ಟಿನಲ್ಲಿ ಸೊಗಸು ಇರುವದು. ಸೌಂದರ್ಯವಿರುವದು, ಕನ್ನಡವು ದ್ರವಿಡ ವರ್ಗದ್ದೆಂದು ತಲೆತಗ್ಗಿಸುವ ಕಾರಣವಿಲ್ಲ. ಶಂಕರಾಚಾರ್ಯ ಅಪ್ಪಯ್ಯ ದೀಕ್ಷಿತರಂಥ ದ್ರವಿಡ ಶಿಶುಗಳು ಸಂಸ್ಕೃತಕ್ಕೆ ಶಾಶ್ವತ ಕಾಣಿಕೆಯನ್ನು ಕೊಟ್ಟಿರುವರು. ಇಂದಿನ ಕನ್ನಡ ಕವಿಗಳೂ ಪುಟ್ಟಪ್ಪನವರು ಹೇಳಿದಂತೆ. "ನಡೆ ನುಗ್ಗು ನಡೆ ನುಗ್ಗು ನಡೆ ಮುಂದೆ ನೀನು. ವೇದಾಂತ ಕೇಸರಿಯೇ ನಡೆ ನುಗ್ಗು ಮುಂದೆ" ಎಂಬಂತೆ. ಸಂಸ್ಕೃತ ಮಾಧುರ್ಯವನ್ನು ಸವಿದು ಆಂಗ್ಲ ಸಾಹಿತ್ಯದ ಓಜಸ್ಸನ್ನೂ ತಣಿದು ವಿಶ್ವಸಾಹಿತ್ಯದಲ್ಲಿ ಮಾನ್ಯತೆಯನ್ನು ಪಡೆಯಬೇಕಾಗಿದೆ.

ಶ್ರೀಕಂಠಯ್ಯನವರ ಅನೇಕ ಭಾಷಣಗಳ ಬಾಣನ ಭಾಷಾಪ್ರಭುತ್ವ ಶೈಲಿ ಅಡಕವಾಗಿತ್ತು. ಅವರ ಭಾಷಣವನ್ನು ಕೇಳಿದಾ ಗೋವರ್ಧನ ಕವಿ ಬಾಣಭಟ್ಟನನ್ನು ಹೊಗಳಿದಾಗ "ಪ್ರಾಗಲ್ಭ್ಯಮಧಿಕಮಾಪ್ತು ವಾಣೀ ಬಾಣೋ ಬಭೂವೇತಿ". ಎಂದು ವರ್ಣಿಸಬೇಕೆಂದು ಅನಿಸುತ್ತಿತ್ತು. ಅವರು ನಿಜವಾಗಿ ಕನ್ನಡದ ಬಾಣಭಟ್ಟರು.

ಕನ್ನಡಕ್ಕೆ ಮಹೋಪಕಾರ ಮಾಡಿ ಅನೇಕ ಭಾಷಾವಿಶಾರದರಾದ ಆರ್. ನರಸಿಂಹಾಚಾರ್ಯರ ನೀತಿಮಂಜರೀ ಕಾವ್ಯವನ್ನು ನೋಡಿರಿ. ಇದು ತಮಿಳು ಕವಯಿತ್ರಿಯ ಅನುವಾದವಾದರೂ ಹಳೆಗನ್ನಡದ ಪಾಂಡಿತ್ಯ ದಿಂದ ಕೂಡಿದ್ದರೂ ಸಂಸ್ಕೃತದ ಲಾವಣ್ಯ ಬೆರೆತುಕೊಳ್ಳದೆ ಇಲ್ಲ. ಇದರ ಮೊದಲನೆ ಪದ್ಯವನ್ನೇ ನೋಡಿರಿ.

"ಇಂಗಡಲ ಕುವರಿ ವಕ್ಷೋ। ರಂಗದೊಳ್ ಅಸಮಾನ ಶೋಭೆಯಂ ಬೀರೆ ತಟಿ। ತ್ಸಂಗದೊ ತೊಳಗುವ ಮುಗಿಲ ಬೆ। ಡಂಗಂ ಕೃಷ್ಣ ನೆ ಗೀಗೆ ಸೌಖ್ಯಂ ॥

ಲಕ್ಷ್ಮಿಯನ್ನು ಆಲಿಂಗಿಸಿದ ವಿಷ್ಣು, ತಟಿತ್ ಸಂಗದಿಂದ ತೊಳಗುವ ಮೋಡದಂತೆ ಕಾಣು ತ್ತಾನೆ.

ಕಾಲಿದಾಸನ ಯಕ್ಷನು ಮೇಘಕ್ಕೆ ಹೇ ಕೊಳ್ಳುವನು. "ನನ್ನಂತೆ ನೀನು ನಿನ್ನ ಪ್ರಿಯ ತಮೆಯಾದ ವಿದ್ಯುತ್ತಿನಿಂದ ಎಂದೂ ಅಗ ಬೇಡ":

ಮಾ ಭೂ ದೇವಂ ಕ್ಷಣಮಪಿ ಚ ತೆ ವಿದ್ಯುತಾ ವಿಪ್ರಯೋಗಃ. ನರಸಿಂಹಾಚಾರ್ಯರ ನೀತಿ ಮಂಜರಿ ಇಂದಿನ ವಿದ್ಯಾರ್ಥಿಗಳ ಪ ಪುಸ್ತಕವಾಗಬೇಕು.

'ಲೋಚನರಹಿತಂ ಪ್ರೇಕ್ಷಣವಾಚಾಲ ಯಿಂದ ನಗೆಗೆ ಪಕ್ಕಾಗಿರನೇ" ಹಳೆಗನ್ನ ಪಾಂಡಿತ್ಯವೂ ಇಲ್ಲಿ ಸಾಕಷ್ಟು ತೋರುವದು "ಪಸಿಯೊಳೊತ್ತೆನೆಪಸಿಯ್ಯೆ। ಇಪ್ಪೊರ್ ನುಣಿಸ ನೊರ್ಮೆಕೊಳ್ಳೆನೆಕೊಳ್ಳೈ। ಬಸಿರ ನಿನ್ನೊಡನೆ ಬಾಳ್ವುದೆಮಗರಿದೇವಂ" ಇದು ಹೊಟ್ಟೆಯ ಮಹಿಮೆ. ಅದರ ತಾಪ ಯಾರಿ ಬಿಟ್ಟಿದೆ? ಆದ್ದರಿಂದ ವಾತಾಂಬುಪರ್ಣಾ ಶನರಾದ ಮುನಿಗಳು ಬೆಳೆಯಿಸಿದ ಸಂಸ್ಕೃ ಪ್ರಭುತ್ವವನ್ನು ಅಲ್ಲಗಳೆಯದೆ ಇಂದಿ ತರುಣರು ಕನ್ನಡ ಕಾವ್ಯಮಹಿಮೆಯನ್ನು ಹೆಚ್ಚಿಸಿ, ನವ್ಯತೆಯನ್ನು ತರಲಿ.




# ಭಾರತದಲ್ಲಿಯ ಮಹಿಳೆಯರ ಮುನ್ನಡೆ

**ಭಾರತದಲ್ಲಿ ಮಹಿಳೆಯರು ಇಂದು ಜಾಗ್ರತರಾಗಿ ತಮ್ಮ ಹೊಣೆಯನ್ನು ನಿರ್ವಹಿಸಲು ಮುಂದೆ ಬರುತ್ತಿರುವರು. ರಾಜಕಾರಣ, ನೌಕರಿ, ಉದ್ಯೋಗ, ಅರ್ಥರಂಗ ಹೀಗೆ ಎಲ್ಲದರಲ್ಲಿಯೂ ಮಹಿಳೆ ಪ್ರವೇಶಿಸುವದನ್ನು ಕಾಣಬಹುದು. ಅವಳ ಈ ಮುನ್ನಡೆಯುನ್ನು ಕೆಲ ಸನಾತನ ಸಂಪ್ರದಾಯವಾದಿಗಳು ಸಹಿಸುತ್ತಿಲ್ಲವೆಂಬ ಭಾವನೆಯೂ ಅವರಲ್ಲಿ ಮೂಡತೊಡಗಿದೆ. ಮುನ್ನಡೆಯುತ್ತಿರುವ ಮಹಿಳೆಯ ಬಗ್ಗೆ ಸಹಾನುಭೂತಿ ಅವಶ್ಯವೆಂದು ಲೇಖಿಕೆ ಇಲ್ಲಿ ಹೇಳಿದ್ದಾರೆ :**

ಯಾವುದೇ ರಾಷ್ಟ್ರದ ಮುನ್ನಡೆ; ಆ ರಾಷ್ಟ್ರದ ಸ್ತ್ರೀಯರ ಸಾಮಾಜಿಕ ಹಾಗೂ ರಾಜಕೀಯ ಸ್ಥಾನ ಮಾನಗಳಿಂದ ನಿರ್ಧರಿಸಲ್ಪಡುತ್ತದೆಯೆಂಬ ಮಾತಿಗೆ ಭಾರತೀಯ ಮಹಿಳೆಯರ ಇತಿಹಾಸ ಒಂದು ಉತ್ತಮ ನಿದರ್ಶನವಾಗಿದೆ. ಏಕೆಂದರೆ ಸಾಕಷ್ಟು ಸ್ವಾತಂತ್ರ್ಯವಿದ್ದು, ಸಮಾಜದಲ್ಲಿ ಗೌರವಯುತವಾದ ಸ್ಥಾನವನ್ನು ಪಡೆದ ಪ್ರಾಚೀನ ಭಾರತದ ಸುವಿದ್ಯ ಮಹಿಳೆ, ಇಡೀ ವಿಶ್ವದ ಮೇಲೆ ತನ್ನ ಪ್ರಭಾವವನ್ನು ಬೀರಿದ ಹಿಂದೂ ಸಂಸ್ಕೃತಿಯ ವೈಭವಕಾಲದ ಪ್ರತೀಕವಾಗಿದ್ದರೆ, ಪುರುಷನ ಆಸರೆಯಲ್ಲಿ ತನ್ನ ಅಸ್ತಿತ್ವವನ್ನೇ ಮರೆತು, ಅವನ ಕೈಗೊಂಬೆಯಾಗಿ ಬಾಳಿದ ಮಧ್ಯಯುಗದ ಅಶಿಕ್ಷಿತ ಸ್ತ್ರೀಯಲ್ಲಿ, ಪರದಾಸ್ಯಕ್ಕೆ ಗುರಿಯಾಗಿ ತನ್ನತನವನ್ನು ಕಳೆದುಕೊಂಡು ಬಲವಿಹೀನವಾದ ಭಾರತದ ಚಿತ್ರವನ್ನು ಕಾಣಬಹುದು. ಅದರಂತೆಯೇ ದುಷ್ಟ ಸಂಪ್ರದಾಯಗಳ ಹೆಸರಿನಲ್ಲಿ ತನಗಾಗುತ್ತಿರುವ ಅನ್ಯಾಯದ ವಿರುದ್ಧ ಬಂಡೆಬ್ಬಿಸಿ, ಸಮಾನ ಹಕ್ಕುಗಳಿಗಾಗಿ ಹೋರಾಡಿದ ಬ್ರಿಟಿಶರ ಆಳಿಕೆಯಲ್ಲಿಯ ಕ್ರಾಂತಿಕಾರಿ ಮಹಿಳೆ. ಆ ಕಾಲಕ್ಕೆ ಭಾರತೀಯರಲ್ಲುಂಟಾಗಿದ್ದ ಸ್ವದೇಶಾಭಿಮಾನ, ರಾಜಕೀಯ ಜಾಗೃತಿಗಳಿಗೆ ಸಾಕ್ಷಿಯಂತಿದ್ದರೆ, ಸ್ವಾತಂತ್ರ್ಯೋತ್ತರ ಕಾಲದಲ್ಲಿ ಪುರುಷನ ಸರಿದೊರೆಯಾಗಿ ನಿಂತು ರಾಷ್ಟ್ರನಿರ್ಮಾಣಕಾರ್ಯದಲ್ಲಿ ಅವನಿಗೆ ಸಹಾಯ ಸಲ್ಲಿಸುತ್ತ ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ಒಂದು ಮಹತ್ವವಾದ ಸ್ಥಾನವನ್ನು ಆಕ್ರಮಿಸುತ್ತಿರುವ ಇಂದಿನ ಮಹಿಳೆ ಪ್ರಗತಿಪಥದಲ್ಲಿರುವ ಭಾರತದ ಪ್ರತೀಕವೆನಿಸುತ್ತಾಳೆ. ಹೀಗೆ ಭಾರತದ ಉನ್ನತಿ-ಅವನತಿಗಳೆರಡೂ ಇಲ್ಲಿನ ಸ್ತ್ರೀಯರ ಸ್ಥಿತಿಗತಿಗಳನ್ನೇ ಹೆಚ್ಚಾಗಿ ಅವಲಂಬಿಸಿದ್ದರಿಂದಲೇ 'ಯತ್ರ ನಾರ್ಯಸ್ತು ಪೂಜ್ಯಂತೇ, ರಮಂತೇ ತತ್ರ ದೇವತಾಃ' ಎಂಬ ಉಕ್ತಿ ಬಳಕೆಯಲ್ಲಿ ಬಂದಿರಬಹುದೇನೋ !

ಮಧ್ಯಯುಗದಿಂದ ಗಾಂಧೀ-ಯುಗದವರೆಗೆ ಭಾರತೀಯ ಮಹಿಳೆ ಹಿಂದುಳಿದುದಕ್ಕೆ ಮುಖ್ಯ ಕಾರಣವೆಂದರೆ ಶಿಕ್ಷಣದ ಅಭಾವ. ಈ ವಿಷಯದಲ್ಲಿ ಪ್ರಾಚೀನ ಭಾರತದ ಮಹಿಳೆ ಹೆಚ್ಚು ಸುದೈವಿಯಾಗಿದ್ದಳೆನ್ನಬಹುದು. ಏಕೆಂದರೆ ಅವಳಿಗೆ ಅವಳು ಬಯಸಿದ ವಿಷಯಗಳಲ್ಲಿ ಶಿಕ್ಷಣವು ದೊರೆಯುತ್ತಿತ್ತೆಂಬುದು ಆ ಕಾಲದ ಸಾಹಿತ್ಯದಿಂದ ವ್ಯಕ್ತವಾಗುತ್ತದೆ. ಹುಯೇನ್-ತ್-ಸಂಗ್‌ನು ನಮ್ಮ ದೇಶಕ್ಕೆ ಬಂದಾಗ ಅಂದರೆ ಕ್ರಿ. ಶ. ಸು. ೬೦೦ ನೆಯ ಇಸ್ವಿಯಲ್ಲಿಯೂ ಇಲ್ಲಿಯ ಸ್ತ್ರೀಯರು ಧಾರ್ಮಿಕ ಹಾಗು ಆಧ್ಯಾತ್ಮಿಕ ವಿಷಯಗಳಂಥ ಗಹನವಾದ ವಿಷಯಗಳ ಚರ್ಚೆಯಲ್ಲಿ ಒಳ್ಳೆ ಆಸ್ಥೆಯಿಂದ ಭಾಗವಹಿಸುತ್ತಿದ್ದರೆಂಬ ಸಂಗತಿಯನ್ನು ಅವನು ಬರೆದಿಟ್ಟಿದ್ದಾನೆ.

ಆದರೆ ಮಧ್ಯಯುಗದಲ್ಲಿ ಪರಕೀಯರ ದಾಳಿಗಳು ಪ್ರಾರಂಭವಾದಂದಿನಿಂದ 'ಪರದಾ' ಪದ್ಧತಿ ಹಾಗೂ ಬಾಲ್ಯವಿವಾಹಗಳು ಬಳಕೆಯಲ್ಲಿ ಬಂದು, ಬರಬರುತ್ತ ಸ್ತ್ರೀ ಶಿಕ್ಷಣವು ನಿಂತು ಹೋಯಿತು. ಹಿಂದೂ-ಧರ್ಮದ 'ಪರಿಶುದ್ಧತೆಯನ್ನು ಕಾಯುವದಕ್ಕಾಗಿ ಮ್ಲೇಂಚ್ಛರಿಂದ ವರ್ಣಸಂಕರವಾಗದಂತೆ ಎಚ್ಚರಿಕೆ ವಹಿಸುವದು ಆ ಕಾಲಕ್ಕೆ ಅಗತ್ಯವಾಗಿದ್ದಿತು' ಅದಕ್ಕಾಗಿ ಆಗಿನ ಕಾಲದ ಕನ್ಯಾಪಿತೃಗಳು ತಮ್ಮ ಮಕ್ಕಳು ಪರದೇಶದ ರಾಜರ ಕಂಣುಗಳಿಗೆ ಬೀಳದಂತೆ ಮನೆಬಿಟ್ಟು ಸಾಮಾಜಿಕ ರಾಜಕೀಯ ರಂಗಗಳಲ್ಲಿ ಪ್ರವೇಶಿಸುವದಕ್ಕೆ ನಿರ್ಬಂಧಿಸಿದುದು ಸಹಜ. ಇದರಿಂದ ಹಿಂದೂ ಧರ್ಮದ, ಸಂಸ್ಕೃತಿಯ ಪಾವಿತ್ರ್ಯವೇನೋ ಉಳಿಯಿತು.ಆದರೆ ಅದಕ್ಕಾಗಿ ಅರ್ಧದಷ್ಟು ಜನತೆಯ ಶಕ್ತಿಗೆ ಭಾರತವು ಎರವಾಗಬೇಕಾಯಿತು !

### ಬ್ರಿಟಿಶರ ಆಳಿಕೆಯಲ್ಲಿ

ಬ್ರಿಟಿಶರ ಆಳಿಕೆಯಲ್ಲಿ ಮಾತ್ರ ಪರಿಸ್ಥಿತಿ ಬದಲಾಯಿತು. ಫ್ರಾನ್ಸ, ರಶಿಯ, ಅಮೇರಿಕಾ, ಇಂಗ್ಲಂಡ ಮುಂತಾದ ರಾಷ್ಟ್ರಗಳಲ್ಲಿ ನಡೆದ ಕ್ರಾಂತಿ ಹಾಗು ಜಾರಿಗೆ ಬಂದ ಕಾನೂನುಗಳ ಪರಿಣಾಮವಾಗಿ ಅಲ್ಲಿನ ಮಹಿಳೆಯರಿಗೆ ಮತದಾನದ ಹಕ್ಕು ದೊರೆತು ಅವರು ತಮ್ಮ ದೇಶಗಳ ಆಡಳಿತದಲ್ಲಿ ರಾಜಕೀಯ ಪ್ರಾತಿನಿಧ್ಯ ಪಡೆದ ಸಂಗತಿ ನಮ್ಮ ದೇಶದ ಮಹಿಳಾ ವರ್ಗವನ್ನೆಚ್ಚರಿಸಿತು. ಇದೇ ವೇಳೆಗೆ ರಾಜಾ-ರಾಮ್ಮೋಹನ ರಾಯರಂಥ ಸಮಾಜ ಸುಧಾರಕರು ಸ್ತ್ರೀ-ಶಿಕ್ಷಣಕ್ಕೆ ಪ್ರೋತ್ಸಾಹ ಕೊಡತೊಡಗಿದರು. ಮಹರ್ಷಿ ಕರ್ವೆಯವರಂತೂ ಸ್ತ್ರೀ-ಶಿಕ್ಷಣ, ವಿಧವಾ ವಿವಾಹ ಮುಂತಾದ ಮಹಿಳೋದ್ಧಾರದ ಕಾರ್ಯಗಳಿಗಾಗಿ, ಸಮಾಜದ ವಿರೋಧವನ್ನು ಲೆಕ್ಕಿಸದೆ ಟೊಂಕಕಟ್ಟಿ ನಿಂತರು, ಈಗಲೂ ಕಾರ್ಯಮಾಡುತ್ತಿರುವರು. ಇವರೆಲ್ಲ ಸ್ತ್ರೀಯರಲ್ಲಿ ಮಾಡಿದ ಜಾಗೃತಿಯ ಪರಿಣಾಮವಾಗಿ ಮುಂದೆ ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯಸಿದ್ಧಿಗಾಗಿ ನಡೆದ ಹೋರಾಟದಲ್ಲಿ ದೇಶದ ಮೂಲೆ ಮೂಲೆಗಳಿಂದ ಸ್ತ್ರೀಯರು ಬಂದು ತಮ್ಮ ಕಾರ್ಯಕ್ಷಮತೆಯ ಅರಿವನ್ನು ಇಡೀ ಜಗತ್ತಿಗೆ ಮಾಡಿಕೊಟ್ಟರು.

೧೯೨೧-೨೩ ರ ಅಸಹಕಾರ ಆಂದೋಲನವು ತನ್ನ ರಾಜಕೀಯ ಉದ್ದೇಶವನ್ನು ಸಾಧಿಸುವದರ

ಲೇಖಿಕೆ :

**ಶ್ರೀಮತಿ ಗೀತಾ ದೇಸಾಯಿ,**

ಬಿ. ಎ. (ಆನರ್ಸ), ಧಾರವಾಡ

ಜೊತೆಗೇ ಒಂದು ಮಹತ್ವದ ಸಾಮಾಜಿಕ ಕ್ರಾಂತಿಯನ್ನೂ ಸಾಧಿಸಿತು. ಅದುವರೆಗೂ ಶೈಕ್ಷಣಿಕ ಅರ್ಹತೆ, ಆರ್ಥಿಕ ಬಲಗಳಿಲ್ಲದೆ ಸಂಪ್ರದಾಯದ ಚೌಕಟ್ಟಿನಲ್ಲಿ ಬಂಧಿಸಲ್ಪಟ್ಟು, ಜೀವನ್ಮೃತಾವಸ್ಥೆಯಲ್ಲಿದ್ದಂಥ ಭಾರತೀಯ ಮಹಿಳೆಯರಲ್ಲಿ ನವಚೈತನ್ಯವನ್ನು ತುಂಬಿದುದೇ ಅದು ಸಾಧಿಸಿದ ಮಹತ್ಕ್ರಾಂತಿ. ಗಾಂಧೀಜಿಯವರು ತ್ಯಾಗ, ಸೇವೆ, ಸಹನೆಗಳ ಪ್ರತಿಮೂರ್ತಿಯಂತಿರುವ ಹೆಣ್ಣಿನ ಕಾರ್ಯಕ್ಷಮತೆಯನ್ನು ಗುರುತಿಸಿ ಅವಳೇ ಯೋಗ್ಯ ಸತ್ಯಾಗ್ರಹಿಯಾಗಬಲ್ಲಳು ಎಂಬುದನ್ನು ಕಂಡುಕೊಂಡು, ಅವಳ ರಾಜಕೀಯ ಹಾಗು ಸಾಮಾಜಿಕ ಹಕ್ಕುಗಳಿಗಾಗಿ ಬಲವಾಗಿ ಪ್ರತಿಪಾದಿಸಿದರು. ಇದರಿಂದ ಮಹಿಳೆಯರಿಗೂ ಸ್ಫೂರ್ತಿ ದೊರೆತು ಸ್ವಾತಂತ್ರ್ಯ ಸಮರದಲ್ಲಿ ಭಾಗ ವಹಿಸಲು ಅವರು ಮುಂದೆ ಬರಹತ್ತಿದರು. ಅಸಹಕಾರ ಚಳವಳಿಯಲ್ಲಿ ಮೂರು ಸಾವಿರಕ್ಕಿಂತ ಹೆಚ್ಚು ಸ್ತ್ರೀಯರು ಪ್ರತ್ಯಕ್ಷವಾಗಿ ಭಾಗವಹಿಸಿ ಸೆರೆಮನೆಗಳಲ್ಲಿ ಬಂಧಿತರಾದುದಲ್ಲದೆ ಪಾನಪ್ರತಿಬಂಧ, ಸ್ವದೇಶಿ ಪ್ರಚಾರ ಮುಂತಾದ ಕಾರ್ಯಗಳಲ್ಲಿ ತೊಡಗಿರುವಾಗ ಪೋಲೀಸರ ಲಾಠೀ ಪೆಟ್ಟನ್ನು ತಿಂದು ಗಾಯಗೊಂಡವರನೇಕರಾಗಿದ್ದರು. ಇದಲ್ಲದೆ ತಮ್ಮ ಗಂಡ, ಮಕ್ಕಳಿಗೆ ಸ್ಫೂರ್ತಿಕೊಟ್ಟು ಅಪ್ರತ್ಯಕ್ಷವಾಗಿ ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸಿದ ಮಹಿಳೆಯರಂತೂ ಮನೆ-ಮನೆಗೂ ಇದ್ದರು. ಹೀಗೆ ಪುರುಷನಿಗಿಲ್ಲದ ಯಾವ ಕಾನೂನಿನ ಬಂಧನಗಳೂ ಸ್ತ್ರೀಯಳಿಗಿರಬಾರದು ಎಂದು ಸಾರಿದ ಬಾಪು ಮಣ್ಣುಮುಸುಕಿದ ವಜ್ರದಂತಿರುವ ನಮ್ಮ ಸ್ತ್ರೀಯರನ್ನು ಬೆಳಕಿಗೆ ತರುವಲ್ಲಿ ಬಹಳ ಮಟ್ಟಿಗೆ ಯಶಸ್ವಿಯಾದರು. ಮಹಿಳೆಯರಲ್ಲಿ ತಲೆದೋರಿದ ಈ ರಾಜಕೀಯ ಜಾಗೃತಿಯೇ ಅವಳ ಮುನ್ನಡೆಗೆ ನಾಂದಿಯಾಯಿತು.

## ರಾಜಕಾರಣದಲ್ಲಿ ಪ್ರವೇಶ

ಭಾರತೀಯ ಮಹಿಳೆಯು ರಾಜಕಾರಣವನ್ನು ಪ್ರವೇಶಿಸಿ ತನ್ನ ಶಕ್ತಿಯನ್ನು ಅಭಿವ್ಯಕ್ತಗೊಳಿಸುವಂತೆ ಅವಕಾಶವನ್ನು ಕಲ್ಪಿಸಿಕೊಟ್ಟುದುದರ ಶ್ರೇಯಸ್ಸು ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿಗೇ ಸಲ್ಲುತ್ತದೆ. ಅದು ಸಂಘಟಿಸುತ್ತಿದ್ದ ರಾಜಕೀಯ ಚಳವಳಿಗಳಿಂದ ಮಹಿಳಾ ಮುಖಂಡರ ಹಾಗೂ ಸಾಮಾಜಿಕ ಕಾರ್ಯಕರ್ತ್ರಿಯರ ಒಂದು ದೊಡ್ಡ ಬಳಗವೇ ನಿರ್ಮಾಣವಾಯಿತು. ೧೯೧೪ ರಲ್ಲಿ ಶ್ರೀಮತಿ ಅನಿಬೆಸೆಂಟರು ಕಾಂಗ್ರೆಸ್ಸನ್ನು ಸೇರಿ ೧೯೧೭ ರಲ್ಲಿ ನಡೆದ ಕಲಕತ್ತೆಯ ಕಾಂಗ್ರೆಸ ಅಧಿವೇಶನಕ್ಕೆ ಪ್ರಥಮ (ಮಹಿಳಾ) ಅಧ್ಯಕ್ಷೆಯರಾದಾಗ ಕಾಂಗ್ರೆಸ್ಸಿನ ಇತಿಹಾಸದಲ್ಲಷ್ಟೇ ಅಲ್ಲ, ಮಹಿಳೆಯರ ಇತಿಹಾಸದಲ್ಲೇ ಒಂದು ಹೊಸ ಮನ್ವಂತರ ಪ್ರಾರಂಭವಾಯಿತು. ಕಾವ್ಯ-ಕೋಗಿಲೆ ಶ್ರೀಮತಿ ಸರೋಜಿನಿ ನಾಯಡು ರಾಜಕಾರಣದ ಸೂತ್ರಗಳನ್ನು ತೆಗೆದುಕೊಂಡು ತಮ್ಮ ವಾಕ್ಚಾತುರ್ಯದಿಂದ ಹಾಗೂ ಬುದ್ಧಿಮತ್ತೆಯಿಂದ ಕಾಂಗ್ರೆಸ್ಸಿನಲ್ಲಿ ಓರ್ವ ಪ್ರಭಾವಶಾಲಿ ವ್ಯಕ್ತಿಯೆಂದೆನಿಸಿದರಲ್ಲದೆ ಜನಪ್ರಿಯ ಮುಂದಾಳುಗಳೂ ಆದರು. ಅವರಿಗೆ ರಾಜಕಾರಣದ ಜ್ಞಾನದ ಜೊತೆಗೆ ನಮ್ಮ ದೇಶದ ಸಾಹಿತ್ಯ, ಸಂಸ್ಕೃತಿಗಳ ಬಗ್ಗೆಯೂ ಅಗಾಧ ಪಾಂಡಿತ್ಯವಿದ್ದುದರಿಂದ ವಿದೇಶಗಳಲ್ಲಿ ಭಾರತದ ಹಿರಿಮೆಯನ್ನು ಸಾರುವದರಲ್ಲಿ ಯಶಸ್ವಿಯಾದರು. ಬಾಪೂಜಿಯವರನ್ನು ನೆರಳಿನಂತೆ ಹಿಂಬಾಲಿಸುತ್ತಿದ್ದ ಕಸ್ತೂರಬಾ ಗಾಂಧಿಯವರ ಅಸಾಧಾರಣ ವ್ಯಕ್ತಿತ್ವವೂ ನಮ್ಮ ಮಹಿಳೆಯರ ಮೇಲೆ ಪ್ರಭಾವ ಬೀರದಿರಲಿಲ್ಲ. ಅವರ ಸಾದಾ ಜೀವನ, ಕಾರ್ಯನಿಷ್ಠೆ ಇವುಗಳು ಪಾಶ್ಚಿಮಾತ್ಯ ವೇಷ-ಭೂಷಣಗಳಿಗೆ ಮರುಳಾಗಿ ವಿಲಾಸವೃತ್ತಿಗೆಳೆಯಲ್ಪಡುತ್ತಿದ್ದ ಹಿಂದೀ ಯುವತಿಯರ ಕಣ್ಣು ತೆರೆಯಿಸಿದವು. ಈ ಅಖಿಲ ಭಾರತ ಖ್ಯಾತಿಯ ಮುಖಂಡರಲ್ಲದೆ ಕಮಲಾದೇವಿ, ಹಂಸಾ ಮೆಹತಾ, ಶ್ರೀಮತಿ ಸೇನಗುಪ್ತ, ದುರ್ಗಾಬಾಯಿ ಮುಂತಾದ ಮಹಿಳೆಯರು ತಮ್ಮ ತಮ್ಮ ಪ್ರಾಂತಗಳಲ್ಲಿಯ ಸ್ತ್ರೀಯರಿಗೆ ಒಳ್ಳೇ ಮಾರ್ಗದರ್ಶಕರಾಗಿ ಅವರಲ್ಲಿ ಧೈರ್ಯ, ಉತ್ಸಾಹಗಳನ್ನು ತುಂಬಿದರು. ಇವರೆಲ್ಲರ ಪರಿಶ್ರಮದ ಫಲವಾಗಿಯೇ ಇಂದು ನಮ್ಮ ದೇಶದಲ್ಲಿ ಅನೇಕ ನುರಿತ ಸಾಮಾಜಿಕ ಕಾರ್ಯಕರ್ತ್ರಿಯರು ಸಿಗುತ್ತಾರೆ.

## ಅಖಿಲ ಭಾರತ ಮಹಿಳಾ ಪರಿಷತ್ತು

ಇದೇ ವೇಳೆಗೆ ಮಹಿಳೆಯರಲ್ಲಿ ಜಾಗೃತಿಯನ್ನುಂಟುಮಾಡುವದಕ್ಕಾಗಿ ಸ್ಥಾಪಿತವಾದ ಅಖಿಲ ಭಾರತ ಮಹಿಳಾ ಪರಿಷತ್ತು ಸ್ತ್ರೀಯರ ಹಕ್ಕು-ಬಾಧ್ಯತೆಗಳಿಗಾಗಿ ಮೇಲಿಂದ ಮೇಲೆ ಅನೇಕ ಗೊತ್ತುವಳಿಗಳನ್ನು ಮಂಡಿಸಿದುದಲ್ಲದೆ, ಸರಕಾರದಿಂದ ನಿಯಮಿತವಾದ ಕಮಿಟಿಗಳೆದುರು ಶಿಷ್ಟಮಂಡಳಗಳನ್ನೊಯ್ದು ಮಹಿಳೆಯರಿಗಿದ್ದ ರಾಜಕೀಯ ದೌರ್ಬಲ್ಯವನ್ನೂ ಸಾಮಾಜಿಕ ಬಂಧನಗಳನ್ನೂ ಕಿತ್ತೊಗೆಯಲು ಪರಿಶ್ರಮಿಸಿತು. ಇದಕ್ಕೆ ದೇಶದ ಹಲವಾರು ಸಂಘ-ಸಂಸ್ಥೆಗಳಿಂದ ಪುಷ್ಟಿ ದೊರೆತು ಎಲ್ಲ ಪ್ರೌಢ ಮಹಿಳೆಯರಿಗಲ್ಲದಿದ್ದರೂ ಸುಮಾರು ೫೦,೦೦೦ ದಷ್ಟು ಸ್ತ್ರೀಯರಿಗೆ ಮತದಾನದ ಹಕ್ಕು ದೊರೆಯಿತು. ಅಲ್ಲದೆ ಮಹಿಳೆಯರಿಗಾಗಿ ವಿಧಾನ ಮಂಡಳಗಳಲ್ಲಿ ಕೆಲವು ಸ್ಥಳಗಳು ಕಾದಿರಿಸಲ್ಪಟ್ಟವು ಇದರ ಫಲವಾಗಿ ೧೯೪೧ ರ ಸುಮಾರಿಗೆ ೮೦ ರಷ್ಟು ಮಹಿಳಾ ಸದಸ್ಯೆಯರು ವಿವಿಧ ಪ್ರಾಂತಗಳ ವಿಧಾನ ಮಂಡಲಗಳಲ್ಲಿದ್ದರು. ಆ ಸಂಖ್ಯೆ ಇಂದು ಇಮ್ಮಡಿಯಷ್ಟಾಗಿದೆಯೆಂಬುದನ್ನು ಗಮನಿಸಿದಾಗ ಸ್ತ್ರೀ ಆಡಳಿತ ಕ್ಷೇತ್ರದಲ್ಲಿ ಎಷ್ಟು ಮುಂದುವರಿದಿದ್ದಾಳೆಂಬುದರ ಅರಿವಾಗದಿರದು!

ಹೀಗೆ ಬ್ರಿಟಿಶರ ಆಳಿಕೆಯಲ್ಲಿ ದೇಶವನ್ನು ರಾಜಕೀಯ ದಾಸ್ಯದಿಂದ ಮುಕ್ತಮಾಡುವದರ ಜೊತೆಗೇ ಸಾಮಾಜಿಕ ದಾಸ್ಯದಿಂದ ತೊಳಲಾಡುತ್ತಿದ್ದ ತಮ್ಮ ಮಹಿಳೆಯರನ್ನುಉದ್ಧರಿಸುವದೂ ತಮ್ಮ ಕರ್ತವ್ಯವೆಂದು ಅಂದಿನ ಭಾರತದ ಮುಂದಾಳುಗಳು ಭಾವಿಸಿದರು. ಈ ಜಾಗೃತಿಯಿಂದಲೇ ಅವಳು ತಾನೂ ಓರ್ವ ಹೊಣೆಗಾರ ನಾಗರಿಕಳೆಂದು ತೋರಿಸಿಕೊಟ್ಟಳು. ಅಂತೆಯೇ ೧೯೪೭ ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆತು ಅದರ ಸಂವಿಧಾನವು ಸಿದ್ಧವಾದಾಗ ಸ್ತ್ರೀ-ಪುರುಷ, ಜಾತಿ-ಮತ ಮುಂತಾದ ಯಾವುದೇ ಭೇದಗಳಿಲ್ಲದೆ ಎಲ್ಲರಿಗೂ ಮೂಲಭೂತ ಹಕ್ಕುಗಳನ್ನು ಕೊಡಲಾಯಿತು. ತತ್ಪರಿಣಾಮವಾಗಿ ಮಹಿಳೆಯರ ವ್ಯಕ್ತಿತ್ವವಿಕಾಸಕ್ಕೆ ಸಾಕಷ್ಟು ಅವಕಾಶ ದೊರೆಯಿತು. ಮುಖ್ಯವಾಗಿ ಅವಳ ಶಿಕ್ಷಣಕ್ಕೆ ಸರಕಾರದಿಂದಲೂ ಜನತೆಯಿಂದಲೂ ಪ್ರೋತ್ಸಾಹ ದೊರೆಯುತ್ತಲಿದೆ. ಪ್ರತಿವರ್ಷ ವಿಶ್ವವಿದ್ಯಾಲಯಗಳಿಂದ ಹೊರಬೀಳುವ ಪದವೀಧರೆಯರ ಸಂಖ್ಯೆಯನ್ನು ನೋಡಿದಾಗ ಸ್ತ್ರೀಶಿಕ್ಷಣ ಸಮಾಧಾನಕರವಾಗಿ ಪ್ರಗತಿ ಹೊಂದುತ್ತ ನಡೆದಿದೆಯೆಂಬುದು ಗೊತ್ತಾಗದಿರದು. ಶಿಕ್ಷಣದ ಬೆಳವಣಿಗೆಯಿಂದ ಇಂದು ಸ್ತ್ರೀಯರು ಜೀವನದ ಎಲ್ಲ ರಂಗಗಳಲ್ಲಿಯೂ ಮುಂದೆ ಬರಹತ್ತಿದ್ದಾರೆ. ಅವಳ ಕಾರ್ಯಕ್ಷೇತ್ರ ಈಗ ಮನೆಯಷ್ಟಿಮಟ್ಟಿಕ್ಕೇ ಸೀಮಿತವಾಗಿರದೆ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಮುಂತಾದ ಎಲ್ಲ ಕ್ಷೇತ್ರಗಳನ್ನೂ ಒಳಗೊಂಡಿದೆ.

## ಸಮಾಜಸೇವೆಯ ಅವಕಾಶ

ಸ್ವಾತಂತ್ರ್ಯಪೂರ್ವದಲ್ಲಿ ರಾಜಕೀಯ ಆಂದೋಲನಗಳು ಸ್ತ್ರೀಯರಿಗೆ ಸಮಾಜಸೇವೆಯನ್ನು ಮಾಡುವ ಅವಕಾಶವನ್ನು ಕಲ್ಪಿಸಿಕೊಡುತ್ತಿದ್ದವು. ಈಗ ದೇಶದ ಮೂಲೆ-ಮೂಲೆಗಳಲ್ಲಿರುವ ಮಹಿಳಾ-ಮಂಡಳಗಳೂ ಕಸ್ತೂರಬಾ ವಿದ್ಯಾಲಯಗಳೂ ಕೇಂದ್ರ ಸಮಾಜಕಲ್ಯಾಣ ಮಂಡಳದ ಪರವಾಗಿ ನಡೆಸಲ್ಪಡುವ ಕಲ್ಯಾಣ ಕೇಂದ್ರಗಳೂ ಆ ಕಾರ್ಯವನ್ನು ಮಾಡುತ್ತಿವೆ. ದೇಶದ ಆಡಳಿತವನ್ನುನಿರ್ವಹಿಸುವವರಲ್ಲಿಯೂ ಮಹಿಳೆಯರು ತಮ್ಮ ಕಾರ್ಯಕ್ಷಮತೆಯನ್ನು ತೋರಿಸುತ್ತಿದ್ದಾರೆ. ಭಾರತದ ರಾಯಭಾರಿಯಾಗಿ ಅಂತಾರಾಷ್ಟ್ರೀಯ ಖ್ಯಾತಿವೆತ್ತ ವಿಜಯಲಕ್ಷ್ಮಿ ಪಂಡಿತ, ವಿದೇಶ ವ್ಯವಹಾರಶಾಖೆಯ ಉಪಮಂತ್ರಿಯಾಗಿ ಕೆಲಸ ಮಾಡುತ್ತಿರುವ ಶ್ರೀಮತಿ ಲಕ್ಷ್ಮೀ ಮೆನನ್, ಗವ್ಹರ್ನರರಾಗಿ ದಕ್ಷತೆಯಿಂದ ಆಳಿದ ಸರೋಜಿನಿ ನಾಯಡು ಹಾಗೂ ಕೇಂದ್ರ ಸರಕಾರದಲ್ಲಿ ಆರೋಗ್ಯಶಾಖೆಯ ಸಚಿವರಾಗಿದ್ದ ರಾಜಕುಮಾರಿ ಅಮೃತಕೌರ, ದುರ್ಗಾಬಾಯಿ ದೇಶಮುಖ ಮೊದಲಾದವರು, ಮಹಿಳೆಯರು ನುರಿತ ಆಡಳಿತಗಾರರಾಗಬಲ್ಲರೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಭಾರತದಂಥ ಮಹಾರಾಷ್ಟ್ರದ ಪ್ರಜಾಪ್ರಭುತ್ವದಲ್ಲಿ ಬಹುಮತಗಳಿಸಿದ ಕಾಂಗ್ರೆಸ ಪಕ್ಷದ ಅಧ್ಯಕ್ಷಸ್ಥಾನದಲ್ಲಿ ಓರ್ವ ಮಹಿಳೆಯೇ ಇರುವದು ಸ್ತ್ರೀಯರಿಗೆ ತುಂಬಾ ಅಭಿಮಾನಾಸ್ಪದವಾದ ಸಂಗತಿ. ಆ ಮಹತ್ವದ ಸ್ಥಾನವನ್ನಲಂಕರಿಸುವ ಶ್ರೀಮತಿ ಇಂದಿರಾ ಗಾಂಧಿಯವರ ಕಡೆಗೆ ಇಡೀ ಭಾರತವು ಕುತೂಹಲದಿಂದ ನೋಡುತ್ತಿದೆ. ಇವರಲ್ಲದೆ ಆಯಾ ರಾಜ್ಯದ ಮಂತ್ರಿ, ಉಪಮಂತ್ರಿಗಳಾಗಿಯೂ ಲೋಕಸಭೆ, ರಾಜ್ಯಸಭೆ, ವಿಧಾನಮಂಡಳಗಳ ಸದಸ್ಯೆಯರಾಗಿಯೂ ಮಹಿಳೆಯರು ಸೇವೆ ಸಲ್ಲಿಸುತ್ತಿದ್ದಾರೆ. ಸ್ವಾತಂತ್ರ್ಯಪೂರ್ವದಲ್ಲಿ ಮಹಿಳೆಯರಿಗಾಗಿ ಕಾದಿಟ್ಟ ಸ್ಥಳಕ್ಕೆ ಸಾಮಾನ್ಯವಾಗಿ ಚುನಾವಣೆಯೇ ನಡೆಯುತ್ತಿರಲಿಲ್ಲ. ಆದರೆ ಈಗ ಅಲ್ಲಿಯೂ ಸ್ಪರ್ಧೆ ನಡೆಯುತ್ತಿದೆಯೆಂಬ ಮಾತನ್ನು ಗಮನಿಸಿದರೆ ಮಹಿಳೆಯರಲ್ಲುಂಟಾದ ಜಾಗೃತಿಯ ಅರಿವಾಗದಿರದು.

## ಆರ್ಥಿಕ ಹೊಣೆ

ಹೀಗೆ ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಮುನ್ನಡೆಯುತ್ತಿರುವ ಮಹಿಳೆ ನೌಕರಿ, ಉದ್ಯೋಗ-ವ್ಯವಸಾಯಗಳಲ್ಲಿ ಸೇರಿ ಆರ್ಥಿಕ ಹೊಣೆಯನ್ನು ಹೊತ್ತುಕೊಳ್ಳಹತ್ತಿದ್ದಾಳೆ. ಮೊದ-ಮೊದಲು ಶಿಕ್ಷಕಿಯರು ಹಾಗು ದಾದಿಯರಾಗಿಯೇ ಹೆಚ್ಚಾಗಿ ಕಂಡುಬರುತ್ತಿದ್ದ ಮಹಿಳೆಯರು ಇದೀಗ ಇತರ ವ್ಯವಸಾಯಗಳಲ್ಲಿಯೂ ಮುಂದೆ ಬರಹತ್ತಿದ್ದಾರೆ. ಕಚೇರಿಗಳಲ್ಲಿ ಕಾರಕೂನರಾಗಿ, ಆಪ್ತಕಾರ್ಯದರ್ಶಿನಿಯರಾಗಿ, ವೈಜ್ಞಾನಿಕ ಸಂಸ್ಥೆಗಳಲ್ಲಿ ಸಂಶೋಧಕರಾಗಿ, ಎಂಜಿನಿಯರರಾಗಿ ವಕೀಲರಾಗಿ ಅವರ ಸೇವೆ ಲಬ್ಧವಾಗಿದೆ. ಇದಲ್ಲದೆ ಚಹಾ, ಸಬಕಾರ, ಪ್ರಸಾಧನೆಯ ಸಾಧನ ಮುಂತಾದ ಸಾಮಾನುಗಳನು ತಯಾರಿಸುವ ಭಾರತದ ಪ್ರಸಿದ್ಧ ಕಂಪನಿಗಳು ತಮ್ಮ ಸರಕುಗಳ ಮಾರಾಟಕ್ಕಾಗಿ ಸುಶಿಕ್ಷಿತ ಯುವತಿಯರನ್ನು ನಿಯಮಿಸಹತ್ತಿದ್ದಾರೆ. ಇದರಿಂದ ತಮ್ಮ ವ್ಯಾಪಾರ ಕುದುರುತ್ತದೆಯೆಂದು ಆ ಕಂಪನಿಯವರ ಅನುಭವ. ಮಹಿಳೆಯರು ಕುಶಲ ವ್ಯಾಪಾರಸ್ಥರಾಗಬಲ್ಲರೆಂಬುದನ್ನು ಈ ಮಾರಾಟಮಾಡುವ ಹುಡುಗೆಯರು ಸಿದ್ಧಪಡಿಸುತ್ತಾರೆ. ಅವರ ಈ ಗುಣವು ಚಿಕ್ಕ ಉಳಿತಾಯ ಯೋಜನೆಯ ಪ್ರಚಾರ ಕಾರ್ಯದಲ್ಲಿಯೂ ವ್ಯಕ್ತವಾಗುತ್ತದೆ.

ನಮ್ಮ ದೇಶದ ಸಾಮಾಜಿಕ, ರಾಜಕೀಯ, ಆರ್ಥಿಕ ಪುನಾರಚನೆಯ ಜೊತೆಗೇ ಸಾಂಸ್ಕೃತಿಕ ಪುನರುತ್ಥಾನದ ಕಾರ್ಯದಲ್ಲಿಯೂ ಮಹಿಳೆಯರು ಬಹುಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಹಿಂದೂ ಸಂಸ್ಕೃತಿಯ ವೈಶಿಷ್ಟ್ಯಗಳೆಲ್ಲವನ್ನೂ ಭಾರತೀಯ ಮಹಿಳೆ ಪ್ರತಿನಿಧೀಕರಿಸುತ್ತಾಳೆ. ಹಿಂದೂ ಧರ್ಮದ ಸಂಪ್ರದಾಯಗಳನ್ನು ಶತಮಾನಗಳಿಂದಲೂ ಉಳಿಸಿ ಬೆಳೆಸಿಕೊಂಡು ಬರುವದರಲ್ಲಿ ಅವಳದೇ ಪ್ರಧಾನ ಪಾತ್ರವಾಗಿದೆ. ಆದರೆ ಮಧ್ಯಯುಗದ ಸಾಮಾಜಿಕ ನಿರ್ಬಂಧನೆಗಳಿಂದಾಗಿ ಅವಳು ನೃತ್ಯ, ಸಂಗೀತ ನಾಟಕ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಬಹಿರಂಗವಾಗಿ ಭಾಗವಹಿಸಲು ಅಸಮರ್ಥಳಾಗಿದ್ದಳು. ಇತ್ತೀಚೆಗೆ ಆ ನಿರ್ಬಂಧಗಳು ಕೆಲಮಟ್ಟಿಗೆ ಸಡಿಲಾಗಿದ್ದರಿಂದ ಮೊದಲು ದೇವ-ದಾಸಿಯರಿಗಷ್ಟೇ ಮೀಸಲಾಗಿದ್ದ ನೃತ್ಯ-ಸಂಗೀತದ ಶಿಕ್ಷಣ ಈಗ ಸಾಮಾನ್ಯವಾಗಿ ಆಸಕ್ತಿಯುಳ್ಳ ಎಲ್ಲ ಹುಡಿಗೆಯರಿಗೂ ಕೊಡಲ್ಪಡುತ್ತಿದೆ. ಅದಕ್ಕೆ ರಾಜ್ಯ ಹಾಗು ಕೇಂದ್ರ ಸರ್ಕಾರಗಳಿಂದಪ್ರೋತ್ಸಾಹವೂ ದೊರೆಯುತ್ತಿರುವುದರಿಂದ ಅನೇಕ ಅಖಿಲ ಭಾರತ ಹಾಗು ಅಂತಾರಾಷ್ಟ್ರೀಯ ಖ್ಯಾತಿಯ ನೃತ್ಯ-ಗಾಯನ ವಿಶಾರದೆಯರು ಬೆಳಕಿಗೆ ಬಂದಿದ್ದಾರೆ. ರಂಗಭೂಮಿಯಲ್ಲಿ ಎಷ್ಟೋ ಕುಲೀನ ಸ್ತ್ರೀಯರು ನುರಿತ ಅಭಿನೇತ್ರಿಯರಾಗಿ ಕೆಲಸಮಾಡುತ್ತಿರುವುದನ್ನು ನೋಡಿದಾಗ ಒಂದಾನೊಂದು ಕಾಲಕ್ಕೆ ಭಾರತೀಯ ರಂಗಭೂಮಿಯ ಮೇಲೆ ಸ್ತ್ರೀ-ಪಾತ್ರವನ್ನೂ ಪುರುಷರೇ ವಹಿಸಬೇಕಾಗುತ್ತಿತ್ತೆಂಬ ಮಾತನ್ನು ನಂಬಲಿಕ್ಕಾಗುವುದಿಲ್ಲ, ರಂಗಭೂಮಿಯನ್ನು ಹಿಂದೆ ಸರಿಸಿ ಭರದಿಂದ ಬೆಳೆಯುತ್ತಿರುವ ಚಲಚ್ಚಿತ್ರರಂಗದಲ್ಲಿಯೂ ಸ್ತ್ರೀಯರು ನಿರ್ಮಾಪಕಿಯರಾಗಿ, ಲೇಖಿಕೆಯರಾಗಿ ಬೆಳಕಿಗೆ ಬರುತ್ತಲಿದ್ದಾರೆ.

## ಸಾರ್ವಜನಿಕ ಜೀವನ


ರಾಜಕೀಯ, ಆರ್ಥಿಕ ಹಾಗು ಸಾಂಸ್ಕೃತಿಕ ರಂಗಗಳಲ್ಲಿ ಮಹಿಳೆ ಸಾಧಿಸಿದ ಮುನ್ನಡೆಯಿಂದಾಗಿ ಅವಳಿಗೆ ಸಾರ್ವಜನಿಕ ಜೀವನದ ವಿವಿಧ ಮುಖಗಳ ಪರಿಚಯವುಂಟಾದುದರಿಂದ ಅವಳ ಸಾಹಿತ್ಯಕ ಚಟುವಟಿಕೆಗಳ ಮೇಲೂ ಅದರ ಪ್ರಭಾವ ಬಿದ್ದಿದೆ. ಕಥೆ, ಕಾದಂಬರಿ, ಪ್ರಬಂಧ, ನಾಟಕ, ಕವನ ಮುಂತಾದ ಸಾಹಿತ್ಯದ ನಾನಾ ಮುಖಗಳಲ್ಲಿ ಅವಳು ಸೇವೆ ಸಲ್ಲಿಸುತ್ತಿದ್ದಾಳೆ. ಈ ಮೊದಲು ಲೋಕಗೀತೆ ಹಾಗು ಭಕ್ತಿ ಗೀತೆಗಳಲ್ಲಷ್ಟೇ ಸ್ತ್ರೀಯರ ಪ್ರತಿಭೆ ವ್ಯಕ್ತವಾಗುತ್ತಿದ್ದರೆ, ಇದೀಗ ಪ್ರಗತಿಪರವಾದ ವಿಚಾರಗಳಿಂದೊಡಗೂಡಿದ, ಆಧುನಿಕ ಶೈಲಿ, ತಂತ್ರ, ವಸ್ತುಗಳನ್ನು ಬಳಸಿದ ಸಾಹಿತ್ಯ ಅವರಿಂದ ನಿರ್ಮಾಣವಾಗುತ್ತಲಿದೆ. ಪರಂಪರೆ-ಸಂಪ್ರದಾಯಗಳ ತೆರೆಯ ಮರೆಯಲ್ಲಿ ಸಿಲುಕಿ ಮೂಕವೇದನೆಯನ್ನನುಭವಿಸುತ್ತಿರುವ ಹೆಣ್ಣಿನ ಸಮಸ್ಯೆಗಳನ್ನು ಸಮಾಜದ ಮುಂದೆ ತಂದಿರಿಸುವದಕ್ಕೆ ಸಾಹಿತ್ಯವೊಂದು ಅವಳ ಪ್ರಬಲ ಸಾಧನವಾಗಿದೆ.

ಇದೆಲ್ಲ ಪಟ್ಟಣದ ಮಹಿಳೆಯ ಮಾತಾಯಿತು. ಆದರೆ ಭಾರತವು ಹೆಚ್ಚಾಗಿ ಲಕ್ಷೋಪಲಕ್ಷ ಹಳ್ಳಿಗಳಲ್ಲಿಯೇ ಇದೆಯೆಂಬುದನ್ನು ಜನತೆ ಹಾಗು ಸರಕಾರ ಮರೆಯುವಂತಿಲ್ಲ. ಆದುದರಿಂದ ಗ್ರಾಮೀಣ ಮಹಿಳೆಯ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಸರಕಾರ ಕೈಕೊಳ್ಳುತ್ತಲಿದೆ. ಕೇಂದ್ರ ಸಮಾಜ ಕಲ್ಯಾಣ ಮಂಡಲಿಯಿಂದ ಹಳ್ಳಿ ಹಳ್ಳಿಗಳಲ್ಲಿ ಸ್ಥಾಪಿತವಾದ ಕಲ್ಯಾಣ ಕೇಂದ್ರಗಳು ಗ್ರಾಮೀಣ ಮಹಿಳೆಗೆ ಹಲವು ವಿಧದ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಕೊಡುತ್ತಿವೆ. ಕಸ್ತೂರಬಾ ಗಾಂಧೀ ಸ್ಮಾರಕ ನಿಧಿಯ ಪರವಾಗಿ ನಡೆಸಲ್ಪಡುವ ಕಸ್ತೂರಬಾ ಕೇಂದ್ರಗಳ ಸೇವಿಕೆಯರು ಹಳ್ಳಿಯ ಹೆಣ್ಣುಮಕ್ಕಳಿಗೆ ವೈದ್ಯಕೀಯ ಸಹಾಯವನ್ನು ಒದಗಿಸುವದರ ಜೊತೆಗೆ ಅವರಿಗೆ ಸ್ವಚ್ಛತೆಯ ಕಲ್ಪನೆಕೊಟ್ಟು, ಪ್ರಾರ್ಥನೆ ಪ್ರವಚನಗಳಿಂದ ಅವರಲ್ಲಿ ಜ್ಞಾನ, ಸದ್ಗುಣಗಳ ಪ್ರಸಾರಮಾಡುತ್ತಾರೆ. ಬಾಲ-ವಾಡಿಗಳ ಮೂಲಕ ಹಳ್ಳಿಗರ ಮಕ್ಕಳಿಗೆ ಶಿಸ್ತು, ಅಚ್ಚುಕಟ್ಟುತನವನ್ನು ಕಲಿಸುತ್ತಾರೆ. ಈ ಕೇಂದ್ರಗಳಿಂದ ಇನ್ನೊಂದು ಪ್ರಯೋಜನವಾಗುತ್ತಿದೆ. ಕಸ್ತೂರಬಾ ಕೇಂದ್ರ ಹಾಗು ಕಲ್ಯಾಣಕೇಂದ್ರಗಳ ಗ್ರಾಮ ಸೇವಿಕೆಯರಲ್ಲಿ ಬಹುಸಂಖ್ಯ ಹೆಣ್ಣುಮಕ್ಕಳು ಹಳ್ಳಿಗಳಿಂದಲೇ ಬಂದವರಿರುತ್ತಾರಲ್ಲದೆ ಬಾಲವಿಧವೆಯರು, ಪರಿತ್ಯಕ್ತೆಯರು, ತೀರ ಬಡವರೂ ಆಗಿರುತ್ತಾರೆ. ಸಾಕಷ್ಟು ಶಿಕ್ಷಣವಿಲ್ಲದ ಇವರಿಗೆ ತರಬೇತಿ ಕೇಂದ್ರಗಳಲ್ಲಿ ಹತ್ತೂವರೆ ತಿಂಗಳುಗಳಲ್ಲಿಯೇ ಜೀವನಾವಶ್ಯಕವಾದ, ಸರ್ವತೋಮುಖ ಬೆಳವಣಿಗೆಗೆ ಅವಕಾಶವಿರುವ ಶಿಕ್ಷಣವನ್ನು ಕೊಡುತ್ತಾರೆ. ಇದರಿಂದ ಅವರು ತಮ್ಮ ಉದರನಿರ್ವಹಣೆಯ ಸಮಸ್ಯೆಯನ್ನು ಬಿಡಿಸಿಕೊಳ್ಳುವದಲ್ಲದೆ ಆತ್ಮೋನ್ನತಿಯನ್ನೂ ಮಾಡಿಕೊಳ್ಳುತ್ತಾರೆ. ಇತ್ತೀಚೆಗೆ ಗ್ರಾಮ ಪಂಚಾಯತಿಗಳಲ್ಲಿ ಕಾನೂನಿಗನುಸರಿಸಿ ಸ್ತ್ರೀಯರ ಸೇರ್ಪಡೆಯಾಗುತ್ತಿರುವದರಿಂದ ತಮ್ಮ ಹಳ್ಳಿಯ ಆಡಳಿತದಲ್ಲೂ ಅವರು ಭಾಗವಹಿಸುವಂತಾಗಿದೆ. ಈ ರೀತಿ ಗ್ರಾಮೀಣಮಹಿಳೆಯೂ ಪಟ್ಟಣದ ಮಹಿಳೆಯಷ್ಟು ಅಲ್ಲದಿದ್ದರೂ ತನ್ನದೇ ಆದ ದಿಸೆಯಲ್ಲಿ ಮುನ್ನಡೆಯುತ್ತಿದ್ದಾಳೆ.



## ಸಹಾನುಭೂತಿ ಬೇಕು

ಹೀಗೆ ತನಗೆ ಕಾನೂನಿನಿಂದ ದೊರೆತ ಅವಕಾಶಗಳ ಸದುಪಯೋಗ ಮಾಡಿಕೊಂಡು ಮಹಿಳೆ ಸಮಾಜದ ಓರ್ವ ಹೊಣೆಗಾರ ವ್ಯಕ್ತಿಯಾಗಿ ಎಲ್ಲ ರಂಗಗಳಲ್ಲಿಯೂ ಮುಂದೆ ಬರಹತ್ತಿದ್ದಾಳೆ. ಆದರೆ ಅವಳ ಈ ಮುನ್ನಡೆ ಎಲ್ಲರಿಗೂ ತೃಪ್ತಿಯನ್ನೀಯುತ್ತಿಲ್ಲವೆಂಬುದನ್ನು ವಿಷಾದದಿಂದ ಒಪ್ಪಿಕೊಳ್ಳಬೇಕಾಗಿದೆ. ಅವಳು ಪುರುಷನ ಕ್ಷೇತ್ರಗಳಲ್ಲಿಯೂ ಚಂಚು ಪ್ರವೇಶ ಮಾಡುತ್ತಿರುವದರಿಂದ ಗೃಹಸೌಖ್ಯ ನಷ್ಟವಾಗುತ್ತಿದೆಯೆಂದು ಕೆಲವು ಸಂಪ್ರದಾಯವಾದಿಗಳ ಆಕ್ಷೇಪವಾಗಿದೆ. ಇದು ಕೆಲಮಟ್ಟಿಗೆ ನಿಜವಾದರೂ ಅದರ ಸಂಪೂರ್ಣ ಹೊಣೆಯನ್ನು ಸ್ತ್ರೀಯರ ಮೇಲೆಯೇ ಹೊರಿಸಲಿಕ್ಕಾಗುವದಿಲ್ಲ. ಗಂಡನ ಸಂಪಾದನೆಯಿಂದ ತನ್ನ ಮನೆಯ ವೆಚ್ಚ ಸಾಗುವಂತಿದ್ದರೆ ಯಾವ ಗೃಹಿಣಿಯೂ ನೌಕರಿ ಮಾಡಲು ಆಶಿಸುವದಿಲ್ಲ. ಆದರೆ ಬದಲಾಗುತ್ತಿರುವ ಪರಿಸ್ಥಿತಿಯ ಮೂಲಕ ಮಹಿಳೆಗೆ ಆರ್ಥಿಕ ಹೊಣೆಯನ್ನು ಹೊತ್ತುಕೊಳ್ಳುವ ಪ್ರಸಂಗ ಬರುವದರಿಂದ ಅವಳು ಮನೆಯಿಂದ ಹೊರಗೆ ಕಾಲಿರಿಸಲೇಬೇಕಾಗುತ್ತದೆ. ಹೀಗೆ ಎರಡೆರಡು ಹೊಣೆಗಳನ್ನು ನಿರ್ವಹಿಸುವಾಗ ಅವಳ ಕಾರ್ಯದಲ್ಲಿ ಸ್ವಲ್ಪ ಕುಂದುಕೊರತೆಗಳು ಬರುವದು ಸಹಜ. ಸಮಾಜ ಅವುಗಳನ್ನು ಸಹಾನುಭೂತಿಯಿಂದ ನೋಡಿದರೆ ಎಲ್ಲವೂ ಸರಿಯಾಗುತ್ತದೆ. ಶಿಕ್ಷಿತ ಮಹಿಳೆಯರ ಕಡೆಗೂ ಸನಾತನಿಗಳ ವಕ್ರ ದೃಷ್ಟಿ ಹರಿದಿದೆ, ಇದು ಕ್ರಮೇಣ ಮಾಯವಾಗುವದರಲ್ಲಿ ಸಂದೇಹವಿಲ್ಲ.



" If non-violence is the law of our being, the future is with woman, " ಎಂದು ಬಾಪು ಹೆಣ್ಣಿನ ಬಗ್ಗೆ ಉಜ್ವಲವಾದ ಕನಸನ್ನು ಕಟ್ಟಿಕೊಂಡಿದ್ದರು. ಇಂದಿನ ಮಹಿಳೆಯ ಪ್ರಗತಿಯನ್ನು ನೋಡಿದಾಗ ಆ ಕನಸು ನನಸಾಗಬಹುದೆಂದೆನಿಸುತ್ತದೆ. ಭಾರತದ ಭವಿಷ್ಯತ್ತನ್ನು ರೂಪಿಸುವ ಕಾರ್ಯದಲ್ಲಿ ಅವಳ ಪಾತ್ರವೇ ಪ್ರಧಾನವಾಗಿದೆ. ನಾಡಿನ ಭಾವಿ ಜನಾಂಗದಲ್ಲಿ ಶಿಸ್ತು, ಸ್ವದೇಶಾಭಿಮಾನಗಳನ್ನು ಉತ್ತೇಜಿಸುವ ಹೊಣೆ ಅವಳ ಮೇಲೆಯೇ ಇದೆ. ಭಾರತೀಯ ಮಹಿಳೆ ಈ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಿ ತನ್ನ ಉಜ್ವಲ ಪರಂಪರೆಯನ್ನು ಮುಂದೆ ಸಾಗಿಸುವಳೆಂದಾಶಿಸುತ್ತೇನೆ.



# ನೆಳಲು ಬೆಳಕು

" ಅಲ್ಲಾ, ನೆನಪಿದೆಯೆಷ್ಟೇ ? "

" ಹೂಂ. "

" ಸರಿಯಾಗಿ ವೇಳೆಗೆ ಹೋಗಿರಿ. "

" ಹೂಂ "

" ಮತ್ತೆ ? "

ಸಾಯಕಲ್ಲ ಆಗಳೆ ಬಾಗಿಲದ ಹೊರಗೆ ನಿಂತಿತ್ತು.

ಟ್ರಿಣ್ ! ಟ್ರಿಣ್ ! !

ಸಾಯಕಲ್ಲ ಗಂಟೆಯ ಸಪ್ಪಳ ಕೇಳಿಸಿತು.

" ಮತ್ತೆ.... ? ಈ ದಿನ ಯಾವ ವಾರ ನೆನಪಿದೆಯೆ ? "

" ಹೂಂ "

" ಬರಿ ಹೂಂ ಹೂಂ! ಇದೇನು ಕಥೆಯೆ ? "

" ಹೂಂ "

" ಮುದುಕರಾದರೂ ಚೇಷ್ಟೆ ಬಿಡಬೇಡಿರಿ."

ಸಾಯಕಲ್ಲ ರಸ್ತೆಯಲ್ಲಿ ನಿಂತಿತ್ತು. ಗಡಿಯಾರದ ಗಂಟೆ ಹನ್ನೊಂದು ಬಡೆಯಿತು.

"ಅಲ್ಲಾ, ನೆನಪಿದೆಯಷ್ಟೆ ? ಬೇಗ ಮನೆಗೆ ಬಂದುಬಿಡಿರಿ. "

" ಹೂಂ. "

ಸಂಜೆ ಆಫೀಸ ಬಿಟ್ಟಕೂಡಲೆ ತಾನು 'ಹೂಂ' ಎಂದ ಕೆಲಸ ಮುರಲಿಗೆ ನೆನಪಾಯಿತು. ಆಫೀಸದ ಗಡಿಯಾರದಲ್ಲಿ ಐದುವರೆ ಗಂಟೆಯಾಗಿತ್ತು. ರೈಲು ಬರುವ ವೇಳೆ ಏಳು ಗಂಟೆ. ಹಾಗಾದರೆ....?

ಅಂದು ಶನಿವಾರ. ಆದಿನ ಸಂತೆ. ಮುರಲಿಯ ಊಟಕ್ಕೆ ರಜೆ. ಪತಿವ್ರತೆಯಾದ ಹೆಂಡತಿಯೇ ಮುರಲಿಗೆ ಈ ಪರಿಪಾಠವನ್ನು ಹಾಕಿಸಿ ಕೊಟ್ಟಿದ್ದಳು. ಊಟದ ಬದಲು ಫಲಾಹಾರ; ನಿಜವಾಗಿಯೂ ಆ ದಿನ ಫಲಾಹಾರವಿರುತ್ತಿತ್ತು. ಏಕೆಂದರೆ ಅದೊಂದು ದಿನ ಅವರು ಬಾಳೇಹಣ್ಣುಗಳನ್ನು ಸ್ವಾದಿಸುತ್ತಿದ್ದರು. ಶನಿವಾರದ ಬಾಳೇಹಣ್ಣುಗಳ ರುಚಿ ಮುರಲಿ ಮತ್ತು ಅವನ ಹೆಂಡತಿ ರಾಧೆ ಅವರಿಗೇ ಗೊತ್ತು. ಬಹಳ ದಿನಗಳಿಂದ ಗೋಕುಲದ ರಸಿಕತೆಯನ್ನು ಶನಿವಾರದಂದು ಅವರು ಪಡೆಯುತ್ತ ಬಂದಿದ್ದಾರೆ.

ಅಂತೆಯೇ ಆದಿನ ಬೆಳಿಗ್ಗೆ ಬಾಗಿಲದ ಬಳಿಯಲ್ಲಿ ನಿಂತು ರಾಧೆ ಬಾಳೇಹಣ್ಣುಗಳನ್ನು ತರಲು ನೆನಪು ಮಾಡಿಕೊಟ್ಟಿದ್ದಳು.

ರಾಧೆ ಹೇಳಿದ ಸಾಮಾನುಗಳನ್ನು ಸರಿಯಾದ ದಿನ, ಸರಿಯಾದ ವೇಳೆಗೆ ತರದಿದ್ದರೆ, ರಾಧೆಗೆ ಎಲ್ಲಿಲ್ಲದ ಕೋಪ ಬರುತ್ತದೆ.

" ಅಯ್ಯೋ ! ನಿನ್ನ ಸಿಟ್ಟು ಮೂಗಿನ ತುದಿಯ ಮೇಲೆಯೇ " ಎಂದು ಮುರಲಿ ಅನ್ನುತ್ತಿದ್ದ.

ಮುರಲಿಯ ಮಾತನ್ನು ಕೇಳಿ ರಾಧೆ ಮೂಗು ಮುರಿಯುತ್ತಿದ್ದಳು " ಹೂಂ ಮದುವೆಯಾದ ವರುಷ ನಿನ್ನ ಮೂಗು ಸಂಪಿಗೆ ಹೂ ಎಂದು ಬಣ್ಣಿಸಿ ಹೇಳುತ್ತಿದ್ದಿರಿ. ಈಗ ? "

> ಸಕಾಲದಲ್ಲಿ ನಿಲ್ದಾಣಕ್ಕೆ ಹೋಗದೆ ಮುರಲಿ ಘೋರ ಪ್ರಸಂಗ ಎದುರಿಸುವ ಸಂದರ್ಭ ಬಂದಿತ್ತು; ಅದಕ್ಕಾಗಿ ಅವನು ಸಂಕಟಪಟ್ಟ; ತಳಮಳಗೊಂಡ. ಆದರೆ ನಿಜವಾಗಿ ಇದ್ದುದಾದರೂ ಏನು ? ಕುತೂಹಲಕಾರಿಯಾದ ಸನ್ನಿವೇಶವೊಂದರ ಚಿತ್ರಣವನ್ನು ಈ ಕತೆ ಕೊಡುತ್ತದೆ.

" ಹೂವು ಸಂಪಿಗೆ ಆದರೂ ಅಷ್ಟೆ, ಕೆಂಪಗೆ ಆದರೂ ಅಷ್ಟೆ. ಈ ಗುಂಗಿ ಯಾವಾಗಲೂ ಸಮೀಪದಲ್ಲೇ ಗುಂಯ್.... "

ಮುರಲಿಯ ಮಾತಿನ ಅರ್ಥತಿಳಿದು, ರಾಧೆ ನಾಚಿಕೊಂಡು ಒಳಗೆ ಓಡಿಹೋಗಿಬಿಡುತ್ತಿದ್ದಳು. ಕೋಪದ ತೆರೆಗಳು ತಾವಾಗಿಯೇ ಶಾಂತವಾಗುತ್ತಿದ್ದವು.

ಆದರೂ ಒಮ್ಮೊಮ್ಮೆ ರಾಧೆಯ ಸಿಟ್ಟು ನೆತ್ತಿಗೇರಿದಂತಾಗುತ್ತಿತ್ತು. ಆಗ ಅವಳ ಬಾಯಿಗೆ ಬೀಗವೇ ಇರುತ್ತಿರಲಿಲ್ಲ. ಅವಳು ಆಡಿದ ನುಡಿ

ಕತೆಗಾರರು : **ವರದರಾಜ ಹುಯಿಲಗೋಳ, ಧಾರವಾಡ**

ಗಳು ಮುರಲಿಯ ಮರ್ಮವನ್ನೇ ಹೊಕ್ಕು ಇರಿಯುತ್ತಿದ್ದವು. ಮುರಲಿಗೆ ಅಂಥ ಕೆಲವು ಸನ್ನಿವೇಶಗಳೂ ಆದಿನ ಸಂಜೆ ನೆನಪಾದವು.

ಆಫೀಸದಿಂದ ಪೇಟೆ ಪೂರ್ವಕ್ಕೆ ಒಂದು ಮೈಲು. ರೈಲುನಿಲ್ದಾಣ ಪಶ್ಚಿಮಕ್ಕೆ ಒಂದು ಮೈಲು. ಪೇಟೆಯಿಂದ ರೈಲು ನಿಲ್ದಾಣಕ್ಕೆ ಸಾಯಕಲ್ಲ ಮೇಲೆ ಹೋಗಲು ಸಾಧಾರಣ ಹದಿನೈದು ನಿಮಿಷ ಹಿಡಿಯಬಹುದು.

ಸಂಜೆಯಲ್ಲಿ ಪೇಟೆಯ ಕಡೆಗೆ ಹೋಗುವುದೆಂದರೆ ವೇಳೆ ಬಹಳ ಬೇಕಾಗುತ್ತಿತ್ತು. ದಾರಿಯೇನೋ ಅಂಥ ಉದ್ದವಾದುದಲ್ಲ. ಆದರೆ ರಸ್ತೆಯಲ್ಲಿ ಭೆಟ್ಟಿಯಾಗುವ ಮಿತ್ರರು ಬಹಳ. ಸಮಾಜದ ರೀತಿ ನೀತಿಗಳಿಗೆ ಅಳವಟ್ಟು ಮಾತನಾಡುತ್ತ ಹೋದರೆ, ಮುಖ್ಯಕೆಲಸ ಹಾಗೆಯೆ ಉಳಿಯುವುದು. ಅಷ್ಟರಲ್ಲಿ ರೈಲು ನಿಲ್ದಾಣಕ್ಕೆ ಬಂದುಹೋಗಿಬಿಟ್ಟರೆ?

ಓಡುತ್ತಿರುವ ಟಾಂಗಾ ಒಮ್ಮೆಲೇ ನಿಂತಿತು. ಮುರಲಿಯ ವಿಚಾರಗಳಿಗೂ ಕಡಿವಾಣ ಹಾಕಿದಂತಾಯಿತು. ಆಗಲೇ ಮುರಲಿ ಆಫೀಸದಿಂದ ಸ್ಟೇಶನ್ ರೋಡಿಗೆ ಬಂದು ನಿಂತಿದ್ದ.

"ಸ್ಟೇಶನ್ನಿಗೆ ಬರಬೇಕೇನು ?" ಟಾಂಗಾದಲ್ಲಿ ಕುಳಿತ ವ್ಯಕ್ತಿ ಕೇಳಿತು.

"ಹೌದು ! ಬರಬೇಕಿತ್ತು.... ಆದರೆ ?"

"ಸಾಯಕಲ್ಲ ಬಗ್ಗೆಯೋ ? ಇಲ್ಲೇ ನಿಮ್ಮ ಆಫೀಸದಲ್ಲಿ ಇಟ್ಟು ಬಿಡಿರಿ.... ನಮ್ಮ ಫ್ರೆಂಡ ಈ ದಿನ ಬೆಂಗಳೂರಿಗೆ ಹೋಗಲಿದ್ದಾರೆ. ಅವರಿಗೆ ಬೆಂಗಳೂರಿಗೆ ವರ್ಗವಾಗಿದೆ. ಸೆಂಡ ಆಫ್ ಕೊಡಲು ಹೋಗಬೇಕಾಗಿದೆ...."

"ಇಷ್ಟು ಬೇಗ ?"

"ಆರು ಹೊಡೆಯಿತು...."

"ರೈಲು ಬರಲು ಇನ್ನೂ ವೇಳೆ ಇದೆಯಲ್ಲ ! ನಾನು ಸ್ವಲ್ಪ ಪೇಟೆಯ ಕಡೆಗೆ ಹೋಗಿ ಬರಬೇಕಾಗಿದೆ."

"ಓ ! ವೇಳೆಗೆ ಸರಿಯಾಗಿಯೇ ನಿಮ್ಮ ಕೆಲಸ ಆಗಬೇಕು."

ವ್ಯಕ್ತಿ ನಕ್ಕಿತು. ಟಾಂಗಾ ಮುಂದೆ ಹೋಯಿತು.

ಟಾಂಗಾದ ಹಿಂದೆಯೆ ಇನ್ನು ರೈಲು ನಿಲ್ದಾಣಕ್ಕೆ ಹೋಗುವುದು ಹೇಗೆ ಸರಿಯಾದೀತು ? ಮುರಲಿ ತನ್ನ ಸಾಯಕಲ್ಲಿನ ಮುಖ ಹೊರಳಿಸಿ, ಪೇಟೆಯ ಕಡೆಗೇ ನಡೆದ. ಟಾಂಗಾದ ಕುದುರೆ ನಡೆದಂತೆ ಯಾರ ಮುಖವನ್ನು ನೋಡದೆ, ತನ್ನ ದಾರಿಯಲ್ಲಿಯೇ ಓಡಬೇಕೆಂದು ಮುರಲಿ ನಿಶ್ಚಯಿಸಿದ.

ರಾಜಶೇಖರ ದಾರಿಯಲ್ಲಿ ಅವನನ್ನು ಮುಂದೆ ಬಿಡಲಿಲ್ಲ. ಸಾಯಕಲ್ಲನ್ನು ಅಡ್ಡಗಟ್ಟಿ ಅವನನ್ನು ನಿಲ್ಲಿಸಿಯೇ ಬಿಟ್ಟ. ಎಡಗಡೆಗೇ ವೆಲ್, ಕಮ್ ಹೋಟಲು. ಸುಸ್ವಾಗತದ ಬೋರ್ಡು.

"ಅಲ್ಲೋ ! ಒಂದು ಸಿಂಗಲ್. ನಾನು ಹೋಸ್ಟ. ನಡೆ ... ನಡೆ ... ಕೆಲಸ ಇದೆ ಎನ್ನುವುದು ನಿನ್ನ ಹಣೆಬರಹಕ್ಕೆ ತಪ್ಪಿಲ್ಲ. ಮಹಾರಾಯಾ ! ಯಾವಾಗಲೂ ಹೀಗೆಯೇ ನೀನು."

ರಾಜಶೇಖರನ ಒತ್ತಾಯದ ಬಲೆಯಲ್ಲಿ ಮುರಲಿ ಸಿಕ್ಕುಬಿದ್ದ.

ಹೋಟೆಲಿನ ಒಳಗೆ ಮಿತ್ರರ ಚೇಷ್ಟೆ, ಹರಟೆ ನಡೆದವು. ಇನ್ನು ಹಾಗೆಯೆ ಕುಳಿತರೆ ತನ್ನ ಕೆಲಸ ತಪ್ಪುವದೆಂದು ನಿಶ್ಚಯಿಸಿ, ರಾಜಶೇಖರನಿಗೆ ತನ್ನ ಕೆಲಸದ ಮಹತ್ವವನ್ನು ವಿಶದಪಡಿಸಿದ.

"ಅಯ್ಯೋ ! ಬೆಂಗಳೂರು ರೈಲೆ ? ಸರಿಯಾದ ವೇಳೆಗೆ ಬಂದರೆ ದೇವರಾಣೆ."

"ಏನೇ ಆದರೂ ನಾವು ಸರಿಯಾದ ವೇಳೆಗೆ ಹೋಗಬೇಕಲ್ಲವೇ?"

"ಅದು ಇಲ್ಲಿಂದ ೬-೫೭ ಕ್ಕೆ ಬಿಡುತ್ತದೆ."

"ಮಿನಿಟು ಮಿನಿಟು ಎಣಿಸಿ ಹೇಳುತ್ತಿ. ನಿನಗೆ ಇಷ್ಟು ಸ[illegible]ಯಾದ ವೇಳೆ ಗೊತ್ತೇ ?"

"ಇಕೋ ..." ಎಂದು ರಾಜಶೇಖರ ತನ್ನ ಕೈಚೀಲದಲ್ಲಿ[illegible] ರೈಲು ವೇಳಾಪತ್ರಿಕೆಯನ್ನೇ ತೆರೆದುತೋರಿಸಿದ. ನಿಲ್ದಾಣಕ್ಕೆ ರೈ[illegible] ಬರಲು ಇನ್ನು ಅರ್ಧಗಂಟೆ ಇತ್ತು.

ರಾಜಶೇಖರನಿಂದ ತಪ್ಪಿಸಿಕೊಂಡು ಮುರಲಿ ರೆಸ್ಟೋರೆಂಟಿ[illegible] ಹೊರಗೆ ಬಂದ. ಇನ್ನು ಪೇಟೆಗೆ ಹೋಗುವುದರಿಂದ ಪ್ರಯೋಜ[illegible] ವಿಲ್ಲವೆಂದು ಮುರಲಿಗೆ ಅನಿಸಿತು. ೫-೧೦ ನಿಮಿಷ ಮೊದಲ[illegible] ಹೋದರೂ ಅಡ್ಡಿಯಿಲ್ಲ. ಹೀಗೆಂದು ಸ್ಟೇಶನ್ ರಸ್ತೆಗೇ ಮುರ[illegible] ಸಾಯಕಲ್ಲ ಸಾಗಿಸಿದ.

ದಾರಿಯಲ್ಲಿ ಆಂಜನೇಯ ದೇವಾಲಯವಿತ್ತು. ಅನೇಕ ಜನ[illegible] ಕಾಯಿಗಳನ್ನು ಒಡೆಯಿಸುತ್ತಿದ್ದರು. ಭಯ ಭಕ್ತಿಯಿಂದ ದೇಗುಲ[illegible] ಪ್ರದಕ್ಷಿಣೆ ಹಾಕುತ್ತಿದ್ದರು. ದೇವರಲ್ಲಿ ವಿಶ್ವಾಸವಿರಲಿ, ಇರದಿರ[illegible] ಮುರಲಿಗೆ ಹೆಂಡತಿಯಲ್ಲಿ ವಿಶ್ವಾಸವಿತ್ತು. ಹೆಂಡತಿಗೆ ದೇವರಲ್ಲಿ ವಿಶ್ವಾ[illegible]ವಿತ್ತು. ಶನಿವಾರ ದೇವರ ನೈವೇದ್ಯದ ಟೆಂಗಿನಕಾಯಿ ಮನೆಗೆ ಬರಲ[illegible]ಬೇಕು. ಆದರೆ ಆ ದಿನ ಮುರಲಿ ಸಾಯಕಲ್ಲ ಮೇಲಿಂದ ಕೆಳಗೆ ಇ[illegible]ಯುವ ಹಾಗಿರಲಿಲ್ಲ.

ಟೆಂಗಿನಕಾಯಿ, ಕರ್ಪೂರ ಇವುಗಳನ್ನು ಕೊಳ್ಳಲು ಕೆಲ[illegible] ನಿಮಿಷ. ತರುವಾಯ ಭಕ್ತರ ಗದ್ದಲದಲ್ಲಿ ಗದ್ದಲಮಾಡಿ ನು[illegible] ಕೊಂಡು ಹೋಗಬೇಕು. ದೇವರು ವರಕೊಟ್ಟರೂ ಪೂಜಾ[illegible] ಕೊಡುವಂತಿಲ್ಲ. ಟೆಂಗಿನಕಾಯಿ ಬೇಗನೇ ಮುರಲಿಯ ಕೈಗೆ ಹತ[illegible]ವಂತಿಲ್ಲ. ಓ ! ಇವನ್ನೆಲ್ಲ ರಾಧೆಗೆ ತಿಳಿಹೇಳಿದರಾಯಿತು. ಒಂದ[illegible] ದಿನ ಅವಳು ಕ್ಷಮಿಸಲಿಕ್ಕಿಲ್ಲವೇ ? ... ಹೆಂಡತಿಯ ಬಗ್ಗೆ ಪ್ರೀತಿ ಹೆ[illegible]ರಿಕೆ ಎರಡೂ ಝಗ್ಗನೆ ಮುರಲಿಯ ಒಳಪರದೆಯಲ್ಲಿ ಮಿಂಚಿದವ[illegible] ಅವನ ಬಾಳು ಇದೇ ರೀತಿ ಸಾಗಿತ್ತು.

ಮುರಲಿ ಸಾಯಕಲ್ಲ ಮೇಲೆ ಮುಂದೆ ಭರ್ರನೆ ಓಡುವಾ[illegible] ಕುಂಕುಮವೇರಿಸಿಕೊಂಡ ಆಂಜನೇಯನ ಮುಖ ಕಂಡಿತು. ಓ[illegible] ಅದು ಸಿಟ್ಟಿಗೆದ್ದ ಮುಖ ... ಮುರಲಿಗೆ ಏನೇನೋ ವಿಚಾರಬಂದವ[illegible] ತನ್ನ ಕೈವಸ್ತ್ರದಿಂದ ಮುಖವನ್ನು ಒರೆಯಿಸಿಕೊಂಡ.

ತನ್ನ ಹೆದರಿಕೆಯ ಭಾವನೆಗಳನ್ನು ತಡೆದುಕೊಳ್ಳುವುದು ಮು[illegible]ಲಿಗೆ ಆಗಲಿಲ್ಲ. ಎರಡು ಮೂರು ಸಲ ಕೈವಸ್ತ್ರದಿಂದ ಮುಖದ ಬೆ[illegible]ರನ್ನು ಒರೆಯಿಸಿಕೊಂಡ. ದಾರಿಯಲ್ಲಿ ಕೂಗಿದ ಗೆಳೆಯರ ಕಡೆಗ[illegible] ಅವನ ಲಕ್ಷ ಹೋಗಲಿಲ್ಲ.

ಇನ್ನು ರೈಲು ನಿಲ್ದಾಣ ಎರಡೇ ಫರ್ಲಾಂಗು. ಮುರಲಿ ಸಾಯ[illegible]ಕಲ್ಲಿನಿಂದ ಕೆಳಗೆ ಇಳಿದೇ ಬಿಟ್ಟ. ರಸ್ತೆಯ ಬದಿಯಲ್ಲಿ ಒಬ್ಬ ಮುದು[illegible] ಬಾಳೇಹಣ್ಣುಗಳನ್ನು ಬುಟ್ಟಿಯಲ್ಲಿ ಇಟ್ಟುಕೊಂಡು ಕುಳಿತಿದ್ದಳು.

"ಒಂದ ಡಝುನ್ನಿಗೆ ಆರಾಣೆ ಸಾಹೆಬ್ರೂ."

"ಆರಾಣೆಯೋ ಎಂಟಾಣೆಯೋ. ಒಂದು ಡಝುನ್ ಕೊ[illegible] ಬಿಡೂ ..."

"ಒಂದಽ ಡಝುನ್ ಹ್ಯಾಗ ಸಾಕಾಗಬೇಕೂ ಸಾಹೆಬ್ರೂ[illegible] ಇವು ನಿಮ್ಮ ಮಕ್ಕಳಿಗೆ ಆದವು. ನಿಮಗಽ ನಿಮ್ಮ ಹೆಂಡತಿಗೆ ಬ್ಯಾಡ[illegible] ಸಾಹೆಬ್ರೂ. ಒಂದೂವರೆ ಡಝುನ್ ತೆಗೆದುಕೊಳ್ಳಿರಿ ಸಾಹೆಬ್ರೂ."

'ಹೆಂಡತಿಗೆ ಹೆಚ್ಚು ತೆಗೆದುಕೊಳ್ಳಿರಿ' ಎಂದ ಕೂಡಲೇ ಮುರ[illegible] ಏನೂ ವಾದ ಹಾಕಲಿಲ್ಲ: ಆ ಮುದುಕಿ ಕೊಟ್ಟಷ್ಟು ಬಾಳೆಹಣ[illegible]

ತೆಗೆದುಕೊಂಡ. ಮೀನ, ಮೇಷ ಮಾಡದೆ ಹಣವನ್ನು ಕೊಟ್ಟು ಬಿಟ್ಟ.

ಆ ದಿನ ಊರಿಂದ ಬರುವವಳು ಸುನೀತಾ. ಸುನೀತಾ ಮುರಲಿಯ ತಮ್ಮನ ಹೆಂಡತಿ. ಅವಳು ಒಬ್ಬಳೇ ಬರುವವಳಿದ್ದಳು. ಅವಳನ್ನು ಮನೆಗೆ ಕರೆದುಕೊಂಡು ಹೋಗುವ ಕೆಲಸ ಮುರಲಿಯದಾಗಿತ್ತು. ಶನಿವಾರ ಸಂಜೆ ಮುರಲಿ ಆಂಜನೇಯನ ದೇವಾಲಯಕ್ಕೆ ಹೋಗಿರಲಿಲ್ಲ. ಇದೊಂದು ತಪ್ಪಾಗಿತ್ತು. ಶನಿವಾರ ಸಂಜೆ ತರಬೇಕಾದ ಹಣ್ಣು ಹಂಪಲ ಮನೆಗೆ ಒಯ್ಯದೆ ಇದ್ದರೆ ಎರಡನೆಯ ತಪ್ಪಾಗುತ್ತಿತ್ತು. ಹಾಗಾದರೆ ಮನೆಯಲ್ಲಿ ಶನಿಕಾಟವೇ. "ಹೂಂ! ಹೆಂಗಸರ ಬಗ್ಗೆ ಕೆಲಸ ಹೇಳಿದರೆ ಸಾಕು. ಎಲ್ಲವನ್ನು ಮರೆತುಬಿಡುತ್ತೀರಿ" ಎಂದು ಸಹಜವಾಗಿ ಅಣಕಿಸಬಹುದಿತ್ತು. ಮನೆಯಲ್ಲಿ ಯಾರಿಗೂ ತಿಳಿಯದಂತೆ ಒಂದು ಕೋಲಾಹಲವೂ ಆಗಬಹುದಿತ್ತು.

ರಾಧೆಯ ತವರುಮನೆಯ ಹೆಸರು ಸುನೀತಾ. ಹೆಸರು ಚೆನ್ನಾಗಿಯೇ ಇದ್ದಿತು. ಚೆಲುವಾಗಿಯೇ ಇದ್ದಿತು. ಮುರಲಿ ಹೆಂಡತಿಯನ್ನು ಮೆಚ್ಚಿದಷ್ಟೆ ಆ ಹೆಸರನ್ನು ಮೆಚ್ಚಿದ್ದನು. ಆದರೆ ಮದುವೆಯ ಗದ್ದಲದಲ್ಲಿ ಉಳಿದ ಹಿರಿಯರು ಕೇಳಬೇಕಲ್ಲ. ಮುರಲಿ ಹೆಸರಿಗೆ ತಕ್ಕಂತೆ ಆಗಬೇಕೆಂದು "ರಾಧೆ" ಎಂದು ಹೆಸರಿಟ್ಟರು. ಹೆಸರುಗಳೇನೋ ಸರಿಯಾದವು. ಆದರೆ ಇಬ್ಬರ ಸ್ವಭಾವ ಸರಿಯಾಗಬೇಕಲ್ಲ? ಮುರಲಿ ಬೇರೆ ಹೆಂಗಸರ ಕೂಡ ವಿಶೇಷ ಮಾತನಾಡುವ ಹಾಗಿರಲಿಲ್ಲ; ನಗುವಂತಿರಲಿಲ್ಲ; ಓಡಾಡುವಂತಿರಲಿಲ್ಲ. ಇಂಥ ಪ್ರಸಂಗಗಳು ಏನಾದರೂ ಸಂಭವಿಸಿದರೆ, ರಾಧೆ ಶೀಘ್ರಕೋಪಿಯಾಗುತ್ತಿದ್ದಳು. ತನ್ನ ಕೆಂಗಣ್ಣುಗಳನ್ನು ಹೊರಳಿಸಿ ಮುರಲಿಗೆ ನುಡಿಯುತ್ತಿದ್ದಳು. "ನೀವು ಹೆಸರಿಗೆ ತಕ್ಕಂತೆ ಇರುವಿರಿ. ಗೋಪಿಕೆಯರ ಕೃಷ್ಣ, ನಾನೆಲ್ಲಿ ನಿಮಗೆ ಬೇಕಾಗಿದೆ?"

ರಾಧೆ ಕೆಣಕಿ ನುಡಿಯುತ್ತಿದ್ದಳು. ಏಕಾಂತದ ಈ ಕೋಲಾಹಲದ ಮಾತುಗಳು ಹಾಲಾಹಲವನ್ನು ಜೀವನದಲ್ಲಿ ಹುಟ್ಟಿಸಿದ್ದವು. ಇಂಥ ಹಾಲಾಹಲವನ್ನೇ ನುಂಗಿ, ಮುರಲಿ ಜೀವನದಲ್ಲಿ ಸವಿಯನ್ನು ಸವಿಯಲು ಬಯಸುತ್ತಿದ್ದನು. ಆದುದರಿಂದ ಸವಿಸವಿಯ ಬಾಳೆಯ ಹಣ್ಣುಗಳನ್ನು ಆ ದಿನ ಮುರಲಿ ಚೀಲದಲ್ಲಿ ತುಂಬಿಕೊಂಡು, ರೈಲು ನಿಲ್ದಾಣದ ದಾರಿ ಹಿಡಿದನು.

ಆದರೆ ರೈಲುನಿಲ್ದಾಣದಲ್ಲಿ ಅದೆಂಥ ದೃಶ್ಯ! ಅಲ್ಲಿ ಯಾರೂ ಕಾಣಿಸಲಿಲ್ಲ. ಜನರ ಗದ್ದಲವೇ ಇರಲಿಲ್ಲ. ವಾಹನಗಳ ಓಡಾಟವೂ ಇರಲಿಲ್ಲ. ಕೂಲಿಗಳ ಕೂಗೂ ಇರಲಿಲ್ಲ. ಮುರಲಿ ಅಚ್ಚರಿಬಟ್ಟ. ಬುಕಿಂಗ ಆಫೀಸದ ಕಿಡಕಿಯ 'ಬಾರು'ಗಳಲ್ಲಿ ಕಣ್ಣಿಟ್ಟು ಗಡಿಯಾರದಲ್ಲಿ ನೋಡಿದ. ಅದೇ ಆಗ ಸಂಜೆ ೬-೫೦ ಆಗಿತ್ತು. ರೈಲು ಬರಲು ಇನ್ನು ಹತ್ತು ನಿಮಿಷವಿತ್ತು. ಹಾಗಾದರೆ....?

ರೈಲು ತಡವಾಗಿ ಬರುತ್ತಿರಬೇಕೆಂದು ಮುರಲಿಗೆ ಅನಿಸಿತು. ಹತ್ತು ದಿನಗಳ ಹಿಂದೆ ತನ್ನ ಮಿತ್ರರನ್ನು ಕಾಣಲು ಮುರಲಿ ಇದೇ ರೈಲಿನ ಹೊತ್ತಿಗೆ ನಿಲ್ದಾಣಕ್ಕೆ ಬಂದಿದ್ದ. ಆಗ ರೈಲು ಮೂರು ತಾಸು ತಡವಿತ್ತು. ಆ ದಿನ ಹೊತ್ತುಹೋಗದೆ ಬೇಸತ್ತು ಬಿಟ್ಟಿದ್ದ. ಈ ದಿನವೂ ಹಾಗೆಯೇ ಇದ್ದರೆ....?

ರೈಲು ಎಷ್ಟು ತಾಸು ತಡವಿದೆಯೆಂಬುದನ್ನು ಮುರಲಿ ನೋಡಲು ಹೋದ. ಕರಿಹಲಗೆಯ ಮೇಲೆ ಏನೂ ಬರೆದಿರಲಿಲ್ಲ. ಮುರಲಿ ಒಮ್ಮೆಲೆ ಚಕಿತನಾದನು.

ಸಮೀಪದಲ್ಲಿಯೇ ಓಡಾಡುತ್ತಿದ್ದ ಪೋರ್ಟರನನ್ನು ಮುರಲಿ ಕೇಳಿದ. "ಬೆಂಗಳೂರು ರೈಲು ಯಾವಾಗ ಬರುವುದು?"

"ಅಯ್ಯೋ ಸಾಹೇಬರೇ ಆಗಳೇನೆ ಹೋಯಿತು."

"ಏನು ನಿನ್ನೆಯ ರೈಲೇ?"

ಪ್ರಶ್ನೆಗೆ ಉತ್ತರವನ್ನು ಕೊಡುವಷ್ಟು ಸಹನೆಯಿಲ್ಲದೆ ಪೋರ್ಟರನು ಹೊರಟುಹೋಗಿದ್ದನು.

ಮುರಲಿ ಸ್ಟೇಶನ್ನ ಮಾಸ್ಟರನ ಆಫೀಸಿಗೆ ನೇರವಾಗಿ ಹೋಗಿ ಕೇಳಿದನು. ೬-೩೦ ಕ್ಕೇ ರೈಲು ಹೋಯಿತು ಎಂದು ಅಧಿಕಾರವಾಣಿಯಿಂದ ಸ್ಟೇಶನ್ನ ಮಾಸ್ತರ ಹೇಳಿದಾಗ, ಮುರಲಿ ಅವಾಕ್ಕಾದನು.

ವೆಲ್‌ಕಮ್ ಹೋಟೆಲ್ಲದಲ್ಲಿ ರಾಜಶೇಖರ ತೋರಿಸಿದ ವೇಳಾಪತ್ರಿಕೆ ಸುಳ್ಳೇ ಎಂದು ಮುರಲಿ ವಿಚಾರಿಸಿದ. ಸ್ಟೇಶನ್ನ ಮಾಸ್ಟರನು ಅಕ್ಟೋಬರ ೧ನೆಯ ದಿನಾಂಕದ ನೆನಪು ಮಾಡಿಕೊಟ್ಟ. ಅಂದೇ ರೈಲು ವೇಳಾಪತ್ರಿಕೆ ಬದಲಾಗಿದ್ದಿತ್ತು.

ಮುರಲಿ ಬಹಳ ಗಾಬರಿಯಾಗಿ ನಿಲ್ದಾಣದ ತುಂಬ ಓಡಾಡಿದ. ತಮ್ಮನ ಹೆಂಡತಿ ಸುನೀತಾ ಎಲ್ಲಿಯೂ ಕಾಣಲಿಲ್ಲ. ವೇಟಿಂಗ ರೂಮುದಲ್ಲಿ ಕುಳಿತಿರಬಹುದೇನೋ ಎಂದು ಎಣಿಸಿ ಅಲ್ಲಿ ಇಣಿಕಿ ನೋಡಿದ.

ಅಲ್ಲಿಯೂ ಯಾರೂ ಇರಲಿಲ್ಲ. ಅವನ ಮೈ ಒಮ್ಮೆಲೆ ಬೆವರೊಡೆಯಿತು.

ಸುನೀತಾ ಒಬ್ಬಳೇ ಬರುವವಳಿದ್ದಳು. ನಿಲ್ದಾಣಕ್ಕೆ ಯಾರಾದರೂ ಬಂದು ಜರೂರ ಕರೆದುಕೊಂಡು ಹೋಗಬೇಕೆಂದು ಅವಳ ತಂದೆ ಬಿನ್ನಹದ ಒಂದು ಪತ್ರ ಬರೆದಿದ್ದರು.

ತನ್ನಿಂದ ಎಂತಹ ಪ್ರಮಾದವಾಯಿತೆಂದು ಎಣಿಸಿ ಮುರಲಿಯ ತಲೆ ಹೊಡೆಯಿತು. ಆಫೀಸು ಬಿಟ್ಟಕೂಡಲೇ ನಿಲ್ದಾಣಕ್ಕೆ ಬಂದಿದ್ದರೆ ಆಗುತ್ತಿದ್ದಿಲ್ಲವೇ ?

ಯೋಚನೆ ಮಾಡುವಷ್ಟು ಸಮಯವೇ ಇರಲಿಲ್ಲ. ಸ್ಟೇಶನ್ನಿಗೆ ಯಾರೂ ಬಾರದಿರುವುದನ್ನು ಕಂಡು, ಸುನೀತಾ ಟಾಂಗೆಯನ್ನು ಮಾಡಿಕೊಂಡು ಮನೆಗೆ ಹೋಗಿರಬೇಕು.

ನಿಲ್ದಾಣದಿಂದ ಮನೆ ಎರಡು ಮೈಲು ದೂರ. ಅಲ್ಲದೆ ಆಗಳೇ ಕತ್ತಲಾಗಿತ್ತು. ಆ ಕತ್ತಲೆಯು ಮುರಲಿಯ ಮನಸ್ಸನ್ನು ಆವರಿಸಿತು.

ಮುರಲಿಯದು ಊರಹೊರಗಿನ ಮನೆ. ಆರು ಫರ್ಲಾಂಗು ಮರಗಳ ದಟ್ಟಣೆಯಲ್ಲಿಯೇ ದಾರಿಯಿದೆ. ಸಂಜೆಯಾಯಿತೆಂದರೆ ಅಲ್ಲಿ ಸಂಚಾರವೇ ಕಡಿಮೆ. ಇತ್ತಿತ್ತಲಾಗಿ ಕೆಲವು ಯುವಕರು ಹುಡಿಗೆಯರ ಬೆನ್ನುಹತ್ತಿ ಓಡಾಡಿದ ಉದಾಹರಣೆಗಳೂ ಇದ್ದವು. ಆದ್ದರಿಂದ ಪಾಲಕರು ತಮ್ಮ ಹುಡಿಗೆಯರ ಬಗ್ಗೆ ವಿಶೇಷ ಕಾಳಜಿ ತೆಗೆದುಕೊಳ್ಳುತ್ತಿದ್ದರು. ಇಂಥ ದಾರಿಯಲ್ಲಿ, ಕತ್ತಲೆಯ ಸಮಯದಲ್ಲಿ, ಸುನೀತಾ ಒಬ್ಬಳೇ ಟಾಂಗಾದಲ್ಲಿ ಹೋಗುವುದೆಂದರೆ ? ಎಲ್ಲ ಟಾಂಗಾವಾಲಾ ಜನರು ಸಭ್ಯರು ಇರುತ್ತಾರೆಯೆ ? ದುರ್ದೈವದಿಂದ ಏನಾದರೂ ಕೆಡಕು ಸಂಭವಿಸಿದರೆ ? ಸುನೀತಾಳ ತಂದೆಗೆ ಏನೆಂದು ಪತ್ರ ಬರೆಯಬೇಕು ? ಇದೆಲ್ಲ ಮುರಲಿಯ ತಪ್ಪು ಎಂದೇ ? ಅಯ್ಯೋ ! ಇದೆಂಥ ದುರಂತ !

ಆ ಟಾಂಗಾ ಊರ ಹೊರಗೆ ಹೋಗುವುದರೊಳಗಾಗಿ, ಮುರಲಿ ಆ ಟಾಂಗಾವನ್ನು ಮುಟ್ಟಬೇಕೆಂದು ಯೋಚಿಸಿದ. ಎಂದಿಲ್ಲದ ಆವೇಶದಿಂದ ಸಾಯಕಲ್ಲನ್ನು ಓಡಿಸಿದ. ಅವನ ವೇಗ ಮೈಯಲ್ಲಿ ಗಾಳಿಹೊಕ್ಕಂತೆ ಇದ್ದಿತು. ಸಮೀಪದ ಅಡ್ಡದಾರಿಯಿಂದ ಸಾಗಿದ.

ಊರಹೊರಗಿನ ಮನೆಯ ದಾರಿಯಲ್ಲಿ ನೋಡಿದ. ಬೆಟ್ಟದಿಂದ ಕೆಳಗಿಳಿದು ಡಾಂಬರ ರಸ್ತೆಯು ಬಿದ್ದುಕೊಂಡಿತ್ತು. ಗಿಡಗಳಲ್ಲಿ ಕತ್ತಲು, ದಾರಿಯಲ್ಲಿ ಕತ್ತಲು. ಕತ್ತಲೆಯ ಆ ಕಪ್ಪನ್ನು ನೋಡಿ, ಮುರಲಿಯ ಮುಖ ಕಪ್ಪಿಟ್ಟಿತು. ಯಾವ ಟಾಂಗಾದ ಬೆಳಕೂ ಅಲ್ಲಿ ಕಾಣಲಿಲ್ಲ. ಕುದುರೆಯ ಖುರಪುಟದ ಸಪ್ಪಳವೂ ಕೇಳಬರಲಿಲ್ಲ.

ಓ ! ಆ ಟಾಂಗಾ ಮನೆಯನ್ನೇ ಮುಟ್ಟಿರಬೇಕು. ಸುನೀತಾ ಆಗಳೇ ಮನೆ ಮುಟ್ಟಿರಬೇಕು. ಸ್ಟೇಶನ್ನಿಗೆ ಯಾರೂ ಬರದ ಸುದ್ದಿ ಹೇಳಿರಬೇಕು. ರಾಧೆ ತನಗೆ ಏನೋ ಬಯ್ದಿರಬೇಕು. ಏನೋ ಏನೋ ಚಿತ್ರಗಳು ಕಣ್ಣು ಮುಂದೆ ಬಂದು ನಿಂತವು. ಅಂತೆಯೇ ಮುರಲಿ ತನ್ನ ಮನೆಗೇ ಓಡಿ ಬಂದ.

ಟ್ರಿಣ್ ! ಟ್ರಿಣ್ !

ಝಗ್ಗನೆ ಮನೆಯ ಮುಂದಿನ ತೋಟದಲ್ಲಿ ವಿದ್ಯುದ್ದೀಪ ಬೆಳಗಿತು. ಮುರಲಿಯ ಮೂವರು ಮಕ್ಕಳೂ ಕೂಗುತ್ತ, ಕುಣಿಯುತ್ತ ಬಾಗಿಲನ್ನು ಫಟ್ಟನೆ ದಬ್ಬಿಕೊಂಡು ಹೊರಗೋಡಿಬಂದವು. ರಾಧೆ ಮುಗುಳುನಗೆ ನಗುತ್ತಲೇ ಬಾಗಿಲಲ್ಲಿ ಬಂದು ನಿಂತಳು.

ಆ ನಗುವಿನ ಗೆಲವನ್ನು ನೋಡಿ ಮುರಲಿಗೆ ಅಂತೂ ಸಮಾಧಾನನೆನಿಸಿತು. ಸಾಯಕಲ್ಲನ್ನು ಗೋಡೆಗೆ ಆನಿಸಿದವನೇ, ಮೊದಲು ನ ಬೆವರು ಒರೆಯಿಸಿಕೊಂಡನು. ಆ ಬೆವರು ಕೊಡದಷ್ಟು ಇದ್ದಿ

ಬಾಗಿಲೊಳಗೆ ಬಂದಕೂಡಲೆ "ಯಾಕೆ ? ಸುನೀತಾ ಲಿಲ್ಲ ?" ಎಂದು ರಾಧೆ ಕೇಳಿದಳು. ಮಂದಸ್ಮಿತ ಮುಖದಲ್ಲಿ ಆ ಮಾತುಗಳ ಅರ್ಥವನ್ನು ಮುರಲಿ ಮಾಡಿಕೊಂಡು ತಾ ನಕ್ಕನು. ಮೂರು ಮಕ್ಕಳು ಮುರಲಿಯನ್ನು ಮುತ್ತಿ "ಕಾ ಕಾಕಿ !" ಎಂದು ಕಿರಚಿಕೊಂಡವು.

"ಏಕೆ ? ನಿಮ್ಮ ಕಾಕಿಯನ್ನು ಒಳಗೆ ಅಡಗಿಸಿ ಇಟ್ಟಿರುವಿರೇನ ಮುರಲಿ ಕೇಳಿದ.

ಮುರಲಿಯ ಮಾತು ಚೇಷ್ಟೆಯದೇ ಎಂದು ರಾಧೆಗೆ ಅನಿಸಿ "ಟಾಂಗಾ ಇನ್ನೂ ಹಿಂದೆ ಇದೆಯೋ ?" ಎಂದು ಕೇಳಿದಳು. ಳಿಗೆ ಅನಿಸಿತು, ಸುನೀತಾ ಹಿಂದೆ ಟಾಂಗಾದಲ್ಲಿ ಬರುತ್ತಿರಬೇ ಮುರಲಿ ಮುಂದೆ ಬಂದಿರಬೇಕು ಎಂದು.


ಆದರೆ ಸುನೀತಾ ಮನೆಗೆ ಬಂದಿರಲೇ ಇಲ್ಲವೆಂಬುದನ್ನು ದಾಗ, ಮುರಲಿ ದಿಙ್ಮೂಢನಾದನು. ಅವನ ಮೈ ಜುಮ್ ಎಂದಿ ಮತ್ತೆ ಮೈ ಬೆವರೊಡೆಯಿತು.

ರಾಧೆಗಂತೂ ದಿಕ್ಕುತೋಚದಂತಾಯಿತು. ಅವಳಿಗೆ ಮಾಡಬೇಕೆಂಬುದೇ ಹೊಳೆಯಲಿಲ್ಲ. ಮುರಲಿಯ ಕಥೆ, ಕಥೆ ಗಿಯೇ ಉಳಿಯಿತು. ಅವನು ಹೇಳಿದ ಸಕಾರಣಗಳು, ಬೋಗ ಮೇಲೆ ನೀರು ಹೊಯ್ದಂತೆಯೇ ಆಯಿತು.

"ನೀವು ಆಫೀಸಿಗೆ ಹೋಗುವಾಗಲೇ ನಾನು ಹೇಳಲಿಲ್ಲ ನಿಮಗೆ, ಸರಿಯಾಗಿ ವೇಳೆಗೆ ಹೋಗಿರಿ ಎಂದು ? ಬರಿ ಹೂಂ ಹ ಅನ್ನುತ್ತೀರಿ.ಯಾವುದನ್ನೂ ಸರಿಯಾದ ವೇಳೆಗೆ ನೀವು ಮಾಡುವುದಿ

ಕೋಪ ಅಸಮಾಧಾನ ಎರಡೂ ರಾಧೆಯ ಕಣ್ಣುಗಳಲ್ಲಿ ನ ಡಿಸಿದವು.

"ನಮ್ಮದೇ ಕೆಲಸ ಆಗಿದ್ದರೆ, ಹೇಗೋ ನಡೆಯುತ್ತಿತ್ತು. ಹು ಹೊಸದಾಗಿ ಮನೆಗೆ ಬರುವಾಕೆ. ನೀವು ಸ್ಟೇಶನ್ನಿಗೇನೇ ಹೋ ದ್ದರೆ, ಅವಳ ತಂದೆ ನಮಗೆ ಏನೆಂದಾರು ? ಆ ಹುಡಿಗೆ ಏನೆ ಕೊಂಡಾಳು ? ಇಷ್ಟೂ ನಿಮಗೆ ತಿಳಿಯುವುದಿಲ್ಲಾ ಅಂದರೆ ...



ಮುರಲಿಗೆ ಏನೂ ತಿಳಿಯದಂತಾಗಿತ್ತು. ಆರಾಮವಿಲ್ಲದ ವಿರಾಮ ಕುರ್ಚಿಯಲ್ಲಿ ಮುರಲಿ ಕುಸಿದು ಕುಳಿತುಬಿಟ್ಟಿದ್ದ. ರಾಧೆ ಸಿಟ್ಟಿನ ಆವೇಶದಲ್ಲಿದ್ದಳು. ಅವಳ ಮಾತಿಗೆ ಕಡಿವಾಣವೇ ಇರಲಿಲ್ಲ.

"ನಿಮ್ಮ ಈ ಹಣ್ಣುಹಂಪಲ ಯಾರಿಗೆ ಬೇಕಿತ್ತು? ಪತ್ರ ಬಂದಿತ್ತು. ಅಂದ ಮೇಲೆ, ರೈಲು ಬರುವ ವೇಳೆ ನೀವು ಏಕೆ ತಿಳಿದು ಕೊಳ್ಳಬಾರದಿತ್ತು? ಒಂದು ಅರ್ಧ ತಾಸು ಮೊದಲೇ ಹೋಗಿದ್ದರೆ ಏನಾಗುತ್ತಿತ್ತು? ಗಂಡಸರು ನೀವು. ಜವಾಬ್ದಾರಿಯೇ ತಿಳಿಯುವ ದಿಲ್ಲವೇ? ಒಂದು ಸಣ್ಣ ವಿಷಯದಲ್ಲಿಯೂ ನಮ್ಮ ಮಾನ ಕಳೆದು ಕೊಳ್ಳುತ್ತಿದ್ದೇವೆ. ಇದು ಹೇಗೆ ನಿಮಗೆ ಗೊತ್ತಾಗುವದಿಲ್ಲ?"

ರಾಧೆ ನಿರಾಶೆಯಿಂದ ಕೆಲವು ಪಾತ್ರೆಗಳನ್ನು ನೆಲಕ್ಕೆ ಅಪ್ಪಳಿಸಿದಳು. ಯಾವುದೋ ದುಃಖದ ಭಾರದಿಂದ ಅವಳ ದೇಹ ಕುಸಿದು ಬೀಳುವುದೇನೋ ಎಂದು ಅನಿಸಿತು.

ಪಡಸಾಲೆಯಲ್ಲಿಯೇ ಕುಳಿತ ಮುರಲಿ ತನ್ನಷ್ಟಕ್ಕೆ ತಾನೇ ವಿಚಾರಿಸಿ ಕುರ್ಚಿಯಿಂದ ಮೇಲಕ್ಕೆದ್ದನು. ಅಂತಹ ಸಿಟ್ಟಿನಲ್ಲಿಯೂ ರಾಧೆಗೆ ಮುರಲಿಯ ಹೆಜ್ಜೆಯ ಸಪ್ಪಳ ಕೇಳಿಸಿತು.

"ನಿಲ್ಲಿ ಎಲ್ಲಿಗೆ ಹೋಗುವಿರಿ? ಹೇಳಿ ಹೋಗಿರಿ. ಕಂಡದ್ದನ್ನಾಡಿದರೂ ಕೆಂಡದಂತಹ ಸಿಟ್ಟು ನಿಮಗೆ ಬರುತ್ತಿದೆ." ರಾಧೆ ಮುರಲಿಯನ್ನು ಬಾಗಿಲಲ್ಲಿ ಅಡ್ಡಗಟ್ಟಿ ನಿಂತಳು.

ಇಂಥದೇ ರಾತ್ರಿ. ಇಂಥದೇ ಕತ್ತಲು. ಇಂಥದೇ ಜಗಳ. ಮುರಲಿ ಬಿರಬಿರನೇ ಹೊರಗೆ ಹೋಗಿಬಿಟ್ಟಿದ್ದ. ಕತ್ತಲನ್ನು ತುಳಿಯುತ್ತ, ಕತ್ತಲೆಯಲ್ಲಿ ಮರೆಯಾಗಿ ಬಿಟ್ಟಿದ್ದ. ಅದೂ ಒಂದು ತಿಂಗಳ ಹಿಂದೆ!

"ಎಲ್ಲಿಯ ಸಿಟ್ಟು? ನನ್ನದೇ ತಪ್ಪಾಯಿತು .... ರಾಧೆ ....?", ಮುರಲಿಯು ನಿಟ್ಟುಸಿರು ಬಿಟ್ಟನು. ಆ ಮಾತುಗಳಿಂದ ರಾಧೆಯ ಕೋಪ ಜರ್‍ರನೆ ಇಳಿಯಿತು.

ಅಸ್ತವ್ಯಸ್ತ ಕೂದಲು; ಬೆವರೊಡೆದ ಮುಖ; ದಣಿದ ದೇಹ. ಹಗಲಿರುಳೂ ದುಡಿ ದುಡಿದು ಹಣ್ಣಾದ ದೇಹ. ಒಮ್ಮೆಲೆ ಕನಿಕರವು ರಾಧೆಯಲ್ಲಿ ಮನೆಮಾಡಿಕೊಂಡಿತು. ದೈನ್ಯದಿಂದ ಅಂತರಾಳದ ಒಲುವಿನಿಂದ ರಾಧೆ ಕೇಳಿದಳು. "ಇನ್ನು ಎಲ್ಲಿ ನೋಡುವಿರಿ?"

ಊರಲ್ಲಿಯ ಒಂದೆರಡು ಮನೆಗಳ ಹೆಸರು ಹೇಳಿದ ಮುರಲಿ. ಅದನ್ನು ಕೇಳಿದ ಮೇಲೆಯೇ ಮುರಲಿಯನ್ನು ರಾಧೆ ಹೊರಗೆಬಿಟ್ಟಳು.

ಸುನೀತಾಳನ್ನು ತೋರಿಸಲು, ಅವಳ ತಂದೆ ಅವಳನ್ನು ಕರೆದುಕೊಂಡು ಬಂದಿದ್ದರು- ಆಗ ಊರಲ್ಲಿ ಪುರೋಹಿತ ಎಂಬವರ ಮನೆಯಲ್ಲಿ ಉಳಿದುಕೊಂಡಿದ್ದರು ಪುರೋಹಿತ ಅವರು ಸುನೀತಳಿಗೆ ದೂರದ ಬಳಗ. ಮುರಲಿ ಸುನೀತಳ ತಂದೆಯವರ ಕೂಡ ಪುರೋಹಿತರ ಮನೆಗೆ ಹೋಗಿದ್ದನು. ಪುರೋಹಿತರ ಮನೆ ಪೇಟೆಯ ಸಮೀಪವಿತ್ತು. ಅಲ್ಲಿಗೆ ರಾತ್ರಿಯಲ್ಲಿ ಹೋಗಲು ಏನೂ ಹೆದರಿಕೆಯಿರಲಿಲ್ಲ. ಕತ್ತಲಾದುದನ್ನು ಕಂಡು ಸುನೀತಾ ಬಹುತರವಾಗಿ ಅವರ ಮನೆಗೆ ಹೋಗಿರಬಹುದೆಂದು ಮುರಲಿಯು ತರ್ಕಮಾಡಿದ. ಆ ಮನೆಯಲ್ಲಿ ತಾನು ಬರುವ ದಾರಿ ನೋಡುತ್ತಿರಬಹುದೆಂದೂ ಎಣಿಕೆಹಾಕಿದ.

ಪುರೋಹಿತರ ಮನೆಯ ಕಟ್ಟೆಗೆ ಸಾವಕಾಶವಾಗಿ ತನ್ನ ಸಾಯಕಲ್ಲನ್ನು ಆನಿಸಿಟ್ಟು, ಮುರಲಿ ಬಾಗಿಲೊಳಗೆ ಹೋದ. ಪಡಸಾಲೆಯಲ್ಲಿ ಕುಳಿತ. ಒಂದಿಬ್ಬರು ಹೆಣ್ಣುಮಕ್ಕಳು ಸರಕ್ಕನೆ ಎದ್ದು ಒಳಗೆ ಹೋದರು. ಒಳಗೆ ಏನೋ ಗಡಿಬಿಡಿ ಕಾಣಿಸಿತು. ಒಬ್ಬ ಚಿಕ್ಕಹುಡಿಗೆ ಹೊರಗೆ ಬಂದು ಮುರಲಿಯನ್ನು ಪುರೋಹಿತರ ಕಡೆಗೆ ಕರೆದುಕೊಂಡು ಹೋದಳು.

ಪುರೋಹಿತರು ಹಾಸುಗೆಯಲ್ಲಿ ಕೆಮ್ಮುತ್ತ ಎದ್ದು ಕುಳಿತರು. "ಕೂಡ್ರಿ. ಬಹಾಳ ದಿವಸದ ಮೇಲೆ ಬಂದ್ರಿ .... ಕೂಡ್ರಿ." ಕೆಮ್ಮುತ್ತಲೆ ಪುರೋಹಿತರು ಮಾತನಾಡಿದರು.

ಮುರಲಿ ಹಾಸುಗೆಯ ಸಮೀಪದ ಕುರ್ಚಿಯಲ್ಲಿ ಕುಳಿತುಕೊಂಡ. "ಏನ್ರಿ? ಮೈಯಲ್ಲಿ ಚೆನ್ನಾಗಿಲ್ಲವೇನು?"

"ಹೂಂ! ಬದುಕಿದ್ದೇ ಹೆಚ್ಚಿನದು. ಮೊನ್ನೆಯಂತೂ ಈ ಜಗತ್ತಿನ ಆಶೆಯನ್ನೇ ಬಿಟ್ಟಿದ್ದೆ.!!"

ಪುರೋಹಿತರು ಮತ್ತೆ ಕೆಮ್ಮಲು ಆರಂಭಿಸಿದರು. ದೇಹವೆಲ್ಲ ಬಡಕಲಾಗಿತ್ತು ಮುಖವು ಬಾಡಿತ್ತು. ಕಣ್ಣುಗುಡ್ಡಿಗಳು ಒಳಸಿಕ್ಕಿದ್ದವು. ಮರಣ ಮುಖದಲ್ಲಿ ಮನೆಮಾಡಿದಂತೆ ಕಂಡಿತು ಮುರಲಿಗೆ.

"ಅಯ್ಯೋ! ಪಾಪ! ಬಹಳ ಸೊರಗಿದ್ದೀರಿ. ನಾನು ಹಿಂದಕ್ಕೆ ನಿಮ್ಮನ್ನು ಕಂಡಾಗ ....?"

"ಆರು ತಿಂಗಳ ಹಿಂದೆ ..... ಹೂಂ ..... ಆಗ ಮೈಯಲ್ಲಿ ಬರಿ ಅಶಕ್ತತೆ ಇತ್ತು ...."

"ಏನಾಗಿದೆ ಈಗ? ಏನು ಜಡ್ಡು ....?"

"ಜ್ವರ .... ಕೆಮ್ಮು ...."

"ಅಣ್ಣಾ, ಚಹಾಕ್ಕ ಇಟ್ಟಾರ" ಚಿಕ್ಕ ಹುಡಿಗೆ ನಗುತ್ತಲೆ ಬಂದು ಹೇಳಿದಳು.

"ಮುರಲೀಧರರಾವ...." ಇಷ್ಟು ಮಾತನಾಡಬೇಕಾದರೆ ಪುರೋಹಿತರಿಗೆ ಎರಡು ಸಲ ಕೆಮ್ಮ ಬೇಕಾಯಿತು. "ಏನು ಚಹನೋ ಅಥವಾ ಕಾಫಿಯೋ ....?"

"ಛೇ ಏನೂ ಬೇಡ ಈಗ ...."

"ಏನೂ ಬೇಡ ಅಂದರೆ ಹೇಗೆ ....? ಬಹಾಳ ದಿನಗಳ ಮೇಲೆ ಬಂದೀರಿ. ಚಹಾ ತಂಗೊಂಡೇ ಹೋಗ್ರಿ."

ಪುರೋಹಿತ ಅವರು ಜುಲುಮೆ ಮಾಡಿ, ಚಹದ ಸಲುವಾಗಿ ಮುರಲಿಯನ್ನು ಕೂಡಿಸಿಯೇ ಬಿಟ್ಟರು. ಮನೆಯ ವರೆಗೆ ಬಂದು, ತಾನು ಬಂದ ಉದ್ದೇಶ ಹೇಳದೆ ಹೋದರೆ ಹೇಗೆ? ಪುರೋಹಿತರಿಗೆ ಜಡ್ಡಾಗಿದ್ದರೂ ಚಿಕ್ಕ ಹುಡಿಗೆ ನಗುತ್ತಲೇ ಮಾತನಾಡುತ್ತಿದ್ದಳು. ಯಾವದೋ ಕಳ್ಳ ನಗೆ ಆ ಮುಖದಲ್ಲಿ ಇದ್ದಿತು. ಬಾಗಿಲಲ್ಲಿ ಹಣಿಕೆ

---




ಪತ್ನಿ : ನನಗೆ ಮೊನ್ನೆಯಿಂದ ನೆಗಡಿ ಹಿಡಿದಿದೇರಿ.

ಪತಿ : ಹಾ. ಅದಾದ್ರೂ ಹಿಡೀತಲ್ಲ ಸದ್ಯಕ್ಕೆ ಯಾವುದೂ ತಂದ್ರೂ ನನಗೆ ಹಿಡೀಲಿಲ್ಲಾ ಹಿಡೀಲಿಲ್ಲಾ ಅಂತ ಹೇಳ್ತಿದ್ದೆ.

---

ಹಾಕಿ ಹೆಂಗಸರು ಮುರಲಿಯ ಕಡೆಗೆ ನೋಡುತ್ತಿದ್ದರು. ಒಳಗೆ ಚಹಡ ಸಿದ್ಧತೆಯೂ ನಡೆದಿತ್ತು. ಇವೆಲ್ಲವುಗಳಿಂದ ಸುನೀತಾ ಒಳಗೆ ಇರಬಹುದೆಂದು ಮುರಲಿ ತರ್ಕಮಾಡಿದ. ಆದುದರಿಂದ ಧೈರ್ಯ ಮಾಡಿಯೇ ಮುರಲಿ ಕೇಳಿದ. " ಇಲ್ಲಿ ಸುನೀತಾ ಬಂದಿರುವಳೇ ?"

" ಇಲ್ಲ ! " ಸಹಜವಾಗಿಯೇ ಪುರೋಹಿತರು ನುಡಿದರು. "ಯಾಕೆ ? ನವರಾತ್ರಿಗೆ ನಿಮ್ಮಲ್ಲಿ ಬಂದಿರುವಳೇನು ?

ಮುರಲಿಯ ಆಶೆಯ ಗೋಪುರ ಕಳಚಿತು. ಧಡೀರನೆ ಕೆಳ ಗುರುಳಿತು. ಪುರೋಹಿತರ ಎದುರಿಗೆ ಕೂಡಲೇ ಮಾತನಾಡುವುದೂ ಆಗಲಿಲ್ಲ. ಉಗುಳುನುಂಗಿಕೊಂಡು ಮುರಲಿ ಹೇಳಿದ " ನವರಾತ್ರಿಗೆ ಬರಲು ತಿಳಿಸಿದ್ದೆ. ಅವಳ ತಂದೆ ದೀಪಾವಳಿಯಾದ ಮೇಲೆ ಕಳಿ ಸೋಣ ಎಂದು ಅನ್ನುತ್ತಿದ್ದರು. ಆದರೂ ಮನೆಯಲ್ಲಿ ಅಡಚಣಿ ಎಂದು ಪತ್ರ ಬರೆದೆ. ನನ್ನ ತಮ್ಮ ಹೊಸ ಮನೆ ನೋಡಿದ್ದಾನಂತೆ. ದಸರೆಯಾದ ಮೇಲೆ ಸುನೀತಳನ್ನು ಕಳಸಿಕೊಡಬೇಕು. ಅಲ್ಲಿಯ ವರೆಗಾದರೂ ನಮ್ಮಲ್ಲಿರಲಿ ಎಂದು ತಿಳಿಸಿದ್ದೆ. ಇಂದೇ ಶನಿವಾರ ಕಳಿಸಿ ಕೊಡುವುದಾಗಿ ಸುನೀತಳ ತಂದೆ ಪತ್ರ ಬರೆದಿದ್ದರು. "

" ನಮ್ಮಲ್ಲಿಗೇನೂ ಅವಳು ಬಂದಿಲ್ಲ" ಪುರೋಹಿತರು ನುಡಿದರು.

ಪುರೋಹಿತರಿಗೆ ತಾನು ಮಾಡಿದ ತಪ್ಪನ್ನು ಒಪ್ಪಿಕೊಂಡು, ಸಾದ್ಯಂತವಾಗಿ ಎಲ್ಲ ಕಥೆಯನ್ನು ಮುರಲಿಯು ಹೇಳಬೇಕಾಯಿತು. ಪುರೋಹಿತರು ಅದು ಮುರಲಿಯ ತಪ್ಪು ಎಂದು ಅಭಿಪ್ರಾಯ ಪಡ ಲಿಲ್ಲ. ಅಷ್ಟೆ ಸಮಾಧಾನ ಮುರಲಿಗೆ.

ಪುರೋಹಿತರು ಕೆಮ್ಮುತ್ತಲೇ ಹೇಳಿದರು. " ರಾಯರಃ ಹೀಗೆ ರೈಲು ವೇಳಾಪತ್ರಿಕೆ ಬದಲಾದದ್ದು ಹೇಗೆ ತಿಳಿಯಬೇಕು ? ಏನೋ ನಜರಚೂಕು. ಆದರೂ ಪಾಪ ! ನಿಮಗ ಬಹಳ ತ್ರಾಸ ಆಯಿತು. ..... ಛೇ.... ಛೇ.... ನನಗ ಮೊದಲ ಗೊತ್ತಾಗಲಿಲ್ಲ. ನಿಮ್ಮನ್ನ ಸುಮ್ಮನ ಹಿಡಿದು ಕೂಡಿಸಿದೆ ಚಿಂತಿಯೊಳಗ ..... ಏಃ ! ಲಗೂನೆ ಚಹಾ ತಗೊಂಡು ಬರ್ರಿ."

ಮುರಲಿ ಯಾವುದೋ ವಿಚಿತ್ರ ಮನಸ್ಸಿನಲ್ಲಿ ಚಹವನ್ನು ಕುಡಿದ. ಮುರಲಿಯ ಮುಖವನ್ನು ನೋಡಿ, ಪುರೋಹಿತರಿಗೂ ಖೇದವೆನಿಸಿತು. "ನಮ್ಮ ವಾಸುದೇವರಾವ ಪಾಟೀಲರ ಮನೆಯಲ್ಲಷ್ಟು ನೋಡಿರಿ. ಅವಳು ಒಂದು ವೇಳೆ ಅಲ್ಲಿಗೆ ಹೋಗಿದ್ದರೂ ಹೋಗಿರಬಹುದು. ಅದು ಸ್ಟೇಶನ್ನಿಗೂ ಸಮೀಪವಿದೆ...."

ಮುರಲಿಗೆ ವಾಸುದೇವರಾಯರ ಪರಿಚಯವಾಗಿತ್ತು. ಅವರ ಮನೆಯೂ ಗೊತ್ತಿತ್ತು. ಸುನೀತಳ ತಂದೆಗೆ ವಾಸುದೇವರಾಯರು ದೂರದ ಬಳಗ. ಮುರಲಿ ಅದೊಂದು ಮನೆಯಲ್ಲಿ ನೋಡಬೇಕೆಂದ.

ಅಲ್ಲಿಂದ ಹೊರಡುವಾಗ ಪುರೋಹಿತರು ಮುರಲಿಗೆ ಹೇಳಿದರು "ನಮಗೂ ಚಿಂತೆಯಾಯಿತು. ನಾಳೆ ಬೆಳಗ್ಗೆ ಸುದ್ದಿಯನ್ನು ಜರೂರ ತಿಳಿಸಿರಿ."

ಮುರಲಿಯ ಪ್ರಯಾಣ ಮತ್ತೆ ಸಾಗಿತು. ಎರಡು ಮೈಲು ದೂರ ವಾಸುದೇವರಾಯರ ಮನೆ. ಈಗಾಗಲೇ ಮುರಲಿ ಬೇಸತ್ತಿದ್ದ. ಅವನ ಕಾಲುಗಳಲ್ಲಿ ಶಕ್ತಿಯಿರಲಿಲ್ಲ. ಆದರೂ ಅರೆಗಚ್ಚಿ ಕೆಲಸ ಹೇಗೆ ಮಾಡ ಬೇಕು ? ಏನಾದರೊಂದು ಇತ್ಯರ್ಥವಾಗಲೇಬೇಕಲ್ಲ. ಪ್ರಯತ್ನಬಟ್ಟು ಮೈಯಲ್ಲಿ ಶಕ್ತಿಯನ್ನು ಸಂಗ್ರಹಿಸಿಟ್ಟುಕೊಂಡು ಸಾಗಿದ.

" ಈಗ ಹೇಗೆ ಬಂದಿರಿ ಮನೆಗೆ ? " ಬಾಗಿಲದಲ್ಲಿ ಎಲೆಯಡಿಕೆ ಅಗಿಯುತ್ತ ನಿಂತ ವಾಸುದೇವರಾಯರು ಕೇಳಿದರು.

ವಾಸುದೇವರಾಯರ ಮಾತು ಮುರಲಿಗೆ ಅತ್ಯಂತ ಆನಂದವನ್ನು ಕೊಟ್ಟಿತು. ಸಂತೋಷದ ಉಸಿರನ್ನು ಸೂಸುತ್ತ " ಹೂಂ ! ಬಳಗ ಸಂಬಂಧಮಾಡಿಕೊಂಡ ಮೇಲೆ ಬರಬೇಕಲ್ಲ. "

" ನಾನೂ ಅದೇ ಅಂದೆ. ನೀವು ಸ್ಟೇಶನ್ನಿಗೆ ಬಂದರೂ ಮನೆಯ ಕಡೆ ಬರುವದಿಲ್ಲ. ಈಗ ಹೇಗೆ ಬರುತ್ತಿರುವಿರಿ ? " ವಾಸುದೇವರಾ-ಯರು ನಗುನಗುತ್ತ ಮುರಲಿಯನ್ನು ಒಳಗೆ ಕರೆದುಕೊಂಡು ಹೋಗಿ ಕೂಡಿಸಿದರು.

" ಹಾಂ ! ನಾನು ಸ್ಟೇಶನ್ನಿಗೆ ಬಂದದ್ದು ನೋಡಿದಿರಿ ನೀವು ? "

" ಓಹೋ ! ಅದೇನು ? ಊರಿಗೆ ಬಂದ ನಾರಿ ನೀರಿಗೆ ಬರದೇ ಹೋಗತಾಳೇನು ಎಂಬ ಗಾದೆಯಮಾತು ನಿಮಗೆ ಗೊತ್ತಿಲ್ಲವೇ ? ಊರಲ್ಲಿದ್ದ ಮೇಲೆ ಊರಿಗೆ ಹೋಗದೇ ಇರತೀರಾ ? ಸ್ಟೇಶನ್ನಿಗೆ ಬರದೇ ಇರತೀರಾ ? "

" ಇಂದು ಬಂದಿದ್ದು ನಿಮಗೆ ಗೊತ್ತಾಯಿತೇ ? "

" ಓಹೋ !...."

ಮುರಲಿಯು ಯೋಚಿಸಿದ " ಹಾಂ ! ಟಾಂಗಾದಲ್ಲಿ ಬಂದ ದೇಶ-ಪಾಂಡೆ ಹೇಳಿರಬೇಕು ನಿಮಗೆ. "

ವಾಸುದೇವರಾವ ಹೇಳಿದರು "ಹಾಂ ! ಹಾಂ ! ಅವರೇ ಹೇಳಿದ್ದು ನಿಮಗೆ ದಾರಿಯಲ್ಲಿ ಭೆಟ್ಟಿಯಾಗಿದ್ದರಂತೆ. "

" ವಾಸುದೇವರಾವ್ ದೇಶಪಾಂಡೆ ನೆಟ್ಟಗೆ ಮಾಡಿದರು. ಆರು ಗಂಟೆಗೇ ಸ್ಟೇಶನ್ನಿಗೆ ಹೋದರು. ಅವರಿಗೆ ಗಾಡಿ ಸಿಕ್ಕಿರಬೇಕು. "

" ಓಹೋ ! ಸಿಗದೇ ಏನು ? ಆರು ಗಂಟೆಗೇ ಸ್ಟೇಶನ್ನಿಗೆ ಬಂದ ಮೇಲೆ ? "

" ದೇಶಪಾಂಡೆ ಅವರ ಮುಂದೆಯೇ ಹೇಳಿದ್ದರೆ ಚೆನ್ನಾಗಿತ್ತು ನೋಡಿರಿ. ಸುನೀತ ಅದೇ ರೈಲಿಗೆ ಬರುವಾಕೆಯಿದ್ದಳು. ನನ್ನದು ಅರ್ಧತಾಸು ತಡವಾಯಿತು. "

" ಆ ರೈಲಿಗೆ ಬಂದಿದ್ದರೆ ಬರಲೇಬೇಕಲ್ಲ. "

" ದೇಶಪಾಂಡೆ ಏನಾದರೂ ಹೇಳಿದರೇ ? ಸುನೀತ ಇಳಿದದ್ದನ್ನು ನೋಡಿದರೆ ?"

" ಮುರಲೀರಾವ್, ನನಗೆಲ್ಲ ಗೊತ್ತಿದೆ. " ಖೊಳ್ಳನೇ ನಕ್ಕರು. " ಅದೇ ರೈಲಿಗೆ ಎಷ್ಟೋ ಜನ ಹೆಂಗಸರು ಇಳಿದರು. ದೇಶಪಾಂಡೆ ನೋಡಿದರಂತೆ. "

"ಹಾಂ ! ನನಗೆ ತಿಳಿಯಿತು. ನನಗ ಇನ್ನ ಕಾಳಜೀಯಿಲ್ಲ.... ಸುನೀತಾ ಇಲ್ಲಿಯೇ ಇರಲಿ, ಬೇಕಾದರ ನಾಳೆ ಬರಲಿ. "

" ಅಂದರ ಸುನೀತಾ ಬಂದಾಳೇನು ಇವತ್ತು ? "

" ಹುಂ ! ಹೂಂ ! ನಿಮ್ಮ ಚೇಷ್ಟೆ ನನಗ ತಿಳಿಯೂದಿಲ್ಲ ? "

" ನಿಜವಾಗಿಯೂ ಸುನೀತಾ ಇಲ್ಲಿ ಇಲ್ಲ. "

ಮುರಲಿ ಚೇಷ್ಟೆಯಲ್ಲಿಯೆ ಎಲ್ಲವನ್ನು ಸಾಗಿಸಿದ. ಸುನೀತಳ ಲಗ್ನಕ್ಕಿಂತಲೂ ಮೊದಲು ಅವರ ಪರಿಚಯವಿತ್ತು. ಮುರಲಿ ಮತ್ತು ವಾಸುದೇವರಾವ ಒಂದೇ ವಯಸ್ಸಿನವರು.ವಾಸುದೇವರಾಯರು ಸ್ವಲ್ಪ ನಗಚಾಟಿಕೆಯ ಸ್ವಭಾವದವರು. ಮುರಲಿಯ ಕೂಡ ಚೇಷ್ಟೆಯಿಂದ ಸಹಜವಾಗಿ ಮಾತನಾಡುತ್ತಿದ್ದರು. ಸುನೀತಳ ಲಗ್ನವನ್ನು ಹೊಂದಿ ಸುವಾಗ ಅವರೂ ಓಡಾಡಿದ್ದರು. ಮನೆ ದೂರವಿದ್ದುದರಿಂದ, ಮುರ ಲಿಗೆ ಮೇಲಿಂದ ಮೇಲೆ ಅವರ ಮನೆಗೆ ಹೋಗುವದು ಆಗುತ್ತಿರಲಿಲ್ಲ. ದಾರಿಯಲ್ಲಿಯೇ ಅವರ ಭೆಟ್ಟಿಯಾಗುತ್ತಿತ್ತು.

ಮುರಲಿಯ ಮಾತುಗಳನ್ನು ಕೇಳಿಕೊಂಡು, ವಾಸುದೇವರಾವ ಹೇಳಿದರು. "ಹಾಗಾದರೆ, ಸುನೀತಾ ಮುಂದಿನ ಸ್ಟೇಶನ್ನಿಗೆ ಹೋದಳೋ ಏನೋ! ಅಲ್ಲಿ ಆತನ ಅಣ್ಣ—ಅವರ ಅಬಚಿಯ ಮಗ—ಸ್ಟೇಶನ್ನಮಾಸ್ತರ ಇದ್ದಾರ."

"ಹಾಂ! ಹಾ! ನನಗೆಲ್ಲ ಗೊತ್ತದ. ಇದೇ ಸ್ಟೇಶನ್ನದಾಗ, ಇದೇ ನಿಮ್ಮ ಮನೆಯಾಗ ಇದ್ದಾಳ....ವಾಸುದೇವರಾವ, ಆಗಲೆ ರಾತ್ರಿ ಬಹಳಾಯಿತು. ಒಂಬತ್ತೂವರೆ ಗಂಟೆಯಾಯಿತು. ಟಾಂಗಾ ತೆಗೆದುಕೊಂಡು ಬರತೇನಿ...''

"ಇಲ್ಲ ಮುರಲೀರಾವ, ನಿಮಗ ನಾನು ಸುಳ್ಳು ಹೇಳುವದಿಲ್ಲ...."

"ಎಲ್ಲಾ ನನಗ ಗೊತ್ತದ. ಟಾಂಗಾ ತೆಗೆದುಕೊಂಡ ಬಂದರಂ, ನೀವು ಲಗೂನ ಕಳಸ್ತೀರಿ....ಅಲ್ಲೆ ಮನೆಯೊಳಗ ಹಾದಿ ನೋಡಲಿಕ್ಕೆ ಹತ್ತಿದ್ದಾರೆ.''

"ಇಲ್ಲ! ನಿಜವಾಗಿಯೂ ಇಲ್ಲ....''

"ಹಾಗಾದರೆ ಇಲ್ಲೆ ಇರಲಿ. ನಾಳೆ ಬೆಳಿಗ್ಗೆ ಕಳಿಸಿರಿ.''

"ನಿಜವಾಗಿಯೂ ಸುನೀತಾ ಇಲ್ಲ....''

"ಹಾಗಾದರೆ ನೀವು ಇಷ್ಟೊತ್ತಿನ ವರೆಗೆ ಹೇಳಿದ್ದು?''

"ಸಹಜವಾಗಿ ಹೇಳಿದೆ...." ವಾಸುದೇವರಾಯರು ಈಗ ಗಂಭೀರ ವಾಗಿಯೇ ಮಾತನಾಡಿದರು. ಅದರಲ್ಲಿ ಸುಳ್ಳಿನ ಅಂಶವಿರಲಿಲ್ಲ.

ಕುಲಕುಲನೆ ನಗುತ್ತಿದ್ದ ಮುರಲಿಯ ಮುಖ ಮತ್ತೆ ಮ್ಲಾನ-ವದನವಾಯಿತು. ಮುರಲಿಗೆ ಮತ್ತೆ ಮಾತು ಹೊರಡದಂತಾದವು.

ಮನೆಯನ್ನು ಬಿಡುವಾಗ ವಾಸುದೇವರಾವ ಹೇಳಿದರು. "ನಾಳೆ ಬೆಳಗಿನವರೆಗೂ ದಾರಿ ನೋಡಿರಿ. ಎಲ್ಲಿಯಾದರೂ ಇಳಿದುಕೊಂಡಿರ ಬೇಕು. ಬೆಳಗಾದ ಮೇಲೆ ಅವಳು ಮನೆಗೆ ಬಂದೇಬರುವಳು. ಅವಳ ತಂದೆಗೆ ಈಗೇನೂ ತಾರು ಮಾಡಬೇಡಿರಿ. ನಾಳೆ ೧–೨ ತಾಸು ಹೊತ್ತು ಏರುವವರೆಗೂ ದಾರಿ ನೋಡಿರಿ. ಆ ಮೇಲೆ ಏನಾದರೂ ತಂತಿ ಕಳಿಸೀರಂತೆ."

ಮುರಲಿ ಮತ್ತೆ ಸಾಯಕಲ್ಲು ಹತ್ತಿದ. ಅವನ ವಿಚಿತ್ರ ಮುಖ-ಮುದ್ರೆ ನೋಡಿ ವಾಸುದೇವರಾಯರು ಮತ್ತೆ ಹೇಳಿದರು. "ನಾಳೆ ಏನಾಯಿತೆಂಬುದನ್ನು ನನಗೂ ತಿಳಿಸಿರಿ ಬೇಕಾದರೆ ಬೆಳಿಗ್ಗೆ ಏಳು ವರೆಗೆ ನಾನೇ ನಿಮ್ಮ ಮನೆಗೆ ಬರುವೆ."

ಟ್ರಿಣ್! ಟ್ರಿಣ್!!

ಥಕ್ಕನೆ ತೋಟದಲ್ಲಿ ದೀಪ ಬೆಳಗಿತು.

ಸಾಯಕಲ್ಲು ಮತ್ತು ಮುರಲಿ.

ಬಾಗಿಲದ ಬಳಿ ರಾಧೆ.

ಗೋಡೆಯ ಬದಿಗೆ ಸಾಯಕಲ್ಲ.

ಕುರ್ಚಿಯಲ್ಲಿ ಕುಸಿದುಬಿದ್ದ ಮುರಲಿ.

ಎಲ್ಲೆಲ್ಲೂ ನಿಃಶಬ್ದ.

ಮಗುಗಳು "ಕಾಕೂ! ಕಾಕೂ!" ಎಂದು ಕೂಗಿ ನಿದ್ದೆಹೋಗಿದ್ದವು.

"ಸುನೀತಾ ಬಂದಳೇ?"

"........................"

"ಏನಾದರೂ ಸುದ್ದಿ?"

"........................"

"ಅವರು ಏನೆಂದರು?"

"........................"

ಮುರಲಿ ಶಿಲೆಯಂತೆ ಕುಳಿತುಕೊಂಡಿದ್ದ. ಯಾವ ಮಾತೂ ಇರಲಿಲ್ಲ. ಅವನ ಕಣ್ಣುಗಳೇ ಮಾತನಾಡುತ್ತಿದ್ದವು.

ರಾಧೆ ಅವೇ ಕಣ್ಣುಗಳ ಕಡೆಗೆ ನೋಡಿದಳು. ಹತ್ತು ವರುಷಗಳ ಹಿಂದೆ, ಮದುವೆಯಾದ ಮೊದಲ ವರ್ಷ ಆ ಕಣ್ಣುಗಳಲ್ಲಿ ಎಂಥ ಕಳೆ ತುಂಬಿತ್ತು! ಎಂಥ ಪ್ರೇಮದ ಬೆಳಕು ಹೊಳೆಯುತ್ತಿತ್ತು. ಆ ಕಣ್ಣು ಗಳಿಗೆ ಯಾವಾಗಲೂ ಮುದ್ದಿಡಲೇ ಎಂದು ರಾಧೆಗೆ ಅನಿಸಿತ್ತು.


ಎಂಥ ಕಣ್ಣು! ಈಗ ಎಂಥಾ ಕಣ್ಣು!! ಹತ್ತು ವರುಷಗಳಲ್ಲಿ ಸೋತುಬಿಟ್ಟವೆ. ಮನೆತನದ ದೊಡ್ಡ ಭಾರ. ತಂದೆ-ತಾಯಿಗಳನ್ನು ಕಳೆದುಕೊಂಡುದು; ಮೂವರು ತಂಗಿಯರ ಲಗ್ನ, ಒಬ್ಬ ತಮ್ಮನ ಲಗ್ನ, ಹತ್ತು ವರ್ಷಗಳಲ್ಲಿ ಎಲ್ಲಾ ನಡೆದುಹೋಗಬೇಕೇ?

ರಾಧೆ ಬಾಗಿಲ ಇಕ್ಕಿಕೊಂಡು ಬಂದಳು. ಮುರಲಿಯ ಕೈಯನ್ನು ಹಿಡಿದುಕೊಂಡು ಒಳಗೆ ಕರೆದುಕೊಂಡು ಹೋದಳು. ಮುರಲಿಯ ಕಣ್ಣುಗಳನ್ನು ತಟ್ಟಿ ತಟ್ಟಿ, ಕೈಯಾಡಿಸುತ್ತ ನುಡಿದಳು "ನಾನು ಬಯಸಿದ್ದೇ ತಪ್ಪಾಯಿತು. ಏನೋ ಇಷ್ಟು ವರ್ಷ ದುಡಿದಿದ್ದೇನೆ. ಅವಳು ಬಂದಿದ್ದರೆ ಹದಿನೈದು ದಿನವಾದರೂ ಅರ್ಧ ವಿಶ್ರಾಂತಿ ಸಿಗುತ್ತಿತ್ತು. ಹಬ್ಬದ ದಿನಗಳಲ್ಲಿ ನೆರವಾಗುತ್ತಿದ್ದಳು. ನಾನು ನಿಮ್ಮ ಕಡೆಯಿಂದ ಪತ್ರ ಬರೆಸಿದ್ದೇ ತಪ್ಪಾಯಿತು."

ಮುರಲಿ ಏನೂ ಮಾತಾಡಲಿಲ್ಲ. ನಡುನಡುವೆ ನಿಟ್ಟುಸಿರು ಬಿಡುತ್ತಿದ್ದನು. ರಾಧೆಯೇ ಸಮಾಧಾನದ ಮಾತು ಹೇಳಿದಳು. "ಹೇಗಾದರೂ ನಮ್ಮ ತಪ್ಪನ್ನು ಮುಚ್ಚಿಕೊಳ್ಳಬೇಕು. ಏನೋ ನಿಮ್ಮ ಕೆಲಸದ ಭಾರದಲ್ಲಿ, ಭಿಡೆಯ ಸ್ವಭಾವದಲ್ಲಿ ಹೀಗೆ ಆಗಿದೆ. ಈಗ ಏನು ಮಾಡ ಬೇಕು? ಅವರ ತಂದೆಗೆ ಈ ರಾತ್ರಿಯೇ ತಾರು ಮಾಡಿ ಬಿಡಿರಿ...."

ಮುರಲಿಗೆ ಮನಸ್ಸಿರಲಿಲ್ಲ. ಸುನೀತಾ ಬಂದಿಲ್ಲವೆಂದು ತಿಳಿದರೆ? ಸತ್ಯಸಂಗತಿ ಎಲ್ಲ ಹೊರಬಿದ್ದರೆ? ಎಲ್ಲವೂ ಮುರಲಿಯ ತಪ್ಪು. ಪಾಪ! ಆ ಹುಡಿಗೆಯ ಗತಿ ಏನಾಯಿತೋ?

ಒಬ್ಬರೇ ರೈಲಿನಲ್ಲಿ ಪ್ರವಾಸಮಾಡುವ ಹೆಂಗಸರ ಅಪಹರಣವಾದ ಉದಾಹರಣೆಗಳನ್ನು ರಾಧೆ ಕೇಳಿದ್ದಳು. ಅಂಥ ಉದಾಹರಣೆಗಳನ್ನು ನೆನೆದಾಗ ಮುರಲಿ, ರಾಧೆಯರ ಎದೆಗಳು ನಡುಗಿದವು. ತಮ್ಮ ಮನೆ ತನಕ್ಕೇ ಎಂಥ ಪಾಪ! ಎಂಥ ಕಲಂಕ!!



ರಾಧೆ ಮತ್ತೆ ಧೈರ್ಯ ತೆಗೆದುಕೊಂಡಳು. "ನಮಗಂತೂ ನಿದ್ದೆ ಹತ್ತುವುದಿಲ್ಲ. ಸುಮ್ಮನೆ ಕುಳಿತರೆ ಏನು ಉಪಯೋಗ ? ಪತ್ರ ಎಲ್ಲಿದೆ ಕೊಡಿರಿ. ದೇಶಪಾಂಡೆಯವರನ್ನು ಎಬ್ಬಿಸಿ ಕಳಿಸುವೆ. ಅವ ರಾದರೂ ತಾರು ಅಥವಾ ಫೋನಮಾಡಿ ಕೇಳಿಕೊಂಡು ಬರಲಿ. ನಾಲ್ಕು ಜನರಿಗೆ ಗೊತ್ತಾದರೆ, ಏನಾದರೂ ಸುದ್ದಿ ತಿಳಿದೀತು."

ನಿರ್ವಿಣ್ಣವಾದ ಕೈಗಳಿಂದ ಪತ್ರವನ್ನು ಕಿಸೆಯೊಳಗಿಂದ ಹೊರ ದೆಗೆದು ಮುರಲಿಯು ಕೊಟ್ಟನು. ರಾಧೆ ಸುನೀತಳ ವಿಳಾಸವನ್ನು ಆ ಪತ್ರದಲ್ಲಿ ಹುಡುಕಹತ್ತಿದಳು.

ಪತ್ರವನ್ನು ಓದುತ್ತಿದ್ದಂತೆಯೇ ರಾಧೆ ಖೊಳ್ಳನೆ ನಕ್ಕಳು. ಮುರಲಿ ಕಕ್ಕಾವಿಕ್ಕಿಯಾಗಿ ನೋಡಿದ. "ವಿಚಿತ್ರವಾದ ಆಘಾತದಿಂದ ಹೆಂಡತಿಗೆ ಹುಚ್ಚು ಹಿಡಿದಿಲ್ಲವಷ್ಟೇ ?" ಎಂದು ಚಿಂತಿಸಿದ. ರಾಧೆ ಮುರಲಿಯ ಮಗ್ಗುಲಲ್ಲಿಯೇ ಕುಳಿತು "ನೋಡ್ರಿ, ಪತ್ರವನ್ನು ಚೆನ್ನಾಗಿ ನೋಡ್ರಿ" ಎಂದಳು. "ನವರಾತ್ರಿ ನಂತರ ಶನಿವಾರ ಎಂದು ಬರೆದಿದ್ದಾರೆ. ನೀವು ನವರಾತ್ರಿ ಬರುವ ಮೊದಲಿನ ಶನಿವಾರ ಎಂದು ಇಂದು ಬೆಳಿಗ್ಗೆ ಹೇಳಿದಿರಿ."

"ಅಂದರೆ ಈ ದಿನ ಬಂದಿಲ್ಲ! ಆಹಾ!!" ಮುರಲಿಯೂ ನಕ್ಕನು. ಇಬ್ಬರ ನಗೆಗಳೂ 'ಸಮರಸವೇ ಜೀವನ' ಎಂದು ಹಾಡಿದವು.

ಆದರೆ ಒಂದು ಸಣ್ಣ ತಪ್ಪಿಗಾಗಿ ಎಷ್ಟು ಕಷ್ಟ ಅನುಭವಿಸ ಬೇಕಾಯಿತು ? ಎಷ್ಟು ಚಿಂತೆ ಮಾಡಬೇಕಾಯಿತು ? ಏನೋ ಹತ್ತು ವರ್ಷಗಳಲ್ಲಿಯೇ ಮುರಲಿಗೆ ಅರುವು ಮರವು ಆಗುತ್ತಿತ್ತು. ಕೆಲಸ ಸಮನಾಗಿ ಮಾಡುತ್ತಿರಲಿಲ್ಲ. ಮುದಿ ವಯಸ್ಸು ಹಣಿಕಿ ಹಾಕು ತ್ತಿದೆನೋ ಏನೋ ಎಂದು ಎನಿಸಿತ್ತು ಮುರಲಿಗೆ. ರಾಧೆಯ ಮುದ್ದು ಮೊಗವನ್ನು ನೆನೆದ. ಝುಗ್ಗನೆ ಅವನ ಬಾಳಿನಲ್ಲಿ ಬೆಳುದಿಂಗಳು ಬೀರಿತು.

" ರಾಧೆ, ಜೀವನ ನೆಳಲು ಬೆಳಕು. ಆ ನೆಳಲು ಬೆಳಕಿನಲ್ಲಿ ನಾವು ಆಡುತ್ತಿದ್ದೇವೆ. ಈ ಇಡೀ ದಿನ ಅಂಥ ಅನುಭವವಾಗಿದೆ. ಆದರೆ ಗಿಡದ ಕೆಳಗಿನ ನೆಳಲು, ಒಂದೇ ಬೆಳಕಿನಿಂದಲೇ ಆಗಿದೆ. ಅದು ಯಾವುದು ? ''

ರಾಧೆ ಉತ್ತರ ಕೊಡಲಿಲ್ಲ ನಗುನಗುತ್ತ ದೀಪವನ್ನು ಆರಿಸಿದಳು. ಅಂಥ ಕತ್ತಲದಲ್ಲೂ, ಅವರಿಗೆ ಆದಿನ ಒಲವಿನ ಅನಂತ ಬೆಳಕು ಕಂಡಿತು.



**ಈ ಏಕಾಂಕ ನಾಟಕದ ಪಾತ್ರಗಳು**

೧. ದಾಸಣ್ಣ  ೨. ಜಯ  ೩. ರಾಜಾ
೪. ರಾಧಕ್ಕ  ೫. ಮಾಯಾ.

# ಇವ ಮಗ!

ವಿದೇಶದಲ್ಲಿ ಅಭ್ಯಾಸಕ್ಕೆಂದು ತೆರಳಿದ ಮಗನ ಬಗ್ಗೆ ಒಂದು ಬಗೆಯ ಆಸೆ ತಳೆದ ತಂದೆ-ತಾಯಿಗಳು ಮಗನಿಂದ ಅಪೇಕ್ಷಿಸಿದ್ದೇನು? ಪಡೆದದ್ದೇನು? ಎಂಬುದರ ಕರುಣಾ ಜನಕ ಚಿತ್ರವನ್ನಿಲ್ಲಿ ನೋಡಬಹುದು. . . . .


ಲೇಖಕರು :
**ಶ್ರೀ ಎಲ್. ಜಿ. ಬೇಂದ್ರೆ,**
ಧಾ ರ ವಾ ಡ


[ ದಾಸಣ್ಣನ ಮನೆಯ ಪಡಸಾಲೆ, ಗೋಡೆಗೆ ತಿರುಪತಿ ವೆಂಕಟರಮಣನ ಹಾಗು ರಾಘವೇಂದ್ರಸ್ವಾಮಿಗಳ ಪಟಗಳು ತೂಗಹಾಕಿವೆ. ಬಲಮಗ್ಗಲು ಗೋಡೆಗೆ ಒಂದು ಹಳೆಯ ಮಾದರಿಯ ಕುರ್ಚಿ,ಒಂದು ಮಾಸಿದ ಬಟ್ಟೆಯ ಆರಾಮ ಕುರ್ಚಿ ಹತ್ತಿರ್ಹತ್ತಿರ ಇಡಲಾಗಿವೆ. ಗೋಡೆಗೆ ಕೆಲವು ಬಟ್ಟೆಗಳು ಕಾಣುತ್ತಿವೆ. ರಂಗದ ಮಧ್ಯೆ ಒಳಗೆ ಹೋಗುವ ಬಾಗಿಲು. ಮಧ್ಯದ ಬಾಗಿಲಿಗೆ ತೋರಣ ಕಟ್ಟಿದೆ. ಹೊರಬಾಗಿಲಿಗೂ ಮಧ್ಯದ ಬಾಗಿಲಿಗೂ ನಡುವೆ ಇರುವ ಜಾಗದಲ್ಲಿ ಗೋಡೆಗೆ ಹೊಂದಿ ಒಂದು ಜಮುಖಾನೆ ಹಾಸಿ, ಹಾಸಿಗೆ ಸುರುಳಿ ಇಟ್ಟಿದೆ. ದಾಸಣ್ಣ ಜಮುಖಾನೆಯ ಮೇಲೆ ಕುಳಿತಿದ್ದಾನೆ. ಉಟ್ಟದ್ದು ಧೋತರ ಮೈಯಲ್ಲಿ ಬಿಳಿಜುಬ್ಬ. ವಯಸ್ಸು ಸುಮಾರು ೫೦. ಅರಮರ್ಧ ನೆರೆಹಾಯ್ದ ಕೂದಲು. ಎದುರಿಗೆ ದಾಸರಪದದ ಪುಸ್ತಕವನ್ನು ತೆರೆದಿಟ್ಟುಕೊಂಡಿದ್ದಾನೆ. ಅಡಕೊತ್ತಿನಿಂದ ಅಡಿಕೆಯನ್ನು ಪುಡಿಮಾಡುತ್ತಿದ್ದಾನೆ. ಮಗ್ಗಲಿಗೆ ಚಂಚಿ, ಪೀಕದಾನಿ. ಪುಸ್ತಕದಲ್ಲಿ ನೋಡುತ್ತ ಹಾಡಿನ ಪಲ್ಲವಿಯನ್ನು ತನ್ನಷ್ಟಕ್ಕೆ ಅಂದುಕೊಳ್ಳುತ್ತಿದ್ದಾನೆ. ]




ರಾಧಾ— ಅಲ್ಲೇ ಹುಸು ನಿಂತಿರ್ರಿ ದೃಷ್ಟೀ ತಗೀತೀನಿ . . . .

ದಾಸಣ್ಣ— 'ಮಾನವ ಜನ್ಮ ದೊಡ್ಡದು ಇದ ಹಾನಿಮಾಡಲು ಬೇಡಿ ಹುಚ್ಚಪ್ಪಗಳಿರಾ! ಮಾನವ ಜನ್ಮ ದೊಡ್ಡದು!!' ದಾಸರ ಈ ಅಮೃತವಾಣಿ ಸತ ಅದ, ಸತ್ಯ ಅದ. ಆದರೆ ನಾಯಿ ಬಾಲದ ಬುದ್ಧಿಯ ಮಾನವಗ ಎಷ್ಟು ಸಾವಿರ ವರ್ಷ ಹೇಳಿದರೂ ಅಷ್ಟs ಜಗ್ಗಿ ಹಿಡಿದಾಗಷ್ಟೇ ಸಮ ಇರೋದು, ಬಿಟ್ಟರ ಮತ್ತ ಮೊದಲಿನ ಡೊಂಕೇ! ಡೊಂಕಾಗಿರೋದೇ ಅದರ ಧರ್ಮ ಅಂದಮ್ಯಾಲ ಮಾಡೋದೇನು? ನನ್ನ ಮನಸ್ಸಿಗೂ ನಾನು ಬುದ್ಧಿ ಹೇಳಿಕೋತೇನಿ, ಅಂದರಾದರೂ ಬುದ್ಧಿ ಬಂದೀತೇನೊ ಅಂತ್ಯ ಅಧ್ಯಾಂಗ ಬರತsದ? ಬುದ್ಧಿ ಹೇಳಿಕೊಂಡಾಗೂ ಬರೂದುಲ್ಲ, ಕೇಳಿಕೊಂಡಾಗೂ ಬರೂದುಲ್ಲ. ಕಳಕೊಂಡಾಗ ಬರೋದು! ಹೌದು, ಕಳಕೊಂಡಾಗs ಬರೋದು. ಖರೆ ಅದ . . . . ಕಳಕೊಂಡಾಗs ಬರೋದು . . . .

ರಾಧಕ್ಕ— ( ಹೊರಗೆ ಬರುತ್ತ ) ಯಾರು? ಏನು?

ದಾಸ— ನನ್ನ ತಲಿ! ( ಅಡಿಕೆ ಬಾಯಲ್ಲಿ ಹಾಕಿ, ಎಲೆಗೆ ಸುಣ್ಣ ಹಚ್ಚುತ್ತಾನೆ. )

ರಾಧ— ನಿಮ್ಮ ತಲೀ ಕಳಕೊಳ್ಳು ಕೆಲಸ ಆಗೇದೇನೀಗ?

ದಾಸ— ತಲೀಗೆ ಎರಡರ್ಥವ, ಗೊತ್ತದನೊ ಇಲ್ಲೊ?

ರಾಧ— ಆದರ ನಮ್ಮ ತಲೀಗೆ ತಿಳಿಯೋದು ಒಂದsಅರ್ಥ.

ದಾಸ— ಹೌದು. ಅದು ಯಾವಾಗಲೂಅನರ್ಥ! ಸ್ತ್ರೀ ಬುದ್ಧಿಃ ಪ್ರಳಯಾಂತಿಕಾ! ಪರಿಸ್ಥಿತೀದು ನಿನಗ ಸರಿಯಾಗಿ ಅರ್ಥ ಆಗೂದಲ್ಲಾ ಅಂತ. ಒಂದ, 'ಅನರ್ಥ, ನನಗ ಅರ್ಥ ಆದರೂ ಅನುಕೂಲಮಾಡಿಕೊಳ್ಳೋ ಸಾಮರ್ಥ್ಯ ಇಲ್ಲ ಅಂತ ಇನ್ನೊಂದು ಅನರ್ಥ. ಒಟ್ಟು ಅನರ್ಥ ತಪ್ಪಿದ್ದಲ್ಲ, ಇಷ್ಟೊಂದು ಖರೆ! ಜಯ ಬರ್‍ತಾನ ಅಂತ ಜಯಘೋಷ ನಡಿಸೀದಿ. ಸ್ವಾತಂತ್ರ್ಯ ಸಿಗೋ ಮುಂಚಿನ ಅಬ್ಬರ ಸಿಕ್ಕಮ್ಯಾಲ ಹ್ಯಾಂಗ ಉಳೀಲಿಲ್ಲ. ಹಾಂಗ ಅಂವ ಬರೋ ಮುಂಚಿನ ಉಬ್ಬು ಬಂದಮ್ಯಾಲ ಉಳೀಲಿಕ್ಕಿಲ್ಲಾ. ಇದ್ನೊಡು, ಪ್ರೀತಿ ಮಗ, ಮೂರು ವರ್ಷದ ಮ್ಯಾಲ ಪರದೇಶದಿಂದ ಪರತ್ ಬರ್‍ತಾನ . . . . ಅಂವ ಪಾಸಾದ ಪರೀಕ್ಷಾದ ಲೆಕ್ಕಾ ಹಾಕಿದರ ಅಂವ ನಮ್ಮ ಕೈಗೆ ಹತ್ತ್ಯಾನ ಅಂತೇನು ಅನಿಸೋದಿಲ್ಲ. ನೀನು ಪ್ರೀತಿ ಮಾಡಲಿಕ್ಕೆ ನನ್ನ ಆಕ್ಷೇಪಣ ಇಲ್ಲ, ಅದು ಅಸಾರ್ಥಕಾಗಬಾರದು. (ಎಲೆ ಬಾಯಲ್ಲಿ ಹಾಕಿ, ತಂಬಾಕ ಮಿಜ್ಜುತ್ತಾನೆ. )

ರಾಧ— ನೀವು ಯಾವದನ್ನೂ ಕಾಂಚಾಣದ ಕಟಿಗೀಲೆ ಅಳೀತಿರಿ.

ದಾಸ— ಜಗತ್ತಿನೊಳಗ ಅದೊಂದೇ ಅಳತಿಗೋಲು ಈಗ ಉಳಿದಿರೋದು ಅದರಲೆ ಬೇಕಾದ್ದರ ಬೆಲಿ ಕಟ್ಟಲಿಕ್ಕೆ ಬರ್ತದ! ಅರ್ಥಸ್ಯ ಪುರುಷೋದಾಸಃ! ದುಡ್ಡಿನ ದಾಸ ಗಂಡಸು....

ರಾಧ— ನೀವು ಗಂಡಸರು ಆದಕ್ಕ ದಾಸರಾಗಿರಬಹುದು. ನಾವು ಹೆಂಗಸರು...

ದಾಸ— ಊಂಹುಂ...ಹೀಂಗದ. ಅರ್ಥಕ್ಕ ನಾವು ದಾಸರು, ನಮಗ ನೀವು ದಾಸರು, ಅಂದರ ದಾಸರ ದಾಸರು.

ರಾಧ— ಹ್ಯಾಂಗs ಅರ್ಥ ಮಾಡ್ರಿ. ನಾವು ಹೆಂಗಸರಂತೂ ಭಾವನಾದ ಮ್ಯಾಲ ಬದಕ್ತೀವಿ.

ದಾಸ— ಅಂತs ಸಾಯ್ತಿರಿ. ಮತ್ತ ಸತ್ತು ಸುಣ್ಣಾಗ್ತೀರಿ.

ರಾಧ— ಆದರ ನೀವು ಗಂಡಸರು ಮಾತ್ರ ಕಡೆತನಕ ಕಲ್ಲಾಗೇ ಉಳೀತಿರಿ!

ದಾಸ— ಹಾಂಗಂತs ಈ ಸಂಸಾರದ ಸೆಳವಿನೊಳಗ ಕೊಚಿಗೊಂಡು ಹೋಗದ ಜಾಗಾ ಹಿಡದು ನಿಲ್ಲತಿವಿ. ದಾಸರs ಹೇಳಿಲ್ಲೇನು—'ಕಲ್ಲಾಗಿರಲು ಬೇಕು ಕಠಿಣ ಭವ ತೊರೆಯೊಳಗೆ' ಅಂತ.

ರಾಧ— ಸಂಸಾರದೊಳಗೆ ಎರಡೂ ಬೇಕು. ಬರಿ ಕಲ್ಲಾಗಿ ಉಳದರ ಕಟುಗರಿಗೂ ನಿಮಗೂ ಅಂತರೇನು? ಈ ಮಾತಿರಲಿ. ಜಯ ಬರ್ತಾನಿವತ್ತ. ನನಗಂತೂ ಮುಂಜಾನಿಂದ ಅವನ ಮಾರೀನs ಕಣ್ಣ ಮುಂದ ಕಟ್ಟಿದ್ಹಂಗ ಆಗೇದ. ಮೂರು ವರ್ಷಾತು ಮಾರೀ ನೋಡದ! ದೊಡ್ಡವ ಆಗಿ ಕಾಣಸ್ತಿದ್ದಾನು. ಮೀಸೀನೂ ಬಂದಿದ್ದಾವು!

ದಾಸ— ಮೀಸೇನು, ಬರೊ ವಯಸ್ಸಿಗೆ ಬ್ಯಾಡಂದರೂ ಬರ್ತಾವ! ಬುದ್ಧಿ ಬಂದಿದ್ದರ ಒಳ್ಳೇದು.

ರಾಧ— ಬುದ್ಧಿ ಅಂವಗ ಆದನs ಅದ.

ದಾಸ— ಹೀಂಗಂತ ನಿನ್ನ ತಿಳವಳಿಕಿ ಆಗೇದ.

ರಾಧ— ಸರಕಾರದವರು ಅವನ್ನ ಪರದೇಶಕ್ಕೇನು ಛಂದಕ್ಕ ಕಳಿಸಲಿಲ್ಲ—ಕಾಲರ್‌ಶೀ ಕೊಟ್ಟು......

ದಾಸ— ಸರಕಾರದವರಲ್ಲs; ಟಾಟಾ ಅವರು ಕಳಿಸಿದ್ದು......

ರಾಧ— ಟಾಟಾನೋ ಬಾಟಾನೊ......

ದಾಸ— ಬಾಟಾದವರು ಕಳಿಸಿದ್ದರ ಹೋಗತಿದ್ದ ಚಪ್ಪಲೀ ಹೊಲೀಲಿಕ್ಕೆ! ಅದಾದರೂ ಒಂದು ಛಲೋ ಇತ್ತು. ಇದೇನೂ ಸಮಾಜ ಶಾಸ್ತ್ರದ ಅಭ್ಯಾಸಂತ. ಏನು ಸಮಾಜೋ, ಏನು ಶಾಸ್ತ್ರೋ? ಯಾತರದೂ ಒಂದು ಶಾಸ್ತ್ರಾಗಿ ಕೂತsದ!

ರಾಧ— ಹೋಗಲಿ ಬಿಡಿರಿ, ಅವೆಲ್ಲ ನಮಗೇನ ತಿಳೀತಾವ? ಮೂರು ವರ್ಷದ ಮ್ಯಾಲ ಮಗ-ಸೊಸಿ ಮನೀಗೆ ಬರ್ತಾರ, ನಮಗ ಅದs ಸಂಭ್ರಮ.

ದಾಸ— ಸಂಭ್ರಮ ಖರೇನs.... (ನಿಟ್ಟುಸಿರು ಬಿಟ್ಟು) ಅಲ್ಲಾ, ಅಂವ ನನ್ನ ಮಾತೇನ್ನಡಸಿದ? ವಿಲಾಯತೀಗೆ ಹೋಗಬ್ಯಾಡ ಅಂದೆ, ಹೋದ......

ರಾಧ— ಹೋದದ್ದಕ್ಕ ಕೆಟ್ಟದ್ದೇನಾತ್ತು? ದೊಡ್ಡ ಪರೀಕ್ಷಾ ಪಾಸಾಗಿ ಬಂದ. ಇನ್ನವಗ ಕೈತುಂಬ ಸಂಬಳದ ನೋಕರೀ ಸಿಗ್ತsದ......



ದಾಸ— ಸಿಕ್ಕೀತು. ಆದರ ಕೈಯೊಳಗಿನ ಕನ್ಯಾ ಹೋತು! ನಾ ಆರಿಸಿ ಕನ್ಯಾನ್ನ ಮಾಡಿಕೊಂಡು ಹೋಗಿದ್ದರ, ಐವತ್ತು ಸಾವಿರದ ಆಸ್ತೀಗೆ ಮಾ ಕಾಗ್ತಿದ್ದ! 'ಮದವಿ ಮಾಡಿಕೊಂಡು ಹೋಗೋ ಅಂದರ ವಿಲಾಯತಿಯಿಂ ಬಂದಮ್ಯಾಲs ಮದವಿ ಅಂತ ಹಟ ಹಿಡದ. ಅಲ್ಲಿಂದ ಹಾಗs ಅರೆ ಬಂದನ ಯಾವುದೊ ಒಂದು ಗಂಟು ಹಾಕ್ಕೊಂಡು ಬಂದ!.... ಹೋಗಲಿ, ಮ ಸ್ಸಿಗೆ ಬಂಧಾಂಗ ಮಾಡವಲ್ಲನ್ಯಾಕ......

ರಾಧ— ಯಾಕ ಜಯಾನ ಬಗ್ಗ ಇಷ್ಟು ಅಧೈರ್ಯ ಹುಟ್ಟೇದ ನಿಮಗೆ? ಅವ ಸ್ವಭಾವ ಇವತ್ತ ಕಂಡೀರಾ?

ದಾಸ— ಅವ ಹುಟ್ಟಿದಾಗಿನಿಂದ ಕಂಡೀನಿ. ಭೂತಕಾಲ ನೋಡಿದ ನನ ಭವಿಷ್ಯನೂ ಎದುರಿಗೆ ಕಾಣಸ್ತದ. ಆದರ ನಿನಗ ಮಾತ್ರ ಮೂರು ವರ್ಷ ಮ್ಯಾಲ ಮಗ ಮನೀಗೆ ಬರ್ತಾನಂಬೊ ಇಂದಿನ ಮಾತಷ್ಟs ಕಂಡದ ಮುಂಧೋರಣೆಲ್ಲದ ಯಾವದು ಮಾಡಿದರೂ ಕೈ—ಸುಟುಗೊಳ್ಳೊ ಹೊತ್ತು ಬರ್ತsದಂಬೊ ಎಚ್ಚರ ಬೇಕು ನಮಗ.ಅದಕ್ಕs ನಾ ಮಾತಮಾತಿ ಅಂತಿರ್ತೀನಿ—ಕಳಕೊಂಡಾಗs ಬುದ್ಧಿ ಬರೋದು ಅಂತ.

ರಾಧ— ಅದs, ಅಂತೀರಲ್ಲ—ತಮ್ಮದು ತಮಗ ತಿಳಿಯೋದುಲ್ಲ ಅಂತ. ನೀವ ಯಾತರಾಗೊಂದು ಉಳಿಸಿಗೊಂಬೋದೂ ಅಂತ ಹೊರಡ್ತಿರಿ. ಆದರ ಹಿ ದಿರ್ತಿರಿ ಕಳಕೊಂಬೋದರ ಹಾದೀ! ಹಣ ಕಳಕೊಂಡಾಗಷ್ಟs ಖರೆ ಕಳ ಕೊಂಡಾಂಗ ಅಂತ ನಿಮಗನಸ್ತದ. ಧರ್ಮ, ಕರ್ಮ, ದಾಕ್ಷಿಣ್ಯ, ದೊಡ್ಡ ಸ್ತಿಕಿ—ಯಾವದಕ್ಕ ಹಾನಿ ಆದರೂ ಹಾನಿ ಅಲ್ಲs ಅಲ್ಲs ನಿಮ್ಮ ಲೆಕ್ಕ ದಾಗ

ದಾಸ— ಮತ್ತ ಲೆಕ್ಕಕ್ಕ ಹತ್ತೋದು ಇದೊಂದೂ ಹಾನಿ ಅಲ್ಲ. ಮತ್ತ ಯಾವ ಹಾನಿ ಲೆಕ್ಕಕ್ಕ ಹಚ್ಚಲಿಕ್ಕೆ ಬರೋದಲ್ಲ, ಅದು ಹಾನಿ ಅಂತ ಆಗೋದೇ ಇಲ್ಲ. ಕಾಲನs ಈಗ ಹಾಂಗ ಬಂದsದ!

ರಾಧ— ಹಾಂಗs ಮಾಡ್ರಿ. ನಿಮ್ಮ ಲೆಕ್ಕ ನಿಮಗ, ನಮ್ಮ ಲೆಕ್ಕ ನಮಗ- ಮನೀದಿರಲಿ, ಮೈಮ್ಯಾಲಿಂದಿರಲಿ, ಹರಕ—ಮುಚಿಗೊಂಡರ ಮರ್ಯಾದಿ.

ದಾಸ— ಅದು ಮನಸಿನೊಳಗs ಮನಿಮಾಡಿ ಕೂತsದ. ಹೊರಗ ಮುಚ್ಚಿದರ ಆಗೋದೇನು?

ರಾಧ— ಹೋಗಲಿ, ಈಗ ಮಾತಿಗೆ ಮಾತು ಬೆಳಸಿ ವಾದಸ್ತ ಕೂಡಬ್ಯಾಡ್ರಿ... ಏಳ್ರಿ.. ಎದ್ದು ಈ ಪಡಸಾಲಿ ಅಷ್ಟು ಛಂದಾಗಿ ಮಾಡ್ರಿ .. ಇವ ರಾಜಾ ಬೆಳಿಗ್ಗ ಎದ್ದವನs ಹೋಗ್ಯಾನ. ಹತ್ತು ಹೊಡದರೂ ಮನೀಗೆ ಬರಲಿಕ್ಕೆ ಠಿಕಾಣೆಲ್ಲ. ಏನು ಮಾಡ್ತಾನೊ, ಎಲ್ಲೆ ಹೋಗ್ತಾನೊ,

ದಾಸ— ಅವ ಬಿಡಾಡಿಯೇನು ತಿರಗೋದುಲ್ಲ—ಇಷ್ಟು ಗೊತ್ತದ ನನಗ. ಏನಾರೆ ಸಾರ್ವಜನಿಕ ಕೆಲಸ, ಮಂದೀಕೆಲಸ ಹಚ್ಚಿಗೊಂಡಿರ್ತಾನ...ಹೋಗಿದ್ದಾನು...

ರಾಧ— ಇದs ಬ್ಯಾಡ ಅಂತ ಅಂಬೋದು ನಾನು. ಮೂರು ವರ್ಷಾತ್ತು, ಇವನ ಹಣೇಬರಕ್ಕ ಒಂದು ಬಿ. ಎ. ಪಾಸಾಗೋದಾಗವಲ್ಲದು. ತನ್ನದs ಎತ್ತಲಾರದ್ದು ಮಂದಿನ್ನ ಎತ್ತಲಿಕ್ಕೆ ಹೊರಟsದ! ಇವತ್ತ ಜಯ ಬರ್ತಾ ನಂಬೋದರದೇನಾದರೂ ಖಬರದಯೇನಿವಗ? ನೀವ ಹೇಳ್ರಿ....

ದಾಸ— ಬಂದಾನೇಳೀಗ.

ರಾಧ— ಅವ ಹಾಳಾಗಿ ಹೋಗವಲ್ಲನ್ಯಾಕ. ನೀವೂ ಮುದ್ದೀಬಸವಣ್ಣನ್ಹಾಂಗ ಕೂಡಬ್ಯಾಡ್ರಿ ತಂಬಾಕ ಜಮಡಿಕೋತ— ಇತ್ತಿತ್ತಲಾಗ ಆ ದಾಸರಹೊತ್ತಿ ಗೊಂದು. ಹೊತ್ತಿಗಾಗದಿದ್ದರ ಯಾವ ಹೊತ್ತಿಗಿ ತೊಗೊಂಡೇನು ಮಾಡೋ ದದ? (ಸುತ್ತಲೂ ನೋಡಿ) ಒಂದರೆ ಛಲೊ ಖುರ್ಚೇನ, ಟೇಬಲ್ಲ, ಒಳ್ಳೆ ಜಮಖಾನೆ ಸಹಿತ ಇಲ್ಲ ಕೂಡಲಿಕ್ಕೆ. ಗಂಡ-ಹೆಂಡತಿ ಇಬ್ಬರೂ ಬಂದರ ಎಲ್ಲೆ ಕೂಡಬೇಕೊ, ಎಲ್ಲೆ ಮಲಗಬೇಕೊ? ಯಾರ ಮನೀವರೆ ಅನಕಾತ ನಾಕುದಿವಸ ಇಸಗೊಂಡರೆ ಬರ್ರಿ.

ದಾಸ— ನಮಗ್ಯಾರು ಕೊಡ್ತಿದ್ದಾರು? ರಾಜಾನs ಏನರೆ ತಂದರ ಬಿಟ್ಟರ ಈಗ ಬಂದ ಅಂದರ ಹೇಳೋಣಂತ.

ರಾಧ— ಸಾಕು, ನೋಡಲಾರೆ. ಹೊತ್ತಿಗೆ ಕೂಳಿಗೆ ಬಂದರ ಸಾಕಾಗೇದ ಅದಿರಲಿ, ನನ್ನ ಅಡಗೀಮನಿ ನೋಡಬರ್ರಿ. ಎಷ್ಟು ವಾರಣಾಗಿ, ಸಿಸ್ತಾಗಿ ಮಾಡಿಟ್ಟೇನಿ. ಮುಂಬಯಿ ನಮೂನಿ ಕಾಣಸ್ತದ. ಪಡಸಾಲಿಯಷ್ಟು ಠೀಕಾಗಿ ಮಾಡಿದಿರಿ ಅಂದರ ಬಂದಾಗ ಇಬ್ಬರಿಗೂ ತ್ರಾಸಾಗಲಿಕ್ಕಿಲ್ಲ. ಹೋಗಲಿ ಆಮ್ಯಾಲ ಇದನ್ನೆಲ್ಲ ಮಾಡೀರಂತ. ಮೊದಲ ಪ್ಯಾಟೀಸಾಮಾನು ತೊಗೊಂಡ

ಬರ್‍ರಿ. ನಾಕುದಿವಸದ ಮಟ್ಟಿಗೆ ಅಕ್ಕಿ-ಬ್ಯಾಳಿ ಅವ. ಮಿಕ್ಕದ್ದೆಲ್ಲ ತರಬೇಕು.

ದಾಸ— ಅಲ್ಲ, ಮೊನ್ನೆ ಕೇಳಿದಾಗ ಎಲ್ಲಾ ಅದ ಅಂದೆಲ್ಲ ಮತ್ತ ?

ರಾಧ— ಹಾಂಗದs. ಅಷ್ಟs ಹ್ಯಾಂಗ ಸಾಕಾಗ್ತದ ? ಜಯಾ ಬಂದಮ್ಯಾಲ--- ದೇವರಿಗೆ ಬೇಡಿಕೊಂಡೇನಿ— ಅಷ್ಟೋತ್ತರ ಆಗಬೇಕು, ಸತ್ಯನಾರಾಯಣ ಆಗಬೇಕು, ನಾಕು ಮಂದಿನ್ನ ಕರೀಬೇಕು . . . .

ದಾಸ— ಈಗ ಅದನ್ನೇನೂ ಹೂಡಿಕೊಂಡು ಕೂಡಬ್ಯಾಡ. ಜಯಾಗ ನೋಕರಿ ಆದಮ್ಯಾಲ ಮಾಡೋಣಂತ ಎಲ್ಲಾ.

ರಾಧ— ರಾಜ್ಯಾಕ್ಕ ಹೊರ್ತಾದವರು ನೀವೊಂದು ! ಮಂದಿ 'ಛಿ' ಹಾಕ್ಯಾರು. ಪಾಸಾಗಿ, ಮದಿವ್ಯಾಗಿ ಸುರಕ್ಷಿತ ಮಗ-ಸೊಸಿ ಬರ್‍ತಾರ . . . .

ದಾಸ— ಇದು ನೋಡು, ನನ್ನ ವಿನಾಕಾರಣ ಖರ್ಚಿಗೆ ಗುರಿ ಮಾಡಬ್ಯಾಡ. ನಂದs ನನಗ ಸಾಕಾಗಿ ಹೋಗೇದ.

ರಾಧ— ಆಗಿದ್ದೀತು ಪಾಪ ! ಅದೇನು ನಡಿಯೋದುಲ್ಲ. ದೇವರು, ಬ್ರಾಂಬರು ಎಲ್ಲಾ ಆಗಲಿಕ್ಕೇ ಬೇಕು.

ದಾಸ— ರಾಜಾನ್ನ ಕೇಳೋಣಂತ.

ರಾಧ— ಆ ಹುಚ್ಚು ಮುಂಡೇಗಂಡನ್ನೇನು ಕೇಳೋದು ? ಯಾತಕ್ಕೊಂದು ರಾಜಾ, ರಾಜಾ ! ಅವನ ಹೆಸರು ತೊಗೊಬ್ಯಾಡ್ರಿ, ನನಗ ಬಹ್ಮೇತಿ ಸಿಟ್ಟು ಬರ್‍ತದ ! ಕೂಳಿಗೆ ದಂಡಾಗಿ ಕೂತಾನ. ಜಯ ಬಂದ ಅಂದರ ನಾಕ ದಿವಸ ಇವನ್ನ ಎಲ್ಲಾರೆ ಕಳಸ್ರಿ, ಹೋಗಲಿ ಕಣ್ಮರಿಯಾಗಿ. ಯಾತಕ್ಕ ಉಪಯೋಗ ಬೀಳ್ತಾನವ ?

ದಾಸ— ಕಸಬರಿಗಿ ಹಳೇದಾದರೂ ಹೊತ್ತು ಬಂದಾಗ ಉಪಯೋಗಾಗ್ತದಂತ . . . . ಯಾಕೊ ಏನೋ, ಜಯಾನ ಮ್ಯಾಲಿದ್ದ ಪ್ರೀತಿ ನಿನಗ ರಾಜಾನ ಮ್ಯಾಲಿಲ್ಲ. ಇಬ್ಬರೂ ಮಕ್ಕಳs. ರಾಜಾ ಎಷ್ಟು ಅಂತಃಕರಣಿ ಇದ್ದಾನ, ಮನಸ್ಸೆಷ್ಟು ಛಲೂ ಅದ. ಹೆಂಗಸರು ಭಾವನಾದ ಮ್ಯಾಲ ಬದಕ್ತಾರ ಅಂತ ಬಾಯಿಲೆ ಅಂತೀದಿ. ಎಲ್ಲೆ ಹೋತ್ಕು ನಿನ್ನ ಭಾವನಾ, ನಿನ್ನ ಅಂತಃಕರಣ ? ಮಗನ್ನs ನೋಡದಾಕಿ ಮಂದಿನ್ನೇನು ನೋಡೀ ? . . . . ಅಗಾ, ಬಂದ ನೋಡು ರಾಜಾ . . . .

[ರಾಜಾ ಅವಸರವಸರದಿಂದ ಬರುತ್ತಾನೆ. ಬರುಬರುತ್ತಲೆ ಜೇಬಿನೊಳಗಿನ ತಾರನ್ನು ತೆಗೆದು ತಂದೆಯ ಎದುರು ಹಿಡಿಯುತ್ತಾನೆ. ]

ರಾಜಾ— ಮಾಮಾ, ಜಯಾನ ತಾರು ಬಂದದ . . .

ರಾಧ— ( ಗಾಬರಿಗೊಂಡು ) ತಾರ್‍ಯಾಕೊ ಮಾರಾಯಾ ? ಅಂಥಾದೇನೂ ಇಲ್ಲಲ್ಲs ಮತ್ತ ?

ರಾಜಾ— ಏನೂ ಇಲ್ಲ ಘಾಬರ್‍ಯಾಗೊ ಅಂಥಾದು. ಗಾಡಿಗೆ ಬರೋದs ಮೋಟರಲೆ ಬರ್‍ತಾನಂತ. ( ತಂದೆಯ ಕೈಯಲ್ಲಿ ಕೊಡುತ್ತಾನೆ. )

ರಾಧ— ಬರ್‍ಲಿ ನಂತಾಯಿ. ಸುರಕ್ಷಿತ ಬಂದರ ಸಾಕು.

ದಾಸ— ನಿನಗೆಲ್ಲಿ ಸಿಕ್ಕಿತಿದು ?

ರಾಜಾ— ತಾರಿನವ — ಇಲ್ಲೆ ನಾ ಮನೀಗೆ ಬರುವಾಗ ಕೊಟ್ಟ. ಮಾಮಾ, ಈ ಪಡಸಾಲಿ ಛಂದ ಕಾಣಸೊಹಾಂಗ ಫರ್ನಿಚರ್ ತಂದೀನಿ . . . . . ಜಯಣ್ಣ ಬರ್‍ತಾನ, ಹೊಸತಾಗಿ ವೈನಿ ಬರ್‍ತಾಳ !

ದಾಸ— ಎಲ್ಲಿಂದ ತಂದೆಪಾ ಈ ಫರ್ನಿಚರು-ಗಿರ್ನಿಚರು ?

ರಾಜ— ನನ್ನೊಬ್ಬ ಸ್ನೇಹಿತನ್ನ ಕೇಳಿದೆ, ತೊಗೊಂಡು ಹೋಗು ಅಂದ. ಈಗ ಎಕ್ಕಾಗಾಡಿಯೊಳಗ ಬರ್‍ತದ . . . . ಅಕಾ, ಬಂದs ಬಿಟ್ಟಿತು, ನೋಡ್ರಿ . .

( ರಾಜಾ ಹೊರಗೆ ಹೋಗುತ್ತಾನೆ. )

ದಾಸ— (ಹೆಂಡತಿಗೆ) ನೋಡಿದಿಲ್ಲೊ ಬೈತಿರ್‍ತೀದಿ ?

ರಾಧ— ನೀವು ಹೇಳಿದ್ದೇನು ?

ದಾಸ— ತಾನs ತಿಳಿದು ತಂದಾನ.

ರಾಧ— ದೇವರೇನು ಬುದ್ಧಿ ಕೊಟ್ಟನೊ !

[ ಕುರ್ಚಿಗಳು, ಟೇಬಲ್ಲು, ಟೀಪಾಯಿ, ಜಮುಖಾನೆ ಮುಂತಾದವುಗಳನ್ನು ರಾಜಾ ಒಂದೊಂದೆಯಾಗಿ ತಂದು ಒಳಗಿರಿಸುತ್ತಾನೆ. ]

ರಾಜಾ— ಸಾಕಲ್ಲs ಮಾಮೀ ಇವಿಷ್ಟು ? ಅಷ್ಟೇನು ಒಳ್ಳೇವಿಲ್ಲ. ಆದರೂ ಪಡಸಾಲಿ ಭರ್‍ತಿ ಕಾಣಸ್ತದ- ಇನ್ನೇನಾರೆ ಬೇಕಾದರ ಹೇಳ್ರಿ . . . . . .

ರಾಧ— ಅಯ್ಯಯ್ಯ ! ಎಷ್ಟು ಛಂದವ ಎಲ್ಲಾ !

[ರಾಜಾ ಫರ್ನಿಚರ್ ಹಚ್ಚಿಡುವದರಲ್ಲಿ ತೊಡಗುತ್ತಾನೆ. ದಾಸಣ್ಣ ಅವನಿಗೆ ನೆರವಾಗುತ್ತಾನೆ.]

ದಾಸ— ರಾಜಾ, ನೀನು ಇನ್ನೊಂದು ಕೆಲಸ ಮಾಡಬೇಕಪಾ—ಇವನ್ನೆಲ್ಲ ಹಚ್ಚಿಟ್ಟು— ಈಕೇನೋ ಅಂತಾಳ ನೋಡು—ಅಂಗಡಿ ಸಾಮಾನು ಬೇಕು ಅಂತ- ನೋಡಿ ತಂದು ಕೊಟ್ಟುಬಿಡು. . . . ಆದರ ನನ್ನ ಹತ್ತರೀಗ ಹಣ ಇಲ್ಲ. ರೈತ ನಿನ್ನೇ ಬರ್‍ತೀನಂತ ಅಂದಿದ್ದ. ಇವತ್ತಿಗೂ ಬರಲಿಲ್ಲ.

ರಾಜಾ— ಅವನ ಮಾತು ಖರೇ ಅಂತ ನಂಬಿದೇನು ನೀನು ? ಅಂವ ತಂದು ಕೊಡ್ತೀನಿ ಅಂತ ಬಾಯಿಲೆ ಆದರೂ ಆಡಿದ. ಅದನ್ನೂ ಮಾಡದs ಇರsವರು ಇದ್ದಾರ. ಈ ದಿವಸದೊಳಗ !

ದಾಸ— ಮತ್ತ ಹ್ಯಾಂಗ ಮಾಡ್ತೀ ಸಾಮಾನದ್ದು ?

ರಾಜಾ— ತರೋಣಂತ. ಹಣ ಇಲ್ಲ ಅಂತ ಹಿಂಜರೀಬ್ಯಾಡ. ನಾ ಅದನ್ನೂ ವ್ಯವಸ್ಥಾ ಮಾಡಿಟ್ಟೀನಿ. ಜಯಣ್ಣ ಬಂದಾಗ ಯಾವದಕ್ಕೂ ಕಡಮಿಮಾಡೋ ಹಾಂಗಿಲ್ಲ ನೋಡು. ಮಾಮಿ ಏನು ತರಬೇಕೊ ನನಗ ಯಾದಿ ಹೇಳಿಬಿಡವಾ. ಅರ್ಧಾತಾಸಿನೊಳಗ ತಂದು ಹಾಕ್ತೀನಿ.

ರಾಧ— (ಗಂಡನಿಗೆ) ಅಂವ ಎಷ್ಟು ತರ್‍ತಾನೊ, ಎಷ್ಟು ಬಿಡ್ತಾನೋ, ನೀವs ಹೋಗರಲ್ಲಾ . . . . . .

ದಾಸ— ತರ್‍ತಾನೇಳs, ತರದೆಯೇನು ? ನಿಂಯೇನವನ್ನ ಕೈಲಾಗದವ, ಧಡ್ಡ ಅಂತ ತೀಳಿದೀಯೇನು ? ಹೊತ್ತಿಗೆ ನಮಗ ಅವನs ಆಗsವ !

ರಾಜಾ— ಮಾಮಿ, ಜಯಣ್ಣ ಬರ್‍ತಾನಂತ ನನಗೇನು ಸಂತೋಷ ಇಲ್ಲs ? ನಾನು ಅಂದರ ಹಿಂಗ್ಯಾಕ ಮಾರೀ ಕಿವುಚಿಗೋತೀ ? ನಿನ್ನಷ್ಟs ನನಗೂ ಅವನಮ್ಯಾಲ ಪ್ರೀತಿ ಅದ.

ರಾಧ— ಜೆಯಾನ್ನ ಗುಣಕ್ಕಯಾರಾದರೂ ಪ್ರೀತಿಮಾಡ್ತಾರ.

ದಾಸ— ಹೋಗಲಿ ಬಿಡs . . .

ರಾಜಾ— ( ಎಲ್ಲ ಸರಿಯಾದದ್ದನ್ನು ಕಂಡು ) ಮಾಮಾ, ಈಗ ಎಲ್ಲಾನೂ ಠೀಕಾತಿಲ್ಲೊ ? ಪಡಸಾಲಿ ಹ್ಯಾಂಗ ಅಪ್‌ಟುಡೇಟ್ ಕಾಣಸ್ತದ ನೋಡು.. ಜಯಣ್ಣ ವಿಲಾಯತಿಯೊಳಗ ಇದ್ದು ಬಂದವ. ಒಮ್ಮೆಲೆ ಅವಗ ಬದಲನ ಸೋದು ಬ್ಯಾಡ. ಜಯಣ್ಣ ಬಂದಮ್ಯಾಲ ನನ್ನ ಸ್ನೇಹಿತರು ಅವಗೊಂದು ದೊಡ್ಡ ಪಾರ್ಟಿ ಕೊಡsವರಿದ್ದಾರ, ಸತ್ಕಾರ ಮಾಡsವರಿದ್ದಾರ. ಪತ್ರಿಕೆಯ ಸಂಪಾದಕರೂ ಹೇಳ್ಯಾರ—ಅವನ ಬಗ್ಗೆ ಬರೀತೀವಿ ಅಂತ.

ದಾಸ— ನಡೀಲಿ, ಈ ಕಾಲಕ ತಕ್ಕ್ಯಾಂಗ ಬೇಕಲ್ಲ ಇದೆಲ್ಲಾ.

ರಾಧ— ( ರಾಜನನ್ನುದ್ದೇಶಿಸಿ ) ನಾ ಒಳಗ ಹೋಗ್ತೀನಿ, ಬಾ. ನೀನು ಆಮ್ಯಾಲ . . . ನನಗ ಅವಸರದs, ( ಹೋಗುತ್ತಾಳೆ. )

ರಾಜಾ— ನಾ ಈಗ ಬಂದೇ ಬಿಟ್ಟೆ ಹೋಗು.

ದಾಸ— ( ರಾಜನನ್ನು ಹತ್ತಿರಕ್ಕೆ ಕರೆದು ಕಿವಿಯಲ್ಲಿ ಹೇಳಿದಂತೆ ) ಈಕಿ ಖರ್ಚಿನ ಅಂದಾಜಿಲ್ಲದ ಹುಚ್ಚಾಪಚ್ಚಾ ಹೇಳ್ಯಾಳು. ನಾಳೆ ತಲೀಮ್ಯಾಲ ಸಾಲ ಕೂತಿತು ಅಂದರ ತೀರಸವ ನಾನs ಅಲ್ಲ. ನಿನಗ ನಮ್ಮ ಪರಿಸ್ಥಿತೀ

ದೆಲ್ಲಾ ಅರಿವದ. ಆಕಿ ಯಾದಿ ಕೊಟ್ಟದ್ದರೊಳಗ ಅರ್ಧಮುಕ್ಕಾಲು ಕಾಟ ಹಾಕಿ ತೋಗೊಂಡು ಬಾ ಅತ್ಮ !

ರಾಜಾ— ಹೌದಪಾ, ಅಷ್ಟಕ್ಕs ಆಕಿ ನನ್ನ ಮ್ಯಾಲ ರೇಗತಾಳ, ಮನಸಿಗೆ ತ್ರಾಸ ಮಾಡಿಕೋತಾಳ. ಯಾಕಪಾ ಅದು ? ಹೇಳಿದಷ್ಟು ತಂದುಕೊಟ್ಟುಬಿಡ್ತಿನಿ ತೀರ್‍ತು. ಆಕೀ ಉತ್ಸಾಹದೊಳಗ ಕೊರತಿ ಆಗೋದು ಬ್ಯಾಡ.

ದಾಸ— ಹೌದೊ, ನಾಳೆ ಸಾಲಾದರ ತೀರಸsವರ್‍ಯಾರದನ್ನ ?

ರಾಜಾ— ಮಾಮಾ, ನಾ ಅಭ್ಯಾಸಕ್ಕ ಅಂತ ಹೇಳಿ ಹೊರಗ ಹೋಗ್ತಿದ್ದೆ ನಲ್ಲಾ—ಬರಿ ನೆವ ಅದು. ಒಬ್ಬರದೊಂದು—ಕೆಲಸಾ ಮಾಡಿಕೊಟ್ಟೆ. ಮುನ್ನೂರು ರೂಪಾಯಿ ಬಂದವು. ಇಗಾ, ( ಜೇಬಿನೊಳಗಿಂದ ರೂಪಾಯಿ ತೆಗೆದು) ಇವು ಆ ರೂಪಾಯಿ. ನಿನ್ನ ಹತ್ತರ ಒಂದು ನೂರು ರೂಪಾಯಿ ಇಟಗೊ. ಮಿಕ್ಕಿದವು ನನ್ನ ಹತ್ತರಿರಲಿ.

ದಾಸ— ನನ್ನ ಹತ್ತರ ಬ್ಯಾಡ ಮಾರಾಯಾ. ಎಲ್ಲಾ ನಿನ್ನ ಹತ್ತರನೇ ಇರಲಿ. ಆಕೀ ಕಣ್ಣಿಗೆ ಬಿದ್ದವು ಅಂದರೆ ಮತ್ತೆ ಖರ್ಚಿಗೆ ಮೂಲ ಮಾಡ್ತಾಳ. ( ಉಸರ್ಗರೆದು) ನೀ ಎಲ್ಲ ಇದನ್ನ ಮಾಡದೇ ಇದ್ದರ ನಾ ಒಬ್ಬನs ಏನು ಮಾಡ್ತಿದ್ದೆ? ನನ್ನಿಂದೇನಾಗ್ತಿತ್ತು ? ಎಲ್ಲಾ ಕೈ ನಿಂತು ಹೋಗಿಬಿಟ್ಟದ.

ರಾಜಾ— ಮಾಡೋ ಕಾಲಕ್ಕ ಬೇಕಾದ್ದು ಮಾಡಿದೆಲ್ಲ! ನೀ ಮಾಡೋದನ್ನೆಲ್ಲ ಈಗ ನಾವು ಮಾಡಬೇಕು. ನಿನ್ನ ಕೈ, ದೇವರು ನಮಗ ಕೊಡಲಿ, ಸಾಕು.

ದಾಸ— ( ಕುತ್ತಿಗೆ ಸಿರ ಬಗಿದು) ನಾನೂ ಅದನ್ನs ಬೇಡಿಕೋತಿನಿ, ಭಗವಂತಗ. ಇಬ್ಬರೂ ನೀವು ವಿವೇಕಿಗಳಾಗಿ, ಫಳಸಲಿಕ್ಕೆ ಹತ್ತಿದರ ನನಗೇನು ಕಡಿಮೆ ಅದೊ ಮಾರಾಯಾ ? ( ನೆನಪಿಸಿಕೊಂಡು ) ಅಲ್ಲೋ, ಜಯ ಕಾರಿಲೆ ಬರ್‍ತಿನಂತ ತಾರು ಮಾಡಿದ ; ಯಾವಾಗ ಬರ್‍ತಾನ, ಏನು ?

ರಾಜಾ— ಅದನ್ನೇನು ತಿಳಿಸಿಲ್ಲ ನೋಡು.

ದಾಸ— ತಾರು ಎಲ್ಲಿಂದರೆ ಮಾಡ್ಯಾನ ?

ರಾಜಾ— ಗದುಗಿನಿಂದ. ಅಲ್ಲೆ ಯಾರಾದರೂ ಅವನ ಸ್ನೇಹಿತರು ಇಳಿಸಿಕೊಂಡಿರಬಹುದು.

[ ಒಳಗಿಂದ ರಾಧಕ್ಕನ ಕೂಗು—' ಯಾಕೊ, ಹೋಗ್ತಿಯಲ್ಲ ಪ್ಯಾಟಿಯೊಳಗ ? ' ]

ರಾಜಾ— ಇಕಾ ಹೊರಟೆ....ಬರ್‍ತಿನಿ ಒಳಗ....ಯಾದೀ ಅಷ್ಟು ಹೇಳು..

[ ರಾಜಾ ಒಳಗೆ ಹೋಗುತ್ತಾನೆ. ದಾಸಣ್ಣ ಒಂದು ಕುರ್ಚಿಯ ಮೇಲೆ ಕುಳಿತು, ಎಲೆ ಅಡಿಕೆಯ ಸನ್ನಾಹದಲ್ಲಿ ತೊಡಗುತ್ತಾನೆ. ಹೊರಗ ಮೋಟರ್ ಹಾರ್ನ್ ಕೇಳಬರುತ್ತದೆ. ದಾಸಣ್ಣ ಎದ್ದು, ಬಾಗಿಲದಲ್ಲಿ ನಿಂತು, ಹೊರಗೆ ನೋಡುತ್ತಾನೆ. ಜಯು ಪತ್ನೀಸಮೇತನಾಗಿ ಕಾರಿನಿಂದ ಇಳಿಯುತ್ತಿರುವದು ಕಾಣುತ್ತದೆ. ದಾಸಣ್ಣ ಅಲ್ಲಿಂದಲೆ ' ಜಯು ಬಂದ, ಬರ್‍ರಿ ' ಎಂದು ಕೂಗಿ, ತಾನು ಎದುರುಗೊಳ್ಳಲು ಹೋಗುತ್ತಾನೆ. ರಾಜಾ ಗಡಿಬಿಡಿಯಿಂದ ಹೊರಗೆ ಬರುತ್ತಾನೆ. ರಾಧಕ್ಕ ಕೈಯಲ್ಲಿ ದೃಷ್ಟಿ ತೆಗೆಯುವ ಸಾಹಿತ್ಯದೊಡನೆ ಹಿಂದಿಂದೆ ಬರುತ್ತಾಳೆ. ಎಲ್ಲರೂ ಬಾಗಿಲದ ವರೆಗೆ ಹೋಗುತ್ತಾರೆ. ಅಷ್ಟರಲ್ಲಿ ಜಯು, ತುಸು ಹಿಂದೆ ಅವನ ಹೆಂಡತಿ ಮಾಯಾ ಕಾಣಿಸಿಕೊಳ್ಳುತ್ತಾರೆ. ಇಬ್ಬರೂ ಆಧುನಿಕ ಉಡುಪಿನಲ್ಲಿದ್ದಾರೆ. ಮಾಯಾ ಹೆಚ್ಚಾಗಿ ಬೆಡಗಿನ ಹೆಣ್ಣಾಗಿ ಕಾಣುತ್ತಾಳೆ. ಎಲ್ಲರೂ ಆನಂದನಿರ್ಭರರಾಗಿ ತೋರುತ್ತಾರೆ. ]

ರಾಧ— ಅಲ್ಲೇ ತುಸ್ತು ನಿಂದರ್‍ರಿ. ದೃಷ್ಟೀ ತಗೀತಿನಿ. ( ಇಳಿದೆಗೆದು ಒಗೆಯುತ್ತಾಳೆ. ಮಾಯಾ ಮೂಗು ಮುದರಿಸುತ್ತಾಳೆ. ಎಲ್ಲರೂ ಒಳಗೆ ಬರುತ್ತಾರೆ. ಜಯ ತಂದೆ-ತಾಯಿ ಇ ರಿಗೂ ಬಾಗಿ ನಮಸ್ಕಾರ ಮಾಡುತ್ತಾನೆ. )

ಜಯು— ( ಹೆಂಡತಿಗೆ) ಏ ಹೈ ಮೇರೆ ಪಿತಾಜಿ, ಆಪ ಹೈ ಮಾತಾಜಿ, ಔರ್ ಮೇರಾ ಛೋಟಾ ಭಾಯಿ ರಾಜಾ . . .

ಮಾಯಾ— ನಮಸ್ತೇ ( ನಿಂತಲ್ಲಿಂದಲೇ ಕೈ ಜೋಡಿಸುತ್ತಾಳೆ. ಎಲ್ಲರೂ ಬೆಪ್ಪಾಗಿ ನೋಡುತ್ತಾರೆ. ರಾಧಕ್ಕ ತವ್ಮಿಬ್ಬರಿಗೂ ಬಾಗಿ ನಮಸ್ಕರಿಸಲಿಲ್ಲ ಎಂದು ಮುಖ ಮುದುರಿಸಿಕೊಂಡು ಅವಾಕ್ಕಾಗಿ ನಿಲ್ಲುತ್ತಾಳೆ. ಜಯು ಎಷ್ಟೊಂದು ಆನಂದೋತ್ಸಾಹದಲ್ಲಿ ಇರಬೇಕಿತ್ತೊ, ಹಾಗೆ ಇರುವದಿಲ್ಲ. ಮಾಯಾ ತುಚ್ಛತೆಯ ಭಾವನೆಯಿಂದ ಬಿಮ್ಮನೆ ಬಿಕ್ಕೊಂಡು ನಿಲ್ಲುತ್ತಾಳೆ. )

ದಾಸ— ಪ್ರವಾಸ ಸುಖವಾಗಿ ಆಯಿತ ?

ಜಯು— ಆಗದೆಯೇನು ? ಫಸ್ಟ್‌ಕ್ಲಾಸ್ ರಿಝರ್ವ್‌s ಮಾಡಿಸಿದ್ದಿವಿ.

ದಾಸ— ಕೂಡ್ರಿ, ಒಂದು ಘಳಿಗಿ ವಿಶ್ರಾಂತಿ ತೊಗೊಳ್ರಿ. ರಾಜಾ, ಸಾಮಾನ ಗೀಮಾನ ನೋಡು, ಒಳಗ ತಂದಿಡ್ರಿ....

[ ಅಷ್ಟರಲ್ಲಿ ಡ್ರೈವರ ಬ್ಯಾಗು-ಹೋಲ್ಡಾಲುಗಳನ್ನು ಒಂದೊಂದೆಯಾಗಿ ತಂದಿಡುತ್ತಾನೆ. ರಾಜಾ ಮುಂದಾಗಿ ಅವನ್ನೆಲ್ಲ ಒತ್ತಟ್ಟಿಗೆ ಹಚ್ಚಿಡುತ್ತಾನೆ. ಜಯು ತಾನೂ ರಾಜನಿಗೆ ಕೈಗೊಡುತ್ತಾನೆ. ಮಾಯಾ ಖುರ್ಚಿಯ ಮೇಲಿನ ಧೂಳ ಒರೆಸಿದಂತೆ ಮಾಡಿ ಕೂಡುತ್ತಾಳೆ. ]

ದಾಸ— (ಹೆಂಡತಿಗೆ) ಒಂದಿಷ್ಟು ಚಹ ಮಾಡಿಕೊಂಡು ಬಾರs. . . . ದಣಿದು ಬಂದಾರ. . . . . ಈಕಿನ್ನ ಒಳಗs ಕರಕೊಂಡು . . . .

ರಾಧಾ— (ಅನುಮಾನಿಸಿ) ಆನಕಾತ ಕೂಡ್ಲಿ . . . . ನಾ ಆಮ್ಯಾಲ: . . . . ( ಹೋಗುತ್ತಾಳೆ ).

ದಾಸ— ಹಾಂಗs ಮಾಡು. . . . ಜಯು, ನಮ್ಮ ಸೊಸೀಗೆ ಕನ್ನಡ ವಜ ಅಂತ ಕಾಣಸ್ತದ ! . . . .

ಜಯು— ಈಕಿ ಪಂಜಾಬದಾಕಿ. . . . . . ಕನಡು ಹ್ಯಾಂಗ ಬರಬೇಕು ?

ದಾಸ— ಅಂದಮ್ಯಾಲ ಮಾತs ಮುಗೀತು ! ಜಾತಿಅರೆ ಯಾವದು ?

ಜಯು— ಅಲ್ಲಿಯ ಒಂದು ಶ್ರೇಷ್ಠ ಜಾತಿಯಲ್ಲಿ ಹುಟ್ಟಿದಾಕಿ. . . . . .

ದಾಸ— ಈಗ ಎಲ್ಲಾ ಜಾತೀನೂ ಶ್ರೇಷ್ಠ ಜಾತಿನs ಕನಿಷ್ಠ ಜಾತಿ ಅವ ಎಲ್ಲಿ

[ ಮಾಯಾ ತನ್ನ ವ್ಯಾನಿಟಬ್ಯಾಗ್ ತೆರೆದು, ಕನ್ನಡಿಯಲ್ಲಿ ಮುಖ ನೋಡಿ, ಕೂದಲು ಸರಿಮಾಡಿಕೊಂಡು, ಮುಖಕ್ಕೆ ಪವಡರ್ ಸವರಿ ಕೊಳ್ಳುತ್ತಾಳೆ. ದಾಸಣ್ಣ ಇದನ್ನೆಲ್ಲ ಆಶ್ಚರ್ಯಚಕಿತನಾಗಿ ನೋಡುತ್ತಾನೆ ಸಾಮಾನು ವ್ಯವಸ್ಥಿತವಾಗಿ ಹಚ್ಚಿ ಜಯು ಬಂದು ಮಾಯಾನ ಹತ್ತಿ ಕೂಡುತ್ತಾನೆ. ರಾಜಾ ಅವನ ಹಿಂದೆ ನಿಲ್ಲುತ್ತಾನೆ. ]

ದಾಸ— ಅಂದರೆ; ಮುಸಲ್ಮಾನ, ಕ್ರಿಶ್ಚನ್, ಪಾರ್ಸಿ ಇಂಥಾದರ ಪೈಕಿ ಅಲ್ಲ ಅನ್ನು. . . . ಹಿಂದೂ ಅಂಥಾಂಗಾತು.

ಜಯು— ಅಗದಿ. . . . ಸಂಶಯೇನು? ಈಕಿ ಸೋದರಮಾವ ಲಂಡನ್‌ದೊಳಗ ದೊಡ್ಡ ಡಾಕ್ಟರು. ಈಕಿ ಅಲ್ಲೇ ದೊಡ್ಡಾಕಿ ಆಗ್ಯಾಳ. ಅಲ್ಲೇ ಬೆಳದು ದೊಡ್ಡಾಕಿ ಆದದ್ದರಿಂದ ಎಲ್ಲಾ ಬ್ಯಾರೆ ಆಗ್ತದ. . . .

ದಾಸ— ಅದs ಮ್ಯಾಲs ಕಾಣಸ್ತದ. . . .

ಜಯು— ಇವರು ಹಾಂಗ ಶಾಕಾಹಾರಿಗಳು. . . .

ದಾಸ— ಇನ್ನೂ ಉಳದsದೇನದು ?

ಜಯು— ಈಗ ಹಾಂಗ ಯಾರಲ್ಲೆ ಉಳಿದsದನ್ರಿ !

ರಾಜಾ— ನಿನ್ನದsರೆ ?

ಜಯು— ಕೆಲವು ದಿವಸ ಇದ್ದು ನೋಡಿದೆ. ಮುಂದೆ ಸಾಧ್ಯಾಗಲಿಲ್ಲ.

ದಾಸ— ಅದನ್ನ ನಾ ಅಂದುಕೊಂಡೇ ಇದ್ದೆ. . . . ಇರಲಿ. . . . ಬಟ್ಟಿಬರಿ ಕಾಲಾಗಿನವು ಇಳಿಸಿಡ್ರಿ. . . . ಆರಾಮ ಮನೀಹಾಂಗ ಕೂಡ್ರಿ ಮೈ ಛಳ ಬಿಟ್ಟು. . . . ಹೊಸಬಳಾಕ್ಯಾದರ ನೀ ಅಲ್ಲ.

ಮಾಯಾ— ಯಹಾಂ ನ್ಹಾನೆ-ಸೋನೇಕಿ ಪ್ರಬಂಧ ಕುಛ್ ಅಲಗ್ ರಹೆಗೀನಾ

ಜಯು— ಯಹ ತೊ ಮುಷ್ಕಿಲ ಹೈ. ಅಲಗ್ ಜಗಾ ತೊ ನಹಿ ಹೈ. . . .

ದಾಸ— ಏನಂತಾಳ ? ಏನೊ ಸೋನಾ-ಗೀನಾ ಅಂತಾಳಲ್ಲ ?

ಜಯು— ಅಂಹಂ, ಅಂದರ ಇಲ್ಲೇ ಸ್ನಾನಕ್ಕ ಮಲಗಲಿಕ್ಕೆ ಬ್ಯಾರೆ ವ್ಯವಸ್ಥಾ ಅದಯೇನು ಅಂತ ಕೇಳಿದ್ಲು. . . .

ರಾಜಾ— ಬ್ಯಾರೆ ಹ್ಯಾಂಗಿರಬೇಕು ? ನಿನಗ ಈ ಮನಿಯೇನು ಅರಿಯದ ಜಗಾನ ?

ದಾಸ— ಅಡಗೀ ಮನಿವೊಳಗs ಬಚ್ಚಲು. ಗಂಡಸರು ಹೊರಗ ಹೋದಮ್ಯಾಲ ಹೆಂಗಸರು ಸ್ನಾನಾಗೀನು ಮುಗಿಸಿಗೋ ಬೇಕು.

ಮಾಯಾ— ಕ್ಯಾ ಕಹತೆ ಹೈ ?

ಜಯು— ಇಸ್ ಘರಮೆ ಅಲಗ್ ಬಂದೊಬಸ್ತ ತೊ ಹೊ ನಹಿಸಕ್ತಾ.

ಮಾಯಾ— ಮೈ ತುಮಸೆ ಪಹಿಲೆಹಿ ಬತಾಯಾಥಾ ಕಿ ಹಂ ದೋನೊ ಹಾಟೆ ಲ್‌ಮೆ ರಹಜಾಯ್‌ತೊ ಅಚ್ಛಾ ಹೋಗಾ. ಅಬ್‌ತೊ ಕ್ಯಾಹುವಾ. . .

ಜಯು— ಏ ಇಂತಜಾವ್ ಮುಝೆ ಬಿಲ್‌ಕುಲ್ ಪಸಂತ ನಹಿ. ಯೆ ಘರ್ ಆಪಕಾ ಹೈ, ಔರ್ ಅಚ್ಛಾ ಭಿ ಹೈ ... ...

ಮಾಯಾ— ಅಚ್ಛಾ ಹೈ ? This is a dirty hovel. You see Dear, I cant stay here ... never... ...

[ ರಾಧಕ್ಕ ಒಗ್ಗರಣೆಅವಲಕ್ಕಿ ತುಂಬಿದ ನಾಲ್ಕು ಬಸಿಗಳನ್ನು ತಂದಿಡುತ್ತಾಳೆ. ]

ರಾಧ— ಚಹ ತರ್ತಿನಿ. ಸೀ ಜನಸೇನೂ ಮಾಡಲಿಕ್ಕಾಗಲಿಲ್ಲ. ತೂಗೊಳ್ರಿ, ಈಗ ಅಡಿಗಿ ಆಗ್ತದ ... ...

ದಾಸ— ತೂಗೊಳ್ರಿ ... ... ನಿನ್ನ ಹೆಣ್ತಿಗೇನು ಸೇರ್ತದೊ ಇಲ್ಲೊ......

ಜಯು— ಅಲ್ಲೆ ಗದುಗಿನೊಳಗ ಯಥೇಷ್ಟ ಆಗಿತ್ತು. ಇದೇನು ಅವಶ್ಯ ಇದ್ದಿರಲಿಲ್ಲ.

ದಾಸ— ಏನೊ, ಪ್ರೀತಿಯಿಂದ ಮಾಡ್ಯಾಳ.

ಮಾಯಾ— ಯೆ ಕ್ಯಾ ಹೈ ?

ಜಯು— ಇಸೆ ಯಹಂ ಅವಲಕ್ಕಿ ಕಹತೆ ಹೈ... ...

ಮಾಯಾ— ಓಲಕಿ ... ? ...

ಜಯು— ಅವಲಕ್ಕಿ, ಅವಲಕ್ಕಿ ! This is a parched rice preparation—a speciality in these parts ... take it ... ದೇಖೊ ತೊ ಕೈಸಾ ಹೈ ... ...

ಮಾಯಾ— ಹಾತೊಸೆ ಮೈ ನಹಿ ಖಾ ಸಕ್ತೀ- ... ... ಸ್ಪೂನ್ ಹೋನಾ ಚಾಹಿಯೆ ...

ಜಯು— ರಾಜಾ, ಒಂದು ಚಮಚ ಇದ್ದರ ತಂದು ಕೊಡಪಾ.

[ ರಾಜಾ ಎದ್ದು ಚಮಚ ತರಲು ಹೋಗುತ್ತಾನೆ. ದಾಸಣ್ಣ, ಜಯು ತಿನ್ನಲು ಪ್ರಾರಂಭಿಸುತ್ತಾರೆ. ರಾಜಾ ಮೆರಗು ಹೋದ ಹಿತ್ತಾಳೆಯ ಚಮಚೆಯನ್ನು ಒರೆಸುತ್ತ ತಂದು ಬಸಿಯಲ್ಲಿಡುತ್ತಾನೆ. ಮಾಯಾ ಇನ್ನಷ್ಟು ಹೇಸಿಕೊಂಡಂತೆ ಮಾಡುತ್ತಾಳೆ. ರಾಧಕ್ಕ ಬಂದು ಬಾಗಿಲಲ್ಲಿ ನಿಲ್ಲುತ್ತಾಳೆ.]

ಜಯು— ಖಾವೊ... ...

ಮಾಯಾ— ( ಒಂದು ಚಮಚ ಅವಲಕ್ಕಿ ಬಾಯಲ್ಲಿ ಸೇರಿಸಿ ) ಓsss, ಮೈ ಯೆ ನಹಿ ಖಾ ಸಕ್ತೀ ... ನಹಿ ... ಬಿಲ್‌ಕುಲ್ ನಹಿ... ಖಾಲಿ ಚಾ ಪಿವುಂಗಿ ...

ಜಯು— ಅಚ್ಛಾ, ವಹಿ ಪೀಲೊ . . . .

ಮಾಯಾ— ಮುಝೆ ಪಾನಿ ಚಾಹಿಯೆ . . . .

ಜಯು— ರಾಜಾ, ತುಸು ನೀರು ತಂದುಕೊಡ್ತೀ ?

ರಾಜಾ— ತರ್ತಿನಿ ಮತ್ತ . . . , . . ( ಎದ್ದು ಹೋಗುತ್ತಾನೆ. ಹಿಂಬಾಲಿಸಿ ರಾಧಕ್ಕ ಒಳಗೆ ಹೋಗುತ್ತಾಳೆ. )

ದಾಸ— ಈ ಮದಿವಿ ಹ್ಯಾಂಗ ಕೂಡಿ ಬಂತಪಾ ? ನೀಯೇನು ನಮಗ ತಿಳಿಸಿರಲಿಲ್ಲ.

ಜಯು— ಅದು ಹಿಂಗಾತು. ಲಂಡನ್‌ದೊಳಗ ಇದ್ದಾಗ ನನಗೊಮ್ಮೆ ಜಡ್ಡಾತು . . . .

ದಾಸ— ಅದನ್ನ ತಿಳಿಸಿದ್ದಿ ನೀನು . . . .

ಜಯು— ಆಗ — ಈಕೀ ಸೋದರಮಾವ ಡಾಕ್ಟರು ಅಂತ ಹೇಳದೆನಲ್ಲಾ — ಅವರ ನರ್ಸಿಂಗ್ ಹೋಮಿನಲ್ಲೇ ಆರೈಕೆಗಾಗಿದ್ದೆ. ಅಲ್ಲೇ ಈಕೀ ಪರಿಚಯ ಆತ್ಯು.

ದಾಸ— ಇದನ್ನೇನು ಬರೆದಿದ್ದಿಲ್ಲ ನೀನು . . . .

ಜಯು— ಏನೂ ಬರೀಲಿಲ್ಲ. ಈಕಿ ಹಾಂಗ ಬಹಳ ಬುದ್ಧಿವಂತಿ ಇದ್ದಾಳ.

ದಾಸ— ಇದ್ದಿದ್ದಾಳು. ಸಂಶಯೇನು ?

ಜಯು— ಇಂಗ್ಲಿಷ್ ವಿಶೇಷ ಕಲೀದಿದ್ದರೂ . . . .

ದಾಸ— ಅವರ ಹುಚ್ಚುಚ್ಚಾರ ಎಲ್ಲಾ ಕಲ್ತಾಳ ಅನ್ನು . . . .

ಜಯು— ಇಲ್ಲ, ಅದು —. ಅಲ್ಲಿದ್ದ ಮ್ಯಾಲ ಅವರ ರೀತಿ ಬರ್ತಾವ ಕೆಲವು. ಹಾಂಗ ಕಲಾಕೌಶಲ್ಯದೊಳಗ, ಮಾತಿನೊಳಗ ಬಹಳ ಚತುರಳಿದ್ದಾಳ !

ರಾಜಾ— ಇಂಥಾ ಚೌಸಷ್ಟ ಕಲಾ ಬಲ್ಲವರು ತಿರಸಷ್ಟ ಬಹಳಿರ್ತಾರಂತ ! ಇದು ಮಂದಿ ಆಡೊ ಮಾತು, ನಮಗರೆ ಏನು ಗೊತ್ತು ?

ದಾಸ— ಮನಸಿನೊಳಗೊಮ್ಮೆ ಮರಳು ಹೊಕ್ಕಿತು ಅಂದರ ಎಲ್ಲಾನೂ ಛಂದs ಕಾಣಸ್ತದ !

ಜಯು— ಇಲ್ಲಿ ಬರೂ ಮನಸಿದ್ದಿದ್ದಿಲ್ಲ ಈಕೀಗೆ.

ದಾಸ— ಈಗಿನವರಿಗೆ ಗಂಡನ ಕಡಿಯವರ್‍ಯಾರೂ ಬ್ಯಾಡಾಗ್ತಾರ.

ಜಯು— ನಾನs ಜುಲುಮಿಲೆ ಕರಕೊಂಡು ಬಂದೆ. ತವರೂರಿಗೇ ಹೋಗೋಣು ಅಂತ ಹಟ ಹಿಡಿದಿದ್ಲು.

ದಾಸ— ಊosss

ಜಯು— ಅಂದರ ನಿಮ್ಮದೆಲ್ಲ ಭೆಟ್ಟಿಮಾಡಿಸಬೇಕು ಅಂತ ಅನಿಸಿತು, ಎಳಕೊಂಡು ಬಂದೆ . . . .

ದಾಸ— ನೋಡಿಧಾಂಗಾತು !

ರಾಜಾ ನೀರನ್ನು 'ತರುತ್ತಾನೆ. ಮಾಯಾ ಅದನ್ನು ಕುಡಿಯುತ್ತಾಳೆ. ರಾಜಾ ಕೂಡುತ್ತಾನೆ. ]

ಮಾಯಾ— ( ಕಪ್ಪನ್ನೆತ್ತಿ ಒಂದು ಗುಟುಕು ಚಹ ಕುಡಿದಂತೆ ಮಾಡಿ) ಮುಝೆ ಬಸ್ ಹುವಾ.

ರಾಧ— ( ಹೊರಗೆ ಬಂದು ) ಇನ್ನಷ್ಟು ತರಲೇನು ಅವಲಕ್ಕಿ ? ಯಾಕ, ನಿನ್ನ ಹೆಣ್ತಿ ತಿನಲೇ ಇಲ್ಲಲೊ ಜಯು ?

ದಾಸ— ಯಾ ಊರಾಗಿದ್ದೀ ನೀನು ? ಆಕಿ ವಿಲಾಯತಿಯಿಂದ ಬಂದಾಳ !

ಜಯು— ಇಲ್ಲ, ಇಂಥದಲ್ಲ ಆಕೀಗೆ ತಿಂದು ಗೊತ್ತಿಲ್ಲ. ಆಕೀಗೆ ಸೇರೋದುಲ್ಲ....

ರಾಧ— ನೀ ಮೊದಲs ಹೇಳಿದ್ದರ ಬ್ಯಾರೆ ಏನಾದರೂ ಮಾಡ್ತಿದ್ದೆನಪಾ, ನನಗೇನು ಗೊತ್ತೊ ?

ದಾಸ— ಆಕೀಗೆ ಬ್ರೆಡ್ಡು—ತತ್ತಿ ಬೇಕಾಗ್ತದ. ಮಾಡಿಕೊಡ್ತಿದ್ದೇನು ?

ರಾಧ— ಅಯ್ಯ, ಸಾಕು ನಿಮ್ಮದೊಂದು. ಹೋಗಲಿ, ಈಗ ಅಡಿಗಿ ಆಗ್ತದ. ಎಷ್ಟೊತ್ತು ? ಬಿಸಿಬ್ಯಾಳಿ ಹುಳಿ ಮಾಡ್ತಿನಿ, ಬೆಂಡೀಕಾಯಿ ಭಜ್ಜ ಮಾಡ್ತಿನಿ, ಹಪ್ಪಳ, ಉಪ್ಪಿನಕಾಯಿ....

ದಾಸ— ಮತ್ತ ತನ್ನ ಮಾತs ! ಆಕಿ ಹುಟ್ಟಿದ್ದು ಪಂಜಾಬದೊಳಗ, ನೀರು ಕುಡದದ್ದು ವಿಲಾಯತೀದು !

ರಾಧ— ಆದರೇನಾತ್ಯು ? ಹೆಂಗಸು ಸುಳ್ಳೇನು? ಕೈಹಿಡಿದ ಗಂಡ ಪಾಲಿಗೆ ಬಂದ ಮನೆತನ, ಅತ್ತಿ-ಮಾವ-ಮೈದನ. ಹೆಂಗಸಾದಮ್ಯಾಲ ನೀರಿನ್ಹಾಂಗಿರಬೇಕಂತ—ಯಾವ ಭಾಂಡಿವೊಳಗ ಹಾಕಿದರ ಆ ಭಾಂಡೀ ಆಕಾರ....

ದಾಸ— ಅಂತs ಗಂಡಗ ನೀರು ಕುಡಸ್ತಾರ ಏಳು ಕೇರೀದು ! ನಿನ್ನ ಸೊಸೀನೂ ಆ ಪೈಕಿ ಕನ್ಯಾನs ಕಾಣಸ್ತದ !

ರಾಧ— ನೀವು ನನಗಂಥಾಂಗ ಆಕೀಗೂ ಅನಬ್ಯಾಡ್ರಿ. ನಮಗೆಲ್ಲ ನಿಮ್ಮ ಮಾತಿನ ದಡ್ಡು ಬಿದ್ದಾವ, ಏನಂದರೂ ದಕ್ಕತದ...

ದಾಸ— ನೀನು ಸೊಸಿನ್ನ ಮೇಲ್ಗಟ್ಟಿಕೊಂಡು ಮಾತಾಡ್ತಿದಿ. ಉಳಿದ ಮಾತಿರಲಿ ಆಕಿನ್ನ ಒಳಗ ಕರಕೋತಿಯೇನು ಹೇಳು . . .

ರಾಧ— ಜಯು ಒಬ್ಬನೆ ಬಂದಿದ್ದರ ಅವನ್ನ ಕರಕೋತಿದ್ದಿಲ್ಲೇನು ? ಅವನೂ ವಿಲಾಯತಿಗೆ ಹೋಗೇ ಬಂದಾನಲ್ಲ . . .

ದಾಸ— ಅವನ ಮಾತು ಬಿಡು- ಅವ ಮನೀ ಮಗ . . .

ರಾಧ— ಈಕಿ ಮನೀ ಸೊಸಿ . . .

ಜಯು— ಇದೊಂದು ಪ್ರಾಬ್ಲೆಮ್ಮs ಅದ . . .

ರಾಧ— ನಾ ಎಲ್ಲಾ ಕೂಡಿಸಿ ಮಾಡಿ ಹಾಕ್ತಿನಿ ಆಕೀಗೆ- ಅಡಿಗೆಮನಿವೊಳಗೊಂದು ಮುಟ್ಟಿಸಿಕೊಳ್ಳದಿದ್ದರಾತ್ಯು- ಇದಕ್ಕ ನಿಮ್ಮದೇನಾದರೂ ಆಕ್ಷೇಪಣೆ ಇದ್ದರ ಹೇಳಿರಿ . . .

ದಾಸ— ನನ್ನದೇನೇನೂ ಆಕ್ಷೇಪಣೆ ಇಲ್ಲ.

ಜಯು— ( ಮುಂದುಗಾಣದವನಂತೆ ) ಇದೆಲ್ಲ ಸರಿ. ಆದರ ಈಕೀಗೇ ಇಲ್ಲಿರೋದು ಒಗ್ಗಲಿಕ್ಕಿಲ್ಲ. ನಾವು ಬ್ಯಾರೆ ಒಂದು ಹಾಟೆಲ್ಲಿನೊಳಗs ಇದ್ದರ ಹ್ಯಾಂಗಾದೀತು ?

ದಾಸ— ನೋಡಪಾ ! ನಿನಗ ತಿಳಧಾಂಗ ಮಾಡು. ಹೇಳಿಸಿಕೊಳ್ಳೊ ಮಾತೇ ಅಲ್ಲ !

ರಾಧ— ಅಯ್ಯಯ್ಯ ! ಇದೇನು ಛಂದೊ ? ಸಾಕು ಬಿಡು, ನೋಡಲಾರೆ. ವಿಲಾಯತಿಗೆ ಹೋಗಿ ವಿವೇಕನೂ ಬಿಟ್ಟು ಬಂದೀಯೇನು ?

**ಮಾಯಾ**— (ಬೇಸರದ ದನಿಯಲ್ಲಿ) ಕ್ಯಂ'ಮುಝು ಚುಪ್‌ಹಿ ಬಿಠಾದಿಯೆ ?

**ಜಯು**— ಫಿರ್ ಕ್ಯಾ ಕರೆ ?

**ಮಾಯಾ**— ಇಸ್ ಘರ್‌ಮೆ ರಹನಾ ಮುಝು ಬಿಲ್‌ಕುಲ್ ಪಸಂತ ನಹಿ. Let us Stay in some hotel, we must...... please tell them.... please........

**ಜಯು**— ಯೇ ಕಹನಾ ಪಾಪ ಹೈ—

**ಮಾಯಾ**— ಒ ಮ್ಮೈ ಕುಛ ನಹಿ ಜಾನತಿ .,. ಮುಝು ಜಾನಾ ಹಿ ಹೋಗಾ !

**ಜಯು**— (ತಂದೆಗೆ) ಏನು ಮಾಡೋಣಂತೀರಿ ?

**ದಾಸ**— ಏನು ಹೇಳಬೇಕಪಾ ? ಆಕಿ ಹೇಳಿಧಾಂಗ ಮಾಡು. ಈ ಸಂದರ್ಭದೊಳಗ ಏನುಹೇಳಿ ಏನು ಉಪಯೋಗದ ?

**ರಾಜಾ**— (ಏರಿಕೆಯ ಸಿಟ್ಟಿನಲ್ಲಿ) ಏs , ಎದಕ್ಕ ಗಂಡಾಗೀದ್ಯೊ ?

**ಜಯು**— (ಕೆರಳಿದವನಂತೆ) ಅಂದರ ?

**ರಾಜಾ**— ಎರಡು ತಪ್ರಾಕಿ ಕೊಟ್ಟು, ಬಿದ್ದಿರು ಅಂತ ಹೇಳು ನಿನ್ನ ಹೆಣ್ತಿಗೆ— ಹುಡುಗಾಟಿಕಿ ನಡಿಸ್ಯಾಳೇನು ?

**ಜಯು**— ಹೇಳಿಕೇಳಿ ಹುಂಬ ನೀನು ! ಇದೊಂದs ನಿನಗ ಗೊತ್ತು.

**ರಾಜಾ**— ನನ್ನದು ಬಿಡು. ನೀಯೇನೀಗ ಮಾಡ್ತ ಇದ್ದೀಯಲ್ಲ — ಹಿಂಗs ಮಾಡಬೇಕು ಅಂತ ಹೇಳೆದೇನು ನೀ ಕಲಿತ ಸೋಶ್ಯಾಲಾಜಿವೊಳಗ ?

**ಜಯು**— ಮೂರ್ಖ, ಸೋಶ್ಯಾಲಾಜೀ ಡಿಕ್ಶನರಿ ಅರ್ಥರೆ ಗೊತ್ತದಯೇನ್ನಿನಗ ?

**ರಾಜಾ**— ಅದರಪ್ಪನ ಬಲ್ಲೆ ನಾನು !

**ಜಯು**— ಹಿಂಗುದರ ಆ ಶಾಸ್ತ್ರ ಗೊತ್ತಿದ್ಧಾಂಗಾಗಲಿಲ್ಲ. ಕೂಪಮಂಡೂಕದ ದೃಷ್ಟಿಗೆ ಕಾಣೋದೆಷ್ಟೊ ಅದಷ್ಟs ವಿಶ್ವ ಅಂತ ಅದು ತಿಳಿದಿರ್ತದ—ನಿಮ್ಮೊಳಗ ಯಾರಿಗೂ ವಿಶಾಲ ಸಾಮಾಜಿಕ ದೃಷ್ಟಿನೂ ಇಲ್ಲ, ಭಿನ್ನ ಸಮಾಜದ ರೀತಿ-ನೀತಿಯ ಅರಿವೂ ಇಲ್ಲ.

**ರಾಜ**— ನಮ್ಮೊಳಗಿಲ್ಲs ? ನಮ್ಮ ಮಾತು ಬಿಡು, ನಾವು ಗಂಡಸರು-ಪಾಪ ನಮ್ಮ ತಾಯಿ—ಇಂಥಾ ಮಡಿವಂತಿ, ಮೈಲಿಗಾದರ ಉಟ್ಟ ಸೀರಿಮ್ಯಾಲ ನೀರು ಸಹ ಕುಡಿಯೋದುಲ್ಲ, ಆಕಿ ಇವತ್ತ ನಿನ್ನ ಹೆಣ್ತಿ ಸಲುವಾಗಿ ತನ್ನ ಮಡಿ ಬಿಡಲಿಕ್ಕೆ ತಯಾರಾದ್ಲು ! ಇದೇನು ವಿಶಾಲ ಸಾಮಾಜಿಕದೃಷ್ಟಿ ಅಲ್ಲs ಅಲ್ಲ ? ನಿನ್ನ ದೃಷ್ಟಿಯೊಳಗ, ನಿನ್ನ ವಿಶಾಲ—ಅತಿ ವಿಶಾಲ—ಸಾಮಾಜಿಕ ದೃಷ್ಟಿಯೊಳಗ ಧರ್ಮಿಲ್ಲ, ಜಾತಿಲ್ಲ, ಪರಂಪರಾ ಇಲ್ಲ, ಹಡೆದವರಿಲ್ಲ, ಒಡಹುಟ್ಟಿದವರಿಲ್ಲ, ಸಾಮಾಜಿಕ ಬಂಧನ ಇಲ್ಲ, ಶಿಷ್ಟಸಂಪ್ರದಾಯನೂ ಇಲ್ಲ ! ಏನದ ಹಂಗಾರ ಆ ನಿನ್ನ ಸಮಾಜಶಾಸ್ತ್ರದೊಳಗ ? ಸ್ಕಾಲರ್‌ಶಿಪ್ ತೊಗೊಂಡು ಇದನ್ನs ಕಲಿತು ಬಂದೇನು ವಿಲಾಯತಿಗೆ ಹೋಗಿ ? ಇದಕ್ಕೊಪ್ಪೋ ಹಾಂಗ ಈ ನಾರೀ- ರತ್ನ ನಿನ್ನ ಹೆಣ್ತಿ ! ನಮ್ಮನ್ನ ನೋಡಿ ಸತ್ತ ಕಾಗಿನ್ನ ನೋಡಿಧಾಂಗ ಹೇಸಿಕೊಂಡಳು ! ಈ ಮನೀ ನೋಡಿ Dirty hovel ಅಂತ ಹೆಸರಿಟ್ಟಳು. ಅಂದರ ಅಂತಃಕರಣಕ್ಕ ಬೆಲಿ ಇಲ್ಲ. ಆಡಂಬರಕ್ಕ ಬೆಲಿ ಅದ. ಇದು ನಿಮ್ಮಿಬ್ಬರ ವಿಶಾಲ ಸಾಮಾಜಿಕದೃಷ್ಟಿ ! ಅಹಹ ! ಏನು ಸಂಸ್ಕೃತಿ ? ಎಂಥಾ ಸುಧಾರಣಾ ? ಇಂದಿನ ಸುಧಾರಿಸಿದ ನಾಗರಿಕರಲ್ಲs ನೀವು ?

**ರಾಧ**— ರಾಜಾ, ಜಯ ಬರೊಪುರಸತ್ತಿಲ್ಲದs ಅವನ ಜೋಡಿ ಜಗಳಕ್ಕs ಸುರು ಮಾಡಿದೇನೀನು ? ಅಣ್ಣ-ತಮ್ಮಕಿ ವೈರ ಸಾಧಸು ಎಷ್ಟು ಸಾಧಸ್ತ್ರಿಯೋ ! ಅವ ಶಾಣ್ಯಾ ಆಗ್ಯಾನ ಅಂತ ಹೊಟ್ಟೀಕಿಚ್ಚು ಈ ಮುಂಡೇಗಂಡಗ !

**ದಾಸ**— ಅಂವ ಇನ್ನೂ ಗಂಡೆಲ್ಲಾಗ್ಯಾನ ಮುಂಡೇಗಂಡ ಅನಲಿಕ್ಕೆ. ಗಂಡಾದವ ಇವ !

**ಮಾಯಾ**— ಮೈ ಬಹಾರ್ ಗಾಡೀಮೆ.:ಬೈಠತಿಹುಂ ... ಯಹಾ ನಹಿ ಠಿರುಂಗಿ! ಮುಝು ಬಸ್ ಹೈ ... ನಮಸ್ತೇ ... ( ಧಕ್‌ಧಕ್ ಕಾಲಪ್ಪಳಿಸುತ್ತ ಹೊರಟು ಬಿಡುತ್ತಾಳೆ. ಜಯ ತಾನೂ ಏಳುತ್ತಾನೆ. )

**ರಾಜಾ**— ಅಲ್ಲೊ, ಉಳದ್ದೆಲ್ಲ ಹೋಗಲಿ, ನಿನಗ ಸಾದಾ ಮನುಷ್ಯತ್ವರೆ ಅದಯೇನು ? ಆಕಿ ಹೊರಟಳು, ತಾನೂ ಎದ್ದ ! ಈ ಮನೀಗೆ ಆಕಿ ಸೊಸಿ ಅಂತ ಬಂದಾಳ, ಸೊಸಿ ಹಾಂಗ ಮರ್ಯಾದಿಯಿಂದ ಇರಬೇಕಾದೀತು ...

**ಜಯು**— ನೀ ಯಾರು ನನಗ ಹೇಳsವ ? ಮಾವಿ, ಇಷ್ಟನಿಸಿಕೊಂಡು ನಾ ಈ ಮನೆಯಲ್ಲಿರೋದು — ಸಾಧ್ಯಿಲ್ಲ ; ಹೋಗಲೇ ಬೇಕು ನಾನು. ನಾವಿಲ್ಲಿ ಯಾವದಾದರೂ ಹಾಟಿಲಿನಲ್ಲಿ ಇರ್ತೀವಿ—ಬರಬೇಕು ಅನಿಸಿದರ ನಾ[...] ಬರ್ತೀವಿ ; ಬೇಕಾದಾಗ ನೀವು ಬರಬಹುದು. ಯಾವದೂ ಬ್ಯಾಡ ಅಂ[...] ನಿಮ್ಮ ಹಟ ಇದ್ದರ, ನಮ್ಮಹಾದಿ ನಮಗ ಮೋಕಳೀಕ ಅದ !

**ರಾಜಾ**— ಸಂತೋಷದಿಂದ ...

**ದಾಸ**— ರಾಜಾ. ನೀ ಮಾತಾಡ ಬ್ಯಾಡ, ಸುಮ್ಮಗಿರು. (ಹೆಂಡತಿಗೆ) [...] ನೀನೂ ಏನೂ ಮಾತಾಡತಕ್ಕದ್ದಲ್ಲ. ಜಯು, ನೀ ಹೊರಡು, ತಿಳೀತs ನೀ ಆಡಿದ ಮಾತು ಪೂರಾ ಎದಿಯೊಳಗ ನಾಟಿತು ! ಆಗಲಿ.. ..

[ ಜಯು ಡ್ರೈವರನನ್ನು ಕೂಗುತ್ತಾನೆ. ಅವನು ಬಂದು ಸಾಮಾನ[...]ಗಳನ್ನೆತ್ತಿಕೊಂಡು ಹೋಗುತ್ತಾನೆ. ಜಯು ತಾನೂ ಒಂದೆರಡನ್ನೆತ್ತಿ ಹೊ[...]ಗಿಡುತ್ತಾನೆ. ದಾಸಣ್ಣ ರಾಜಾ ಮೂಕವೇದನೆಯಿಂದ ನೋಡುತ್ತಿರುತ್ತಾ[...] ರಾಧಕ್ಕ ಕಣ್ತುಂಬ ನೀರು ತುಂಬಿಕೊಂಡು ನಿಂತಿರುತ್ತಾಳೆ. ]

**ಜಯು**— ಬರ್ತಿನಿ ನಾ ಇನ್ನ.... :

[ಭಾರವಾದ ಹೆಜ್ಜೆಗಳನ್ನಿಕ್ಕುತ್ತ ಹೊರಬೀಳುತ್ತಾನೆ. ಕೊನೆಯು ಹೆಜ್ಜೆ[...] ಪುನಃ ಒಮ್ಮೆ ತಂದೆತಾಯಿಗಳ ಕಡೆಗೆ ನೋಡುತ್ತಾನೆ. ರಾಧಕ್ಕ ದುಃಖ[...] ಆವೇಗ ತಡೆಯಲಾರದೆ ಬಿಕ್ಕಿ ಬಿಕ್ಕಿ ಅಳಲಾರಂಭಿಸುತ್ತಾಳೆ. ]

**ರಾಜಾ**— ಮಾವಿ ಇಂಥಾ ಮಗನಿಗಾಗಿ ಸರ್ವಥಾ ಕಣ್ಣೀರು ಹಾಕಬ್ಯಾಡ[...] ಮಗ ಅವಾ ಒಬ್ಬನೇ ಅಲ್ಲ, ನನ್ನೂ ನೀವs ಹಡದೀರಿ. ಪ್ರಾಣ ಇರೊ[...] ವರೆಗೂ ನಿಮ್ಮಿಬ್ಬರ್ನ ನಾ ಸಂರಕ್ಷಣಿ ಮಾಡ್ತಿನಿ. ದೇವರ ನಾಮಸ್ಮರಣಿ ಮಾಡ್[...] ನಿಶ್ಚಿಂತೆಯಿಂದಿರ್ರಿ- ಮಾವಿ, ಒಂದು ಹೆಣ್ಣಿನ ಆಧೀನನಾಗಿ ಸ್ವತ್ವವನ್ನೇ ಕಳ[...]ಕೊಂಡ ಮನುಷ್ಯ ಒಳ್ಳೆ ಗಂಡನೂ ಆಗಲಾರ.

**ದಾಸ**— ಮತ್ತ ಹಡೆದವರಿಗೆ ಒಳ್ಳೆ ಮಗನೂ ಆಗಲಾರ. ಇಂಥವನಿಂದ ಸಾಮಾಜಿಕ ಕಲ್ಯಾಣದ ಕಾರ್ಯ ಆಗೂ ಮಾತಂತೂ....

**ರಾಜಾ**— ದೂರs ಉಳೀತು. ಮಾವಿ, ಈ ಮುನ್ನೂರು ರೂಪಾಯಿ ತೊಗೊ[...] ಜಯ ಬಂದ ಅಂತ ಸತ್ಯನಾರಾಯಣ - ಅಷ್ಟೋತ್ತರ ಮಾಡಬೇಕ[...] ಅಂದೆಲ್ಲಾ, ಇನ್ನ ಅವ ಹೋದ ಅಂತ ಮಾಡು !

**ದಾಸ**— ಜಯ; ಆಕಿ ಮನಸ್ಸಿಗೆ ನೊವ್ವ ಆಗೋಹಾಂಗ ಮಾತಾಡಬ್ಯಾಡಪಾ[...]

**ರಾಧ**— ಏನು ಮಾಡಿಟ್ಟಿರಿದನ್ನ ?...... ನಮ್ಮ ದೈವನs ಖೊಟ್ಟಿ..... ಜಯಾಗ ಸಂಜೀಮುಂದ ಒಮ್ಮೆ ಒಬ್ಬನೆ ಬಾ ಅಂತರ ಹೇಳ್ರಿ... ಇನ್ನೊಮ್[...] ಅವನ ಮಾರೀ ಆದರೂ ನೋಡ್ತಿನಿ....

**ದಾಸ**— ( ಗಡುಸು ದನಿಯಲ್ಲಿ ) ಅಂವ ತಾನಾಗೇ ಬರೋತನಕ ಯಾರೂ[...] ಅವನ್ನ ಬಾ ಅಂತ ಕರಿಯೋಹಾಂಗಿಲ್ಲ. ಇಂವ ಮಗ ( ವಿಚಾರಮಗ್ನನಾಗಿ ) ಏನಾಯಿತಿದು ? ಸಂಸಾರದೊಳಗ ಹೀಗೂ ಆಗೋದುಂಟಲ್ಲ ? (ಎನ್ನುವಾಗ[...] ಕಣ್ಣಿಗ ಕತ್ತಲುಗವಿದಂತಾಗಿ ನಿಂತಲ್ಲಿಯೆ ನೆಲಕ್ಕೆ ಕುಪ್ಪಳಿಸುತ್ತಾನೆ. ಅದನ್ನು ನೋಡಿ ಗಾಬರಿಗೊಂಡು ರಾಜಾ ಮತ್ತು ರಾಧಕ್ಕ ಧಾವಿಸಿ ಅವನ ಹತ್ತಿ[...] ಬಂದು ಅವನನ್ನು ಎಚ್ಚರಿಸಲು ಪ್ರಯತ್ನಿಸುತ್ತಾರೆ.)

**ರಾಧ**— ಇದೇನಾತ್ತೆ ತಾಯಿ ? .... ಹ್ಯಾಂಗಮಾಡಲಿ ? .... ತುಸು[...] ನೀರರೆ ತಂದು ನೆತ್ತಿಗೆ ತಟ್ಟು ...: ದೇವರ, ಸ್ವಾಮೀ .... ನನ್[...] ಮಾಂಗಲ್ಯ ಉಳಸು ... ಏಳ್ರಿ ... ಮಾತಾಡ್ರಿ ... ಎಚ್ಚರಾತ್ಯೇನು ?

[ ರಾಜಾ ನೀರನ್ನು ತಂದು ನೆತ್ತಿಗೆ, ತಟ್ಟುತ್ತಾನೆ. ದಾಸಣ್ಣಗೆ ಎಚ್ಚರ[...] ಬರುತ್ತದೆ. ಸಾವಕಾಶ ಎದ್ದು ಕೂಡುತ್ತಾನೆ. ]

**ದಾಸ**— ( ಸುತ್ತಲೂ ನೋಡಿ ) ಏನೂ ಘಾಬರ್‍ಯಾಗಬ್ಯಾಡ್ರಿ. ಹೊಟ್ಟಿಯೊಳ[...]ಗಿನ ಕರುಳು ಹಿಂಗ ಹಿಂಡಿಧಾಂಗಾತು .... ಕಣ್ಣಿಗೆ ಭೋಳಿಬಂತು. ನಡಿ[...]ಯೋದs .... ಹುಂ .... ಹರಿ ಇಚ್ಛಾ ಇದ್ದಂತೆ ಆಗ್ತದ ! ಮದಿವ್ಯಾದ[...] ಮ್ಯಾಲ ಮಕ್ಕಳು ನಮ್ಮವಲ್ಲಪಾ ! ಪ್ರಪಂಚ ಹಿಂಗs ಇರೋದು .. ಹಿಂಗs ಇರೋದು. ಕಲ್ಲಾಗಿರಲು ಬೇಕು ಕಠಿಣ ಭವ ತೊರೆಯೊಳಗೆ ... ಹೀಗಾಗದಿದ್ದರ ಗತೀನೇ ಇಲ್ಲ. ... ( ಎನ್ನುವಾಗ ಎಲ್ಲರು ತೆರೆಯೊಳ[...]ಗಾಗುವರು )

---

ಸೂಚನೆ: ಈ ನಾಟಕವನ್ನು ಅಭಿನಯಿಸುವವರು ಲೇಖಕನ ಲಿಖಿತ ಅನುಮತಿಯನ್ನು ಅಭಿನಯದ ಪೂರ್ವದಲ್ಲಿಯೇ ಪಡೆಯಬೇಕು.

# ಅಣುವಿಕಿರಣದ ದುಷ್ಪರಿಣಾಮಗಳು

ಲೇಖಕರು:
ಎಸ್. ಬಿ. ಮಠದ, ಎಂ. ಎಸ್‌ಸಿ.
ಕರ್ನಾಟಕ ಸಾಯಿನ್ಸ ಕಾಲೇಜ, ಧಾರವಾಡ.

ಹಿರೊಶೀಮಾ ನಾಗಾಸಾಕಿಗಳು ಅಣುಬಾಂಬು ದಾಳಿಗೆ ಬಲಿಯಾಗಿದ್ದರೂ ಅಣುಸ್ಫೋಟಗಳಿನ್ನೂ ನಡೆದಿರುವವು. ಈ ಸ್ಫೋಟಗಳಿಂದ ಅಣುವಿಕಿರಣ ವಸ್ತು ವುಂಟಾಗಿ ಜನರಿಗೆ ವಿವಿಧ ರೋಗಗಳನ್ನುಂಟುಮಾಡುವದು, ಆಯುಷ್ಯ ಹಾನಿ ಯಾಗುವದು. ಅಲ್ಲದೆ ಭಾವಿ ಪೀಳಿಗೆಯ ಮೇಲೆ ಸಹ ತುಂಬ ಪರಿಣಾಮುವಾಗು ವದು. ಅಂತೆಯೇ ಜಗತ್ತಿನ ವಿಜ್ಞಾನಿಗಳು ಈ ಸ್ಫೋಟಗಳನ್ನು ನಿಲ್ಲಿಸಲು ಬಿನ್ನವಿ ಸಿರುವರು.

ಅಣು ಶಕ್ತಿ, ಅಣು ಬಾಂಬು, ಅಣು ಯುಗ ಎಂಬ ಶಬ್ದಗಳನ್ನು ಇಂದು ನಾವು ಪದೆ ಪದೆ ಕೇಳುತ್ತೇವೆ. ಈ ಅಣು ಎಂದರೇನು? ಅದು ನಮ್ಮ ಕಣ್ಣಿಗೆ ಕಾಣದು. ಎಂಥ ಸೂಕ್ಷ್ಮದರ್ಶಕದ ಶಕ್ತಿಗೂ ಅದು ನಿಲುಕದು. ಆದರೂ ಅದು ಶೂನ್ಯವಲ್ಲ- ಅದಕ್ಕೊಂದು ಆಕಾರವಿದೆ. ಅದಕ್ಕೊಂದು ರಚನೆ ಇದೆ. ಅದರಲ್ಲಿ ಅಪಾರ ಶಕ್ತಿ ಇದೆ. ಅದರಿಂದಲೇ ನಾವು, ಈ ಜಗತ್ತು, ಈ ವಿಶ್ವ. ಪ್ರತಿಯೊಂದು ವಸ್ತುವಿನ ಅಸ್ತಿತ್ವಕ್ಕೆ ಅದೆ ಮೂಲ. ಅದು ಇಲ್ಲವಾದರೆ ಎಲ್ಲವೂ ಶೂನ್ಯ.

ಅಣುವಿನ ರಚನೆ ಹೇಗಿದೆ? ಪ್ರತಿಯೊಂದು ಅಣುವಿನ ಮಧ್ಯ ನ್ಯೂಕ್ಲಿಯುಸ್ (Nucleus) ಎಂಬ ಭಾಗವಿದೆ. ಅದರಂ ಸುತ್ತಲೂ ಇಲೆಕ್ಟ್ರಾನ್ ( Electron ) ಎಂಬ ಕಣಗಳು, ಸೂರ್ಯನ ಸುತ್ತ ಗ್ರಹಗಳು ತಿರುಗುವಂತೆ, ಬೇರೆ ಬೇರೆ ಕಕ್ಷೆಗಳಲ್ಲಿ ಅತ್ಯಂತ ವೇಗದಿಂದ ತಿರುಗುತ್ತಿರುತ್ತವೆ. ನೂಕ್ಲಿಯುಸ್‌ದಲ್ಲಿ ಪ್ರೊಟಾನ್ (Proton) ಮತ್ತು ನ್ಯೂಟ್ರಾನ್ (Neutron) ಎಂಬ ಮತ್ತೆ ಎರಡು ತರದ ಕಣಗಳಿವೆ. ಅಣುವಿನ ಅಪಾರವಾದ ಶಕ್ತಿಯೆಲ್ಲ ಅಡಗಿರುವದು ಈ ನ್ಯೂಕ್ಲಿಯುಸ್‌ದಲ್ಲಿ. ನ್ಯೂಕ್ಲಿಯುಸ್ ವಿಭಜನೆ ಹೊಂದಿದಾಗ, ಈ ಶಕ್ತಿ ಅದರ ಬಂಧನದಿಂದ ವಿಮುಕ್ತವಾಗಿ ತನ್ನ ಮಹಿಮೆಯನ್ನು ಪ್ರದರ್ಶಿಸುವದು. ಅಣು ಬಾಂಬಿನಿಂದ ಹೊರಡುವದು ಇಂಥ ಶಕ್ತಿಯೆ. ಕೆಲವು ವಸ್ತುಗಳಲ್ಲಿರುವ ಅಣುವಿನ ನ್ಯೂಕ್ಲಿಯುಸ್ ಬಹಳ ಅಸ್ಥಿರವಾಗಿದೆ. ಆದ್ದರಿಂದ ಇವು ಅಲ್ಫಾ (Alpha), ಬೀಟಾ (Beta) ಮತ್ತು ಗ್ಯಾಮಾ ( Gamma ) ಎಂಬ ಕಿರಣಗಳನ್ನು ಹೊರಗೆ ತೂರುತ್ತ, ತಮ್ಮಷ್ಟಕ್ಕೆ ತಾವೇ ನಾಶ ಹೊಂದುತ್ತಿರುವವು. ರೇಡಿಯಂ ಇಂಥ ಒಂದು ವಸ್ತು. ಅದು ಪ್ರಕಾಶವನ್ನು ಬೀರಲು, ಅದರ ಈ ಸ್ಥಿತಿಯೇ ಕಾರಣ. ಈ ಕಿರಣಗಳಲ್ಲದೆ ಎಕ್ಸ್-ರೇ ( X-ray ), ಹಾಗೂ ತೀವ್ರಗತಿಯಿಂದ ಚಲಿಸುವ ಇಲೆಕ್ಟ್ರಾನ್, ಇವುಗಳಿಗೆಲ್ಲ ಅಣುವಿಕಿರಣ (Atomic Radiaiton ) ಎಂದು ಹೆಸರು. ಇವು ಬಹುತರವಾಗಿ ಎಲ್ಲ ವಸ್ತುಗಳನ್ನೂ ಭೇದಿಸಿ ಪಾರಾಗಬಲ್ಲವು. ಆ ವಸ್ತುವು ನಮ್ಮ ದೇಹವೆ ಆದರೆ, ಭಯಾನಕವಾದ ದುಷ್ಪರಿಣಾಮಗಳಿಗೆ ಅದು ಆಹುತಿಯಾಗುವದು. ಈಗ ನಾವು ಇಂಥ ದುಷ್ಪರಿಣಾಮಗಳನ್ನು ತಿಳಿಯುವಾ.

## ಅಣು ಸ್ಫೋಟಗಳು

ಅಮೇರಿಕಾ, ರಶಿಯಾ, ಬ್ರಿಟನ್ ರಾಷ್ಟ್ರಗಳು ಅಣು ಮತ್ತು ಜಲಜನಕ ಬಾಂಬುಗಳನ್ನು ಸ್ಫೋಟಗೊಳಿಸುತ್ತಿರುವದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿದೆ. ೧೯೪೫ ರಿಂದ ಇಲ್ಲಿಯ ವರೆಗೆ ಅಮೇರಿಕಾ ೧೩೧, ರಶಿಯಾ ೫೩, ಬ್ರಿಟನ್ ೨೧ ಹೀಗೆ ಒಟ್ಟು ೨೦೫ ಅಣ್ವಸ್ತ್ರಗಳನ್ನು ಸ್ಫೋಟಗೊಳಿಸಿವೆ. ಈ ಸ್ಫೋಟಗಳು ನಮ್ಮಿಂದ ಸಾವಿರಾರು ಮೈಲು ಆಚೆ ನಡೆಯುತ್ತಿವೆ, ನಿಜ. ಆದರೆ, ನಾವು ನಿಶ್ಚಿಂತರಾಗಿರುವದು ಸಾಧ್ಯವಿಲ್ಲ. ಏಕೆಂದರೆ, ಅವುಗಳಿಂದ ಅಣುವಿಕಿರಣ ವಸ್ತುವು ಉತ್ಪನ್ನವಾಗಿ, ಜಗತ್ತಿನ ತುಂಬೆಲ್ಲ ಪಸರಿಸಿ, ನಮ್ಮ ಮೇಲೆಯೂ ದುಷ್ಪರಿಣಾಮಮಾಡುತ್ತದೆ. ಅಣುವಿಕಿರಣವು ನಮ್ಮ ಶರೀರವನ್ನು ನಮ್ಮ ಚರ್ಮದಮೂಲಕ ಪ್ರವೇಶಿಸಬಲ್ಲದು; ನಾವು ತೆಗೆದುಕೊಳ್ಳುವ ಆಹಾರ, ಪೇಯುಗಳ ಜತೆಗೆ ಸೇರಬಲ್ಲದು; ಅಲ್ಲದೆ, ನಾವು ಉಸಿರಾಡಿಸುವಾಗ, ನಮ್ಮ ಫುಪ್ಪುಸದೊಳಗೆ ಸೇರಿ, ಅಲ್ಲಿಂದ ರಕ್ತದ ಮಾರ್ಗವಾಗಿ ಇಡೀ ಶರೀರವನ್ನು ವ್ಯಾಪಿಸಬಲ್ಲದು. ಹೀಗೆ ನಮ್ಮ ಶರೀರವನ್ನು ಭೇದಿಸುವಾಗ, ಅದು ನಮ್ಮಲ್ಲಿಯ ಅಣುಗಳಲ್ಲಿರುವ ಇಲೆಕ್ಟ್ರಾನ್‌ಗಳನ್ನು ನೂಕಿ, ಪ್ರತಿಕ್ರಿಯೆ ಹುಟ್ಟುವಂತೆಮಾಡುತ್ತದೆ. ಇಂಥ ಪ್ರತಿಕ್ರಿಯೆ ಪರಿಣಾಮುವಾಗಿಯೆ, ದುಷ್ಪರಿಣಾಮಗಳು ಉಂಟಾಗುತ್ತವೆ. ಇವು ಎರಡು ತೆರನಾಗಿವೆ. ದೈಹಿಕ- ಮತ್ತು ಆನುವಂಶಿಕ. ಮೊದಲನೆಯದು ಸ್ಟ್ರಾಂಟಿಯಂ ೯೦ ( Strontium 90 ): ಎರಡನೆಯದು ಕೆಸಿಯಂ ೧೩೭(Cesium 137 ) ಎಂಬ ವಸ್ತುಗಳಿಂದ ಹುಟ್ಟುತ್ತವೆ. ಇತ್ತೀಚಿನ ಸಂಶೋಧನೆಗಳಿಂದ, ಈ ವಸ್ತುಗಳು ಜಗತ್ತಿನ ತುಂಬೆಲ್ಲ ಸಮಾನವಾಗಿ ಪಸರಿಸುವದಿಲ್ಲ ಎಂದು ತಿಳಿದುಬಂದಿದೆ. ಇಂಥ ವಸ್ತುಗಳ ೨/೩ ದಷ್ಟು ಭಾಗ ಉತ್ತರ ಗೋಲಾರ್ಧದಲ್ಲಿ ಹರಡಿದ್ದರೆ, ೧/೩ ದಷ್ಟು ಮಾತ್ರ ದಕ್ಷಿಣ ಗೋಲಾರ್ಧದಲ್ಲಿ ಹರಡಿದೆ. ಅಮೇರಿಕೆಯಿಂದ ಬರುವ ವರಖಿಗಳು ಇದರಿಂದ ಹುಟ್ಟುವ ದುಷ್ಪರಿಣಾಮಗಳನ್ನು ಅತಿ ಕಡಿಮೆ ಪ್ರಮಾಣದಲ್ಲಿ ವ್ಯಕ್ತ ಪಡಿಸುತ್ತವೆ. ಆದರೆ, ನಿಜ ಸ್ಥಿತಿ



ಸೌಥ ಸೀ ದ್ವೀಪದ ಬಾಲಿಕೆಯೊಬ್ಬಳು ಅಣುವಿಕಿರಣದ ಪರಿಣಾಮಕ್ಕೊಳಗಾಗಿದ್ದಾಳೆ. ಸ್ಫೋಟದ ೨೮ ದಿನಗಳ ನಂತರ ಕೂದಲು ಉದುರತೊಡಗಿದವು. ಆರು ತಿಂಗಳ ನಂತರ ಕೂದಲು ಮತ್ತೆ ಬೆಳೆದುದನ್ನು ಮುಂದಿನ ಚಿತ್ರದಲ್ಲಿ ಕಾಣಬಹುದು.

ಹಾಗಿಲ್ಲ. ಅಣುವಿಕಿರಣ ವಸ್ತುವು ಭೂಮಿಗೆ ಇಳಿಯಲು ೪ ರಿಂದ ೧೦ ವರುಷ ಬೇಕು ಎಂದು ಮೊದಲು ತಿಳಿಯಲಾಗಿತ್ತು. ಈಗ ಈ ಅವಧಿ ೧ ರಿಂದ ೪ ವರುಷಗಳು ಮಾತ್ರ ಎಂದು ಸಿದ್ಧವಾಗಿದೆ. ಅಲ್ಲದೆ ಸ್ಟ್ರಾಂಟಿಯಂ ೯೦ ವಸ್ತುವು ೧೯೬೨-೬೪ ರ ವೇಳೆಗೆ ನಮ್ಮ ದೇಹದಲ್ಲಿ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಕಾಣಿಸಿಕೊಳ್ಳುವದು ಎಂದು ತಜ್ಞರ ಮತವಿದೆ. ಈ ಸಂಗತಿಗಳಿಂದ ದುಷ್ಪರಿಣಾಮಗಳು ಹೆಚ್ಚುವವೇ ಹೊರತು, ಕಡಿಮೆಯಾಗುವ ಲಕ್ಷಣಗಳಿಲ್ಲ ಎಂದು ತಿಳಿಯುವದು. ಆದ್ದರಿಂದ ಇಂಥ ವರದಿಗಳು ಅಮೇರಿಕೆಯ ಸಲುವಾಗಿ ಜಗತ್ತಿನ ಮೆಚ್ಚಿಗೆ ಪಡೆಯಲು ಮಾತ್ರ ಉಪಯೋಗಿಸುವ ಸಾಧನವಾಗಿರಬಹುದು.

### ವಿಕಿರಣ ರೋಗಗಳು

ಅಣುವಿಕಿರಣ ಪ್ರಬಲವಾದರೆ ವಿಕಿರಣ ರೋಗ (Radiation Sickness) ಎಂಬ ರೋಗವಾಗುವದು. ನಿರುತ್ಸಾಹ, ಹಸಿವೆ ಇಲ್ಲದಂತಾಗುವಿಕೆ, ವಾಂತಿ, ಹೊಟ್ಟೆ ಜಾಡಿಸುವದು, ಜ್ವರ, ಗಂಟಲ ಬಾವು, ಅಶಕ್ತತೆ ಇವೆ ಆ ರೋಗದ ಲಕ್ಷಣಗಳು. ಈ ಲಕ್ಷಣಗಳು ತೀವ್ರವಾದರೆ ಸಾವು ತಪ್ಪಿದ್ದಲ್ಲ. ೧೯೫೪ ನೆ ವರುಷ, ಮಾರ್ಚ ೧ನೆ ದಿನಾಂಕ ಅಮೇರಿಕೆಯ ಮಾರ್ಶಲ್ ದ್ವೀಪಗಳ ಬಿಕಿನಿ ಎಂಬಲ್ಲಿ ಅಣ್ವಸ್ತ್ರ ಒಂದನ್ನು ಸ್ಫೋಟಗೊಳಿಸಿತು. ಅದರಿಂದ ಹೊರಟ ಅಣು ವಿಕಿರಣ ಬೂದಿ ೯೦ ಮೈಲು ದೂರದಲ್ಲಿದ್ದ ಒಂದು ನೌಕೆಯ ಮೇಲೆ ಬಿದ್ದಿತು. ನೌಕೆಯಲ್ಲಿದ್ದ ೨೩ ಜಪಾನ ಮೀನುಗಾರರು ಅದಕ್ಕೆ ತುತ್ತಾದರು. ಅದರ ಪರಿಣಾಮವಾಗಿ ಅವರೆಲ್ಲರೂ ಈ ರೋಗದಿಂದ ಬಳಲಬೇಕಾಯಿತು.

ಅಣುವಿಕಿರಣ ನಮ್ಮ ರಕ್ತದ ಉತ್ಪಾದನೆ ಕಡಿಮೆ ಮಾಡುವದು. ನಮ್ಮ ಶರೀರವನ್ನು ರೋಗಕ್ರಿಮಿಗಳಿಂದ ರಕ್ಷಿಸುವ, ರಕ್ತದಲ್ಲಿಯ ಆ್ಯಂಟಿ ಬಾಡಿಸ್ (Anti-Bodies) ಎಂಬ ಘಟಕಗಳು ಪ್ರಮಾಣದಲ್ಲಿ ಅತಿ ಕಡಿಮೆಯಾಗುವವು. ಆದ್ದರಿಂದ, ನಾವು ಬೇಕಾದಷ್ಟು ಜಾಗ್ರತೆ ವಹಿಸಿದರೂ ಚಿಕ್ಕ ಗಾಯಗಳು ಕೂಡ ಗುಣವಾಗಲಾರವು. ಅದು ಲ್ಯೂಕಿಮಿಯಾ (Luckaemia) ಎಂಬ ಭಯಂಕರ ರೋಗವನ್ನು ತರಬಲ್ಲದು. ಲ್ಯೂಕಿಮಿಯಾ ಅಂದರೆ ರಕ್ತದ ಕ್ಯಾನ್ಸರ. ಇದೊಂದು ಗುಣವಾಗದ, ಮರಣಾಂತಿಕ ರೋಗ. ಈಗಾಗಲೆ ಪ್ರಸಾರವಾದ ಅಣುವಿಕಿರಣದಿಂದ, ಇನ್ನು ೩೦ ವರುಷಗಳಲ್ಲಿ ಒಂದೂವರೆ ಲಕ್ಷ ಜನರು ಲ್ಯೂಕಿಮಿಯಾದಿಂದ ಬಳಲಿ ಸಾಯಬಹುದು ಎಂದು ಅಂದಾಜು ಮಾಡಲಾಗಿದೆ. ರಕ್ತದ ಕ್ಯಾನ್ಸರ್ ಅಗುವಂತೆ, ಚರ್ಮ, ಎಲುಬು, ಪುಪ್ಪುಸಗಳ ಕ್ಯಾನ್ಸರ್ ಕೂಡ ಆಗುವದುಂಟು. ಪ್ರಾರಂಭದಲ್ಲಿ




ಮೂಲ ರೆಡಿಯಾಲಜಿಸ್ಟನ ಬಲಗೈ. ೧೮೯೯ ರಲ್ಲಿ ಮೊದಲ ಗಾಯವಾಗಿ ೧೯೩೨ ರಲ್ಲಿ ಕೈ ವಿಕಾರಗೊಂಡು ೧೯೩೩ ರಲ್ಲಿ ಕ್ಯಾನ್ಸರದಿಂದ ಮರಣ ಸಂಭವಿಸಿತು.

ಮುಂಜಾಗ್ರತೆಗಳನ್ನು ಅಲಕ್ಷಿಸಿದ ಎಕ್ಸರೆ ತಜ್ಞರು ಕ್ಯಾನ್ಸರಕ್ಕೆ ತುತ್ತಾದ ದುರಂತ ಘಟನೆಗಳನ್ನು ಇಲ್ಲಿ ನಾವು ನೆನಪಿಗೆ ತಂದುಕೊಳ್ಳಬಹುದು.

### ಆಯುಷ್ಯಹಾನಿ

ವಿಕಿರಣವು ಆಯುಷ್ಯವನ್ನು ಕಡಿಮೆ ಮಾಡುವದು. ಅದಕ್ಕೆ ತುತ್ತಾದವರು ಬೇಗ ಮುಪ್ಪಾಗುವರು. ಈಗಾಗಲೆ ಅದರ ಪರಿಣಾಮದಿಂದ ಪ್ರತಿಯೊಬ್ಬ ಮನುಷ್ಯನ ಆಯುಷ್ಯವು ಎರಡು ವಾರ ಕಡಿಮೆ ಆಗಿದೆ. ಜಗತ್ತಿನ ಎಲ್ಲ ಜನಸಂಖ್ಯೆಯ ಪ್ರಮಾಣದಲ್ಲಿ ವಿಚಾರಿಸಿದರೆ ಒಂದು ನೂರು ದಶಲಕ್ಷ ಮನುಷ್ಯ ವರುಷಗಳಷ್ಟು ಅದು ಕಡಿ... ಮೆಯಾಗುವದು. ಇದಲ್ಲದ... ಜೀವ ಕಣಗಳು ತಮ್ಮ ವಿಭ... ಜನೆಯ ಶಕ್ತಿಯನ್ನು ಕಳೆ... ದುಕೊಂಡು ಶರೀರದಲ್ಲಾ... ಗುವ ಸವಕಳಿಯನ್ನು ಪೂರೈ... ಸುವದು ಸಾಧ್ಯವಾಗುವ... ದಿಲ್ಲ. ಒಮ್ಮೊಮ್ಮೆ ವಿಕಿರಣ... ದಿಂದ ಪೂರ್ಣ ಕುರುಡತನ... ಬರುವದು.

ಸಂತಾನ ಕ್ರಿಯೆ ಯ... ಮೇಲೂ ಅದು ದುಷ್ಪರಿ... ಣಾಮ ಮಾಡುವದು ... ಸಂತಾನಶಕ್ತಿ ಕಡಿಮೆ ಆಗು... ವದು. ಸಂಪೂರ್ಣ ನಪುಂಸ... ಕತೆ ಉಂಟಾಗುವದೂ ಅಸಂ... ಭವವೇನಲ್ಲ. ಇಲಿಗಳ... ಮೇಲೆ ಸಂತಾನ ಕ್ರಿಯೆಗೆ... ಸಂಬಂಧಪಟ್ಟ ಒಂದು ಪ್ರ... ಯೋಗ ಮಾಡಲಾಯಿತು... ಇಂಥ ಇಲಿಗಳನ್ನು, ಗರ್ಭ... ಧರಿಸಿದ ಮೇಲೆ, ಐದ... ದಿನಗಳವರೆಗೆ ಅಣು ವಿಕಿರಣಕ್ಕೆ ನೀಡಲಾ... ಯಿತು. ಇದರ ಪರಿಣಾಮವಾಗಿ, ಅವು ಮರಿ... ಗಳಿಗೆ ಜನ್ಮ ಕೊಡಲೇ ಇಲ್ಲ. ಗರ್ಭವು ಒಂದು... ನಿರ್ದಿಷ್ಟ ಆಕಾರ ಹೊಂದಿದಾಗ ವಿಕಿರಣಕ್ಕೆ... ಬಲಿಯಾಗುವ ಸಂಭವ ಹೆಚ್ಚು. ಇಂಥ ಗರ್ಭ... ಗಳು ಬೆಳೆಯುತ್ತವೆ. ಆದರೆ ಭೂತಗಳಂತೆ... ಚಿತ್ರವಿಚಿತ್ರವಾಗಿ ತೋರುತ್ತವೆ. ಇದಕ್ಕೆ... ಬೆಳೆದು ದೊಡ್ಡವಾದ ಮೇಲೆ ಸಂತಾನ ಶಕ್ತಿ... ಇಲ್ಲ; ಆಯುಷ್ಯ ಕಡಿಮೆ; ಮಾನಸಿಕ... ತೊಂದರೆಗಳು ಹೆಚ್ಚು. ಅಮೇರಿಕಾ ಹಾಗೂ... ಬ್ರಿಟನ್ ಅಣುಕೇಂದ್ರಗಳಲ್ಲಿ ನವಕರರು ಪಡೆ... ಯುವ ಅಣುವಿಕಿರಣದ ಪ್ರಮಾಣ ಎಷ್ಟು... ಎಂಬುದನ್ನು ನಿಯ... ಮಿತವಾಗಿ ಪರೀಕ್ಷಿಸು... ತ್ತಾರೆ. ಅವರು ಪಡೆ... ದ ವಿಕಿರಣ ಅತಿಯಾ... ಗಿದ್ದರೆ, ಅವರಿ... ಮಕ್ಕಳನ್ನು ಪಡೆ... ಯುವ ಅಧಿಕಾರ... ವಿಲ್ಲ. ಆದ್ದರಿಂದ... ಗರ್ಭವತಿಯರ... ಎಕ್ಸ್‌ರೆ ಪರೀಕ್ಷೆಗೆ... ಒಳಗಾದಾಗ ತಜ್ಞನು... ಅತ್ಯಂತ ಜಾಗ್ರತೆ... ವಹಿಸ ಬೇಕಾಗುವ... ದು. ಅದರ ಪ್ರಮಾಣ... ಹೆಚ್ಚಾದರೆ ಬೆಳೆಯು... ವ ಗರ್ಭಕ್ಕೆ ಗಂ... ಡಾಂತರವಿದೆ. ಅದ್ದ...



ಗರ್ಭಧಾರಣೆಯ ನಂತರ ಅಣುವಿಕಿರಣ ಪರಿಣಾಮಕ್ಕೊಳಗಾಗಿ ಜನಿಸಿದ ಇಲಿಯ ಮರಿ. ಸಂಪೂರ್ಣ ವಿರೂಪ ತಾಳಿರುವದನ್ನು, ಗಾತ್ರ ಕಡಿಮೆಯಾದುದನ್ನೂ ಮುಂದಿನ ಸ್ವಾಭಾವಿಕ ಮರಿಯೊಂದಿಗೆ ಹೋಲಿಸಿ ತಿಳಿದುಕೊಳ್ಳಬಹುದು.

ದ ಗರ್ಭವತಿಯರನ್ನು ಹೀಗೆ ಪರೀಕ್ಷಿಸು
ರು ಈಗ ಅತಿ ಕಡಿಮೆ ಆಗಿದೆ.

### ವೀ ಪೀಳಿಗೆಯ ಮೇಲಾಗುವ
### ರಿಣಾಮ

ಇವೆಲ್ಲಕ್ಕಿಂತ ಮುಂದಿನ ಪೀಳಿಗೆಗಳ ಮೇಲೆ
ಗುವ ಪರಿಣಾಮಗಳು ಹೆಚ್ಚು ಭಯಾನಕ
ಗಿವೆ. ನಮ್ಮ ಜೀವಕಣಗಳಲ್ಲಿ ಜೀನ್ಸ್
Genes ) ಎಂಬ ಅತ್ಯಂತ ಮಹತ್ವವಾದ
ಟಕಗಳಿವೆ. ಅವು ನಮ್ಮ ಎಲ್ಲ ದೈಹಿಕ
ಾಗೂ ಮಾನಸಿಕ ಗುಣಗಳಿಗೆ ಕಾರಣ
ಗಿವೆ. ಅಂದರೆ, ನಾವು ಹುಟ್ಟುತ್ತಲೆ ನಮ್ಮ
ತಿಗೆ ಬರುವ ಎಲ್ಲ ಗುಣಗಳನ್ನೂ ಅವು ನಿರ್ಧ
ಸುತ್ತವೆ. ಜೀನ್ಸ್ ಇವು ಅಣುವಿಕಿರಣದ
ಂಪರ್ಕ ತಗಲಿದಾಗ ಬದಲಾವಣೆ ಹೊಂದು
ವೆ. ಇಂಥ ಬದಲಾವಣೆಗೆ ಮ್ಯುಟೇಶನ್
Mutation ) ಎಂದು ಹೆಸರು. ಇಂಥ ಬದ
ಾವಣೆಯಿಂದ ಮನುಷ್ಯನ ಗುಣಗಳೂ ಬದ
ಾಗುತ್ತವೆ. ಸಂತಾನಕ್ರಿಯೆಯ ಮೂಲಕ
ವು ತಂದೆ ತಾಯಿಗಳಿಂದ ಮಕ್ಕಳಿಗೆ ಸಾಗಿಸ
ಟ್ಟು, ಇಂಥ ಮಕ್ಕಳು ನರಕಯಾತನೆ ಅನು
ವಿಸಬೇಕಾಗುವದು. ಇಲ್ಲಿಯ ವರೆಗೆ ಪಸರಿ
ದ ವಿಕಿರಣದ ಪರಿಣಾಮವಾಗಿ ಸುಮಾರು
ಲ್ಕು ಲಕ್ಷ ಜನರು ಇಂಥ ಮ್ಯುಟೇಶನ್
ಂದ ಸಾಯಬಹುದೆಂದು ತಿಳಿದುಬಂದಿದೆ.
ಲ್ಲದೆ ಮ್ಯುಟೇಶನ್‌ದಿಂದ ಹೊಸ ಹೊಸ
ೋಗಜಂತುಗಳು ಹುಟ್ಟಿ ವಿವಿಧ ರೀತಿಯ
ೋಗಗಳನ್ನು ತರುವ ಸಂಭವವೂ ಇದೆ.

೧೯೪೫ ನೇ ವರುಷ ಅಗಸ್ಟ್ ತಿಂಗಳು ೬ನೇ
ನಾಂಕ. ಅಂದು ಹಿರೋಶಿಮಾ ಅಣು
ಾಂಬಿಗೆ ತುತ್ತಾಯಿತು. ೯ನೇ ದಿನಾಂಕ
ಂದು ನಾಗಾಸಾಕಿ ಇನ್ನೊಂದು ಅಣು
ಾಂಬಿಗೆ ಆಹುತಿಯಾಯಿತು. ಈ ಎರಡೇ
ರಡು ಬಾಂಬುಗಳ ಪರಿಣಾಮವಾಗಿ
ುಂಟಾದ ಸಾವುನೋವುಗಳ ಅಂಕಿಸಂಖ್ಯೆ
ಳು ಹೀಗಿವೆ :

| | ಹಿರೋಶಿಮಾ | ನಾಗಾಸಾಕಿ |
|---|---|---|
| ತ್ತವರು........ | ೭೮,೧೫೦ | ೨೩,೭೫೩ |
| ಾಣೆಯಾದವರು.. | ೧೩,೯೮೩ | ೧,೯೨೪ |
| ಾಯಗೊಂಡವರು.. | ೩೭,೪೨೫ | ೨೩,೩೪೫ |
| ನ್ನುಳಿದ ಅನಾಹುತಕ್ಕೆ ಲಿಯಾದವರು.. | ೨,೩೫,೬೫೬ | ೮೯,೦೨೫ |
| ಟ್ಟು ಸಂಖ್ಯೆ.... | ೩,೬೫,೨೧೩ | ೧,೩೮,೦೪೭ |

ಈ ಅಂಕಿಸಂಖ್ಯೆಗಳು ಕೊನೆಯವೆ? ಆ
ಘ್ರಿರ ಮತ್ತು ಪಾಶವಿ ದಾಳಿಯಿಂದ ಪಾರಾದ
ರಲ್ಲಿ ೧೦೦ಕ್ಕೆ ೧೦ ರಷ್ಟು ಜನರು ಹುಚ್ಚ
ಾಗಿ ಅಲೆಯುತ್ತಿದ್ದಾರೆ. ಈಗಲೂ ಅಣುವಿಕಿ
ಣದಿಂದ ನೂರಾರು ಜನರು ಸಾಯುತ್ತಿ
ದ್ದಾರೆ. ಬದುಕಿ ಉಳಿದವರು ಅಸ್ಪೃಶ್ಯರಾಗಿ
ದ್ದಾರೆ. ಸಮಾಜ ಅವರನ್ನು ಬಹಿಷ್ಕರಿಸಿದೆ.
ವರಿಗೆ ಉದ್ಯೋಗ ಕೊಡಲಾಗುತ್ತಿರಲಿಲ್ಲ.
ವರಿಂದ ಹುಟ್ಟಿದ ಮಕ್ಕಳು ಅಸಾಮಾನ್ಯ
ವ್ಯಕ್ತಿಗಳು ಆಗಬಹುದೆಂದು, ಅವರು ಲಗ್ನ ವಾಗುವದೂ ಅಸಾಧ್ಯವಾಗಿದೆ.





### ವಿಜ್ಞಾನಿಗಳ ಬಿನ್ನಹ

ಮನುಷ್ಯರಲ್ಲಿ ಒಂದು ಅಪೂರ್ವವಾದ ಗುಣವಿದೆ. ಅದು ಬುದ್ಧಿಶಕ್ತಿ. ಈ ಬುದ್ಧಿ-ಶಕ್ತಿಯಿಂದಲೆ ಆತನು ಎಲ್ಲ ಪ್ರಾಣಿಗಳಿಗಿಂತಲೂ ಶ್ರೇಷ್ಠ ಸ್ಥಾನದಲ್ಲಿದ್ದಾನೆ. ತನ್ನ ಜೀವನವನ್ನು ಸಾಕಷ್ಟು ರೀತಿಯಲ್ಲಿ ಬದಲಿಸಿಕೊಂಡಿದ್ದಾನೆ. ಸೃಷ್ಟಿಯನ್ನು ನಿಯಂತ್ರಣದಲ್ಲಿಡಲು ಯಶಸ್ಸು ಪಡೆಯುತ್ತಿದ್ದಾನೆ. ಆದರೆ ಅದೆ ಬುದ್ಧಿ ಶಕ್ತಿಯಿಂದ ತನ್ನ ವಂಶವನ್ನೆ ನಿರ್ನಾಮ ಮಾಡಿಕೊಳ್ಳುವ ಭಯವೂ ಇದೆ. ಆದ್ದರಿಂದ ಜಗದ್ವಿಖ್ಯಾತ ವ್ಯಕ್ತಿಗಳಾದ Bertrand Russel, Albert Einstein, H.J. Mulla- ಮೊದಲಾದವರು ೧೯೫೫ ನೆ ವರುಷ ಜುಲೈ ತಿಂಗಳಲ್ಲಿ ತಮ್ಮ ಹಸ್ತಾಕ್ಷರ ಹಾಕಿ, ಒಂದು ಸಂಯುಕ್ತ ಹೇಳಿಕೆಯ ಮೂಲಕ ಜಗತ್ತಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ಅದರಸಾರ ಹೀಗಿದೆ:

"ಬಹು ಕಠಿಣವಾದ, ಭಯಂಕರವಾದ ಮತ್ತು ಪಾರಾಗಿ ಹೋಗಲಾರದಂತಹ ಸಮಸ್ಯೆ, ಇದೊ, ಇಲ್ಲಿ ನಿಮ್ಮ ಮುಂದಿದೆ. ನಾವು ಮನುಷ್ಯಕುಲವನ್ನು ನಿರ್ನಾಮಮಾಡ ಬೇಕೆ ? ಇಲ್ಲವೆ ಯುದ್ಧವನ್ನು ಬಿಟ್ಟು ಕೊಡ ಬಲ್ಲೆವೊ ? ಸುಖ, ಜ್ಞಾನ ಹಾಗೂ ಬುದ್ಧಿಗಳಲ್ಲಿ ನಿರಂತರವಾದ ಪ್ರಗತಿ ಸಾಧ್ಯವಿದೆ. ಅದರ ಬದಲು ನಮ್ಮಲ್ಲಿಯ ಕಲಹಗಳನ್ನು ಮರೆಯದೆ ಸಾವನ್ನು ಅಪ್ಪಬೇಕೆ ? ನಾವು ಮಾನವರಿಗೆ ಪ್ರಾರ್ಥಿಸುವಂತೆ ಪ್ರಾರ್ಥಿಸುತ್ತೇವೆ. ನಿಮ್ಮ ಮನುಷ್ಯತ್ವವನ್ನು ಮಾತ್ರ ನೆನಪಿಡಿರಿ. ಉಳಿದೆಲ್ಲವನ್ನೂ ಮರೆತು ಬಿಡಿರಿ. ನೀವು ಇಷ್ಟು ಮಾಡಬಲ್ಲರಾದರೆ, ಸ್ವರ್ಗದ ಬಾಗಿಲು ನಿಮಗಾಗಿ ತೆರೆದಿದೆ. ಮರೆಯುವದಿಲ್ಲವಾದರೆ ಸಾಮೂಹಿಕ ಸಾವಿನ ಗಂಡಾಂತರ ತಪ್ಪಿದ್ದಲ್ಲ."

# ಕನ್ನಡ ವಾರಪತ್ರಿಕೆಗಳ ಕೆಲ ಸಮಸ್ಯೆಗಳು

ಕನ್ನಡ ವಾರಪತ್ರಿಕೆಗಳು ಇಂದು ಇನ್ನೂ ಅಭಿವೃದ್ಧಿಯ ಮಾರ್ಗದಲ್ಲಿವೆ. ಅವು ವಿಕಾಸವಾಗಲು ಅನೇಕ ತೊಡಕುಗಳನ್ನು, ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಅವನ್ನು ಹೇಗೆ ಪರಿಹರಿಸಬಹುದು ಎಂಬುದನ್ನು ಕನ್ನಡ ವಾರಪತ್ರಿಕೆಗಳ ಇಂದಿನ ಸ್ಥಿತಿಗತಿಯನ್ನು ಚಿತ್ರಿಸುವ ಈ ಲೇಖನದಲ್ಲಿ ನಿರೂಪಿಸಲಾಗಿದೆ.

ಲೇಖಕರು: ಕುಲಮರ್ವ ಬಾಲಕೃಷ್ಣ

ಕನ್ನಡದಲ್ಲಿ ಇಂದು ಸುಮಾರು ೪೦ ವಾರ ಪತ್ರಿಕೆಗಳು ಪ್ರಕಟವಾಗುತ್ತಿವೆ. ಇವುಗಳಲ್ಲಿ ನಾಲ್ಕು ಪತ್ರಿಕೆಗಳು ಅಷ್ಟಿಷ್ಟು ಚಿತ್ರಗಳು, ವಿಶೇಷ ಲೇಖನಗಳು, ಚಲಚ್ಚಿತ್ರ ವಿಭಾಗ, ಮಹಿಳಾಲೋಕ, ಮಕ್ಕಳವನ ಮುಂತಾದ ವಿಭಾಗಗಳಿಂದೊಡಗೂಡಿ ಪ್ರಕಟವಾಗುವಂಥವು. ಸುಮಾರು ೪ ರಿಂದ ೧೨ ಪುಟಗಳಿರುವಪತ್ರಿಕೆಗಳ ಸಂಖ್ಯೆಇದಕ್ಕಿಂತ ಹೆಚ್ಚು. ಇವುಗಳಲ್ಲಿ ಕೆಲವು ಬರಿಯ ರಾಜಕೀಯ ಪ್ರಚಾರದೃಷ್ಟಿಯುವು ಇದ್ದರೆ ಕೆಲವು ರಾಜಕೀಯದಷ್ಟೇ ಮಹತ್ವವನ್ನು ಶೈಕ್ಷಣಿಕ ವಿಷಯಗಳಿಗೂ ಕೊಡುವುವು. ಆದರೆ ಈ ಮಾದರಿಯ ಪತ್ರಿಕೆಗಳಿಗೆ ಮೊದಲನೆಯ ನಾಲ್ಕು ವಾರಪತ್ರಿಕೆಗಳಿಗೆ ಇರುವಂತೆ ಅಖಿಲ ಕರ್ನಾಟಕವ್ಯಾಪ್ತಿಯಿಲ್ಲ. ಒಂದು ಜಿಲ್ಲೆ ಮತ್ತು ಅದರ ಸುತ್ತಮುತ್ತಲಿನ ಊರುಗಳಲ್ಲಿ ಈ ಪತ್ರಿಕೆಗಳಿಗೆ ಓದುಗರು ದೊರೆಯುವರು. ಆ ಊರುಗಳ ಸುದ್ದಿಗಾಗಿಯೇ ಇಂಥ ಪತ್ರಿಕೆಗಳು ಒಂದೋ ಎರಡೋ ಪುಟಗಳನ್ನು ಮೀಸಲಾಗಿರಿಸುವುವು.

ಇಂಥ ಪತ್ರಿಕೆಗಳಲ್ಲಿ ವಾರದ ಸುದ್ದಿಸಾರ, ಸಂಪಾದಕೀಯ, ಸ್ಥಳೀಯ ಸುದ್ದಿಗಳು, ವಾರದ ಭವಿಷ್ಯ, ಓದುಗರ ಪತ್ರಗಳು ವಿವಿಧ ವಿಷಯಗಳಿಗೆ ಸಂಬಂಧಿಸಿದ ಒಂದೋ ಎರಡೋ ಲೇಖನಗಳು ಪ್ರಕಟವಾದರೆ ಹೆಚ್ಚು.

ಇವುಗಳ ಲೇಖಕರ ಬಳಗವೂ ಓದುಗರ ಬಳಗವೂ ಹೆಚ್ಚು ಕಡಿಮೆ ಒಂದೇ. ಓದುಗರು ಚಂದಾ ಕಟ್ಟಿ ತಮ್ಮ ಪ್ರತಿಗಳನ್ನು ಮೊದಲೇ ಕಾಯ್ದಿರಿಸಿಕೊಳ್ಳುತ್ತಾರೆ. ಸ್ಟಾಲುಗಳಲ್ಲಿ ಈ ಪತ್ರಿಕೆಗಳು ಮಾರಾಟವಾಗುವುದಿಲ್ಲ. ದೂರ ದೂರದ ಹಳ್ಳಿಗಳಿಗೆ ಅಂಚೆಯ ಮೂಲಕ ಹೋಗುವ ಈ ಪತ್ರಿಕೆಗಳು ಸಾಮಾನ್ಯ ಓದುಬರೆಹ ಬಲ್ಲವರಿಗೆ ಅದರ ಮರವೆಯಾಗದಂತೆಯೂ ಅವರು ಜಗತ್ತಿನ ಆಗುಹೋಗುಗಳ ಬಗೆಗೆ ಏನಾದರೂ ಬಾಯಿ ಆಡಿಸಿಕೊಳ್ಳುವಂತೆಯೂ ನೆರವು ನೀಡುವುವು.

## ರಾಜಕೀಯ ಪತ್ರಿಕೆಗಳು

ಬರಿಯ ರಾಜಕೀಯ ಉದ್ದೇಶವಿದ್ದ ಪತ್ರಿಕೆಗಳಿಗೆ ಕನ್ನಡದಲ್ಲಿ ಅಷ್ಟೊಂದು ಅವಕಾಶ ದೊರೆತಿಲ್ಲ. ಆದರೆ ರಾಜಕೀಯ ವಿಷಯಗಳನ್ನು ರೋಮಾಂಚಕವಾಗುವಂತೆ ಪ್ರಕಟಿಸುವ ಪತ್ರಿಕೆಗಳು ಸಹಜವಾಗಿ ಜನರ ಕುತೂಹಲವನ್ನು ಕೆರಳಿಸುತ್ತವೆ. ಜನರು ಇವನ್ನು ಪುಟಗಳ ಸಂಖ್ಯೆ, ಪತ್ರಿಕೆಯಲ್ಲಿ ಬರುವ ಬರೆಹಗಳು, ವಿಭಾಗಗಳು ಮುಂತಾದವನ್ನು ನೋಡಿ ಕೊಳ್ಳುವುದಲ್ಲ. ಬದಲಾಗಿ ಇವುಗಳಲ್ಲಿರುವ ನೆತ್ತರುಕುದಿಸುವ ಗುಣಕ್ಕಾಗಿ ನೆಚ್ಚಿಕೊಳ್ಳುತ್ತಾರೆ. ಇಂಥ ಪತ್ರಿಕೆಗಳು ಕೂಡ ಅಖಿಲ ಕರ್ನಾಟಕ ವ್ಯಾಪ್ತಿಯುವೆನ್ನುವಂತಿಲ್ಲ. ಆಯಾ ಪತ್ರಿಕೆ ಪ್ರಕಟವಾಗುವ ಸ್ಥಳದ ಸುತ್ತಮುತ್ತ ಅವು ಪ್ರಭಾವಶಾಲಿಯಾಗಿರುತ್ತವೆ.

ರಾಜಕೀಯ ಮುಖಪತ್ರದಂಥ ವಾರ ಪತ್ರಿಕೆಗಳು ಕೆಲವು ಕನ್ನಡದಲ್ಲಿ ಇದ್ದು ಹೆಚ್ಚು ಕಡಿಮೆ ಆಯಾ ಪಕ್ಷಗಳ ಅನುಯಾಯಿಗಳನ್ನೇ ಅವು ಗ್ರಾಹಕರಾಗಿ ಪಡೆಯುತ್ತವೆ.

ಹೀಗೆ ಕನ್ನಡ ವಾರಪತ್ರಿಕೆಗಳನ್ನು ಸ್ಥೂಲವಾಗಿ ವರ್ಗೀಕರಿಸಬಹುದಾದರೂ ವಾರಪತ್ರಿಕೋದ್ಯಮ ಇಲ್ಲಿ ಅಷ್ಟು ವಿಸ್ತಾರವಾಗಿ ಬೆಳೆಯದೆ ಇರುವುದರಿಂದ ಅನೇಕ ವಿಷಯಗಳಲ್ಲಿ ಈ ಎಲ್ಲ ಪತ್ರಿಕೆಗಳಲ್ಲಿಯೂ ಸಾಮ್ಯವಿರುವುದನ್ನು ಕಾಣಬಹುದು.

ಅಖಿಲ ಕರ್ನಾಟಕವ್ಯಾಪ್ತಿಯ ವಾರಪತ್ರಿಕೆಗಳ ಸಂಖ್ಯೆ ನಾಲ್ಕೆಂದು ಮೊದಲೇ ಹೇಳಿದೆ. ಈ ಸಂಖ್ಯೆ ನಾಲ್ಕೇ ಆದುದರಿಂದ ಇವು ಎದುರಿಸಬೇಕಾಗಿರುವ ವೃತ್ತಿಗೆ ಸಂಬಂಧಿಸಿದ ಸಮಸ್ಯೆಗಳು ಹೆಚ್ಚಾಗಿವೆ. ಪತ್ರಿಕೆಗಳ ಸಂಖ್ಯೆಯು ಹೆಚ್ಚಾಗಿರುತ್ತಿದ್ದರೆ ವೃತ್ತಿಯು ಶಾಖೋಪಶಾಖೆಗಳಾಗಿ ಬೆಳೆಯುತ್ತಿತ್ತು. ಅದರಿಂದಾಗಿ ಕೆಲವೇ ಪತ್ರಿಕೆಗಳು ಎಲ್ಲರನ್ನು ಮೆಚ್ಚಿಸಬೇಕಾಗುವ ಭಾರ ಕಡಮೆಯಾಗುತ್ತಿತ್ತು.

## ಎಲ್ಲರನ್ನು ಮೆಚ್ಚಿಸುವ ಭಾರ

ಎಲ್ಲರನ್ನು ಮೆಚ್ಚಿಸುವ ಭಾರದ ಮಾತು ಸುಮ್ಮನೆ ಬರಲಿಲ್ಲ. ಕನ್ನಡದಲ್ಲಿ ಮಹಿಳೆಯರಿಗಾಗಿ, ಮಕ್ಕಳಿಗಾಗಿ, ವಯಸ್ಕರಿಗಾಗಿ ಎಂದು ಬೇರೆ ಬೇರೆ ಕ್ಷೇತ್ರಗಳನ್ನು ಆರಿಸಿಕೊಂಡ ವಾರಪತ್ರಿಕೆಗಳಿಲ್ಲ. ಅದರಂತೆ ಬರಿಯ ಮನೋರಂಜಕ ಬರೆಹಗಳ, ಸುದ್ದಿ ಮತ್ತು ಅಭಿಪ್ರಾಯಗಳ, ಸುದ್ದಿಯ, ಅಭಿಪ್ರಾಯದ,

ಕೇವಲ ವಿಷಯಕ್ಕೆ ಸೇರಿದ ಎನ್ನಬಹು
ದಂಥ ಪತ್ರಿಕೆಗಳೂ ಇಲ್ಲ. ಹೀಗೆಂದರೆ ಇರ
ಕೈಬೆರಳೆಣಿಕೆಯ ಪತ್ರಿಕೆಗಳು ಈ ಎಲ್ಲ
ಯಗಳನ್ನು ಬಯಸುವ ಓದುಗರ ಪ
ಪುಟ್ಟ ಬಳಗಗಳನ್ನುತೃಪ್ತಿಪಡಿಸುವ ಪ್ರಯ
ಮಾಡಲೇ ಬೇಕು. ಇಲ್ಲವಾದರೆ ವಾರ
ಕೋದ್ಯಮವಂತೂ ಬೆಳೆಯಲಾರದು. ಇರ
ವಾರಪತ್ರಿಕೆಗಳಾದರೂ ಉತ್ತರೋತ್ತರ
ವೃದ್ಧಿಯನ್ನು ಕಾಣುತ್ತ ಹೋಗಲಾರವು.

ಇಂಗ್ಲಿಷ ವಾರಪತ್ರಿಕೆಗಳನ್ನು ನೋಡಿ
ಅಲ್ಲಿ ವಾರದ ಸುದ್ದಿಪತ್ರಿಕೆಗಳಿವೆ. ಮನ
ರಂಜಕ ಮಂಜರಿಗಳಿವೆ. ಅಭಿಪ್ರಾಯ
ಪಿಂಜರಿಗಳೂ ಉಂಟು. ಸಾಮಾಜಿ
ಆರ್ಥಿಕ, ರಾಜಕೀಯ ಹಾಗೂ ವೃತ್ತಿನಿ
ಪತ್ರಿಕೆಗಳೂ ಬೇರೆಬೇರೆಯಾಗಿ ಪ್ರಕಟವಾ
ತ್ತವೆ. ಇವು ಸಾಮಾನ್ಯ ವಾರಪತ್ರಿ
ಯೊಂದರ ಸಂಪಾದಕನ ಹೆಗಲಭಾರವ
ಕೆಲಮಟ್ಟಿಗೆ ಕಡಮೆಯಾಗಿಸುತ್ತವೆ.

ಆದರೆ ಕನ್ನಡ ವಾರಪತ್ರಿಕೆಗಳು ಇ
ವನ್ನೂ ಒಳಗೊಂಡೇ ಹೊರಬೀಳಬೇಕಾ
ತ್ತದೆ. ಹಾಗೆಂದು ಕನ್ನಡ ಪತ್ರಿಕೆಗ
ಈ ವಿವಿಧ ವಿಷಯಗಳ ಮೇಲೆ ಬರಬಹು
ದಂಥ ಬರೆಹಗಳು ಆಯಾಕ್ಷೇತ್ರಕ್ಕೆ ಸಂಬ
ಸಿದ ಪತ್ರಿಕೆಗಳು ಪ್ರಕಟಿಸುವ ಮಟ್ಟದ
ಗುಣದವೂ ಇರಲಾರವು. ವಿಶ್ವಕೋಶದ
ವಿದ್ಯುಚ್ಛಕ್ತಿಯ ಮೇಲೆ ಬಂದ ಲೇಖ
ವಿಜ್ಞಾನದ ಪಠ್ಯಪುಸ್ತಕದಲ್ಲಿ ಪ್ರಕಟವಾಗ
ಪಾಠವೂ ಹೇಗೆ ಬೇರೆ ಬೇರೆಯಾಗಿರಬೇಕೆ
ಹಾಗೆ ಇದು. ಇವೆರಡನ್ನೂ ಒಬ್ಬನೇ ಬರೆ
ಲಾರ. ಅದರಂತೆಯೇ ಈ ವಿಷಯಗಳ
ವಾರಪತ್ರಿಕೆಗೆ ಬರೆಯುವಾತ ಲಕ್ಷ್ಯದಲ್ಲಿ
ಕೊಳ್ಳಬೇಕಾಗುತ್ತದೆ.

## ವೈವಿಧ್ಯದ ಅವಶ್ಯಕತೆ

ವೈವಿಧ್ಯದ ಅವಶ್ಯಕತೆಯನ್ನು ಕನ್ನ
ವಾರಪತ್ರಿಕೆಗಳು ಎಂದೋ ಒಪ್ಪಿಕೊಂಡಿ
ಮನೋರಂಜನೆ, ಸುದ್ದಿಯ ವಿವರಣೆ, ಬಾ
ಮಹಿಳಾ, ಚಲಚ್ಚಿತ್ರ, ಭವಿಷ್ಯವಿಭಾಗಗ
ಹೆಚ್ಚುಕಡಮೆ ಎಲ್ಲ ಪತ್ರಿಕೆಗಳಲ್ಲಿಯೂ ವಿ
ಸ್ಥಳಾವಕಾಶವನ್ನು ಪಡೆಯುತ್ತವೆ. ಪುಸ್
ವಿಮರ್ಶೆಯ ವಿಭಾಗವೂ ಇದೆ. ಹೊಸತ
ಧಾರಾವಾಹಿ ಕಾದಂಬರಿಯ ಮಹತ್ವವ
ಅವು ಗುರುತಿಸಿಕೊಳ್ಳಹತ್ತಿವೆ. ಸಂಪಾ
ರೊಂದಿಗೆ ಸಮಾಲೋಚನೆ ಅಥವಾ ಪ್ರಶ್
ತ್ತರ, ಓದುಗರ ಓಲೆಗಳ ವಿಭಾಗಗ
ಪ್ರಕಟವಾಗುತ್ತವೆ. ಆದರೆ ಈ ಎಲ್ಲವು
ಮಟ್ಟ ಅಷ್ಟೊಂದು ಎತ್ತರದ್ದೆಂದು ಹೇಳ
ಹಾಗಿಲ್ಲ.

ಸುದ್ದಿ ಚಿತ್ರಗಳು, ಶಾಶ್ವತ ಲೇಖನಗಳು ಲ್ಲವೆ ಸುದ್ದಿಯ ವಿವರಣೆಗಳು, ಕ್ರೀಡಾರಂಗ, ಕ್ಷಣಿಕ ಲೇಖನಗಳ ಪ್ರಮಾಣ ಇವುಗಳಲ್ಲಿ ತಿ ಕಡಮೆ. ಸಾಂಸ್ಕೃತಿಕ ಸಾಮಾಜಿಕ ಲೇಖನ ಳೂ ಸಾಲವು. ರಾಜಕೀಯ ಹಾಗೂ ಪ್ರಚಾರ ದೃಷ್ಟಿಯ ಲೇಖನಗಳು ಕಡಮೆಯಾಗಬೇಕಾ ದೆ. ಮಾನವೀಯ ಅಭಿರುಚಿ, ರೋಮಾಂ-ಚಕತೆ ಇವು ಪತ್ರಿಕೆಗಳನ್ನು ಜನಪ್ರಿಯ ಾಗಿಸುವ ಮುಖ್ಯ ಸಾಧನಗಳು. ಶುಚಿ-ರುಚಿಯ ಪತ್ರಿಕೆ ರೋಮಾಂಚಕತೆಯನ್ನು ಲ್ಲದು. ಹಾಗೆಂದು ಜನಪ್ರಿಯತೆಯನ್ನು ಳಿಸಿ ಅದು ಮೆರೆಯಬೇಕಾದರೆ ಮಾನವೀಯ ಭಿರುಚಿಯನ್ನು ಕಡೆಗಣಿಸಲಾರದು. ಆದರೆ ಎರಡರ ನಡುವೆ ಒಂದು ಗೆರೆಯೆಳೆದು ್ರತ್ಯೇಕಿಸುವುದು ತುಂಬ ಕಷ್ಟದ ಕೆಲಸ. ಧಾಯಕ ಮತ್ತು ವಿನಾಶಕ ದೃಷ್ಟಿಗಳು ಎರಡನ್ನು ಪ್ರತ್ಯೇಕಿಸಬೇಕು. ಮತ್ತೆ ದೃಷ್ಟಿಗಳ ವಿವರಣೆ ವಿವಾದಕ್ಕೆಡೆ ಕೊಡ ಹುದು.

### ೇಖಕರ ಬಳಗ ಬೇಕು

ವಿವಿಧ ವಿಷಯಗಳಿಂದ ಸುಂದರವಾಗಿ ತ್ರಿಕೆಯನ್ನು ಹೊರಗೆ ತರಬೇಕಾದರೆ ಲೇಖ ರ ಬಳಗ ಬೇಕು. ಸಂಪಾದಕೀಯ ಳಗವೇ ಎಲ್ಲವನ್ನೂ ಬರೆಯಬೇಕು, ತ್ರಿಕೆಯನ್ನು ಸಮೃದ್ಧವಾಗಿ ಹೊರತರ-ಬೇಕು ಎಂಬ ಯೋಚನೆಯಿದ್ದರೆ ಒಳ್ಳೆ-ಯದೇ. ಆದರೆ ಅದಕ್ಕೆ ತಗಲುವ ವೆಚ್ಚವೂ ್ರಮವೂ ಹೆಚ್ಚು. ಅಂಥ ಸುಯೋಜಿತ ವಾರ ತ್ರಿಕಾಸಂಘಟನೆ ಕನ್ನಡದ ಮಿತ ಅನುಕೂಲ ಗೆ ಸುಲಭ ಸಾಧ್ಯವಲ್ಲ. ಸಂಪಾದಕೀಯ ಾಖೆಯಲ್ಲಿ ವಿಚಾರವಂತ ಹಾಗೂ ಸಮ-ಶೀಲಬುದ್ಧಿಯ ತರುಣ ಬರೆಹಗಾರರ ಂಖ್ಯೆ ಹೆಚ ಬೇಕಾಗುತ್ತದೆ. ಅವಶ್ಯವಿರುವ ಪುಸ್ತಕಗಳನ್ನು ವರದಿಗಳನ್ನು ವರ್ಗೀಕರಿಸಿ ಡುವ ಸುಸಜ್ಜಿತ ವಾಚನಾಲಯವಿರಬೇಕಾ ುತ್ತದೆ. ಸದಾ ಸಂಚರಿಸುತ್ತಿರುವ ಸಾಮಾ ಕ ಔದ್ಯಮಿಕ ಲೇಖಕರು ಅವಶ್ಯವೆನಿಸು ್ತಾರೆ. ಇವೆಲ್ಲವನ್ನು ನಡೆಸಿಕೊಂಡು ಹೋಗು ದು ಸಣ್ಣಮಾತಲ್ಲ. ಬೇಕಾಗುವ ಹಣವೂ ಹೆಚ್ಚು. ಆದುದರಿಂದಲೇ ನಂಬಿಗೆಯ ಲೇಖ ರ ಬಳಗವನ್ನು ವಾರಪತ್ರಿಕೆ ಕಟ್ಟಿಕೊಳ್ಳಲೇ ಬೇಕಾಗುತ್ತದೆ.

ಇಂದಿನ ಕನ್ನಡ ವಾರಪತ್ರಿಕೆಗಳಿಗೆ ಅಂಥ ಲೇಖಕರ ಬಳಗವಿದ್ದಂತಿಲ್ಲ. ಪತ್ರಿಕೆ ಯಲ್ಲಿ ಲೇಖನಗಳನ್ನು ಅಹ್ವಾನಿಸಿ ಕೊಟ್ಟ ಪ್ರಕಟನೆಗಳೇ ಮುಂದೆ ಬರೆಹಗಾರರಾಗ ಯಸುವವರ ಲೇಖನಗಳನ್ನು ಒದಗಿಸು ವೆ. ಈ ಬಗೆಯ ಲೇಖಕರು ವೃತ್ತಿಯ ರಹಸ್ಯತತ್ತ್ವಗಳನ್ನು ಅಷ್ಟೊಂದು ಅರಿತಿರ ರುವುದರಿಂದ ಸಂಪಾದಕೀಯ ಕೆಲಸದ ಜೋಖೆಗಾರಿಕೆ ಹೆಚ್ಚಾಗುತ್ತದೆ. ಲೇಖನಗಳ ಯೋಗ್ಯತೆಗಳನ್ನು ಅವನು ಹೆಚ್ಚು ಎಚ್ಚರಿಕೆ ಯಿಂದ ಪರೀಕ್ಷಿಸಬೇಕಾಗುತ್ತದೆ.

ಹೆಸರುಗಳಿಸಿದ ಬರೆಹಗಾರರ ಬರೆಹ ಗಳಿಂದ ಈ ಸಮಸ್ಯೆ ಉದ್ಭವಿಸಲಾರದು ನಿಜ. ಆದರೆ ಪತ್ರಿಕೋದ್ಯಮದ ಮುಖ್ಯಸೂತ್ರವಾದ ಶಬ್ದಗಳ ಮಿತವ್ಯಯವನ್ನು ಅವರು ಸಾಧಿಸದ ತೊಂದರೆಯೇಳುತ್ತದೆ. ಆ ಧಾರಾಳತನಕ್ಕೆ ಸಂಪಾದಕನು ಔದಾರ್ಯತಾಳುವುದೂ ತಾಳ ದಿರುವುದೂ ಕಷ್ಟಸಾಧ್ಯವಾಗುತ್ತದೆ. ನಾಲ್ಕು ವಾಕ್ಯಗಳಲ್ಲಿ ಹೇಳುವ ಮಾತನ್ನು ಎರಡು ಪುಟಗಳ ಪೀಠಿಕೆಯೊಂದಿಗೆ ಔಪಚಾರಿಕ ಶಬ್ದ ಜಾಲದೊಂದಿಗೆ ಅವರು ಮುಂದಿಡಿಸಿರುತ್ತಾರೆ. ಓದುಗರಿಗೆ ಬದ್ಧನಾದ ಸಂಪಾದಕ ಇಂಥ ಪರಿ ಸ್ಥಿತಿಯಲ್ಲಿ ಉಗುಳಲೂ ನುಂಗಲೂ ಆರದೆ ತೊಳಲುತ್ತಾನೆ.

ಇದಕ್ಕಾಗಿಯೇ ಬೇರೆ ಬೇರೆ ವಿಷಯಗಳ ಮೇಲೆ ಸುಲಭವಾಗಿ ಸರಸವಾಗಿ ಬರೆಯ ಬಲ್ಲ ಲೇಖಕರನ್ನು ಸಂಪಾದಕ ಗೊತ್ತುಹಚ್ಚ ಬೇಕು. ಅವರ ಸಂಪರ್ಕವಿರಿಸಿಕೊಂಡು ಸಹ ಕಾರ ಪಡೆಯಬೇಕು. ನಿಜವಾದ ಲೇಖಕ ಯಾರು? ಹೆಸರಿನ ಲೇಖಕ ಯಾರು? ಅವರ ಲಾಭವನ್ನು ಹೇಗೆ ಪಡೆದುಕೊಳ್ಳಬೇಕು ಎಂದು ತಿಳಿದು ಲೇಖಕರ ಬಳಗ ಕಟ್ಟಿದು ದಾದರೆ ನಮ್ಮ ವಾರಪತ್ರಿಕೆಗಳು ಬೇಡುವ ಬರಹಗಳನ್ನು ಪೂರೈಸುವುದು ಕಷ್ಟವಾಗ ಲಾರದು. ಲೇಖಕರನ್ನು ಈ ಬಗೆಯಲ್ಲಿ ವರ್ಗೀಕರಿಸುವುದರಿಂದ ಪತ್ರಿಕೆಗಳಲ್ಲಿ ಬರೆಯಬಯಸುವವರಲ್ಲಿಯೂ ಹೊಣೆಗಾರಿ ಕೆಯ ಭಾವನೆಯನ್ನು ಮೂಡಿಸಲು ಸುಲಭ ವಾಗುತ್ತದೆ.

### ಓದುಗರಿಗೆ ಅವಕಾಶ

ಈ ಬಗೆಯಲ್ಲಿ ಲೇಖಕರ ಬಳಗವನ್ನು ಕಟ್ಟಿಕೊಂಡರೆ ಓದುಗರ ಓಲೆಯ ಕ್ಷೇತ್ರ ವಿಶಾಲವಾಗುತ್ತದೆ. ಪತ್ರಿಕೆಯ ಬಗೆಗಾಗಲಿ ಸಾಮಾಜಿಕ ರಾಜಕೀಯ, ಸಾಂಸ್ಕೃತಿಕ ಮುಂತಾದ ಸರ್ವವಿಷಯಗಳ ಮೇಲಾಗಲಿ ಪತ್ರಿಕೆಯ ಓದುಗರು ಹೇಳಬೇಕಾದುದಿದ್ದರೆ ಅವುಗಳಿಗೆ ಈ ವಿಭಾಗದಲ್ಲಿಯೆ ಅವಕಾಶ ಮಾಡಿಕೊಟ್ಟರೆ ಓದುಗರ ಅಭಿಪ್ರಾಯ ಕ್ಕೊಂದು ಅವಕಾಶ ದೊರೆತಂತಾಗುವುವು.

ಲೇಖಕನ ಪರಿಚಯ ಸಂಪಾದಕನಿಗಿಲ್ಲ ದಿದ್ದರೆ ವೃತ್ತಿದೃಷ್ಟಿಯಿಂದ ಹಲವಾರು ಹಾನಿ ಗಳಾಗುವ ಸಂಭವವುಂಟು. ಪ್ರಾಮಾಣಿಕ ಅಪ್ರಾಮಾಣಿಕ ಬರೆಹಗಳನ್ನು ವಿಂಗಡಿಸು ವುದೂ ಅವನಿಗೆ ಕಷ್ಟವಾದೀತು.

ಸುದ್ದಿ ಚಿತ್ರಗಳು, ವ್ಯಂಗ್ಯ ಚಿತ್ರಗಳು ಸಾಕಷ್ಟು ಪ್ರಮಾಣದಲ್ಲಿ ಅಲ್ಲವಾದರೂ ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾಗುತ್ತವೆ. ಇವು ಸಾಲವು. ಸುದ್ದಿಚಿತ್ರದ ಬಗೆಗೆ ಹೇಳುವು ದಾದರೆ ಪತ್ರಿಕೆಯ ಪ್ರಸಾರಕ್ಷೇತ್ರದೊಳಗಿನ ಚಿತ್ರಗಳ ಪೂರೈಕೆ ತುಂಬ ಮಿತವಾದುದು. ಇವುಗಳ ಪೂರೈಕೆಗೆ ತಕ್ಕ ವ್ಯವಸ್ಥೆಯಾದರೆ ಪ್ರಸಾರಸಂಖ್ಯೆ ಹೆಚ್ಚಲು ನೆರವಾಗುವುದು. ಸಣ್ಣ ಪುಟ್ಟ ಪಟ್ಟಣಗಳಲ್ಲಿಯ ಫೋಟೋ ಗ್ರಾಫರರ ಸಂಪರ್ಕ ಬೆಳೆಸಿಕೊಂಡರೆ ಇದು ಕಷ್ಟವಾಗಲಾರದು.

ಮಕ್ಕಳ, ದಂಪತಿಗಳ ಚಿತ್ರಗಳ ಪ್ರಕಟಣೆಗೆ ಕನ್ನಡ ಪತ್ರಿಕೆಗಳಲ್ಲಿ ಅನಕಾಶ ದೊರೆತಿಲ್ಲ. ಅವಕಾಶವಾದಾಗ ಮಾತ್ರ ಅವೂ ಪತ್ರಿಕೆ ಯಲ್ಲಿ ಜನರಿಗಿರುವ ಆಸಕ್ತಿಯನ್ನು ಹೆಚಿ ಸಲು ಕಾರಣವಾದಾವು.

### ವ್ಯಕ್ತಿತ್ವ ಮತ್ತು ಸಂಪ್ರದಾಯ

ವ್ಯಕ್ತಿತ್ವ ಮತ್ತು ಸಂಪ್ರದಾಯ ಇವೆರಡು ಕನ್ನಡ ವಾರಪತ್ರಿಕೆಗಳು ಬಿಡಿಸಬೇಕಾದ

ಮುಂದಿನ ಸಮಸ್ಯೆಗಳು. ವ್ಯಕ್ತಿತ್ವವೆಂಬುದು ಪತ್ರಿಕೆಯ ಸಂಪಾದಕೀಯ ಬಳಗದಿಂದಲೂ ಲೇಖಕರ ಬಳಗದಿಂದಲೂ ರೂಪಿತವಾಗುತ್ತದೆ. ಅನಾಮಿಕ ಬರೆಹಗಳು ಒಂದೆಡೆ ಅಧಿಕೃತ ಪ್ರಕಟನೆಯ ಸ್ವರೂಪವನ್ನು ಪಡೆದರೆ ಇನ್ನೊಂದೆಡೆ ಅದರಲ್ಲಿರಬೇಕಾದ ಅಧಿಕಾರೀ ಘನತೆಯನ್ನು ಕಳೆದುಕೊಳ್ಳುತ್ತವೆ. ಆದುದರಿಂದ ಇವುಗಳಿಂದ ಓದುಗರು ಹೆಚ್ಚಾಗಿ ಆಕೃಷ್ಟರಾಗುವುದಿಲ್ಲ. ಚಲಚ್ಚಿತ್ರದ ಯಶಸ್ವಿತೆಗೆ ಅದರಲ್ಲಿ ಭಾಗವಹಿಸಿದ ತಾರೆಯರ ಹೆಸರುಗಳು ಕಾರಣವಾಗುವಂತೆ ಪತ್ರಿಕೆಯ ಯಶಸ್ವಿತೆಗೆ ಅದರ ಲೇಖಕರ ಹೆಸರೂ ನೆರವಾಗುವುದೆಂಬುದರಲ್ಲಿ ಸಂಶಯವಿಲ್ಲ.

ಲೇಖಕನ ಹೆಸರಿಲ್ಲದ ಬರೆಹಗಳ ಗುಣದೋಷಗಳ ಪ್ರಶ್ನೆ ಬಹಳ ಗಹನವಾದುದು. ಲಂಡನ ಟೈಮ್ಸಿನಂಥ ಹಿರಿಯ ಪತ್ರಿಕೆ ಲೇಖಕರ ಹೆಸರಿಗೆ ಪ್ರಾಧಾನ್ಯವೀಯದೆಹೋದರೆ [ಅಪವಾದವೆಂಬಂತೆ ಅದೂ ಮಹಾ ಲೇಖಕರ ಹೆಸರನ್ನುಪಯೋಗಿಸುವದುಂಟು] ಅಷ್ಟೇ ಪ್ರಭಾವಯುತವಾದ ನ್ಯೂಸ್ಟೇಟ್ಸಮನ್ ಪತ್ರಿಕೆ ಲೇಖಕನ ಹೆಸರಿಲ್ಲದೆ ಲೇಖನಗಳನ್ನು ಪ್ರಕಟಿಸುವುದಿಲ್ಲ. ಎಕಾನಮಿಸ್ಟ ಪತ್ರಿಕೆಯೆಂದೂ ಲೇಖಕರ ಹೆಸರನ್ನು ನೆಚ್ಚಿದುದಿಲ್ಲ. ಇವೆಲ್ಲ ಅಭಿಜಾತಪತ್ರಿಕೆಗಳ ಮಾತಾಯಿತು. ಜನಪ್ರಿಯ ಪತ್ರಿಕೆ ಸುದ್ದಿಗಾರನ ಹೆಸರಿಗೂ ಪ್ರಚಾರಕೊಟ್ಟು ಓದುಗರ ಎದುರು ಪತ್ರಿಕಾ ನಕ್ಷತ್ರಗಳ ಮಾಲೆಯನ್ನು ತೂಗುತ್ತದೆ.

ಇನ್ನು ವಾರದ ಸಿಂಹಾವಲೋಕನ, ಸುದ್ದಿಯ ವಿವರಣೆ ಕೊಡುವ ಲೇಖನಗಳು ಮನೋರಂಜಕ ಲೇಖನಗಳು ಇವುಗಳಲ್ಲಿ ಸಾಮರಸ್ಯವುಂಟಾಗಬೇಕು. ಮನೋರಂಜಕ ಲೇಖನಗಳು ಶೈಕ್ಷಣಿಕ ಲೇಖನಗಳನ್ನು, ಲೇಖಕರ ಬಳಗ ಪೂರೈಯಿಸಬಹುದಾದರೆ ಸಿಂಹಾವಲೋಕನ ಹಾಗೂ ಪ್ರಚಲಿತ ವಿಷಯದ ಮೇಲಿನ ಲೇಖನಗಳು ಸಂಪಾದಕೀಯ ಶಾಖೆಯಿಂದಲೇ ಸಿದ್ಧವಾಗಬೇಕು. ಇವುಗಳನ್ನು ಬರೆಯುವ ಸಲುವಾಗಿ ಸಂಪಾದಕೀಯ ಶಾಖೆಗೆ ಇರುವ ಅನುಕೂಲತೆ ಸಾಲದು. ದಿನಪತ್ರಿಕೆಗಳು, ಇಂಗ್ಲಿಷ ಪತ್ರಿಕೆಗಳು, ಕೈತಪ್ಪಿಬಂದ ಸರಕಾರೀ ಪ್ರಕಟಣೆಗಳು, ಸಂಬಂಧಿಸಿದ ವ್ಯಕ್ತಿಗಳು ಕಳಿಸಿದ ಪ್ರಚಾರಪತ್ರಿಕೆಗಳ ನೆರವಿನಿಂದ ಸಾಮಾನ್ಯವಾಗಿ ಇಂದಿನ ಕನ್ನಡ ವಾರಪತ್ರಿಕೆಗಳು ವಾರದ ಸಿಂಹಾವಲೋಕನವನ್ನೂ ಪ್ರಚಲಿತ ಲೇಖನಗಳನ್ನೂ ಒದಗಿಸುತ್ತವೆ. ಇದು ಅವುಗಳ ಮಟ್ಟ ಏರದಂತೆ ತಡೆಯಾಗಿದೆ. ಸಂಪಾದಕೀಯ ಶಾಖೆಯ ಸಂಶೋಧನೆ ವಿಭಾಗವೊಂದು ಸುತ್ತಲೂ ಕಣ್ಣಿಟ್ಟಿರುವಂತಾದರೆ ಇವುಗಳಲ್ಲಿಯೂ ಸುಧಾರಣೆಯಾಗಬಹುದು.

### ಹೊಸ ಪ್ರಯೋಗಗಳಿಗೆ ಅವಕಾಶ

ಕನ್ನಡ ವಾರಪತ್ರಿಕೆಗಳು ಅನುಭವಿಸು
ರುವ ಸಂಕಷ್ಟಗಳಲ್ಲಿ ಇವು ಕೆಲವು. ಇವುಗ
ನಿವಾರಣೆಯಾಗುವುದು ಸುಲಭವೇ. ಆದ
ಪತ್ರಿಕೆಗಳ ಆರ್ಥಿಕ ದುಃಸ್ಥಿತಿ ಅವನ್ನು ಹಾ
ಕಾಲುಚಾಚಲಾರದಂತೆ ಮಾಡಿದೆ. ಹೊ
ಹೊಸ ಪ್ರಯೋಗಗಳನ್ನು ಮಾಡಿ ಪತ್ರಿ
ಗಳನ್ನು ಅಭಿವೃದ್ಧಿಗೆ ತರುವ ಪ್ರಯತ್ನವೆಂದ
ಅಪಾಯಸಂಭವವಿರುವ ಮುಳ್ಳು ಹಾದಿ
ಈ ಹಾದಿಯಲ್ಲಿ ನಡೆಯಲು ಎಚ್ಚರಿಕೆಯ
ಬೇಕು, ಎದೆಗಾರಿಕೆಯೂ ಬೇಕು. ಅದ
ರಿಂದಲೇ ಬರಿಯ ಸಂಪ್ರದಾಯವನ
ನೆಚ್ಚುವ ಹವ್ಯಾಸ ಬೆಳೆಯುತ್ತದೆ.

ಪತ್ರಿಕೆಯ ಸಂಪಾದನೆಯ ಕಾರ್ಯದ
ಸುಧಾರಣೆಯಾದರೆ ಅದರ ಆರ್ಥಿಕ ಸ್ಥಿ
ಸುಧಾರಿಸುವುದು ಖಂಡಿತ. ಪ್ರಸಾರ ಹೆಚ್ಚು
ವುದೂ ಜಾಹೀರಾತಿನ ಆದಾಯವೂ ಅವ
ಸಮತೋಲ ಬರವಣಿಗೆಯನ್ನೇ ಅವಲಂ
ಸಿವೆ. ಅದಕ್ಕೆಂದೇ ಕನ್ನಡ ವಾರಪತ್ರಿಕೆಗಳ
ಇಂದು ನವನವೀನ ಪ್ರಯೋಗ ದೃಷ್ಟಿಯನ್ನು
ಕಳೆದುಕೊಳ್ಳಬಾರದು. ಓದುಗರಲ್ಲಿ ಹೆಚ್ಚು
ಹೆಚ್ಚು ಆಸಕ್ತಿಯುಂಟಾಗುವಂತೆ ಮಾಡಿದ
ಆ ಓದುಗರ ಬಳಗ ಇಡಿಯ ಉದ್ಯಮಕ್ಕೆ
ನೆರವಾಗುವುದು. ಅದು ಮತ್ತಷ್ಟು ವಿಶಾ
ವಾಗುತ್ತ ಹೋಗುವುದು.

# ಕರ್ನಾಟಕದ ಸಾರಿಗೆ-ಸಂಪರ್ಕ

ದೇಶದ ಸಂಪದಭಿವೃದ್ಧಿಯಾಗಬೇಕಾದರೆ ಸಂಪನ್ಮೂಲಗಳ ಉಪಯೋಗ ವಾಗಬೇಕು. ಅದಕ್ಕೆ ಯೋಗ್ಯಸಾರಿಗೆ ಸಂಪರ್ಕ ಅವಶ್ಯ. ಆದರೆ ಕರ್ನಾಟಕದಲ್ಲಿ ಇರುವ ಸಂಪನ್ಮೂಲಗಳ ಸದುಪಯೋಗಕ್ಕೆ ಸಾರಿಗೆ ಸಂಪರ್ಕದ ಅಭಾವದಿಂದಾಗಿ ಯೋಗ್ಯ ಅವಕಾಶವಿರುವದಿಲ್ಲ. ಕರ್ನಾಟಕದ ಸಾರಿಗೆ-ಸಂಪರ್ಕಗಳ ಅವಶ್ಯಕತೆ ಗಳೇನು? ಯಾವ ಪ್ರಯೋಜನವನ್ನು ಅದರಿಂದ ಪಡೆಯಬಹುದೆಂಬುದನ್ನು ಈ ಲೇಖನದಲ್ಲಿ ವಿವರಿಸಲಾಗಿದೆ. . . . . . . . . . .

ಲೇಖಕರು : ಶ್ರೀ. **ಮರಿಯಪ್ಪ ಪರಪ್ಪ ಹೊನಗುಡಿ**, ಗದಗ

ಯಾವುದೇ ನಾಡಿನ, ದೇಶದ, ರಾಷ್ಟ್ರದ ಹಣಕಾಸಿನ ಏಳ್ಗೆಯು ಆಗಬೇಕಾದರೆ ಒಕ್ಕಲತನ, ಔದ್ಯೋಗಿಕ ಏಳ್ಗೆಯಾಗಬೇಕೆಂದೂ ಮತ್ತು ಒಕ್ಕಲತನ, ಔದ್ಯೋಗಿಕಾಭಿವೃದ್ಧಿ ಯಾಗಬೇಕಾದರೆ ನಾಡಿನ ಸಾರಿಗೆ ಸಂಪರ್ಕ ಗಳ ಬೆಳವಣಿಗೆಗಳು ಅತ್ಯಾವಶ್ಯಕವೆಂಬುದ ರಲ್ಲಿ ಯಾರದೂ ಭಿನ್ನಾಭಿಪ್ರಾಯವಿರಲು ಕಾರಣವೇ ಇಲ್ಲ. ಹೀಗೆ ಸಾರಿಗೆ ಸಂಪರ್ಕಗಳು ಬೆಳೆದಂಥ ಮತ್ತು ಹೊಂದಿದಂಥ ಮುಂಬೈ, ಮದ್ರಾಸ, ಕಲಕತ್ತಾ, ನಾಗಪುರ, ಹೈದ್ರಾಬಾದ, ಅಹಮ್ಮದಾಬಾದ, ಬೆಂಗಳೂರು ಮುಂತಾದ ಪಟ್ಟಣಗಳು ಔದ್ಯೋಗಿಕ ವಾಗಿಯೂ ವ್ಯವಹಾರಿಕವಾಗಿಯೂ ಆರ್ಥಿಕ ರೀತಿಯಿಂದಲೂ ಬೆಳವಣಿಗೆ ಹೊಂದಿವೆ. ಅದು ದರಿಂದ ಕೇಂದ್ರ ಸರಕಾರದಿಂದ ನಿಯಂತ್ರಿಸಲ್ಪಟ್ಟ ರೇಲ್ವೆ-ರಾಷ್ಟ್ರೀಯ ಹೆದ್ದಾರಿಗಳೂ-ಅಂಚೆ-ತಂತಿ-ಟೆಲಿಫೋನ-ಜಲಮಾರ್ಗ-ವಾಯು ಮಾರ್ಗಗಳೂ ಪ್ರಾಂತೀಯ ಸರಕಾರ ಗಳಿಂದ ನಿಯಂತ್ರಿಸಲ್ಪಟ್ಟ ಪ್ರಾಂತೀಯ ಹೆದ್ದಾರಿಗಳೂ ಮತ್ತು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಂದ ನಿಯಂತ್ರಿಸಲ್ಪಟ್ಟ ದಾರಿಗಳೂ ಬೆಳೆಸಲ್ಪಟ್ಟು ಬಲಪಡಿಸಲ್ಪಟ್ಟಲ್ಲಿ ಆಯಾ ಸಂಬಂಧಿಸಿದ ಪ್ರದೇಶಗಳ ಸಂಪದಭಿವೃದ್ಧಿ ಯಾಗಲು ಅವಕಾಶ ಮಾಡಿಕೊಟ್ಟಂತಾಗು ತ್ತದೆ. ತತ್ಪರಿಣಾಮವಾಗಿ ಆಯಾ ನಾಡು ಹಾಗೂ ರಾಷ್ಟ್ರ ಆರ್ಥಿಕೋನ್ನತಿಯನ್ನು ಹೊಂದುವದರಲ್ಲಿ ಸಂದೇಹವೇ ಇಲ್ಲ.

ಈಗ ನಮ್ಮ ಕರ್ನಾಟಕದಲ್ಲಿ ಸಾಕಷ್ಟು ಸಂಪನ್ಮೂಲಗಳಿದ್ದರೂ ಅವುಗಳ ಉಪಯೋಗ ಸಾಕಷ್ಟು ಆಗುತ್ತಿರುವದಿಲ್ಲ. ಇಲ್ಲಿಯ ಸಾರಿಗೆ ಸಂಪರ್ಕದ ಯೋಗ್ಯ ವ್ಯವಸ್ಥೆಯಿಲ್ಲದಿರುವದೇ ಅದಕ್ಕೆ ಕಾರಣವಾಗಿದೆ.

ಈಗ ನಮ್ಮದೇ ಆದ ಕೇಂದ್ರ ಸರಕಾರವು ಎರಡು ಪಂಚವಾರ್ಷಿಕ ಯೋಜನೆಗಳಲ್ಲಿ ದಕ್ಷಿಣ ಭಾರತ ಅದರಲ್ಲಿಯೂ ಕರ್ನಾಟಕ ವನ್ನು ಈ ವಿಷಯದಲ್ಲಿ ಮರೆತಿದೆ. ಕರ್ನಾಟಕದ ವಿಷಯದಲ್ಲಿಯ ಕೇಂದ್ರ ಸರಕಾರದ ಈ ಬಗೆಯ ಧೋರಣೆಯಿಂದ ಅದು ತುಂಬ ಅನ್ಯಾಯಕ್ಕೊಳಗಾಗಿರುವದು.

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಕರ್ನಾಟಕಕ್ಕೆ ಒಂದಂಗುಲ ರೇಲ್ವೆಯನ್ನು ಕೂಡ ಬೆಳೆಸಿರುವದಿಲ್ಲ. ಭಾರತದಲ್ಲಿ ಇತರ ಪ್ರದೇಶಗಳ ರೈಲುದಾರಿ ಪ್ರಮಾಣ ವನ್ನು ನಮ್ಮ ಕರ್ನಾಟಕದ ಅಂಕಿಗಳೊಂದಿಗೆ ಹೋಲಿಸಿ ಕೆಳಗಿನ ಸಂಖ್ಯೆಗಳನ್ನು ನೋಡಿದಲ್ಲಿ ನಾವೆಷ್ಟು ನಿಕೃಷ್ಟಾವಸ್ಥೆಯಲ್ಲಿ ಇದ್ದೇವೆಂಬುದು ತಿಳಿದುಬರುತ್ತದೆ.

| | | | | |
|---|---|---|---|---|
| (೧) ಕರ್ನಾಟಕ | ಸರಾಸರಿ | ೧೦೦ ಚದುರ ಮೈಲಿಗೆ | ೧೩ | ಮೈಲು ಮಾತ್ರ |
| (೨) ಭಾರತ | .. | ,, | ೩೭ | .. |
| (೩) ಉತ್ತರಪ್ರದೇಶ | .. | ,, | ೩೩ | .. |
| (೪) ಬಿಹಾರ | .. | ,, | ೩೮ | .. |
| (೫) ಹಳೆ ಮೈಸೂರ ರಾಜ್ಯ | .. | ,, | ೨೪ | .. |
| (೬) ಮುಂಬೈ ಕರ್ನಾಟಕ | | | | |
| (i) ಧಾರವಾಡ | .. | ,, | ೪ | .. |
| (ii) ಬೆಳಗಾವಿ | .. | ,, | ೨.೩ | .. |
| (iii) ವಿಜಾಪೂರ | .. | ,, | ೨ | .. |
| (iv) ಕಾರವಾರ | | — ಏನೂ ಇಲ್ಲ — | | |

ಕರ್ನಾಟಕದಲ್ಲಿ ಭೂ-ಜಲ-ಅರಣ್ಯ-ಖನಿಜ ಸಂಪತ್ತುಗಳು ಅಗಣಿತವಿದ್ದರೂ ಅತಿ-ಹೀನಾವಸ್ಥೆಯಲ್ಲಿಟ್ಟು ಬೀಳ್ಗಳೆದಿದ್ದಾರೆ. ಇನ್ನು ವಿದ್ವಾಂಸರೂ, ಆಯಾ ವಿಷಯಗಳಲ್ಲಿ ತಜ್ಞರೂ ಅನುಭವಿಕರೂ ವೈಯಕ್ತಿಕವಾಗಲೀ ಸಂಘಟಿತ ರೀತಿಯಿಂದಾಗಲೀ ಸಂಬಂಧಿಸಿದ ಸರಕಾರಗಳ ಕೂಡ ಸೂಚಿಸಿಯಾಗಲೀ ವಿಚಾರ ವಿನಿಮಯ ಮಾಡಿಯಾಗಲೀ ಇಲ್ಲವೇ ಅಹಿಂಸಾಮಯ ಚಳವಳಿಯನ್ನು ಹೂಡಿಯಾಗಲೀ ಈ ಅನ್ಯಾಯ ನಿವಾರಿಸಿಕೊಳ್ಳದಿದ್ದಲ್ಲಿ ಕರ್ನಾಟಕದ ಸಂಪದಭಿವೃದ್ಧಿಯಾಗದೇ ಅದು ಹಿಂದುಳಿಯುವದರಲ್ಲಿ ಸಂಶಯವಿಲ್ಲ.

## ಈಗಿರುವ ರೇಲ್ವೆ ಮಾರ್ಗಗಳು

ನಮ್ಮ ಕರ್ನಾಟಕಕ್ಕೆ ಯಾವನೋ ಓಬಿರಾಯನ ಕಾಲಕ್ಕೆ ದೇಶದ ಆರ್ಥಿಕಾಭಿವೃದ್ಧಿಯ ಕಡೆಗೆ ಅಷ್ಟೊಂದು ಲಕ್ಷ್ಯಕೊಡದೆ ಆಗಿನ ಕಾಲದ ಸರಕಾರವು ಕೇವಲ ಆಡಳಿತೆಯ ಹಾಗು ಯುದ್ಧನೀತಿಗೆ ಅನುಕೂಲ ವಾಗುವ ತರದಲ್ಲಿ (ಅದೂ ತಮ್ಮ ರಕ್ಷಣೆಗಾಗಿ) ರಸ್ತೆಗಳನ್ನೂ ರೇಲ್ವೆ ಮಾರ್ಗಗಳನ್ನೂ ರಚಿಸಿದೆ. ಇನ್ನು ನಮ್ಮ ಕರ್ನಾಟಕದ ರೇಲ್ವೆ ಮಾರ್ಗಗಳು ಸುತ್ತುಕಡೆಯಿಂದ ಬ್ರಾಡಗೇಜಿನಿಂದ ಸುತ್ತಲ್ಪಟ್ಟು ನೇರವಾದ ಸಾರಿಗೆ ಸಂಪರ್ಕಕ್ಕೆ ತಡೆಯುಂಟಾಗಿರುವದು.

೧. ಪುಣೆ-ಬೆಂಗಳೂರ .. ಘೊರಪುರಿಯಲ್ಲಿ
೨. ಗದಗ-ಹುಟಗಿ .. ಹುಟಗಿಯಲ್ಲಿ
೩. ಗುಂತಕಲ್ಲ-ಬೆಂಗಳೂರ· ಗುಂತಕಲ್ಲಲ್ಲಿ
೪. ಬೆಂಗಳೂರ-ಮದ್ರಾಸ. ಬೆಂಗಳೂರಿನಲ್ಲಿ

ಹೀಗೆ ಬ್ರಾಡಗೇಜಿನಿಂದ ಮುಕ್ತಾಯಗೊಳಿಸಲ್ಪಟ್ಟವೆ. ಇದರಿಂದ ನೇರವಾದ ಸಾರಿಗೆ-ಸಂಪರ್ಕಗಳು ಕಟ್ಟಾಗಿವೆ. ಮತ್ತು ಉತ್ತರ ಕರ್ನಾಟಕದ ವಿಮಾನನಿಲ್ದಾಣವು ಇನ್ನೂ ಅಣಕವಾಗಹತ್ತಿದೆ. ಈಗ ಒಂದುಗೂಡಿದ ಕರ್ನಾಟಕಕ್ಕೆ ಮಧ್ಯವರ್ತಿಯಾಗಿ ಪರಿಣಮಿಸುವ ಕಾರವಾರ ಬಂದರ ರಚನೆಯು ನಿದ್ರಾವಸ್ಥೆಯಲ್ಲಿಯೋ ಮೃತಾವಸ್ಥೆಯಲ್ಲಿಯೋ ಇದೆ. ನಮಗೆ ಇನ್ನೂ ಎಷ್ಟೋ ರಾಷ್ಟ್ರೀಯ ಹೆದ್ದಾರಿಗಳೂ— ವಿಮಾನ ನಿಲ್ದಾಣಗಳೂ— ಬಂದರಗಳೂ— ಅಂಚೆ-ತಂತಿ-ಟೆಲಿಫೋನ ಕಟ್ಟೆಗಳೂ— ಪ್ರಾಂತೀಯ ಹೆದ್ದಾರಿಗಳೂ— ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ದಾರಿಗಳೂ ಸುವ್ಯವಸ್ಥಿತವಾಗಿ ಏರ್ಪಡಬೇಕಾಗಿದೆ. ಮಾನವನು ಜೀವಿಸಲಿಕ್ಕೆ ರಕ್ತನಾಡಿಗಳು ಹೇಗೋ ಹಾಗೆ ಸಂಚಾರ ಸಂಪರ್ಕಗಳಿಗೆ ರಾಷ್ಟ್ರೀಯ ಪ್ರಾಂತೀಯ ಹೆದ್ದಾರಿಗಳೂ— ರೈಲು ಮಾರ್ಗ

ಗಳೂ— ಜಲಮಾರ್ಗಗಳೂ— ವಾಯುಮಾರ್ಗಗಳೂ—ಅಂಚೆ ತಂತಿ ಟೆಲಿಫೋನ ಕಟ್ಟಿಗಳೂ ನಾಡಿನ ಜೀವನಾಡಿಗಳಂತೆ ಪರಿಣಮಿಸುತ್ತಿದ್ದುದರಿಂದ ಅವುಗಳ ಅವಶ್ಯಕತೆಯು ನಮಗೆ ಆಧುನಿಕ ರೀತಿಯಲ್ಲಿ ಬೇಕಾಗಿವೆ. ಅವು ಬಹು ಬೇಗನೆ ರಚಿಸಲ್ಪಡಬೇಕು.

**ಕರ್ನಾಟಕದ ಅವಶ್ಯಕತೆಗಳು.**

ನಮ್ಮ ರಾಜ್ಯಕ್ಕೆ ಈಗ ಅವಶ್ಯವಾಗಿ ಬೇಕಾದ ರೇಲ್ವೆ ಮಾರ್ಗಗಳು—

೧. ಹುಬ್ಬಳ್ಳಿ-ಕಾರವಾರ :— ಈ ೧೦೦-೧೧೦ ಮೈಲು (ಬ್ರಾಡಗೇಜ) ರೇಲ್ವೆ ರಚಿಸುವದರಿಂದ ನಮ್ಮಲ್ಲಿ ಸಿಗುವ ಅತಿ ಅಮೌಲ್ಯವಾದ ಖನಿಜ-ಅರಣ್ಯ ಸಂಪತ್ತುಗಳನ್ನು ಮತ್ತು ಇಲ್ಲಿ ಹುಟ್ಟುವ ಹತ್ತಿ-ಅರಳೆ-ಶೇಂಗಾ ಇತರ ಎಣ್ಣೆಯ ಕಾಳು ಮುಂತಾದ ಒಕ್ಕಲತನದ ಉತ್ಪಾದನೆಗಳನ್ನು ಕಾರವಾರ ಬಂದರ ಮುಖಾಂತರ ನಿರ್ಯಾತಗೊಳಿಸಿ ವಿದೇಶ ವಿನಿಮಯ ದೊರಕಿಸಲು ಬಹಳ ಉಪಯುಕ್ತವಾಗುತ್ತದೆ.

೨. ಬೆಂಗಳೂರ-ಮಂಗಳೂರ:—ಬೆಂಗಳೂರ-ಹಾಸನ-ಮಂಗಳೂರ ಈ ಮಾರ್ಗದಿಂದ ಮಂಗಳೂರ ಬಂದರಕ್ಕೆ ರಾಜಧಾನಿಯಿಂದ ನೇರವಾದ ಸಂಪರ್ಕ ಬರುತ್ತದಲ್ಲದೆ ಪ್ರತಿಯಾಗಿ ರಾಜಧಾನಿಗೆ ನೇರವಾದ ಸಂಬಂಧ ಬರುತ್ತದೆ.

೩. ಬೆಂಗಳೂರ - ಸೇಲಮ :— ಈ ಮಾರ್ಗ ರಚನೆಯಿಂದ ದಕ್ಷಿಣ ಭಾರತಕ್ಕೆ ಸುತ್ತು ವರಿದು ಹೋಗುವದಕ್ಕಿಂತ ನೇರವಾದ ಸಂಪರ್ಕ ಉಂಟಾಗುತ್ತದೆ. ( ಇದು ಒಳನಾಡಿನ ಜೋಡಣೆ).

೪. ಗದಗ-ವಾಡಿ :— ಗದಗ- ನರೇಗಲ್ಲ-ಗಜೇಂದ್ರಗಡ-ಕುಷ್ಟಗಿ-ಮುದಗಲ್ಲ-ವಾಡಿ ಸುಮಾರು ೧೭೫ ಮೈಲು ರೈಲುಮಾರ್ಗ ರಚಿಸಲ್ಪಟ್ಟಲ್ಲಿ ಕಾರವಾರ ಬಂದರದಿಂದ ನೈಜಾಮ ಕರ್ನಾಟಕಕ್ಕೆ ಮತ್ತು ಹೈದರಾಬಾದ-ಸಿಕಂದರಾಬಾದಗಳಿಗೆ ಕಾರವಾರ ಬಂದರಕ್ಕೆ ನೇರವಾದ ಸಂಪರ್ಕ ಉಂಟಾಗುವದಲ್ಲದೆ ಒಳನಾಡಿನ ಮಹತ್ವದ ಜೋಡಣೆಯಾಗುತ್ತದೆ, ( ಇದು ಈಗ ೩೫-೪೦ ವರ್ಷಗಳ ಹಿಂದೆ ಸೂಚಿಸಲ್ಪಟ್ಟು ಸರ್ವೆಯಾಗಿ ಅದಾವ ಕಾರಣದಿಂದಲೋ ಸ್ಥಗಿತವಾಗಿದೆ. )

೫. ಗದಗ-ಧೋಂಡ :— ಗದಗ-ನರಗುಂದ-ಸವದತ್ತಿ - ರಾಮದುರ್ಗ - ಮುಧೋಳ - ಜಮಖಂಡಿ-ಅಥಣಿ-ಪಂಢರಪುರ-ಅಕ್ಲುಜ - ಮಾಳಶಿರಸ- ಸಾತಪುಡಾ - ಬಾರಾಮತಿಗಳ ಮೇಲಿಂದ ಧೋಂಡಕ್ಕೆ ( ನನ್ನ ಅನುಭವ ಅಹಮ್ಮದನಗರದಿಂದ ಎಲ್ಲಮ್ಮನ ಭಕ್ತರು ಎರಡು ಬೋಗಿಗಳನ್ನು ರಿಝರ್ವ ಮಾಡಿಸಿಕೊಂಡು ಬಂದರು ) ಇದು ವ್ಯವಹಾರಿ ಪಟ್ಟಣಗಳಿಗೂ ಧಾರ್ಮಿಕ ಕ್ಷೇತ್ರಗಳಿಗೂ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ( ಒಳನಾಡಿನ ಅತ್ಯಧಿಕ ಮಹತ್ವದ ಜೋಡಣೆ. )

೬. ಬೆಂಗಳೂರು:ತುಮಕೂರ- ಚಿತ್ರದುರ್ಗ-ಹರಪನಹಳ್ಳಿ-ಹೂವಿನಹಡಗಲಿ-ಮುಂಡರಗಿ-ಗದಗ-ಸೊಲ್ಲಾಪುರಕ್ಕೆ ಮಾರ್ಗ. ಇದು ರಾಜಧಾನಿಗೆ ನೇರ ಸಂಪರ್ಕ ( ಬ್ರಾಡಗೇಜ ಅನಿವಾರ್ಯ ).

೭. ಹೊಸಪೇಟೆ : ಶಿವಮೊಗ್ಗ- ಹೊಸಪೇಟೆ-ಕೊಟ್ಟೂರ - ದಾವಣಗೇರಿ - ಶಿವಮೊಗ್ಗ ( ಇದು ಒಳನಾಡಿನ ಜೋಡಣೆ).

೮. ಗುಲಬುರ್ಗಾ-ಬೀದರ: ಇದು ಗುಲಬುರ್ಗಾ - ಹುಮನಾಬಾದ - ಬೀದರಕ್ಕೆ (ಒಳನಾಡಿನ ಜೋಡಣೆ ).

೯. ಹುಟಗಿ ( ಸೊಲ್ಲಾಪುರ ) ಪರಳಿ, ವೈಜನಾಥ - ಭೂಸಾವಳ ಮಾರ್ಗ : ಇದು ಬೆಂಗಳೂರಿಂದ ಮೇಲೆ ಆರರಲ್ಲಿ ವರ್ಣಿಸಿದಂತೆ ದಿಲ್ಲಿಗೆ ನೇರವಾದ ಸಂಪರ್ಕ.

೧೦. ಬೆಳಗಾವಿ-ಸವದತ್ತಿ: ಇದು ಬೆಳಗಾವಿ - ಬೈಲಹೊಂಗಲ ಸವದತ್ತಿ ಮಾರ್ಗ, ಮೇಲೆ ಐದನೆಯುದರಲ್ಲಿ ವರ್ಣಿಸಿದಂತೆ ಒಳನಾಡಿನ ಜೋಡಣೆ.

**ಹೆದ್ದಾರಿಗಳು**

ಆಡಳಿತ-ವ್ಯವಹಾರ ಸಂಪರ್ಕಗಳ ದೃಷ್ಟಿ

ಯಿಂದ ಮಹತ್ವವಾದವುಗಳು ಹಾಗು ಅತ್ಯವಶ್ಯಕವಾದ ಹೆದ್ದಾರಿಗಳು ಇವು :

೧. ಸೊಲ್ಲಾಪುರದಿಂದ ವಿಜಾಪುರ - ಬಾಗಲಕೋಟೆ - ನರಗುಂದ - ಗದಗ- ಮುಂಡರಗಿ - ( ತುಂಗಭದ್ರಾಕ್ಕೆ ಸೇತುವೆ ) ಹಡಗಲಿ - ಚಿತ್ರದುರ್ಗ - ಬೆಂಗಳೂರು ಇದು ಸೊಲ್ಲಾಪುರ ಬೆಂಗಳೂರು ನೇರ ಹೆದ್ದಾರಿ.

೨. ಬೀದರ-ಗುಲಬುರ್ಗಾ ಸುರಪುರ-ಹಟ್ಟಿ (ಚಿನ್ನದ ಗಣಿ) ಮುದಗಲ್ಲ - ಹೊಸಪೇಟೆ ಮಾರ್ಗ ( ಬೀದರ-ಮಂಗಳೂರ ಹೆದ್ದಾರಿ ).

೩. ಮಿರ್ಜಿ-ಅಥಣಿ - ಜಮುಖಂಡಿ - ರಾಮದುರ್ಗ-ಜಮುಖಂಡಿ-ರಾಮದುರ್ಗ-ನರಗುಂದ-ಗದಗ-ಕೊಟ್ಟೂರ-ಚಿತ್ರದುರ್ಗ ( ಇದು ಮುಂಬಯಿ ಪ್ರಾಂತದ ಮಿರ್ಜಿ ಅಥಣಿಗಳ ನಡುವಿನ ಕನ್ನಡಭಾಗದಲ್ಲಿ ಹಾಯುತ್ತದೆ.) ಮೇಲೆ ಒಂದರಲ್ಲಿ ಹೇಳಿದಂತೆ ಸೊಲ್ಲಾಪುರ-ಬೆಂಗಳೂರು ಮಾರ್ಗಕ್ಕೆ ಜೋಡನೆ.

೪. ಮಂಗಳೂರು-ಕಡೂರ-ಬಿರೂರ - ಚಿತ್ರದುರ್ಗ-ಬಳ್ಳಾರಿ-ರಾಯಚೂರ-ಯಾದಗಿರಿ ಹೆದ್ದಾರಿ. ( ಇದರ ಕೆಲಭಾಗ ಆಂಧ್ರದ ಕನ್ನಡ ಪ್ರದೇಶದಲ್ಲಿ ಹಾಯುತ್ತದೆ. )

೫. ಮಲ್ಪೆ- ಹೊಸನಗರ- ಕುಮಸಿ- ದಾವಣಗೆರೆ-ಹರಪನಹಳ್ಳಿ- ಹೊಸಪೇಟೆ - ರಾಯಚೂರ ಹೆದ್ದಾರಿ.

೬. ಕಾರವಾರ : ಶಿರಸಿ-ಶಿವಮೊಗ್ಗೆ-ಬೀರೂರ ಅರಸೀಕೇರಿ-ಮೈಸೂರ ಇದು ಕಾರವಾರ ಉದಕಮಂಡಳ ಹೆದ್ದಾರಿ.

೭. ಬೆಳಗಾವಿ : ಗೋಕಾವಿ - ಜಮುಖಂಡಿ ವಿಜಾಪುರ-ಶಿಂದಗಿ (ಭೀಮಾಕ್ಕೆ ಸೇತುವೆ) ಗುಲಬುರ್ಗಾಕ್ಕೆ.

೮. ಬೀರೂರ : ಚನ್ನಗಿರಿ - ದಾವಣಗೇರಿ- ಹರಪನಹಳ್ಳಿ-ಹೂವಿನಹಡಗಲಿ ( ತುಂಗಭದ್ರಾಕ್ಕೆ ಸೇತುವೆ ) ಮುಂಡರಗಿ-ಗದಗ-ಬಾಗಲಕೋಟೆ ಸೊಲ್ಲಾಪುರ ಮಾರ್ಗ.

೯. ಗದಗ-ರಾಯಚೂರ : ಗದಗ-ನರೇಗಲ್ಲ ಗಜೇಂದ್ರಗಡ-ಕುಷ್ಟಗಿ-ಮುದಗಲ್ಲ-ರಾಯಚೂರು ( ಇದರಿಂದ ಕಾರವಾರ - ರಾಯಚೂರ - ಹೈದರಾಬಾದುಗಳಿಗೆ ನೇರವಾಗಿ ಸಂಪರ್ಕವಾಗುತ್ತದೆ.

೧೦. ಕಾರವಾರ - ಮಚ್ಚಲಿಪಟ್ಟಣ : ಇದು ಈಗ ಕಾರವಾರ ಬಳ್ಳಾರಿ ಹೆದ್ದಾರಿ ಇದ್ದು ( ಇದರಲ್ಲಿ ಗದಗ-ಕೊಪ್ಪಳ ವರೆಗೆ ೩೬ ಮೈಲು ರಚಿತವಾಗಲಿದೆ) ಮುಂದೆ ನೆಲ್ಲೂರ ವಿಜಯವಾಡಾ - ಮಚ್ಚಲಿಪಟ್ಟಣ ( ಇದು ಅರಬೀ ಸಮುದ್ರದಿಂದ ಬಂಗಾಲ ಉಪಸಾಗರಕ್ಕೆ ರಾಷ್ಟ್ರೀಯ ಹೆದ್ದಾರಿ )

ಈಗ ಮಚ್ಚಲಿಪಟ್ಟಣ ವಿಜಯವಾಡಕ್ಕೆ ಮಿಟರಗೇಜ ರೇಲ್ವೆ ಇದ್ದು ಅದನ್ನು ಬ್ರಾಡಗೇಜಿನಲ್ಲಿ ಪರಿವರ್ತಿಸುವವರಿದ್ದಾರೆ. ಇದನ್ನೆ ಹುಬ್ಬಳ್ಳಿಯ ವರೆಗೆ ವಿಸ್ತರಿಸಿ ಕಾರವಾರಕ್ಕೆ ಹುಬ್ಬಳ್ಳಿಯಿಂದ ಬ್ರಾಡಗೇಜ ರಚಿಸಬೇಕು. ಈ ದಾರಿ ಹಿಂದೊಮ್ಮೆ ಬ್ರಾಡಗೇಜಗಾಗಿಯೇ ಸರ್ವೆ ಆಗಿದೆ. ಅಲ್ಲದೆ ಗುಂತಕಲ್ಲ-ಬಳ್ಳಾರಿ ವರೆಗಿನ ಕಾಯಮ ದಾರಿ ( permanent way ) ಈಗಲೂ ಬ್ರಾಡಗೇಜಿನದೇ ಅದೆ.

**ವಿಮಾನ ನಿಲ್ದಾಣಗಳು ಹಾಗೂ ಮಾರ್ಗಗಳು:—**

ವಿಮಾನ ಮಾರ್ಗಗಳಲ್ಲಿ ನಮ್ಮ ಕರ್ನಾಟಕಕ್ಕೆ ಸಂಬಂಧ ಪಟ್ಟವುಗಳು ಇವು

(೧) ಮುಂಬಯಿ-ಬೆಳಗಾವಿ- ಮಂಗಳೂರ ಕೋಚೀನ

(೨) ಮುಂಬೈ-ಬೆಂಗಳೂರ

(೩) ಮದ್ರಾಸ-ಬೆಂಗಳೂರು-ತ್ರಿವೇಂದ್ರಮ್ಮ ಇದಲ್ಲದೆ ಮುಂಬಯಿ ಕೊಲಂಬೋ ಮಾರ್ಗವು ಕರ್ನಾಟಕದ ಮೇಲೆ ಹಾಯುತ್ತದೆ.

ಇನ್ನು ಬೆಂಗಳೂರೇ ಹೊಸ ಕರ್ನಾಟಕದ ರಾಜಧಾನಿಯಾದದ್ದರಿಂದ (೧) ಮಂಗ

ಳೂರು-ಮೈಸೂರು-ಬೆಂಗಳೂರು (೨) ಬೆಳಗಾವಿ-(ಹುಬ್ಬಳ್ಳಿ-ಗದಗ) ಬಳ್ಳಾರಿ-ಬೆಂಗಳೂರು (೩) ವಿಜಾಪೂರ-ಗದಗ-ಬೆಂಗಳೂರ ಹೀಗೆ ಫೀಡರ ಸರ್ವಿಸ ಅತ್ಯವಶ್ಯ. ಬಳ್ಳಾರಿಯ ವಿಮಾನ ನಿಲ್ದಾಣವನ್ನು ಮತ್ತೆ ಪ್ರಾರಂಭಿಸಬೇಕು. ಅಥವಾ ಬಳ್ಳಾರಿ-ಹೊಸಪೇಟೆಗಳ ನಡುವೆ ಬೇರೊಂದು ಕಟ್ಟಬೇಕು. ಬೀದರ ನಿಲ್ದಾಣವನ್ನು ಪುನರುಜ್ಜೀವಿಸಿದರೆ ಬೀದರ-ಗುಲಬುರ್ಗಾ-ರಾಯಚೂರ-ಬಳ್ಳಾರಿ- ಬೆಂಗಳೂರು ಸರ್ವಿಸ ನಡೆಯಬಹುದು. ಹುಬ್ಬಳ್ಳಿ ವಿಮಾನನಿಲ್ದಾಣ ಯೋಜನೆ ಇದ್ದು ಈ ನಿಲ್ದಾಣವನ್ನು ಹುಬ್ಬಳ್ಳಿ-ಗದಗ ಮಧ್ಯೆ ಮಾಡಿದರೆ ಹೆಚ್ಚು ಅನುಕೂಲ. ನಮ್ಮ ಕರ್ನಾಟಕದಲ್ಲಿ ವಿಜಾಪುರ ಹಾಗು ಜೋಗ ಜಲಪಾತಗಳು ಪ್ರೇಕ್ಷಣೀಯ ಸ್ಥಳಗಳು ಇರುತ್ತವೆ. ಜೋಗವು ಮುಂಬಯಿ-ಕೋಚಿನ ಮಾರ್ಗದಲ್ಲಿ ಬೆಳಗಾವಿ-ಮಂಗಳೂರ ಮಧ್ಯದಲ್ಲಿ ಬರುತ್ತದೆ. ಇಲ್ಲಿ ಒಂದು ಸಾದಾ ವಿಮಾನ ಬೈಲನ್ನಾದರೂ ( Air strip ) ಮಾಡಿ ಪ್ರವಾಸಿಕರಿಗೆ ಅವಶ್ಯಬಿದ್ದಾಗ ಮಾತ್ರ ವಿಮಾನಗಳು ಇಳಿಯುವಂತೆ ಮಾಡಬಹುದು. ಇವಲ್ಲದೆ ಕಾಲಾಂತರದಲ್ಲಿ ಇನ್ನು ಕೆಲವು ಬೇಕಾಗಬಹುದು.

ಶಿವಮೊಗ್ಗಾ-ಧಾರವಾಡ ಜಿಲ್ಲೆಗಳಲ್ಲಿ ಹರಿಯುವ ವರದಾ ಮತ್ತು ತುಂಗಭದ್ರೆಗಳಿಗೆ ಅಲ್ಲಲ್ಲಿ ಅಣೆಕಟ್ಟುಗಳನ್ನು ಕಟ್ಟಿದರೆ ಲಕ್ಕವಳ್ಳಿಯಿಂದ ಹೊಸಪೇಟೆಯವರೆಗೆ ಜಲಮಾರ್ಗವಾಗುತ್ತದೆಂದು ತಜ್ಞರ ಅಭಿಪ್ರಾಯ (೧೫೦ ಮೈಲು) ಈ ಮಾರ್ಗ ನೀರಾವರಿ, ವಿದ್ಯುತ್— ಮೀನಗಾರಿಕೆ ಮುಂತಾದವುಗಳಿಗೆ ಉಪಯೋಗವಾಗುವದರಿಂದ ಇದು ವಿವಿಧೋದ್ದೇಶದ ಯೋಜನೆಯಾಗುವದು ನಮ್ಮ ರಾಜ್ಯ ಸರಕಾರವು ಇವುಗಳನ್ನು ಬೇಗನೆ ಕೈಕೊಳ್ಳಬೇಕು.

## ಅಂಚೆ ಹಾಗು ತಂತಿಗಳ ಸಂಪರ್ಕ

ನಮ್ಮ ರಾಜ್ಯವು ಒಂದುಗೂಡುವದಕ್ಕಿಂತ ಮೊದಲು ಅಂಚೆ ತಂತಿಗಳ ಮುಖ್ಯ ಕಚೇರಿಗಳು, ಮುಂಬಯಿ-ಮದ್ರಾಸ-ಹೈದರಾಬಾದಗಳಲ್ಲಿದ್ದವು. ಇನ್ನು ಹಾಗೆ ಸಾಗದು. ಈ ರಾಜ್ಯಕ್ಕೆ ಪ್ರತ್ಯೇಕ ಪೋಸ್ಟ ಮಾಸ್ತರ ಜನರಲನೂ ಜನರಲ್ ಪೋಸ್ಟ ಆಫೀಸೂ ಸೆಂಟ್ರಲ್ ಟೆಲಿಗ್ರಾಫ ಆಫೀಸೂ ದೊರೆಯಬೇಕು. (ಈಗ ವೃತ್ತಪತ್ರಿಕೆಗಳಲ್ಲಿ ಮುಂದಿನ ಎಪ್ರಿಲಕ್ಕೆ ಆರಂಭವಾಗುವದಾಗಿ ವರದಿಯಾಗಿದೆ) ಬೆಂಗಳೂರು ರಾಜ್ಯದ ಒಂದು ಮೂಲೆಯಲ್ಲಾಗುವದರಿಂದ ರಾಜ್ಯದ ಮಧ್ಯಸ್ಥಾನಗಳಾದ ಹುಬ್ಬಳ್ಳಿ-ಗದಗ-ಬಳ್ಳಾರಿ ಇವುಗಳೊಂದರಲ್ಲಿ ಅದನ್ನು ಸ್ಥಾಪಿಸಬಹುದು. ಭೌಗೋಲಿಕ ರೀತಿಯಿಂದಲೂ ಸಾರಿಗೆ-ಸಂಪರ್ಕದಿಂದಲೂ ಹೆಚ್ಚು ಮಧ್ಯವರ್ತಿಯಾದ ಗದಗಿನಲ್ಲಿ ಸ್ಥಾಪಿಸುವದು ಹೆಚ್ಚು ಒಳಿತು. ನಮಗೆ ಹೆಚ್ಚು ಅಂಚೆ-ತಂತಿ-ಟೆಲಿಫೋನು ಕಟ್ಟೆಗಳು ಬೇಕು.

ಈಗ ನಮ್ಮ ರಾಜ್ಯದ ಮುಖ್ಯ ಬೇಡಿಕೆಗಳನ್ನು ಹೀಗೆ ಸಂಕ್ಷೇಪಿಸಬಹುದು.




೧. ನಮ್ಮ ಹೊಸ ರಾಜ್ಯದ ರಸ್ತೆಗಳ ಬೆಳವಣಿಗೆಗೆ ಪ್ರಾಧಾನ್ಯವನ್ನು ಕೊಡಬೇಕು. ಭರಸಿ ಕಾಜವೇ ತೆಗೆದುಹಾಕಿ ಎತ್ತರ ಮಟ್ಟದ ಪೂಲುಗಳನ್ನು ಎಲ್ಲ ಋತುಮಾನಗಳಿಗೆ ತಕ್ಕಂಥವುಗಳನ್ನು ರಚಿಸಬೇಕು. ರಾಜಧಾನಿಯು (ಬೆಂಗಳೂರು) ಒಂದು ಮೂಲೆಯಲ್ಲಿರುವದರ ಅನಾನುಕೂಲತೆಯನ್ನು ಹೊಡೆದು ಹಾಕಲು ಇದೊಂದು ಒಳ್ಳೇ ಉಪಾಯ. ರಸ್ತೆಗಳ ಬೆಳವಣಿಗೆಯೇ ನಾಡಿನ ಆರ್ಥಿಕ ಬೆನ್ನೆಲುಬು. ಮಿಕ್ಕ ಸಾಧನಗಳಿಗಿಂತ ಇದು ಅತಿ ಮಹತ್ವ. ಇಷ್ಟಾದರು ಕೂಡ ಅಗದಿದ್ದರೆ ಇತರ ರಾಜ್ಯಗಳ ಮುಂದೆ ನಮ್ಮ ರಾಜ್ಯ (ಕರ್ನಾಟಕ) ಕುಂಟಬೇಕಾಗುವಲ್ಲಿ ಸಂಶಯವಿಲ್ಲ.

೨. ಕರಾವಳಿಯನ್ನು ಬಲಪಡಿಸುವದಕ್ಕೆ ತೀವ್ರ ಪ್ರಾಧಾನ್ಯವನ್ನು ಕೊಡಬೇಕು. ಮಂಗಳೂರು ಇಲ್ಲವೆ ಮಲ್ಪೆ ಬಂದರಗಳು ಬಲಪಡಿಸಲ್ಪಡುವದು ನಿಶ್ಚಿತ. ಆದರೆ ಕರ್ನಾಟಕದ ಬಹುಭಾಗಗಳಿಗೆ ಇವೆರಡೂ ಬಂದರಗಳು ದೂರಾಗುವವು. ಅದಕ್ಕಾಗಿ ನೈಸರ್ಗಿಕ ಸೌಕರ್ಯವುಳ್ಳ ಕಾರವಾರವನ್ನು ಹಿರಿಯ ಬಂದರವನ್ನಾಗಿ ಬಹು ಬೇಗನೇ ಬಲಪಡಿಸಬೇಕು. ಇಲ್ಲವೆ ಅಲ್ಪವೆಚ್ಚದಿಂದಾದರೂ ಪ್ರಾಂತೀಯ ಬಂದರವನ್ನಾಗಿಯಾದರೂ ಬೆಳೆಸಬೇಕು.

೩. ರೈಲುದಾರಿಗಳಲ್ಲಿ ಕರಾವಳಿಗಭಿಮುಖವಾಗಿಯೂ ಕೆಲವು ಬ್ರಾಡಗೇಜಿಗೆ ಪರಿವರ್ತಿಸಬೇಕಾದವೂ ಅಭಿವೃದ್ಧಿಗೆ ತಡೆದು ನಿಂತಿವೆ. ಇವಕ್ಕೆ ಮೊದಲನೇ ಪ್ರಾಶಸ್ತ್ಯ ಅತ್ಯವಶ್ಯವಾಗಿ ದೊರೆಯಲೇಬೇಕು.

೪. ವಿಮಾನ ದಾರಿಗಳಲ್ಲಿ ಒಂದು ರಾತ್ರಿ ಮೇಲ ವಿಮಾನ ಸಾರಿಗೆಯೂ ಒಂದೆರಡು ಫೀಡರ ಸರ್ವಿಸಗಳೂ ಮೂರು ಹೊಸ ನಿಲ್ದಾಣಗಳೂ ಅತ್ಯವಶ್ಯ. ಇವು ಯಾವವೆಂದರೆ (೧) ಹುಬ್ಬಳ್ಳಿ-ಗದಗ ಮಧ್ಯೆ (೨) ವಿಜಾಪುರ (೩) ಗುಲಬುರ್ಗ.

೫. ಹುಬ್ಬಳ್ಳಿ-ಗದಗ-ಬಳ್ಳಾರಿಗಳಂಥ ಮಧ್ಯವರ್ತಿಯಾದ, (ವಿಶೇಷ ಮಧ್ಯವರ್ತಿಯಾದ ಗದಗದಲ್ಲಿ) ಪೋಸ್ಟಮಾಸ್ತರ ಜನರಲ್ ಹಾಗು ಜನರಲ್ ಪೋಸ್ಟ ಆಫೀಸ ಸೆಂಟ್ರಲ್ ಟೆಲಿಗ್ರಾಫ ಆಫೀಸಗಳು ಅತ್ಯವಶ್ಯ.

ಇವೆಲ್ಲವು ನಮ್ಮ ರಾಜ್ಯದ ಅಭ್ಯುದಯಕೆ ಬಹಳ ಅವಶ್ಯ ಇದ್ದುದರಿಂದ ಇವುಗಳಿಗೆ ಸಂಬಂಧಿಸಿದ ಸರಕಾರಗಳು ಇವುಗಳ ತೀವ್ರತೆಯ ಮಹತ್ವವನ್ನು ಗಮನಿಸಿ ಬೇಗನೇ ಕಾರ್ಯತತ್ಪರರಾಗಲಿ. ಮತ್ತು ಪ್ರಜೆಗಳು ಈ ದಿಸೆಯಲ್ಲಿ ಆಯಾ ಸರಕಾರಗಳಿಗೆ ಒತ್ತಾಯಪಡಿಸಿ ಇವೆಲ್ಲವನ್ನು ಪಡೆಯಬೇಕು. ಇಲ್ಲದೆ ಹೋದಲ್ಲಿ ನಮ್ಮ ರಾಜ್ಯವು ಕುಂಟುತ್ತ ಮುಗ್ಗರಿಸಿ ಬೀಳಬೇಕಾಗುತ್ತದೆ.

# ಶಂಕರರಾಯರ ಶಿರಪೇಚು

## ಅರ್ಥಾತ್ ಮಾವನ ವಿಜಯ

ಲೇಖಕರು :
ಶ್ರೀ. ಎಂ. ಎಚ್. ಕೌಜಲಗಿ
ಬೆಂಗಳೂರು

ಈ ಸಲದ ದೀಪಾವಳಿಗೆ ಅಳಿಯುದೇವರನ್ನು ಕರೆಸಬೇಕು ಎಂದು ಗಿರಿಜಾಬಾಯಿಯುವರು ಶಂಕರರಾಯರಿಗೆಆಗ್ರಹಮಾಡುತ್ತಿದ್ದರು. ಲಗ್ನದ ಸಲುವಾಗಿ ಆದ ಸಾಲವೇ ಇನ್ನೂ ತೀರಿಲ್ಲ. ಮತ್ತೆ ಅಳಿಯತನದ ಅಧಿಕ ಮಾಸ ಏಕೆಂದು ಶಂಕರರಾಯರು ವಿರೋಧಿಸುತ್ತಿದ್ದರು.

"ಈ ಬುದ್ಧಿ ನಿಮ್ಮ ಲಗ್ನದಲ್ಲಿ ಬರಲಿಲ್ಲವೇಕೆ? ಮೂರು ಮೂರು ಸಲ ಅಳಿಯತನ ಮಾಡಿಸಿಕೊಂಡಿರಲ್ಲ. ನಮ್ಮಪ್ಪನಿಗೇನು ಸಾಲವಾಗಿದ್ದಿಲ್ಲವೇನು" ಎಂದು ಗದ್ದರಿಸಿದರು ಗಿರಿಜಾಬಾಯಿಯುವರು.

"ಅಲ್ಲs. ಅದರ ಸೇಡು ಈಗ ತೀರಿಸುವಾಕಿ ಏನು ? ಅದೂ ನನ್ನ ಮೇಲೆ. ನಿಮ್ಮ ಅಪ್ಪ ಏನು ನಿನ್ನ ಮೇಲೆ ಮಾಡಿದ ಖರ್ಚನ್ನೆಲ್ಲ ನಿನ್ನ ತಮ್ಮನ ಮದಿವೀಲಿ ಬಡ್ಡೀಸಹಿತ ವಸೂಲ ಮಾಡಿಕೊಂಡ. ಆದರೆ ನೀನು ಹಾಂಗಾಗಿ ಬರೇ ಹೆಣ್ಣ ಹಡದಿ ಅಲ್ಲ. ಒಂದರ ಲಗ್ನದ ಸಾಲ ತೀರಸುವದರಾಗ ಇನ್ನೊಂದು ಲಗ್ನಕ್ಕ ತಯಾರಾಗಿರತsದ."

"ಸಾಕು ಬಿಡರಿ ನೀವೇನ ಬಹಳ ಖರ್ಚ ಮಾಡ್ಯಿರಿ. ನಮ್ಮ ಅಪ್ಪ ಹಾಕಿದ ಬಂಗಾರದಾಗಿಂದ ಆ ಹುಡುಗರು ವಸ್ತಾ ಮಾಡಿಸಿಕೊಂಡವು. ನೀವೇನ ಅವರ ಲಗ್ನಕ್ಕಾಗಿ ಒಂದು ಗುಂಜಿ ಬಂಗಾರ ಕೊಳ್ಳಲಿಲ್ಲ. ಮನಿಗೆ ಛತ್ರ, ಗೋದಿ, ಬೆಲ್ಲ ಬಂದಿದ್ದರೊಳಗ ಲಗ್ನಾತು. ಸುಮ್ಮಸ ಲಗ್ನಕ್ಕಾಗಿ ಸಾಲಾತು ಸಾಲಾತು ಅಂತ ಒದರಬ್ಯಾಡರಿ. ಹುಡುಗರು ಎಲ್ಲಾರೆ ಮುನಸ್ಸಿಗೆ ಹಚಿಗೊಂಡಾವು. ಈಗ ನಾ ಅಳಿಯತನದ ಮಾತು ತಗದಕೂಡಲೆ ಸಾಲ ಅಂತೀರಿ. ಹುಡುಗಲೇ ನಿಮ್ಮ ಅಣ್ಣನ ಮಕ್ಕಳಿಗೆ ಕಲಿಯೂದಕ್ಕ ರುಡ್ಡು ಕಳಿಸಿಕೊಡತೀರಿ. ಅದಕ್ಕ ಆಗೂದುಲ್ಲೇನು ಸಾಲ ?"

"ಅಲ್ಲ ಶಿಕ್ಷಣಕ್ಕಾಗಿ ಸಾಲಾಮಾಡೂದು ಅಳೀತನದ ಚೈನಿಗೆ ಸಾಲಾಮಾಡೂದು ಎಲ್ಲಾ ಒಂದೇ ಏನು. ಈಗೇನು ಅಕ್ಕಿ ಸಿಗೂದಿಲ್ಲ. ಸಕ್ರಿ ಸಿಗೂದೂಲ್ಲ. ಬೆಣ್ಣಿಧಾರಣೆ ಅಂತೂ ನಿನಗ ಗೊತ್ತs ಅದ. ಇಂಥಾದರೊಳಗ ಅಳಿಯುಂದಿರನ್ನ ಕರೆಸಿ ಏನು ಮಾಡುಅsಕಿ." ಎಂದು ಇನ್ನೊಂದು ಕಾರಣ ಹೇಳಹತ್ತಿದರು ಶಂಕರರಾಯರು.

"ಹೌದು. ಹೌದು. ಅವು ನಮಗಷ್ಟೇ ಸಿಗೂದಿಲ್ಲೇsನು ? ಜಗತ್ತಿನ್ಯಾಗ ಯಾರೂ ಅಳಿಯುಂದರನ್ನ ಕರಸತಿರಲಿಕ್ಕಿಲ್ಲ ನೋಡಿರಿ. ಈ

ಮಾವ ಶಂಕರರಾಯರು ದೀಪಾವಳಿ ಸಮೀಪಿಸಿದಾಗ ಎದುರಿಸಬೇಕಾಗಿ ಬಂದ ಪೇಚು ವಿಶೇಷವಾದುದಲ್ಲ. ಆದರೆ ಅದನ್ನೇ ತಮ್ಮ ಶಿರಪೇಚನ್ನಾಗಿ ಪರಿವರ್ತಿಸಿಕೊಂಡದ್ದು ಅವರ ಪ್ರಸಂಗಾವಧಾನದ ಪ್ರತೀಕವಾಗಿದೆ. ಇಂಥ ವಿಜಯ ಸಂಪಾದಿಸಿದ ಸುದೈವೀ ಮಾವಂದಿರು ಎಷ್ಟು ಜನ ?

ಸಾಹೆ. ಸಾಕು ಬಿಡರಿ ನಿಮ್ಮ ಈ ಪುರಾಣ. ನೀವು ಏನು ಹೇಳಿದರೂ ನಾ ಏನು ಕೇಳೂ



ಅಳಿಯಂದಿರೀಗ ಸಾದ ಎತ್ತಾಗಿ ಶಂಕರರಾಯರ ಸಂಸಾರ ರಥದ ಇನ್ನೊಂದು ನೊಗವನ್ನು ಯಥಾಶಕ್ತಿ ಎಳೆಯುತ್ತಿದ್ದಾರೆ.

ಆಕಿ ಅಲ್ಲ. ನೀವು ಅವರಿಗೆ ಬಾ ಅಂತ ಪತ್ರ ಹಾಕಿದರ ನಾ ಊಟಮಾಡತೀನಿ. ಇಲ್ಲಾಂದರ ಇಲ್ಲ, ನೋಡಿರಿ."

"ಅಗಲಿ ಮಹಾರಾಯಳ. ನಿನ್ನ ಅನ್ನ ಸತ್ಯಾಗ್ರಹಬೇಡ. ಗಾಂಧಿ ಸುದ್ಧಾ ಸತ್ಯಾಗ್ರಹದ ಮಂತ್ರವನ್ನು ಹೆಂಡತಿ ಕಡಿಂದs ಕಲಿತು ಬ್ರಿಟಿಶರನ ಓಡಸಲಿಕ್ಕೆ ಹಚ್ಚಿದನಂತ. ಆಗಲಿ ಈವತ್ತ ಪತ್ರ ಬರೀತೇನಿ. ಸಾಲದ ಜೋಡಿ ಇನ್ನೊಂದಿಷ್ಟು ಸಾಲ." ಎಂದು ಶರಣಾಗತರಾದರು.

ಅವರಿಗೆ ಲಗ್ನ, ಅಳಿಯತನಕ್ಕಾಗಿ ಆದ ಸಾಲದ ಭಾರವನ್ನು ಸಹಿಸುವದಾಗಲಿಲ್ಲ. ಅವರಿಗೆ ಒಟ್ಟು ಐದು ಹೆಣ್ಣು ಮಕ್ಕಳು. ಮೂವರ ಮದುವೆ ಮಾಡಿ ಅದರಲ್ಲಿ ಇಬ್ಬರು ಅಳಿಯಂದಿರಿಗೆ ಅಳಿಯತನ ಮಾಡಿದ್ದರು. ಇಬ್ಬರು ಮಕ್ಕಳ ಎರಡು ಬಾಣಂತಿತನವನ್ನು ಮುಗಿಸಿದ್ದರು. ಈಗ್ಗೆ ಮೂರನೇ ಅಳಿಯನ ಅಳಿಯತನದ ಸಮಸ್ಯೆ ಬಂದಿತ್ತು. ಅದನ್ನು ಅವರು ನಿರ್ವಿಕಾರಭಾವದಿಂದಲೇ ಮುಗಿಸುತ್ತಿದ್ದರು. ಆದರೆ ಮೂರನೇ ಮಗಳ ಮದುವೆಯಲ್ಲಿ ಬೀಗರು ಅವರ ಮಾನವನ್ನು ಮಣ್ಣಿಗೆ ತಿಕ್ಕಿದ್ದರು.

ತಮ್ಮನ್ನು ಸ್ವಾಗತಿಸಲು ರಾಯರೇ ಖುದ್ದಾಗಿ ಬರಲಿಲ್ಲವೆಂದು ಆಕ್ಷೇಪ ತಕ್ಕೊಂಡು, ಬೀಗರು ಎಲ್ಲರೆದುರಿಗೆ, ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಲು ಹಚ್ಚಿದ್ದರು.

ಅಳಿಯನು ಹುಡುಗಿಗೆ ಅನುರೂಪನಾಗಿಲ್ಲ ಕಪ್ಪಾಗಿರುವನು ಎಂದು ರಾಯರ ಪಾರ್ಟಿಯವರಲ್ಲಿ ಯಾರೊ ಅಂದಿದ್ದರಿಂದ ಅಳಿಯಂದಿರು ೩ ಗಂಟೆ ಸಿಟ್ಟುಮಾಡಿಕೊಂಡು ಎಲ್ಲರ ಊಟವನ್ನು ತಡೆಹಿಡಿದು ರಾಯರಿಗೆ ಮತ್ತೆ ಸಾರ್ವಜನಿಕವಾಗಿ ಕ್ಷಮಾಪಣೆ ಕೇಳುವ ಶಿಕ್ಷೆ ಹಾಗೂ ಇನ್ನೂರು ರೂಪಾಯಿಯ ರಿಸ್ಟವಾಚಿನ ಹೊಸ ದಂಡವನ್ನು ವಿಧಿಸಿದ್ದರು. ಇಂಥ ಇನ್ನೂ ಎಷ್ಟೊ ಚಿಕ್ಕಪುಟ್ಟ ಪ್ರಸಂಗಗಳಾಗಿ ರಾಯರಿಗೆ ಈ ಬೀಗರನ್ನು ಏಕಾದರೂ ಗಂಟುಹಾಕಿಕೊಂಡೆ ಎಂದು ಅನಿಸಿಬಿಟ್ಟು-ಹುಡುಗಿಯನ್ನು ಹಡೆದ ಅಪರಾಧಕ್ಕಾಗಿ ರಾಯರು ತಮ್ಮ ಮಾನವನ್ನು ಮುಷ್ಟಿಯಲ್ಲಿ ಹಿಡಿದು ಲಗ್ನ ಮುಗಿಸುವದಕ್ಕಾಗಿ ಅವರು ಹೇಳಿದ್ದಕ್ಕೆ ಒಪ್ಪಿದ್ದರು. ಲಗ್ನ ಮುಗಿದ ಮೇಲೆ ಅಳಿಯ ಹಾಗೂ ಬೀಗರ ಮುಖವನ್ನೇ ನೋಡಬಾರದೆನ್ನುವಷ್ಟು ಅವರ ಮನಸ್ಸು ಕಹಿಯಾಗಿತ್ತು.

ಆದರೆ ಅದನ್ನೆಲ್ಲ ಮರೆತು ಈಗ ಅಳಿಯತನಕ್ಕೆ ಕರೆಸಬೇಕೆಂದು ಸ್ವತಃ ತಮ್ಮ ಹೆಂಡತಿಯೇ ಆಗ್ರಹಪಡಿಸುತ್ತಿದ್ದುದು ಅವರಿಗೆ ಸ್ತ್ರೀಸ್ವಭಾವದ ಒಡೆಯಲಾರದ ಒಗಟಾಗಿತ್ತು.

ಖಾಸಗಿ ಕಂಪನಿಯೊಂದರಲ್ಲಿ ಶಂಕರರಾಯರು ಕಾರಕೂನರಾಗಿದ್ದರೂ 'ನಾ, ನಾ' ಅನ್ನುವವರನ್ನು ವಾದದಲ್ಲಿ ಸೋಲಿಸುತ್ತಿದ್ದರು. ಆದರೆ ಅದರ ಶ್ರೇಯಸ್ಸೆಲ್ಲ ಅವರ ಮನೆಯವರಿಗೆ ಸೇರುತ್ತಿತ್ತು. ಶಂಕರರಾಯರು ಈ-ವರೆಗೆ ತಮ್ಮ ಹೆಂಡತಿಯನ್ನು ವಾದದಲ್ಲಿ ಗೆದ್ದಿದ್ದಿಲ್ಲ. ಆ ಸೋಲೆ ಅವರ ಜಯಕ್ಕೆ ಕಾರಣವಾಗಿತ್ತು. ತಮ್ಮ ಗುರು ತಮ್ಮ ಹೆಂಡತಿ ಎಂದು ಅವರು ಮನಸ್ಸಿನಲ್ಲಿಯೇ ಒಪ್ಪಿ-ಕೊಂಡಿದ್ದರು.

ಆದರೆ ಆಯುಷ್ಯದ ತುಂಬೆಲ್ಲ ಹೆಂಡತಿಗೆ ಸೋತರೂ ಕೊನೆಗೊಮ್ಮೆಯಾದರೂ ಜಯಗಳಿಸಬೇಕೆಂದು ಅವರು ಈ ಸಾರೆಯ ಅಳಿಯತನದ ಕಾಲಕ್ಕೆ ನಿರ್ಧರಿಸಿದರು. ಬೀಗರ ಮೇಲಿನ ಅವರ ಹಟವೆಲ್ಲ ಈಗ ಅವರ ಹೆಂಡತಿಯ ಮೇಲೆ ವರ್ಗವಾಯಿತು. ಆದರೆ ಅದನ್ನು ತೋರಗೊಡದಂತೆ ಕಾರ್ಯಸಾಧಿಸುವ ನಿಶ್ಚಯಮಾಡಿದರು.

ಶಂಕರರಾಯರ ಈಗಿನ ಅಳಿಯಂದಿರಿಗೆ ಸುದೈವದಿಂದಲೋ ದುರ್ದೈವದಿಂದಲೋ ಇನ್ನೂ ಎಲ್ಲಿಯೂ ಕೆಲಸವಾಗಿದ್ದಿಲ್ಲ. ಅದೇ ತಾನೇ ಕಾಲೇಜಿನಿಂದ ಬಿ. ಎ. ಪಾಸಾಗಿ ಬಂದಿದ್ದರು. ಆದರೆ ಅವರ ಬಿ.ಎ., ಶಂಕರರಾಯರಿಂದ ಹೆಚ್ಚು ವರದಕ್ಷಿಣೆ ಕೇಳಲು ಮಾತ್ರ ಉಪಯೋಗ ಬಿತ್ತೆ ಹೊರ್ತು ನೌಕರಿ ಸಂಪಾದಿ-ಸಲು ಉಪಯೋಗ ಬಿದ್ದಿರಲಿಲ್ಲ. ಸರಕಾರಿ ಕಚೇರಿಗಳ ಬಾಗಿಲವಂತೂ ಅವರಿಗೆ ಮುಚ್ಚಿದಂತೇ ಆಗಿದ್ದಿತು. ಖಾಸಗಿ ಕಂಪನಿಗಳಲ್ಲಿ ಕೇಳಿದ್ದಕ್ಕೆ— ಇವರು ವರದಕ್ಷಿಣೆ ಕೊಡಲಾರದ ಹೆಣ್ಣುಗಳಿಗೆ ಹೇಗೆ ಉತ್ತರ ಹೇಳಿ ಕಳಿಸುತ್ತಿದ್ದರೊ ಹಾಗೆ ಉತ್ತರ ದೊರೆಯುತ್ತಿತ್ತು. ಹೀಗಾಗಿ ನೌಕರಿ ಹುಡುಕುವದರಲ್ಲಿ ಅವರು ಶಂಕರರಾಯರು ವರ ಹುಡಕಿದಷ್ಟೇ ಹಣ್ಣಾಗಿದ್ದರು. ನೌಕರಿ ಸಿಕ್ಕಮೇಲೆ ಅವರದ ಬೆಲೆ ಇನ್ನೂ ಇಷ್ಟು ಹೆಚ್ಚಾಗಿ ತಮಗೆ ಅಸಾಧ್ಯವಾಗಬಹುದೆಂದು ಶಂಕರರಾಯರು ಗಡಬಡಸಿಯೇ ಆತನಿಗೆ ತಮ್ಮ ಮಗಳನ್ನು ಕೊಟ್ಟಿದ್ದರು.

ಈ ಅವರ ಲಾಭವನ್ನೆ ತಾವು ಮಾಡಿಕೊಳ್ಳಬೇಕು ಮತ್ತು ಅಳಿಯಂದರಿಗೆ ಒಂದು ಪಾಠವನ್ನು ಕಲಿಸಿಕೊಡಬೇಕು ಎಂದು ಧೂರ್ತ ಶಂಕರರಾಯರು ನಿರ್ಧರಿಸಿದರು.

ಶಂಕರರಾಯರಿಂದ ಬೀಗರಿಗೆ ಅಳಿಯಂದಿರನ್ನು ಅಳಿಯತನಕ್ಕೆ ದಯವಿಟ್ಟು ಕಳಿಸಿಕೊಡಬೇಕೆಂಬ ಕಳಕಳಿಯ ಬಿನ್ನಹ ಹೋಯಿತು. ಅವರ ಅಳಿಯನ ತಂದೆಯು ಅದನ್ನು ನೋಡಿ ಶಂಕರರಾಯರನ್ನು ಸುಲಿಯಲು ಮತ್ತೊಂದು ಸಂಧಿಯು ದೊರಕಿತು ಎಂದು ಲೆಕ್ಕಹಾಕಿ ಬಿಗುಮಾನದಿಂದ ಮಗನನ್ನು ಕಳಿಸಲು ಅವರು ಒಪ್ಪಿಕೊಂಡರು. ಮಗನು ತನ್ನ ರಾಜಠೀವಿಯನ್ನು ಮಾವನ ಮನೆಯಲ್ಲಿ ತೋರಿಸುವ ಹಾಗೂ ಅದನ್ನು ಅನುಭವಿಸುವ ಸುಸಂಧಿಯು ದೊರಕಿದ್ದುದಕ್ಕಾಗಿ ಹೋಗಲು ಒಪ್ಪಿಕೊಂಡ. ತಂದೆಯ ಮನೆಗೆ ಹೋಗಿ— ತನ್ನ ಹೊಸ ಗಂಡನು ತನ್ನನ್ನು ನೆರಳಿನಂತೆ ಹುಚ್ಚನಾಗಿ ಹಿಂಬಾಲಿಸುವದನ್ನು, ತನ್ನನ್ನುಬಿಟ್ಟು ಅರಗಳಿಗೆಯಾದರೂ ಇರಲಾರನೆಂಬುದನ್ನು ಹಾಗೂ ಶೀಘ್ರದಲ್ಲಿಯೆ ತಾನು ಗಂಡನ ಮೇಲೆ ಸಾಧಿಸಿದ ವಿಕ್ರಮವನ್ನು ತಂದೆ ತಾಯಿಗಳಿಗೆ ತೋರಿಸ[...]

ಶಂಕರರಾಯರ ಮಗಳು ಒಪ್ಪಿಕೊಂಡಳ[...]
ಆದರೆ ತೌರುಮನೆಯಲ್ಲಿ ತಮ್ಮ ಬ[...]
ಏನೇನು ಮಾತಾಡುವರು ಯಾರ್ಯಾ[...]
ಏನೇನು ಕೊಟ್ಟರು ಎಂಬದನ್ನು ತಿಳಿ[...]
ಕೊಳ್ಳಲು ಗುಪ್ತಚಾರಳೆಂದು ನಾದಿನಿಯನ[...]
ಅವರಿಬ್ಬರಿಗೆ ಬಾಲವಾಗಿ ಜೋಡಿಸಿದ[...]
ಅವರ ಅತ್ತೆ.

ಈ ಮೂವರನ್ನು ಸ್ವಾಗತಿಸಲು ಗಿರಿ[...]
ಬಾಯಿಯವರು ಶಂಕರರಾಯರ ಪತ್ರಹೋ[...]
ದಿನದಿಂದಲೇ ಸಿದ್ಧತೆ ನಡೆಸಿದ್ದರು. ಇ[...]
ಅಲ್ಲ, ಗಿರಿಜಾಬಾಯಿಯವರ ಅಳಿಯ[...]
ಕ್ಕಾಗಿ ಆ ಓಣಿಯವರ ಮೇಲೆಲ್ಲಾ ಕೆಲಸ[...]
ಭಾರ ಬಿದ್ದಿತು. ಯಾರು ಹಪ್ಪಳ, ಯಾ[...]
ಶಾವಿಗೆ, ಯಾರು ಸಂಡಿಗೆ, ಯಾರು ಫರಾ[...]
ಸಾಮಾನುಗಳನ್ನು ಮಾಡಿಕೊಡಲು ದಿನಾ[...]
ಗಿರಿಜಾಬಾಯಿಯವರ ಮನೆಯಲ್ಲಿ ಕೂ[...]
ತ್ತಿದ್ದರು. ಗಿರಿಜಾಬಾಯಿಯವರು ಅದ[...]
ಪ್ರತಿಫಲವಾಗಿ "ತಮ್ಮ ಮಗಳ ಹಾಗು ತ[...]
ಅಳಿಯನ ರುಚಿ—ತಾವು ಲಗ್ನ ಹಾ[...]
ಅಳಿಯತನ ಮಾಡುವ ರೀತಿ—ಇತರ[...]
ಮಾಡುವ ರೀತಿ, ಮುಂತಾದವುಗಳನ್ನು[...]
ಪದಾರ್ಥಗಳನ್ನು ಮಾಡುವದು ಮುಗಿದ[...]
ತಮ್ಮ ಕಥೆ ಮುಗಿಯದು" ಎಂಬ ಶೈಲಿಯ[...]
ಹೇಳುತ್ತಿದ್ದರು. ಉಳಿದವರೆಲ್ಲ ಅದೊಂ[...]
ಬಿಡಲಾರದ ಕರ್ಮವೆಂದು ಅವರು ಹೆ[...]
ದ್ದನ್ನು ಕೇಳುತ್ತಿದ್ದರು.

* * *

ಇಷ್ಟೊಂದು ಸಂಭ್ರಮದ ಸೊಗಸನ್ನು ಸ[...]
ಯಲು ಮಗಳು ಅಳಿಯ ಹಾಗೂ ಅ[...]
ತಂಗಿ ಈ ಮೂವರು ಶಂಕರರಾಯರಲ್ಲಿಗೆ ಆ[...]
ಮಿಸಿದರು. ಸಮ್ರಾಟ ಅಶೋಕ, ಅಲೆಕ್ಸಾ[...]

ಹರ ನೆಪೋಲಿಯನ ಮುಂತಾದ ಜಗತ್ತನ್ನೆ ಗೆದ್ದ ಚಕ್ರವರ್ತಿಗಳು ತಮಗಿಂತಲೂ ಅಳಿಯನ ಠೀವಿಯು ಒಂದು ' ತೂಕ ಹೆಚ್ಚಾಗಿದೆಯಲ್ಲ ಎಂದು ಸ್ವರ್ಗದಿಂದಲೇ ನೋಡುತ್ತಿದ್ದರು. ಇಂದ್ರನು ಕೂಡ ಅಳಿಯನಿಗಿಂತಲೂ ತಾನು ಮಾನಸನ್ಮಾನ ಸ್ವೀಕರಿಸುವದರಲ್ಲಿ ಕಡಿಮೆಯಾದೆನೆಲ್ಲಾ ಎಂದು ಹಳಹಳಿಸುತ್ತಿರಬೇಕು.

ಶಂಕರರಾಯರು ಎಲ್ಲರಗಿಂತ ಹೆಚ್ಚು ಸಂಭ್ರಮ ತೋರಿಸುತ್ತಿದ್ದರು. ಅಳಿಯಂದಿರನ್ನು ತಮ್ಮ ಆಫೀಸಿನ ಅತ್ಯುನ್ನತಾಧಿಕಾರಿಗಿಂತಲೂ ಹೆಚ್ಚಾಗಿ ಗೌರವಿಸತೊಡಗಿದರು. ಅಳಿಯದೇವರಿಗೆ ಅದನ್ನು ನೋಡಿ ಅಶ್ಚರ್ಯವಾದರೂ ಲಗ್ನದಲ್ಲಿ ತಾವು ತೋರಿಸಿದ ಪರಾಕ್ರಮದಿಂದ ಮಾವಂದಿರು ನಿಜವಾಗಿಯೇ ಮೆತ್ತಗಾಗಿದ್ದರೆ ಅಡ್ಡಿ ಇಲ್ಲ ಎಂದು ಭಾವಿಸಿದರು. ಗಿರಿಜಾಬಾಯಿಯವರಿಗೂ ಒಮ್ಮೊಮ್ಮೆ ಆಶ್ಚರ್ಯವೆನಿಸಿದರೂ ತಮ್ಮ ಪ್ರಭಾವದಿಂದ ಹಾಗೆ ಮಾಡುತ್ತಿದ್ದಾರೆಂದು ತಾವೇ ಅದಕ್ಕೆ ಕಾರಣರೆಂದು ಭಾವಿಸಿದರು. ಆದರೆ ತಾವು ಹಾಗೆ ಏಕೆ ವರ್ತಿಸಬೇಕಾಯಿತೆಂಬುದು ಶಂಕರರಾಯರಿಗೊಬ್ಬರಿಗೆ ಗೊತ್ತು.

ಶಂಕರರಾಯರ ಬೇಗ— ಅಳಿಯನ ತಂದೆ ಮಗನ ಜೊತೆಗೆ ಶಂಕರರಾಯರ ಹೆಸರಿಗೆ ಒಂದು ಪತ್ರ ಬರೆದು "ನಿಮ್ಮ ಅಳಿಯನು ಅಳಿಯತನಕ್ಕೆ ಬರುತ್ತಿರಲಿಲ್ಲ. ನಾನೇ ನಿಮ್ಮ ಮನಸ್ಸು ನೋಯಿಸಬಾರದೆಂದು ಅವರನ್ನು ಒತ್ತಾಯಪಡಿಸಿ ಕಳಿಸಬೇಕಾಯಿತು. ಆದರೆ ಅದಕ್ಕಾಗಿ ಅವರು ತನಗೊಂದು ರೇಡಿಯೊ ಹಾಗೂ ಒಂದು ಬಂಗಾರದ ಚೈನು ( ಒಂದೂವರೆ ತೊಲೀದು ) ನೀವು ಕೊಡಬೇಕು ಅಂದರೆ ತಾನು ಹೋಗುವೆನು ಎಂದು ಹೇಳಿದನು. ಅದಕ್ಕಾಗಿ ಅವನ ಇಚ್ಛೆಯನ್ನು ತಿಳಿಸುವದಕ್ಕಾಗಿ ನಾನು ಈ ಪತ್ರ ಬರೆಯಬೇಕಾಯಿತು. ಅಳಿಯತನದಲ್ಲಿ ಇಂಥ ಚಿಕ್ಕಪುಟ್ಟ ಆಹೇರುಗಳನ್ನು ಅಳಿಯನಿಗೆ ಮಾಡುವದು ಸಂಪ್ರದಾಯ. ತಾವು ಅದನ್ನಿಟ್ಟುಕೊಂಡಿರಬಹುದು. ಆದರೆ ಅವನ ಇಚ್ಛೆಯು ತಿಳಿದರೆ ಅದರಂತೆ ಮಾಡಲು ನಿಮಗೆ ಹೆಚ್ಚು ಸಹಾಯವಾಗಬಹುದು"— ಎಂದು ತಿಳಿಸಿದರು.

ಶಂಕರರಾಯರು ಕೂಡಲೇ ಅದಕ್ಕೆ ಒಂದು ಪತ್ರ ಬರೆದು "ಅಳಿಯಂದಿರನ್ನು ತಾವು ಒಲಿಸಿ ಕಳಿಸಿದ್ದಕ್ಕಾಗಿ ಅನೇಕ ಧನ್ಯವಾದಗಳು. ಇಲ್ಲದಿದ್ದರೆ ನಮ್ಮೆಲ್ಲರಿಗೆ ಬಹಳ ಅಸಮಾಧಾನವಾಗುತ್ತಿತ್ತು. ಬಂಗಾರದ ಚೇನನ್ನೂ ಇಲ್ಲಿಯೇ ಮಾಡಿಸಿಕೊಡುತ್ತೇನೆ. ಆದರೆ ರೇಡಿಯೋ ಸೆಟ್ಟು ಇಂಥ ಚಿಕ್ಕ ಊರಲ್ಲಿ ದೊರೆಯುವದಿಲ್ಲ. ನಾನೇ ಅವರ ಜೊತೆಗೆ ನಿಮ್ಮ ಊರಿಗೆ ಬಂದು ಒಂದು ರೇಡಿಯೋ ಸೆಟ್ಟನ್ನು ಸಂತೋಷದಿಂದಕೊಂಡು ಕೊಡುತ್ತೇನೆ. ನಿಮ್ಮ ಆರೋಗ್ಯದ ಬಗ್ಗೆ ಮೇಲಿಂದ ಮೇಲೆ ಬರೆಯುತ್ತಿರಬೇಕು."

ಇತ್ಯಾದಿ ಎಂದು ಉತ್ತರ ಹಾಕಿದ್ದರು.

ಪ್ರತಿಸದೆ ಆದ ಮರುದಿನ ಶಂಕರರಾಯರು ಅಳಿಯಂದಿರನ್ನು ಏಕಾಂತದಲ್ಲಿ ಭೆಟ್ಟಿಯಾಗಿ "ನಿಮ್ಮ ಕೆಲಸದ ಬಗ್ಗೆ ಏನಾಯಿತು. ಎಲ್ಲಿಯಾದರೂ ಪ್ರಯತ್ನ ನಡೆದಿದೆಯೋ" ಎಂದು ಕೇಳಿದರು.

ಆ ಪ್ರಶ್ನೆಯು ಅಳಿಯಂದಿರ ಮರ್ಮಸ್ಥಳಕ್ಕೆ ತಾಕಿತು. ಒಮ್ಮೆಲೆ ಅವರ ಮೋರೆಯು ಚಿಕ್ಕದಾಗಿ ಆಕಾಶದಿಂದ ಪಾತಾಳಕ್ಕೆ ಬಿದ್ದಷ್ಟು ಕಹಿಯಾಯಿತು. "ಈ ಪ್ರಶ್ನೆಯನ್ನು ಕೇಳಲು ಇವನಿಗೇನು ಅಧಿಕಾರ" ಎಂದು ಅವರಿಗೆ ಅನಿಸಿದರೂ—ಸುತುಮುತ್ತ ಯಾರೂ ಇಲ್ಲದಾಗ ಅದನ್ನು ಕೇಳಿದಕ್ಕಾಗಿ ಅಷ್ಟು ಆಕ್ಷೇಪ ತಕ್ಕೊಳ್ಳಲಿಲ್ಲ. ಇಲ್ಲದಿದ್ದರೆ ತನ್ನನ್ನು ಅಪಮಾನಗೊಳಿಸುವದಕ್ಕಾಗಿ ಹಾಗೇ ಕೇಳಿದರೆಂಬ ಆರೋಪ ಹೊರಿಸಿ ಕೂಡಲೆ ಹೆಂಡತಿಯೊಡನೆ ಹೊರಡುವ ಅಂಜಿಕೆ ತೋರಿಸುತ್ತಿದ್ದರು. ಒಂದೆರಡು ಕ್ಷಣ ತಡೆದು 'ಇನ್ನೂ ಎಲ್ಲಿ ಸಿಕ್ಕಿಲ್ಲ' ಎಂದು ಮಾವನ ಕಡೆಗೆ ನೇರವಾಗಿ ನೋಡದೆ ಉತ್ತರ ಕೊಟ್ಟರು.

"ನಮ್ಮ ಆಫೀಸಿನಲ್ಲಿ ಒಂದು ಜಾಗೆ ಖಾಲಿ ಅದೆ. ಕೆಲಸವೇನೂ ಚಿಕ್ಕದು. ನಿಮ್ಮ ಒಪ್ಪಿಗೆ ಇದ್ದಾಳೆ ನಾನು ಪ್ರಯತ್ನಮಾಡುವೆ" ಎಂದು ಶಂಕರರಾಯರು ತಮ್ಮ ಯೋಜನೆಯನ್ನು ಉದ್ಘಾಟಿಸಿದರು.

ಅಳಿಯಂದಿರಗೆ ಒಮ್ಮೆಲೆ ಏನು ಹೇಳಬೇಕೊ ತೋಚದಾಯಿತು. ಮಾವನವರಿಂದ ಈ ಸೂಚನೆಯನ್ನು ಅವರು ಎಣಿಸಿರಲಿಲ್ಲ. ಹೇಗಾದರೂ ಮಾಡಿ ಒಂದು ಕೆಲಸವನ್ನು ಸಂಪಾದಿಸಿಕೊಂಡು ನಾಲ್ಕು ಜನರಲ್ಲಿ ತಾನೂ ಒಬ್ಬ ಗಣ್ಯಗೃಹಸ್ಥನೆಂದು ಎನಿಸಿಕೊಳ್ಳಬೇಕೆಂದು ಅವರ ಹಂಬಲ. ಆದರೆ ಕೂಡಲೇ ಒಪ್ಪಿಕೊಂಡರೆ ತನ್ನ ಅಂತಸ್ತಿಗೆ ಬಾಧೆ ಬರಬಹುದೆಂದು "ತಂದೆಯವರನ್ನು ಕೇಳಿ ತಿಳಿಸುತ್ತೇನೆ" ಎಂದು ಕನ್ಯಾ ಪಾಸ ಬಿದ್ದ ವರನು ಉತ್ತರಕೊಡುವಂತೆ ಹೇಳಿದರು. ಜನರ ಹಾವಭಾವಗಳಿಂದಲೇ ಅವರ ಗುಟ್ಟನ್ನು ಅರಿಯಬಲ್ಲ ಶಂಕರರಾಯರು "ಆಗಲಿ ನಾನೂ ಅವರಿಗೆ ಬರೆದು ಕೇಳುತ್ತೇನೆ" ಎಂದು ಹೇಳಿದರು.

ಅವರ ತಂದೆಗೆ ಬರೆದ ಪತ್ರದಲ್ಲಿ ಶಂಕರರಾಯರು ಅಳಿಯನಿಗೆ ತಮ್ಮ ಆಫೀಸಿನಲ್ಲಿಯೆ ಕೆಲಸ ದೊರೆಯುವ ಬಗ್ಗೆ ಬರೆದುದಲ್ಲದೆ "ನನಗೂ ಗಂಡುಮಕ್ಕಳು ಯಾರು ಇಲ್ಲ. ನೀವು ಒಪ್ಪಿದರೆ ನಿಮ್ಮ ಮಗನು ನನಗೆ ಅಳಿಯನೂ ಮಗನೂ ಕೂಡಿಯೇ ಆಗಬಲ್ಲರು" ಎಂದು ಸೂಕ್ಷ್ಮವಾಗಿ ಬರೆದಿದ್ದರು.

ಶಂಕರರಾಯರಿಗೆ ಬರೇ ಐದು ಹೆಣ್ಣು ಮಕ್ಕಳಿದ್ದುದರಿಂದ ಅವರ ತರುವಾಯ ಅವರ ಆಸ್ತಿ ಯಾರಿಗೆ ಹೋಗಬಹುದು ಎಂಬುದಕ್ಕೆ ಉಳಿದ ಬೀಗರಿಗಿಂತ ಈ ಮೂರನೇ ಬೀಗರು ಹೆಚ್ಚು ತಲೆಕೆಡಿಸಿಕೊಂಡಿದ್ದರು. ಈಗ ಕುರುಡನು ಬಯಸಿದ ಕಣ್ಣುಗಳಂತೆ ಶಂಕರರಾಯರು ತಾವಾಗಿಯೆ ಅಳಿಯನು ಮಗನಾಗಬೇಕೆಂದು ಬರೆದಿದ್ದರು. ತಾರಿನಿಂದ ತಮ್ಮ ಒಪ್ಪಿಗೆಯನ್ನು ತಿಳಿಸುವಷ್ಟು ಅವರು ಆತುರರಾಗಿದ್ದರೂ ತಮ್ಮ ಬೀಗತನ ನೆನಪಾಗಿ ಬಿಗುಮಾನದಿಂದ "ನಿಮ್ಮ ಪತ್ರ ಮುಟ್ಟಿತು. ಅಳಿಯನನ್ನು ಮಗನಂತೆ ನೋಡಿಕೊಳ್ಳಲು ನಮ್ಮ ಒಪ್ಪಿಗೆ ಇದೆ. ಅವನ ಯೋಗಕ್ಷೇಮ ನಿಮಗೆ ಸೇರಿದ್ದು. ನಿಮ್ಮ ಆಫೀಸಿನಲ್ಲಿ ಕೆಲಸ ಹಿಡಿಯಲು ನಮ್ಮ ಅಭ್ಯಂತರವಿಲ್ಲ. ಮುಪ್ಪಿನ ಕಾಲದಲ್ಲಿ ಅವನು ನಮಗೆ ಸಹಾಯ ಮಾಡಬೇಕೆಂದು ನಾವು ಅಪೇಕ್ಷಿಸುತ್ತೇವೆ. ಇತ್ಯಾದಿ" ಎಂದು ಉತ್ತರ ಕಳಿಸಿದ್ದರು.

ಇತ್ತ ಶಂಕರರಾಯರ ಮಗಳೂ ತಂದೆಯ ಮನೆಯಲ್ಲಿ ಚಿರಕಾಲ ಇರುವ ಸಂಧಿಯು ಬಂದುದರಿಂದ ತನ್ನ ಪ್ರಭಾವವನ್ನು ಬೀರಿ ಅಳಿಯಂದಿರನ್ನು ಮತ್ತಷ್ಟು ಮೆತ್ತಗೆ ಮಾಡಿಬಿಟ್ಟಿದ್ದಳು. ಗಿರಿಜಾಬಾಯಿಯವರ ಸಂತೋಷವಂತೂ ಹಿಡಿಸಲಾರದಷ್ಟಾಗಿತ್ತು, ಮತ್ತಿಷ್ಟು ಪಕ್ವಾನ್ನ ಫರಾಳಗಳನ್ನು ಮಾಡಿ ಅಳಿಯಂದಿರಿಗೆ ಕೊಟ್ಟು ಅದರ ಗುಂಗಿನಲ್ಲಿ ಇಹಲೋಕವನ್ನೇ ಮರೆಯುವಂತೆ ಮಾಡಿಬಿಟ್ಟಿದ್ದರು. ಶಂಕರರಾಯರೂ ಅದಕ್ಕೆ ತಕ್ಕ ಉತ್ತೇಜನ ಕೊಟ್ಟಿದ್ದರು.

ಶಂಕರರಾಯರು ಈ ಸೂಚನೆಯಪ್ರಸ್ತಾಪ ಮಾಡುವ ಮೊದಲೇ ತಮ್ಮ ಆಫೀಸಿನಲ್ಲಿ ಮೇಲಿನವರಿಗೆ ಹೇಳಿಕೊಂಡು ಅಳಿಯಂದಿರ ಕೆಲಸಕ್ಕೆ ತಕ್ಕ ವ್ಯವಸ್ಥೆಮಾಡಿಟ್ಟಿದ್ದರು.

ಅಂತೂ ಶಂಕರರಾಯರ ಅಳಿಯಂದರಿಗೆ ಶಂಕರರಾಯರ ಊರಲ್ಲಿ ಅವರ ಆಫೀಸಿನಲ್ಲಿಯೇ ಕೆಲಸ ಸಿಕ್ಕಿತು. ಇರುವದು ಕೂಡ ಅವರ ಮಗನಾಗಿ ಅವರ ಮನೆಯಲ್ಲಿಯೇ ಎಲ್ಲರಿಗೂ ಸಂತೋಷ. ಆದರೆ ಎಲ್ಲರಿಗಿಂತ ಹೆಚ್ಚು ಸಂತೋಷ ಶಂಕರರಾಯರಿಗೆ.

* * *

ಒಂದು ವರ್ಷ ಕಳೆಯಿತು. ಅಳಿಯಂದಿರೀಗ ಸಾದ ಎತ್ತಾಗಿ ಶಂಕರರಾಯರ ಸಂಸಾರ ರಥದ ಇನ್ನೊಂದು ನೊಗವನ್ನು ಯಥಾ ಶಕ್ತಿ ಹೊತ್ತು ಎಳೆಯುತ್ತಿದ್ದಾರೆ. ಮಗನು ಮುಪ್ಪಿನಕಾಲದಲ್ಲಿ ಕೈಬಿಟ್ಟ. ಎಲ್ಲ ಆ ಶಂಕರರಾಯನ ಆಟ ಎಂದು ಅಳಿಯನ ತಂದೆ ಕಂಡವರ ಮುಂದೆ ತೋಡಿಕೊಳ್ಳುತ್ತಿದ್ದಾರೆ.

"ಅಳಿಯನು ಬಂದು ನಿಮಗೆ ಮುಪ್ಪಿನ ಕಾಲದಲ್ಲಿ ಮಗನಾಗಿನೋಡಿಕೊಳ್ಳುತ್ತಿದ್ದಾನೆ. ನೀವು ಬಹಳ ಸುದೈವಿಗಳು" ಎಂದು ಶಂಕರರಾಯರ ಮಿತ್ರರು ಅವರಿಗೆ ಹೇಳಿದರೆ "ಎಲ್ಲವೂ ಆ ದೇವರ ಲೀಲೆ" ಎಂದು ಅವರು ಹೇಳುತ್ತಾರೆ.

# ನಾಲ್ಕನೇ ವರ್ಷದಲ್ಲಿ ಕಾಲಿಡುತ್ತಿರುವ ಕರ್ನಾಟಕ

ಕರ್ನಾಟಕ ಏಕೀಕರಣದ ನಂತರ ಕನ್ನಡಿಗರ ಆಶೆ-ಆಕಾಂಕ್ಷೆಗಳು ಈಡೇರಿ ಕನ್ನಡದ, ಕನ್ನಡಿಗರ ಅಭಿವೃದ್ಧಿ ಸುಲಭವಾಗುವದೆಂದು ಜನತೆ ನಿರೀಕ್ಷಿಸಿತ್ತು. ಆದರೆ ಅವರ ನಿರೀಕ್ಷೆ ಸುಳ್ಳಾಗುವ ಸಂದರ್ಭವಿದೆ. 'ಕರ್ನಾಟಕ' ತಲೆಯೆತ್ತದೇ ಬೃಹನ್ಮೈಸೂರು ತಲೆಯೆತ್ತಿದ್ದರಿಂದ ಅಪೇಕ್ಷಿತ ಏಕೀಕರಣ ಸಾಧ್ಯವಾಗುತ್ತಿಲ್ಲ. ಈ ಎಲ್ಲ ಅಂಶಗಳನ್ನು ಲೇಖಕರು ಇಲ್ಲಿ ಸೋದಾಹರಣವಾಗಿ ನಿರೂಪಿಸಿರುವರು . . . . .

೧೯೫೬ನೇ ನವಂಬರ ಒಂದು ಕರ್ನಾಟಕದ ಇತಿಹಾಸದಲ್ಲಿ ಚಿರಸ್ಮರಣೀಯವಾದ ದಿನವು. ಭಾರತದಲ್ಲಿ ಭಾಷಾನ್ವಯ ರಾಜ್ಯಗಳ ರಚನೆಯಾಗಿ ಕರ್ನಾಟಕ ಏಕೀಕರಣದ ಕನಸು ನನಸಾದ ದಿನವದು. ಹೊಸ ರಾಜ್ಯವು ನಿರ್ಮಾಣವಾಗಿ ಇಂದಿಗೆ ಮೂರು ವರುಷಗಳಾದವು. ಆದರೆ ರಾಜ್ಯರಚನೆಯ ಕಾಲಕ್ಕೆ ಕನ್ನಡ ಜನತೆಯಲ್ಲಿ ಕಂಡುಬರುತ್ತಿದ್ದ ಹುರುಪು ಹುಮ್ಮಸ್ಸಾಗಲಿ ಆನಂದೋತ್ಸಾಹಗಳಾಗಲಿ ಸಂತೋಷವಾಗಲಿ ಇಂದು ಅಷ್ಟೊಂದು ಕಂಡುಬರುತ್ತಿರುವದಿಲ್ಲ. ತದ್ವಿರುದ್ಧ ಒಂದು ಬಗೆಯ ನಿರಾಶಾಭಾವನೆ ಇಂದು ಜನರ ಮನಸ್ಸನ್ನು ಆವರಿಸಿದಂತೆ ಭಾಸವಾಗುವದು. ಇದಕ್ಕೇನು ಕಾರಣವಿರಬಹುದು ! ನಿಜವಾಗಿಯೂ ಇದು ಈ ಪ್ರಸಂಗದಲ್ಲಿ ತುಂಬ ಗಂಭೀರ ರೀತಿಯಲ್ಲಿ ಪರ್ಯಾಲೋಚಿಸಬೇಕಾದ ಸಂಗತಿಯಾಗಿರುವದು.

ಕರ್ನಾಟಕ ಏಕೀಕರಣ ಆಂದೋಲನದ ಪುರಸ್ಕರ್ತರು ಕರ್ನಾಟಕರಾಜ್ಯದ ಸುಂದರವಾದ ಚಿತ್ರವೊಂದನ್ನು ಜನತೆಯ ಮುಂದೆ ಇರಿಸಿದ್ದರು. ಇಂತಹ ರಾಜ್ಯ ರಚಿತವಾದರೆ ಕನ್ನಡಿಗರ ಸಾಂಸ್ಕೃತಿಕ ಆರ್ಥಿಕ ಸಾಮಾಜಿಕ ಹೀಗೆ ಸಾರ್ವಾಂಗಿಕ ಪ್ರಗತಿಯನ್ನು ಸಾಧಿಸಲು ಸುಲಭಸಾಧ್ಯವಿದೆ. ಈಗ ಬೇರೆ ಬೇರೆ ರಾಜ್ಯಗಳಲ್ಲಿ ಹಂಚಿಹೋಗಿರುವ ಪ್ರದೇಶ ಒಂದುಗೂಡುವದರಿಂದ ಕನ್ನಡಿಗರ ಆಶೆ ಆಕಾಂಕ್ಷೆಗಳು ತೃಪ್ತಿಕರವಾಗಿ ಈಡೇರುವವು ಎಂಬ ಭಾವನೆ ಪ್ರತಿಯೊಬ್ಬ ಕನ್ನಡಿಗನ ಮನದಲ್ಲಿ ಮೂಡುವಂತೆ ಮಾಡುವಲ್ಲಿ ಇವರು ಸಮರ್ಥರಾಗಿದ್ದರು. ಅಂತೆಯೇ ರಾಜ್ಯ ಪುನರ್ಘಟನೆಯ ಕಾಯ್ದೆ ಜಾರಿಯಲ್ಲಿ ಬರುವ ಸಂದರ್ಭದಲ್ಲಿ, ತಮ್ಮ ಆಶೆ-ಆಕಾಂಕ್ಷೆಗಳನ್ನು ಈಡೇರಿಸುವ ರಾಜ್ಯ ಸರಕಾರವನ್ನು ತಾವು ಪಡೆದೆವೆಲ್ಲ ಎಂಬ ಧನ್ಯತೆಯ ಭಾವ ಕನ್ನಡಿಗರಲ್ಲಿದ್ದಿತು.

ಹೀಗೆ ಪುನರ್ಘಟಿತವಾದ ರಾಜ್ಯಕ್ಕೆ ಕರ್ನಾಟಕವೆಂದು ಹೆಸರು ಇರಿಸದೆ ಮೈಸೂರು ರಾಜ್ಯವೆಂಬ ಹೆಸರನ್ನೇ ಇರಿಸಲಾಯಿತು. ಏಕೀಕರಣದ ಗುರಿ ಸಾಧಿಸಿತಲ್ಲ, ಹೆಸರಿನಲ್ಲೇನಿದೆ ಎಂದು ರಾಜಕೀಯ ಧುರೀಣರು ನೊಂದ ಜನರಿಗೆ ಸಮಾಧಾನವನ್ನು ಹೇಳಿದರು. ಅಲ್ಲದೆ ಮೈಸೂರು ಸಂಸ್ಥಾನದಲ್ಲಿಯ ಕರ್ನಾಟಕ ಏಕೀಕರಣ ವಿರೋಧಿಗಳನ್ನು ಸಮಾಧಾನಪಡಿಸಲು ಮೈಸೂರು ರಾಜ್ಯವೆಂದು ಹೆಸರನ್ನೆ ಪುನರ್ಘಟಿತವಾದ ರಾಜ್ಯಕ್ಕೆ ಇರಿಸಿರುವದಾಗಿ ಕೊಟ್ಟ ವಿವರಣೆಯಿಂದ ಕರ್ನಾಟಕ ಏಕೀಕರಣವಾದಿಗಳು ಹೆಸರಿನ ಬಗ್ಗೆ ಆಗ್ರಹ ಹಿಡಿಯುವದು ಸಮಂಜಸವಾಗದೆಂದು ಸಮಾಧಾನ ತಾಳಿದರು.

## "ವಿಲಯನ ಹೊಂದಿದ ಪ್ರದೇಶಗಳು"

ಆದರೆ ಇದೇ ಇಂದಿನ ಪರಿಸ್ಥಿತಿಗೆ ಮುಖ್ಯತೊಂದರೆಯಾಗಿ ಪರಿಣಮಿಸಿರುವದು. ಮೈಸೂರೆಂಬ ಹೆಸರನ್ನು ಒಪ್ಪಿಕೊಂಡದ್ದರಿಂದ ಮೈಸೂರೇತರ ಪ್ರದೇಶಗಳು ವಿಲಯನ ಹೊಂದಿದ ಪ್ರದೇಶಗಳೆಂದು ಒಪ್ಪಿಕೊಂಡಂತಾಯ್ತು. ರಾಜ್ಯ ಪುನರ್ಘಟನೆಯಾದ ನಂತರ ಈ ಎಲ್ಲ ಪ್ರದೇಶಗಳಿಗೆ ವಿಲಯನ ಹೊಂದಿದ ಪ್ರದೇಶಗಳೆಂದು ಸರಕಾರಿ ಕಾಗದ ಪತ್ರಗಳಲ್ಲಿ ಉಲ್ಲೇಖಿಸುವದು ರೂಢವಾಗಿ ಮೈಸೂರು ರಾಜ್ಯದ ಪ್ರಜಾಕೋಟಿಯ ಭಾವನಾತ್ಮಕ ಏಕೀಕರಣಕ್ಕೆ ದೊಡ್ಡ ಆತಂಕವಾಗಿ ಪರಿಣಮಿಸಿತು ಇದು.

ಮೈಸೂರು ಸಂಸ್ಥಾನದ ಸರಕಾರದಲ್ಲಿದ್ದ ಅಧಿಕಾರಿಗಳು ಮೈಸೂರು ರಾಜ್ಯ ಸರಕಾರದ ಅಧಿಕಾರಿಗಳಾದರು. ಅವರು ತಮಗೆ ಗೊತ್ತಿದ್ದ ಮೈಸೂರು ಸಂಸ್ಥಾನ ಸರಕಾರದ ಆಡಳಿತ ಪದ್ಧತಿಯೇ ಉತ್ತಮವೆಂಬ ಭಾವನೆ ತಳೆದು ಮುಂಬಯಿ, ಮದ್ರಾಸ, ಹೈದರಾಬಾದ ರಾಜ್ಯಗಳಲ್ಲಿದ್ದ ಕನ್ನಡ ಪ್ರದೇಶಗಳಿಗೂ ಅದನ್ನು ಅನ್ವಯಿಸಿದರು. ಇದರಿಂದ ಇಡೀ ಕರ್ನಾಟಕದ ಜನತೆಗೆ ಒಪ್ಪಿತವಾಗುವಂಥ ಆಡಳಿತ ಪದ್ಧತಿಯನ್ನು ರೂಪಿಸುವ ಬದಲು ಹಳೆಯ ಮೈಸೂರು ಸಂಸ್ಥಾನದ ಆಡಳಿತ ಪದ್ಧತಿಯನ್ನು ಮುಂಬಯಿ, ಮದ್ರಾಸ, ಹೈದರಾಬಾದ ಕರ್ನಾಟಕ ಪ್ರದೇಶಗಳಮೇಲೆ ಅಲ್ಲಿಯ ಜನತೆಯ ಭಾವನೆಗಳನ್ನು ಅರಿತುಕೊಳ್ಳದೆ ಹೇರಲಾಯಿತು. ಮೈಸೂರು ಸಂಸ್ಥಾನದ ಕಾಯದೆ ಕಾನೂನುಗಳು ಮೈಸೂರು ರಾಜ್ಯದಲ್ಲಿಯ ಇನ್ನಿತರ ಪ್ರದೇಶಗಳಲ್ಲಿ ಜಾರಿಯಲ್ಲಿದ್ದ ಕಾನೂನುಗಳಿಗಿಂತ ಹೆಚ್ಚು ಸಮಂಜಸವೆಂಬ ರೀತಿಯಲ್ಲಿ ಕಾಯದೆ ಕಾನೂನುಗಳ ಸಮನ್ವಯದ ಪ್ರಶ್ನೆ ಬಂದಾಗ ರಾಜ್ಯ ಸರಕಾರವು ನಡೆದುಕೊಳ್ಳುವಂತಾಯಿತು. ಇದರ ಪರಿಣಾಮವಾಗಿ ಮೈಸೂರ ಸಂಸ್ಥಾನ ಪ್ರದೇಶದಲ್ಲಿಯ ಜನರಿಗೆ ತಮ್ಮ ಹಳೆ ಕಾಯ್ದೆ ಕಾನೂನುಗಳೇ ಉಳಿದು "ವಿಲಯನ ಹೊಂದಿದ ಪ್ರದೇಶ" ಗಳಿಗೆ ಸಾಧ್ಯವಿದ್ದಲ್ಲಿ ಅವುಗಳನ್ನೇ ಅನ್ವಯಿಸಲಾಯಿತು. ಒಂದೇ ಬಗೆಯ ಕಾಯದೆ ಕಾನೂನುಗಳಿಗೆ ಇಡೀ ರಾಜ್ಯದ ಪ್ರಜಾಕೋಟಿಯು ಒಳಪಟ್ಟರೆ ನಾವೆಲ್ಲ ಒಂದೇ ರಾಜ್ಯದ ಪ್ರಜೆಗಳು. ನಮ್ಮ ಹಿತಸಂಬಂಧಗಳು ರಾಜ್ಯರಚನೆಯಿಂದ ಒಂದೇ ಆಗಿರುವವು. ರಾಜ್ಯದ ಎಲ್ಲ ಪ್ರದೇಶಗಳಿಗೂ ಸರಕಾರದ ಆಡಳಿತ ವ್ಯವಸ್ಥೆಯು ಒಂದೇ ಆಗಿದ್ದು ಎಲ್ಲರಿಗೂ ಒಂದೇ ಬಗೆಯ ಸೌಲಭ್ಯ ಸೌಕರ್ಯಗಳು ಲಭಿಸುವವು ಎಂಬ ತಿಳಿವಳಿಕೆ ಜನಸಾಮಾನ್ಯದಲ್ಲಿ ಉಂಟಾಗಬಹುದಾಗಿತ್ತು. ಮೈಸೂರು ರಾಜ್ಯದಲ್ಲಿ "ವಿಲಯನ ಹೊಂದಿದ ಪ್ರದೇಶ"ಗಳಿಗೆ ಹಳೇಮೈಸೂರ ರಾಜ್ಯದ ಕಾಯದೆಗಳಿಂದ ಅಲ್ಪಸ್ವಲ್ಪ ಲಾಭವಾಗುವಂಥ ಯಾವ ಕಾಯದೆಗಳನ್ನೂ ಅನ್ವಯಿಸಲಿಲ್ಲ. ಆದರೆ ಪ್ರತಿಕೂಲವೆನಿಸುವಂಥ ಕಾಯದೆ ಕಾನೂನುಗಳನ್ನು ಆಡಳಿತ ಪದ್ಧತಿಯನ್ನು ಮಾತ್ರ ಹೇರದೆ ಬಿಡಲಿಲ್ಲ.

## ಕೆಲವು ಉದಾಹರಣೆಗಳು

ಈ ಮಾತನ್ನು ಸ್ಪಷ್ಟಪಡಿಸಲು ಒಂದೆರಡು ಉದಾಹರಣೆಗಳನ್ನು ಕೊಡುವದು ಅಗತ್ಯವೆನಿಸುವದು. ಹಳೆ ಮೈಸೂರು ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಕರ ಸೇವಾನಿವೃತ್ತಿಯ ವಯಸ್ಸು ೫೮ ಇದ್ದು ಅದನ್ನು ವಿಲಯನ ಹೊಂದಿದ ಪ್ರದೇಶಗಳಲ್ಲಿಯ ಶಿಕ್ಷಕರಿಗೆ ಅನ್ವಯಿಸಲಿಲ್ಲ. ಆದರೆ ವಿಲಯನ ಹೊಂದಿದ ಶಿಕ್ಷಕರ ಸಂಬಳ ಭತ್ತೆ ಹೆಚ್ಚಿಗಿರುವದೆಂದು ಹಳೇ ಮೈಸೂರು ರಾಜ್ಯದಲ್ಲಿಯ ಶಿಕ್ಷಕರ

ಲೇಖಕರು :
ಶ್ರೀ. ಆರ್. ಬಿ. ಕುಲಕರ್ಣಿ,
ಬೆಂಗಳೂರು

ಸಂಬಳ ಭತ್ತೆ ಇವುಗಳನ್ನು ಏರಿಸಲಾಯಿತು. ರಾಜ್ಯದ ಎಲ್ಲ ಪ್ರದೇಶಗಳ ಶಿಕ್ಷಕರಿಗೂ ಒಂದೇ ಸಂಬಳ ಪ್ರಮಾಣವಿರುವದು ನ್ಯಾಯ ಸಮ್ಮತವಾಗಿರುವಂತೆ ಸೇವಾ ನಿವೃತ್ತಿಯ ವಯೋಮರ್ಯಾದೆಯು ಒಂದೇ ಆಗಿರಬೇಕಾದುದು ನ್ಯಾಯಸಮ್ಮತ.

ಸರಕಾರಿ ನೌಕರಿಗೆ ಸಿಪಾಯಿಯಿಂದ ಗ್ಯಾಜಿಟೆಟ್ ಹುದ್ದೆಯ ಎಲ್ಲ ನೇಮಕಗಳನ್ನು ಪಬ್ಲಿಕ್ ಸರ್ವೀಸ ಕಮೀಶನ್ನಿನ ಮೂಲಕ ಮಾಡತಕ್ಕದ್ದೆಂಬ ಹಳೇ ಮೈಸೂರ ಸರಕಾರದಲ್ಲಿದ್ದ ಪದ್ಧತಿಯನ್ನು ವಿಲಯನ ಹೊಂದಿದ ಪ್ರದೇಶಗಳಿಗೆ ತಟ್ಟನೆ ಅನ್ವಯಿಸಲಾಯಿತು. ಇದರಿಂದ ಮುಂಬಯಿ ಸರಕಾರದಲ್ಲಿ ಆಯಾ ಖಾತೆಯಲ್ಲಿ ಅಗತ್ಯವಿದ್ದ ಸಿಬ್ಬಂದಿಯನ್ನು ನೇಮಿಸಿಕೊಳ್ಳುವ ಬಗ್ಗೆ ಇದ್ದ ಅಧಿಕಾರವು ನಷ್ಟವಾಗಿ ಮೈಸೂರ ಸಂಸ್ಥಾನದಲ್ಲಿದ್ದ ಕೇಂದ್ರೀಕೃತ ವ್ಯವಸ್ಥೆಯು ಜಾರಿಯಲ್ಲಿ ಬಂದಿತು. ಪಟ್ಟೇವಾಲಾ, ಪೋಲೀಸ ಸಿಪಾಯಿ, ಜೇಲೀಘ ಇತ್ಯಾದಿ ನಾಲ್ಕನೇ ವರ್ಗದ ನೌಕರಿಗಾಗಿ ಅರ್ಜಿಕೊಡುವವರು ಪಬ್ಲಿಕ್ ಸರ್ವೀಸ ಕಮಿಶನ್ನಿಗೆ ಅರ್ಜಿಕೊಟ್ಟು ಅವರು ಸಂದರ್ಶನಕ್ಕೆ ಕರೆಸಿದಾಗ ಕೈಖರ್ಚಿನಿಂದ ಬೆಂಗಳೂರವರೆಗೆ ಹೋಗಿ ಅಲ್ಲಿ ಸಂದರ್ಶನ ಸರತಿ ಬರುವ ದಿನದವರೆಗೆ ನಿಂತು ಸಂದರ್ಶನದ ವಿಧಿ ಮುಗಿಸಿಕೊಂಡು ಬರುವದು ಅನಿವಾರ್ಯವಾಯಿತು. ಈ ಬಗೆಯ ವ್ಯವಸ್ಥೆಯು ಬೆಂಗಳೂರು ಮತ್ತು ಅದರ ಸಮೀಪದ ಸ್ಥಳಗಳಲ್ಲಿದ್ದವರಿಗೆ ನಾಲ್ಕನೇ ವರ್ಗದ ನೌಕರಿಯ ಸ್ಥಳಗಳಿಗಾಗಿ ಅರ್ಜಿಕೊಡಲು ಹೆಚ್ಚು ಅನುಕೂಲವಾಗಿ ಪರಿಣಮಿಸುವದು ಸ್ವಾಭಾವಿಕ. ಅದೇ ಕರ್ನಾಟಕ ರಾಜ್ಯ ರಚನೆಯಾಗಿದ್ದರೆ ಅಲ್ಲಿ ಮೂಲರಾಜ್ಯ ಹಾಗೂ ವಿಲೀನ ಪ್ರದೇಶ (Parent state, intigrated areas) ಎಂಬ ತಾರತಮ್ಯ ಭಾವನೆಗೆ ಅವಕಾಶವೇ ಉಂಟಾಗುತ್ತಿರಲಿಲ್ಲ.

ಹಳೇಮೈಸೂರು ರಾಜ್ಯದಲ್ಲಿ ಭೂಕಂದಾಯದ ದರ ಮುಂಬಯಿ ಕರ್ನಾಟಕ ಹೈದರಾಬಾದ ಕರ್ನಾಟಕ, ಮದ್ರಾಸ ಕರ್ನಾಟಕಗಳಲ್ಲಿದ್ದ ದರಗಳ ಮಾನದಿಂದ ತೀರ ಕಡಿಮೆ. ಹಳೇ ಮೈಸೂರಿನಲ್ಲಿ ಪೈರಿನ ಆದಾಯದ ಮೇಲೆ ವ್ಯವಸಾಯ ವರಮಾನ ತೆರಿಗೆ (Agricultural Income Tax) ಹೇರಿ ಸರಕಾರವು ಭೂಕಂದಾಯದ ದರಗಳು ತೀರ ಕಡಿಮೆ ಇರುವದರಿಂದ ಆಗುವ ಹಾನಿಯನ್ನು ಭರತಿ ಮಾಡಿಕೊಂಡಿತು, ಹೊಸ ಮೈಸೂರರಾಜ್ಯ ರಚನೆಯಾದ ಮೇಲೆ ಮುಂಬಯಿ, ಹೈದರಾಬಾದ,ಕರ್ನಾಟಕ ಪ್ರದೇಶಗಳಿಗೆ ವ್ಯವಸಾಯ ವರಮಾನ ತೆರಿಗೆಯನ್ನು ಅನ್ವಯಿಸಲಾಯಿತು. ಆದರೆ ಕಂದಾಯ ಕಡಿಮೆಯಾಗಲಿಲ್ಲ. ಹೀಗಾಗಿ ಶೇಂಗಾ, ಹತ್ತಿ, ಕಬ್ಬು, ಮೆಣಸಿನಕಾಯಿ. ಅಡಿಕೆ ಮೊದಲಾದ ಬೆಳೆಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯುವ ಮುಂಬೈ ಕರ್ನಾಟಕದ ರೈತರ ಮೇಲೆ ಭಾರಿ ಆರ್ಥಿಕ ಭಾರ ಬಿದ್ದಿತು.

### ಹಳೇ ಮೈಸೂರೇತರರ ಸಂಕಷ್ಟ

"ವಿಲಯನ ಪ್ರದೇಶ"ವೆಂದು ಹೇಳಿ ಹಳೇ ಮೈಸೂರಿನಲ್ಲಿದ್ದ ಒಂದೊಂದೇ ಕಾಯದೆಗಳನ್ನು ಹೇರುವದರಿಂದ ಮೈಸೂರು ರಾಜ್ಯದಲ್ಲಿ ಸೇರಿದ ಪ್ರದೇಶಗಳ ಜನರಿಗೆ ತಮ್ಮನ್ನು ಮಲತಾಯಿ ಮಕ್ಕಳಂತೆ ಮೈಸೂರು ಸರಕಾರವು ನೋಡುವದೆಂಬ ಭಾವನೆಯುಂಟಾದರೆ ಆಶ್ಚರ್ಯವಲ್ಲ. "ವಿಲಯನ ಪ್ರದೇಶ" ಗಳಿಗೆ ಲಾಭವಾಗುವಂಥ ಕಾಯದೆ ಹಳೇ ಮೈಸೂರಿನಲ್ಲಿದ್ದರೆ ಅದನ್ನು ಅನ್ವಯಿಸದಿರುವದು ಈ ಬಗೆಯ ಭಾವನೆಗೆ ಪುಟಕೊಡುವಂತಿದೆ.

ಪಾನ ಪ್ರತಿಬಂಧ ಕಾಯದೆ, ಹೊಲಸಾಗುವಳಿ ಕಾಯದೆ, ರಸ್ತೆ ಸಾರಿಗೆ ರಾಷ್ಟ್ರೀಕರಣ ಧೋರಣ, ಮೊದಲಾದ ವಿಷಯಗಳಲ್ಲಿ ಮುಂಬಯಿ ಕರ್ನಾಟಕ, ಹೈದರಾಬಾದ ಕರ್ನಾಟಕ, ಮೈಸೂರು, ಕೊಡಗು, ಮದ್ರಾಸ ಕರ್ನಾಟಕ ಈ ಐದು ಪ್ರದೇಶಗಳಲ್ಲಿ ಪರಿಸ್ಥಿತಿ ಒಂದೇ ಆಗಿಲ್ಲ. ಒಂದೊಂದು ಪ್ರದೇಶದಲ್ಲಿ ಒಂದೊಂದು ವಿಧದ ಪರಿಸ್ಥಿತಿ ! ರಾಜ್ಯರಚನೆಯಾಗಿ ಮೂರು ವರ್ಷಗಳು ಗತಿಸಿದರೂ ಮಹತ್ವದ ಈ ಮೂರು ವಿಷಯಗಳಲ್ಲಿ ಇಡೀ ರಾಜ್ಯಕ್ಕೆ ಒಂದೇ ವಿಧವಾದ ಕಾನೂನುಗಳು ಅನ್ವಯಿಸುವಂತೆ ಮಾಡಲು ಸರಕಾರವು ಸಮರ್ಥವಾಗಿಲ್ಲ.

ಒಂದೇ ಆಡಳಿತಕ್ಕೆ ಒಳಪಟ್ಟ ಐದು ಪ್ರದೇಶಗಳಲ್ಲಿ ಒಂದೇ ವಿಧವಾದ ಕಾಯದೆಗಳಿಲ್ಲ. ಅದೇ ರೀತಿ ಸಮಾಜಕಲ್ಯಾಣ ಸಾಧನೆಗೆ ಪೋಷಕವಾದ ಪಾನಪ್ರತಿಬಂಧದಂಥ ಧೋರಣದ ಲಾಭ ಎಲ್ಲ ಪ್ರದೇಶಗಳಲ್ಲಿಯ ಜನರಿಗೆ ಸಿಗುವಂತೆ ನೋಡಿಕೊಳ್ಳುತ್ತಿಲ್ಲ. ಇದನ್ನು ನೋಡಿದರೆ ಈ ಐದೂ ಪ್ರದೇಶಗಳು ಆಯಾ ಪ್ರದೇಶದಲ್ಲಿರುವ ಪ್ರತ್ಯೇಕ ಕಾಯಿದೆಗಳನ್ವಯ ಆಡಳಿತ ಸಾಗಿಸಲ್ಪಡುವ ಐದು ಪ್ರತ್ಯೇಕ ಘಟಕಗಳಾಗಿಯೇ ಉಳಿದಿರುವವೆಂಬ ಮಾತು ಸ್ಪಷ್ಟವಾಗುವದು.

### ಭಾವನಾತ್ಮಕ ಏಕೀಕರಣ

ಕನ್ನಡನಾಡಿನ ಎಲ್ಲ ಪ್ರದೇಶಗಳು ಒಂದೇ ಆಡಳಿತಕ್ಕೆ ಒಳಪಟ್ಟಿರಬೇಕೆಂದು ಪ್ರತಿಪಾದಿಸಿದ ಏಕೀಕರಣವಾದಿಗಳು ಭಿನ್ನ ಭಿನ್ನ ಕಾಯದೆಗಳು ಜಾರಿಯಲ್ಲಿರುವ ಪ್ರದೇಶಗಳಾಗಿ, ಒಂದು ರಾಜ್ಯದಲ್ಲಿ ಸೇರಿದ ಪ್ರದೇಶಗಳಾಗಿರಬೇಕೆಂದು ಕನಸುಮನಸಿನಲ್ಲಿಯೂ ಭಾವಿಸಿರಲಿಲ್ಲ. ನಕಾಶದಲ್ಲಿ ಒಂದು ಬಣ್ಣ ಬಳೆದು ಇಂಥ ಬಣ್ಣದ ಪ್ರದೇಶವೆಲ್ಲ ಇಂಥ ರಾಜ್ಯಕ್ಕೆ ಸೇರಿದ್ದು ಎಂದು ಕೆಲ ಪ್ರದೇಶಗಳ ರಾಜಕೀಯ ಏಕೀಕರಣ ಮಾಡಿ ತೋರಿಸುವದು ಸುಲಭ. ಆದರೆ ಆ ರಾಜ್ಯದ ಅಂಗವಾದ ಪ್ರದೇಶಗಳಲ್ಲಿ ವಾಸಿಸುವ ಜನರ ಮನಸ್ಸಿನಲ್ಲಿ ಇದು ನಮ್ಮ ರಾಜ್ಯ; ಈ ರಾಜ್ಯದ ಪ್ರಜೆಗಳಾದ ನಮ್ಮೆಲ್ಲರ ಹಿತಸಂಬಂಧ ಒಂದು; ರಾಜ್ಯದ ಭವಿತವ್ಯ ನಿರೂಪಿಸುವ ಹೊಣೆ ನಮ್ಮೆಲ್ಲರ ಮೇಲೆ ಸಮಾನವಾಗಿ ಇರು-

ವದು ಎಂಬ ಭಾವನೆ ಜಾಗ್ರತವಾಗಿ ಭಾವನಾತ್ಮಕ ಏಕೀಕರಣವಾಗಬೇಕು. ಭಾವನಾತ್ಮಕ ಏಕೀಕರಣವು ರಾಜಕೀಯ ಏಕೀಕರಣದಷ್ಟು ಸುಲಭವಲ್ಲ. ಕನ್ನಡ ಪ್ರದೇಶಗಳೆಲ್ಲ ಒಂದುಗೂಡಿ 'ಕರ್ನಾಟಕ ರಾಜ್ಯ' ರಚನೆಯಾಗಿದ್ದರೆ ಭಾವನಾತ್ಮಕ ಏಕೀಕರಣ ಸಾಧಿಸುವದು ಸಾಧ್ಯವಿತ್ತು. ಈಗ ಮೈಸೂರ ರಾಜ್ಯದಲ್ಲಿ 'ಕೆಲ ಪ್ರದೇಶಗಳನ್ನು ವಿಲಯನಗೊಳಿಸಿ' ವಿಸ್ತಾರ ಹೊಂದಿದ ಮೈಸೂರ ರಾಜ್ಯವೆಂಬ ಭಾವನೆಯನ್ನು ಜನರ—ಅಧಿಕಾರಿಗಳ—ರಾಜಕಾರಣಿಗಳ ತಲೆಯಲ್ಲಿ ತುಂಬಿ ಹಳೇ ಮೈಸೂರಿನಲ್ಲಿದ್ದ ಕಾಯದೆ ಕಾನೂನುಗಳನ್ನು ಸದ್ಯಕ್ಕೆ ಇದ್ದಂತೆ ಇರಲು ಅವಕಾಶಕೊಟ್ಟು ಅವುಗಳಲ್ಲಿ ಕೆಲವನ್ನು ವಿಲಯನ ಹೊಂದಿದ ಪ್ರದೇಶಗಳ ಮೇಲೆ ಹೇರುವ ಅವಕಾಶ ಕೊಟ್ಟದ್ದರಿಂದ ಭಾವನಾತ್ಮಕ ಏಕೀಕರಣಸಾಧನೆಗೆ ದೊಡ್ಡ ಆತಂಕ ಉಂಟಾಗಿದೆ. ಮೈಸೂರಿನವರು ರಾಜ ನಮ್ಮದು. ನಮ್ಮ ರಾಜ್ಯದಲ್ಲಿ ವಿಲಯನ ಹೊಂದಲು ನಾವು ಒಪ್ಪಿಕೊಂಡು ದೊಡ್ಡ ಉಪಕಾರ ಮಾಡಿರುವೆವು. ಹೊರಗಿನಿಂದ ಬಂದ ಜನರು ನಮ್ಮ ಈ ಉಪಕಾರ ಸ್ಮರಿಸದೆ ತಮ್ಮ ಕಾಯದೆ ಕಾನೂನುಗಳನ್ನು ನಮ ಮೇಲೆ ಹೇರಲು ಪ್ರಯತ್ನಿಸುವದು ಕೃತಘ್ನತೆ ಎಂಬ ಭಾವನೆ ತಾಳಲು ಮೈಸೂರ ರಾಜ್ಯವೆಂಬ ಹೆಸರು ಉಳಿಸಿದ್ದರಿಂದ ಅವಕಾಶವನ್ನು ಒದಗಿಸಿಕೊಟ್ಟಂತಾಗಿದೆ. ಮೈಸೂರೇತರ ಪ್ರದೇಶಗಳ ಜನರು " ಮೈಸೂರು ರಾಜ್ಯ ನಮ್ಮದು. ಮೈಸೂರು ಎಂಬ ಹೆಸರು ಉಳಿಯಲು ಒಪ್ಪಿಕೊಂಡದ್ದು ನಮ್ಮ ಔದಾರ್ಯ. ನಾವೆಲ್ಲ ಒಂದೇ ಆಡಳಿತದಲ್ಲಿ ಇರುವವರಾದುದರಿಂದ ಇಡೀರಾಜ್ಯದಲ್ಲಿ ಒಂದೇ ಆಡಳಿತ ಪದ್ಧತಿ, ಕಾಯದೆ ಕಾನೂನು ಇರಬೇಕು. ನಮ್ಮ ಪ್ರದೇಶದಲ್ಲಿ ಜಾರಿಯಲ್ಲಿದ್ದ ಆಡಳಿತದ ಪದ್ಧತಿ ಅನುಭವದಿಂದ ಯೋಗ್ಯವೆಂದು ಕಂಡು ಬಂದದ್ದರಿಂದ ಅದನ್ನೇ ಇಡೀ ರಾಜ್ಯಕ್ಕೆ ಅನ್ವಯಿಸಬಾರದೇಕೆ? ಹಳೇ ಮೈಸೂರಿನ ಆಡಳಿತ ಪದ್ಧತಿಯಲ್ಲಿ ಒಳ್ಳೆಯವೆಂದು ಕಂಡುಬಂದ ಅಂಶಗಳನ್ನು ಉಳಿಸಿಕೊಳ್ಳಬಹುದು. ಅನಿಷ್ಟವೆನಿಸಿದವುಗಳನ್ನು ತೊಡೆದು ಹಾಕುವಾ" ಎಂದು ಹೇಳಿದರೆ ಅದು ಮೈಸೂರಿನ ಜನರಿಗೆ ಒಗ್ಗಬೇಕಲ್ಲ?

ಮೇಲಿನ ವಿವರಣೆಯಿಂದ ಭಾವನಾತ್ಮಕ ಏಕೀಕರಣ ಸಾಧಿಸುವದು ಸಾಧ್ಯವಾಗಿಲ್ಲ. ಒಂದು ರಾಜ್ಯವಾದರೂ ನಾವೆಲ್ಲ ಒಂದೇ ಎಂಬ ಭಾವನೆಯುಂಟಾಗಿಲ್ಲ. ಈ ಮಾತು ಸ್ಪಷ್ಟವಾಗುವದು. ಜನರಲ್ಲಿ ನಿರಾಶಾಭಾವನೆ ಮೂಡಲು ಭಾವನಾತ್ಮಕ ಏಕೀಕರಣವಾಗದಿರುವದೇ ಮುಖ್ಯ ಕಾರಣ.

### ಆಡಳಿತ ಪಕ್ಷದ ಕ್ರಮಗಳು

ಕಾಂಗ್ರೆಸ್ಸಿಗರು, ಕಾಂಗ್ರೆಸ ಪಕ್ಷದ ಮಂತ್ರಿಮಂಡಲವು ಕೈಕೊಂಡ ಕ್ರಮಗಳು ಭಾವನಾತ್ಮಕ ಏಕೀಕರಣ ಸಾಧಿಸಲು ಅನುಕೂಲವಾದವುಗಳಾಗಿದ್ದರೆ ಜನರಲ್ಲಿ ನಿರಾಶಾಭಾವನೆ ಹುಟ್ಟಲು ಕಾರಣ ಇರುತ್ತಿರಲಿಲ್ಲ. ಹಳೇ ಮೈಸೂರಿನಲ್ಲಿದ್ದ ಅಧಿಕಾರ ವ್ಯಾಮೋಹದ ಸುಂಕರೋಗದ ಪಿಡುಗಿಗೆ ಕಾಂಗ್ರೆಸ್ಸಿಗರಲ್ಲಿ ಬಹಳಷ್ಟು ಜನರು ಬಲಿ ಬಿದ್ದಿರುವದು ದುರ್ದೈವದ ಸಂಗತಿ. ಮಂತ್ರಿಮಂಡಲವನ್ನು ಉರುಳಿಸುವ "ಮಸಲತ್ತಿ" ನಲ್ಲಿ ಕಳೆಯುವ ಕಾಲ, ವಿನಿಯೋಗಿಸುವ ಬುದ್ಧಿಮತ್ತೆ, ನಡೆಸುವ ಸಂಘಟನಾ ಕೌಶಲ್ಯ, ಇವುಗಳನ್ನು ಕಾಂಗ್ರೆಸ್ಸಿಗರು ಜನತೆಯ ಆಸೆ ಆಕಾಂಕ್ಷೆಗಳೇನು? ಅವರ ಸುಖದುಃಖಗಳೇನು? ಅವರ ಸ್ಥಿತಿಗತಿ ಸುಧಾರಿಸಲು ಮಾಡಬೇಕಾದ ಕಾರ್ಯದ ಸ್ವರೂಪವೆಂತಿರಬೇಕು? ಈ ಬಗ್ಗೆ ವಿನಿಯೋಗಿಸಿದ್ದರೆ ಮೈಸೂರು ರಾಜ್ಯವು ಇತರ ರಾಜ್ಯಗಳಿಗೆ ಮಾರ್ಗದರ್ಶನ ಮಾಡಿದ ಶ್ರೇಯಸ್ಸಿಗೆ ಪಾತ್ರವಾಗಬಹುದಾಗಿತ್ತು. ಆದರೆ ಹಾಗೆ ಆಗಲಿಲ್ಲ.

### ಗುಂಪಿನ ರಾಜಕಾರಣ

ಮಂತ್ರಿಮಂಡಳ ಉರುಳಿಸುವ ಪ್ರಯತ್ನದಲ್ಲಿ ಕಾಲ ಕಳೆಯುವದು, ಗುಂಪು ಕಟ್ಟಿಕೊಳ್ಳುವದು, ತಮ್ಮ ಗುಂಪಿನವರಿಗೆ ಸಮಿತಿ ಮಂಡಳಗಳಲ್ಲಿ ಹೊಣೆಗಾರ ಸ್ಥಾನಗಳು ದೊರೆವಂತೆ ಪ್ರಯತ್ನಿಸುವದು ಈ ಬಗೆಯ ಕಾರ್ಯಗಳಲ್ಲಿ ಮೈಸೂರ ವಿಧಾನ ಸಭೆಯ ಕಾಂಗ್ರೆಸ ಸದಸ್ಯರು ನಿರತರಾಗಿರುವರೆಂದು ಜನರ ಭಾವನೆಯಾಗಿರುವದು ಕಂಡುಬರುವದು. ಕಾಂಗ್ರೆಸ ವಿಧಾನಸಭಾಸದರು ಜನತೆಯ ಹಿತಕ್ಕಿಂತ ಅಧಿಕಾರವ್ಯಾಮೋಹಕ್ಕೆ ಒಳಗಾಗಿದ್ದಾರೆಂದು ಕೂಗು, ಗುಂಪಿನ ರಾಜಕಾರಣದಿಂದ ಅವರು ತಮ್ಮ ಕರ್ತವ್ಯಪಾಲನೆಯನ್ನು ಸರಿಯಾಗಿ ಮಾಡುತ್ತಿಲ್ಲ ಎಂಬ ಭಾವನೆಯು ಜನರಲ್ಲಿ ಉಂಟಾಗಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಇದರ ಪರಿಣಾಮ ಹೊಸ ರಾಜ್ಯದ ಮೇಲಾದುದು ಕಂಡುಬರುತ್ತದೆ.

ಈ ಪರಿಸ್ಥಿತಿಯಿಂದಾದ ಮುಂಬಯಿ, ಮದ್ರಾಸ, ಆಂಧ್ರ ಮೊದಲಾಗಿ ನೆರೆರಾಜ್ಯಗಳಲ್ಲಿಯಂತೆ ಮೈಸೂರಲ್ಲಿ ಭದ್ರವಾದ ಸರಕಾರವೇ ಕಳೆದ ಮೂರು ವರುಷಗಳಿಂದ ಇಲ್ಲದಂತಾಗಿದೆ. ತತ್ಪರಿಣಾಮವಾಗಿ ಪಾನಪ್ರತಿಬಂಧ, ಭೂಸುಧಾರಣೆ ಮೊದಲಾಗಿ ಪ್ರಗತಿಪರ ವಿಧೇಯಕಗಳನ್ನು ಅನಿವಾರ್ಯವಾಗಿ ಮುಂದೂಡಬೇಕಾಗುತ್ತಿದೆ. ಪ್ರಗತಿಪರ ಕಾಯದೆಗಳನ್ನು ಮಾಡುವ ಧೈರ್ಯವಿಲ್ಲದ ಕಾಲದಲ್ಲಿ ಮಂತ್ರಿ-

ಮಂಡಳವು ಅಧಿಕಾರದಲ್ಲಿಉಳಿಯುವದಕ್ಕಾಗಿ ವಿಶಿಷ್ಟ ಹಿತಸಂಬಂಧಗಳುಳ್ಳ ಪ್ರತಿಗಾಮಿಗಳನ್ನು ಸಂಪ್ರೀತ ಗೊಳಿಸಲು ತೊಡಗಬೇಕಾಗುವದು. ಮೈಸೂರಲ್ಲಿ ಇದಕ್ಕೆ ಸಾಕಷ್ಟು ಉದಾಹರಣೆಗಳನ್ನು ಕೊಡಬಹುದಾಗಿದೆ.

ಆಡಳಿತದ ರೀತಿ ನೀತಿಗಳು ನೈತಿಕ ದೃಷ್ಟಿಯಿಂದ, ಸಂವಿಧಾನದಲ್ಲಿ ನಿರೂಪಿಸಿದ ಮಾರ್ಗನಿರ್ದೇಶಕ ತತ್ತ್ವಗಳ ಹಿನ್ನೆಲೆಯಲ್ಲಿ, ಅಥವಾ ಸಂವಿಧಾನದಲ್ಲಿ ಕೊಡಮಾಡಿದ ನಾಗರಿಕರ ಮೂಲಭೂತ ಹಕ್ಕುಗಳನ್ನು ಕಾಪಾಡುವ ದೃಷ್ಟಿಯಿಂದ ಅಸಮಂಜಸವೆಂದು ಹೊಳೆದರೂ ಅವುಗಳನ್ನು ಸಮರ್ಥಿಸಿಕೊಳ್ಳುವ ವೃಥಾ ಪ್ರಯತ್ನವನ್ನು ನಡೆಸಲಾಗುತ್ತದೆ.

## ರಾಜಕೀಯ ಪರಿಸ್ಥಿತಿ

ರಾಜಕೀಯ ಅಭದ್ರ ಪರಿಸ್ಥಿತಿ ದೂರಾದರೆ ಮಂತ್ರಿಮಂಡಲವು ಧೈರ್ಯದಿಂದ ಪ್ರಗತಿಪರ ಆಡಳಿತ ರೀತಿ ನೀತಿಯನ್ನು ಅಂಗೀಕರಿಸಲು ಸಮರ್ಥವಾಗಬಲ್ಲದು. ಅಸ್ಥಿರ ರಾಜಕೀಯ ಪರಿಸ್ಥಿತಿಯಿಂದ ಉಂಟಾದ ಮಂತ್ರಿಮಂಡಲದ ದೌರ್ಬಲ್ಯವು ಆಡಳಿತವನ್ನು ಹದಗೆಡಿಸಿಬಿಡುವದು. ಅಧಿಕಾರಿಗಳಲ್ಲಿ ಸ್ವೈರಾಚಾರ ಬೆಳೆಯುವದು. ಲಂಚ ರುಸವತ್ತುಗಳ ಪ್ರಮಾಣ ಹೆಚ್ಚುವುದು. ಕರ್ತವ್ಯ ನಿರ್ವಹಣೆಗಿಂತ ವರ್ಚಸ್ವೀ ಪುಢಾರಿಗಳಿಗೆ ಬೇಕಾದವರಾಗಿ ಇರುವತ್ತ ಅಧಿಕಾರಿಗಳ ಗಮನ ಹರಿಯುವುದು. ಕರ್ತವ್ಯಭ್ರಷ್ಟನಾದ ಅಧಿಕಾರಿಯ ಮೇಲೆ ಕ್ರಮ ಕೈಕೊಳ್ಳುವ ಧೈರ್ಯವು ಪುಢಾರಿಗಳ ಆಶ್ರಯ ಅವನಿಗಿರುವುದರಿಂದ ಯಾರಿಗೂ ಆಗದು. ಇಂಥ ಪರಿಸ್ಥಿತಿಯಿಂದ ಆಡಳಿತ ಯಂತ್ರವು ಸರಾಗವಾಗಿ ನಡೆಯದಂತಾದರೆ ಆಶ್ಚರ್ಯವಲ್ಲ. ಹೀಗಾಗದಂತೆ ನೋಡಿಕೊಳ್ಳುದು ಸದ್ಯದ ಮೈಸೂರ ಸರಕಾರದ ಕರ್ತವ್ಯವಾಗಿದೆ.

ಭದ್ರವಾದ ಸರಕಾರ, ಕಾರ್ಯಕ್ಷಮ ರೀತಿಯಲ್ಲಿ ಸಾಗಿದ ಆಡಳಿತ, ಪ್ರಾದೇಶಿಕ, ಜಾತೀಯ, ಗುಂಪಿನ ಯಾವದೇ ಬಗೆಯ ಭಾವನೆಗೊಳಗಾಗದೆ ನಿಷ್ಪಕ್ಷಪಾತರೀತಿಯಲ್ಲಿ ಕಾನೂನಿನನ್ವಯ ನ್ಯಾಯವಾದ ಕರ್ತವ್ಯ ಕರ್ಮಗಳನ್ನು ನೆರವೇರಿಸುವ ಅಧಿಕಾರಿ ವರ್ಗ, ಇಷ್ಟು ಇದ್ದರೆ ಜನಸಾಮಾನ್ಯರಿಗೆ ಸಮಾಧಾನವಿರುವದು. ಸರಕಾರದ ಬಗ್ಗೆ ಗೌರವಾದರ ಭಾವದ ಜೊತೆಗೆ ಅಭಿಮಾನವೂ ಅನಿಸುವದೆಂದು ಪ್ರತ್ಯೇಕ ಹೇಳಬೇಕಿಲ್ಲ.

ರಾಜ್ಯರಚನೆಯಾಗಿ ಮೂರು ವರ್ಷಗಳು ಗತಿಸಿದರೂ ಪ್ರತ್ಯೇಕತೆಯ ಭಾವನೆ ಅಳಿದು ನಾವು ಒಂದೇ ರಾಜ್ಯದ ಪ್ರಜೆಗಳು; ನಮ್ಮ ಹಿತಸಂಬಂಧಗಳೆಲ್ಲ ಒಂದು ಎಂಬ ಭಾವನೆಯುಂಟಾಗುವಂತೆ ಆಡಳಿತ ಸಾಗಿಲ್ಲ. ಭದ್ರವಾದ ಸರಕಾರದ ಭರವಸೆ ಹುಟ್ಟಿಲ್ಲ. ಪ್ರಾದೇಶಿಕ, ಗುಂಪಿನ, ಜಾತೀಯ ಭಾವನೆಗಳು ನಷ್ಟವಾಗಿ ರಾಷ್ಟ್ರೀಯ ಭಾವನೆಯು ಜಾಗ್ರತವಾಗುವಂಥ ರೀತಿ ನೀತಿಗಳು ಆಡಳಿತದಲ್ಲಿ ರೂಪುಗೊಂಡಿಲ್ಲ. ಒಕ್ಕಟ್ಟು ಬೆಳೆದು ಜನರ ಕ್ರಿಯಾಶಕ್ತಿಯು ರಾಷ್ಟ್ರವನ್ನು ಕಟ್ಟುವ ಕಾರ್ಯದಲ್ಲಿ ವಿನಿಯೋಗವಾಗುವದಕ್ಕೆ ಪೋಷಕವಾದ ವಾತಾವರಣವುಂಟಾಗಿಲ್ಲ. ಕರ್ನಾಟಕ ಏಕೀಕರಣ ಸಾಧಿಸಿದ ಜನರೆಂದು ಅಭಿಮಾನದಿಂದ ಹೇಳಿಕೊಳ್ಳುವ ಕನ್ನಡಿಗರು ತಮ್ಮ ಭಾವನೆಗಳ ಏಕೀಕರಣ ಸಾಧಿಸಲು ಅಸಮರ್ಥರಾಗಿರುವರು. ಇದನ್ನೆಲ್ಲ ನೋಡಿದರೆ ನಾವು ರಾಜ್ಯರಚನೆಯ ನಂತರ ಸಾಗಿರುವದೆತ್ತ? ಎಂದು ಆತ್ಮನಿರೀಕ್ಷಣೆ ಮಾಡಿಕೊಳ್ಳುವದು ಅವಶ್ಯವೆನಿಸುತ್ತದೆ.

# ಮಣಿಪುರಿ ಸಂಸ್ಕೃತಿ ಮತ್ತು ನೃತ್ಯಕಲೆ

ಭಾರತದ ಈಶಾನ್ಯ ಮೂಲೆಯಲ್ಲಿರುವ ಒಂದು ಚಿಕ್ಕ ಪ್ರದೇಶ ಮಣಿಪುರ. ಅದು ತನ್ನದೇ ಆದ ವಿಶಿಷ್ಟ ಸಂಸ್ಕೃತಿ ಹಾಗೂ ಸಾಂಪ್ರದಾಯಿಕ ನೃತ್ಯಕಲೆಯನ್ನು ಕಾಪಾಡಿಕೊಂಡು ಬಂದಿದೆ. ಈ ಪ್ರದೇಶದಲ್ಲಿ ಒಂದು ವರುಷ ಕಳೆದು ಗುರು ಹೌಬಂ ಅತೊಂಬಸಿಂಗ ಹಾಗೂ ಮೈಶ್ರಾಂ ಅಮೋಬಿಸಿಂಗರ ಶಿಷ್ಯತ್ವ ವಹಿಸಿ ಮಣಿಪುರಿ ನೃತ್ಯವನ್ನು ಕಲಿತುಬಂದ ಏಕಮಾತ್ರ ಕನ್ನಡಿಗರಾದ (ದಕ್ಷಿಣ ಭಾರತದಲ್ಲಿಯೇ ಇವರೊಬ್ಬರೇ ಎಂದು ಹೇಳಬಹುದು) ಶ್ರೀ ರಂಗವಿಠ್ಠಲರು ಇಲ್ಲಿ ಮಣಿಪುರಿ ಸಂಸ್ಕೃತಿಯ ಹಾಗೂ ನೃತ್ಯಕಲೆಯ ಪರಿಚಯಮಾಡಿಕೊಟ್ಟಿರುವರು.

ಲೇಖಕರು :
ಶ್ರೀ ರಂಗವಿಠ್ಠಲ, ಬೆಂಗಳೂರು

'ಬಾಬು ತುಂಕೋ ಭಕ್ತಿ ನೈ' ಅಂದರು ನನ್ನ ಪಕ್ಕದಲ್ಲಿ ಕುಳಿತಿದ್ದ ಮುದುಕರೊಬ್ಬರು 'ಕೆಂವಾ? ಅಂದೆ ನಾನು 'ತುಂಕೋ ಶೋಕಾ ನೈ ಹೈ' ಅಂದರು ಮುದುಕರು. ಇದು ನಡೆದದ್ದು ಹನ್ನೆರಡು ವರ್ಷಗಳ ಹಿಂದೆ.

ಅಂದು ಕಾರ್ತಿಕ ಪೌರ್ಣಿಮೆ. ರಾತ್ರಿ ಮಣಿಪುರದ 'ಗೋವಿಂದಜೀ ಮಂದಿರ'ದಲ್ಲಿ ರಾಸನೃತ್ಯ ನೋಡುತ್ತ ಕುಳಿತಿದ್ದೆ. ಪ್ರೇಕ್ಷಕರಲ್ಲಿ ಕುಳಿತಿದ್ದ ಬಹು ಜನರು ಕಣ್ಣೀರಿಡುತ್ತ ಮಧ್ಯೆ ಮಧ್ಯೆ ಎದ್ದು ಹೋಗಿ ಮಣಿಪುರಿ ನೃತ್ಯಗುರುಗಳಿಗೂ ಮೃದಂಗ ಬಾರಿಸುವವರಿಗೂ ಸಾಷ್ಟಾಂಗನಮಸ್ಕಾರ ಮಾಡಿ ಬಂದು ಕಣ್ಣೊರಿಸಿಕೊಂಡು ಕುಳಿತುಕೊಳ್ಳುತ್ತಿದ್ದರು. ಈ ಕಣ್ಣೀರು ಭಕ್ತಿರಸ ಪ್ರಾಧಾನ್ಯವಾಗಿರುವ ಮಣಿಪುರಿ ನೃತ್ಯ ಪ್ರೇಕ್ಷಕರ ಮೇಲೆ ಪ್ರಭಾವ ಬೀರಿದ್ದರ ಪರಿಣಾಮ ಪ್ರೇಕ್ಷಕರು ಭಕ್ತಿರಸದಲ್ಲಿ ಪರವಶರಾಗಿ, ತಲ್ಲೀನರಾಗಿ, ಮುಗ್ಧರಾಗಿ, ಮೈಮರೆತು, ಭಕ್ತಿಭಾವಾಶ್ರು ಸುರಿಸುತ್ತಿದ್ದರು. ಇದು ಅಕ್ಷರಶಃ ನಿಜ. ಅತಿಶಯೋಕ್ತಿಯಲ್ಲ. ನನ್ನ ಪಕ್ಕದಲ್ಲಿ ಕುಳಿತಿದ್ದ ಮುದುಕರು, ನನಗೆ ಭಕ್ತಿ ಇದ್ದಿದ್ದರೆ ನಾನೂ ಕಣ್ಣೀರಿಡುತ್ತಿದ್ದೆ. ನನಗೆ ಭಕ್ತಿಯಿಲ್ಲ' ಎಂದಾಗ ನನಗೆ ಸ್ವಲ್ಪ ಅಸಮಾಧಾನವಾದರೂ ಅವರ ಮಾತಿನಲ್ಲಿ ಸತ್ಯತೆಯಿತ್ತು. ಮಣಿಪುರಿ ಪ್ರೇಕ್ಷಕರಷ್ಟು ಸಂಸ್ಕೃತಿ ನನಗಿಲ್ಲದಿದ್ದುದಕ್ಕಾಗಿ ವಿಷಾದಿಸಿದೆ.

ಮಣಿಪುರಿ ನೃತ್ಯದ ವಿಷಯವಾಗಿ ತಿಳಿಯುವುದಕ್ಕೆ ಮೊದಲು ಮಣಿಪುರದ ಜನರ ಜೀವನ, ನಡೆನುಡಿ, ಆಚಾರ ವ್ಯವಹಾರಗಳನ್ನು ತಿಳಿದುಕೊಳ್ಳುವುದು ಅವಶ್ಯಕ. ಮಣಿಪುರ ಭಾರತದ ಈಶಾನ್ಯ ದಿಕ್ಕಿನಲ್ಲಿ ನಾಗ ಮತ್ತು ಚೀಣ ಪರ್ವತಗಳ ಮಧ್ಯೇ ಇರುವ ರಮಣೀಯವಾದ ಕಣಿವೆ. ಜನ ಮಂಗೋಲಿಯನ್ನರ ಹೋಲಿಕೆಯವರು. ವ್ಯವಸಾಯ ಕೈಮಗ್ಗ ಕಸೂತಿ. ಇವುಗಳಿಂದಲೇ ಅವರ ಜೀವನ. ಬಾಲೀ ದ್ವೀಪ ಮಣಿಪುರದಿಂದ ಬಹುದೂರವಿದ್ದರೂ ಅಲ್ಲಿಯ ಜನರ ಪದ್ಧತಿ. ರೀತಿ ನೀತಿಗಳು ಮತ್ತು ಧಾರ್ಮಿಕ, ಚಾರಿತ್ರಿಕ, ಸಾಮಾಜಿಕ ದೃಷ್ಟಿಯಿಂದ ಉಭಯತರಲ್ಲಿ ಸಾಮ್ಯತೆ ಇರುವುದು ಆಶ್ಚರ್ಯಕರ. ಬಾಲಿ ಜನರಂತೆ, ಜನನ ಮರಣ ಹಬ್ಬ ಹರಿದಿನಗಳಲ್ಲಿ ಶುಭಕಾರ್ಯಗಳಲ್ಲಿ ನೃತ್ಯವಿಲ್ಲದೇ ನಡೆಯುವುದೇ ಇಲ್ಲ ಎಂಬ ಭಾವನೆ ಮಣಿಪುರದವರಿಗೂ ಇದೆ.

ನೃತ್ಯ ಮಣಿಪುರದಲ್ಲಿ ಮಹಾಭಾರತ ಕಾಲಕ್ಕಿಂತಲೂ ಹಿಂದಿನದು. ಅರ್ಜುನ ನೃತ್ಯಗಾತಿ ರಾಜಕುಮಾರಿ ಚಿತ್ರಾಂಗದೆಯನ್ನು ಮದುವೆಯಾದ್ದು, ಬಭ್ರುವಾಹನನ ಜನನ ಇವು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಪ್ರತಿಯೊಬ್ಬ ಮಣಿಪುರಿಯೂ ಆಯುಷ್ಯದಲ್ಲಿ ಒಮ್ಮೆಯಾದರೂ ನೃತ್ಯ ಮಾಡಿಯೇ ಇರುತ್ತಾನೆ. ಇದು ಇಲ್ಲಿನ ಸಂಪ್ರದಾಯ ; ನೃತ್ಯ ಅವರ ರಕ್ತದಲ್ಲಿದೆ. ನೃತ್ಯ ಅವರ ಧಾರ್ಮಿಕ ಅಂಗ, ಸಾಧನೆಯ ದಾರಿ, ಇಂದಿಗೂ ಮಣಿಪುರದ ಮಹಾರಾಜ 'ರಥ' ಜಾತ್ರೆಯ

ಮಣಿಪುರಿ ರಾಸ ನೃತ್ಯಗಾತಿ





ಮಣಿಪುರಿ ರಾಸನೃತ್ಯದಲ್ಲಿ ಕೃಷ್ಣ

ದಿನ ವರ್ಷಕ್ಕೊಮ್ಮೆ ಮೃದಂಗ ಬಾರಿಸಿ ಕುಣಿಯುತ್ತಾನೆ. ದಿವಂಗತ ಗುರುದೇವ ರವೀಂದ್ರ ನಾಥ ಠಾಕೂರರು ಈ ನೃತ್ಯದ ಮಹತ್ವವನ್ನು ಭಾರತದಲ್ಲಿ ಪ್ರಚುರಪಡಿಸುವ ಸಲುವಾಗಿ ಗುರು ಹೌಬಂ ಅಕೊಂಬ ಸಿಂಗರನ್ನು ಶಾಂತಿನಿಕೇತನದಲ್ಲಿ ಮಣಿಪುರಿ ನೃತ್ಯ ಕಲಿಸಲು ಕರೆತಂದರು. ಠಾಕೂರರ ರವೀಂದ್ರ ಸಂಗೀತದ ಬಹು ಕವನಗಳನ್ನು ಮಣಿಪುರಿ ನೃತ್ಯದಲ್ಲಿ-ಪ್ರದರ್ಶಿಸಿದವರು, ಗುರು ಹೌಬಂ ಅತೊಂಬಸಿಂಗರು. (Howbum Atom ba Singh). ಅವರೇ ಮಣಿಪುರದಿಂದ ಹೊರಗೆ ಬಂದು ನೃತ್ಯ ಕಲಿಸಿ ಪ್ರಚುರ ಪಡಿಸಿದವರಲ್ಲಿ ಮೊದಲನೆಯವರು. ನಂತರ ಗುರು ಮೈಶ್ರಾಂ ಅಮೊಬಿಸಿಂಗರು (Maishram Amobi Singh) ಬಹು ಕಾಲ ಉದಯ ಶಂಕರರ ಅಲ್ಮೋರಾ ನೃತ್ಯಶಾಲೆಯಲ್ಲಿಯೂ ಅವರ ನೃತ್ಯ ಪ್ರದರ್ಶನಗಳಲ್ಲೂ ಸೇವೆ ಮಾಡಿದರು.

ಇಡೀ ಮಣಿಪುರಿ ಜನ ವೈಷ್ಣವರು, ಇವರಲ್ಲಿ ಕೇವಲ ಎರಡೇ ಕೋಮು, ಬ್ರಾಹ್ಮಣರು ಕ್ಷತ್ರಿಯರು. ಬ್ರಾಹ್ಮಣರು 'ಶರ್ಮ' ಎಂದೂ, ಕ್ಷತ್ರಿಯರು 'ಸಿಂಗ್' ಎಂದೂ ಹೆಸರಿಟ್ಟುಕೊಳ್ಳುತ್ತಾರೆ. ಗೋವಿಂದಜೀ (ಶ್ರೀಕೃಷ್ಣ) ಯನ್ನು ಬಿಟ್ಟು ಬೇರಾವ ದೇವರನ್ನೂ ಇವರು ಪೂಜಿಸುವುದಿಲ್ಲ. ವರ್ಷಕ್ಕೊಮ್ಮೆ ಮಾತ್ರ ಈಶ್ವರನ ಪೂಜೆ ಮಾಡುತ್ತಾರೆ. ಪ್ರತಿಯೊಬ್ಬ ಮಣಿಪುರಿ ಸ್ತ್ರೀ-ಪುರುಷರು ತುಳಸೀಮಣಿಮಾಲೆ ಧರಿಸಿ, ಮುದ್ರೆ, ಗೋಪೀಚಂದನ ಇಲ್ಲದೆ ಮನೆಯಿಂದ ಹೊರಬೀಳುವುದೇಯಿಲ್ಲ. ಮಣಿಪುರದ ಜನ ಸಸ್ಯಾಹಾರಿಗಳು, ಮದ್ಯಪಾನ ಮಾಡಿದವರಿಗೆ ಸಮಾಜದಿಂದಲೂ ದೇವಾಲಯಗಳಿಂದಲೂ ಬಹಿಷ್ಕಾರ ಹಾಕುತ್ತಾರೆ. ಇವರ ಶುಭ್ರತೆ, ನಿಯಮ ನಿಷ್ಠೆಯ ಸಲುವಾಗಿ ಸಾವಿರದ ಒಂಬೈನೂರರಲ್ಲಿ ಮಣಿಪುರದಲ್ಲಿ ಪೊಲಿಟಿಕಲ್ ಏಜೆಂಟ್ ಆಗಿದ್ದ ಸರ್, ಜೇಮ್ಸ ಜಾನ್ಸ್‌ಟನ್‌ರವರು 'My experiences in Manipur & Naga Hills' ಎಂಬ ಪುಸ್ತಕದಲ್ಲಿ ಮಣಿಪುರಿ ಜನರು ಪ್ರಪಂಚದಲ್ಲೆಲ್ಲಾ 'ಅತಿ ಚೊಕ್ಕಟ ಮತ್ತು ಶುಭ್ರವಾದ ಜನ' ಎಂದಿದ್ದಾರೆ. ಬರ್ಮಾ ಇಂಡಿಯಾ ಯುದ್ಧದಲ್ಲಿ ಭಾಗವಹಿಸಿದ ಮಣಿಪುರಿ ಯೋಧರ ವಿಷಯವಾಗಿ 'ಧೀರರೂ ಕಷ್ಟಸಾಹಸಿಗಳೂ.....' ಎಂದಿದ್ದಾರೆ. ಅವರ ನಿಯಮ ನಿಷ್ಠೆಯ ವಿಷಯವಾಗಿ ಬರೆಯುತ್ತಾ, ಬರ್ಮಾ ಯುದ್ಧದಲ್ಲಿ ಒಮ್ಮೆ ಎರಡು ದಿನಗಳು ಸ್ನಾನಮಾಡುವ ಸೌಕರ್ಯವಿಲ್ಲದಿದ್ದಾಗ ಸ್ನಾನಮಾಡದೆ ತಿಂಡಿತೀರ್ಥ ಮುಟ್ಟುವುದಿಲ್ಲವೆಂದು ಎರಡು ದಿವಸ ನಿಟ್ಟುಪವಾಸಮಾಡಿ ಯುದ್ಧಮಾಡಿದ್ದನ್ನು, ಪ್ರಶಂಸಿಸಿದ್ದಾರೆ, ಮಣಿಪುರಿ ಭಾಷೆ ಭಾರತದ ಬೇರಾವ ಭಾಷೆಗೂ ಹೊಂದುವುದಿಲ್ಲ. ಹಿಂದಿ, ಸಂಸ್ಕೃತ ಭಾಷೆಯ ಶಬ್ದಗಳು ಇದರಲ್ಲಿಲ್ಲ. ಈ ಭಾಷೆಗೆ ಲಿಪಿ ಇಲ್ಲ. ಬಂಗಾಲಿಯಲ್ಲಿ ಬರೆಯುತ್ತಾರೆ. ಬಹುಜನ ಮಣಿಪುರಿಗಳಿಗೆ ಹಿಂದೀ, ಬಂಗಾಲಿ ಭಾಷೆ ಕೂಡ ಸರಿಯಾಗಿ ಬರುವುದಿಲ್ಲ.

## ಮಣಿಪುರಿ ನೃತ್ಯ

ಈಗ್ಯೆ ಸುಮಾರು ೧೮೦-೨೦೦ ವರ್ಷಗಳ ಹಿಂದೆ ಭಾಗ್ಯಚಂದ್ರ ಮಹಾರಾಜ ಮಣಿಪುರವನ್ನಾಳುತ್ತಿದ್ದಾಗ, ಕಾರಣಾಂತರದಿಂದ ಅಸ್ಸಾಮಿಗೆ ಓಡಿ ಹೋಗಿ ಅಲ್ಲಿಯ ರಾಜರ ಆಶ್ರಯ ಪಡೆಯಬೇಕಾಯಿತು. ಆಗ ಅಸ್ಸಾಮಿನ ರಾಜರು ಭಾಗ್ಯಚಂದ್ರ ಮಹಾರಾಜ ನಿಜವಾಗಿಯೂ ರಾಜಮನೆತನದವರೇ ಅಥವಾ ಅಲ್ಲವೆ ಎಂಬುದನ್ನು ನಿಶ್ಚಯಿಸಲು ಅವರನ್ನು ಮದದಾನೆಯ ಜೊತೆಯಲ್ಲಿ ಹೋರಾಟವಾಡಲು ಏರ್ಪಡಿಸಿದರು. ಈ ಕಾಳಗದ ಹಿಂದಿನ ರಾತ್ರಿ ಭಾಗ್ಯಚಂದ್ರರ ಕನಸಿನಲ್ಲಿ ಶ್ರೀ ಗೋವಿಂದಜೀ ಬಂದು ಮಣಿಪುರದಲ್ಲಿ ತನ್ನ ದೇವಾಲಯ ಒಂದನ್ನು ಕಟ್ಟುವುದಾದರೆ ಹೋರಾಟದಲ್ಲಿ ಯಶಸ್ಸನ್ನು ಕೊಡುವುದಾಗಿ ಹೇಳಿದರಂತೆ. ಅದೇ ರೀತಿ ಭಾಗ್ಯಚಂದ್ರ ಕಾಳಗದಲ್ಲಿ ಯಶಸ್ವಿಯಾದರು. ಅಂದಿನಿಂದ ಅವರಿಗೆ 'ಜಯಸಿಂಗ್' ಎಂಬ ಹೆಸರಾಯಿತು. ಇದಲ್ಲದೆ ಭಾಗ್ಯಚಂದ್ರರಿಗೆ, ಕಾರ್ತ ಮಹರಾಜ್, ಚಿನ್ ತನ್ ಖೊಂಬ ಎಂಬ ಮಣಿಪುರಿ ಹೆಸರೂ ಇತ್ತು (Chin Thon Khomba) ಮಣಿಪುರದ ಹತ್ತಿರವಿರುವ ಕೈನಾ ಪರ್ವತದ ಕಾಥಲ್ ಎಂಬ ಮರದಿಂದ ಗೋವಿಂದಜೀ ವಿಗ್ರಹಮಾಡಿಸಿ ಗೋವಿಂದಜೀ ದೇವಾಲಯವನ್ನು ಮಣಿಪುರದಲ್ಲಿ ಕಟ್ಟಿದರು ಮಣಿಪುರಿ ರಾಸನೃತ್ಯ ಮತ್ತು ಅದರ ಆಕರ್ಷಣೀಯ ಪೋಷಾಕು ಭಾಗ್ಯಚಂದ್ರರ ಕನಸಿನಲ್ಲಿ ಬಂದಿತಂತೆ.

ಗೋವಿಂದಜೀ ಮಂದಿರದ ರಾಸಮಂಡಲ (ನೃ... ಮಾಡುವ ಹಜಾರ) ದಲ್ಲಿ ಮೊದಲಬಾರಿ ರಾಧೆ... ಪಾತ್ರದಲ್ಲಿ ರಾಸನೃತ್ಯವಾಡಿದವರು ಭಾಗ್ಯಚಂದ್... ಪುತ್ರಿ 'ಲೈ ಮಾ ಲೈ ರೋಬಿ' (Lai Ma L... Robi) ಇದು ಮಣಿಪುರಿ ರಾಸನೃತ್ಯದ ಜನನ... ವಿಷಯವಾಗಿ ಇರುವ ಪ್ರತೀತಿ.

ಮಣಿಪುರಿ ನೃತ್ಯವನ್ನು ಶಾಸ್ತ್ರೋಕ್ತವಾದ ರಾ... ನೃತ್ಯ ಮತ್ತು ಜಾನಪದ ನೃತ್ಯ ಎಂದು ಎರಡು ಭಾ... ವಾಗಿ ವಿಂಗಡಿಸಬಹುದು. ರಾಸನೃತ್ಯ 'ಗ... ಭರತ'ದ ಅಂಗವಾಗಿದೆ. ನಾಟ್ಯ ಶಾಸ್ತ್ರದಲ್ಲಿ ಇದ... ವಿವರಣೆ 'ಕುಂಡಲಿ' ನಾಟ್ಯದಲ್ಲಿ ಬಂದಿದೆ. ರಾ... ನೃತ್ಯವನ್ನು 'ಭಂಗೀ ಅಚಾಬ', 'ಖುರಂಪ... ಬ್ರಿಂದಾಂಪರೆ', (ಇವು ಲಾಸ್ಯ ನೃತ್ಯಗಳು) 'ಗೋ... ಬ್ರಿಂದಾಂಪರೆ,' 'ಗೋಷ್ಟ ಭಂಗಿ' (ಇವು ತಾಂಡ... ನೃತ್ಯಗಳು) ಎಂದು ವಿಭಾಗಿಸಿದ್ದಾರೆ. ಇಡೀ ರಾ... ನೃತ್ಯ ಈ ಮೊದಲೆ ಹೇಳಿದ ಭಂಗಿಗಳ ಆಧಾ... ಮೇಲಿದೆ. ಪ್ರತಿ ಭಂಗಿಯಲ್ಲಿಯೂ ಹದಿನಾರು ಬೊ... ಗಳಿರುತ್ತವೆ. (ಕುಕಡ ಅಥವಾ ಅಡವು ಜತಿಗಳ...

## ರಾಸ ನೃತ್ಯ

ರಾಸ ನೃತ್ಯವನ್ನು 'ಮಹಾರಾಸ', 'ಬಸಂತ ರಾಸ... 'ಕುಂಜ ರಾಸ' ನೃತ್ಯ ರಾಸ ಅಥವಾ ನೀಕಿರಾ... 'ಗೋಷ್ಟ ಲೀಲ' ಎಂದು ವಿಭಾಗಿಸಿದ್ದಾರೆ, 'ಮ... ರಾಸ' ನೃತ್ಯವನ್ನು ಕಾರ್ತಿಕ ಪೌರ್ಣಿಮೆ ದಿವಸ... ಬಸಂತ ರಾಸನ್ನು ವೈಶಾಖ ಪೌರ್ಣಿಮೆಯ ದಿವಸ... ಕುಂಜರಾಸ ನೃತ್ಯವನ್ನು ಆಶ್ವೀಜ ಪೌರ್ಣಿಮೆ ದಿ... ದಲ್ಲಿಯೂ ನೃತ್ಯ ರಾಸ್ ಅಥವಾ ನೀತಿ ರಾಸವ... ಹಬ್ಬ ಹರಿ ದಿನಗಳು, ಶುಭ ಕಾರ್ಯಗಳಲ್ಲಿಯ... 'ಗೋಷ್ಟ ಲೀಲ' ನೃತ್ಯವನ್ನು ಕಾರ್ತಿಕ ಗೋಪ... ಷ್ಟಮಿ ದಿವಸ ಕೇವಲ ಗೋವಿಂದಜೀ ಮಂದಿರಗಳ... ಮಾತ್ರ ನರ್ತಿಸುತ್ತಾರೆ. ಈ ಎಲ್ಲ ನೃತ್ಯಗಳಲ್ಲಿಯ... ಭಕ್ತಿ ರಸವೇ ಪ್ರಧಾನವಾಗಿರುತ್ತದೆ. ಕೇ... ಗೋಷ್ಟಲೀಲೆಯಲ್ಲಿ ಮಾತ್ರ ಕೃಷ್ಣನ ಬಾಲಲಿ... ಗಳನ್ನು ತೋರಿಸುತ್ತಾರೆ. ರಾಸ ನೃತ್ಯದಲ್ಲಿ ಕೃಷ್ಣ... ರಾಧೆಯ ಪಾತ್ರವನ್ನು ಸಾಧಾರಣವಾಗಿ ೮-೫ ವ...



ಲಹರಿಬಾ ನೃತ್ಯಗಾತಿ

ಬಾಲಕ ಬಾಲಕಿಯರು ವಹಿಸುತ್ತಾರೆ ಉಳಿದ
೦ ಜನ ಸಖಿಯರು, ೧೫ ರಿಂದ ೫೦ರ ವರೆಗಿನ
ಯರು ಪಾತ್ರ ವಹಿಸುತ್ತಾರೆ; ರಾಸನೃತ್ಯದಲ್ಲಿ
ಷರೂ ಸ್ತ್ರೀಯರೂ ಕೂಡಿ ನೃತ್ಯ ಮಾಡುವು
ಈ ನೃತ್ಯಗಳಲ್ಲಿ, ಚೈತನ್ಯದೇವ, ಜಯ
ಮುಂತಾದ ವೈಷ್ಣವ ಕವಿಗಳ, ಕೀರ್ತನೆ
ತೆಗಳನ್ನು ಉಪಯೋಗಿಸುತ್ತಾರೆ. ರಾಸನೃತ್ಯದ
ಳಕ್ಕೆ ಮೃದಂಗ (ಇದು ಇತರ ಮೃದಂಗ-
ಂತಿರುವುದಿಲ್ಲ. ಬಂಗಾಲ್ ಖೋತನಂತೆ ಎರಡು
ಯೂ ಶಾಯಿ ಇರುತ್ತದೆ) ಇಶಿರಾಜ್, ಪೇನಾ
ಣಿಪುರಿ ಶಂಕುವಾದ್ಯ), ಕೊಳಲು (ಬನಸಿ)
ಜರಗಳನ್ನು ಉಪಯೋಗಿಸುತ್ತಾರೆ. ರಾಸ
ತೆಗಳನ್ನು ಸ್ತ್ರೀಯರೇ ಹಾಡುತ್ತಾರೆ. ರಾಸ ನೃತ್ಯದ
ಷಾಕಿನ ಸೌಂದರ್ಯವು ಜಗತ್ತಿನ ಬೇರಾವ ನೃತ್ಯದ
ಷಾಕಿಗೂ ಇಲ್ಲ. ಮಣಿಪುರಿ ರಾಸ ನೃತ್ಯದ
ದರತೆ, ಲಾಲಿತ್ಯ ಕೋಮಲತೆ, ಸೌಮ್ಯತೆ, ಭಾರ
ಯ ನೃತ್ಯಗಳಲ್ಲಿ ಬೇರಾವುದಕ್ಕೂ ಇಲ್ಲವೆಂದರೆ
ಶಯೋಕ್ತಿಯಾಗಲಾರದು.

ರಾಸನೃತ್ಯಗಳಲ್ಲಿ ಕೃಷ್ಣಾಭಿಸಾರ, ರಾಧಾಭಿಸಾರ,
ಮರ ನೃತ್ಯ. ರೂಪವರ್ಣನ, ರಾಧಾಕೃಷ್ಣ
ಚಾರ, ನೃತ್ಯ ತೀರ್ಥ, ಸಖಿ ನೃತ್ಯ, ಲಲಿತ
ತ್ಯ, ಬಿಶಾಕ ನೃತ್ಯ, ಇಂದುರೇಖಾ ನೃತ್ಯ, ಸುದೇವಿ
ತ್ಯ, ರಂಗದೇವಿ ನೃತ್ಯ, ಕೃಷ್ಣ ತಾಂಡವಸಖಿ,
ನೋರ್, ಮೃದಂಗ ನೃತ್ಯ ಮುಂತಾದವುಗಳಿವೆ.
ರಾಸ ನೃತ್ಯದಲ್ಲಿ ಚಾಲಿ, ದುಯ್ ತಾಲ್, ಝಪ್
ಾಲ್, ಸುರಪಂಖತಾಲ್, ಚೌಕಾಲಿ, ಶೇನ್‌ತಾಲ್
ಮಾತ್ರೆಗಳು ೧೬ ಅಲ್ಲ), ರುದ್ರತಾಲ್, ಬ್ರಹ
ಾಲ್, ತಂಚಂ ಸವಾರಿ ಆಡಶೇಖ, ವಿಷ್ಣುಪಾಲ್
ಕ್ಷ್ಮೀಪಾಲ್, ರಾಸ್‌ಪಾಲ್ ಮುಂತಾದ ತಾಳ
ಳನ್ನು ಸರ್ವ ಸಾಧಾರಣವಾಗಿ ಉಪಯೋಗಿಸು
ತ್ತಾರೆ, ೮, ೧೦, ೧೬ ಮಾತ್ರೆಗಳ ತಾಳಗಳಿಗಿಂತ
೭, ೧೪, ೧೨, ೧೫, ೨೮. ಮಾತ್ರೆಯ ತಾಳಗಳ
ಉಪಯೋಗ ಜಾಸ್ತಿಯಾಗಿರುತ್ತದೆ.




ಗುರು ಮೈಶ್ರಾಮ ಅಮೊಬಿ ಸಿಂಗ

## ಗುರುಪರಂಪರೆ

ಮಣಿಪುರಿ ನೃತ್ಯವಿಶಾರದ ಗುರುಗಳಲ್ಲಿ ಈಗ ಪ್ರಸಿದ್ಧರಾದವರು ಗುರು ಹೌಬಂ ಅತೊಂಬ ಸಿಂಗ್ ಗುರು ಮೈಶ್ರಾಂ, ಅಮೋಬಿ ಸಿಂಗ್, ಅಘಾಬಿ ಕೋಮಲ್ ಸಿಂಗ್. ದಿವಂಗತ ಯಾಮೂಬಿಸಿಂಗ, ಮಹೀಬೀರ ಸಿಂಗ ಇವರು ಮುಖ್ಯರಾದವರು. ಮಣಿಪುರದವರನ್ನು ಬಿಟ್ಟರೆ ಭಾರತದ ಇತರ ಪ್ರಾಂತ್ಯಗಳಲ್ಲಿ ಶಾಸ್ತ್ರೋಕ್ತ ಮಣಿಪುರಿ ನೃತ್ಯ ಕಲಿತು ಪ್ರಶಸ್ತಿ ಪಡೆದಿರುವವರು ಶ್ರೀಮತಿ ರೀತಾ ಚಟರ್ಜಿಯವರು, ಉಳಿದವರು ಅಷ್ಟಕ್ಕಷ್ಟೆ. ರಾಸ ನೃತ್ಯ ರಾತ್ರಿ ಒಂಬತ್ತರಿಂದ ಬೆಳಗಿನ ಜಾವ ೪-೫ ಗಂಟೆಗಳ ವರೆಗೂ ನಡೆಯುತ್ತದೆ. ಈ ನೃತ್ಯ ಅವರ ಮನೋರಂಜನೆಗಲ್ಲ. ಇದು ವೈಷ್ಣವ ಭಕ್ತಿ ಪಂಥದ ಜನರ ಆರಾಧನಾ ಮಾರ್ಗ, ನೃತ್ಯದಿಂದಲೇ ಭಗವಾನ್ ಗೋವಿಂದಜೀ ಪ್ರಸನ್ನನಾಗಿ ಮೋಕ್ಷ ಕೊಡುತ್ತಾನೆಂಬ ದೃಢನಂಬಿಕೆ, ಇದರಿಂದಲೇ ರಾಸನೃತ್ಯದಲ್ಲಿ ಭಕ್ತಿರಸ ಬಿಟ್ಟು ಬೇರೆ ಇಲ್ಲ. ಹಾವಭಾವಗಳು, ಕೀಳು ದರ್ಜೆಯ ಅಭಿನಯ ಇದರಲ್ಲಿಲ್ಲ. ನೃತ್ಯ ಮಾಡುವ ಸ್ತ್ರೀಯರ ಮುಖ ಕಾಣದಂತೆ ಮುಖದ ಮೇಲೆ ತೆಳ್ಳನೆಯ ಬಟ್ಟೆ ಇರುತ್ತದೆ. ನರ್ತನ ಮಾಡುವಾಗ ಕಾಲು ಕಾಣಿಸುವುದು ಅಪರಾಧವಾಗಿ ಭಾವಿಸುತ್ತಾರೆ. ಇದರಿಂದಲೇ ಈ ನೃತ್ಯದಲ್ಲಿ ಕಾಲು ಕಾಣುವುದಿಲ್ಲ.

## ಜಾನಪದ ನೃತ್ಯಗಳು

ರಾಸನೃತ್ಯವಲ್ಲದೆ, **ಪೂಂಗ್ ಚಲೋನ್,** (ಮಣಿಪುರಿಯಲ್ಲಿ ಮೃದಂಗಕ್ಕೆ ಪೂಂಗ್ ಎನ್ನುತ್ತಾರೆ) **ಮೃದಂಗ್ ನೃತ್ಯ, ಕರತಾಲ್ ನೃತ್ಯ, ಖುಬಾಇಶೈ ಲೆಹರಾಬ್,** (ಈ ನೃತ್ಯ ಮಾತ್ರ ಶೈವಪಂಥದ್ದು. ಇದನ್ನು ಕೇವಲ ವರ್ಷಕ್ಕೊಂದು ಸಾರಿ ಮಾತ್ರ ಮಾಡುತ್ತಾರೆ ಮಣಿಪುರಿಗಳು ವೈಷ್ಣವರಾಗುವುದಕ್ಕೆ ಮುಂಚೆ ಪೂಜಿಸುತ್ತಿದ್ದ ಥಾಂಗ್-ಜಿನ, ಎಂಬ ದೇವರ ನೆನಪಿನಲ್ಲಿ ಈ ನೃತ್ಯಮಾಡುತ್ತಾರೆ. ಥಾಂಗ್



ಕರತಾಲ್ ನೃತ್ಯಗಾರ

ಜಿನ ದೇವಾಲಯ ಮೈರಾಂಗ ಊರಿನಲ್ಲಿದೆ. **ಲೆಹರಾಬ್** ಈ ಊರಿನಲ್ಲಿ ಪ್ರಸಿದ್ಧ, **ಖಂಬಾ-ಥೈಬಿ** ಮಣಿಪುರದ ಚರಿತ್ರೆಯಲ್ಲಿ ಪ್ರಾಮುಖ್ಯ ಪಡೆದಿರುವ ಪ್ರಣಯಿಗಳ ನೃತ್ಯ. **ಥೆಬಲ್ ಚೊಂಬ,** ಎಂಬ ಈ ಬೆಳದಿಂಗಳ ನೃತ್ಯವನ್ನು ಹೋಳಿಹುಣ್ಣಿಮೆಯ ದಿನ ರಾತ್ರಿ ವಯಸ್ಸಿನ ಯುವಕ-ಯುವತಿಯರು ಒಬ್ಬರ, ಕೈಯನ್ನೊಬ್ಬರು ಹಿಡಿದುಕೊಂಡು ಬೆಳದಿಂಗಳಿನಲ್ಲಿ ನರ್ತಿಸುತ್ತಾರೆ. ಇದಲ್ಲದೆ ನಾಗಾ ನೃತ್ಯವನ್ನು ನಾಗಾ ಮತ್ತು ಚಿನ್ ಪರ್ವತವಾಸಿಗಳು ನರ್ತಿಸುತ್ತಾರೆ.

ಕೆಲವೇ ಮಾತಿನಲ್ಲಿ ಹೇಳುವುದೆಂದರೆ ಮಣಿಪುರದವರಿಗೆ, ನೃತ್ಯ ಮೋಕ್ಷದ ಮಾರ್ಗ, ಧರ್ಮದ ದೀಕ್ಷೆ, ಸಂಸ್ಕೃತಿ. ಈ ಧ್ಯೇಯವಿರುವುದರಿಂದಲೇ ಭಾರತದ ಶಾಸ್ತ್ರೋಕ್ತನೃತ್ಯಗಳಲ್ಲಿ ಈ ನೃತ್ಯ ಮಾತ್ರ ಪರಂಪರೆಯಾಗಿ ಉಳಿದು, ಶ್ರೀಮಂತರ ಮನೋರಂಜನೆಗಾಗಿ, ಧನಾರ್ಜನೆಗಾಗಿ, ಈ ಶ್ರೇಷ್ಠ ನೃತ್ಯ ಕಲೆಯ ವ್ಯಭಿಚಾರವಾಗದೆ ಉಳಿದಿರುವುದು ಭಾರತದ ಸುದೈವ. ಈ ವೈಶಿಷ್ಟ್ಯ ಭಾರತದ ಉಳಿದಾವ ಶಾಸ್ತ್ರೀಯ ನೃತ್ಯಗಳಲ್ಲಿ ಉಳಿಯದಿರುವುದ ದುರ್ದೈವ. ಧನ್ಯ ಮಣಿಪುರಿ, 'ಧನ್ಯ'

# ಕನ್ನಡ ಚಿತ್ರರಂಗದ ಏರುಪೇರು ★ ★

ಈಗ ಅಧಿಕ ಸಂಖ್ಯೆಯಲ್ಲಿ ಕನ್ನಡ ಚಿತ್ರಗಳು ಬರುತ್ತಿರುವದೇನೋ ನಿಜ. ಆದರೆ ತಕ್ಕ ಪ್ರೋತ್ಸಾಹ ಅವುಗಳಿಗೆ ದೊರೆಯುತ್ತಿಲ್ಲ. ಒಳ್ಳೆಯ ಚಿತ್ರ ಕೊಡಬೇಕೆಂದು ನಿರ್ಮಾಪಕ ಹವಣಿಸಿದರೂ ಪ್ರೋತ್ಸಾಹ ದೊರೆಯದೆ ಹೆಚ್ಚು ವೆಚ್ಚದ ಚಿತ್ರವನ್ನು ಅವನು ಹೇಗೆ ಸಿದ್ಧಪಡಿಸಬಲ್ಲನು? ನಟನೆ, ದಿಗ್ದರ್ಶನ, ನಿರ್ಮಾಣ ರಂಗಗಳಲ್ಲಿ ದುಡಿದು ಅನುಭವಪಡೆದ ಶ್ರೀ. ಜಿ. ವಿ. ಅಯ್ಯರರು ಇಲ್ಲಿ ತಮ್ಮ ಅನುಭವದ ದಾರುಣಚಿತ್ರವನ್ನು ಕನ್ನಡಿಗರೆದುರು ಇರಿಸಿರುವರು.

ಬರೆದವರು :
ಶ್ರೀ. ಜಿ. ವಿ. ಅಯ್ಯರ
ಮದ್ರಾಸ

ನಿರ್ಮಾಪಕರಿಗೆ ಮಾತ್ರವಲ್ಲ. ಸ್ಟುಡಿಯೋ ಆಳಿನಿಂದ ನಿರ್ದೇಶಕನವರೆಗೂ ಎಲ್ಲರಿಗೂ ಯಥಾರೀತಿ ಗೊತ್ತಾಗಿಯೇ ಇರುತ್ತದೆ, ತತ್ರಾಪಿ ಕನ್ನಡ ಚಿತ್ರರಂಗದಲ್ಲಿ ಏರಿಗಿಂತ ಪೇರೇ ಹೆಚ್ಚು ಎಂದು.

ಸತಿ ಸುಲೋಚನದಿಂದ ಧರ್ಮವಿಜಯದವರೆಗೂ ಕಳೆದ ಸುಮಾರು ೨೫ ವರ್ಷಗಳಲ್ಲಿ ಒಬ್ಬಿಬ್ಬರನ್ನುಳಿದು ಮಿಕ್ಕವರೆಲ್ಲಾ ಬೇಸ್ತು, ಡಬ್ಬಲ್ ಬೇಸ್ತು, ಟ್ರಿಬಲ್ ಬೇಸ್ತು ತಿಂದು ಸುಸ್ತಾಗಿರುವವರೇ? ಹಿಂದೆ ಕನ್ನಡ ಚಿತ್ರಗಳು ಕಡಿಮೆಯಿದ್ದಾಗ ಅಂದರೆ ೫೧-೫೨ ರವರೆಗೆ ವರ್ಷಕ್ಕೆ ಕೇವಲ ನಾಕಾರು ಚಿತ್ರಗಳು ಬರುತ್ತಿದ್ದವು. ಆಗ ಅದು ಏರು. ಈಗ ನೋಡುತ್ತಿರುವಷ್ಟೇ ಜನ ಆಗಲೂ ನೋಡುತ್ತಿದ್ದರು. ಆದರೆ ಈಗ ೧೨ ರಿಂದ ೧೮ ಚಿತ್ರಗಳು ಬರುತ್ತವೆ. ನೋಡುವ ಜನಸಂಖ್ಯೆ ಹಂಚಿಹೋಗುತ್ತಿದೆ. ವೆಚ್ಚ ಹೆಚ್ಚಾಗುತ್ತಿದೆ. ಲಾಭದ ಹೆಸರೇ ಇಲ್ಲದಂತಾಗಿದೆ. ಇದು ಪೇರು. ಮೇಲಾಗಿ ನಮ್ಮ ದೇಶದ ಎರಡು/ಕೋಟಿ ಜನದಲ್ಲಿ ಒಂದೂವರೆ ಕೋಟಿ ಕನ್ನಡೇತರ ಭಾಷಾಭಿಮಾನಿಗಳು. ಹೋಗಲಿ ಐವತ್ತು ಲಕ್ಷ ಜನವಾದರೂ ಕನ್ನಡಚಿತ್ರ ನೋಡುವರು. ತಲೆಗೆ ನಾಲ್ಕಾಣೆಯಂತೆ ೧೨॥ ಲಕ್ಷ ರೂಪಾಯಿ ಉತ್ಪತ್ತಿಯಾಗುವುದು. ನಿರ್ಮಾಪಕನ ಪಾಲಿಗೂ ನಾಲ್ಕು ಲಕ್ಷವಾದರೂ ಗಿಟ್ಟೇತೆಂದರೆ ಹಂಚಿಕೆಯಲ್ಲೂ ಪ್ರದರ್ಶನದಲ್ಲೂ ನಿಃಸ್ಪೃಹತೆ ಇರಬೇಕು ತಾನೆ?

ಪ್ರಾರಂಭದಲ್ಲೇ ಕಂಡವರ ಕಾಸಿಗೆ ಕೈಯೊಡ್ಡಿ ಚಿತ್ರ ತೆಗೆಯುವ ನಿರ್ಮಾಪಕ—ಅವನ ಜೀವಾಳ ಕಂಡುಕೊಂಡ ಬಂಡವಾಳಗಾರ—ಹಂಚಿಕೆದಾರ—ಪ್ರದರ್ಶನಕಾರ ಎಲ್ಲರೂ ಸೇರಿ "ಕಾಗೆ ನರಿ ಮಾಂಸತುಂಡಿನ" ಕಥೆ ಮಾಡಿಬಿಡುತ್ತಾರೆ. ಈ ಎಲ್ಲರೂ ಯಥೋಚಿತ ಸಹಾಯದಿಂದ ಒಂದೆರಡು ಚಿತ್ರಗಳನ್ನು ತೆಗೆಯುವದರೊಳಗೇ ಮನೆ ಮಾರಿಯೋ-ಕೋರ್ಟು ಕಚೇರಿ ಮೆಟ್ಟಿಲು ಹತ್ತಿಯೋ ಸುಸ್ತಾಗಿ, ಇಸ್ಪೀಟಾಟದಲ್ಲಿ ಎಕ್ಕಪರೇಲು ಬಿದ್ದವನ ಎದುರಾಳಿಯಂತಾಗುತ್ತಾನೆ ನಿರ್ಮಾಪಕ! ಇನ್ನು ಅವನನ್ನೇ ನಂಬಿ ಕಂಗೆಟ್ಟ ಬೆಟಾಲಿಯನ್ ಬ್ರಹ್ಮಾಂಡವನ್ನೆಲ್ಲ ಗಲಬರಿಸುತ್ತದೆ ತಮ್ಮ ಜೀವನ ಸಮಸ್ಯೆಯ ಪರಿಹಾರೋಪಾಯಕ್ಕೆ. ಹೀಗಿದೆ ಸದ್ಯದ ಸ್ಥಿತಿ.

## ಪ್ರಗತಿಪಥದಲ್ಲಿ ಚಿತ್ರಗಳು

ಇಷ್ಟಾದರೂ ಅನ್ಯಭಾಷೆಯಲ್ಲಿ ಬರುತ್ತಿರುವ ಚಿತ್ರಗಳಿಗಿಂತ ಇಂದಿನ ಕನ್ನಡ ಚಿತ್ರಗಳಲ್ಲಿ ಎಷ್ಟೋ ಪ್ರಗತಿಪಥದಲ್ಲಿವೆ. ಉದಾಹರಣೆಗೆ ಜಾತಕಫಲ, ಬೇಡರಕಣ್ಣಪ್ಪ, ಹರಿಭಕ್ತ, ಸ್ಕೂಲಮಾಸ್ಟರ್, ಬಸವೇಶ್ವರ ಮೊದಲಾದ ಇನ್ನೂ ಅನೇಕ ಕೃತಿಗಳನ್ನು ಎಲ್ಲರೂ ತುಂಬು ಹೃದಯದಿಂದ ಹೊಗಳಿದ್ದಾರೆ. ಆದರೆ ಕನ್ನಡದಲ್ಲಿ ಎಲ್ಲಾ ಚಿತ್ರಗಳೂ ಉತ್ತಮವಾಗಿ ಬರಲು ಸಾಧ್ಯವಾಗಲಿಲ್ಲ. ಅದಕ್ಕೆ ಕಾರಣ ನಿರ್ಮಾತೃಗಳ ಅನಾನುಕೂಲತೆ, ಕೃತಿಕಾರನೊಂದಿಗೆ ನಿರ್ದೇಶಕನ ಸಹಾಯವಿಲ್ಲದಿರುವುದು, ತಂತ್ರಜ್ಞನೊಂದಿಗೆ ಕೃತಿಕಾರನ ಅಸಹಕಾರ. ಎಲ್ಲವೂ ಒಮ್ಮತವಾಗಿದ್ದರೆ, ಒಂದೇ ಚಿತ್ರಕಥೆಗೆ ಇಬ್ಬರು ಮೂವರ ಪೈಪೋಟಿ. ಅಂತೂ, ಇಂತೂ ಬೋಲ್ಟಿಗೆ ನಟ್ ಇಲ್ಲದೆ ಸಿಕ್ಕಿದ ವಾಷರ್‌ಗಳನ್ನೆಲ್ಲಾ ಭರ್ತಿ ಮಾಡಿಕೊಂಡು ಗಾಲಿ ಕಳಚದೆ ಓಡಿಸುತ್ತಿದ್ದಾರೆ ಕನ್ನಡ ಚಿತ್ರರಂಗದ ರಥವನ್ನು.

ಕೃತಿ ಬರೆಯುವವನು ಕ್ಯಾಮರಾ ವಿಷಯವೇ ಗೊತ್ತಿಲ್ಲದೆ ನಿರ್ದೇಶಕನಾಗಬೇಕೆನ್ನುತ್ತಾನೆ. ಕ್ಯಾಮರಾದವನು ಕೃತಿಕಾರನ ಕಲ್ಪನೆಯನ್ನೇ ತಿಳಿಯದೆ ನಿರ್ದೇಶಕನಾಗಬಯಸುತ್ತಾನೆ.

ಇಂತೆಯೇ ನಟ-ಗಾಯಕ-ಸಂಕಲನದವ-ಪ್ರೊಡಕ್ಷನ್-ಮ್ಯಾನೇಜರ್, ಕಡೆಗೆ ಸೆಟ್‌ಬಾಯ್ ಸಹ ನಿರ್ಮಾಪಕ, ನಿರ್ದೇಶಕನಾಗಬೇಕೆಂಬ ಹಂಬಲ. ಇದು ಮನಷ್ಯ ಸಹಜವಾದದ್ದೇ ಹೌದು. ಹಾಗಾಗಲೂ ಬೇಕು. ಆದರೆ ಯಾವಾಗ ಹೇಗೆ ಆಗಬೇಕೋ ಹಾಗೆ ಆಗಬೇಕು. ಇಲ್ಲದಿದ್ದರೆ ನಮ್ಮೆದುರಿಗೆ ಬರುವ "ಮಾಂಗಲ್ಯಯೋಗ", "ಮನೆಗೆ ಬಂದ ಮಹಾಲಕ್ಷ್ಮಿ"ಯಂತಾಗುವುದಲ್ಲೇನೂ ಆಶ್ಚರ್ಯವಿಲ್ಲ.

ಉತ್ತಮ ಸಾಹಿತಿಯ ಕೃತಿ ತಂತ್ರಜ್ಞರ ಸಹಕಾರ ಚತುರನಾದವನ ನಿರ್ದೇಶನ - ಚಿತ್ರ ಪೂರ್ಣವಾಗುವವರೆಗೆ ಕಂಡವರಲ್ಲಿ ಕಾಸು ಕೇಳದ ನಿರ್ಮಾಪಕ— ಈ ಎಲ್ಲರ ಒಕ್ಕೂಟ ಎಂದು ಆಗುವುದೋ ಅಂದು ಕನ್ನಡಕ್ಕೆ ಒಳ್ಳೆಯ ಚಿತ್ರಗಳೇ ಬರುತ್ತವೆ— ಅನ್ಯ ಭಾಷೆಗಳಲ್ಲಿ ಈ ಸೌಲಭ್ಯ ಹೆಚ್ಚಾಗಿದೆ. ಅಂತೆಯೇ ಅಲ್ ಒಳ್ಳೆಯ ಚಿತ್ರಗಳ ಸಂಖ್ಯೆಯೂ ಹೆಚ್ಚಿದೆ.

ಉತ್ತಮ ಚಿತ್ರಗಳಿದ್ದರೆ ಖಂಡಿತ ನೋಡುತ್ತೇವೆ ಪ್ರೋತ್ಸಾಹಿಸುತ್ತೇವೆ ಎನ್ನುತ್ತದೆ ನಮ್ಮ ಜನತೆ ಅದು ಅವರ ತಪ್ಪು ಅಲ್ಲ. ನಾವೆಲ್ಲಾ ಒಂದೇ ಯಾವ ಭಾಷೆಯಾದರೇನು- ಎಲ್ಲಕ್ಕೂ ಪ್ರೋತ್ಸಾಹಿಸಬೇಕು ಎನ್ನುವುದು ನಿಜ. ಕನ್ನಡ ಚಿತ್ರಗಳಿಗೆ ಪ್ರೋತ್ಸಾಹವಿಲ್ಲ ಎನ್ನುವ ನಿರ್ಮಾಪಕರ ಉದ್ಗಾರ ಕೇಳಿಬರುತ್ತಿರುವುದೂ ನಿಜ. ಇದೆಲ್ಲ ಹೇಗಿದೆಯೆಂದರೆ ಬೀಜವೃಕ್ಷನ್ಯಾಯದಂತಿದೆ. ಏನೆ ಇದ್ದರೂ ಭಾಷಾಭಿಮಾನ ಬೇಕೆನ್ನುವುದು ಎಲ್ಲರೂ ಒಪ್ಪಿಕೊಳ್ಳಲೇಬೇಕು.

## ಸರಕಾರದ - ಜನತೆಯ ಪ್ರೋತ್ಸಾಹ

ಬೇರೆ ಭಾಷೆಗೆ ನಮ್ಮ ದೇಶದಲ್ಲಿರುವಷ್ಟು ಪ್ರೋತ್ಸಾಹ ಇನ್ನೆಲ್ಲೂ ಇಲ್ಲ. ಇದು ನಮ್ಮ ದೊಡ್ಡತನವೇ ಹೌದು. ಆದರೂ ತಮ್ಮ ಮಕ್ಕಳನ್ನು ಭಿಕ್ಷಕ್ಕೆ ಬಿಟ್ಟಾದರೂ - ಕಂಡವರ ಮಕ್ಕಳನ್ನು ಕಾಪಾಡುವ ದಯಾಗುಣ ಅಪಾಯಕಾರಿ. ಹೀಗೆಯೇ ಮುಂದುವರಿದರೆ ಕೆಲವೇ ದಿನಗಳಲ್ಲಿ ಕನ್ನಡತನವೇ ನಮ್ಮಲ್ಲುಳಿಯದೆ ಹೋಗಲೂಬಹುದು. ಇದು ಊಹೆಯಲ್ಲ- ಹೃದಯ ವಿದ್ರಾವಕವಾದ ವಿಹಂಗಮ ದೃಷ್ಟಿಯ ನಗ್ನಸತ್ಯ! ಇಂದು ಇಡೀ ಭಾರತದಲ್ಲಿ ಹಿಂದೀ ಪ್ರಚಾರಕ್ಕೆ ಸರ್ಕಾರ ಮಾಡಿರುವ ಕೆಲಸಕ್ಕಿಂತ ಹೆಚ್ಚು ಚಿತ್ರರಂಗ ಮಾಡಿದೆಯೆಂದರೆ ಅತಿಶಯೋಕ್ತಿಯಲ್ಲ. ಹಾಗೆಯೇ ಪ್ರತಿ ಭಾಷೆಗೂ ಆಯಾ ಚಿತ್ರರಂಗ ಸಹಾಯ ಮಾಡುತ್ತಲೇ ಇದೆ. ಆದರೆ ಅದೇನು ಕನ್ನಡ ಚಿತ್ರರಂಗಕ್ಕೆ ಶಾಪವೋ ಕಾಣೆ- ಕನ್ನಡ ಚಿತ್ರವೆಂದರೆ ಕೀಳು ದರ್ಜೆಯದೆಂದು ತೀರ್ಮಾನವಾಗಿ ಕನ್ನಡದ. ಪ್ರಮುಖ ಕೇಂದ್ರಗಳಲ್ಲೇ ಒಳ್ಳೆಯ ಪ್ರದರ್ಶನ ಮಂದಿರಗಳಲ್ಲಿ ಅವಕ್ಕೆ ಅವಕಾಶವೇ ಇಲ್ಲದಂತಾಗಿದೆ. ಏಕೆಂದರೆ ಅವೆಲ್ಲಾ ಅನ್ಯಭಾಷೀಯರ ಆಡಳಿತದಲ್ಲೇ ಹೆಚ್ಚಾಗಿದೆ. ಅವರಿಗೆ ಕನ್ನಡದ ಮೋಹ ಅಷ್ಟಕಷ್ಟೆ. ಇಂದು ಬಂಗಾಳದಲ್ಲಿ ಉನ್ನತಾಧಿಕಾರಿಗಳು- ಇಂಗ್ಲೀಷು-ಹಿಂದೀ ಪಾರಂಗತರು ಎಷ್ಟೋ ಮಂದಿ - ಎದುರಾಳಿ ಬೇರೆ

ಭಾಷೆಯಲ್ಲಿ ಮಾತಾಡಿದರೂ ತಾವು ಬಂಗಾಳಿಯಲ್ಲೇ ಮಾತಾಡುತ್ತಾ, ಅವನನ್ನೂ ತಮ್ಮ ಭಾಷೆಗೆ ಸೆಳೆಯುವುದನ್ನು ನಾವು ಸ್ವಂತ ಅನುಭವದಿಂದ ಕಂಡಿದ್ದೇವೆ. ಅಂತೆಯೇ ತಮಿಳು, ತೆಲುಗು ದೇಶಗಳಲ್ಲೂ ಭಾಷಾಭಿಮಾನಿಗಳನೇಕರಿದ್ದಾರೆ. ಕನ್ನಡದಲ್ಲಿ ಈ ಅಭಿಮಾನ ಮೂಡಿ ಬಂದಂದು, ಬೇರೆ ನಾಡುಗಳಲ್ಲಿ ನಮ್ಮ ಚಿತ್ರ ಪ್ರದರ್ಶಿಸುವಂತಾದಂದು-ಕನ್ನಡ ಚಿತ್ರರಂಗದ ಪರಿಸ್ಥಿತಿ ಉತ್ತಮಗೊಳ್ಳುವುದೆಂದು ಖಂಡಿತ ಹೇಳಬಹುದು.

### ನಿರ್ಮಾಪಕರ ತೊಂದರೆ

"ಕನ್ನಡ ಚಿತ್ರನಿರ್ಮಾಪಕರೆಷ್ಟೋ ಮಂದಿ ತಮಿಳು, ತೆಲುಗು ಚಿತ್ರಗಳ ತಯಾರಿಕೆಗಿಳಿದಿದ್ದಾರೆ, ಇದು ತಪ್ಪು. ಕನ್ನಡಕ್ಕೇ ಅವಮಾನ" ಎನ್ನುವ ಕನ್ನಡ ಜನತೆ ಬರುತ್ತಿರುವ ಕನ್ನಡ ಚಿತ್ರನಿರ್ಮಾಪಕರ ಹೊಟ್ಟೆ ತುಂಬಿಸಲಿ. ಅವರು ಯಾವಾಗಲೂ ಕನ್ನಡ ಚಿತ್ರಗಳೇ ತೆಗೆಯುವಂತೆ ಮಾಡಲಿ. ಹಾಗಲ್ಲದೆ "ತಾನೂ ಕೊಡ, ತಿನ್ನೋಕ್ಕೂ ಬಿಡ" ಎನ್ನುವ ನೀತಿ ಯಾರಿಗೂ ಸಲ್ಲದು. ನಾನೊಮ್ಮೆ ಕನ್ನಡದ ಎಷ್ಟೋ ನಟನಟಿಯರಲ್ಲಿ ಈ ಪ್ರಶ್ನೆ ಎತ್ತಿದಾಗ "ಕನ್ನಡಾನೇ ನಂಬ್ಕೊಂಡಿದ್ರೆ ಹೊಟ್ಟೆಗೆ ತಣ್ಣೀರು ಬಟ್ಟೆ ಹಾಕ್ಕೋಬೇಕಾಗಿತ್ತು" ಎಂದಿದ್ದಾರೆ. ಅಂತೆಯೇ ಈಗವರು ಬೇರೆ ಭಾಷೆಯನ್ನು ನಂಬಿ ಲಕ್ಷಾಂತರ ಗಳಿಸಿಯೂ ಇದ್ದಾರೆ. ಕನ್ನಡವನ್ನೇ ನಂಬಿದವರು ಕಂಗೆಟ್ಟು ಕುಳಿತೂ ಇದ್ದಾರೆ. ಅವರೆಲ್ಲ ಹೇಳುವುದಿಷ್ಟೆ "ನಮ್ಮ ಜನಕ್ಕೆ ಭಾಷಾಭಿಮಾನ ಸಾಲದು" ಎಂದು. ಮಾರ್ಕೆಟ್ಟು ಸಣ್ಣದು. ಹೆಚ್ಚು ವೆಚ್ಚ ಮಾಡಿ ಚಿತ್ರ ತೆಗೆದರೆ ವರಮಾನ ಬರುವುದಿಲ್ಲ. ಸುಲಭ ವೆಚ್ಚದಲ್ಲಿ ಒಳ್ಳೇ ಚಿತ್ರ ತೆಗೆಯುವ ಸಾಹಸ ಬಂಡವಾಳಗಾರನ ಬೆಂಬಲವಿಲ್ಲದೆ ಸಾಧ್ಯವಿಲ್ಲ.

ನೆರೆಹೊರೆಯ ಭಾಷೆಯವರಂತೆ ನಾವು ಹೊರದೇಶಗಳಲ್ಲಿ ನಮ್ಮ ಭಾಷಾ ಪ್ರಚಾರ ಮಾಡದಿದ್ದರೂ ತಾಯಿಭಾಷೆಯನ್ನು ಮೆಲುಕು ಹಾಕುವ ಅಭ್ಯಾಸವಾದರೂ ಇಟ್ಟುಕೊಂಡಿದ್ದರೆ ಒಂದಲ್ಲ ಒಂದು ದಿನ ಕನ್ನಡಚಿತ್ರದ ಮೇಲೆ ಅಭಿಮಾನ ಮೂಡಿಬಂದೀತು. ಕನ್ನಡದ ಅನ್ನ ಬಾಯಿತುಂಬ ಇಟ್ಟುಕೊಂಡು ಅನ್ಯ ಭಾಷೆಯ ಮೋಹಕ್ಕೆ ಬೀಳುವ ಅಧಿಕಾರಿಗಳನೇಕರನ್ನು ಈಗಲೂ ನಾವು ಕಾಣುತ್ತಿದ್ದೇವೆ. ಅವರೆಲ್ಲ ಹಿಂದಿಯೋ ಮರಾಠಿಯೋ ಗುಜರಾತಿಯೋ ತಮಿಳೋ ತೆಲುಗೋ ಮಾತಾಡುತ್ತಲೇ ನಮ್ಮ ಮೇಲೆ ಅಧಿಕಾರ ಚಲಾಯಿಸುತ್ತಿದ್ದಾರೆ. ಅವರಿಗೆ ಕನ್ನಡ ಪದವಿಗೆ ಬರುವುದಕ್ಕೆ ಮಾತ್ರ ಬೇಕಾಗಿದ್ದು ಈಗ ಅದನ್ನಾಡುವುದು ಅವಮಾನವೆನ್ನುವ ಸ್ಥಿತಿಗಿಳಿದಿದ್ದಾರೆ. ಸರ್ಕಾರ ಸಾಹುಕಾರರುಗಳ ಕೈಯಲ್ಲಿ




ಸಿಕ್ಕಿ ಒದ್ದಾಡುತ್ತಿರುವ ಈ ವೃತ್ತಿ, ಕೇವಲ ಜನತೆಯ ಬೆಂಬಲದಿಂದ ಬಲಿಯಬೇಕಾಗಿದೆ.

### ಒಳ್ಳೆಯ ಚಿತ್ರಗಳು

ನಮ್ಮೊಬ್ಬ ಹಂಚಿಕೆದಾರರು ಹೇಳಿದ್ದರು- "ಇನ್ನು ಹತ್ತು ವರ್ಷಗಳ ವರೆಗೆ ಕನ್ನಡ ಚಿತ್ರ ತೆಗೆಯುವವರು ಫಲ ಕಾಣುವುದು ಕಷ್ಟ- ಆ ಮೇಲೆ ಸರಿಹೋಗುವುದು" ಎಂದು. ಅವರು ಹೇಳಿ ಮೂರು ವರ್ಷವಾಯ್ತು. ಹಣ್ಣುತಲೇ ಮನುಷ್ಯ- ವ್ಯಾಪಾರ ವ್ಯವಹಾರಗಳಲ್ಲಿ ಅತಿ ಚತುರ — ಆದ್ದರಿಂದಲೇ ಹಾಗೆ ಎಣಿಕೆ ಹಾಕಿರಬೇಕು. ಈಗೀಗ ನನಗೂ ಹಾಗೇ ಅನ್ನಿಸುತ್ತದೆ. ಎಷ್ಟೋ ಜನ ದೇಶಪ್ರೇಮಿಗಳ ಬಲಿದಾನವಾದ ಮೇಲೆ ತಾನೆ ಸ್ವತಂತ್ರ ರಾಜ್ಯ ಸ್ಥಾಪನೆಯಾಯ್ತು. ಹಾಗೆಯೇ ಚಿತ್ರರಂಗದ ಪ್ರಗತಿಗೂ ಭಾಷಾಪ್ರಚಾರಕ್ಕೂ ಭಾಷಾಭಿಮಾನಿಗಳ ಶ್ರಮದಾನವಾದರೂ ಬೇಡವೆ? ಕನ್ನಡ ಚಿತ್ರರಂಗ ಹುಟ್ಟುವ ಮೊದಲೇ ನಮ್ಮ ನಾಡಿನಲ್ಲಿ ತಮ್ಮ ಸ್ವಾಸ್ಥ್ಯವನ್ನು ಪ್ರಬಲಿಸಿಕೊಂಡಿದ್ದ ಪರಭಾಷಾ ಚಿತ್ರಗಳ ಸರಿಸಮನಾಗಿ ನಿಲ್ಲಬೇಕಾದರೆ ಒಳ್ಳೆಯ ಚಿತ್ರಗಳನ್ನು ತೆಗೆಯುತ್ತಲೇ ಇರಬೇಕು. ಜನಗಳಲ್ಲಿ ಕನ್ನಡತೆಯನ್ನು ಮೂಡಿಸಬೇಕು. "ಬೇರೆಯ ಚಿತ್ರಗಳಿಗಿಂತ ಕನ್ನಡ ಚಿತ್ರ ಚೆನ್ನಾಗಿದೆ" ಎನ್ನುವಂತಾಗಬೇಕು. ಆಗ ಕನ್ನಡ ಜನತೆಯಿಂದ ಕೈತುಂಬಾ ಹೊನ್ನು- ಬಾಯ್ತುಂಬಾ ಹೊಗಳಿಕೆಯನ್ನೂ ನಿರೀಕ್ಷಿಸಬಹುದು.


ವೃಥಾ ಕನ್ನಡಿಗರನ್ನು ಅಲ್ಲಗಳೆಯದೆ ಅವರಲ್ಲಿ ಅಭಿಮಾನ ಮೂಡಿಸುತ್ತಾ ಕರ್ತವ್ಯತತ್ಪರರಾಗೋಣ. ಒಂದಲ್ಲ ಒಂದು ದಿನ ನಮ್ಮ ಕನಸು ನನಸಾದೀತು.



# ೧೯೫೮ - ೫೯ ರ ಕನ್ನಡ ಚಿತ್ರರಂಗದ ಸಿಂಹಾವಲೋಕನ

೧೯೫೮–೧೯೫೯ರಲ್ಲಿ ಸುಮಾರು ೧೪ ಕನ್ನಡ ಚಿತ್ರಗಳು ಪ್ರದರ್ಶನಕ್ಕೆ ಬಂದಿರುವವು. ಈ ವರುಷ ಜಾನಪದ ಚಿತ್ರಗಳ ಚಿತ್ರಣವಿಲ್ಲದಿರುವದು ಎದ್ದು ಕಾಣುತ್ತದೆ. ಆದರೆ ಕನ್ನಡ ಚಿತ್ರರಂಗ ಯಶಸ್ವಿಯಾಗಿ ಮುನ್ನಡೆಯಬಲ್ಲದೆಂಬುದನ್ನು ಈ ಸಂವತ್ಸರದ ಚಿತ್ರಗಳು ತೋರಿಸಿಕೊಟ್ಟಿರುವವು. ಈ ಒಂದು ವರುಷದಲ್ಲಿಯ ಪ್ರಗತಿಯ ವಿಹಂಗಮನೋಟವನ್ನಿಲ್ಲಿ ಕಾಣಬಹುದು.

ಲೇಖಕರು :
**ಶ್ರೀ ಎಚ್. ಕೆ. ವಿಜಯನಾರಸಿಂಹ**
**ಮದ್ರಾಸ**



' ಮನೆಗೆ ಬಂದ ಮಹಾಲಕ್ಷ್ಮಿ ' ಚಿತ್ರದಲ್ಲಿ ಕಲ್ಯಾಣಕುಮಾರ ಮತ್ತು ಮೈನಾವತಿ

೧೯೫೮ ನೇ ಇಸ್ವಿಯಲ್ಲಿ ಬಿಡುಗಡೆಯಾದ ತಮಿಳು, ತೆಲುಗು ಚಿತ್ರಗಳು ಒಟ್ಟು ಎಂಬತ್ತು (ಡಬ್ಬಿಂಗ್ ಸಹ ಸೇರಿ). ಐವತ್ತು ತಮಿಳು ಚಿತ್ರಗಳು ೩೦ ತೆಲುಗು ಚಿತ್ರಗಳು ಬಿಡುಗಡೆಯಾಗಿವೆ. ಆದರೆ ಡಬ್ಬಿಂಗ್ ಸೇರಿಯೂ ಬಿಡುಗಡೆಯಾದ ಕನ್ನಡ ಚಿತ್ರಗಳ ಸಂಖ್ಯೆ ಕೇವಲ ಹತ್ತು. ಸಂಖ್ಯಾಬಲದಲ್ಲಿ ಸೋದರ ಭಾಷೆಗಳೆದುರು ತಲೆ ಎತ್ತಿ ನಿಂತಿಲ್ಲವಾದರೂ "ನಾವು' ಎಂದಾದರೂ ನಮ್ಮ ಭಾಷೆಯ ಬಾವುಟವನ್ನು ಹಾರಿಸಿ ಏರಿಸಿ ಮೆರೆಸಬಲ್ಲೆವೆಂಬುದನ್ನು" ಖಚಿತಪಡಿಸಿರುವ ಸಂವತ್ಸರ ಈ ೧೯೫೮-೫೯ ಎಂದು ಹೇಳಬಹುದು.

### ೧೯೫೮ ರಲ್ಲಿ ಬಿಡುಗಡೆಯಾದ ಚಿತ್ರಗಳು

ಪೌರಾಣಿಕ: (೧) ಭೂಕೈಲಾಸ, (೨) ಭಕ್ತ ಪ್ರಹ್ಲಾದ, (೩) ಕೃಷ್ಣಗಾರುಡಿ, (೪) ಗಿರಿಜಾ ಕಲ್ಯಾಣ. (ಡಬ್ಬಿಂಗ್) ಸಾಮಾಜಿಕ: (೧) ಮನೆ ತುಂಬಿದ ಹೆಣ್ಣು, (೨) ಸ್ಕೂಲ್ ಮಾಸ್ಟರ್ (೩) ಅಣ್ಣ ತಂಗಿ, (೪) ಮಾಂಗಲ್ಯಯೋಗ, (೫) ಮಂಗಳಸೂತ್ರ, (೬) ಅತ್ತಿಗೆ (ಡಬ್ಬಿಂಗ್). ಜಾನಪದ ಚಿತ್ರಗಳು ಈ ಇಸ್ವಿಯಲ್ಲಿ ಬಿಡುಗಡೆಯಾಗದ ಅಂಶ ಇಲ್ಲಿ ಗಮನಾರ್ಹವಾಗಿದೆ. ಜಾನಪದ ಚಿತ್ರಗಳು ಹೆಚ್ಚು ಜನಪ್ರಿಯವಾಗಲಾರವು ಎಂಬ ಶಂಕೆಯಿಂದ ನಿರ್ಮಾಪಕರಾರೂ ಈ ಸಾಹಸಕ್ಕೆ ಕೈಹಾಕದಿದ್ದುದು ಕನ್ನಡ ನಿರ್ಮಾಪಕರ ವ್ಯಾವಹಾರಿಕ ದೃಷ್ಟಿಯ ಕುರುಹಾಗಿದೆ.

### ಜಾನಪದ ಚಿತ್ರಗಳೇಕೆ ಬೇಡ?

ಲಕ್ಷಾಂತರ ರೂಪಾಯಿಗಳನ್ನು ವ್ಯಯಿಸಿ ತಯಾರಿಸಬೇಕಾದ ರಂಜನೀಯ ಜಾನಪದ ಕಥಾವಸ್ತುಗಳನ್ನು ತಕ್ಕಷ್ಟು ಬಂಡವಾಳವಿಲ್ಲದೆ ತಯಾರಿಸುವ ಹುಂಬತನವನ್ನು ಯಾವ ನಿರ್ಮಾಪಕನೂ ಮಾಡಲಾರ. ಇಷ್ಟಾಗಿ ಜಾನಪದ ಚಿತ್ರಗಳೆಂದರೆ ಕೇವಲ ಮನೋರಂಜನೆಗಾಗಿ ತಯಾರಿಸಬೇಕಾದ ಚಿತ್ರಗಳೆಂದು ಬೇರೆ ಹೇಳಬೇಕಾಗಿಲ್ಲ. ಅದನ್ನು ಬಯಸುವ ತರಗತಿಯೇ ಬೇರೆ. ಆ ತರಗತಿಯ ಜನರಿಂದ ದೊರೆಯುವ ಪ್ರೋತ್ಸಾಹ ನಿರ್ಮಾಪಕನನ್ನು ಬದುಕಿಸುವ ಭರವಸೆ ಕಡಿಮೆ. ಅಂದರೆ ಜಾನಪದ ಚಿತ್ರಗಳು ಯಶಸ್ವಿಯಾಗಲಾರವೆಂದಾಗಲಿ ಜಾನಪದ ಚಿತ್ರಗಳ ತಯಾರಿಕೆ ತಪ್ಪೆಂದಾಗಲಿ ಸಿದ್ಧಾಂತ ಮಾಡುವುದು ಸಮಂಜಸವಲ್ಲ. ಪದ್ಮಿನಿ ಚಿತ್ರ ಸಂಸ್ಥೆಯ "ರತ್ನಗಿರಿರಹಸ್ಯ" ಗಳಿಸಿದ ಜನಾನುರಾಗವೇ ಕನ್ನಡ ಚಿತ್ರರಂಗದ ಅದ್ವಿತೀಯ ವಿಕ್ರಮವನ್ನು ಸ್ಥಾಪಿಸಿದ "ಸ್ಕೂಲ್ ಮಾಸ್ಟರ್" ಚಿತ್ರ ತಯಾರಿಕೆಗೆ ಪ್ರೇರಕವಾಯಿತು. ಇಲ್ಲಿ ಎದ್ದು ಕಾಣುವ ಪ್ರಧಾನ ಅಂಶವೆಂದರೆ ತಯಾರಕರ ಸಾಮರ್ಥ್ಯ. ದುಡ್ಡು ಕೊಟ್ಟು ತಲೆನೋವನ್ನು ಕೊಂಡುಕೊಳ್ಳಲು ಯಾವ ಪ್ರೇಕ್ಷಕನೂ ಸಿದ್ಧನಿಲ್ಲ. ದಿನನಿತ್ಯದ ದುಡಿಮೆಯಿಂದ ಸೋತಜೀತದ ಜೀವ ಮನೋರಂಜನೆಯನ್ನು ಬಯಸಿ ಚಿತ್ರವನ್ನು ವೀಕ್ಷಿಸಿದಾಗ ತನ್ನ ಎಣಿಕೆಗೆ ವಿರುದ್ಧ ನಿರಾಶನಾದರೆ ತನ್ನ ನಿರಾಶೆಯ ಸವಿಯನ್ನು ನೂರೆಂಟು ಕಿವಿಗಳಿಗೆ ಮುಟ್ಟಿಸುತ್ತಾನೆ. ಒಬ್ಬ

ನಿರಾಶನಾದ ಪ್ರೇಕ್ಷಕ ಸಾವಿರ ಪ್ರೇಕ್ಷಕರನ್ನೇಕೆ ಲಕ್ಷಾಂತರ ಪ್ರೇಕ್ಷಕರನ್ನು ತಡೆಗಟ್ಟಬಲ್ಲ. ಅಂತೇ ಸಂತೋಷಗೊಂಡರೆ ಮಿಗಿಲಾಗಿ ಪ್ರೋತ್ಸಾಹಿಸಬಲ್ಲ. ಈ ಅಂಶವನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ತಯಾರಿಸಿದ ಯಾವ ಬಗೆಯ ಚಿತ್ರವೇ ಆಗಲಿ ಎಡವುವುದಿಲ್ಲ ಎಂಬುದನ್ನು "ರತ್ನಗಿರಿರಹಸ್ಯ" ಸಮರ್ಥಿಸುತ್ತದೆ. ನಂಬಲು ಬಾರದ ಕಗ್ಗದ ಕತೆಯನ್ನು ಪ್ರೇಕ್ಷಕರ ಮನಸೆಳೆಯುವ ಅಂದಚೆಂದಗಳಿಂದ ಅಲಂಕರಿಸಿ ನಿರೂಪಿಸಿ ಗೆಲುವನ್ನು ಗಳಿಸಬಹುದೆಂಬುದಕ್ಕೆ ಇದು ನಿದರ್ಶನವಾಗಿದೆ. ಆದರೆ ಇದು ಹಣ ಗಳಿಸುವ ಹಾದಿಯನ್ನು ಹಸನುಮಾಡಬಹುದಷ್ಟೆ. ಸಂಸ್ಕೃತಿಯನ್ನು ಉನ್ನತಗೊಳಿಸಿ ಪ್ರೇಕ್ಷಕನ ಜ್ಞಾನದಾಹವನ್ನು ಹೆಚ್ಚಿಸಿ ನವರಸಗಂಗೆಯಿಂದ ತಣಿಸಲೆಳಸುವ ಉತ್ತಮ ಚಿತ್ರಗಳನ್ನು ನಿರ್ಮಿಸುವಲ್ಲಿ ಕನ್ನಡ ಚಿತ್ರರಂಗ ಶ್ರಮಿಸುತ್ತದೆ. ಈ ಪ್ರಗತಿಗೆ ಸತತವಾದ ಪ್ರಯತ್ನ ನಡೆದಿದೆ, ಎಂಬ ಅಂಶವನ್ನು "ಸ್ಕೂಲ್ ಮಾಸ್ಟರ್", ಮತ್ತು "ಅಣ್ಣ-ತಂಗಿ" ಚಿತ್ರಗಳು ತೋರಿಸಿಕೊಟ್ಟಿವೆ. ಅಧಿಕ ಬಂಡವಾಳ ಹಾಕಿ ತಯಾರಿಸಿ ಮನೋರಂಜನೆಯ ದೃಷ್ಟಿಯಿಂದ ಮಾತ್ರ ಮೆಚ್ಚುಗೆ ಗಳಿಸಬಲ್ಲ ಜಾನಪದ ಚಿತ್ರಗಳಿಗಿಂತ ಕಮ್ಮಿ ಬಂಡವಾಳದ ಉತ್ತಮವು ಕಥಾವಸ್ತುವಿನ ಜ್ಞಾನಾರ್ಜನೆಗೆ ಸಾಧಕವಾದ ಸಾಮಾಜಿಕ ಚಿತ್ರತಯಾರಿಕೆ ಲಾಭದಾಯಕ.

## ಪೌರಾಣಿಕ ಚಿತ್ರಗಳು

ಈ ವರುಷದಲ್ಲಿ ಬಿಡುಗಡೆಯಾಗಿರುವ ೧. ಭಕ್ತ ಪ್ರಹ್ಲಾದ ೨. ಭೂ ಕೈಲಾಸ ೩. ಕೃಷ್ಣಗಾರುಡಿ ೪. ಗಿರಿಜಾಕಲ್ಯಾಣ (ಡಬ್ಬಿಂಗ್) ಈ ಚಿತ್ರಗಳಲ್ಲಿ ಅಧಿಕವಾಗಿ ಹಣವನ್ನು ಖರ್ಚು ಮಾಡಿ ತಯಾರಿಸಿರುವ ಚಿತ್ರ "ಭೂ ಕೈಲಾಸ". ಭೂ ಕೈಲಾಸ ಹೆಚ್ಚು ವೆಚ್ಚದ ಚಿತ್ರವಾದ್ದರಿಂದ ಪ್ರತಿಫಲವೂ ಹೆಚ್ಚು ಬರಬೇಕಾಗಿತ್ತು; ಆದರೆ ನಿರೀಕ್ಷಿಸಿದ ಮಟ್ಟದ ಪ್ರತಿಫಲ ಈ ಚಿತ್ರಕ್ಕೆ ದೊರೆತಿಲ್ಲ.

"ಕೃಷ್ಣಗಾರುಡಿ" ಚಿತ್ರವನ್ನೂ ಆರ್ಥಿಕವಾಗಿ ಹೆಚ್ಚು ನಿರೀಕ್ಷಿಸಿ ತಯಾರಿಸಲಾಗಿತ್ತು-ಪ್ರತಿಫಲ ನಿರೀಕ್ಷಿಸಿದಂತಾಗಲಿಲ್ಲ. "ಭಕ್ತ ಪ್ರಹ್ಲಾದ" ಆರ್ಥಿಕವಾಗಿ ಯಶಸ್ವಿಯಾಗಲಿಲ್ಲ. ಡಬ್ಬಿಂಗ್ ಚಿತ್ರ 'ಗಿರಿಜಾ ಕಲ್ಯಾಣ' ನಿರೀಕ್ಷಿಸಿದ್ದಕಿಂತ ಮಿಗಿಲಾದ ಪ್ರತಿಫಲ ಗಳಿಸಿತು. ಆದರೆ ಈ ಚಿತ್ರ ಡಬ್ಬಿಂಗ ಮಾಡಿರುವದರಿಂದ ಇದಕ್ಕೆ ಹೆಚ್ಚು ಬಂಡವಾಳ ಹಾಕಿರಲಿಲ್ಲ. ಬೇಗನೆ ಲಾಭದಲ್ಲಿ ದುಡಿಯಲಾರಂಭಿಸಿತು.

ಈ ಜಯಾಪಜಯಗಳ ವಿವರ ನೋಡಿದರೆ ಪೌರಾಣಿಕ ಚಿತ್ರಗಳನ್ನು ತೆಗೆಯುವುದು ಎಷ್ಟು ದೊಡ್ಡ ಹೊಣೆಗಾರಿಕೆಯದು ಎನ್ನಿಸುತ್ತದೆ. ಪೌರಾಣಿಕ ಚಿತ್ರಗಳು ಸ್ವಾರಸ್ಯವಾದ ಕಥಾ ಪ್ರಸಂಗಗಳಾಗಿರಬೇಕು, ಮೂಲಕ್ಕೆ ಕೊಂಚವೂ ಲೋಪ ತರಬಾರದು, ಮತ್ತು ಭಾಗವಹಿಸುವ ಪಾತ್ರಧಾರಿಗಳು ಆಯಾ ಪಾತ್ರಕ್ಕೆ ಅರ್ಹರಾಗಿರಬೇಕು ಎಂಬ ಅಭಿಪ್ರಾಯವನ್ನು ಜನತೆಯ ಪ್ರತಿನಿಧಿಗಳಾದ ಪತ್ರಿಕೆಗಳು ಸಾರಿವೆ.

### ೧೯೫೯ ರ ಬಿಡುಗಡೆ

ಈ ವರುಷದ ಮೊದಲಿಗೆ ಬಿಡುಗಡೆಯಾದ "ಮನೆಗೆ ಬಂದ ಮಹಾಲಕ್ಷ್ಮಿ" ನಿರ್ಮಾಪಕರ ಮನೆಗೆ ಬರುವಲ್ಲಿ ಮಂದಗಮನೆಯಾದಳು.

**ಜಗಜ್ಯೋತಿ ಬಸವೇಶ್ವರ :** ಸಾದರ ಸ್ವಾಗತಗಳಿಂದ ಬಸವೇಶ್ವರರನ್ನು ಬರಮಾಡಿಕೊಂಡ ಜನತೆ ದಕ್ಷಿಣೆ ಕೊಡುವುದರಲ್ಲಿ ಕೈಕೊಸರಿಕೊಳ್ಳಬಾರದಾಗಿತ್ತು.

**ಧರ್ಮ ವಿಜಯ :** ಧರ್ಮಶ್ರದ್ಧೆಯುಳ್ಳ ಕನ್ನಡಿಗರು "ಧರ್ಮ ವಿಜಯ"ದ ಮೂಲ ತತ್ತ್ವವಾದ "ಧರ್ಮವು ತಲೆಕಾಯುತ್ತದೆ" ಎಂಬುದನ್ನು ಒಪ್ಪಿ ನಿರ್ಮಾಪಕರ ತಲೆಕಾಯುವಂತೆ ಮಾಡದೆ ತಲೆ ಕಾಯಬೇಕೆನಿಸುತ್ತದೆ.

### ಬೆಂಬಲ-ಮುನ್ನಡೆ

ಚಿತ್ರೋದ್ಯಮ ಕೀರ್ತಿ ಮತ್ತು ಆರ್ಥಿಕ ವಿಜಯವನ್ನು ಅವಲಂಬಿಸಿ ಅಭಿವೃದ್ಧಿಹೊಂದಬೇಕಾದ ಪರಾವಲಂಬಿ ಚಿತ್ರವು ಹಣವನ್ನು ಕೀರ್ತಿಯನ್ನು ಗಳಿಸಿದರೇನೇ ಯಶಸ್ವಿ ಚಿತ್ರವೆನ್ನಬಹುದೇ ಹೊರತು ಇವೆರಡರಲ್ಲಿ ಯಾವುದು ಲೋಪವಾದರೂ ಚಿತ್ರವನ್ನು ಗದ್ದು ಗುಂಪಿಗೆ ಸೇರಿಸಲಾಗುವದಿಲ್ಲ.



'ಭಕ್ತ ಪ್ರಹ್ಲಾದ'ದಲ್ಲಿ ಒಂದು ದುಃಖಾಂತ ದೃಶ್ಯ

ಹಾಕಿದ ಬಂಡವಾಳ : ಲಾಭ ಬಂದರೂ ಚಿತ್ರ ಯಶಸ್ವಿ ಎನಿಸಲಾರದು. ಸಾಕಷ್ಟು ಮನೋರಂಜನೆಯ ಯಾವ ಚಿತ್ರವೇ ಆಗಲಿ ಲಾಭಗಳಿಸಬಹುದು. ಮನೋರಂಜನೆ ಕೇವಲ ತಾತ್ಕಾಲಿಕವಾದ್ದರಿಂದ ಪ್ರೇಕ್ಷಕ ಅದನ್ನು ಮರೆತು ಬಿಡಬಹುದು. ಆದರೆ ಪ್ರೇಕ್ಷಕ ಮರೆಯಲಾಗದ ಉತ್ತಮ ಸನ್ನಿವೇಶಗಳಿಂದ ಸಮಾವೇಶಗೊಂಡ ಕಲಾಕೃತಿ ಕೀರ್ತಿಶಾಲಿಯಾಗಿ ಚಿರಕಾಲ ಉಳಿಯುತ್ತದೆ. ಚಿತ್ರೋದ್ಯಮಕ್ಕೆ ಪ್ರೇಕ್ಷಕನೇ ಪ್ರಭು— ಅನ್ನದಾತ! ಪ್ರೇಕ್ಷಕ 'ಭಲೆ' ಎಂದು ಪ್ರೋತ್ಸಾಹಿಸಿದರೆ ಉದ್ಧಾರ— ಛೀ ಎಂದು ತುಚ್ಛೀಕರಿಸಿದರೆ ಪತನ.

ಆದ್ದರಿಂದ ಪ್ರೇಕ್ಷಕ ಪ್ರಭುವನ್ನು ಒಲಿಸಿಕೊಳ್ಳುವ ಪಾತ್ರವನ್ನು ನಿರ್ಮಾಪಕ ವಹಿಸಬೇಕು. ಈ ಪಾತ್ರವನ್ನು ಕನ್ನಡ ನಿರ್ಮಾಪಕರು ಹೇಗೆ ವಹಿಸಿದ್ದಾರೆ? ಅದಕ್ಕೆ ಪ್ರೇಕ್ಷಕಪ್ರಭು ಎಷ್ಟು



'ಮನೆ ತುಂಬಿದ ಹೆಣ್ಣು' ಚಿತ್ರದಲ್ಲಿ ಒಂದು ದೃಶ್ಯ.

ನರಸಿಂಹರಾಜು
ಆದವಾನಿ ಲಕ್ಷ್ಮೀದೇವಿ
ಮುಖ್ಯ ಪಾತ್ರಗಳಲ್ಲಿರುವರು.

ಮನ್ನಣೆ ಇತ್ತಿದ್ದಾನೆ? ಈ ವಿಷಯದಲ್ಲಿ ವಿಷಾದವೆಂದರೆ ನಮ್ಮ ಕನ್ನಡ ಪ್ರೇಕ್ಷಕಪ್ರಭುವಿಗಿರುವ ಅಸೀಮ ಔದಾರ್ಯ. ಕನ್ನಡ ಪ್ರೇಕ್ಷಕಪ್ರಭುವಿಗೆ ಸ್ವಭಾಷೆಯಿಂದಾಗಲಿ, ಪರಭಾಷೆಯಿಂದಾಗಲೀ ಆದರ-ನಿರಾದರಗಳಿಲ್ಲ. ಎಲ್ಲ ಭಾಷೆಯವರಿಗೂ ನಮ್ಮ ನೆಲದಲ್ಲಿ ತಳವೂರಲು ಅವಕಾಶ (ಕೆಲವು ಸಂದರ್ಭಗಳಲ್ಲಿ ಪ್ರೋತ್ಸಾಹ) ಇರುವ ಮಟ್ಟಿಗೆ ಬೇರಾವಡೆಯಲ್ಲೂ ಇಲ್ಲ. ಹಿಂದಿ, ತಮಿಳು, ತೆಲುಗು ಚಿತ್ರಗಳಿಗಿರುವ ಆಹ್ವಾನ ಕನ್ನಡ ಚಿತ್ರಗಳಿಗಿಲ್ಲ. ತವರೂರಿನಲ್ಲೇ ತಬ್ಬಲಿಯಾದ ಕನ್ನಡ ಚಿತ್ರಗಳು ನೆರೆನಾಡಿನ ನೆರಳನ್ನು ನಿರೀಕ್ಷಿಸುವುದು ಕನಸಿನ ಮಾತು. "ಹೆತ್ತವರಿಗೆ ಹೆಗ್ಗಣ ಮುದ್ದು" ಎಂಬ ಗಾದೆ ಹುಟ್ಟಿದ ನಾಡಿನಲ್ಲೇ "ಹಿತ್ತಲ ಗಿಡ ಮದ್ದಲ್ಲ" ಎಂಬ ಗಾದೆಯೂ ಹುಟ್ಟಿರುವುದರಿಂದ ಹೆತ್ತ ಮಗು ಮುತ್ತಿನಂತಿದ್ದರೂ ಕತ್ತೆಗಿಂತ ಕಡೆಯಾಗುವ ಸಂಭವ ಹೆಚ್ಚು (ನಮ್ಮ ನಾಡಿನಲ್ಲಿ!) (ಈ ಮಾತನ್ನು ನೊಂದ ನಿರ್ಮಾಪಕರ ಉದ್ಗಾರದಿಂದ ಉದ್ಧರಿಸಿದೆ)

ಇಂದು ತಮಿಳು ತೆಲುಗರು ತಮ್ಮ ಭಾಷೆಗಳಿಗೆ ಕೊಡುತ್ತಿರುವ ಪ್ರೋತ್ಸಾಹವನ್ನು ಕನ್ನಡಿಗರು ಕನ್ನಡಕ್ಕೆ ಕೊಟ್ಟರೆ ಈ ೧೯೫೮-೫೯ ರಲ್ಲಿ "ಸ್ಕೂಲ್ ಮಾಸ್ಟರ್" "ಅಣ್ಣ ತಂಗಿ" ಕೊಟ್ಟಂತೆ ಮುಂದಕ್ಕೆ ಇದಕ್ಕೂ ಪ್ರಭಾವಶಾಲಿ ಚಿತ್ರಗಳನ್ನು ನೂರ್ಮಡಿಯಾಗಿ ನಿರ್ಮಿಸಬಲ್ಲದು ಕನ್ನಡ ಚಿತ್ರರಂಗ.

## ಮುಂಬರುವ ಚಿತ್ರಗಳು

ಕನ್ನಡ ಕಲಾಲತೆ ಚಿಗುರಿ ನಗೆಯ ಹೂ ಮಳೆ ಕರೆಯಬೇಕಾದರೆ ಪ್ರೇಕ್ಷಕ ಹೆಮ್ಮರನಾಗಿ ಆಶ್ರಯ ನೀಡಬೇಕು. ಕನ್ನಡ ಚಿತ್ರರಂಗ ಪ್ರೇಕ್ಷಕನ



' ಧರ್ಮವಿಜಯ 'ದಲ್ಲಿ ಒಂದು ಕರುಣಪೂರಿತ ಸನ್ನಿವೇಶ.

ಉದಾರ ಪ್ರೋತ್ಸಾಹವನ್ನೇ ಅವಲಂಬಿಸಿರುವದರಿಂದ ಧಾರಾಳಿಯಾದ ನಮ್ಮ ಕನ್ನಡ ಪ್ರೇಕ್ಷಕಪ್ರಭು ಕನ್ನಡ ಚಿತ್ರಗಳನ್ನು ಪ್ರೋತ್ಸಾಹಿಸುವಲ್ಲಿ ಕೃಪಣನಾಗದೆ ಕೊಡುಗೈ ಆಗಲಿ. ಅವನ ಔದಾರ್ಯ ಅನ್ಯರಿಗೆ ದೊರೆಯುವುದರಲ್ಲಿ ಕೊಂಚಭಾಗ ಕನ್ನಡಕ್ಕೆ ಮೀಸಲಾದರೆ "ಸೊಕ್ಕಿನಲಿ ತಲೆಎತ್ತಿ ಜತೆಯವರ ಕೂಟದಲಿ ನಾವು ಸಮ ನಿಮಗೆಂದು ನುಡಿವ ಬಲ" ಖಂಡಿತ ಬರುತ್ತದೆ ಎಂಬ ಅಂಶವನ್ನು ಸಮರ್ಥಿಸಲು ಸಹಾಯಕವಾಗಿ ಅಣಿಗೊಳ್ಳುತ್ತಿವೆ- "ಮಹಿಷಾಸುರ ಮರ್ದಿನಿ" "ಅಬ್ಬಾ ಆ ಹುಡುಗಿ" "ರಾಜಮುದ್ರಿಕೆ" "ರಣಧೀರ" "ರಾಣಿ ಹೊನ್ನಮ್ಮ" ಮೊದಲಾದ ಚಿತ್ರಗಳು.

ಈ ೧೯೫೯ ರ ಚಿತ್ರಗಳು ಪ್ರಗತಿಪಥದಲ್ಲಿ ತೀವ್ರವಾಗಿ ಸಾಗಿವೆ. ಜನತೆಯ ಬೆಂಬಲ ದೊರೆತರೆ ಮಹತ್ವದ ಸ್ಥಾನ ಕನ್ನಡ ಚಿತ್ರರಂಗಕ್ಕೆ ಮೀಸಲು.



' ಅಣ್ಣ ತಂಗಿ ' ಯಲ್ಲಿ ಬಿ. ಸರೋಜಾದೇವಿ ಹಾಗೂ ರಾಜಕುಮಾರ.



ಹೊಸ
ವರ್ಷಕ್ಕೆ
ಶುಭ
ಸುಸ್ವಾಗತವು

ದೀಪಾವಳಿಯ ಈ ಶುಭ ದಿನದಲ್ಲಿ ನಮ್ಮ ಇಡೀ ದೇಶವು ಪ್ರಕಾಶಮಯವಾಗಿರುತ್ತದಲ್ಲದೆ .ಪ್ರತಿಯೊಂದು ಮನೆಯು ದೀಪಗಳಿಂದ ಅಲಂಕರಿಸಲ್ಪಟ್ಟಿರುತ್ತದೆ. ಈ ಭಾಗ್ಯಲಕ್ಷ್ಮಿಯ ಆಗಮನವನ್ನು ಕಾಯುತ್ತಿರುವ ಈ ದೀಪಗಳು ಹೊಸ ವರ್ಷವನ್ನು ಆನಂದದಿಂದ ಸ್ವಾಗತಿಸುತ್ತವೆ.

ನೀವು ಕೂಡಾ ನಿಮ್ಮ ಕುಟುಂಬದೊಡನೆ ಸುಂದರ ಉಡುಪುಗಳನ್ನು ಧರಿಸಿ ಈ ಶುಭ ಸಮಾರಂಭವನ್ನು ಮತ್ತಷ್ಟು ಬೆಳಗಿಸುತ್ತಿರುವಿರಿ. ಇಂತಹ ವಿಶಿಷ್ಟ ಸಮಾರಂಭಗಳಿಗೆ ಯೋಗ್ಯವಾದ ಮಫತ್‌ಲಾಲ್‌ರವರ ವಸ್ತ್ರಗಳು ನಿಮ್ಮ ದೈನಂದಿನ ಉಡುಪಿಗೂ ಆದರ್ಶವಾಗಿವೆ.

ಮಫತ್‌ಲಾಲ್‌ರವರ ವಸ್ತ್ರಗಳು ಪ್ರತಿಯೊಬ್ಬರ ರುಚಿಗೆ ಮತ್ತು ಅನುಕೂಲತೆಗೆ ತಕ್ಕುದಾದ ರೀತಿಯಲ್ಲಿ ವಿವಿಧ ನಮೂನೆಯಲ್ಲಿ ಮತ್ತು ನೇಯಿಗೆಯಲ್ಲಿ ತಯಾರಿಸಲ್ಪಟ್ಟಿರುತ್ತವೆ.



# ಮ ಫ ತ್ ಲಾ ಲ್
## ಗ್ರುಪ್ ಮಿಲ್ಸ್

ದೇಶಕ್ಕಾಗಿ ವಸ್ತ್ರಗಳು

ಮಫತ್‌ಲಾಲ್ ಹೌಸ್, ಬ್ಯಾಕ್‌ಬೇ ರಿಕ್ಲಮೇಶನ್ ಬೊಂಬಾಯಿ 1.

ಮಫತ್‌ಲಾಲ್‌ರವರ ಇತರ ಉದ್ಯೋಗಗಳು : ಸಕ್ಕರೆ–ಬಣ್ಣ

ಶೋರಕ್, ಅಹಮ್ಮದಾಬಾದ್ • ನ್ಯೂ ಶೋರಕ್, ನಡಿಯಾದ್ • ಸ್ಟ್ಯಾಂಡರ್ಡ್, ಬೊಂಬಾಯಿ • ನ್ಯೂ ಚೈನಾ, ಬೊಂಬಾಯಿ • ಸಾಸೂನ್, ಬೊಂಬಾಯಿ
ನ್ಯೂ ಯೂನಿಯನ್, ಬೊಂಬಾಯಿ • ಸುರತ್ ಕಾಟನ್, ಸುರತ್ ಮತ್ತು ದೇವಾಸ್ • ಮಫತ್‌ಲಾಲ್ ಫೈನ್ ನವಸಾರಿ • ಗಗಲ್‌ಭಾಯಿ ಜೂಟ್, ಕಲ್ಕತ್ತ

ನಮ್ಮ ಅಭಿಮಾನಿಗಳಿಗೂ, ಗ್ರಾಹಕರಿಗೂ

# ದೀಪಾವಳಿಯ ಅಭಿವಂದನೆಗಳು

೧೯೫೪ರಲ್ಲಿ ಸ್ಥಾಪಿಸಿದ ಈ ಗಿರಣಿಯು ಹೊಸ ಮಾದರಿಯ ಮಶಿನರಿಗಳಿಂದ ವರ್ಷ ವರ್ಷಕ್ಕೂ ಬೆಳೆದು ತನ್ನದೇ ಆದ ವೈಶಿಷ್ಟ್ಯತೆಯನ್ನು ಕಾಯ್ದುಕೊಂಡು ಬಂದಿದೆ.

"ನಂದಿ" ಮಾರ್ಕಿನ ನೂಲು ವರ್ಷ ವರ್ಷಕ್ಕೂ ಹೆಚ್ಚಿನ ಶ್ರೇಷ್ಠತೆಯನ್ನು ಪಡೆಯುತ್ತಿದೆ. ಇದಕ್ಕೆಲ್ಲ ತಮ್ಮೆಲ್ಲರ ಪ್ರೋತ್ಸಾಹವೇ ಕಾರಣ. ಇನ್ನೂ ಇದಕ್ಕೂ ಹೆಚ್ಚಿನ ಶ್ರೇಷ್ಠತೆಯನ್ನು ಕಾಯ್ದುಕೊಂಡು ತಮಗೆ ಪೂರ್ಣ ತೃಪ್ತಿ ಪಡಿಸುತ್ತೇವೆಂದು ಅಭಿಮಾನದಿಂದ ಹೇಳುತ್ತೇವೆ.

ಶ್ರೇಷ್ಠತರದ ಎಲ್ಲರಿಗೂ ಮೆಚ್ಚಿಗೆಯ

೨೦'s, ೨೬'s,
೩೨'s, ೪೦'s


'ನಂದಿ' ಮಾರ್ಕಿನ ನೂಲನ್ನು ತಯಾರಿಸುತ್ತಿದ್ದೇವೆ.

ದಿ

## ನಂದಿ ಹಸಬಿ ಟೆಕ್ಸಟಾಯಿಲ್ ಮಿಲ್ಸ

## (ಪ್ರೈವ್ಹೇಟ್) ಲಿಮಿಟೆಡ್

ನರಗುಂದ (ಜಿ. ಧಾರವಾಡ)




ಎಲ್ಲಿ ಸ್ವಸ್ತಿಕ್ 卐

— ಅಲ್ಲಿ ಸದಾ ಸಂರಕ್ಷಣೆ ಉಂಟು —

ತಯಾರಕರು :

**ಸ್ವಸ್ತಿಕ್ ರೋಲಿಂಗ್ ಶಟರ್ಸ**

ಮತ್ತು

**ಎಂಜನಿಯರಿಂಗ್ ವರ್ಕ್ಸ**

ಮುಂಬೈ—೧೨

—: ಮೈಸೂರು ರಾಜ್ಯದಲ್ಲಿ ಏಕಮೇವ ಹಂಚಿಕೆಗಾರರು :—

## ವಿಜಯಾ ಟ್ರೇಡಿಂಗ್ ಕಂಪನಿ

ಸುಭೇದಾರ ಛತ್ರಂ ರೋಡ್, ಬೆಂಗಳೂರು-೯

ಪೊ. ಬಾ. ನಂ. ೪೦೦ ] [ ಫೋ.ನಂ. ೫೩೫೦

ನಮ್ಮನ್ನು ಇಲ್ಲವೆ ನಮ್ಮ ಯಾವ ಸಬ್ ಡಿಸ್ಟ್ರಿಬ್ಯೂಟರರನ್ನು ದಯವಿಟ್ಟು ವಿಚಾರಿಸಿರಿ.

೧ ಶ್ರೀ ಎಚ್. ಎನ್. ಗೋಪಾಲಕೃಷ್ಣ
೧೯೬೬ ಹಳೇ ಮೈಸೂರು ಬ್ಯಾಂಕ್‌ರೋಡ್, ಮೈಸೂರು
ಮೈಸೂರು, ಹಾಸನ ಹಾಗು ಕೊಡಗು ಈ ಜಿಲ್ಲೆಗಳಿಗಾಗಿ

೨ ಮೆಸರ್ಸ್ ಶಾಸ್ತ್ರಿ ಆ್ಯಂಡ್ ಕಂ., ಮಂಗಳೂರು
ದಕ್ಷಿಣಕನ್ನಡ ಜಿಲ್ಲೆಗಳಿಗಾಗಿ :—

೩ ಮೆಸರ್ಸ್ ಸಾಧನಾ ಟ್ರೇಡಿಂಗ್ ಕಂ., ಶಿವಮೊಗ್ಗಾ
ಶಿವಮೊಗ್ಗಾ, ಚಿಕ್ಕಮಗಳೂರು ಮತ್ತು ಚಿತ್ರದುರ್ಗ (ಡಾವಣಗೆರೆಸಿಟಿ ಹೊರ್ತುಪಡಿಸಿ) ಜಿಲ್ಲೆಗಳಿಗೆ :—

೪ ಶ್ರೀ ವ್ಹಿ. ಎಸ್. ರಾಮನಾಥನ್, ಡಾವಣಗೆರೆ
ಡಾವಣಗೆರೆ ಸಿಟಿ ಮಾತ್ರ ಸಲುವಾಗಿ :—

೫ ಶ್ರೀ ಮಹ್ಮದ ಖಾಶೀಮ, ಪ್ರೊಪ್ರಾಯಿಟರ್
ಮೆಸರ್ಸ್ ರಿಪಬ್ಲಿಕ್ ಸ್ಟೋರ್ಸ್ ಮಂಡ್ಯ,
ಮಂಡ್ಯ ಜಿಲ್ಲೆಗಾಗಿ

# ನಮ್ಮೂರಿಗೂ ಬಂತು ಪಂಚವಾರ್ಷಿಕ ಯೋಜನೆ

ಪಂಚವಾರ್ಷಿಕ ಯೋಜನೆಗಳಿಗೆ ಹಳ್ಳಿಗಳನ್ನು ಘಟಕವಾಗಿ ಹಿಡಿಯಬೇಕೆಂದು ಇತ್ತೀಚೆಗೆ ವಿಚಾರಿಸಲಾಗುತ್ತಿದೆ. ಆದರೆ ಹಳ್ಳಿಗಳಿಗೆ ನಿಜವಾಗಿ ಅವುಗಳ ಲಾಭವೆಷ್ಟಾಗುವದು ! ಅದರ ವಿಡಂಬನವೊಂದನ್ನು ಈ ಲೇಖನದಲ್ಲಿ ಕಾಣಬಹುದು . . . . . .

ನಮ್ಮೂರು ಎಂದರೆ ಯಾವದು ಎಂದು ಒಮ್ಮೆಲೇ ಕೇಳಬೇಡಿರಿ, ಭಾರತದ ಏಳೂವರೆ ಲಕ್ಷ ಹಳ್ಳಿಗಳಲ್ಲಿ ನಮ್ಮೂರೂ ಒಂದು ಎಂದು ಹೇಳಿದರೆ ಸಾಕು. ನೀವದನ್ನು ಸುಲಭವಾಗಿ ಗುರುತಿಸಬಹುದು. ಅಥವಾ ನಮ್ಮೂರು ಹೇಗೆ ನಮ್ಮದೋ ಹಾಗೆ—ನಮ್ಮ ಮಟ್ಟಿಗೆ ಹೇಳಬೇಕೆಂದರೆ— ನಿಮ್ಮೂರೂ ನಮ್ಮದೇ ಇದೇ ರೀತಿ ನಮ್ಮೂರು ನಿಮ್ಮದೆಂಬುದನ್ನು ಬಹುಶಃ ಈ ಲೇಖನವನ್ನು ಪೂರ್ತಿಯಾಗಿ ಓದಿದಾಗ ನೀವೂ ಒಪ್ಪಬಹುದು.

ಈ ಪಂಚವಾರ್ಷಿಕ ಯೋಜನೆಗಳ ಚಳವಳಿ ನಿಶ್ಚಿತವಾಗಿ ಇಂಥ ದಿನದಿಂದಲೇ ಪ್ರಾರಂಭವಾಯಿತು ಎಂದು ಯಾರಿಗೂ ಹೇಳಲು ಬರುವಂತಿಲ್ಲ. ಸರಕಾರೀ ಅಧಿಕಾರಿಗಳೇನೋ ತಮ್ಮ ಕಡತಗಳನ್ನು ಬಿಚ್ಚಿ ಯಾವದೊಂದು ತಾರೀಖನ್ನು ಹೇಳುತ್ತಿರಬಹುದು. ಆದರೆ ಅದೆಲ್ಲ ನಾವು ನಮ್ಮ ಜನ್ಮದಿನವನ್ನು ಹೇಳಿದಂತಿದೆ. ಅದು ಪ್ರತ್ಯಕ್ಷವಾಗಿ ನಮಗೆ ಗೊತ್ತಿರುವದಿಲ್ಲ. ಬೇರೆಯವರು ಹೇಳುತ್ತಾರೆ. ನಾವದನ್ನು ವಿಶ್ವಾಸವಿಟ್ಟು ನಂಬುತ್ತೇವೆ. ನಮಗೆ ಅದರ ನಿಜವಾದ ಕಲ್ಪನೆ ಬರುವ ಹೊತ್ತಿಗೆ ನಾವು ಹುಟ್ಟಿ ಎಷ್ಟೋ ವರುಷಗಳಾಗಿರುತ್ತವೆ. ಈ ಯೋಜನೆಗಳೂ ಸಾಧಾರಣವಾಗಿ ಹಾಗೆಯೇ ಎಂದು ಹೇಳಬಹುದು. ಪಂಚವಾರ್ಷಿಕ ಯೋಜನೆಯೆಂದು ಇವಕ್ಕೆ ಹೆಸರಿಟ್ಟು ತೊಟ್ಟಿಲಲ್ಲಿ ಕುಟು ಕುಟು ಕುರ್ ಎಂದು ಮಾಡುವಷ್ಟರಲ್ಲಿ ಇವು ಎಷ್ಟೋ ಮುಂದುವರಿದು ಬಿಟ್ಟಿದ್ದವೆಂಬದನ್ನು ಯಾರೂ ಮರೆತಿರಲಿಕ್ಕಿಲ್ಲ. ಆದ್ದರಿಂದ ಈ ಯೋಜನೆಗಳ ಪ್ರಾರಂಭದ ದಿನವನ್ನು, ನಮ್ಮ ಪುರಾತನ ಕವಿಗಳ ಕುಲವನ್ನೋ ಇತಿಹಾಸ ಪುರುಷರ ಕಾಲವನ್ನೋ "ಸುಮಾರಾಗಿ ಇಂಥ ಶತಮಾನದಿಂದ ಇಂಥ ಶತಮಾನದ ವರೆಗೆ" ಎಂದು ಹೇಳುವಂತೆ ಅಂದಾಜುಕಟ್ಟಿ ಹೇಳುವದೇ ಹೆಚ್ಚು ವಿಹಿತವಾದೀತು. ಇದಕ್ಕೂ ಹೆಚ್ಚು ನಿರ್ದಿಷ್ಟವಾಗಿ ಹೇಳಬೇಕೆಂದರೆ ಇವು ನಮ್ಮ ಆಯುವರ್ಮಾನದಲ್ಲಿಯೇ ಪ್ರಾರಂಭವಾದವೆಂದು ಮಾತ್ರ ಎದೆತಟ್ಟಿ ಹೇಳಬಹುದು.

ಈ ಯೋಜನೆಗಳು ಪಂಚವಾರ್ಷಿಕ ಯೋಜನೆಗಳು ಎಂಬ ಹೆಸರನ್ನು ತಳೆದು ಮೆರೆಯುವ ಹೊತ್ತಿಗೆ ಇವು ಪ್ರಾರಂಭವಾಗಿ ಎಷ್ಟೋ ದಿನಗಳಾಗಿದ್ದವು. ನಮ್ಮೂರಿಗೆ ಬೇಕಾದ ಶಾಲೆಯನ್ನೋ, ಬಾವಿಯನ್ನೋ, ದಾರಿಯನ್ನೋ ಗರಡಿಮನೆಯನ್ನೋ ದೈವದವರು, ಇಲ್ಲವೆ ಪಂಚಾಯತಿಯವರು ಯಾರೂ ಇಲ್ಲದಿದ್ದರೆ ಎಂದಾದರೊಮ್ಮೆ ಮತಕ್ಕಾಗಿ ಮುಖತೋರುವ ಡಿ. ಎಲ್. ಬಿ. ಯವರೋ ಮಾಡುವ ಪರಿಪಾಠ ಇತ್ತು. ಇವುಗಳ ಕೊರತೆಯಾಗಲಿ ಅವಶ್ಯಕತೆಯಾಗಲಿ ನಮ್ಮೂರಿಗೆ ಅಷ್ಟೊಂದು ಅನಿಸಿರಲಿಲ್ಲವೆಂಬದೂ ನಿಜ. ಈಗ ಮಾತ್ರ ಇವೆಲ್ಲ ನಮಗೆ ಇಂದೇ ಬೇಕು; ಈಗಲೇ ಬೇಕು; ಈಕ್ಷಣಕ್ಕೇ ಬೇಕು. ಇಲ್ಲವಾದರೆ ಸಾವಿರ ಜನರ ಸಹಿಯ ಅರ್ಜಿಯೊಂದು ಬ್ಲಾಕ್ ಆಫೀಸರರಿಗೆ ಹೋಗಲು ಏನೂ ತಡವಾಗುವದಿಲ್ಲ. ಅದೇ ಕಾಲಕ್ಕೆ ಇತ್ತ ನಮ್ಮ ಎಮ್ಮೆಲ್ಲೇಗಳ ಮುಖಾಂತರ ಮಂತ್ರಿಗಳ ವರೆಗೆ ಒಂದು ಶಿಷ್ಟಮಂಡಳವೂ ಹೋಗುತ್ತದೆ. ಇದಕ್ಕೆಲ್ಲ ನೂರಾರು ರೂಪಾಯಿ ನಿಧಿಸಂಗ್ರಹ ಪ್ರಾರಂಭ ಆಗೇಬಿಡುತ್ತದೆ.

ಇರಲಿ. ಇದೀಗ ಹೇಳಿರುವಂತೆ ಈ ಪಂಚವಾರ್ಷಿಕ ಯೋಜನೆಗಳು ಬಂದಾಗಿನಿಂದ ನಮ್ಮೂರಲ್ಲಿ ಮೊದಲೇ ಪ್ರಾರಂಭವಾದ ಈ ಕೆಲಸಗಳಿಗೆ ಮೂರ್ತಸ್ವರೂಪ ಬಂತು ಅಥವಾ ಮೂರ್ತಿಸ್ವರೂಪ ಬಂತು ಎಂದೂ ಹೇಳಬಹುದು. ಯಾಕಂದರೆ ಅವು ಅಂದಿನಿಂದ ಮೂರ್ತಿಗಳಂತೆ ಘನೀಕೃತವಾಗಿ ಇತ್ತ ಹೆಚ್ಚು ಬೆಳೆಯದೆ, ಅತ್ತ ಸೊರಗಿ ಸಾಯದೆ, ನಿತ್ಯ ಸಹಸ್ರಾರು ಭಕ್ತರ ನೆರವಿಯನ್ನು ಆಕರ್ಷಿಸುತ್ತ ಉಳಿದುಬಿಟ್ಟವೆ.

ಮೊದಮೊದಲು ಅಂದರೆ ಯೋಜನಾಪೂರ್ವ ಯುಗದಲ್ಲಿ ಇಂಥ ಕೆಲಸಗಳು ಸರಕಾರೀ ಖರ್ಚಿನಿಂದ ನಮ್ಮೂರಲ್ಲಿ ಪ್ರಾರಂಭವಾಗಲು ಬಹಳ ತೊಂದರೆಯೆನಿಸುತ್ತಿತ್ತು. ಅಂದರೆ ಅದಕ್ಕಾಗಿ ಬಹಳ ಕಷ್ಟಪಡಬೇಕಾಗುತ್ತಿತ್ತು. ನಮ್ಮೂರಿಗೆ ಒಂದು ಕುಡಿಯುವ ನೀರಿನ ಬಾವಿಯನ್ನು ಪಡೆಯಬೇಕಾದರೂ ಭಗೀರಥ ಸ್ವರ್ಗದಲ್ಲಿಯ ಗಂಗೆಯನ್ನು ಭೂಮಿಗಿಳಿಸಲು ಮಾಡಿದಷ್ಟು ದೀರ್ಘ ಪ್ರಯತ್ನವನ್ನೇ ಮಾಡಬೇಕಾಗುತ್ತಿತ್ತು. ಆದರೆ ಒಮ್ಮೆ 'ಗುದ್ದಲಿ' ಹಾಕಿದರೆಂದರೆ ತೀರಿತು. ಅದು ಮುಗಿಯುವ ವರೆಗೆ ನಿಲ್ಲುತ್ತಿದ್ದಿಲ್ಲ. ನಮ್ಮ ಯೋಜನಾಯುಗ ಪ್ರಾರಂಭವಾದ ಮೇಲೆ ಈ ಇಡೀ ಚಿತ್ರವೇ ಬದಲಾಯಿತು. ನಾವು ಬೇಡದ, ಕಾಣದ, ಆಶಿಸದ ಬೇಡಿಕೆಗಳೆಲ್ಲ ಪೂರೈಸಲ್ಪಡುವ ಕನಸು ನಮ್ಮ ಮುಂದೆ ಕಟ್ಟಲ್ಪಟ್ಟಿತು. ಬಾವಿ, ಶಾಲೆ, ರಸ್ತೆ, ಕೆರೆ, ಕಾಲುವೆ, ದವಾಖಾನೆ ಎಲ್ಲವೂ ಇನ್ನೇನು ಆಗೇಬಿಟ್ಟವು ಎನ್ನುವಂತೆ ನಮಗೆನಿಸಿತು. ಯಾರೊ ಒಬ್ಬರು ಬಂದು ನಮ್ಮೂರಿನಲ್ಲಿ ಭಾಷಣ ಬಿಗಿದರು. "ಹಳ್ಳಿ ಹಳ್ಳಿಗೂ ವಿದ್ಯುಚ್ಛಕ್ತಿ, ಮನೆಮನೆಗೂ ರೇಡಿಯೊ, ತಲೆಗೊಂದು ಕಾರು ಪೂರೈಸುವ ವರೆಗೆ ನಮಗೆ ವಿಶ್ರಾಂತಿಯಿಲ್ಲ." ಮತ್ತೊಬ್ಬರು ಬಂದು "ಉಳುವವನದೇ ಭೂಮಿ ಎಂಬ ಕಾಯಿದೆ ಪಾಸಾಗಿ ಬಿಟ್ಟಿದೆ. ಇನ್ನು ನೀವು ಬೆಳೆದದ್ದೆಲ್ಲ ನಿಮಗೇ. ಬೇರೆ ಜಮೀನದಾರರ, ಸಾಹುಕಾರರ ತೊಂದರೆ ನಿಮಗೆ ಇನ್ನಿಲ್ಲ" ಎಂದು ಭಾಷಣ ಕುಟ್ಟಿ ಹೋದರು. ಇನ್ನೂ ಎಷ್ಟೋ ಇಂಥವೇ ಅಥವಾ ಇದಕ್ಕೂ ಹೆಚ್ಚು 'ತಿದ್ದಿದ ಅತ್ಯುತ್ತಮ' ಭಾಷಣಗಳಾದವೆನ್ನಿ. ಆದರೆ ಇವುಗಳಿಂದ ನಮ್ಮೂರಿನ ಜನರಲ್ಲಿ ಹೊಸ ಉತ್ಸಾಹ, ಹುಮ್ಮಸ್ಸು ತುಂಬಿದ್ದು ಮಾತ್ರ ನಿಜ. ಅವರು ತಮ್ಮ ನಿತ್ಯದ ಕೆಲಸಗಳನ್ನು ಮರೆತು ಈ ಸುಖಸಾಮ್ರಾಜ್ಯದ ಕನಸನ್ನೇ ಕಟ್ಟುತ್ತ ಕುಳಿತರು. ಅದಕ್ಕೂ ಹೆಚ್ಚು ಚಟುವಟಿಕೆಯುಳ್ಳವರು ಅಥವಾ ವಾಸ್ತವವಾದಿಗಳು, ಈ ಕನಸುಗಳನ್ನು ಹಸ್ತಗತ ಮಾಡಿಕೊಳ್ಳುವ ಸುಲಭಸಾಧನಗಳೆಂದು ಚುನಾವಣೆಗಳ ಬೆನ್ನುಹತ್ತಿದರು. ಇನ್ನು ಜಮೀನದಾರರ ಪಾಲು ಕೊಡಬೇಕಾಗಿಲ್ಲವೆಂದು ಭಾವಿಸಿದ ರೈತ ಮೊದಲಿನ ಅರ್ಧದಷ್ಟೇ ಬೆಳೆದರೆ ತನಗೆ ಸಾಕೆಂದು ಲೆಕ್ಕ ಹಾಕತೊಡಗಿದ.

ಲೇಖಕರು :

**ಸುರೇಂದ್ರ ದಾನಿ**, ಬೆಂಗಳೂರು

ಇತ್ತ ಯೋಜನೆಗಳಾದರೂ ತಮ್ಮದೇ ಆದ ವೇಗದಿಂದ ಮುನ್ನಡೆದಿದ್ದವು. ಪಂಚವಾರ್ಷಿಕ ಯೋಜನೆಯೆಂಬದೊಂದು ದೇಶದಲ್ಲಿ ಜಾರಿಯಲ್ಲಿ ಬಂದಿದೆ ಎಂದು ನಮಗೆ ತಿಳಿದಾಗ ನಮ್ಮೂರಲ್ಲಿ ಯುದ್ಧೋತ್ತರ ಪುನಾರಚನಾ ಯೋಜನೆಯೆಂಬುದರನ್ವಯ ಅರ್ಧ ಕಟ್ಟಲಾಗಿದ್ದ ಬಾವಿಯು ಹಣೇಬರಹ ಏನಾಗುವದೋ ಎಂದು ನಾವೆಲ್ಲ ಕಳವಳಗೊಂಡಿದ್ದೆವು. ಆದರೆ ಅದನ್ನು ಆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆಯೆಂದೂ ಅದರ ಅಂಗವಾಗಿಯೇ ಅದು ಪೂರ್ತಿಗೊಳ್ಳುವದೆಂದೂ ತಿಳಿಸಿದಾಗ ನಮಗೆ ಸಮಾಧಾನವಾಯಿತು. ಆದರೆ ಅದಕ್ಕೆಂದು ಮಂಜೂರಾದ ಹಣ ಯಾವ 'ಹೆಡ್'ನಲ್ಲಿ ಕೊಡಬೇಕೆಂಬದು ಇನ್ನೂ ನಿರ್ಧಾರವಾಗದೆ ಅದು ಅಲ್ಲಿಗೇ ನಿಂತಿದೆಂಬದು ಮಾತ್ರ ನಿಜ.

ಇದಲ್ಲದೆ ಮೊದಲನೇ ಪಂಚವಾರ್ಷಿಕ ಯೋಜನೆಯು ರೂಪಿಸಲ್ಪಟ್ಟಾಗ ನಮ್ಮೂರಲ್ಲಿ ಬಾವಿ ಮಾತ್ರವಲ್ಲದೆ ಒಂದು ಶಾಲೆ, ನಿರ್ಮಾಣವಾಗುವದಲ್ಲದೆ ಹೆದ್ದಾರಿಯ ವರೆಗೆ ಕೂಡು-ರಸ್ತೆಯಾಗುವದೆಂದೂ ನಮ್ಮೂರ ಕೆರೆ ಬಳಿಸಲ್ಪಡುವದೆಂದೂ ಕೇಳಿ ನಾವೆಲ್ಲ ಹಿಗ್ಗಿದ್ದೆವು. ವರುಷಾರುತಿಂಗಳು ದಾರೀ ನೋಡಿ ಇವುಗಳ ಬಗ್ಗೆ ಕೇಳಿದಾಗ ಇವುಗಳ ವೆಚ್ಚದ ಬಗ್ಗೆ ಸಾರ್ವಜನಿಕರ ವಂತಿಗೆಯೂ ಕೆಲಮಟ್ಟಿಗೆಬೇಕೆಂದೂ ಅದನ್ನು ಮೊದಲು ತುಂಬಿದರೆ ಮಾತ್ರ ಸರಕಾರ ಈ ಕೆಲಸಗಳನ್ನು ಮಂಜೂರುಮಾಡುವದೆಂದೂ ತಿಳಿದು ಬಂತು. ಆ ಮೇಲೆ ನಮ್ಮೂರ ಹಿರಿಯರೆಂಬವರು ಸೇರಿ ಈ ವಿಷಯವನ್ನು ಚರ್ಚಿಸಿ ಮೊದಲು ರಸ್ತೆಯ ರಚನೆಯಾಗಬೇಕೆಂದೂ ಅದಕ್ಕಾಗಿ ಜನರೆಲ್ಲ ಶ್ರಮದಾನ ಮಾಡಬೇಕೆಂದೂ ನಿರ್ಣಯಿಸುವ ಹೊತ್ತಿಗೆ ಎರಡನೇ ವರುಷವೂ ಉರುಳಿತ್ತು. ಮುಂದೆ ಅಲ್ಲಿ ಪ್ರಾರಂಭವಾಗಬೇಕಾಗಿದ್ದ ಶ್ರಮದಾನ ಕಾರ್ಯವು ಅದನ್ನು ಉದ್ಘಾಟಿಸಲೊಪ್ಪಿದ ಮಾನ್ಯ ಮಂತ್ರಿಗಳೊಬ್ಬರ ಅನುಕೂಲತೆಗಾಗಿ ಒಂದು ವರುಷ ಮುಂದೆ ಹೋಯಿತು.

ಇಷ್ಟರಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಯ ಸಿದ್ಧತೆ ನಡೆದಿದೆಯೆಂದೂ ಅದಕ್ಕಾಗಿ ತಮ್ಮ ಊರ ಬೇಡಿಕೆಗಳ ಪಟ್ಟಿಯನ್ನು ಪೂರ್ತಿಯಾಗಿ ಕಳಿಸಬೇಕೆಂದೂ ಸರಕಾರದ ಆದೇಶ ಬಂದು ಬಿಟ್ಟಿತು. ನಮ್ಮ ಲೆಕ್ಕದಂತೆ ಪಂಚವಾರ್ಷಿಕ ಯೋಜನೆಯೆಂದರೆ ಐದು ವರುಷಗಳ ಅವಧಿಯೆಂದೂ ಅದಕ್ಕಾಗಿ ಇನ್ನು ಎರಡುವರುಷಗಳಿವೆಯೆಂದೂ ಭಾವಿಸಿದ್ದೆವು. ಆದರೆ ಈ ಪಂಚವಾರ್ಷಿಕ ಯೋಜನೆಯು ಹುಟ್ಟುವಷ್ಟರಲ್ಲಿಯೇ ಮೊದಲಿನ ಎರಡು ವರುಷಗಳನ್ನು ಕಳೆದುಕೊಂಡೇ ಹುಟ್ಟಿತ್ತು.

ಈ ಮಧ್ಯೆ ಚುನಾವಣೆ ಪ್ರಚಾರಕಾಲಕ್ಕೆ ಮತಕೇಳಲು ಬಂದ ಮಂತ್ರಿಗಳೊಬ್ಬರು ರಸ್ತೆಯ ಶ್ರಮದಾನ ಉದ್ಘಾಟನೆಗೆ ಅವಕಾಶವಿಲ್ಲದೆ ಶಾಲಾಕಟ್ಟಡದ ಶಂಕುಸ್ಥಾಪನೆ ಮಾಡಿ ಹೋದರು. ಆ ಕಾಲಕ್ಕೆ ಅವರು ಕೆರೆ ಬಳಸುವದನ್ನು ಮಾತ್ರವಲ್ಲದೆ ಅದರ ಒಡ್ಡನ್ನು ಎತ್ತರಿಸಿ ಸುತ್ತುಮುತ್ತಲಿನ ಹೊಲಗಳಿಗೆ ಕಾಲುವೆ ತೋಡಿಸಿಕೊಡುವ ನೀರಾವರಿಯ ಸಾವಿರಾರು ರೂಪಾಯಿ ಕೆಲಸವನ್ನೇ ದ್ವಿತೀಯ ಯೋಜನೆಯಲ್ಲಿ ಸೇರಿಸುವ ಭರವಸೆ ನೀಡಿದರು. ಮತ್ತೊಬ್ಬರು ಬಂದು ನಮ್ಮೂರ ಪರಿಸ್ಥಿತಿಯನ್ನು ಬಹು ಚಿಂತಾಜನಕವಾಗಿ ಬಣ್ಣಿಸಿ ಇಲ್ಲೊಂದು ದವಾಖಾನೆ ಆಗುವದು ಅವಶ್ಯವೆಂದರು. ಇದಕ್ಕಾಗಿ ತಾವು ಹಗಲು ರಾತ್ರಿ ಪ್ರಯತ್ನಿಸುವದಾಗಿಯೂ ಆದ್ದರಿಂದ ತಮಗೇ ಮತ ಕೊಡಬೇಕೆಂದು ಕೇಳಿಕೊಂಡರು. ಅಂತೂ ಚುನಾವಣೆಯ ಪುಣ್ಯದಿಂದ ದ್ವಿತೀಯ ಯೋಜನೆಯ ಕೆಲಸ ತುಸು ಉತ್ಸಾಹದಿಂದಲೇ ಪ್ರಾರಂಭವಾಯಿತೆಂದು ಹೇಳಬಹುದು. ಸಬ್-ಓವರಸೀಯರರು ಬಂದು ಕೆರೆಯ ಸ್ಥಿತಿಗತಿಯನ್ನು ನೋಡಿಕೊಂಡು ಹೋದರು. ಪಿ. ಡಬ್ಯ್ಯ. ಡಿ. ಯವರು ಬಂದು ಬಾವಿ ರಸ್ತೆಯ ಕೆಲಸ ಏನಾಗಬೇಕಾಗಿದೆ ಎಂಬದನ್ನು ಲೆಕ್ಕಹಾಕಿಕೊಂಡು ಹೋದರು. ದವಾಖಾನೆಯು ಇನ್ನೇನು ಆಗೇಬಿಟ್ಟಿತೆಂದು ನಮಗನಿಸಿತ್ತು. ಆದರೆ ಅಷ್ಟರಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಬಹಳ ದುಡ್ಡು ವೆಚ್ಚವಾಗುತ್ತದೆಯೆಂದೂ ಆದ್ದರಿಂದ ಅವಶ್ಯಕ ಕಾರ್ಯಗಳನ್ನು ಮಾತ್ರ ಉಳಿಸಿಕೊಂಡು ಉಳಿದ ಕಾರ್ಯಗಳನ್ನು ಹಣ ಮತ್ತು ವೇಳೆ ಉಳಿದರೆ ಕೈಕೊಳ್ಳಬಹುದೆಂದೂ ಸಾರಿದ್ದು ನಮಗೆ ತಿಳಿದು ಬಂತು. ಅದರನ್ವಯ ನಮ್ಮೂರಲ್ಲಿಯ ದವಾಖಾನೆ ಯೋಜನೆ ರದ್ದಾಗಿತ್ತು. ಬಾವಿಯ ಯೋಜನೆ ಹಿಂದೆ ಬಿದ್ದಿತ್ತು. ಶಾಲೆಯನ್ನು ಕಟ್ಟಿಸಬಹುದೆಂದಾಗಿತ್ತು. ರಸ್ತೆ ಮಾಡಿಸುವ ಕೆಲಸ ಕೈಕೊಳ್ಳಬಹುದೆಂದು ಹೇಳಲಾಗಿತ್ತು. ಆದರೆ ಕೆರೆ ಬಳಿಸುವ ಕಾರ್ಯಕ್ಕೆ ಪ್ರಾಶಸ್ತ್ಯ ಕೊಡಬೇಕೆಂದೂ ಅದರಿಂದ ಒಕ್ಕಲತನಕ್ಕೆ ಹೆಚ್ಚು ಪ್ರೋತ್ಸಾಹ ದೊರೆಯುವದೆಂದೂ ಬರೆಯಲಾಗಿತ್ತು. ಮತ್ತು ಪ್ರತಿಯೊಂದು ಹಳ್ಳಿಯಲ್ಲಿ ಜನರ ಮನೋರಂಜನೆ ಮತ್ತು ಸಾಮಾಜಿಕ ಚಟುವಟಿಕೆಗಳಿಗಾಗಿ ಒಂದು ಸಮಾಜಮಂದಿರವನ್ನು ನಿರ್ಮಿಸಬೇಕೆಂದು ಸಲಹೆ ನೀಡಲಾಗಿತ್ತು.

ನಮ್ಮೂರವರೂ ಉತ್ಸಾಹ ಕಳೆದುಕೊಳ್ಳಲಿಲ್ಲ. ಹೊಸ ಯೋಜನೆಯನ್ನು ಹೆಚ್ಚು ಉತ್ಸಾಹದಿಂದ ಕೈಗೆ ಎತ್ತಿಕೊಂಡರು. ಅದಕ್ಕೆ ದಿಲ್ಲಿಯವರು ದುಡ್ಡುಕೊಡುವವರಿದ್ದರಂತೆ. ಆದ್ದರಿಂದ ನೆಹರು ಸರಕಾರದ ಮೇಲಿನ ಅಪಾರ ವಿಶ್ವಾಸದಿಂದ ಅದನ್ನು ಪೂರ್ತಿಗೊಳಿಸಿಬಿಡಬೇಕೆಂದು ನಿರ್ಧರಿಸಲಾಯಿತು. ಅದಕ್ಕೆ ನೆಹರೂ ಮಂದಿರವೆಂದೇ ಹೆಸರಿಡಬೇಕೆಂದು ನಿರ್ಧಾರವಾಯಿತು. ಅದೇನು ಇನ್ನು ಸುರುವಾಯಿತೆನ್ನುವಷ್ಟರಲ್ಲಿ ಕೆಲ ಅನಿರೀಕ್ಷಿತ ತೊಂದರೆಗಳು ಬಂದುಬಿಟ್ಟವು. ಅದಕ್ಕೆ ಬೇಕಾಗುವ ಸ್ಥಳವನ್ನು ಆವಶ್ಯಕ ಸ್ಥಾನಿಕ ಶ್ರಮವನ್ನು ಹಳ್ಳಿಗರೇ ನೀಡಬೇಕೆಂದು ಸರಕಾರದವರು ಹೇಳಬೇಕೆ? ಉಚಿತವಾಗಿ ಬಿಟ್ಟುಕೊಡುವದಾದರೆ ಯಾವ ಸ್ಥಳವನ್ನು ಕೊಡಬೇಕೆಂಬ ಬಗ್ಗೆ ಪಂಚಾಯತಿಯಲ್ಲಿ ಬಹಳ ಭಿನ್ನಾಭಿಪ್ರಾಯಗಳುಂಟಾದವು. ಹೋಟಲಿನ ನಿಂಗಪ್ಪನು ತನ್ನ ಹೋಟಲಿನ ಹತ್ತಿರದ ಬಂಗಲೆ ಇದಕ್ಕೆ ಉತ್ತಮವೆಂದು ಹೇಳಿದರೆ ಅದಕ್ಕೆ ಹೊಂದಿದ ಹಿತ್ತಲುಳ್ಳ ಸಾವುಕಾರ ರುದ್ರಪ್ಪ ಶೆಟ್ಟರು ಅದರಿಂದ ತಮಗೆ ವಿಪರೀತ ಗದ್ದಲವೆನಿಸುವದೆಂದು ಹೇಳಿ ಊರ ಅಂಚಿನಲ್ಲಿ ಕಟ್ಟಿಸಬೇಕೆಂದು ಬಲವಾಗಿ ಪ್ರತಿಪಾದಿಸಿದರು. ಗೌಡರ ಮಲ್ಲಪ್ಪನವರು ಚಾವಡಿಗೆ ಹತ್ತಿರವಾಗಿಯೇ ಅದನ್ನು ಕಟ್ಟಿಸಿದರೆ ತಮಗೆ ಅಲ್ಲಿಯ ಚಟುವಟಿಕೆಗಳ ಮೇಲೆ ಕಣ್ಣಿಡಲು ಅನುಕೂಲವಾಗುವದೆಂದು ಹಂಚಿಕೆ ಹೂಡಿದರು. ಈ ಬಗೆಹರಿಯದ ಭಿನ್ನಾಭಿಪ್ರಾಯಗಳ ಪರಿಣಾಮವಾಗಿ ಸಮಾಜಮಂದಿರ ಯೋಜನೆಯು ಪಂಚಾಯತಿಯಿಂದ ಹೊರಗೆ ಬರಲೇ ಇಲ್ಲ.

ಇಷ್ಟರಲ್ಲಿ ಬಿಳೇ ಟೊಪ್ಪಿಗೆಯವರೊಬ್ಬರು ಬಂದು ನಮ್ಮ ಹಿಂದುಸ್ತಾನದ ಜನರು ಬಹಳ ಹಿಂದುಳಿದವರೆಂದೂ ಆಲಸಿಗಳೆಂದೂ ಏನೇನೊ ಟೀಕಿಸಿ ನಮ್ಮ ಕೆಲಸ ನಾವೇ ಮಾಡಿಕೊಳ್ಳಬೇಕೆಂದು ಉಪದೇಶಿಸಿದರು. ಅದೇಕೆ ಹುರಿದುಂಬಿಸಿದರೆಂದೇ ಹೇಳಬಹುದು. ಆಗ ಜನರ ಪ್ರಚಂಡಸಭೆಯೊಂದು ಸೇರಿ ಸರಕಾರವು ನಮ್ಮ ಊರಿನ ಯಾವ ಕೆಲಸವನ್ನೂ ಮಾಡಿಕೊಟ್ಟಿಲ್ಲವೆಂದೂ ಇನ್ನುಳಿದ ಹಳ್ಳಿಗಳಂತೆ ನಮ್ಮ ಹಳ್ಳಿಯನ್ನು ಆದರ್ಶ ಹಳ್ಳಿಯನ್ನಾಗಿ ರೂಪಿಸಬೇಕೆಂದೂ ಕೇಳಿಕೊಳ್ಳುವ ಗೊತ್ತುವಳಿಯೊಂದು ಕಿವಿ ಗಡಚಿಕ್ಕುವ ಕರತಾಡನಗಳ ಮಧ್ಯೇ ಪಾಸಾಯಿತು. ಅದನ್ನು ಅವರೇ — ಬಿಳೇ ಟೊಪ್ಪಿಗೆಯವರೇ— ಸರಕಾರಕ್ಕೆ ಒಯ್ದು ಮುಟ್ಟಿಸುವರು ಎಂದು ಹೇಳಿದರು. ಅದರ ಪರಿಣಾಮ ನಮ್ಮ ನಿರೀಕ್ಷೆ ಮೀರಿ ಆಯಿತು. ಮುಂದೆ ತಿಂಗಳೊಪ್ಪತ್ತಿನಲ್ಲಿಯೇ ಇಂಜನಿಯರ ಸಾಹೇಬರೊಬ್ಬರು ಬಂದು ನಮ್ಮೂರಲ್ಲಿ ಕ್ಯಾಂಪ ಹಾಕಿದರು. ಅವರು ನಮ್ಮೂರಿನ ಕೆರೆಯ ಪರಿಸ್ಥಿತಿಯನ್ನು ಪರಿಶೀಲಿಸಿದರಲ್ಲದೆ ರಸ್ತೆ ಯಾವ ಕಡೆಗೆ ರಚನೆಯಾಗಬೇಕೆಂಬದನ್ನು ಹೇಳಿಹೋದರು. ಅವರು ಹೇಳಿದಂತೆ ಕೆರೆ ಬಳಿಸುವ ದೊಡ್ಡ ಯಂತ್ರವೊಂದು ಎಲ್ಲರ ಕಣ್ಣಲ್ಲೊತ್ತುವಂತೆ ನಮ್ಮೂರಿಗೆ ಬಂದು ನಿಂತುಬಿಟ್ಟಿತು. ನಮ್ಮೂರ ಮಾತ್ರವಲ್ಲ ಸುತ್ತುಮುತ್ತಲಿನ ಜನರೂ ಬಂದು ಜನ ಅದನ್ನು ನೋಡತೊಡಗಿದರು. ನಮ್ಮೂರಿನವರು ತುಸು ಮೂಗು ಮೇಲೆ ಮಾಡಿಕೊಂಡು ಅಡ್ಡಾಡುವಂತಾಯಿತು.

ಆದರೆ ಆ ಸಲ ಮಳೆ ಬೇಗ ಪ್ರಾರಂಭವಾ-ದದ್ದರಿಂದ ತುಂಬಿದ ಕೆರೆಯಲ್ಲಿ ಕೆಲಸ ಮಾಡ

ಲಾಗದೆ ಆ ಯಂತ್ರ ಕೆಲಸವನ್ನು ಮುಂದಿನ ಬೇಸಿಗೆಯ ವರೆಗೆ ಮುಂದೂಡಿ ಅಲ್ಲಿಯೇ ವಿಶ್ರಾಂತಿ ಪಡೆಯುತ್ತ ನಿಂತಿದೆ.

ನಮ್ಮೂರ ಹುರುಪಿನ ಹುರಿಯಾಳೊಬ್ಬರು ಅಷ್ಟರಲ್ಲಿ ಮುಂದೆ ಬಂದು ಈ ರೀತಿ ಸರಕಾರವನ್ನವಲಂಬಿಸಿದರೆ ಏನೂ ಉಪಯೋಗವಿಲ್ಲವೆಂದೂ ನಮಗೆ ಬೇಕಾದದ್ದನ್ನೆಲ್ಲ ನಾವೇ ಮಾಡಿಕೊಳ್ಳಬೇಕೆಂದೂ ಏನೇನೋ ಭಾಷಣ ಮಾಡಿ ಕೊನೆಗೆ ಶ್ರಮದಾನದಿಂದ ನಮ್ಮೂರಿಗೆ ಕೂಡುವ ರಸ್ತೆಯನ್ನು ನಾವೇ ನಿರ್ಮಿಸಿಕೊಳ್ಳಬೇಕೆಂದು ಹುರಿದುಂಬಿಸಿದರು. ಅವರ ಧುರೀಣತ್ವದಲ್ಲಿ ಊರ ಜನರೆಲ್ಲ ಸೇರಿ ರಸ್ತೆ ಕಡಿಯುವ ಕಾರ್ಯ ಪ್ರಾರಂಭವಾಯಿತು. ಎರಡೂ ಬದಿಯ ಗಟಾರವನ್ನು ಅಗಿದು ಮಧ್ಯೆ ರಸ್ತೆಯಲ್ಲಿ ಮಣ್ಣು ಹಾಕಿ ಅದನ್ನು ತುಸು ಎತ್ತರ ಮಾಡಿ ಮೇಲೆ ಖಡಿ ಸಹ ಹಾಕಿದ್ದಾಯಿತು. ಮುಂದೆ ಅದರ ಮೇಲೆ ರೋಲರ ಆಡಿಸುವ ಘಟ್ಟಕ್ಕೆ ಬಂದಾಗ ಅದು ಸರಕಾರದವರಿಂದಾಗಬೇಕಾದ ಕಾರ್ಯವೆಂದು ನಿರ್ಣಯವಾಗಿ ಅದಕ್ಕಾಗಿ ಸರಕಾರಕ್ಕೆ ಅರ್ಜಿ ಹಾಕಬೇಕೆಂದು ಒಪ್ಪಿತವಾಗಿ ಆ ಕೆಲಸ ಅಲ್ಲಿಗೆ ನಿಂತಿತು.

ಅಷ್ಟರಲ್ಲಿ ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಏನೇನೋ ಬರೆದುಬರುತ್ತಿರುವದನ್ನು ನಮಗೆ ಯಾರೋ ಏನೋ ಹೇಳತೊಡಗಿದರು. ನಮ್ಮ ಸರಕಾರಕ್ಕೆ ಅಂದರೆ ಯೋಜನೆಗೆ ವಿದೇಶವಿನಿಮಯದ ಕೊರತೆ ಬಹಳವಾಗಿದೆಯಂತೆ. ಆದ್ದರಿಂದ ಯೋಜನೆಗಳನ್ನೆಲ್ಲ ಮೊಟಕುಗೊಳಿಸಬೇಕೆಂಬದು ಅದರ ಮಥಿತಾರ್ಥ. ಅಂತೂ ನಮ್ಮೂರ ಯೋಜನೆಗಳು ಸ್ಥಗಿತಗೊಂಡವು.

ಮೂರನೇ ಪಂಚವಾರ್ಷಿಕ ಯೋಜನೆಯ ಮಾತು ಈಗಾಗಲೇ ಗಾಳಿಯಲ್ಲಿ ಕೇಳಬರುತ್ತದೆ. ಉದ್ದಿಮೆಗಳನ್ನು ಸ್ಥಾಪಿಸುವದಕ್ಕೆ ಪ್ರಾಶಸ್ತ್ಯ ಕೊಡಲಾಗುವದೆಂದೂ ಆದ್ದರಿಂದ ನಮ್ಮೂರಲ್ಲಿ ಒಂದು ಕಾರಖಾನೆ ಸ್ಥಾಪಿಸುವ ಸಂಭವ ಇದೆಯೆಂದೂ ಮೊನ್ನೆ ಒಬ್ಬರು ಹೇಳಿದರು. ಇದರಿಂದ ಈಗಾಗಲೇ ನಮ್ಮೂರಿನ ಸಾಕಷ್ಟು ಜನರ ಬಾಯಲ್ಲಿ ನೀರೂರಿದೆ.

ಅಂತೂ ನಮ್ಮೂರಲ್ಲಿ ಪಂಚವಾರ್ಷಿಕ ಯೋಜನೆಯ ಪರಿಣಾಮವಾಗಿ ಅನೇಕ ಯೋಜನೆಗಳು ಪ್ರಾರಂಭವಾದವು. ಅವು ಇನ್ನೂ ಮುಗಿದಿಲ್ಲವೆಂಬದು ನಿಜ. ಆದರೆ ಯೋಜನೆಗಳಾದರೂ ಎಲ್ಲಿ ಮುಗಿದಿವೆ.

ಅದೇನೆ ಇರಲಿ, ಹಾಳುಕೊಂಪೆಯಂತಿದ್ದ ನಮ್ಮೂರು ಈ ಯೋಜನೆಗಳ ಪರಿಣಾಮವಾಗಿ ಹಂಪಿಯಂತಾಗಿದೆಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಒಂದು ಕಡೆ ಶಾಲಾ ಕಟ್ಟಡದ ಶಂಕುಶಿಲೆ ಮುಂದಿನ ಕಟ್ಟಡವನ್ನು ಕಾಣದೆ ನಿಂತಿದೆ; ಇನ್ನೊಂದು ಕಡೆ ಇನ್ನೂ ನೀರು ಕಾಣದ ಬಾವಿ ಯಾರನ್ನು ನುಂಗಲಿ ಎಂದು ಬಾಯ್ತೆರೆದು ಕುಳಿತಿದೆ; ಮತ್ತೊಂದು ಕಡೆ ಅರ್ಧನಿರ್ಮಾಣದ ಹಾಳುರಸ್ತೆ ತನ್ನ ಮೇಲೆ ಯಾರೂ ಅಡ್ಡಾಡಬಾರದೆಂದು ನಿರ್ಬಂಧಿಸಿ ಅಡ್ಡಗಟ್ಟಿ ನಿಂತಿದೆ. ಮಗದೊಂದು ಕಡೆಗೆ ವನಮಹೋತ್ಸವದಲ್ಲಿ ಹಚ್ಚಿದ ಗಿಡಗಳು ಚಿಗುರದೆ ಬಾಡಿಹೋದ ಕುರುಹುಗಳಿವೆ. ಇನ್ನೂ ಎಷ್ಟೆಂದು ಬಣ್ಣಿಸಲಿ? ನೀವೇ ಬಂದು ನಮ್ಮೂರನ್ನು ನೋಡಿರಿ. ಅದೇಕೆ? ನಿಮ್ಮೂರನ್ನೇ ನೋಡಿಕೊಂಡು ನಮ್ಮೂರಿನಂತಿದೆಯೋ ಇಲ್ಲವೋ ಹೇಳಿಬಿಡಿ, ಅಷ್ಟೇ ಸಾಕು.

# 'ಪಾರ್ವತೀ ಕಲ್ಯಾಣ' ಕಾಲೇಜು

ಲೇಖಕರು :
**ಶ್ರೀ. ಬಾಬು ಬೆಂಡಿಗೇರಿ**
ಎಂ.ಎ., ಎಲ್. ಎಲ್. ಬಿ.

ಸುಮಾರು ಐವತ್ತು ವರುಷಗಳ ನಂತರ ನಮ್ಮ ವಿಶ್ವವಿದ್ಯಾಲಯ ಶಿಕ್ಷಣ ಯಾವ ಸ್ವರೂಪ ತಳೆಯಬಹುದು ಎಂಬುದರ ಕಾಲ್ಪನಿಕ ಚಿತ್ರವನ್ನು ಪ್ರಾಧ್ಯಾಪಕರು ಈ ಲೇಖನದಲ್ಲಿ ಕೊಟ್ಟಿರುವರು.

ತಮ್ಮ "ಪಾರ್ವತೀ ಕಲ್ಯಾಣ" ಕಾಲೇಜಿಗೆ ನಾನು ಒಂದು ಸಲ ಭೆಟ್ಟಿ ಕೊಡಬೇಕೆಂದು ಪ್ರಿನ್ಸಿಪಾಲ್ ನಟರಾಜ ನೃತ್ಯಸುಂದರಂ ಅವರು ಬಹಳ ದಿನಗಳಿಂದ ನನಗೆ ಆಗ್ರಹ ಮಾಡುತ್ತಿದ್ದರು.

ಪ್ರಿನ್ಸಿಪಾಲ್ ನೃತ್ಯಸುಂದರಂ ಅವರು ನನ್ನನ್ನು ಅಷ್ಟು ಆಗ್ರಹಮಾಡಲು ಒಂದು ಕಾರಣವೂ ಇತ್ತು. ಅವರು ಹಿಂದೆ ನನ್ನ ವಿದ್ಯಾರ್ಥಿಯಾಗಿದ್ದರು. ಯಾವ ಪ್ರಯೋಜನಕ್ಕೂ ಬರದವನೆಂದು ಎಲ್ಲರಿಂದ ಆ ಕಾಲಕ್ಕೆ ಕರೆಸಿಕೊಂಡು ತಾನು ಈಗ ದೊಡ್ಡ ವ್ಯಕ್ತಿಯಾಗಿದ್ದೇನೆಂಬುದನ್ನು ತೋರಿಸಬೇಕೆಂಬ ಹೆಮ್ಮೆಯೂ ಪ್ರಿನ್ಸಿಪಾಲ್ ನೃತ್ಯಸುಂದರಮ್‌ರಲ್ಲಿತ್ತೆಂದು ತೋರುತ್ತದೆ.

ಈ ಪ್ರಿನ್ಸಿಪಾಲ್ ನೃತ್ಯಸುಂದರಂ ಅವರ ಮೊದಲಿನ ಹೆಸರು ನಾರಾಯಣ ಕುಲಕರ್ಣಿ ಎಂದಿತ್ತು. ಕಾಲೇಜಿನ ಅಭ್ಯಾಸ ತಲೆಗೆ ಹತ್ತದ್ದರಿಂದ ನಾರಾಯಣ ಕುಲಕರ್ಣಿ ತಬಲಾ ಕಲಿಯಲು ಆರಂಭಿಸಿದ್ದ. ಕಾಲೇಜಿನ ಯಾವ ಪರೀಕ್ಷೆಯಲ್ಲೂ ತೇರ್ಗಡೆಯಾಗುವ ಆಸೆ ಇಲ್ಲದ್ದರಿಂದ ಆತನು ಒಂದುದಿನ ಇದ್ದಕಿದ್ದಂತೆ ಅದೃಶ್ಯನಾಗಿ ಬಿಟ್ಟ. ಆತನ ತಂದೆ ಬಂದು ಕಣ್ಣೀರು ಕರೆದುಹೋದರು. ಎಷ್ಟು ಹುಡುಕಿದರೂ ಆತನು ಸಿಗಲಿಲ್ಲ.

ಈ ಘಟನೆ ನಡೆದುದನ್ನು, ಕುಲಕರ್ಣಿಯ ಹೆಸರನ್ನೂ ನಾನು ಮರೆತುಬಿಟ್ಟಿದ್ದೆ. ಆದರೆ ಒಂದು ದಿವಸ ಅತಿ ಅಚ್ಚುಕಟ್ಟಾಗಿ ವೇಷ ಧರಿಸಿದ ವ್ಯಕ್ತಿಯೊಂದು ನನ್ನ ಎದುರುಬಂದು ನಿಂತಾಗ ನಾನು ತಬ್ಬಿಬ್ಬಾದೆ. ಆ ವ್ಯಕ್ತಿಯೇ ತನ್ನ ಪರಿಚಯ ಹೇಳಿತು "ಬಹುಶಃ ನನ್ನ ಗುರುತು ನಿಮಗೆ ಹತ್ತಿರಲಿಕ್ಕಿಲ್ಲ. ಕಾಲೇಜಿನಿಂದ ಓಡಿಹೋದ ನಾರಾಯಣ ಕುಲಕರ್ಣಿ ನಾನೇ. ನಿಮ್ಮ ಕಾಲೇಜಿನಿಂದ ನಾನು ಮುಂಬೈಗೆ ಹೋಗಿ ಅಲ್ಲಿಯೇ ಕೆಲವರ್ಷಗಳವರೆಗೆ ಇದ್ದೆ. ತಬಲಾ ನುಡಿಸುವುದರಲ್ಲಿ ಪ್ರಾವೀಣ್ಯವನ್ನು ಪಡೆದುದರಿಂದ ನಾನು ಓದುತ್ತಿದ್ದ ಕಲಾಶಾಲೆಯವರು ನನ್ನನ್ನು ಹೊನೋಲುಲು ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಅಭ್ಯಾಸಕ್ಕಾಗಿ ಕಳಿಸಿದರು. ಅಲ್ಲಿ ನಾನು ನೃತ್ಯ ಹಾಗೂ ತಬಲಾ ಶಾಸ್ತ್ರಗಳಲ್ಲಿ ಡಿ. ಎಸ್. ಸಿ. ಪದವಿಗಳನ್ನು ಪಡೆದು ಈಗ ಸ್ವದೇಶಕ್ಕೆ ಮರಳಿ ಬಂದಿದ್ದೇನೆ. ವಿಶ್ವವಿದ್ಯಾಲಯಗಳಲ್ಲಿ ದೊರೆಯುವ ಶಿಕ್ಷಣದಲ್ಲಿ ಲಲಿತ ಕಲೆಗಳಿಗೇ ಹೆಚ್ಚಿನ ಪ್ರಾಮುಖ್ಯ ಕೊಡಬೇಕೆಂದು ಅಂತರ್ವಿಶ್ವವಿದ್ಯಾಲಯಗಳ ಸಮಿತಿಯು ನಿರ್ಧರಿಸಿರುವುದರಿಂದ ನಿಮ್ಮ ಊರಿನ ಪಾರ್ವತೀಕಲ್ಯಾಣ ಕಾಲೇಜಿನ ಪ್ರಿನ್ಸಿಪಾಲ್ ಸ್ಥಾನಕ್ಕೆ ನನ್ನನ್ನು ನೇಮಕ ಮಾಡಲಾಗಿದೆ. ನೀವು ನಮ್ಮ ಕಾಲೇಜಿಗೆ ಅವಶ್ಯವಾಗಿ ಭೆಟ್ಟಿಕೊಡಬೇಕು."



"ಹಾಗೆ ನಿರಾಶರಾಗಬಾರದು ಮಿಸ್ ರತಿದೇವಿ" ಪ್ರಿನ್ಸಿಪಾಲ್ ನೃತ್ಯಸುಂದರಂ ಹೇಳಿದರು.

ನಾನು ಹೂ ಎಂದಾಗ ಆತನು ಮತ್ತೊಂದು ವಿಷಯವನ್ನು ಹೇಳಿದನು. "ನನ್ನ ಜೀವನದಲ್ಲಿ ನಡೆದ ಮಹತ್ವದ ಘಟನೆಗಳಲ್ಲಿ ನನ್ನ ಹೆಸರು ಬದಲಾದುದೂ ಒಂದು, ಮಹತ್ವದ ಘಟನೆಯಾಗಿದೆ. ನನ್ನ ಪಾಂಡಿತ್ಯಕ್ಕೆ ಮೆಚ್ಚಿದ ಹೊನೋಲುಲು ವಿಶ್ವವಿದ್ಯಾಲಯದವರು ನನಗೆ ನಟರಾಜ ನಾದಬ್ರಹ್ಮ ನೃತ್ಯಸುಂದರಂ ಎಂಬ ಅರ್ಥಬರುವ ಪದವಿಯನ್ನು ದಯಪಾಲಿಸಿದರು. ಹೊನೋಲುಲು ವಿಶ್ವವಿದ್ಯಾಲಯದ ಜ್ಞಾಪಕ ಕೊನೆಯವರೆಗೆ ಹಸುರಾಗಿ ಉಳಿಯಲೆಂಬ ಉದ್ದೇಶದಿಂದ ನಾನು ನನ್ನ ಹೆಸರನ್ನು ನಾರಾಯಣ ಕುಲಕರ್ಣಿಯ ಬದಲು ನೃತ್ಯಸುಂದರಂ ಎಂದು ಬದಲಿಸಿದ್ದೇನೆ. ನಮ್ಮ ಕಾಲೇಜಿಗೆ ಬಂದರೆ ನನ್ನನ್ನು ಈ ಹೆಸರಿನಿಂದಲೇ ವಿಚಾರಿಸಿ."

ಪ್ರಿನ್ಸಿಪಾಲ್ ನಟರಾಜ ನೃತ್ಯ ಸುಂದರಂರ ಕೋರಿಕೆಯನ್ನು ಈಡೇರಿಸುವ ಒಂದು ದಿನ

ಬಂದಿತು. ನಾನು ಅವರ ಪಾರ್ವತೀ ಕಲ್ಯಾಣ ಕಾಲೇಜಿಗೆ ಪ್ರಯಾಣ ಬೆಳೆಸಿದೆ. ಊರಿನಿಂದ ನಾಲ್ಕು ಮೈಲಿನ ಮೇಲೆ ನಿಸರ್ಗ ರಮ್ಯವಾದ ಆವರಣದಲ್ಲಿ ಈ ಪಾರ್ವತಿ ಕಲ್ಯಾಣ ಕಾಲೇಜಿತ್ತು. ಬಸ್‌ನಿಂದ ಇಳಿದಾಗಲೇ ಕಾಲೇಜಿನಿಂದ ಗೆಜ್ಜೆಯ ಸಪ್ಪಳವೂ ತಬಲಾದ ಠಣತ್ಕಾರವೂ ಕೊಳಲಿನ ಧ್ವನಿಯೂ, ಕೋಲಾಟದ ಸದ್ದೂ ಕೇಳಬರುತ್ತಿತ್ತು.

ಪ್ರಿನ್ಸಿಪಾಲ್ ನೃತ್ಯಸುಂದರಂ ಅವರ ಬಗ್ಗೆ ವಿಚಾರಿಸಿದಾಗ ಅವರು ತಬಲಾ ಕ್ಲಾಸ್ ತೆಗೆದುಕೊಳ್ಳುತ್ತಿರುವರೆಂದು ತಿಳಿದುಬಂದಿತು. ಅವರು ಬರುವ ವರೆಗೆ ಕಾಲೇಜಿನ ಕಚೇರಿಯನ್ನಾದರೂ ನೋಡಬೇಕೆಂದು ನಾನು ಕಚೇರಿಗೆ ಹೋದೆ. ಅಲ್ಲಿರುವ ಗಂಗಾರಾವ್ ಶರ್ಮಾ ಅವರು ನನ್ನನ್ನು ಸ್ವಾಗತಿಸಿ ತಮ್ಮ ಪರಿಚಯ ಮಾಡಿಕೊಟ್ಟರು. ತಾವು ಅಮೃತಸರ್ ವಿಶ್ವವಿದ್ಯಾಲಯದಲ್ಲಿ "ಜಲತರಂಗ" ಶಾಸ್ತ್ರದಲ್ಲಿ ಪದವಿಯನ್ನು ಪಡೆದಿರುವುದಾಗಿಯೂ ಹೆಡ್ ಕ್ಲಾರ್ಕ್ ಕೆಲಸವನ್ನು ಮಾಡುವುದಲ್ಲದೆ ಜಲತರಂಗ್ ವರ್ಗವನ್ನು ತೆಗೆದುಕೊಳ್ಳುತ್ತಿರುವುದಾಗಿಯೂ ಅವರು ಹೇಳಿದರು.

ನಾವು ಮಾತನಾಡುತ್ತಿದ್ದಂತೆ ಒಬ್ಬ ಪೋಸ್ಟ್ ಮನ್ ಒಂದು ಟೆಲಿಗ್ರಾಮು ಕೊಟ್ಟು ಹೋದ. ಅದನ್ನು ಒಡೆದು ನೋಡಿದ ಗಂಗಾರಾವ್ ಕೊಂಚ ಗಾಬರಿಯಾದಂತೆ ಕಂಡಿತು. ವಿಷಯವೇನು ಎಂದು ನಾನು ಕೇಳಿದಾಗ ಅವರು ಹೇಳಿದರು "ಉದಕಮಂಡಳದ ಯುವಜನೋತ್ಸವಕ್ಕೆ ಹೋದ ವಿದ್ಯಾರ್ಥಿ ವಿದ್ಯಾರ್ಥಿನಿಯವರು ತಮ್ಮ ಅಧ್ಯಾಪಕರನ್ನೇ ಹಿಂದೆ ಬಿಟ್ಟುಹೋಗಿದ್ದಾರೆ. ಇದನ್ನು ನಮ್ಮ ಪ್ರಿನ್ಸಿಪಾಲರಿಗೆ ತೋರಿಸಿ ಬರುವೆ" "ಹಾಗಾದರೆ ಆ ವಿದ್ಯಾರ್ಥಿ ವಿದ್ಯಾರ್ಥಿನಿಯರ ಗತಿ ಏನು' ಎಂದು ನನ್ನ ಉತ್ಸುಕತೆಯನ್ನು ತಡೆಯಲಾರದೆ ನಾನು ಕೇಳಿದೆ. "ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಏನೂ ಆಗುವುದಿಲ್ಲ. ಆದರೆ ಅಧ್ಯಾಪಕರ ಗತಿ ಏನೆಂಬ ಬಗ್ಗೆ ವಿವಂಚಿತನಾಗಿದ್ದೇನೆ. ಈಗ ಟೆಲೆಗ್ರಾಮ್ ಕೊಟ್ಟವರೂ ಅವರೇ" ಎಂದು ಹೆಡ್‌ಕ್ಲಾರ್ಕ್ ಹೇಳಿ ಅಲ್ಲಿಂದ ಹೊರಹೊರಟರು.

ಮಾತನಾಡಲು ಯಾರೂ ಇರದ್ದರಿಂದ ಕಚೇರಿಯ ಸುತ್ತಲೂ ಕಣ್ಣಾಡಿಸಿದೆ. ದೊಡ್ಡ ದೊಡ್ಡ ಕಪಾಟುಗಳ ತುಂಬ ದೊಡ್ಡ ದೊಡ್ಡ ಫೈಲುಗಳು ಇದ್ದವು.

ಪ್ರಿನ್ಸಿಪಾಲ್‌ರನ್ನು ಕಂಡುಬಂದ ಹೆಡ್ ಕ್ಲಾರ್ಕ್ ಹೇಳಿದರು. "ನೀವು ಬಂದ ಬಗ್ಗೆ ಅವರಿಗೆ ಹೇಳಿದ್ದೇನೆ. ಈಗ ಪೀರಿಯಡ್ ಮುಗಿಸಿಕೊಂಡು ಬರುತ್ತಾರೆ."


ನಾನು ಕಪಾಟನಲ್ಲಿದ್ದ ಫೈಲುಗಳನ್ನೇ ನೋಡುತ್ತಿರುವುದನ್ನು ಕಂಡ ಅವರು ಆ ಫೈಲುಗಳ ಬಗ್ಗೆ ವಿವರಿಸಹತ್ತಿದರು. "ಈ ಫೈಲುಗಳು ದಿನ ದಿನಕ್ಕೆ ಬೆಳೆಯುತ್ತಲೇ ಇವೆ. ಅವೆಲ್ಲ ಯುವಜನೋತ್ಸವದ ಫೈಲುಗಳು-ಅಂತರ್‌ವಿಶ್ವವಿದ್ಯಾಲಯದವರು ಅಭ್ಯಾಸ ಕ್ರಮವನ್ನು ಬದಲಿಸಿದಂದಿನಿಂದ ಪ್ರಾಂತಿಕ ಸರಕಾರಗಳ ಮಟ್ಟದ ಮೇಲೆ, ಕೇಂದ್ರ ಸರಕಾರದ ಮಟ್ಟದ ಮೇಲೆ, ವಿಶ್ವವಿದಾಲಯಗಳ ಮಟ್ಟದ ಮೇಲೆ ಯುವಜನೋತ್ಸವಗಳು ನಡೆಯುತ್ತಿವೆ."

ಪ್ರಿನ್ಸಿಪಾಲ್ ನೃತ್ಯಸುಂದರಂ ಅವರು ನನ್ನನ್ನು ಕರೆಯಕಳುಹಿಸಿದ್ದರಿಂದ ಹೆಡ್ ಕ್ಲಾರ್ಕ್‌ರ ಮಾತು ಅರ್ಧದಲ್ಲಿಯೇ ನಿಂತಿತು. ಪ್ರಿನ್ಸಿಪಾಲ್ ನೃತ್ಯಸುಂದರಂ ಅವರನ್ನು ನಾನು ಕಂಡಾಗ ಅವರಿನ್ನೂ ತೇಕುತ್ತಿದ್ದರು.

"ಕ್ಷಮಿಸಬೇಕು. ನಿಮ್ಮನ್ನು ಕಾಯುವಂತೆ ಮಾಡಿದೆ. ನಿಮ್ಮ ಕಾಲದ ಶಿಕ್ಷಣಕ್ಕೂ ಈಗ ಕೊಡಲಾಗುವ ಶಿಕ್ಷಣಕ್ಕೂ ಭೂಮಿ-ಆಕಾಶದಷ್ಟು ಅಂತರವಿದೆ. ನಾನು ನಿಮ್ಮ ವಿದ್ಯಾರ್ಥಿಯಾಗಿದ್ದಾಗ ಪೀರಿಯಡುಗಳು ೪೫ ನಿಮಿಷಗಳವಾಗಿದ್ದವು. ಆದರೆ ಈಗ ಒಂದು ಪೀರಿ

ತಗಾಯಿ ಮೇಲೆ ಒಕ್ಕಲತನಕ್ಕಾಗಿ ಕೊಡಲಿಕ್ಕೆ ಸರಕಾರದಿಂದ ಮಂಜೂರಿ ಪಡೆದ

# ವಿಶ್ವಾಸ




## ಆಯಿಲ್ ಎಂಜಿನ್‌ಗಳು

೫/೬ ಎಚ್. ಪಿ. ೫೫೦ ಆರ್. ಪಿ. ಎಂ.

೮/೯ ಎಚ್. ಪಿ. ೫೦೦ ಆರ್. ಪಿ. ಎಂ.

ತಯಾರಕರು :

## ಕೊಲ್ಹಾಪೂರ ಅಟೋ ವರ್ಕ್ಸ

ಶಾಹುಪುರಿ, **ಕೊಲ್ಹಾಪೂರ**

ತಂತಿ : **KOPAUTO** ಫೋನ : **185**

**ದೀಪಾವಳಿಯು ಸರ್ವರಿಗೂ ಸುಖಪ್ರದವಾಗಲಿ**

---

**ಖಾತೆ ಕಿರ್ದಿ ಮದ್ರಾಸು ಲೆಡ್ಜರುಗಳು**

* ಸ್ಟೂಡಂಟು ನೋಟುಬುಕ್ಕು
* ಎಕ್ಸರಸೈಜು ಮತ್ತು ಗ್ರಾಫ್‌ಬುಕ್ಸ್
* ಶಾಲೆ-ಕಾಲೇಜಿನ ಎಲ್ಲ ಪುಸ್ತಕಗಳು

* ಸಾಹಿತ್ಯ ಪುಸ್ತಗಳು ಮತ್ತು
* ಎಲ್ಲ ವಿಧದ ಕಾಗದ, ರಟ್ಟು
* ಸ್ಟೇಶನರಿಗಳಿಗೆ

## ಯಜಮಾನ ಎಂಡ ಬ್ರದರ್ಸ

ಕಾಗದ ಮತ್ತು ಪುಸ್ತಕ ವ್ಯಾಪಾರಿ

ಬ್ರಾಹ್ಮಣ ಬೀದಿ, **ಬಳ್ಳಾರಿ**

**Dealers of Mysore Mills Products**

ನಮ್ಮ ಎಲ್ಲ ಗ್ರಾಹಕರಿಗೆ ದೀಪಾವಳಯು ಮಂಗಲದಾಯಕವಾಗಲಿ

---

# ಉದಯ

# ಮೋಟಾರ

# ಟ್ರಾನ್ಸಪೋರ್ಟ

ಬಿ. ಹೆಚ್. ರೋಡ್ **ಶಿವಮೊಗ್ಗ**

ಸುಸಜ್ಜಿತ ನೂತನ ಬಸ್ಸುಗಳಿಂದ ಸಕಾಲದ ಪ್ರಯಾಣಕ್ಕೆ ಈ ಕೆಳಗೆ ಕಂಡ ಊರುಗಳಿಗೆ ನಡೆಸಲಾಗುತ್ತದೆ.

- **ಶಿವಮೊಗ್ಗ — ಶೃಂಗೇರಿ**
- **ಶಿವಮೊಗ್ಗ — ದಾವಣಗೆರೆ**
- **ಶಿವಮೊಗ್ಗ — ತರೀಕೆರೆ**
  *via.* ಚೆನ್ನಗಿರಿ, ಶಿವನಿ
- **ಶಿವಮೊಗ್ಗ — ಚನ್ನಗಿರಿ**
  *via.* ಭದ್ರಾವತಿ
- **ಭದ್ರಾವತಿ — ಹೊನ್ನಾಳಿ**
  *via.* ಆನವೇರಿ

---

ಉತ್ಪಾದನೆಯಕ್ಕಿಂತಲೂ ಹೆಚ್ಚಿನ ಬೇಡಿಕೆ ಇರುವ ಮತ್ತು ಅಲ್ಪಾವಧಿಯಲ್ಲಿ ಅತ್ಯಂತ ಲೋಕಪ್ರಿಯವಾದದ್ದು


# ನೂತನ ಡಿಜೇಲ ಎಂಜಿನುಗಳು

ಉತ್ಪಾದಕರು :

## ನೂತನ ಮಹಾರಾಷ್ಟ್ರ ಎಂಜಿನಿಯರಿಂಗ ಕಂ.,

೧೪೩೫, ಲಕ್ಷ್ಮೀಪುರಿ, **ಕೊಲ್ಹಾಪುರ**

ನಮ್ಮ ಅಸಂಖ್ಯಾತ ಗ್ರಾಹಕರಿಗೂ ಹಿತಚಿಂತಕರಿಗೂ ದೀಪಾವಳಿಯು ಹಾರ್ದಿಕ ಅಭಿನಂದನೆಗಳು



೪-೫ ಎರ್. ಪಿ. ೬೦೦ ಆಯ್. ಪಿ. ಎಂ.

೫-೬ ಎರ್. ಪಿ. ೫೫೦ ಆಯ್. ಪಿ. ಎಂ.

೭-೮ ಎರ್. ಪಿ. ೫೦೦ ಆಯ್. ಪಿ. ಎಂ.

೧೦-೧೧ ಎರ್. ಪಿ. ೪೭೫ ಆಯ್. ಪಿ. ಎಂ.

★ ಸ್ಲೋಸ್ಪೀಡ, ಹಾರಿಝಾಂಟಲ,

★ ಕೋಲ್ಡಸ್ಟಾರ್ಟನ್, ಹೇವಿಡ್ಯೂಟಿ

**ನಡೆಸಲು ಅತಿಸುಲಭ**

ಶೋ ರೂಮು ಹಾಗೂ ಡಿಸ್ಟ್ರಿಬ್ಯೂಟರರು :


## ಡ್ರುವೆಟ್ ಚೌನಾ ಮತ್ತು ಕಂ., ೧೨೧/೨೩ ಏ ಆಡೇನವಾಲಾ ಬಿಲ್ಡಿಂಗ, ಮೋಡೋಜ ಸ್ಟ್ರೀಟ ಫೋರ್ಟ, ಮುಂಬಯಿ-೧


ಯಾವದೇ ವೇಳೆ
ಯಾವದೇ ಸ್ಥಳ
ಯಾವದೇ ಪ್ರಸಂಗ
ನೀವು
ಖಟಾವ
ವಾಯಿಲಗಳಲಿ
ನಿಮ್ಮ ಲಾವಣ್ಯಾಧಿಕ್ಯವನ್ನು ಕಾಣುವಿರಿ
ದಿ ಖಟಾವು ಮಕಾಂಜಿ ಸ್ಪಿನಿಂಗ ಆ್ಯಂಡ ವೀವ್ಹಿಂಗ ಕಂ. ಲಿ.,
ಮಿಲ : ಬೈಖಳಾ, ಮುಂಬಯಿ. ಕಚೇರಿ ಲಕಿ ಬಿಲ್ಡಿಂಗ ಬಲಾರ್ಡ ಇಸ್ಟೇಟ, ಮುಂಬಯಿ—೧

# ದೊಡ್ಡವರ ಸಲುವಾಗಿ ಹಿಂದುಸ್ಥಾನ ದೊಡ್ಡ ವಸ್ತು — ಅಂಬಾಸಡರ

ಹೊಸ ಹೆಚ್ಚಿನ ಕಾರ್ಯಕ್ಷಮತೆಯ

## ಓವ್ಹರ ಹೆಡ್ ವ್ಹಾಲ್ವ ಎಂಜಿನ್.......




OVERHEAD VALVE ENGINE

ಅದನ್ನು ಭಾರತದಲ್ಲಿ ಶ್ರೇಷ್ಠ ವಸ್ತುವನ್ನಾಗಿಸಿದೆ,

ಅದ್ಭುತ ಪಿಕ್ ಅಪ್ ಸುರಕ್ಷಿತ "ಓವರ್ ಟೇಕಿಂಗ" ಶಕ್ತಿ, ಉತ್ತಮ ಕಾರ್ಯಸಿದ್ಧಿ ಮತ್ತು ಮಿತವ್ಯಯ ಇವೆಲ್ಲವನು ಹೊಸ ಬಲಿಷ್ಠ ಓವರ ಹೆಡ್ ವಾಲ ಎಂಜಿನ್ ಉಳ್ಳ ಈ ದೊಡ್ಡ ಅಂಬಾಸಡರದಲ್ಲಿ ಪಡೆಯುವಿರಿ.

ಹೊಸ ಓ. ಎಚ್. ವಿ. ಎಂಜಿನ್‌ದ ಪ್ರಚುರತೆಯು ಸುಂದರ ಅಂಬಾಸಡರನ್ನು ಅದರ ಅನೇಕ ಸಿದ್ಧ ಮತ್ತು ವಿಶಿಷ್ಟ ಗುಣಗಳನ್ನು ಮತ್ತಿಷ್ಟು ಎದ್ದು ಕಾಣುವಂತೆ ಮಾಡಿ ಅದಕ್ಕೆ ಸ್ಥಾನ ಕೊಟ್ಟಿದೆ. ಕೂಡಲು ವಿಶಾಲ ಸ್ಥಳ, ದೀರ್ಘ ಪ್ರಯಾಣಗಳನ್ನು ಸುಖಕರ ಮುಗಿಸಲು ಹೆಚ್ಚು ವಿಶ್ರಾಮ; ಲಗೇಜ ಬೂಥನಲ್ಲಿ ಹೆಚ್ಚು ಸ್ಥಳ; ಹಾಗೂ ಈಗ ಹೆಚ್ಚಿನ ಕಾರ್ಯಕ್ಷಮತೆ ಮತ್ತು ಹೆಚ್ಚಿಗೆ ಮಿತವ್ಯಯ.



ಇವೆಲ್ಲದರಿಂದ 'ಭಾರತದಲ್ಲಿ ಇಂದು ದೊಡ್ಡ ಅಂಬಾಸಡರ ಶ್ರೇಷ್ಠ ಖರೀದಿ ವಸ್ತು' ಎಂದು ಒಪ್ಪುವಿರಿ.


**ಹಿಂದುಸ್ಥಾನ ಮೋಟಾರ್ಸ ಲಿ., ಕಲಕತ್ತಾ.**

ಈ ಕೆಳಗಿನ ಸ್ಥಳಗಳಲ್ಲಿ ನಮ್ಮ ಡೀಲರರು ಇರುತ್ತಾರೆ:

ಆಗ್ರಾ, ಅಂಬಾಲಾ ಕ್ಯಾಂಟ, ಅಜಮೀರ, ಅಮಹ್ಮದಾಬಾದ, ಅಲಹಾಬಾದ, ಬಡೋದೆ, ಬೆಂಗಳೂರು, ಭೋಪಾಳ, ಬರಾಮಪುರ, ಮುಂಬೈ, ಬರೇಲ್ಲಿ, ಕಲ್ಕತ್ತಾ, ಕಟಕ, ಕೋಯಿಮತ್ತೂರ ಡೇಹರಾಡೂನ್, ದುರ್ಗಾಪುರ, ದಿಬ್ರುಗಡ, ದನಬಾದ, ಗೌಹಾತಿ, ಇಂಫಾಲ, ಇಂದೋರ, ಜೈಪುರ, [illegible] ಗೋರಖಪುರ, ಜಮಶೇದಪುರ, ಜಲಂದರ ಸಿಟಿ, ಜಮ್ಮು, ಕಾನಪುರ, ಕೊಲ್ಹಾಪುರ, ಲಖನೌ, ಮದ್ರಾಸ, ಮದುರೈ, ಮಂಗಳೂರು, ಮೀರತ, ನಾಗಪೂರ, ಹೊಸದಿಲ್ಲಿ, ನೇಪಾಲ, ಪಾಟ್ನಾ, ಪುಣೆ, ಪಾಂಡೀಚೇರಿ, ರಾಜಕೋಟ, ರಾಂಚಿ, ಸಾಂಬಲಪುರ, ಶಿಲ್ಲಾಂಗ, ಸಿಕಂದರಾಬಾದ, ಸಿಲಚಾರ, ಶ್ರೀನಗರ, ಸಾತಾರಾ, ತೇಜಪುರ, ತಂಜಾವೂರ, [illegible] ವಾರಣಾಸಿ, ವಿಜಯವಾಡಾ, ವಿರುದುನಗರಂ

ಹೊಸ ವರ್ಷದ ಅಭಿನಂದನೆಗಳು

# ಭಾರತ ಆಯಿಲ್ ಎಂಜನುಗಳು



**೫-೬, ೯-೧೦ ಎಚ್. ಪಿ.**
**ಹಾರಿಝಾಂಟಲ್ ಸ್ಲೊ ಸ್ಪೀಡ,**
**ಬಲಿಷ್ಠ ರಚನೆ.**
**ಅಲ್ಪಾವಧಿಯಲ್ಲಿಯೇ ಲೋಕಪ್ರಿಯ ವಾಗಿವೆ. ಇದಲ್ಲದೇ**

- **ಭಾರತ ಥಾಯರ ಥಾಯಟರ್ಸ,**
- **ಡಾಂಪಿಂಗ ಟ್ರೇಲರ್ಸ**

**ನೀರಾವರಿ ಬಗ್ಗೆ ಬೇಕಾಗುವ ಕಬ್ಬಿಣ ಮತ್ತು ಬೀಡದ ಸ್ಲೂಜ-ಗೇಟ್ಸ, ಸಾಕೆಟ್ ಗೇಟ್ಸ ಡಬಲ್ ಟಾಯರ ಗೇಟ್ಸ, ರೋಲಿಂಗ ಶಟರ್ಸ, ಗೇಟ್ಸ, ಗ್ರಿಲ್ಸ, ಕೈಚಿ ಮುಂತಾದ ಎಲ್ಲ ಪ್ರಕಾರದ ಕಬ್ಬಿಣ ಸಾಮಾನುಗಳ ತಯಾರಕರು :**

ಕೊಲ್ಹಾಪೂರದಲ್ಲಿಯ ಪ್ರಥಮ ಕಾರಖಾನೆ

## ಪಾಟೋಲೆ ಜಾಧವ ಆ್ಯಂಡ ಕಂಪನಿ

**ಹೊಸ ಪೂರ್ಲಿ ಹತ್ತರ, ಲಕ್ಷ್ಮಿಪುರಿ, ಕೊಲ್ಹಾಪೂರ**

ದೀಪಾವಳಿಯ ಶುಭಾಶಯಗಳು

**ನಮ್ಮ ಯಾವತ್ತೂ ಗ್ರಾಹಕರಿಗೂ ಹಿತೈಷಿಗಳಿಗೂ ಇಷ್ಟಮಿತ್ರರಿಗೂ ಈ ದೀಪಾವಳಿಯು ಸುಖಪ್ರದವಾಗಲಿ ಎಂದು ಕೋರುವೆವು.**




# ಕೆ. ಎ. ಜೋತಿ

ಪ್ರಿನ್ಸಿಪಲ್ ಹೋಲಸೇಲ ಡೀಲರ
ಕಾನನದೇವನ ಚಹಾ
**ಕೊಲ್ಹಾಪುರ ಹಾಗು ರತ್ನಾಗಿರಿ**
ಜಿಲ್ಹೆಗಳಿಗಾಗಿ
ಪೋಸ್ಟಬಾಕ್ಸ ನಂ. ೨
ಲಕ್ಷ್ಮೀರೋಡ, ಕೊಲ್ಹಾಪುರ
ಫೋನ ನಂ. ೨೬೧ Tel : King Tea




**ದತ್ತಾತ್ರಿಯ ಕೃಷ್ಣ ಸಾಂಡೂ ಬ್ರದರ್ಸ ಚೆಂಬೂರ ಪ್ರಾಯವ್ಹೇಟ ಲಿ.**
**ಚೆಂಬೂರ-ಮುಂಬಯಿ ೭೮.**

ಕರ್ನಾಟಕ ಶಾಖೆ
**ಕೊಪ್ಪೀಕರ ರೋಡ, ಹುಬ್ಬಳ್ಳಿ**

## गुरु प्रेम बिडी

र. नं. १४३४७३



लक्ष्मीपुरी-शिवाजी रोड
बाजार गेट नजीक, कोल्हापूर.

**दत्तात्रय रामचंद्र सांगलीकर**
कोल्हापूर.

ಡಿ. ಆರ್. ಸಾಂಗಲೀಕರ, ಕೊಲ್ಹಾಪೂರ




ಅನಿಷ್ಟ ಅನ್ಯಾಯುಗಳ ಅಂಧಃಕಾರ ತೊಲಗಿ,
ದೇಶದಲ್ಲಿ ಸುಭಿಕ್ಷ ಉಂಟಾಗಲೆಂದು ಹಾರೈಸಿ,
ಎಲ್ಲರಿಗೂ
ದೀಪಾವಳಿಯ ಶುಭಾಶಯವನ್ನು
ಅರ್ಪಿಸುತ್ತೇವೆ.

- ನೂರಕೆ ನೂರರಷ್ಟು ಪರಿಶುದ್ಧವಾದ
- ಪೌಷ್ಠಿಕಾಂಶಗಳನ್ನು ಒಳಗೊಂಡಿರುವ

III

"ಫ್ಯಾನ್" ಗುರುತಿನ

ಗೋದಿ ಪದಾರ್ಥಗಳನ್ನೇ

ಯಾವಾಗಲೂ ಉಪಯೋಗಿಸಿರಿ






ಟೆಲಿಗ್ರಾಂ: "SUBHAM" ಟೆಲಿಫೋನ್ : 2471

# ಕೃಷ್ಣಾ ಫ್ಲೋರ್ ಮಿಲ್ಸ್

ಹಳೇತರಗುಪೇಟೆ, ಬೆಂಗಳೂರು—೨

ಯುಡ್ ಎರಡು ತಾಸುಗಳದಾಗಿದೆ. ಅಲ್ಲದೆ ಂದು ಪೀರಿಯುಡ್‌ನ್ನು ತೆಗೆದುಕೊಳ್ಳುತ್ತಿರುವ ಅಧ್ಯಾಪಕರಿಗೆ ಸ್ಫೂರ್ತಿ ಬಂದರೆ ಮುಂದಿನ ಪೀರಿಯುಡ್‌ನ್ನೂ ಅವರೇ ತೆಗೆದುಕೊಳ್ಳಬಹುದು. ಇಂದು ಹಾಗೇ ಆಯಿತು.”

ಪ್ರಿನ್ಸಿಪಾಲ್ ನೃತ್ಯಸುಂದರಂ ಅವರು ಚಹಾ ತರಲು ಸೇವಕನನ್ನು ಕರೆದರು. ಆತನು ಬಂದು ಹೋದ ಮೇಲೆ ಆತನ ಕಡೆಗೆ ಕೈ ಮಾಡಿ ತೋರಿಸುತ್ತ “ಇದೇ ಈಗ ಹೋದನಲ್ಲ ಆ ಸೇವಕ, ಆತನ ಹೆಸರು ಪಿಳ್ಳೆ. ಆತನು ಕೇರಳದವ. ಗೋಟುವಾದ್ಯವನ್ನು ಬಹಳ ಸುಂದರವಾಗಿ ಬಾರಿಸುತ್ತಾನೆ. ನಾನು ನೃತ್ಯ ಮಾಡುವಾಗ ಆತನೇ ಗೋಟುವಾದ್ಯ ಬಾರಿಸುತ್ತಾನೆ” ಎಂದು ಹೇಳಿದರು.

ಅವರ ಕಾಲೇಜ್ ಶಿಕ್ಷಣದ ವಿವರಗಳೇನೆಂಬುದನ್ನು ನಾನು ಕೇಳುವ ಮೊದಲೇ ಅವರು ಹೇಳಹತ್ತಿದರು “ನಾವು ಕಲಿಯುವಾಗ ನೃತ್ಯ, ಸಂಗೀತ ಮುಂತಾದ ಲಲಿತಕಲೆಗಳಿಗೆ ಯಾವ ಮಹತ್ವವೂ ಇದ್ದಿರಲಿಲ್ಲ. ಗಣಿತ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಇಂಗ್ಲಿಶ್, ಅರ್ಥಶಾಸ್ತ್ರ ಮುಂತಾದ ಬೇಸರತರುವ ವಿಷಯುಗಳನ್ನೇ ಕಲಿಸಲಾಗುತ್ತಿತ್ತು. ಅದರೆ ಭಾರತ ಸರಕಾರದ ಹತ್ತನೆಯ ಪಂಚವಾರ್ಷಿಕ ಯೋಜನೆಯ ಅನ್ವಯ ಇಡೀ ವಿದ್ಯಾಭ್ಯಾಸ ಕ್ರಮದಲ್ಲಿ ಬದಲಾವಣೆಯನ್ನು ಮಾಡಲಾಗಿದೆ. ಒಬ್ಬ ವಿದ್ಯಾರ್ಥಿ ಪದವಿಯನ್ನು ಪಡೆಯಬೇಕಾದರೆ ಅತನು ಕನಿಷ್ಟ ಒಂದು ಸಲವಾದರೂ ಅಖಿಲ ಭಾರತಮಟ್ಟದ ಯುವಜನೋತ್ಸವಕ್ಕೆ ಹೋಗಿ ಬಂದಿರಬೇಕೆಂದು ಒತ್ತಾಯದ ಕರಾರನ್ನು ಹಾಕಲಾಗಿದೆ. ಭಾರತ ಸರಕಾರವು ಸೂಚಿಸಿದ ಎಲ್ಲ ಶಾಸ್ತ್ರಗಳನ್ನು ನಮ್ಮ ಕಾಲೇಜಿನಲ್ಲಿ ಕಲಿಸುತ್ತಿದ್ದೇವೆ. ಒಬ್ಬ ವಿದ್ಯಾರ್ಥಿ ಮುಂಜಾನೆ ಹನ್ನೊಂದು ಗಂಟೆಗೆ ಬಂದನೆಂದರೆ ತನಗೆ ಮನಸ್ಸಿಗೆ ತೋಚಿದಷ್ಟು ಗಂಟೆ ಕಾಲೇಜಿನಲ್ಲಿರಬಹುದು. ಅವನಿಗೆ ಮೊದಲನೆಯ ಪೀರಿಯುಡ್‌ನಲ್ಲಿ ತಾಳ, ಎರಡನೆಯ ಪೀರಿಯುಡ್‌ನಲ್ಲಿ ಲಯ, ಮೂರನೆಯ ಪೀರಿಯುಡ್‌ನಲ್ಲಿ ನೃತ್ಯ, ನಾಲ್ಕನೆಯ ಪೀರಿಯುಡ್‌ನಲ್ಲಿ ಅಭಿನಯುಗಳನ್ನು ಹೇಳಿಕೊಡಬೇಕಾಗುತ್ತದೆ.”

“ಗಣಿತ, ಇಂಗ್ಲಿಶ್, ಫಿಜಿಕ್ಸ್, ಕೆಮಿಸ್ಟ್ರಿ, ಎಕನಾಮಿಕ್ಸ್ ಮುಂತಾದವುಗಳನ್ನು ಕಲಿಸುವುದಿಲ್ಲವೆ” ಎಂದು ನಾನು ಕೇಳಿದೆ.

“ಆ ವಿಷಯುಗಳನ್ನೂ ಕಲಿಸಲಾಗುತ್ತದೆ. ಆದರೆ ಅವುಗಳನ್ನು ಎಕ್ಸಟ್ರಾ ಪೀರಿಯುಡ್‌ಗಳಲ್ಲಿ ಕಲಿಸಲಾಗುತ್ತದೆ. ಆ ವಿಷಯುಗಳಲ್ಲಿ ಪರೀಕ್ಷೆ ಇಲ್ಲವಾದ್ದರಿಂದ ವಿದ್ಯಾರ್ಥಿಗಳಿಗೆ ಅವುಗಳ ಬಗ್ಗೆ ಹೆಚ್ಚಿನ ಆಸ್ಥೆ ಇಲ್ಲ. ಈ ವಿಷಯುಗಳನ್ನು ಪರೀಕ್ಷೆಗೆ ಇಡಬೇಕೋ ಇಡಬಾರದೋ ಎಂಬ ಬಗ್ಗೆ ಅಂತರ್ವಿಶ್ವವಿದ್ಯಾಲಯಗಳ ಸಮಿತಿಯಲ್ಲಿ ತುರುಸಿನ ಚರ್ಚೆ ನಡೆಯಿತು. ಆದರೆ ಅವುಗಳನ್ನು ಪರೀಕ್ಷೆಗೆ ಇಡಬಾರದೆಂದು ಬಹುಮತದಿಂದ ನಿರ್ಧರಿಸಲಾಯಿತು. ಆ ಕಾಲಕ್ಕೆ ಒಂದು ದೊಡ್ಡ ಯುದ್ಧವೇ ನಡೆದಂತಾಗಿತ್ತು. ಯುವಕರೆಲ್ಲ ಒಂದು ಪಕ್ಷಕ್ಕೆ ಮುದುಕರೆಲ್ಲ ಮತ್ತೊಂದು ಪಕ್ಷಕ್ಕೆ. ಕೊನೆಗೆ ಯುವಕರ ಪಕ್ಷಕ್ಕೇ ಜಯ ದೊರೆಯಿತು.

ನಾವು ಮಾತನಾಡುತ್ತಿದ್ದಾಗ ಓರ್ವ ಮಹಿಳೆ ಪ್ರವೇಶಿಸಿ ಹೇಳಿದಳು—

“ಕ್ಷಮಿಸಿ, ಸರ್. ಹುಡುಗರಿಗೆ ಇನ್ನೂ ಮುದ್ರೆಗಳೇ ಗೊತ್ತಾಗುತ್ತಿಲ್ಲ. ಲಖನೌ ಯುವಜನೋತ್ಸವಕ್ಕೆ ಇನ್ನು ಎರಡು ತಿಂಗಳು ಮಾತ್ರ ಉಳಿದವು, ಏನು ಮಾಡಬೇಕು ?”

ಪ್ರಿನ್ಸಿಪಾಲ್ ನೃತ್ಯಸುಂದರಂ ಅವರು ದೊಡ್ಡ ನಗೆಯನ್ನು ನಕ್ಕು ಹೇಳಿದರು “ಹಾಗೆ ನಿರಾಶರಾಗಬಾರದು ಮಿಸ್ ರತಿದೇವಿ. ಶ್ರಮದೊಂದಿಗೆ ತಾಳ್ಮೆಯೂ ಬೇಕು. ಹೋಗಿ ಶ್ರಮವಹಿಸಿ ನಿಮ್ಮ ಕಷ್ಟಕ್ಕೆ ತಕ್ಕ ಪ್ರತಿಫಲ ದೊರತೇ ದೊರೆಯುತ್ತದೆ.”

ಆಕೆ ಗಂಭೀರನಾದ ಮುಖದೊಂದಿಗೆ ಹೊರಟುಹೋದಳು. ಆಕೆ ಹೋದ ಮೇಲೆ ಪ್ರಿನ್ಸಿಪಾಲ್ ನೃತ್ಯಸುಂದರಂ ಅವರು ಆಕೆಯ ಪರಿಚಯವನ್ನು ಹೇಳಹತ್ತಿದರು. ಆಕೆಯ ಹೆಸರು ಮಿಸ್ ರತಿದೇವಿ. ಆಕೆ ಪ್ರಿನ್ಸಿಪಾಲ್ ನೃತ್ಯಸುಂದರಂ ಅವರ ಕ್ಲಾಸ್‌ಮೇಟ್. ನೃತ್ಯಶಾಸ್ತ್ರದ ಅಧ್ಯಾಪಿಕೆ. ಎಂಟು ಸಲ ಅಖಿಲ ಭಾರತ ಯುವಜನೋತ್ಸವಕ್ಕೆ ಹೋಗಿ ಬಂದ ಅನುಭವ ಆಕೆಗಿದೆ.

ನಾವು ಮಾತನಾಡುತ್ತಿದ್ದಂತೆ ಚಹ ಬಂದಿತು. ಚಹ ಕುಡಿದಾದ ಮೇಲೆ ನಾವು ಕಾಲೇಜನ್ನು ನೋಡಲು ಹೊರಟೆವು. ಒಂದು ವರ್ಗದಲ್ಲಿ ರಾಕ್ ಎಂಡ ರೋಲ್ ಮಾದರಿಯ ನೃತ್ಯ ನಡೆದಿತ್ತು. “ನೋಡಿ ನಮ್ಮ ವಿದ್ಯಾರ್ಥಿಗಳು ಎಷ್ಟು ಕಲಾವಂತರಾಗಿದ್ದಾರೆ. ವಿದೇಶಿಯ ನೃತ್ಯ ರಾಕ್ ಎಂಡ್‌ರೋಲ್‌ನ್ನು ಭಾರತಕ್ಕೆ ಅನುಗುಣವಾಗುವಂತೆ ಮಾರ್ಪಡಿಸಿಕೊಂಡಿದ್ದಾರೆ. ಆದರೆ ಇದು ಶಾಸ್ತ್ರೀಯ ನೃತ್ಯ, ಕಲಿಸುವ ಸೋಹನಲಾಲ್‌ರಿಗೆ ರುಚಿಸುವುದಿಲ್ಲ.”

ನಾವು ಮಾತನಾಡುತ್ತ ವಾಚನಾಲಯಕ್ಕೆ ಹೋದೆವು. ಅಲ್ಲಿ ಫಿಲ್ಮಫೇರ್, ಸ್ಕ್ರೀನ್, ಲೈಫ್, ಫಿಲ್ಮಿಂಡಿಯಾ ಪತ್ರಿಕೆಗಳ ನಾಲ್ಕು ನಾಲ್ಕು ಪ್ರತಿಗಳನ್ನು ಇಡಲಾಗಿತ್ತು. ಪ್ರಿನ್ಸಿಪಾಲ್‌ರನ್ನು ಕಂಡ ಲೈಬ್ರೆರಿಯನ್ ಒಂದು ಚಿಕ್ಕ ತಕರಾರನ್ನೇ ಕೊಟ್ಟ “ಹುಡುಗರು ಪತ್ರಿಕೆಗಳಲ್ಲಿರುವ ಸುಂದರವಾದ ಚಿತ್ರಗಳನ್ನು ಹರಿದುಕೊಂಡು ಹೋಗುತ್ತಿದ್ದಾರೆ. ಅದಕ್ಕೆ ಅವರಿಗೇನು ಮಾಡಬೇಕು ?”

ಪ್ರಿನ್ಸಿಪಾಲ್ ನೃತ್ಯಸುಂದರಂ ಅವರು ದೇಶಾವರಿ ನಗೆಯನ್ನು ನಕ್ಕು ಹೇಳಿದರು. "ಹುಡುಗರ ಈ ಸೌಂದರ್ಯದೃಷ್ಟಿ ಪ್ರಶಂಸಾರ್ಹವಾಗಿದೆ. ಅವರು ಚಿತ್ರಗಳನ್ನು ಕತ್ತರಿಸಿ ಕೊಂಡರೆ, ನೀವೇಕೆ ಇನ್ನೂ ಹೆಚ್ಚಿನ ಪ್ರತಿಗಳನ್ನು ತರಿಸುವುದಿಲ್ಲ? ಒಳ್ಳೆಯ ಚಿತ್ರಗಳು ಬಂದಾಗ ಎಲ್ಲ ವಿದ್ಯಾರ್ಥಿಗಳಿಗ ಒಂದೊಂದು ಪತ್ರಿಕೆಯನ್ನು ಪುಕ್ಕಟೆಯಾಗಿ ಕೊಡೋಣ. ಅವರ ಕಲಾಶಕ್ತಿಯನ್ನು ಬೆಳೆಸುವುದೇ ನಮ್ಮ ಮುಖ್ಯ ಕಾರ್ಯವಲ್ಲವೇ"

ವಾಚನಾಲಯದಿಂದ ಮುಂದೆ ಹೋಗುತ್ತಿದ್ದಾಗ "ಡಿಪಾರ್ಟಮೆಂಟ್ ಆಫ್ ಮ್ಯಾರೇಜೊಲೊಜಿ ಎಂಡ್ ಲವ್ವೊಲೊಜಿ" ಎಂಬ ಬೋರ್ಡ್ ಇದ್ದುದನ್ನು ನಾನು, ಓದಿದೆ. ಪ್ರಿನ್ಸಿಪಾಲ್ ನೃತ್ಯಸುಂದರಂ ಅವರು ಈ ಹೊಸ ಶಾಖೆಯ ಬಗ್ಗೆ ಅಭಿಮಾನದಿಂದ ಹೇಳಿದರು. "ಈ ಲಲಿತಕಲೆಗಳನ್ನು ಕಲಿಯುವಾಗ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಒಬ್ಬರೊಬ್ಬರ ಸಂಪರ್ಕ ಹೆಚ್ಚು ಬರುವುದರಿಂದ, ಅವರು ಒಬ್ಬರೊಬ್ಬರನ್ನು ಪ್ರೀತಿಸುವ ಸಂಭವ ಇದೆ. ಅಂಥ ಸಂದರ್ಭದಲ್ಲಿ ಅವರು ಈ ಡಿಪಾರ್ಟ-ಮೆಂಟಿಗೆ ಬಂದು ಯಾವ ಮುಚ್ಚುಮರೆಯೂ ಇಲ್ಲದೆ ಎಲ್ಲವನ್ನೂ ಈ ವಿಭಾಗದ ಹಿರಿಯರಾದ ಪ್ರೊ. ಮದನಮೋಹನರಿಗೆ ತಿಳಿಸುತ್ತಾರೆ. ಪ್ರೊ. ಮದನಮೋಹನರು ಅಮೇರಿಕಾದಲ್ಲಿ ಈ ಬಗ್ಗೆ ವಿಶೇಷವಾದ ಅಭ್ಯಾಸವನ್ನು ಮಾಡಿ ಬಂದಿದ್ದಾರೆ. ಕರ್ನಾಟಕದ ಪ್ರಥಮ ಶಾಖೆಯನ್ನು ಪ್ರಾಯೋಗಿಕವಾಗಿ ನಮ್ಮ ಕಾಲೇಜಿನಲ್ಲಿ ಆರಂಭಮಾಡಲಾಗಿದೆ. ಇದು ಯಶಸ್ವಿಯಾದರೆ ಇನ್ನುಳಿದ ಕಾಲೇಜಗಳಲ್ಲೂ ಇಂಥ ಡಿಪಾರ್ಟಮೆಂಟಗಳನ್ನು ಆರಂಭಿಸಲಾಗುವದು."

ಆತ್ಮಾಭಿಮಾನದಿಂದ ಹೇಳುತ್ತಿದ್ದ ಅವರ ಮಾತನ್ನು ಮಧ್ಯದಲ್ಲಿ ನಿಲ್ಲಿಸಿ ನಾನು ಕೇಳಿದೆ. "ನಿಮ್ಮ ಕಾಲೇಜಿನಲ್ಲಿ ಕನ್ನಡ ವಿಷಯವನ್ನು ಕಲಿಸಲಾಗುವುದಿಲ್ಲವೇ?"

"ಕನ್ನಡದಲ್ಲಿ ಕಲಿಯುವಂಥದೇನೂ ಇಲ್ಲವೆಂದು ಅಂತರ್ವಿಶ್ವವಿದ್ಯಾಲಯ ಸಮಿತಿಯವರು ನಿರ್ಧರಿಸಿರುವುದರಿಂದ ಕಾಲೇಜುಗಳಲ್ಲಿ ಕನ್ನಡ ಕಲಿಸುವುದನ್ನು ನಿಲ್ಲಿಸಲಾಗಿದೆ. ಆದರೆ ನಮ್ಮ ಕಾಲೇಜಿನಲ್ಲಿ ಕನ್ನಡದ ಬಗ್ಗೆ ಸಂಶೋಧನೆ ಮಾತ್ರ ನಡೆಯುತ್ತಲಿದೆ. ಅಮೇರಿಕೆಯ ಫೋರ್ಡ ಫೌಂಡೇಶನ್‌ನವರು ಈ ಸಂಶೋಧನೆಗೆ ಹಣವನ್ನು ಕೊಡುತ್ತಿದ್ದಾರೆ. ಕೆನಡಾ ಶಬ್ದಕ್ಕೂ ಕನ್ನಡ ಶಬ್ದಕ್ಕೂ ಯಾವ ವಿಧವಾದ ಸಂಬಂಧವಿದೆಯೆಂಬುದನ್ನು ಅಮೇರಿಕೆಯ ಪ್ರೊ. ವಿಲಿಯಂಸನ್‌ರು ನಮ್ಮ ಕಾಲೇಜಿನಲ್ಲಿದ್ದುಕೊಂಡು ಅಭ್ಯಾಸ ಮಾಡುತ್ತಿದ್ದಾರೆ" ಎಂದು ಹೇಳುತ್ತಿದ್ದಾಗಲೇ ಓರ್ವ ಸೇವಕ ಬಂದು ಪ್ರಿನ್ಸಿಪಾಲ್ ನೃತ್ಯಸುಂದರಂ ಅವರಿಗೆ ಏನೋ ಹೇಳಿದ.

ಪ್ರಿನ್ಸಿಪಾಲ್ ನೃತ್ಯಸುಂದರಂ ಅವರು ಗಡಿಬಿಡಿಯಿಂದ ಹೇಳಿದರು— "ಕ್ಷಮಿಸಬೇಕು. ಕೇಂದ್ರ ಸರಕಾರದ ಯುವಜನೋತ್ಸವ ಶಾಖೆಯ ಮಂತ್ರಿಗಳು ನಮ್ಮೂರಿನ ಮೇಲಿಂದ ಮುಂಬೈಗೆ ಹೋಗುತ್ತಿದ್ದಾರಂತೆ. ಅವರನ್ನು ಸ್ವಾಗತಿಸಲು ನಾನು ನಿಲ್ದಾಣಕ್ಕೆ ಹೋಗಬೇಕಾಗಿದೆ"

ನಾನೂ ನಮಸ್ಕಾರ ಹೇಳಿ ಅಲ್ಲಿಂದ ಹೊರಟೆ.



# ವ್ಯಾಪಾರದ ರಹ

ಬರೆದವರು :
**ಕುಲಕರ್ಣಿ ಎಮ್. ಎಸ್.,**
ಕೆ. ಇ. ಬಿ. ಹೈಸ್ಕೂಲ, ಧಾರವಾಡ



ಒಂದು ಊರಲ್ಲಿ ರಾಮು ಎಂಬ ಒಬ್ಬ ಬಡಹುಡುಗನಿದ್ದನು. ಅವನ ತಂದೆತಾಯಿಗಳು ಚಿಕ್ಕಂದಿನಲ್ಲಿಯೇ ತೀರಿಕೊಂಡಿದ್ದರು. ರಾಮು ಚಿಕ್ಕಂದಿಸಿಂದ ಜಾಣನಿದ್ದನಲ್ಲದೆ ಪರಿಶ್ರಮಪಡುತ್ತಿದ್ದನು. ಪ್ರತಿದಿನ ರಾತ್ರಿ ತಾನು ದೊಡ್ಡ ಮನುಷ್ಯನಾಗುವೆನು ದೊಡ್ಡ ಮನೆಯಲ್ಲಿ ಇರುವೆನು. ಆಳು-ಹೋಳುಗಳನ್ನು ಇಡುವೆನು. ಸುಖದಿಂದ ಇರುವೆನು ಎಂದು ಕನಸುಕಾಣುತ್ತಿದ್ದನು.

ಆ ಊರಲ್ಲಿ ಧನಿರಾಮನೆಂಬ ಶೆಟ್ಟಿ ಇದ್ದನು. ಅವನು ಉದಾರತೆಯ ಸಲುವಾಗಿ ಪ್ರಸಿದ್ಧನಿದ್ದನು. ಬಡಜನರಿಗೆ ಬಿಚ್ಚು ಮನಸ್ಸಿನಿಂದ ದಾನ ಕೊಡುತ್ತಿದ್ದನು. ಒಂದು ದಿನ ರಾಮುನಿಗೆ ತಿನ್ನಲಿಕ್ಕೆ ಏನೂ ಸಿಗದ್ದರಿಂದ ಧನಿರಾಮಶೆಟ್ಟಿಯ ಬಳಿಗೆ ಹೋಗಿ ಅಂದನು– ನಾನು ಒಬ್ಬ ಅನಾಥ ಮತ್ತು ಬಡ ಹುಡುಗನು. ನನಗೆ ತಂದೆ ತಾಯಿಗಳು ಇಲ್ಲ. ಆದ್ದರಿಂದ ನನಗೆ ಒಂದು ನೌಕರಿ ಕೊಡಿರಿ.

ಧನಿರಾಮಶೆಟ್ಟಿಯು ಅವನ ಮಾತನ್ನು ಕೇಳಿ ಮುಗುಳು ನಗುತ್ತ ಅಂದನು— ನೀನು ಯಾವ ಕೆಲಸ ಮಾಡುವಿ? ನಿನ್ನಂತಹ ಹುಡುಗರು ಓಣಿಗಳಲ್ಲಿ ಭಿಕ್ಷೆ ಬೇಡುತ್ತ ಅಡ್ಡಾಡುತ್ತಿರುತ್ತಾರೆ. ಸಂಜೆ ಮುಂದೆ ಅನ್ನಸಂತರ್ಪಣೆ ಇದೆ. ನೀನು ಬಂದು ಅನ್ನ ತೆಗೆದುಕೊಂಡು ಹೋಗು.

ರಾಮು ಅಂದನು— ನಾನು ನಿಮ್ಮ ಬಳಿ ಭಿಕ್ಷೆ ಬೇಡಲು ಬಂದಿಲ್ಲ. ನಾನು ತಮ್ಮಿಂದ ಸ್ವಲ್ಪ ಸಹಾಯ ಬೇಡುತ್ತೇನೆ. ಆದರೆ ನೀವು ನೌಕರಿ ಕೊಡದಿದ್ದರೆ ಕೆಲವು ರೂಪಾಯಿಗಳನ್ನಾದರೂ ವ್ಯಾಪಾರಕ್ಕಾಗಿ ಕೊಡಿರಿ. ಆದರೆ ಶೆಟ್ಟಿ ಇದನ್ನು ಒಪ್ಪಲಿಲ್ಲ.

ಅವನು ವ್ಯಂಗ್ಯದಿಂದ ಅಂದನು— "ಎಲೆ ಆ ವ್ಯಾಪಾರಕ್ಕಾಗಿ ರೂಪಾಯಿಗಳ ಅಗತ್ಯವೇನಿದೆ? ಯಾರಲ್ಲಿ ಸಾಹಸವಿದೆಯೋ ಅವನು ಒಂದು ಸತ್ತ ಇಲಿಯಿಂದ ವ್ಯಾಪಾರ ಮಾಡುತ್ತಾನೆ. ನೋಡು ಅಲ್ಲಿ ಒಂದು ಸತ್ತ ಇಲಿಯಿದೆ ಅದರಿಂದ ವ್ಯಾಪಾರ ಮಾಡು." ಅಲ್ಲಿ ಒಂದು ಸತ್ತ ಇಲಿ ಬಿದ್ದಿತ್ತು. ರಾಮು ಆ ಇಲಿಯನ್ನು ತೆಗೆದುಕೊಂಡು ಹೊರಟನು.

ಹೀಗೆ ಹೋಗುತ್ತಿದ್ದಾಗ ಒಬ್ಬ ಮನುಷ್ಯ ಸಿಕ್ಕನು. ಅವನು— ನನಗೆ ಈ ಇಲಿ ಬೇಕಾಗಿದೆ. ಈ ದಿನ ಊರಲ್ಲಿ ಹರತಾಳವಿದೆ. ಮಾಂಸದ ಪೇಟೆ ಬಂದು ಇದೆ. ನನ್ನ ಪ್ರೀತಿಯ ಬೆಕ್ಕು ಹಸಿದಿದೆ. ನೀನು ಈ ಇಲಿಯನ್ನು ಕೊಟ್ಟರೆ ಅದರ ಹೊಟ್ಟೆ ತುಂಬಿಹೋಗುವದು. ರಾಮು ಆ ಇಲಿಯನ್ನು ಕೊಟ್ಟಿದ್ದರಿಂದ ೪ ಆಣೆಗಳು ದೊರೆತವು. ಅದರಿಂದ ಸೇಂಗಾ ತೆಗೆದುಕೊಂಡು ಗಡಿಗೆಯಲ್ಲಿ ನೀರು ತುಂಬಿಕೊಂಡು ಹಾದಿಯ ಮೇಲೆ ಕುಳಿತುಕೊಂಡನು.

ಆ ಹಾದಿಯು ಅಡವಿಯಿಂದ ಬರುತ್ತಿತ್ತು. ಅಲ್ಲಿಂದ ಬಹಳ ಜನ ಕಟ್ಟಿಗೆ ಒಡೆಯುವವರು ಊರಲ್ಲಿ ಕಟ್ಟಿಗೆಯನ್ನು ಮಾರಲು ಅದೇ ಹಾದಿಯಿಂದ ಹೋಗುತ್ತಿದ್ದರು. ಇಡೀ ದಿವಸ ಕೆಲಸಮಾಡು
ರಿಂದ ದಣಿದು ಹಸಿದುಬರುತ್ತಿದ್ದರು. ನೀರಿನ ಗಡಿಗೆಯನ್ನು ನೋ
ಅದರೊಳಗಿನ ನೀರನ್ನು ಕುಡಿದು ಸೇಂಗಾ ತಿಂದು ಹೋಗುತ್ತಿದ್ದ
ಅದರ ಬದಲಾಗಿ ಅವರು ಕೆಲವು ಕಟ್ಟಿಗೆಗಳನ್ನು ಇಟ್ಟುಹೋಗ
ದ್ದರು. ಅವುಗಳನ್ನು ಸೂಡುಕಟ್ಟಿ ರಾಮು ಊರಲ್ಲಿ ಮಾ
ರಿಂದ ಎಂಟು ಆಣೆಗಳು ದೊರೆತವು. ಕೆಲವು ಆಣೆಗಳಿಂದ ರೊ
ಯನ್ನು ತಿಂದು ಮತ್ತೆ ಸೇಂಗಾ ಕಡಲೆಗಳ ವ್ಯಾಪಾರಕ್ಕಾಗಿ ಅ
ಹಾದಿಯಲ್ಲಿ ಕುಳಿತ. ಸ್ವಲ್ಪ ಲಾಭವಾದೊಡನೆ ಆ ಸ್ಥಳದಲ್ಲಿ ಗು
ಸಲನ್ನು ಇಟ್ಟ. ಸಾವಕಾಶವಾಗಿ ಕೋಳಿಗಳನ್ನು ಸಾಕತೊಡಗಿ
ಮತ್ತು ಮೂರು ನಾಲ್ಕು ಕುರಿಗಳನ್ನೂ ಕೊಂಡ. ರಾಮು
ವ್ಯಾಪಾರ ದಿನೇದಿನೇ ವೃದ್ಧಿ ಹೊಂದಿತು. ಗುಡಿಸಲಿನ ಸ್ಥಳ
ಒಂದು ಮನೆಯನ್ನು ಕಟ್ಟಿಕೊಂಡನು. ತನ್ನ ಅಂಗಡಿಯಲ್ಲಿ
ಸಾಮಾನುಗಳನ್ನು ಇಟ್ಟ. ಸುತ್ತುಮುತ್ತಲಿನ ಜನರು ಇವನ
ತೆಗೆದುಕೊಂಡು ಹೋಗುತ್ತಿದ್ದರು. ಒಳ್ಳೆ ಲಾಭವಾಗತೊಡಗಿ
ಕೊನೆಗೆ ದೊಡ್ಡ ಅಂಗಡಿಯನ್ನು ಕಟ್ಟಿಸಿ ಆಳುಹೋಳುಗಳ
ಇಟ್ಟುಕೊಂಡ. ಆಗ ಅವನಿಗೆ ಧನಿರಾಮಶೆಟ್ಟಿಯ ನೆನಪು ಬಂದಿ
ಬೆಳ್ಳಿಯ ಇಲಿಯನ್ನು ತೆಗೆದುಕೊಂಡು ಧನಿರಾಮನ ಮನೆಗೆ ಬಂದ
ಧನಿರಾಮನಿಗೆ ಇವನ ಗುರುತು ಹತ್ತಲಿಲ್ಲ. ಆದರೆ ರಾಮು ಎಲ್ಲ
ಯನ್ನು ಹೇಳಿದ. ಧನಿರಾಮನು ಅವನನ್ನು ಪ್ರೀತಿಯಿಂದ ಆಶೀರ
ಮಾಡಿ— ತಮ್ಮಾ ನಿನ್ನಂತೆಯೇ ಎಲ್ಲ ಹುಡುಗರು ಹೀಗೆ ಜಾಣ
ದಿಂದ ನಡೆದರೆ ನಮ್ಮ ದೇಶದ ಉನ್ನತಿಯಾಗುವದು ಎಂದನು.

## ಸಿಗದ ಅಳಿಲು



ಶಾಲೆಯ ತೋಟದಿ
ಮರಿ ಅಳಿಲೊಂದು
ಇತ್ತಿಂದತ್ತ–ಅತ್ತಿಂದಿತ್ತ
ಓಡುತ ಆಡುತ
ಮಕ್ಕಳ ಮನಸನು ಸೆಳೆದಿತ್ತು !

'ಬಾ....ಬಾ !' ಎಂದು ಕರೆಯೆ
ಬಿನ್ನಾಣ ಮಾಡುತ
ಬಳಿಗೇ ಬಂದಿತು,
ಹಿಡಿಯಲು ಹೋದೆವು
ಪುಣಕ್ಕನೆ ಹಾರಿ ಮರೆಯಾಯ್ತು !

—'ಕನ್ನಡಕಂದ' ತೋಕೆರೆ.

## ಮರೆಯೆನು ತಾಯಿ

ಕತ್ತಲೆಯಿಂದ ಬೆಳಕಿಗೆ ತಂದೆ ತಾಯೆ ।
ಎತ್ತಿ ಮುದ್ದಾಡಿ ನೀ ಸಲುಹಿದೆ ತಾಯೆ ॥
ಹಾಲನ್ನ ಉಣಿಸಿ ನೀ ಬೆಳೆಸಿದೆ ತಾಯೆ ।
ಲಾಲಿಸಿ ಮುದ್ದಿಟ್ಟು ಕುಣಿಸಿದೆ ತಾಯೆ ॥
ವಿದ್ಯೆ ಬುದ್ಧಿಯ ಕಲಿಸಿದೆ ತಾಯೆ ।
ಬುದ್ಧಿವಂತನನ್ನಾಗಿ ಮಾಡಿದೆ ತಾಯೆ ॥
ವೀರರ ಕಥೆಯನು ಹೇಳಿದೆ ತಾಯೆ ।
ಬಾರಿಬಾರಿಗು ನೀತಿ ಪೇಳಿದೆ ತಾಯೆ ॥
ಮುದ್ದು ಮಕ್ಕಳು ಎಂದು ಸಾಕಿದೆ ತಾಯೆ ।
ತಿದ್ದಿ ತಪ್ಪನು, ಒಪ್ಪ ಕಲಿಸಿದೆ ತಾಯೆ ॥
ಕೆಟ್ಟತನವ ದೂರ ಮಾಡಿದೆ ತಾಯೆ ।
ಶಿಷ್ಟಾಚಾರವ ತಿಳಿಸಿದೆ ತಾಯೆ ॥
ಮರೆಯನು ಎಂದೆಗು ನಿನ್ನನು ತಾಯೆ ।
ಮರೆತರೆ ದೇವರು ಶಿಕ್ಷಿಪ ತಾಯೆ ॥
ದೇವರಿಗಿಂತಲು ಹೆಚ್ಚು ನೀ ತಾಯೆ ।
ಸರ್ವದೇವರ ತಾಯಿ, ನೀನೇ ತಾಯೆ ॥

ಎಂ. ಆರ್. ಶೆಟ್ಟಿ, ಉಡುಪಿ



## ಜಯ ಭಾರತಮಾತೆ !

ಶಿರದಲಿ ಸುಂದರ ಹಿಮಗಿರಿಯಿಹುದು
ವಕ್ಷಸ್ಥಲದೊಳು ಗಂಗೆಯು ಹರಿದು ।
ಗಂಗಾ ಯಮುನಾ ನದಿಗಳು ಕುಣಿದು ।
ಹಾಡುತಲಿರುವವು ಥಳಥಳ ಹೊಳೆದು ॥
ಜಯ ಜಯ ಜಯ ಭಾರತಮಾತೆ ॥
ಜಯ ಜಯ ಪಾವನ ಗುಣಚರಿತೆ ॥ ೧ ॥

ರಾಮನು ಸೀತೆಯು ಜನಿಸಿದರಿಲ್ಲಿ ।
ಗೌತಮ ಬುದ್ಧನು ಪುಟ್ಟಿದನಿಲ್ಲಿ ।
ಗಾಂಧಿಯು ಜೀವ ನಡೆಸಿದುದಿಲ್ಲಿ ।
ಎಲ್ಲರು ಒಮ್ಮೆಲೆ ಹಾಡುತ ನಿಲ್ಲಿ ॥ ಜಯ ಜಯ . . . ॥ ೨ ॥

ಧ್ರುವ ಪ್ರಲ್ಹಾದರು ಭಕ್ತಿಯ ತೋರಿ ।
ಮೆರೆದರು ಇಲ್ಲಿಯೆ ಕೀರ್ತಿಯ ಸಾರಿ ।
ಅಭಿಮನ್ಯುವು ಭರತನು ಭಲೆ ಶೂರಿ ।
ಎನಿಸುತ ಮೊಳಗಿಸಿದರು ಜಯಭೇರಿ ॥ ಜಯ ಜಯ ॥ ೩ ॥

ಎತ್ತರ ಪರ್ವತ, ಗುಡ್ಡ, ವನಗಳು ।
ಹಸುರಿನ ಬಣ್ಣದ ಆ ಕಾಡುಗಳು ।
ಹಣ್ಣುಗಳಿಂದಿಡಿದಿಹ ತೋಟಗಳು ।
ಹಾಡುತ್ತಲೆ ಇರುವುವು ಹಗಲಿರುಳು ॥ ಜಯ ಜಯ . . . ॥ ೪ ॥

ಬಿ. ವೆಂಕಟರಮಣ ಭಟ್ಟ ೫ನೇ ವರ್ಗ ಎ.
ಪುತ್ತೂರು.



# ಪಾಚೀ ಎಣ್ಣೆ

ಸುಗಂಧವಾದ ಪಚ್ಚೆತೆನೆಯ ಸತ್ವದಿಂದ ಸಿದ್ಧಪಡಿಸಿದ ತೈಲ. ಕೂದಲು ಉದುರುವಿಕೆ ತಡೆಯುವುದಲ್ಲದೆ ಮೆದುಳಿಗೆ ತಂಪನ್ನುಂಟುಮಾಡುವುದು. ನಿದ್ದೆ ಬಾರದವರಿಗೆ ಅತ್ಯುತ್ತಮ. ಉಷ್ಣದಿಂದ ಕಣ್ಣು ಕೆಂಪಾಗುವುದು ನೆತ್ತಿ ಬಿಸಿ ಏರುವುದು, ತಲೆ ಸಿಡಿಯುವುದು, ಮೂಗಿನಿಂದ-ಹಲ್ಲುಗಳಿಂದ ರಕ್ತ ಸೋರುವುದು, ಇವುಗಳನ್ನು ಶಮನಮಾಡುತ್ತದೆ. ಕೆಲವರಿಗೆ ಇದರ ಉಪಯೋಗದಿಂದ ಶೀತವಾಗುವಂತೆ ಕಂಡರೂ ನಿತ್ಯ ಉಪಯೋಗದಿಂದ ಅದನೂ ಸರಿಪಡಿಸಿ, ಮನಸ್ಸಿಗೆ ಉಲ್ಲಾಸ ಕೊಡುವುದು. ಪಿತ್ತ ದೋಷಕ್ಕೆ ಬಹಳ ಉತ್ತಮ, ಬಿಳಿ ಕೂದಲನ್ನು ಕಪ್ಪು ಮಾಡದ ಎಣ್ಣೆ. ಈ ಎಣ್ಣೆಯನ್ನು ಒದ್ದೆ ಕೂದಲಿಗೆ ಹಚ್ಚಕೂಡದು. ಸ್ನಾನದ ನಂತರ ಕೂದಲನ್ನು ಪೂರ್ಣ ಒಣಗಿಸಿ ಎಣ್ಣೆ ಇಡತಕ್ಕದ್ದು.

**ಒಮ್ಮೆ ಉಪಯೋಗಿಸಿ ನೋಡಿರಿ.**

**2 ಔನ್ಸು ರೂ. 1·00, 4 ಔನ್ಸು ರೂ. 1·75, 16 ಔನ್ಸು ರೂ. 5.25. ( ಪೋಸ್ಟೇಜು ಪ್ರತ್ಯೇಕ )**

ಮುಂಗಡ ಹಣ ಕಳುಹಿಸದೆ ವಿ. ಪಿ. ಪಿ. ಕಳುಹಿಸಲು ಸಾಧ್ಯವಿಲ್ಲ.

ಊರಿಗೊಬ್ಬ ಏಜಂಟರು ಬೇಕಾಗಿದ್ದಾರೆ.
ತಿಂಗಳೊಂದರ ರೂಪಾಯಿ 100 ರಷ್ಟು
ವ್ಯಾಪಾರ ಕೊಡಲು ಸಿದ್ಧರಿದ್ದವರು
ಮಾತ್ರ ಪತ್ರವ್ಯವಹಾರ ಮಾಡಿರಿ.



ಮುಖದ ಸೌಂದರ್ಯಕ್ಕೆ ಗುಲಾಬಿ ಹೂವಿನ ಪರಿಮಳ

# ಪಾಚೀ ಸ್ನೋ

**ನಿತ್ಯ ಉಪಯೋಗಿಸಿರಿ.**

**ದಿ ಕೆನರಾ ಲೆಬೊರೆಟರೀಸ್ ಲಿಮಿಟೆಡ್, ಕಾರ್ಸ್ಟ್ರೀಟ್, ಮಂಗಳೂರು –1.**

---

ನಮ್ಮ ಎಲ್ಲ ಗ್ರಾಹಕರಿಗೂ
ಹಾಗೂ
ಆಶ್ರಯದಾಯಕರಿಗೂ
ಈ ದೀಪಾವಳಿಯು
ಸುಖಸಮೃದ್ಧಿ ಹಾಗೂ ಆನಂದದಾಯಕವಾಗಲಿ

**ಸ್ತ್ರೀಯರ ಎಲ್ಲ ಪ್ರಕಾರದ ಶಾರೀರಿಕ ದುರ್ಬಲತೆಗೆ**
**ಪೌಷ್ಟಿಕ ಔಷಧ** ➡ **ಶತಾವೃತ**

**ಎಲ್ಲ ಪ್ರಕಾರದ ಕೆಮ್ಮುಗಳ ಮೇಲೆ**
**ಉಪಯುಕ್ತ** ➡ **ಕಾಸನಾಶಕ**

## ದಿ ಆಯುರ್ವೇದ ರಸಶಾಳಾ, ಪುಣೆ, ಪುಣೆ—೪

**ಹುಬ್ಬಳ್ಳಿ ಕೇಂದ್ರ:**
**೩ ವಾಜಿ ಬಿಲ್ಡಿಂಗ, ದುರಾಶಾಗಲ್ಲಿ ಹುಬ್ಬಳ್ಳಿ**

**ಬೆಳಗಾವಿ**
**೧೮೩೬, ರಾಮದೇವಗಲ್ಲಿ, ಬೆಳಗಾವಿ**

ನಮ್ಮಲ್ಲಿ ವೈದ್ಯಕೀಯ ಸಲಹೆಯನ್ನು ಉಚಿತವಾಗಿ ಕೊಡಲಾಗುತ್ತದೆ.

# ದೀಪಾವಳೀ ಕಥಾಶ್ರವಣಂ

ಲೇಖಕರು : ಲಾಂಗೂಲಾಚಾರ್ಯ

ಪ್ರತಿಯೊಂದು ಹಬ್ಬದ ಕೋಡಿಗೂ ಒಂದು ಥೆ ತೂಗಾಡುತ್ತ ಇರುತ್ತದೆ. ದೀಪಾವಳಿಗೂ ಥೆ ಇದೆ. ಆ ಕಥೆಗೂ ನೀವು ಹಣತೆ ಸಾಲಿ ಲ್ಲಿ ಹಚ್ಚುವ ದೀಪಗಳಿಗೂ ವಿಶೇಷ ಸಂಬಂಧ ರುವುದಿಲ್ಲ ನಿಜ. ಆದರೆ ನಮ್ಮ ಜೀವನದಲ್ಲಿ-ರುವ ಅಸಂಬದ್ಧತೆಗಳೇ ಅಲ್ಲವೆ ಅದನ್ನು ೀದಿಸಲು ಯೋಗ್ಯವಾಗಿ ಮಾಡಿರುವುದು ?

ಕೆಲವರು, ದೀಪಾವಳಿ ಹಬ್ಬವನ್ನು ಪ್ರಾರಂಭ ಮಾಡಿದವನು ಗುಪ್ತ ಚಕ್ರವರ್ತಿ ವಿಕ್ರಮಾದಿತ್ಯನೆಂದು ಹೇಳುತ್ತಾರೆ. ಆದರೆ ಯಾವ ಪೌರಾಣಿಕನೂ ಇದನ್ನು ಒಪ್ಪುವುದಿಲ್ಲ. ನಮ್ಮಲ್ಲಿಯ ಪ್ರತಿಯೊಂದು ದೇವಸ್ಥಾನವನ್ನೂ ಪಂಚಪಾಂಡವರೇ — ತಪ್ಪಿದರೆ ಜಕಣಾಚಾರಿಯೇ — ಕಟ್ಟಿರಬೇಕು. ಹಾಗೆಯೇ ಪ್ರತಿಯೊಂದು ಹಬ್ಬವನ್ನೂ ಯಾವನಾದರೂ ದೇವನೇ ಪ್ರವರ್ತಿಸಿರಬೇಕು. ನಾವು ತಿನ್ನುವ ಪ್ರತಿಯೊಂದು ಹೋಳಿಗೆ ಕಡುಬಿಗೂ ದೇವರೊಬ್ಬನ ಮೇಲ್ವಿಚಾರಣೆ ಇರುವುದು ಸುರಕ್ಷಿತವಾದದ್ದು. ದೇವರ ಹೆಸರಲ್ಲಿ ನಾವು ಯುದ್ಧಗಳನ್ನೇ ಮಾಡುತ್ತಿರುವಾಗ ಭೋಜನಗಳನ್ನೇಕೆ ಕೂಡದು ?

ದೀಪಾವಳಿ ಪ್ರಾರಂಭವಾದದ್ದು ದ್ವಾಪರ ಯುಗದಲ್ಲಿ, ಶ್ರೀಕೃಷ್ಣ ಪರಮಾತ್ಮನು ನರಕಾಸುರನ ವಧೆ ಮಾಡಿಬಂದ ದಿನದಿಂದ. ಅಸುರರು ಕೂಡ "ನರಕ" ಎಂಬ ಹೆಸರನ್ನು ಎಂದಾದರೂ ಇಟ್ಟುಕೊಳ್ಳಬಹುದೇ ಎಂದು ನೀವು ಸಂದೇಹಪಡಬಹುದು. Give your dog a bad name and hang him— ನಿಮ್ಮ ನಾಯಿಯನ್ನು ಕೊಲ್ಲಬೇಕೆನಿಸಿದರೆ ಅದಕ್ಕೆ ಒಂದು ಕೆಟ್ಟ ಹೆಸರು ಕೊಟ್ಟು ಆ ಮೇಲೆ ಕೊಲ್ಲಿರಿ ಎಂಬರ್ಥದ ಇಂಗ್ಲೀಷ ಗಾದೆಯನ್ನು ನೀವು ಕೇಳಿಲ್ಲವೆ ? ದೇವರುಗಳೂ ಪ್ರಾಚೀನ ವೀರರೂ ಯಾರನ್ನಾದರೂ ಕೊಲ್ಲಬೇಕೆಂದು ಬಯಸಿದರೆ ಅವರನ್ನು ಮೊದಲು ಅಸುರರೆಂದು ಕರೆಯುತ್ತಿದ್ದರೆಂದು ತೋರುತ್ತದೆ. ಅಲ್ಲದೆ ಸಾಧ್ಯವಾದರೆ ಅವರಿಗೆ ಏನಾದರೊಂದು ಕೆಟ್ಟ ಹೆಸರನ್ನೂ ಕೊಡುತ್ತಿದ್ದರು. ಅಥವಾ ಅವರನ್ನು ಕೊಂದ ಮೇಲೆ ಆ ಕಥೆ ಬರೆಯುವವರು ಅವರಿಗೆ ಏನಾದರೊಂದು ಚುನಾಯಿಸಿದ ಕೆಟ್ಟ ಹೆಸರಿನಿಂದ ಎರಡನೇ ಸಲ ಮರಣೋತ್ತರ ನಾಮಕರಣ ಮಾಡುತ್ತಿದ್ದರೆಂದೂ ಎಣಿಸಬಹುದು. ಆದರೆ ಇದು ದೇವತೆಗಳಿಗಾಗಲಿ, ಪ್ರಾಚೀನ ವೀರರಿಗಾಗಲಿ, ಪುರಾಣಿಕರಿಗಾಗಲಿ ವಿಶಿಷ್ಟವಾದ ಚಟವಲ್ಲೆಂದು ನಾವು ಒಪ್ಪಲೇಬೇಕು. ಮನುಷ್ಯರಾದ ನಾವು ಕೂಡ ಈ ಚಟದಿಂದ ಮುಕ್ತರಾಗಿಲ್ಲ. ಚರ್ಚಿಲ್ಲರು ಯುದ್ಧಕಾಲದಲ್ಲಿ ಯಾವಾಗಲೂ ಜರ್ಮನ್ನರನ್ನು "ಹೂಣ"ರೆಂದೇ ಕರೆಯುತ್ತಿದ್ದರು. ಒಬ್ಬನನ್ನು ಹೂಣನೆಂದು ಕರೆದ ಮೇಲೆ ಅಮಾನುಷವಾಗಿ ಕ್ರೂರವಾಗಿ ನಡೆಸಿಕೊಳ್ಳುವುದು ಅತ್ಯಂತ ಮಾನವೀಯವಾಗುತ್ತದೆ.

ಈಗ, ಈ ನರಕಾಸುರ ಈಗಿನ ಅಸಾಮು ರಾಜ್ಯದಲ್ಲಿರುವ ಪ್ರಾಗ್ಜ್ಯೋತಿಷಪುರವೆಂಬಲ್ಲಿ ಇರುತ್ತಿದ್ದನು. ಶ್ರೀಕೃಷ್ಣನಿಗೆ ಅವನ ವಿಚಾರದಲ್ಲಿ ಕೆಟ್ಟ ವರದಿಗಳು ಬರುತ್ತಿದ್ದವು. (ನರಕಾಸುರನಿಗೂ ಕೃಷ್ಣನ ಮೇಲೆ ಕೆಟ್ಟ ವರದಿಗಳು ಹೋಗುತ್ತಿದ್ದಿರಬಹುದು. ಆದರೆ ಆ ಬಗ್ಗೆ ಅತ ಏನೂ ಮಾಡಲಿಲ್ಲ.) ಅವುಗಳ ಪೈಕಿ, ನರಕಾಸುರನು ಸುಮಾರು ಎಂಟು ನೂರರಿಂದ ಒಂದು ಸಾವಿರದ ವರೆಗೆ ಕನ್ಯೆಯರನ್ನು ಬಲಾತ್ಕಾರದಿಂದ ಇಟ್ಟುಕೊಂಡಿದ್ದ



ನರಕಾಸುರನನ್ನು ಕೊಂದು ಅವನಲ್ಲಿದ್ದ ಕನ್ಯೆಯರನ್ನು ಬಿಡುಗಡೆ ಮಾಡಿದಾಗ ಅವರು ಕೃಷ್ಣನೊಡನೇ ಬಂದರೆಂದು ಗೊತ್ತಾಗುತ್ತದೆ.

ಎಂಬುದೊಂದು. ಕೃಷ್ಣನಿಗೆ ಯಾರಾದರೂ ನೂರಾರು ರಮಣಿಯರನ್ನು ಇಟ್ಟುಕೊಳ್ಳುವುದು ಸೇರುತ್ತಿರಲಿಲ್ಲ. ಹದಿನಾರು ಸಾವಿರ ಹೆಂಡಂದಿರನ್ನು ಮಾಡಿಕೊಂಡ ಆತನಿಗೆ ಇದು ತನ್ನ ಸ್ವಂತ ಗುತ್ತಿಗೆ ಹಕ್ಕು ಎಂದು ನಂಬಿಕೆಯಿರಬೇಕು. ಸಾಲದ್ದಕ್ಕೆ ನರಕಾಸುರನು ಈ ಕನ್ಯೆಯರನ್ನು ಚೆನ್ನಾಗಿ ನಡೆಸಿಕೊಳ್ಳತ್ತಿರಲಿಲ್ಲೆಂದು ದೂರು ಇತ್ತು. ಇದು ಕೃಷ್ಣನನ್ನು ಸ್ವಾಭಾವಿಕವಾಗಿಯೇ ರೊಚ್ಚಿಗೆಬ್ಬಿಸಿತು. ನರಕಾಸುರನಿಗೆ ತನ್ನಲ್ಲಿರುವ ಹೆಂಗಸರನ್ನು ಹೇಗೆ ನಡೆಸಿಕೊಳ್ಳಬೇಕೆಂದು ಗೊತ್ತಿಲ್ಲದಿದ್ದರೆ ಅವರನ್ನು ಕೃಷ್ಣ ತನ್ನ ಜನಾನಾಖಾನೆಗೆ ಸೇರಿಸಿಕೊಳ್ಳುವುದು ಅತ್ಯಂತ ಕ್ರಮಪ್ರಾಪ್ತವಾಗುತ್ತದೆ.

(ನರಕಾಸುರನು ವಿಷ್ಣುವಿನ ವರಾಹಾವತಾರದಲ್ಲಿ ಅವನಿಂದ ಭೂಮಿದೇವಿಯಲ್ಲಿ ಹುಟ್ಟಿದವನೆಂದು ಪುರಾಣಗಳು ಹೇಳುತ್ತವೆ. ಅಂದರೆ ಅತ ಕೃಷ್ಣನ ಹಿಂದಿನ ಒಂದು ಜನ್ಮದ ಮಗನೇ. ಆದರೆ ಮನುಷ್ಯರ ಹಾಗೆ ದೇವತೆಗಳು ತಮ್ಮ ಹಿಂದಿನ ಜನ್ಮದ ತಪ್ಪುಗಳಿಗೆ ಹೊಣೆಗಾರರಲ್ಲವೆಂದು ನೀವು ತಿಳಿದುಕೊಳ್ಳಬೇಕು.)

ನರಕಾಸುರನ ಮೇಲೆ ಇತರ ಆರೋಪಗಳೂ ಇದ್ದವೆಂದು ಹೇಳದಿದ್ದರೆ ಅನ್ಯಾಯವಾದೀತು. ಆದರೆ ಅವುಗಳನ್ನೆಲ್ಲ ಇಲ್ಲಿ ವಿಸ್ತರಿಸುವುದು ಅಗತ್ಯವಿಲ್ಲ. ಅಂತೂ ಕೃಷ್ಣ ಪ್ರಾಗ್ಜ್ಯೋತಿಷಪುರಕ್ಕೆ ಹೋಗಿ ನರಕಾಸುರನನ್ನು ಕೊಂದು ಅವನಲ್ಲಿದ್ದ ಕನ್ಯೆಯರನ್ನು ಬಿಡುಗಡೆ ಮಾಡಿದ. ಅವರೆಲ್ಲರಿಗೆ ತಮ್ಮ ತವರುಮನೆಗೆ ಹೋಗುವ ಚಾನ್ಸನ್ನು ಕೃಷ್ಣ ಕೊಟ್ಟನೆಂದೂ ಆದರೆ ಯಾರೂ ಅಲ್ಲಿ ಹೋಗುವ ಇಷ್ಟವನ್ನು ಪ್ರದರ್ಶಿಸದೆ ಕೃಷ್ಣನೊಡನೆಯೇ ಬಂದರೆಂದೂ ಗೊತ್ತಾಗುತ್ತದೆ. ಕೃಷ್ಣನ ಹದಿನಾರು ಸಾವಿರ ಹೆಂಡಂದಿರಲ್ಲಿ ನರಕಾಸುರನಿಂದ ವಶಪಡಿಸಿಕೊಂಡ ಈ ಹೆಂಗಸರೂ ಸೇರಿದರೋ ಅಥವಾ ಇವರನ್ನು ಎಕ್ಸ್ಟ್ರಾಗಳೆಂದು ಭಾವಿಸಬೇಕೋ ಎಂಬ ಬಗ್ಗೆ ಯಾವ ಪುರಾಣದಲ್ಲಿಯೂ ಸ್ಪಷ್ಟವಾದ ಲೆಕ್ಕ ಇಲ್ಲ. ಇದ ಸಂಶೋಧಕರಿಗೆ ಒಂದು ಉತ್ತಮ ಕ್ಷೇತ್ರವೆಂದು ಸೂಚಿಸಿ ಆ ಪ್ರಶ್ನೆಯನ್ನು ಕೈಬಿಡುತ್ತೇನೆ.

ಅಂತೂ ಕೃಷ್ಣ ಪ್ರಾಗ್ಜ್ಯೋತಿಷಪುರದಿಂದ ಅಶ್ವಿನ ಬಹುಳ ೧೪ ಮಧ್ಯ ರಾತ್ರಿ ಕಳೆದು ತಿರುಗಿ ಬಂದೊಡನೆ ತನಗಾಗಿ ಗುಡಾಣಗಳಲ್ಲಿ ಕಾಸಿಟ್ಟದ್ದ ನೀರನ್ನು ಅಭ್ಯಂಜನ ಮಾಡಿದನು. ಅದಕ್ಕೂ ಮೊದಲು ನರಕಾಸುರನ ರಕ್ತದಿಂದ ರಂಜಿತನಾಗಿ ಬಂದಿದ್ದ ಅತನಿಗೆ ನಲ್ಲೆಯರು ಆರತಿಯನ್ನು ಬೆಳಗಿದರು.

ಕೃಷ್ಣ ಮಾಡಿದ ಈ ಕಾರ್ಯದ ಸ್ಮರಣಾರ್ಥವಾಗಿ, ನೀವು ಯಾರನ್ನೂ ಕೊಂದಿರದಿದ್ದರೂ ಅವೊತ್ತು ನಲ್ಲೆಯರಿಂದ ಆರತಿ ಬೆಳಗಿಸಿಕೊಂಡು ಬಿಸಿನೀರಿನ ಸ್ನಾನ ಮಾಡಬೇಕಾ

ಗಿದೆ. ಇದಕ್ಕಾಗಿ ನಾನೆಂದೂ ಶ್ರೀ ಕೃಷ್ಣನನ್ನು ಕ್ಷಮಿಸಿಲ್ಲ. ದ್ವಾಪರ ಯುಗದಲ್ಲಿ ಕೃಷ್ಣನು ನರಕಾಸುರನನ್ನು ಕೊಂದುಬಂದರೆ ನಾನೇಕೆ ಬೆಳಗಿನ ಜಾವದ ಸಕ್ಕರೆನಿದ್ದೆಯನ್ನು ಕಳೆದುಕೊಂಡು ಮೈಯೆಲ್ಲ ಮಣಕಾಗುವ ಹಾಗೆ ಎಣ್ಣೆ ತೀಡಿಸಿಕೊಂಡು ಬೊಕ್ಕೆ ಬರುವ ಹಾಗೆ ಬಿಸಿನೀರು ಹೊಯ್ಸಿಕೊಳ್ಳಬೇಕೆಂದು ನಾನು ಸಣ್ಣವನಿದ್ದಾಗ ನಮ್ಮ ಅಜ್ಜಿಯನ್ನು ಕೇಳಿದೆ. "ಮುಚ್ಚು ಬಾಯಿ! ಹೀಗೆಲ್ಲ ಅಧಿಕಪ್ರಸಂಗ ಮಾಡುವುದಕ್ಕೆ ಈವೊತ್ತು ಹಬ್ಬ ಆಗಿದ್ದಿಲ್ಲವಾದರೆ ನಿನ್ನ ಬೆನ್ನು ಪುಡಿಮಾಡಿ ಬಿಡುತ್ತಿದ್ದೆ" ಎಂದು ನಮ್ಮ ಆಸ್ತಿಕ ಅಜ್ಜಿಯಿಂದ ಉತ್ತರ ಬಂತು. ಇದು ಕೃಷ್ಣನ ಮೇಲಾಗಲಿ ನರಕಾಸುರನ ಮೇಲಾಗಲಿ ನನ್ನ ಸಿಟ್ಟನ್ನು ಕಡಿಮೆ ಮಾಡಲಿಲ್ಲ.

ನರಕಚತುರ್ದಶಿಯ ದಿನ ಅಳಿಯನ ಪೂಜೆಯೂ ಆಗಬೇಕು. ನರಕಾಸುರನಿಗೂ ಅಳಿಯ ದೇವನಿಗೂ ಏನು ಸಂಬಂಧ ಎಂದು ಇದುವರೆಗೂ ನನಗೆ ಅರ್ಥವಾಗಿಲ್ಲ. ಮಾವನ ಮನೆಯಲ್ಲಿ ಅಳಿಯನ ಹಾವಳಿಗೆ ಮುಕ್ತ ದ್ವಾರವಿಡಲು ಕೃಷ್ಣನಿಗೆ ಸಂಬಂಧಿಸಿದ ಈ ಹಬ್ಬವನ್ನೇ ಏಕೆ ಆರಿಸಿಕೊಳ್ಳಲಾಯಿತು? ನಮಗೆ ತಿಳಿದ ಮಟ್ಟಿಗೆ ಶ್ರೀಕೃಷ್ಣನು ತನ್ನ ಮಾವಂದಿರಲ್ಲಿ ಎಂದೂ ಜನಪ್ರಿಯನಾಗಿರಲಿಲ್ಲ. ಮಾವಂದಿರ ಇಷ್ಟಕ್ಕೆ ವಿರುದ್ಧವಾಗಿ ಅವರ ಮಗಳಂದಿರನ್ನು ಹಾರಿಸಿಕೊಂಡು ಪಲಾಯನ ಮಾಡುವುದು ಅವನ ಪ್ರೀತಿಯ 'ಹಾಬಿ' ಆಗಿತ್ತು. ಎಲ್ಲಿಯೂ ಅಳಿಯತನದ ಷೋಡಶೋಪಚಾರ ಮಾಡಿಸಿಕೊಳ್ಳಲು ಅತ ನಿಂತವನಲ್ಲ. ನರಕ ಚತುರ್ದಶಿಯ ದಿನ ಅಳಿಯನ ಪ್ರವೇಶ ಹೇಗೆ ಆಯಿತು ಎಂಬ ಸಮಸ್ಯೆಯನ್ನು ಯಾರಾದರೂ ಬಿಡಿಸಿದ್ದರೆ ಚೆನ್ನಾಗಿತ್ತು. ಹೊಸ ಬೆಳೆ ಕೈಗೆ ಬಂದಿರುವಾಗಲೇ ಮಾವನನ್ನು ಸುಲಿಯಲು ಯೋಗ್ಯ ಸಮಯ ಎಂದು ಯಾವನೋ ಧೂರ್ತ ಅಳಿಯ ಯೋಚಿಸಿ ದೀಪಾವಳಿಯನ್ನು ಅದಕ್ಕಾಗಿ ಆರಿಸಿಕೊಂಡಿರಬೇಕು.

ನರಕಚತುರ್ದಶಿಯ ದಿನ ಹೊಸ ವಸ್ತ್ರವನ್ನುಡಬೇಕೆಂಬ ಪದ್ಧತಿ ಹೇಗೆ ಬಂತು? ಕೃಷ್ಣ ನರಕಾಸುರನನ್ನು ಕೊಂದಾಗ ಅವನ ಪೀತಾಂಬರಕ್ಕೆಲ್ಲ ರಕ್ತ ಸಿಡಿದಿರಬೇಕು. ಅದ್ದರಿಂದ ಅವನು ಹೊಸ ಬಟ್ಟೆ ಉಡಬೇಕಾಯಿತು. ಆದರೆ ಇದರಲ್ಲಿ ಜವಳಿ ಅಂಗಡಿಯವರ ಪಿತೂರಿಯೂ ಇದೆಯೆಂಬ ನಿಗೂಢವಾದ ಸಂದೇಹವೊಂದು ನನ್ನನ್ನು ಬಾಧಿಸುತ್ತಿದೆ. ದೀಪಾವಳಿಯ ಮೂರೇ ದಿನಗಳಲ್ಲಿ ಅವರು ವರ್ಷದ ಲಾಭವನ್ನೆಲ್ಲ ಮಾಡಿಕೊಂಡು ಬಿಡುತ್ತಾರೆ.

ನರಕ ಚತುರ್ದಶಿಯ ಮರುದಿನ ಅಮಾವಾಸ್ಯೆಯಂದು ಲಕ್ಷ್ಮೀಪೂಜೆ. ಇದನ್ನು ಮನೆಗಳಿಗಿಂತ ಅಂಗಡಿಗಳಲ್ಲೇ ಹೆಚ್ಚಾಗಿ ಮಾಡುತ್ತಾರೆ. ಹಬ್ಬದ ಸಡಗರದಲ್ಲಿ ಮನೆಯೊಳಗಿನ ಲಕ್ಷ್ಮೀಯೆಲ್ಲ ಅಂಗಡಿಗಳಿಗೆ ಹರಿದು ಹೋಗಿರುವುದರಿಂದ ಅಲ್ಲಿಯೇ ಅವಳ ಪೂಜೆಯಾಗುವುದು ಸ್ವಾಭಾವಿಕ. ಈ ಲಕ್ಷ್ಮೀಪೂಜೆಯು ಅಂಗಡಿಯವರಿಗೆ ಬಹಳ ದಿನದ ಬಾಕಿಗಳನ್ನು ವಸೂಲು ಮಾಡಲು ಒಂದು ಒಳ್ಳೇ ನೆವವನ್ನು ಒದಗಿಸುತ್ತದೆ. ಆದರೆ ಪುಸ್ತಕದಲ್ಲಿ ಸರಸ್ವತೀ ಬಂಧನದಲ್ಲಿರುವ ಲಕ್ಷ್ಮಿಯನ್ನು ಲಕ್ಷ್ಮೀ ರೂಪಕ್ಕೆ ಪರಿವರ್ತಿಸುವ ಈ ಪ್ರಯತ್ನವನ್ನು ಯಶಸ್ವಿಯಾಗಿ ನಿರೋಧಿಸುವ ಅನೇಕ ಉದ್ರಿ ಗಿರಾಕಿಗಳು ಇದ್ದೇ ಇದ್ದಾರೆ. ಇವರನ್ನು ನಿಜವಾಗಿ ಸರಸ್ವತೀಭಕ್ತರೆಂದು ಹೇಳಬೇಕು. ಲಕ್ಷ್ಮಿಯೊಡನೆ ಅಂಗಡಿಗಳಲ್ಲಿ ಸರಸ್ವತಿಗೂ ಪೂಜೆ ಸಲ್ಲಲು ಇನ್‌ಕಂಟ್ಯಾಕ್ಸ ಅಧಿಕಾರಿಗಳ ಸಂಗಡ ಈ ಉದ್ದರಿ ಗಿರಾಕಿಗಳೂ ಕಾರಣ ಎಂದು ನಾವು ಮರೆಯಬಾರದು. ಸ್ವಂತಕ್ಕಾಗಿ ಒಂದು ಮತ್ತು ಇನ್‌ಕಂ ಟ್ಯಾಕ್ಸಿನವರಿಗಾಗಿ ಇನ್ನೊಂದು ಹೀಗೆ, ಎರಡೆರಡು ಲೆಕ್ಕಗಳನ್ನಿಡಬೇಕಾಗುವುದರಿಂದ ಈಚೆಗೆ ಸರಸ್ವತಿಯ ಮಹತ್ವ ಹೆಚ್ಚಿದೆ. ಸೊಸೆಯ ಸಹಾಯವಿಲ್ಲದೆ ಅತ್ತೆಯ ಕಾರ್ಯ ಸಾಗದಂತಾಗಿರುವುದರಿಂದ ಸೊಸೆಯೊಡನೆ ಲಕ್ಷ್ಮಿ ರಾಜಿ ಮಾಡಿಕೊಂಡಿರುವ ಹಾಗಿದೆ.

ದೀಪಾವಳಿಯ ಮೂರನೇ ದಿನ ಪ್ರತಿಪದೆ-ಅಥವಾ ಬಲಿಪಾಡ್ಯ. ಈ ಬಲಿಯ ಕಥೆಯನ್ನೂ ನೀವು ಬಲ್ಲಿರಿ. ಅಸುರನಾಗಿದ್ದರೂ ನೂರು ಅಶ್ವಮೇಧಗಳನ್ನು ಮಾಡಿ ಇಂದ್ರಪದವಿಯನ್ನು ಅಪೇಕ್ಷಿಸುವ ಅಕ್ಷಮ್ಯ ಅಪರಾಧವನ್ನು ಅತ ಮಾಡಿದ್ದ. ಆ ಕಾಲದಲ್ಲಿ ಪದಾರೂಢನಾಗಿದ್ದ ಇಂದ್ರನಿಗೆ ಇದರಿಂದ ತುಂಬ ಗಾಬರಿಯಾಯಿತು. ಸದ್ಯದ ಮುಖ್ಯಮಂತ್ರಿಯನ್ನು ಉರುಳಿಸಿ ತಾನು ಆ ಪದವಿಗೇರಬೇಕೆಂದು ಒಳಗೊಳಗೆ "ಹಸ್ತಾಕ್ಷರ ಸತ್ರ"ವನ್ನು ಪ್ರಾರಂಭಿಸುವ ಕಾಂಗ್ರೆಸ್ ಪುಢಾರಿಗಳ ವಿರುದ್ಧ ಕಾಂಗ್ರೆಸ ಹೈಕಮಾಂಡಿಗೆ ದೂರು ಹೋಗುವ ಹಾಗೆ ವಿಷ್ಣುವಿನ ಕಡೆ ದೂರು ಹೋಯಿತು. ವಿಷ್ಣುವಿಗೇನೋ ಬಲಿಯ ಮೇಲೆ ಬಲು ಪ್ರೀತಿ. ಆದರೆ ಅತ ಅಸುರ. ಅವನನ್ನು ಇಂದ್ರಪದವಿಗೇರಲು ಕೊಟ್ಟರೆ ಸದ್ಯದ ಇಂದ್ರನೂ ಅವನ ಬೆಂಬಲಿಗರೂ ವಿಷ್ಣುವಿನ ಪಕ್ಷವನ್ನು ಬಿಟ್ಟು ರಾಜಾಜಿಯ ಹಾಗೆ ಪ್ರತಿಪಕ್ಷವನ್ನು ಕಟ್ಟುವ ಭಯವಿತ್ತು. ಅತ್ತ ಬಲಿಯ ಬಳಗದವರೆಲ್ಲ ವಿಷ್ಣುಪಕ್ಷವನ್ನು ಸೇರುವರೆಂಬ ನಂಬಿಕೆಯಿರಲಿಲ್ಲ. ಅದ್ದರಿಂದ ವಿಷ್ಣು ಬಲಿಯನ್ನು ಉಪಾಯದಿಂದ ಪಾತಾಳಕ್ಕೆ ತಳ್ಳಿದ. ಆ ಮೇಲೆ ತಾನೇ ಅವನ ಬಾಗಿಲು ಕಾಯಲು ನಿಂತು ತನ್ನ ಭಕ್ತಪ್ರಿಯತೆಯನ್ನು ಪ್ರದರ್ಶಿಸಿದನೆಂದು ಹೇಳುತ್ತಾರೆ. ಆದರೆ ಬಲಿ ಮತ್ತೊಮ್ಮೆ ಕಿತಾಪತಿಯನ್ನು



ಬಲಿ ಮತ್ತೊಮ್ಮೆ ಕಿತಾಪತಿಯನ್ನು ಪ್ರಾರಂಭಿಸದಂತೆ ಅವನ ಮೇಲೆ ಕಣ್ಣಿಡಲೋಸುಗವೇ ವಿಷ್ಣು ಅವನ ಬಾಗಿಲಲ್ಲಿ ಕಾಯುತ್ತಿದ್ದನೆಂದೂ ಹೇಳುವವರು ಇದ್ದಾರೆ.

---

ಪ್ರಾರಂಭಿಸದಂತೆ ಅವನ ಮೇಲೆ ಕಣ್ಣಿಡಲೋಸುಗವೇ ವಿಷ್ಣು ಅವನ ಬಾಗಿಲಲ್ಲಿ ಕಾಯುತ್ತಿದ್ದಾನೆಂದು ಹೇಳುವವರೂ ಇದ್ದಾರೆ. ಅದು ಹೇಗೇ ಇರಲಿ, ವರ್ಷಕ್ಕೊಂದು ದಿನ ಬಲಿಗೆ ಪೂಜೆ ಸಲ್ಲಲಿ ಎಂದು ವಿಷ್ಣುವಿನ ಅಪ್ಪಣೆ ಪ್ರಕಾರ ಈಗಲೂ ಅವನಿಗೆ ಪೂಜೆಯಾಗುತ್ತಿದೆ.

ಗೋಪೂಜೆಯೂ ದೀಪಾವಳಿ ಪ್ರತಿಪದೆಯ ಒಂದು ವೈಶಿಷ್ಟ್ಯ. ವರ್ಷವಿಡೀ ಹೊಡೆದು ಬಡಿದು, ಕಾಲು ಕಟ್ಟಿ, ಕರುವಿಗೂ ಬಿಡದೇ ಹಾಲು ಕರೆಯುವ ಸ್ವಾತಂತ್ರ್ಯ ನಮಗಿರಬೇಕೆಂದು ಈ ದಿನ ಗೋವಿಗೆ ಗೊಂಡೆ ಹೂವಿನ ಮಾಲೆ ಮತ್ತು ಕೆಂಗಲ್ಲು ತೇದು ಮಾಡಿದ ಬಣ್ಣದ ಮುದ್ರೆ ಹಾಕಿ ಪೂಜೆ ಮಾಡುತ್ತೇವೆ. ಒಂದು ಸಲ ನಮ್ಮ ಮನೆಯಲ್ಲಿ ಗೋಪೂಜೆ ಪ್ರಾರಂಭವಾದಾಗ ನಮ್ಮ ಗೋವು ಅರ್ಪಿಸಿದ ಪುಷ್ಪಹಾರವನ್ನೆಲ್ಲ ತತ್‌ಕ್ಷಣ ಹರಿದು ನುಂಗಿದ್ದಲ್ಲದೆ ನೈವೇದ್ಯಕ್ಕಾಗಿ ತಂದಿಟ್ಟದ್ದ ಅವಲಕ್ಕಿ ಬೆಲ್ಲವನ್ನು ಮಂತ್ರಪೂರ್ವಕ ನೈವೇದ್ಯವಾಗುವ ಮೊದಲೇ ಎಳೆದು ಕಬಳಿಸಿಬಿಟ್ಟದ್ದರಿಂದ ಅದಕ್ಕೆ ನಮ್ಮ ತಾಯಿ ಚೆನ್ನಾಗಿ ಬಡಿಗೆ ಪೂಜೆ ಮಾಡಿದ್ದು ನನ್ನ ನೆನಪಿನಲ್ಲಿದೆ. ನಮ್ಮ ಪೂಜೆಗೆ ಪಾತ್ರರಾದವರನ್ನು ಕೂಡ ನಾವು ಕೆಲವೊಮ್ಮೆ ಶಿಸ್ತಿಗೊಳಪಡಿಸಲೇಬೇಕಾಗುತ್ತದಲ್ಲವೆ?

ಇಂತೀ ದೀಪಾವಳೀ ಕಥಾಶ್ರವಣ ಮಾಡಿದವರಿಗೆಲ್ಲ ಸಹಸ್ರ ಗೋ-ಕನ್ಯಾದಾನ ಮಾಡಿದ ಫಲಮುಕ್ಕುಂ॥

ಹುಬ್ಬಳ್ಳಿಯಲ್ಲಿ ಇಂದು ನಿಮ್ಮ ವಸತಿಗೆ ಅತ್ಯಂತ ಸುಸಜ್ಜಿತ ವಸತಿಗೃಹ

# ಅಶೋಕ ಹೋಟೆಲ್

## ಬೋರ್ಡಿಂಗ್ ಮತ್ತು ಲಾಡ್ಜಿಂಗ್

★ **ಹೊಸತರದ ಕಟ್ಟಡ**

★ **ಉತ್ಕೃಷ್ಟ ಫರ್ನಿಚರ್**

ಪ್ರತಿ ರೂಮಿಗೆ ಸ್ವತಂತ್ರ ಬಾಲ್ಕನಿಗಳು ವಿಶಾಲ ಮನೋಹರ ಲೌಂಜ್— ಇತ್ಯಾದಿ ಹೊಸದಾಗಿ ಕೋಣೆಗಳು ಸಿದ್ಧವಾಗಿವೆ.

**ಹೊಸತಾಗಿ ಪ್ರಾರಂಭವಾದ ಕ್ಯಾಂಟೀನ್ ವಿಶೇಷ ಆಕರ್ಷಣೆ.**

ಫೋನ್ : **305** ★ ತಂತಿ : **"SAMRAT"**

ದೀಪಾವಳಿಯು ಸರ್ವರಿಗೂ ಸುಖಪ್ರದವಾಗಲಿ!

---

ಸಕಲರಿಗೂ ದೀಪಾವಳಿಯ ಶುಭಾಶಯಗಳು

*While you are at BHADRAVATI*

*Do not forget to Visit*

# SRI VENKATESHA BHAVAN

B. H. ROAD, **BHADRAVATI**

( Mysore State )

●

ಅತ್ಯುತ್ತಮವಾದ **ಕಾಫಿ, ತಿಂಡಿಗೆ ಮತ್ತು ಸ್ವಚ್ಛತೆಗೆ** ಪ್ರಸಿದ್ಧವಾದ

# ಶ್ರೀ ವೆಂಕಟೇಶ ಭವನ

ಬಿ. ಹೆಚ್. ರೋಡು, **ಭದ್ರಾವತಿ,** ( ಮೈಸೂರು ರಾಜ್ಯ )

ತಪ್ಪದೇ ಸಂದರ್ಶಿಸಿರಿ

●

ಮಾಲೀಕರು : **S. ಅಡಿಗ**

---

ಇವರಿಂದ


ಎಲ್ಲಾ ಹಿತೈಷಿಗಳಿಗೂ ದೀಪಾವಳಿಯ ಶುಭಸಂದೇಶಗಳು

★

- ಮಲೆನಾಡಿನ ಸಂಚಾರ ವ್ಯವಸ್ಥೆಯ ಧ್ರುವತಾರೆ.
- ಮಲೆನಾಡಿನ ಎಲ್ಲಾ ಮೂಲೆಗಳಿಗೂ ಸಂಬಂಧ ಕಲ್ಪಿಸುವ ಏಕೈಕ ಸಂಸ್ಥೆ.
- ಶೃಂಗೇರಿ, ಧರ್ಮಸ್ಥಳ, ಬೇಲೂರು, ಹಳೇಬೀಡು ಮುಂತಾದ ಪವಿತ್ರ ಸ್ಥಳಗಳಿಗೂ ಮಲೆನಾಡಿನ ಪ್ರೇಕ್ಷಣೀಯ ಸ್ಥಳಗಳಿಗೂ ಸುಖಪ್ರಯಾಣವನ್ನು ಕಲ್ಪಿಸುವ ನಾಡಿನ ಪ್ರಮುಖ ಸಾರಿಗೆ ಸಂಸ್ಥೆ.

# ದಿ ಶಂಕರ ಟ್ರಾನ್ಸ್‌ಪೋರ್ಟ್ ಕಂಪೆನಿ (ಪ್ರೈವೇಟ್) ಲಿಮಿಟೆಡ್

**ಕೊಪ್ಪ— ಕಡೂರು**




ಮಹಾರಾಷ್ಟ್ರಕ್ಕೆ ಭೂಷಣ
ಅಂದರೆಯೇ . . .

ವುಟಕೂರ ಮತ್ತು ಕಂ.
ಇವರ

## ಶಿವಾಜಿ ಕ್ರೂಡ ಆಯಿಲ ಎಂಜಿನುಗಳು

೬—೬½ ಎಚ್. ಪಿ. ೫೫೦ ಆರ್. ಪಿ. ಎಂ.
೮—೯ ಎಚ್. ಪಿ. ೪೫೦. ಆರ್. ಪಿ. ಎಂ.

**ಹಾರಿಝಾಂಟೆಲ್ ಕೋಲ್ಡ ಸ್ಟಾರ್ಟ, ಸ್ಲೋಸ್ಪೀಡ**

ಉತ್ಪಾದಕರು — ವುಟಕೂರ ಮತ್ತು ಕಂಪನಿ
ಶಿವಾಜಿ ಉದ್ಯಮನಗರ, ಕೊಲ್ಹಾಪೂರ

---

Telegram: PALEBROS
Phone: 356

## ದಿ ಕೆನರಾ ಜ್ಯುವೆಲರ್ಸ್

ಮುಖ್ಯ ಕಚೇರಿ:
ಗಣಪತಿ ಹೈಸ್ಕೂಲ ರೋಡ
ಮಂಗಳೂರ-೨
ಶಾಖೆ :
ಹಂಪನ ಕಟ್ಟಾ, ಮಂಗಳೂರು ೧

ಮನ್ಯುಫ್ಯಾಕ್ಚರಿಂಗ
ಜ್ಯುವೆಲರ್ಸ್
ಹಾಗೂ
ಡೈಮಂಡ್ ವ್ಯಾಪಾರಸ್ಥರು

ದೀಪಾವಳಿಯು
ಸರ್ವರಿಗೂ ಶುಭದಾಯಕವಾಗಲಿ

---

Estd: 1938 : : Phone: 30

## JAI HIND RESTAURANT, SHIMOGA

THE ONLY
IDEAL CATERING HOUSE

ದೀಪಾವಳಿಯು
ಸರ್ವರಿಗೂ
ಸುಖಪ್ರದವಾಗಲಿ

## ಜೈಹಿಂದ ರೆಸ್ಟೋರೆಂಟ್, ಶಿವಮೊಗ್ಗ

*Prop*: **K. Krishnamurty**

---

ನಮ್ಮ ಗ್ರಾಹಕರೆಲ್ಲರಿಗೂ
ದೀಪಾವಳಿಯ ಶುಭಾಶಯಗಳು

: ತಮ್ಮ ಅಚ್ಚು ಮೆಚ್ಚಿನ :

## ದುರ್ಗಾ ಲಾಜ್
ಮತ್ತು
## ಟಿಫಿನ್ ರೂಮ್ಸ್

**ಜವಳೀ ಬಜಾರ, ಗದಗ**

**ಪ್ರೊ. ಕೆ. ನಾರಾಯಣರಾವ್**

---



ನಮ್ಮ ಯಾವತ್ತೂ ಗ್ರಾಹಕರಿಗೆ
ಸುಖಕರ ದೀಪಾವಳಿ ಮತ್ತು ವೈಭವದ ಹೊಸವರ್ಷ ಕೋರುತ್ತೇವೆ

## ನವಭಾರತ ವಾಚ ಕಂಪನಿ

( ಆಧುನಿಕ ಸಲಕರಣೆಗಳಿಂದ ವಾಚ ರಿಪೇರಿ ಮಾಡುವವರು. )
ಮರಾಠಾಗಲ್ಲಿ, ಹುಬ್ಬಳ್ಳಿ.

KARMAVEER 1—11—1959
Licence No. 3
Licenced to post without prepayment
Regd. No. B



ಈ ಪತ್ರಿಕೆಯನ್ನು ಹುಬ್ಬಳ್ಳಿ, ಸಂಯುಕ್ತ ಕರ್ನಾಟಕ ಪ್ರೆಸ್ಸಿನಲ್ಲಿ ಲೋಕಶಿಕ್ಷಣ ಟ್ರಸ್ಟಿನ ಪರವಾಗಿ ಹ. ರಾ. ಪುರೋಹಿತರು ಮುದ್ರಿಸಿ ಪ್ರಕಟಿಸಿ